"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತೈದನೆಯ ಅಧಿವೇಶನ

ಮಂಗಳವಾರ, 11ನೇ ಮಾರ್ಚ್ 2025

ವಿಷಯಾನುಕ್ರಮಣಿಕೆ (INDEX)

1. ಸಂತಾಪ ಸೂಚನೆಗಳು

"ಮಾಜಿ ಸಚಿವರಾಗಿದ್ದ ಶ್ರೀ ಬಿ. ಸುಬ್ಬಯ್ಯ ಶೆಟ್ಟಿ ಹಾಗೂ ಭಾರತೀಯ ಶಿಕ್ಷಣ ತಜ್ಞೆ, ಮೈಸೂರು ಶಿಕ್ಷಣ ಸೊಸೈಟಿಯ ಸ್ಥಾಪಕ ಸದಸ್ಯರಾದ ಶ್ರೀಮತಿ ವಿಮಲಾ ರಂಗಾಚಾರ್ ಅವರುಗಳ ನಿಧನದ ಬಗ್ಗೆ.

- ಶ್ರೀ ಶಿವಾನಂದ ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)

2. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

548 – ಜವಳಿ ಪಾರ್ಕ್‌ಗಳ ಕುರಿತು.

- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಶಿವಾನಂದ ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)

595 – ಶಿವಮೊಗ್ಗ ಮಹಾನಗರ ಪಾಲಿಕೆಯ ಅಧೀನದಲ್ಲಿರುವ ಜಲಮಂಡಳಿಯ ಹೊರಗುತ್ತಿಗೆ ನೀರು ಸರಬರಾಜು ನೌಕರರ ಬಗ್ಗೆ.

- ಶ್ರೀ ಡಿ.ಎಸ್. ಅರುಣ್
- ಶ್ರೀ ಬಿ.ಎಸ್. ಸುರೇಶ (ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು)

569 – ಗದಗ ಬೆಟಗೇರಿ ಒಳಚರಂಡಿ ಯೋಜನೆ ಕುರಿತು

- ಶ್ರೀ ಎಸ್.ವಿ. ಸಂಕನೂರ
- ಶ್ರೀ ಬಿ.ಎಸ್. ಸುರೇಶ (ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು)

592 – ಸಾರ್ವಜನಿಕ ಸ್ಮಶಾನಗಳ ಚಿತಾಗಾರಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಕುರಿತು.

- ಶ್ರೀ ಮಧು ಜಿ. ಮಾದೇಗೌಡ
- ಶ್ರೀ ರಹೀಂ ಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು)

606 – ಕೃಷಿ ಉತ್ಪನ್ನ ಮಾರುಕಟ್ಟೆಗಳ ಬಗ್ಗೆ.

- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀ ಶಿವಾನಂದ ಎಸ್. ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

594+495 – ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳಲ್ಲಿರುವ ತೋಟಗಾರಿಕೆ ವಿಶ್ವವಿದ್ಯಾಲಯದ ಕಾಲೇಜಿನ ವಿಸ್ತರಣಾ ಘಟಕ ಹಾಗೂ ಸಂಶೋಧನಾ ಕೇಂದ್ರಗಳನ್ನು ಸೇರ್ಪಡೆ ಮಾಡುತ್ತಿರುವ ಮಾಹಿತಿ ಬಗ್ಗೆ.

– ಡಾ॥ ತಳವಾರ್ ಸಾಬಣ್ಣ
– ಶ್ರೀ ಪಿ.ಹೆಚ್.ಪೂಜಾರ್
– ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

(ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಪರಿವರ್ತಿಸಲಾಯಿತು)

509 – ಕರಾವಳಿ ಕರ್ನಾಟಕಕ್ಕೆ ಪ್ರತ್ಯೇಕವಾದ ಮರಳು ನೀತಿ ತಂದಿರುವ ಬಗ್ಗೆ.

– ಶ್ರೀ ಐವನ್ ಡಿ'ಸೋಜಾ
– ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

585 – ಸಹಕಾರ ಸಂಘಗಳಲ್ಲಿ ಮಹಿಳೆಯರ ಪಾತ್ರದ ಕುರಿತು.

– ಶ್ರೀ ಹೆಚ್.ಎಸ್. ಗೋಪಿನಾಥ್
– ಶೀ ಕೆ.ಎನ್.ರಾಜಣ್ಣ (ಸಹಕಾರ ಸಚಿವರು)

505 – ತೋಟಗಾರಿಕೆ ವಿಶ್ವವಿದ್ಯಾಲಯಗಳ ಅಭಿವೃದ್ಧಿ ಕುರಿತು.

– ಶ್ರೀ ವೈ.ಎಂ.ಸತೀಶ್
– ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು)

552 – ತೋಟಗಾರಿಕೆ ವಿಶ್ವವಿದ್ಯಾಲಯಗಳ ಅಭಿವೃದ್ಧಿ ಕುರಿತು.

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
– ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

564 – ಲಿಂಗಸಗೂರು ಪಟ್ಟಣದ ಪುರಸಭೆಯನ್ನು ಮೇಲ್ದರ್ಜೆಗೇರಿಸುವ ಕುರಿತು.

– ಶ್ರೀ ಶರಣಗೌಡ ಬಯ್ಯಾಪುರ
– ಶ್ರೀ ರಹೀಂ ಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು)

534– ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಮರಳು ಗಣಿಗಾರಿಕೆ ಕುರಿತು.

– ಡಾ॥ ಧನಂಜಯ ಸರ್ಜಿ
– ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

514 – ರಾಜ್ಯದ ಸಹಕಾರ ಕ್ಷೇತ್ರಕ್ಕೆ ಹಣಕಾಸು ನೆರವು ನೀಡುವ ಸಂಸ್ಥೆಗಳ ಬಗ್ಗೆ.

– ಶ್ರೀ ದಿನೇಶ್ ಗೂಳಿಗೌಡ
– ಶ್ರೀ ಕೆ.ಎನ್.ರಾಜಣ್ಣ (ಸಹಕಾರ ಸಚಿವರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

578 – ಪುರಸಭೆ, ನಗರಸಭೆ, ಸದಸ್ಯರುಗಳ ಗೌರವಧನ ಹೆಚ್ಚಳ ಕುರಿತು.

– ಶ್ರೀ ಭೀಮರಾವ್ ಬಸವರಾಜ ಪಾಟೀಲ್

– ಶ್ರೀ ರಹೀಂ ಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು)

ಆ) ತಡೆಹಿಡಿಯಲಾದ ಪ್ರಶ್ನೆಗಳು

02 – ರಾಜ್ಯದಲ್ಲಿ ಗುತ್ತಿಗೆ / ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರ ಕುರಿತು.

– ಶ್ರೀ ಎನ್.ರವಿಕುಮಾರ್

– ಶ್ರೀ ರಹೀಂ ಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು)

– ಶ್ರೀ ಬಿ.ಎಸ್. ಸುರೇಶ (ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು)

52+93 – ರಾಜ್ಯ ಸರ್ಕಾರದ ಅಧೀನದಲ್ಲಿ ಬರುವ ಸಾರ್ವಜನಿಕ ವಲಯ ಉದ್ಯಮಗಳ ಬಗ್ಗೆ.

– ಶ್ರೀ ಶರವಣ ಟಿ.ಎ

– ಶ್ರೀ ಕೆ.ಎಸ್.ನವೀನ್

– ಶ್ರೀ ಈಶ್ವರ ಬಿ.ಖಂಡ್ರೆ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)
(ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರ ಪರವಾಗಿ)

239 – ರಾಜ್ಯದ ನಗರ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟು ಅವಧಿಯನ್ನು ವಿಸ್ತರಿಸುವ ಕುರಿತು.

– ಶ್ರೀ ಮಂಜುನಾಥ್ ಭಂಡಾರಿ

– ಶ್ರೀ ಬಿ.ಎಸ್. ಸುರೇಶ (ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು)

ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

3. ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸರ್ಕಾರದಿಂದ ಸಕಾಲದಲ್ಲಿ ಉತ್ತರಗಳು ಬಾರದಿರುವ ಕುರಿತು.

– ಶ್ರೀ ಸಿ.ಟಿ.ರವಿ

– ಶ್ರೀ ಈಶ್ವರ ಬಿ.ಖಂಡ್ರೆ(ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

– ಶ್ರೀ ಎಸ್.ಎಲ್.ಭೋಜೇಗೌಡ

4. ನಿಯಮ 58ಎ ಮೇರೆಗೆ ಶೂನ್ಯವೇಳೆ ಸೂಚನೆಗಳು

ಅ) ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೆಟ್ಟಿಂಗ್ ದಂಧೆ ನಡೆಸುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಕುರಿತು.

– ಶ್ರೀ ರಾಮೋಜಿಗೌಡ

– ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ರಾಜ್ಯದಲ್ಲಿ ವ್ಯಾಪಿಸುತ್ತಿರುವ ಬೊಜ್ಜಿನ ಸಮಸ್ಯೆ ಕುರಿತಂತೆ ನುರಿತ ವೈದ್ಯರು, ಸಂಶೋಧಕರು ಮುಂತಾದವರಿಂದ ವರದಿ ಪಡೆದು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಕುರಿತು.

- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಇ) ಪಂಚಗಂಗಾವಳಿ ನದಿಯ ಹೂಳನ್ನು ತೆಗೆದು ಮೀನುಗಾರಿಕೆ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸುವ ಕುರಿತು.

- ಶ್ರೀ ಮಂಜುನಾಥ್ ಭಂಡಾರಿ
- ಶ್ರೀ ಮಂಕಾಳ ವೈದ್ಯ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಈ) ವಯೋವೃದ್ಧ ತಂದೆ-ತಾಯಿಯನ್ನು ಹೆತ್ತ ಮಕ್ಕಳೇ ಮನೆಯಿಂದ ಆಚೆ ಹಾಕುತ್ತಿದ್ದು, ಬೆಳಗಾವಿ ವೈದ್ಯಕೀಯ ಸಂಸ್ಥೆಯೇ ಆಶ್ರಯ ತಾಣವಾಗಿರುವ ಕುರಿತು.

- ಶ್ರೀ ಎಂ. ನಾಗರಾಜು
- ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಉ) ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯ ಮುದದೇನೂರು ಕಾವಲು ಗ್ರಾಮದ ಸರ್ವೆ ನಂ.1ರ 6.31 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ಮಾಡಲು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

- ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)
- ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಊ) ರಾಜ್ಯದಲ್ಲಿ ಯುವಕರು ಮಾದಕ ವ್ಯಸನಿಗಳಾಗಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ.

- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಋ) ರಾಜ್ಯದಲ್ಲಿ ಪೆಟ್ರೋಲಿಯಂ ಉತ್ಪನ್ನಗಳಲ್ಲಿಯೂ ಕಲಬೆರಕೆ ಮಾಡಿ ಮಾರಾಟ ಮಾಡುತ್ತಿರುವ ಕುರಿತು.

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಈಶ್ವರ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಎ) ಕಿತ್ತೂರು ಚೆನ್ನಮ್ಮ ಹೆಸರಿನಲ್ಲಿ ಸರ್ಕಾರ ಪ್ರತ್ಯೇಕ ಪ್ರಾಧಿಕಾರ ಸ್ಥಾಪಿಸಿದ್ದು, ಅನುದಾನ ಹಂಚಿಕೆ, ಅಭಿವೃದ್ಧಿ ವಿಚಾರದಲ್ಲಿ ತಾರತಮ್ಯ ಮಾಡುತ್ತಿರುವ ಬಗ್ಗೆ.

- ಶ್ರೀ ಹಣಮಂತ ರುದ್ರಪ್ಪ ನಿರಾಣಿ
- ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಏ) ಸಿ.ಇ.ಟಿ. (ಸಾಮಾನ್ಯ ಪ್ರವೇಶ ಪರೀಕ್ಷೆ) ಕ್ರೈಸ್ತ ಸಮುದಾಯದ ಗುಡ್‌ಫ್ರೈಡೆ ದಿವಸದಂದು ನಡೆಸಲು ಉದ್ದೇಶಿಸಿರುವುದನ್ನು ಮುಂದೂಡುವ ಕುರಿತು.

- ಶ್ರೀ ಐವನ್ ಡಿ'ಸೋಜಾ
- ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಐ) ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ಅನುದಾನ ಕೊರತೆಯಿಂದ ಇಂದಿರಾ ಕ್ಯಾಂಟೀನನ್ನು ಮುಚ್ಚಿರುವ ಬಗ್ಗೆ.

- ಶ್ರೀ ಸಿ.ಎನ್. ಮಂಜೇಗೌಡ
- ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಒ) ಮುಧೋಳ ಜಿಲ್ಲೆ ಗ್ರಂಥಾಲಯಗಳಲ್ಲಿ ರತ್ನತ್ರಯರಲ್ಲಿ ಒಬ್ಬರಾದ ರನ್ನನ ಸಾಹಿತ್ಯ ಜೀವನದ ಕುರಿತು ಕೃತಿಗಳ ಸಂಗ್ರಹ, ಭಾಷಾಂತರದಂತಹ ಕಾರ್ಯಗಳನ್ನು ಪೂರ್ಣಗೊಳಿಸಲು ಸರ್ಕಾರ ಮುಂದಾಗಬೇಕಾದ ಕುರಿತು.

- ಶ್ರೀ ಪಿ.ಹೆಚ್. ಪೂಜಾರ್
- ಶ್ರೀ ತಂಗಡಗಿ ಶಿವರಾಜ ಸಂಗಪ್ಪ (ಕನ್ನಡ ಮತ್ತು ಸಂಸ್ಕೃತಿ ಸಚಿವರು)

5. ಪ್ರಕಟಣೆ

6. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ

- ಶ್ರೀ ಎಂ.ನಾಗರಾಜು
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಕೆ.ಎಸ್.ನವೀನ್

7. ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ಮುಂದುವರೆದ ವಿಶೇಷ ಚರ್ಚೆ.

- ಡಾ: ಧನಂಜಯ ಸರ್ಜಿ
- ಡಾ: ಯತೀಂದ್ರ ಎಸ್.
- ಶ್ರೀಮತಿ ಹೇಮಲತಾ ನಾಯಕ್
- ಡಾ: ಉಮಾಶ್ರೀ
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಕಿಶೋರ್ ಕುಮಾರ್ ಪುತ್ತೂರು
- ಶ್ರೀ ಡಿ.ಟಿ.ಶ್ರೀನಿವಾಸ್(ಟಿ.ಟಿ.ಎಸ್)
- ಶ್ರೀ ಎಂ.ನಾಗರಾಜು
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಕೆ.ಎಸ್.ನವೀನ್
- ಶ್ರೀ ಪುಟ್ಟಣ್ಣ
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

8. ಗಮನ ಸೆಳೆಯುವ ಸೂಚನೆಗಳು

ಅ) ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಕೊಡಗು ವಿಶ್ವವಿದ್ಯಾಲಯ ಸೇರಿದಂತೆ ಹಿಂದಿನ ಸರ್ಕಾರದಲ್ಲಿ ಸ್ಥಾಪಿಸಲಾಗಿದ್ದ ವಿಶ್ವವಿದ್ಯಾಲಯಗಳನ್ನು ಮುಚ್ಚಲು ತೀರ್ಮಾನಿಸಿರುವುದನ್ನು ಕೈಬಿಡಬೇಕೆಂದು ಹಾಗೂ ವಿದ್ಯಾರ್ಥಿಗಳ ಮತ್ತು ನಿರುದ್ಯೋಗಿಗಳ ಹಿತದೃಷ್ಟಿಯಿಂದ ಸದರಿ ವಿಶ್ವವಿದ್ಯಾಲಯಗಳನ್ನು ಅಭಿವೃದ್ಧಿಪಡಿಸಲು ಅನುದಾನವನ್ನು ಒದಗಿಸುವ ಕುರಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಶ್ರೀ ಎಸ್.ಎಲ್.ಭೋಜೇಗೌಡ
- ಡಾ: ಎಂ.ಸಿ.ಸುಧಾಕರ (ಉನ್ನತ ಶಿಕ್ಷಣ ಸಚಿವರು)
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಡಿ.ಎಸ್.ಅರುಣ್
- ಡಾ: ಧನಂಜಯ ಸರ್ಜಿ
- ಶ್ರೀಮತಿ ಹೇಮಲತಾ ನಾಯಕ್
- ಡಾ: ತಳವಾರ್ ಸಾಬಣ್ಣ
- ಶ್ರೀ ಐವನ್ ಡಿ'ಸೋಜಾ
- ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಪುಟ್ಟಣ್ಣ
- ಶ್ರೀ ಹಣಮಂತ್ ರುದ್ರಪ್ಪ ನಿರಾಣಿ
- ಶ್ರೀ ಶಿವಾನಂದ ಎಸ್. ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಎಂ.ನಾಗರಾಜು

ಆ) ಆನೇಕಲ್ ತಾಲ್ಲೂಕಿನಲ್ಲಿ ಹಾಗೂ ಸರ್ಜಾಪುರ ಹೋಬಳಿಯಲ್ಲಿ ಹೊಸ ಕೈಗಾರಿಕೆಗಾಗಿ ಸ್ವಾಧೀನಪಡಿಸಿಕೊಂಡಿರುವ ಪ್ರದೇಶವನ್ನು ಹಿಂಪಡೆಯುವ ಕುರಿತು.

- ಶ್ರೀ ಹೆಚ್. ಎಸ್.ಗೋಪಿನಾಥ್
- ಶ್ರೀ ಎಂ.ಬಿ.ಪಾಟೀಲ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

೨. ಪ್ರಕಟಣೆ

* * * * *

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(186) 11.03.2025 11.00 LL-AK

ಕರ್ನಾಟಕ ವಿಧಾನ ಪರಿಷತ್ತು

ಮಂಗಳವಾರ, 11ನೇ ಮಾರ್ಚ್ 2025

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ 11 ಗಂಟೆ 02 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1. ಸಂತಾಪ ಸೂಚನೆಗಳು

ವಿಷಯ:- ಮಾಜಿ ಸಚಿವರಾಗಿದ್ದ ಶ್ರೀ ಬಿ. ಸುಬ್ಬಯ್ಯ ಶೆಟ್ಟಿ ಹಾಗೂ ಭಾರತೀಯ ಶಿಕ್ಷಣ ತಜ್ಞೆ, ಮೈಸೂರು ಶಿಕ್ಷಣ ಸೊಸೈಟಿಯ ಸ್ಥಾಪಕ ಸದಸ್ಯರಾದ ಶ್ರೀಮತಿ ವಿಮಲಾ ರಂಗಾಚಾರ್ ಅವರುಗಳ ನಿಧನದ ಬಗ್ಗೆ

\- - - -

ಸಭಾಪತಿಯವರು:- ಮಾಜಿ ಸಚಿವರಾಗಿದ್ದ ಶ್ರೀ ಬಿ.ಸುಬ್ಬಯ್ಯ ಶೆಟ್ಟಿ ಹಾಗೂ ಭಾರತೀಯ ಶಿಕ್ಷಣ ತಜ್ಞೆ, ಮೈಸೂರು ಶಿಕ್ಷಣ ಸೊಸೈಟಿಯ ಸ್ಥಾಪಕ ಸದಸ್ಯರಾದ ವಿಮಲಾ ರಂಗಾಚಾರ್ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

1. ಬಿ.ಸುಬ್ಬಯ್ಯ ಶೆಟ್ಟಿ

ಮಾಜಿ ಸಚಿವರಾಗಿದ್ದ ಶ್ರೀ ಬಿ.ಸುಬ್ಬಯ್ಯ ಶೆಟ್ಟಿ ಅವರು ದಿನಾಂಕ:10.03.2025ರಂದು ನಿಧನ ಹೊಂದಿರುತ್ತಾರೆ.

1934ರ ಏಪ್ರಿಲ್ 4ರಂದು ಮಂಗಳೂರಿನಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ., ಬಿ.ಎಲ್., ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಇವರು 1956 ರಿಂದ 1965ರವರೆಗೆ ಸಿ.ಬಿ.ಐ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರಲ್ಲದೆ, ಇಂಡೋ ಟಿಬೇಟಿಯನ್ ಗಡಿ ಪೊಲೀಸ್ ಪಡೆಯ ಸದಸ್ಯರಾಗಿದ್ದರು ಮತ್ತು ರಾಷ್ಟ್ರೀಯ ಏಕೀಕರಣ ವೇದಿಕೆಯ ಅಧ್ಯಕ್ಷರಾಗಿದ್ದ ಶ್ರೀಯುತರು ಸೂರತ್ಕಲ್ ವಿಧಾನಸಭೆ ಕ್ಷೇತ್ರದಿಂದ 5 ಮತ್ತು 6ನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರು ಭೂ ಸುಧಾರಣಾ ಸಚಿವರಾಗಿ, ವಾರ್ತಾ ಮತ್ತು ಇಂಧನ ಹಾಗೂ ಶಿಕ್ಷಣ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ. ರಾಷ್ಟ್ರೀಯ ಸಮಗ್ರತಾ ದಳ ಅಧ್ಯಕ್ಷರಾಗಿ, ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ, ದಕ್ಷಿಣ ಕನ್ನಡ ಜಿಲ್ಲೆಯ ಐ.ಎನ್.ಟಿ.ಯು.ಸಿ., ಯ ಅಧ್ಯಕ್ಷರಾಗಿಯು ಸೇವೆ ಸಲ್ಲಿಸಿದ್ದರು.

ಶ್ರೀಯುತರು ಡಿ.ದೇವರಾಜ ಅರಸ್ ಪ್ರಶಸ್ತಿ, ಶಾಂತವೇರಿ ಗೋಪಾಲಗೌಡ ಪ್ರಶಸ್ತಿ ಪುರಸ್ಕಾರಕ್ಕೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

2. ಶ್ರೀಮತಿ ವಿಮಲಾ ರಂಗಾಚಾರ್

ಶ್ರೀಯುತರು ಭಾರತೀಯ ಶಿಕ್ಷಣ ತಜ್ಞೆ ಹಾಗೂ ಮೈಸೂರು ಶಿಕ್ಷಣ ಸೊಸೈಟಿಯ ಸ್ಥಾಪಕ ಸದಸ್ಯರಾದ ವಿಮಲಾ ರಂಗಾಚಾರ್ ಅವರು ದಿನಾಂಕ: 25.02.2025ರಂದು ನಿಧನ ಹೊಂದಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1929ರಲ್ಲಿ ಬೆಂಗಳೂರಿನಲ್ಲಿ ಜನಿಸಿದ್ದ ಶ್ರೀಯುತರು ಇಂಗ್ಲೀಷ್ ಮತ್ತು ಮನೋವಿಜ್ಞಾನದಲ್ಲಿ ಪದವೀಧರರಾಗಿದ್ದರು. ಕರ್ನಾಟಕ ಕರಕುಶಲ ಮಂಡಳಿಯ ಅಧ್ಯಕ್ಷರಾಗಿ, ಮೈಸೂರು ಶಿಕ್ಷಣ ಸೊಸೈಟಿಯ ಸ್ಥಾಪಕ ಸದಸ್ಯರು ಹಾಗೂ ಅಧ್ಯಕ್ಷರಾಗಿ, ನಾಟ್ಯ ಕಥಕ್ ಮತ್ತು ನೃತ್ಯ ಸಂಯೋಜನೆ ಸಂಸ್ಥೆಯ ಅಧ್ಯಕ್ಷರಾಗಿ, ಕಾವೇರಿ ಕರಕುಶಲ ವಸ್ತುಗಳ ಎಂಪೋರಿಯಂನ ಅಧ್ಯಕ್ಷರಾಗಿ, ಮಹಿಳಾ ಸಬಲೀಕರಣದ ಪ್ರತಿಪಾದಕಿಯವರಾಗಿದ್ದ ಇವರು ಮಹಿಳಾ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸಿದ ಮಲ್ಲೇಶ್ವರಂನ (MEWS) ಮಹಿಳಾ ಸಮಾಜವನ್ನು ಸ್ಥಾಪಿಸಿದ್ದರು. ಹತ್ತು ಹಲವಾರು ಸಂಘಸಂಸ್ಥೆಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಶ್ರೀಯುತರು ಸೇವಾ ಸದನ ಅನಾಥಾಶ್ರಮದ ಅಧ್ಯಕ್ಷೆ, ಎಡಿಎ ರಂಗಮಂದಿರದ ಗೌರವ ಕಾರ್ಯದರ್ಶಿ, ಗಾಂಧಿ ವಿಜ್ಞಾನ ಮತ್ತು ಮಾನವ ಮೌಲ್ಯಗಳ ಕೇಂದ್ರ-ಭಾರತೀಯ ವಿದ್ಯಾ ಭವನದ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಮಲ್ಲೇಶ್ವರಂನಲ್ಲಿ ಮೊದಲ ಮಹಿಳಾ ಹಾಸ್ಟೆಲ್ ಅನ್ನು ಸ್ಥಾಪಿಸಿದ ಕೀರ್ತಿಗೆ ಭಾಜನಾಗಿದ್ದರಲ್ಲದೆ, ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಜವಾಹರ ಬಾಲ ಭವನವನ್ನು ಮಕ್ಕಳ ರಂಗಭೂಮಿಗೆ ಮೀಸಲಾದ ಸ್ಥಳವಾಗಿ ಸ್ಥಾಪಿಸಲು ಕೊಡುಗೆ ನೀಡಿದ್ದರು.

ಬೆಂಗಳೂರು ಮೂಲದ ರಂಗಭೂಮಿ ತಂಡದ ನೇತೃತ್ವವಹಿಸಿ ರಂಗಭೂಮಿಯಲ್ಲೂ ತೊಡಗಿಸಿಕೊಂಡಿದ್ದ ಶ್ರೀಯುತರು ದೇಶದ ಸಾಂಸ್ಕೃತಿಕ ರಾಯಭಾರಿಯಾಗಿ ಯುನೈಟೆಡ್ ಸ್ಟೇಟ್ಸ್ ಮತ್ತು ಯುಎಸ್ಎಸ್ಆರ್ ದೇಶಗಳಿಗೆ ಪ್ರವಾಸ ಕೈಗೊಂಡಿದ್ದರು.

ಶ್ರೀಯುತರು ಶಿಕ್ಷಣ, ಕಲೆ ಮತ್ತು ಸಂಸ್ಕೃತಿಗೆ ನೀಡಿದ ಕೊಡುಗೆಗಾಗಿ ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕಮಲ ಸನ್ಮಾನ್ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಅತ್ಯುತ್ತಮ ಶಿಕ್ಷಣ ತಜ್ಞೆಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಶ್ರೀ ಶಿವಾನಂದ ಪಾಟೀಲ್ (ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಮಾಜಿ ಸಚಿವರಾಗಿದ್ದ ಶ್ರೀ ಬಿ. ಸುಬ್ಬಯ್ಯಶೆಟ್ಟಿ ಅವರು ದಿನಾಂಕ:10.03.2025ರಂದು ನಿಧನ ಹೊಂದಿರುತ್ತಾರೆ. ಶ್ರೀಯುತರು ನಮ್ಮ ಕಾಂಗ್ರೆಸ್ ಪಕ್ಷದ ವರಿಷ್ಠರು ಹಾಗೂ ಹಿರಿಯರು. ಶ್ರೀಯುತರು ಸೂರತ್ಕಲ್ ವಿಧಾನಸಭೆ ಕ್ಷೇತ್ರದಿಂದ 5 ಮತ್ತು 6ನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಜೊತೆಗೆ, ಅವರು ಶಿಕ್ಷಣ ಸಚಿವರಾಗಿ ಕಾರ್ಯನಿರ್ವಹಿಸುತ್ತಾರೆ. ಅಲ್ಲದೇ, ಶ್ರೀಯುತರು ಡಿ. ದೇವರಾಜ ಅರಸ್ ಪ್ರಶಸ್ತಿ ಹಾಗೂ ಶಾಂತವೇರಿ ಗೋಪಾಲಗೌಡ ಪ್ರಶಸ್ತಿಗೆ ಭಾಜನರಾಗಿರುತ್ತಾರೆ. ಶ್ರೀಯುತರ ನಿಧನದಿಂದಾಗಿ ನಮ್ಮ ಕಾಂಗ್ರೆಸ್ ಪಕ್ಷ ಒಬ್ಬ ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡು ಬಡವಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಜೊತೆಗೆ, ಮಂಗಳೂರು ಜಿಲ್ಲೆಯ ಶ್ರೀ ಬಿ. ಸುಬ್ಬಯ್ಯಶೆಟ್ಟಿಯವರಂತಹ ಪ್ರಾಮಾಣಿಕರನ್ನು ಇವೊತ್ತಿನ ದಿವಸ ಕಳೆದುಕೊಂಡು ಈ ರಾಜ್ಯವು ಬಡವಾಗಿದೆ ಎಂಬ ದುಃಖವನ್ನು ವ್ಯಕ್ತಪಡಿಸುತ್ತೇನೆ.

ಶ್ರೀಮತಿ ವಿಮಲಾ ರಂಗಾಚಾರ್‌ರವರು ನಿಧನದ ಸಂಗತಿ ಇಡೀ ಶಿಕ್ಷಣ ಲೋಕಕ್ಕೆ ಒಂದು ದುಃಖಕರ ಸಂಗತಿಯಾಗಿದೆ. ಅವರು ಕಲೆ ಮತ್ತು ಸಂಸ್ಕೃತಿಗೆ ದೊಡ್ಡ ಕೊಡುಗೆಯನ್ನು ಕೊಟ್ಟು, ರಾಜ್ಯ ಸರ್ಕಾರದ ಅನೇಕ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶಸ್ತಿಗೆ ಭಾಜಿತರಾಗಿರತಕ್ಕಂತಹ ಶ್ರೀಯುತರನ್ನು ಕಳೆದುಕೊಂಡ ಈ ರಾಜ್ಯವು ಬಡವಾಗಿದೆ ಎನ್ನುವಂತಹ ದುಃಖವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ.

ಶ್ರೀಯುತರುಗಳ ನಿಧನದಿಂದಾಗಿ ಉಂಟಾದ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತಾ, ತಾವು ತಂದಿರತಕ್ಕಂತಹ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ, ನನ್ನ ಮಾತುಗಳನ್ನು ಮಕ್ತಾಯಗೊಳಿಸುತ್ತೇನೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಶ್ರೀ ಬಿ. ಸುಬ್ಬಯ್ಯಶೆಟ್ಟಿ ಅವರು ಹಾಗೂ ಶ್ರೀಮತಿ ವಿಮಲಾ ರಂಗಾಚಾರ್‌ರವರ ನಿಧನದ ಸುದ್ದಿಯನ್ನು ನಾವು ಕೇಳಿದ್ದೇವೆ. ಮಾನ್ಯರಾದ ಶ್ರೀ ಬಿ. ಸುಬ್ಬಯ್ಯ ಶೆಟ್ಟಿ ಅವರು ಅತ್ಯುತ್ತಮ ಸಚಿವರಾಗಿ ಕೆಲಸ ಮಾಡಿದಂಥವರು. ಅವರು ಸಚಿವರಾಗಿದ್ದ ಕಾಲದಲ್ಲಿ ಇಂದಿನ ಸರ್ಕಾರದಲ್ಲಿ ಮಾನ್ಯ ಗೃಹ ಸಚಿವರಾಗಿರುವಂತಹ ಡಾ॥ ಜಿ. ಪರಮೇಶ್ವರ್‌ರವರ ತಂದೆಯವರಾದ ದಿವಂಗತ ಗಂಗಾಧರಯ್ಯ ಅವರು ನಮಗೆ ಈ ಹಿಂದೆ ಒಂದು ಮಾತನ್ನು ಹೇಳಿದ್ದರು. ದಿವಂಗತ ಗಂಗಾಧರಯ್ಯ ಅವರು ವಿದ್ಯಾಸಂಸ್ಥೆಗಳನ್ನು ಪ್ರಾರಂಭ ಮಾಡುವಂತಹ ಸಂದರ್ಭದಲ್ಲಿ ಅವರಿಗೆ, "ಪರಿಶಿಷ್ಟ ಜಾತಿ ಮತ್ತು ವರ್ಗಗಳಿಂದ ಬಂದಿರುವಂತಹ ವ್ಯಕ್ತಿ ತಾವು, ಅದರಲ್ಲಿಯೂ ತಾವು ಶಿಕ್ಷಕರಾಗಿ ಬಂದಿರುವಂಥವರು. ಹಾಗಾಗಿ, ತಾವು ಈ ರಾಜಕೀಯವನ್ನು ಬಿಟ್ಟು, ವಿದ್ಯಾಸಂಸ್ಥೆಗಳನ್ನು ಪ್ರಾರಂಭ ಮಾಡಿ. ತಮಗೆ ಬೇಕಾದಂತಹ ಪ್ರೋತ್ಸಾಹವನ್ನು ನಾನು ಕೊಡುತ್ತೇನೆ" ಎಂದು ಶ್ರೀ ಬಿ. ಸುಬ್ಬಯ್ಯ ಶೆಟ್ಟಿ ಅವರು ಉತ್ತೇಜನ ನೀಡಿರುತ್ತಾರೆ. ಇವೊತ್ತಿನ ದಿವಸ ದಿವಂಗತ ಗಂಗಾಧರಯ್ಯನವರ ವಿದ್ಯಾಸಂಸ್ಥೆಗಳು ಎಷ್ಟು ದೊಡ್ಡ ಮಟ್ಟಕ್ಕೆ ಬೆಳೆದಿವೆ ಎಂದರೆ, ಅದಕ್ಕೆ ಕಾರಣರು ಶ್ರೀ ಬಿ. ಸುಬ್ಬಯ್ಯ ಶೆಟ್ಟಿ ಅವರು. ಇದನ್ನು ದಿವಂಗತ ಗಂಗಾಧರಯ್ಯನವರು ಆಗ ನಮಗೆ ಹೇಳುತ್ತಿದ್ದರು. ಅಷ್ಟೆ ಅಲ್ಲದೇ ದಿವಂಗತ ಗಂಗಾಧರಯ್ಯನವರು ಶ್ರೀಯುತರ ಬಗ್ಗೆ ಮತ್ತೆ ಏನು ಹೇಳುತ್ತಿದ್ದರು ಎಂದರೆ, "ಏನು ಸಾಹೇಬ್ರು, ನಾವು ಅವರ ಬಳ ಹೋಗಿ ಏನಾದರೂ ಕೇಳಿದರೆ ಸಾಕು ಅಥವಾ ನನ್ನ ಮುಖ ನೋಡಿದರೆ ಸಾಕು, ಅವರು ನನ್ನನ್ನು ಕರೆದು, 'ನೀನು ಪರಿಶಿಷ್ಟ ಜಾತಿಯಿಂದ ಬಂದಿರುವಂತಹವನು, ನೀನು ಮೊದಲು ಬಾ. ನೀನು ಇಂತಹದ್ದನ್ನು ಮಾಡು' ಎಂದು ಹೇಳುತ್ತಿದ್ದರು. ಅಲ್ಲದೇ, ಅವರು ನಮ್ಮಿಂದ ಅರ್ಧ ಗ್ಲಾಸ್ ಟೀ ಕೂಡ ತೆಗೆದುಕೊಳ್ಳದೇ ನಮಗೆ ಪ್ರೋತ್ಸಾಹ ಕೊಡುತ್ತಿದ್ದರು" ಎಂದು ಹೇಳುತ್ತಿದ್ದರು. ಇಂತಹ ಒಂದು ದೊಡ್ಡತನದ ವ್ಯಕ್ತಿತ್ವವುಳ್ಳಂತಹ ಮಾನ್ಯ ಬಿ. ಸುಬ್ಬಯ್ಯ ಶೆಟ್ಟಿ ಅವರು ಇವೊತ್ತಿನ ದಿವಸ ನಮ್ಮನ್ನು ಅಗಲಿರುವಂಥದ್ದು ಅತ್ಯಂತ ನೋವಿನ ಸಂಗತಿಯಾಗಿದೆ.

ಅದೇ ರೀತಿ, ಸಮಾಜಕ್ಕೆ ಅನೇಕ ಕೊಡುಗೆಗಳನ್ನು ಕೊಟ್ಟು, ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಮಕ್ಕಳ ಬಗ್ಗೆ ಅಪಾರವಾದ ಅಭಿಮಾನವನ್ನು ಹೊಂದಿದ್ದು, ಮಹಿಳಾ ಹಾಸ್ಟೆಲ್‌ಗಳನ್ನು ತೆರೆಯುವುದು, ಈ ರೀತಿ ಹಲವಾರು ಕೊಡುಗೆಗಳನ್ನು ಸಮಾಜಕ್ಕೆ ಕೊಟ್ಟಿರತಕ್ಕಂತಹ ಶ್ರೀಮತಿ ವಿಮಲಾ ರಂಗಾಚಾರ್‌ರವರು ಇವೊತ್ತಿನ ದಿವಸ ನಮ್ಮನ್ನು ಅಗಲಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಯುತರುಗಳ ನಿಧನದಿಂದಾಗಿ ಉಂಟಾದ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತಾ, ತಾವು ತಂದಿರತಕ್ಕಂತಹ ಅಗಲಿದ ಗಣ್ಯರ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ, ನನ್ನ ಮಾತುಗಳನ್ನು ಮಕ್ತಾಯಗೊಳಿಸುತ್ತೇನೆ.

ಸಭಾಪತಿಯವರು:– ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು, ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಸಭಾಪತಿಯವರು:– ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

(ಮುಂದು)

(187) 11.03.2025 11.10 ವೈಎಲ್–ಎಕೆ (ಸಭಾಪತಿಯವರ ಉಪಸ್ಥಿತಿ)

2. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 61 (548)

ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಉತ್ತರಿಸಬೇಕಾದ ದಿನಾಂಕ : 11-03-2025

*****

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಬಾಗಲಕೋಟೆ ಜಿಲ್ಲೆಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇದ್ದರೆ ಯಾವ ಕಾಲಮಿತಿಯಲ್ಲಿ ಪ್ರಾರಂಭವಾಗುವುದು;	ಬಾಗಲಕೋಟೆ ಜಿಲ್ಲೆಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ಬಗ್ಗೆ 2021-22ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ (218) ರಲ್ಲಿ **"ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ಪಟ್ಟಣದಲ್ಲಿ ನೇಕಾರರ ಜೀವನೋಪಾಯ ಉತ್ತೇಜಿಸಲು ಮತ್ತು ಸ್ಥಳೀಯವಾಗಿ ಉದ್ಯೋಗಾವಕಾಶಗಳನ್ನು ನೀಡಿ ಗುಳೇ ಹೋಗುವುದನ್ನು ತಡೆಗಟ್ಟಲು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಜವಳಿ ಪಾರ್ಕನ್ನು ಸ್ಥಾಪಿಸುವುದು"** ಎಂದು ಘೋಷಿಸಲಾಗಿರುತ್ತದೆ. ಅದರಂತೆ, ಗುಳೇದಗುಡ್ಡ ತಾಲ್ಲೂಕಿನ ಹಾನಾಪೂರ ಎಸ್. ಬಿ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುರಡಿ ಗ್ರಾಮದ ರಿ.ಸ.ನಂ. 77ಅ ಕ್ಷೇತ್ರ ಇಲ್ಲಿ 15 ಎಕರೆ ಜಮೀನನ್ನು ಪಾರ್ಕ್ ಸ್ಥಾಪನೆಗಾಗಿ ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬಾಗಲಕೋಟೆ ಇವರ ಹೆಸರಿಗೆ ದಿನಾಂಕ:18.08.2022 ರಂದು ಹಸ್ತಾಂತರಿಸಲಾಗಿರುತ್ತದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು Transaction Advisor ನೇಮಕಾತಿಗೆ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.
(ಆ)	ರಾಜ್ಯದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಜವಳಿ ಪಾರ್ಕ್‌ಗಳು ಎಷ್ಟು ಹಾಗೂ ಯಾವ ಜಿಲ್ಲೆ ಯಾವ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ; (ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ಸರ್ಕಾರಿ ಒಡೆತನದಲ್ಲಿ 01 ಜವಳಿ ಪಾರ್ಕ್‌ನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಹಾಗೂ ಖಾಸಗಿ ಒಡೆತನದಲ್ಲಿ ಒಟ್ಟು 06 ಜವಳಿ ಪಾರ್ಕ್‌ಗಳಿದ್ದು, 05 ಜವಳಿ ಪಾರ್ಕ್‌ಗಳು ಕಾರ್ಯನಿರ್ವಹಿಸುತ್ತಿದ್ದು, 01 ಜವಳಿ ಪಾರ್ಕ್‌ನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ವಿವರವನ್ನು ಅನುಬಂಧ ದಲ್ಲಿ ಒದಗಿಸಲಾಗಿದೆ.
(ಇ)	ರಾಜ್ಯದಲ್ಲಿ ಸ್ಥಗಿತಗೊಂಡಿರುವ ಜವಳಿ ಪಾರ್ಕ್‌ಗಳೆಷ್ಟು; ಸ್ಥಗಿತಗೊಂಡಿದ್ದಲ್ಲಿ ಕಾರಣಗಳೇನು; ಸದರಿ ಜವಳಿ ಪಾರ್ಕ್‌ನ್ನು ಪುನಶ್ಚೇತನಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು; (ವಿವರ ಒದಗಿಸುವುದು)	ರಾಜ್ಯದಲ್ಲಿ ಯಾವುದೇ ಪಾರ್ಕ್ ಸ್ಥಗಿತಗೊಂಡಿರುವುದಿಲ್ಲ.

...2

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಈ)	ರಾಜ್ಯದಲ್ಲಿ ಅತಿ ಹೆಚ್ಚು ಜವಳಿ ಕಾರ್ಮಿಕರು ತೇರದಾಳ ಮತ ಕ್ಷೇತ್ರದಲ್ಲಿ ನೆಲೆಸಿರುವುದರಿಂದ ಈ ತಾಲ್ಲೂಕಿನಲ್ಲಿ ಹೊಸದಾಗಿ ಜವಳಿ ಪಾರ್ಕ್ ನಿರ್ಮಾಣ ಮಾಡಲು ಸರ್ಕಾರದ ನಿಲುವೇನು?	ತೇರದಾಳ ಮತ ಕ್ಷೇತ್ರದಲ್ಲಿ ಜವಳಿ ಪಾರ್ಕ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಆದಾಗ್ಯೂ, ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24 ಅನ್ವಯ ಹೊಸದಾಗಿ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸುವುದಕ್ಕೆ ಖಾಸಗಿ ಉದ್ದಿಮೆದಾರರಿಗೂ ಅವಕಾಶಕಲ್ಪಿಸಲಾಗಿದೆ. ಗ್ರೀನ್ ಫೀಲ್ಡ್ ಟೆಕ್ಸ್ ಟೈಲ್ ಪಾರ್ಕ್ ಸ್ಥಾಪಿಸಲು ಇಚ್ಛಿಸಿರುವ ಖಾಸಗಿ/ ವೈಯಕ್ತಿಕ ಉದ್ದಿಮೆದಾರರು ಅಥವಾ ಕಂಪನಿ ಕಾಯ್ದೆ 2013 ರಡಿ ಸ್ಥಾಪಿತವಾಗುವ ಯಾವುದೇ ಎಸ್.ಪಿ.ವಿ. ರವರು ಕನಿಷ್ಠ 15 ಎಕರೆ ವಿಸ್ತೀರ್ಣ ಜಮೀನು ಹೊಂದಿದ್ದು, ಪಾರ್ಕ್ ಸ್ಥಾಪನೆಗೆ ಸಾಮಾನ್ಯ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಯೋಜನಾ ವೆಚ್ಚದ ಮೇಲೆ 40% ಅಥವಾ ರೂ.40.00 ಕೋಟಿವರೆಗೆ ಸಹಾಯಧನವನ್ನು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24 ರಡಿ ಒದಗಿಸಲಾಗುವುದು. ಅದರಂತೆ, ವೈಯಕ್ತಿಕ ಉದ್ದಿಮೆದಾರರು/ ಎಸ್.ಪಿ.ವಿ ರವರು 15 ಎಕರೆ ಜಾಗದೊಂದಿಗೆ ಪಾರ್ಕ್ ಸ್ಥಾಪಿಸಲು ಮುಂದೆ ಬಂದಲ್ಲಿ, ಜವಳಿ ನೀತಿ ಯೋಜನೆಯ ಮಾರ್ಗಸೂಚಿಯನ್ವಯ ಕ್ರಮವಹಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ

ರಾಜ್ಯ ಸರ್ಕಾರ ಒಡೆತನದ ಆಂಕರ್ ಮಾದರಿ ಪಾರ್ಕ್

ಕ್ರ.ಸಂ.	ಜಿಲ್ಲೆ	ಪಾರ್ಕ್‌ನ ಹೆಸರು
1.	ಹಾವೇರಿ	ಶಿಗ್ಗಾಂವಿ ಟೆಕ್ಸ್‌ಟೈಲ್ ಪಾರ್ಕ್ ಅಸೋಸಿಯೇಷನ್, ಹಾವೇರಿ ಜಿಲ್ಲೆಯ ಖುರ್ಸಾಪುರ ಗ್ರಾಮ.

ಇತರೆ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಾರ್ಕ್‌ಗಳ ವಿವರ

ಕ್ರ.ಸಂ.	ಜಿಲ್ಲೆ	ಪಾರ್ಕ್‌ನ ಹೆಸರು
1.	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ (DITP) (ಕೇಂದ್ರ ಸರ್ಕಾರದ ಅನುಮೋದಿತ SITP- Scheme for Integrated Textile Park) ಕೆ.ಐ.ಎ.ಡಿ.ಬಿ ಇಂಡಸ್ಟ್ರೀಯಲ್ ಏರಿಯ, 2ನೇ ಹಂತ, ದೊಡ್ಡಬಳ್ಳಾಪುರ, ಬೆಂಗಳೂರು[ಗ್ರಾ] ಟೆಕ್ಸ್‌ಟೈಲ್
2.	ಚಿತ್ರದುರ್ಗ	ಮೆ||ಬೈನರಿ ಅಪೇರೆಲ್ ಪಾರ್ಕ್ ಪ್ರೈ.ಲಿ., (ರಾಜ್ಯ ಸರ್ಕಾರದ ಅನುಮೋದಿತ ನೂತನ ಜವಳಿ ನೀತಿ 2013-18) #205, ಎನ್.ಹೆಚ್.4, ಮುಖ್ಯರಸ್ತೆ, ಕೆ.ಆರ್.ಹಳ್ಳಿ, ಪೋಸ್ಟ್, ಬಗ್ಗನಾಡು, ಜೆ.ಜಿ.ಹಳ್ಳಿ, ಹಿರಿಯೂರು ತಾ||, ಚಿತ್ರದುರ್ಗ ಜಿಲ್ಲೆ
3.	ದಾವಣಗೆರೆ	ದಾವಣಗೆರೆ ಟೆಕ್ಸ್‌ಟೈಲ್ ಪಾರ್ಕ್ (ಕೆ.ಐ.ಎ.ಡಿ.ಬಿ ಅಭಿವೃದ್ಧಿಪಡಿಸಲಾದ) ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕು ಕಸಬಾ ಹೋ|| ಕರೂರು ಗ್ರಾಮ
4.	ಬೆಳಗಾವಿ	ಬೋರಗಾಂವ್ ಟೆಕ್ಸ್‌ಟೈಲ್ ಪಾರ್ಕ್ (ಕೆ.ಎಸ್.ಎಸ್.ಐ.ಡಿ.ಸಿ ಅಭಿವೃದ್ಧಿಪಡಿಸಲಾದ) ಬೋರಗಾಂವ್, ಚಿಕ್ಕೋಡಿ ತಾ|| ಬೆಳಗಾವಿ ಜಿಲ್ಲೆ.
5.	ಬಳ್ಳಾರಿ	ಬಳ್ಳಾರಿ ಟೆಕ್ಸ್‌ಟೈಲ್ ಪಾರ್ಕ್ (ಕೆ.ಐ.ಎ.ಡಿ.ಬಿ ಅಭಿವೃದ್ಧಿಪಡಿಸಲಾದ) ಮುಂಡರಗಿ ಕೆ.ಐ.ಎ.ಡಿ.ಬಿ ಇಂಡಸ್ಟ್ರೀಯಲ್ ಏರಿಯ, ಬಳ್ಳಾರಿ ಜಿಲ್ಲೆ.

ಅಭಿವೃದ್ಧಿಪಡಿಸಲಾಗುತ್ತಿರುವ ಪಾರ್ಕ್‌ನ ವಿವರ

ಕ್ರ.ಸಂ.	ಜಿಲ್ಲೆ	ಪಾರ್ಕ್‌ನ ಹೆಸರು
1.	ಬೆಳಗಾವಿ	ಕುರಣಿ ಟೆಕ್ಸ್‌ಟೈಲ್ ಪಾರ್ಕ್ ಲಿ., (ರಾಜ್ಯ ಸರ್ಕಾರದ ಅನುಮೋದಿತ ನೂತನ ಜವಳಿ ನೀತಿ 2013-18) ಬುಗಟೆ ಗ್ರಾಮ, ಹುಕ್ಕೇರಿ ತಾ|| ಬೆಳಗಾವಿ ಜಿಲ್ಲೆ.

ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದು, ಅವರ ಉತ್ತರದಲ್ಲಿ ತಿಳಿಸಿರುವಂತೆ ಒಂದು ಸಮಿತಿ ಇದೆ. ಅವರ ಉತ್ತರದಲ್ಲಿ ಏನಿದೆ ಎಂದರೆ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

'ಸ್ಥಳೀಯವಾಗಿ ಉದ್ಯೋಗಾವಕಾಶಗಳನ್ನು ನೀಡಿ ಗುಳೇ ಹೋಗುವುದನ್ನು ತಡೆಗಟ್ಟಲು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಜವಳಿ ಪಾರ್ಕನ್ನು ಸ್ಥಾಪಿಸುವುದು' ಎಂದು ಘೋಷಿಸಲಾಗಿದೆ. ಹಾಗಾದರೆ, ಎಷ್ಟು ಜನರಿಗೆ ಉದ್ಯೋಗವು ಜನರೇಟ್ ಆಗಿದೆ? ಎಷ್ಟು ಜನರು ಗುಳೇ ಹೋಗುವುದನ್ನು ತಡೆಹಿಡಿಯಲಾಗಿದೆ? ಹಾಗೆಯೇ, ಖಾಸಗಿ ಸಹಭಾಗಿತ್ವದಲ್ಲಿ ಸ್ಥಳೀಯವಾಗಿ ಎಷ್ಟು ಜನರಿಗೆ ಉದ್ಯೋಗಾವಕಾಶವನ್ನು ಸೃಷ್ಟಿಸಲಾಗಿದೆ; ಸ್ಥಳೀಯವಾಗಿ ಎಷ್ಟು ಜನ ನೇಕಾರರು ಅದರ ಸದುಪಯೋಗ ಮಾಡಿಕೊಂಡಿದ್ದಾರೆ? ಹಾಗೆಯೇ ನಾನು ಕೇಳಿರುವಂಥ ೩ ಪ್ರಶ್ನೆಗೆ ಸಂಬಂಧಿಸಿದಂತೆ 'ರಾಜ್ಯದಲ್ಲಿ ಯಾವುದೇ ಪಾರ್ಕ್ ಸ್ಥಗಿತಗೊಂಡಿರುವುದಿಲ್ಲ' ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಹಾಗಾದರೆ, ಹೊಸದಾಗಿ ಶುರುವಾಗುವುದಕ್ಕೆ ಯಾವುದೇ ಪ್ರಸ್ತಾವನೆ ಇಲ್ಲವೆಂಬುದು ನಮ್ಮ ಮುಂದೆ ಕಾಣಿಸುತ್ತಿದೆ. ನನ್ನ (4) ಪ್ರಶ್ನೆಯಲ್ಲಿ ತೇರದಾಳ ಮತಕ್ಷೇತ್ರದಲ್ಲಿ ಮುಂದೆ ಬರಲು ಏನೇನು ಮಾಡಬೇಕೆಂದು ಪ್ರಶ್ನೆ ಕೇಳಿದ್ದು, ತೇರದಾಳ ಮತಕ್ಷೇತ್ರದಲ್ಲಿ ಮುಂದೆ ಬಂದು ಜವಳಿ ಉದ್ದಿಮೆ ಅಥವಾ ನೇಕಾರಿಕೆಯಲ್ಲಿ ಹೆಚ್ಚು ಜನರಿದ್ದಾರೆ ಎಂದಾಗ ಸರ್ಕಾರವು ಯಾವ ರೀತಿಯಲ್ಲಿ ಕ್ರಮವನ್ನು ಕೈಗೊಂಡಿದೆ?

ಶ್ರೀ ಶಿವಾನಂದ ಎಸ್.ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):- ಮಾನ್ಯ ಸಭಾಪತಿಯವರೇ, ಮೊದಲನೇಯ ಪ್ರಶ್ನೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಆಗಿನ ಕಾಲದಲ್ಲಿ ಅವಿಭಾಜ್ಯ ಜಿಲ್ಲೆಯಾದ ಬಿಜಾಪುರ ಜಿಲ್ಲೆಯೂ ಬರಗಾಲದ ಜಿಲ್ಲೆಯಾಗಿತ್ತು. ಹಾಗೆಯೇ ಬಾಗಲಕೋಟೆ ಜಿಲ್ಲೆ ಸಹ ಬಿಜಾಪುರ ಜಿಲ್ಲೆಯ ಒಂದು ಭಾಗವಾಗಿದೆ. ಹಾಗಾಗಿ, ಬರಗಾಲ ಉದ್ಭವಿಸಿದಾಗ ಗುಳೇ ಹೋಗುವಂಥ ಪರಿಸ್ಥಿತಿ ಉದ್ಭವಿಸುತ್ತದೆ ಎಂಬ ಮಾತು ಆ ಸಂದರ್ಭದಲ್ಲಿ ಬಹಳ ಪ್ರಚಲಿತದಲ್ಲಿತ್ತು. ಅದಕ್ಕಾಗಿ ಬ್ರಿಟಿಷರು ಬಿಜಾಪುರದಲ್ಲಿ 'Anti-Famine Building' ಅಂದರೆ, 'ಬರಗಾಲ ನಿವಾರಣಾ ಸಹಕಾರಿ ಸಂಸ್ಥೆ' ಕಟ್ಟಡವನ್ನು ನಿರ್ಮಿಸಿದರು. ಆ ಒಂದು context ನಲ್ಲಿ ಪ್ರಯಾಶಃ ಆ ಒಂದು ಶಬ್ದವನ್ನು ಉಪಯೋಗ ಮಾಡಿದ್ದಾರೆ. ಈಗಾಗಲೇ 2021-22ನೇ ಸಾಲಿನಲ್ಲಿ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ಪಟ್ಟಣದಲ್ಲಿ ಪಾರ್ಕ್ ಮಾಡುವ ಸಲುವಾಗಿ 15 ಎಕರೆ ಜಮೀನನ್ನು ತೆಗೆದುಕೊಳ್ಳಬೇಕೆಂದು ನಿರ್ಣಯವಾಗಿದೆ. ದುರದೃಷ್ಟವಶಾತ್ ಹಿಂದಿನ ಸರ್ಕಾರ ಇದ್ದಾಗವು ಸಹ ಸರ್ಕಾರದ ಹಣವನ್ನು ವೆಚ್ಚ ಮಾಡಿ, ಅಲ್ಲಿ ಪಾರ್ಕ್ ನಿರ್ಮಾಣ ಮಾಡಿದರೆ ಸರಿಯಾಗುತ್ತಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಎಲ್ಲಾ ಯೋಜನೆಗಳನ್ನು P.P.P. (Public-Private Partnership) model ಮೇಲೆ ತೆಗೆದುಕೊಳ್ಳಬೇಕೆಂದು ನಿರ್ಣಯವಾಗಿರುವುದರಿಂದ ಈ ಪಾರ್ಕ್ ನಿರ್ಮಾಣವು ಸಹ ಪಿ.ಪಿ.ಪಿ. ಮಾದರಿ ಮೇಲೆ ತೆಗೆದುಕೊಳ್ಳುವಂಥ ನಿರ್ಣಯವಾಗಿದೆ. Transaction Advisor ನೇಮಕವಾಗಿದೆ. ಅದಲ್ಲದೇ ಸಿಂಗಲ್ ಬಿಡ್ ಆಗಿರುವುದರಿಂದ ಸ್ವಲ್ಪ ವಿಳಂಬವಾಗಿದೆ. ಪುನಃ ಸಿಂಗಲ್ ಬಿಡ್ ಆದ ಪಕ್ಷದಲ್ಲಿ Empanelled Transaction Advisor ನೇಮಕ ಮಾಡುವಂಥ ನಿರ್ಣಯ ಕೈಗೊಳ್ಳಲಾಗುವುದು. ನಂತರ ಅದರ Feasibility Report ನ್ನು ನೋಡಿ, ಈ ಯೋಜನೆಯನ್ನು ಮುಂದುವರೆಸುವಂಥ ಕೆಲಸ ಮಾಡುತ್ತೇವೆ. ಒಟ್ಟು 6 ಜವಳಿ ಪಾರ್ಕ್‌ಗಳಿದ್ದು, 5 ಜವಳಿ ಪಾರ್ಕ್‌ಗಳು ಕಾರ್ಯನಿರ್ವಹಿಸುತ್ತಿದ್ದು, 1 ಜವಳಿ ಪಾರ್ಕ್‌ನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಅದರ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕೊಟ್ಟಿದ್ದಾರೆಯೇ, ಇಲ್ಲವೇ ಎಂಬುದು ಗೊತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೇಶವ ಪ್ರಸಾದ್.ಎಸ್:– ಮಾನ್ಯ ಸಭಾಪತಿಯವರೇ, ಎಲ್ಲೆಲ್ಲಿ ಜವಳಿ ಪಾರ್ಕ್‌ಗಳು ಕಾರ್ಯನಿರ್ವಹಿಸುತ್ತಿವೆ ಎಂಬುದರ ಮಾಹಿತಿ ಕೊಟ್ಟಿದ್ದಾರೆ.

ಶ್ರೀ ಶಿವಾನಂದ ಎಸ್.ಪಾಟೀಲ:– ಮಾನ್ಯ ಸಭಾಪತಿಯವರೇ, ಈಗಾಗಲೇ ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಬೆಂಗಳೂರು, ಬೆಳಗಾವಿಯಲ್ಲಿ ಜವಳಿ ಪಾರ್ಕ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿ ಎಷ್ಟು ಮಂದಿ ನೌಕರರು ಜನರೇಟ್ ಆಗಿದ್ದಾರೆ ಎಂಬುದರ ಮಾಹಿತಿ ಸಹ ಕೊಟ್ಟಿದ್ದೇವೆ.

ಶ್ರೀ ಕೇಶವ ಪ್ರಸಾದ್.ಎಸ್:– ಮಾನ್ಯ ಸಭಾಪತಿಯವರೇ, ಎಷ್ಟು ಮಂದಿ ನೌಕರರು ಜನರೆಟ್ ಆಗಿದ್ದಾರೆ ಎಂಬುದರ ಮಾಹಿತಿ ನನಗೆ ಬಂದಿಲ್ಲ.

ಶ್ರೀ ಶಿವಾನಂದ ಎಸ್.ಪಾಟೀಲ:– ಮಾನ್ಯ ಸಭಾಪತಿಯವರೇ, tentative figure ಇದ್ದು, ಅದನ್ನು ಮಾನ್ಯ ಸದಸ್ಯರಿಗೆ ಸಲ್ಲಿಸುತ್ತೇನೆ. ಹಾಗೆಯೇ ಮಾನ್ಯ ಸದಸ್ಯರ (4)ನೇ ಪ್ರಶ್ನೆಯಲ್ಲಿ ಕೇಳಿರುವಂತೆ ತೇರದಾಳ ಮತ ಕ್ಷೇತ್ರದಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡಲು ಸರ್ಕಾರದ ನಿಲುವೇನು ಎಂದು ಕೇಳಿದ್ದಾರೆ. ಇಲ್ಲಿಯೂ ಕೂಡ greenfield park ಮಾಡಲು ಯಾರಾದರೂ ಮುಂದೆ ಬಂದ ಪಕ್ಷದಲ್ಲಿ ಪಾರ್ಕ್ ಸ್ಥಾಪನೆಗೆ ಮೂಲಭೂತ ಸೌಲಭ್ಯ ಒದಗಿಸಲು ನಮ್ಮಲ್ಲಿರುವಂಥ ಅನುದಾನದಲ್ಲಿ ಶೇಕಡ 40 ರಷ್ಟು Project Cost ಕೊಡುತ್ತೇವೆ. ಹಾಗೆಯೇ ತೇರದಾಳ ಮತ ಕ್ಷೇತ್ರದಲ್ಲಿ ಯಾರಾದರೂ ಒಂದು ಪಾರ್ಕ್‌ನ ನಿರ್ಮಾಣ ಮಾಡಿದರೆ, maximum extent ರೂ.40.00 ಕೋಟಿ ಸಬ್ಸಿಡಿ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಕೇಶವ ಪ್ರಸಾದ್.ಎಸ್:– ಮಾನ್ಯ ಸಭಾಪತಿಯವರೇ, ಜನರು ಉದ್ಯೋಗವನ್ನು ಅರಸಿ ಬೇರೆ ಕಡೆ ಹೋಗದೇ ತಮ್ಮ ಬದುಕನ್ನು ತಾವು ವಾಸಿಸುವ ಪರಿಸರದ ಸುತ್ತಮುತ್ತಲ್ಲಿನಲ್ಲಿಯೇ ಕಂಡುಕೊಳ್ಳಬೇಕೆಂಬ ಉದ್ದೇಶದಿಂದಾಗಿ ಈ ರೀತಿಯಾಗಿ ಸರ್ಕಾರವು ಜವಳಿ ಪಾರ್ಕ್ ನಿರ್ಮಾಣ ಮಾಡುತ್ತಿರುವುದು. ಕೃಷಿಯ ನಂತರ ಹೆಚ್ಚು ಜನರು ಉದ್ಯೋಗಾವಕಾಶವನ್ನು ಸೃಷ್ಟಿಸುವಂಥದು ಯಾವುದೆಂದರೆ, ಅದು ಜವಳಿ. ಹಾಗಾಗಿ, ಕರ್ನಾಟಕ ಸರ್ಕಾರದ statistics ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವವರ ಸಂಖ್ಯೆಯಲ್ಲಿ ಕೃಷಿಯ ನಂತರ ಎರಡನೇ ಸ್ಥಾನದಲ್ಲಿ ನೇಕಾರರು ಇದ್ದಾರೆ. ನೇಕಾರರಿಗೆ ಕೊಡುವಂಥ ಯೋಜನೆಗಳನ್ನು ಕಾರ್ಯಗತಗೊಳಿಸುವುದೆಂದರೆ, ಆ statistics ಕಡಿಮೆಯಾಗಬೇಕು ಮತ್ತು ಅವರ ಜೀವನದ ಮಟ್ಟವನ್ನು ಸುಧಾರಿಸುವುದರ ಕಡೆಗೆ ಸರ್ಕಾರಕ್ಕೆ ಗಮನ ಇಲ್ಲ. ಜನರ ಜೀವನ ಮಟ್ಟವನ್ನು ಸುಧಾರಿಸುವುದೆಂದರೆ, `ಜನರು ಗುಳೇ ಹೋಗದೇ ಎಲ್ಲರೂ ಅಲ್ಲಿಯೇ ನೆಲೆಸುವುದು ಮತ್ತು ಅವರು ಮಾಡುವಂಥ ಜವಳಿ ಕಾರ್ಯಕ್ಕೆ ಹೆಚ್ಚು ಬೆಲೆ ಸಿಗುವುದು ಹಾಗೂ ಕಚ್ಚಾ ವಸ್ತುಗಳನ್ನು ಕಡಿಮೆ ಬೆಲೆಗೆ ಪಡೆದುಕೊಳ್ಳುತ್ತಿದ್ದು, ಅವರ ಸ್ಥಿತಿಯಲ್ಲಿ ತುಂಬಾ ಸುಧಾರಣೆಯಾಗಿದೆ' ಎನ್ನುವಂಥ ವರದಿಯನ್ನು ಎಲ್ಲಿಯೂ ನೋಡಿಲ್ಲ. ನಾನು ಇಷ್ಟೆಲ್ಲಾ ಅನುಕೂಲತೆಗಳ ಬಗ್ಗೆ ಈ ಜವಳಿ ಪಾರ್ಕ್ ಬಗ್ಗೆ ಕೇಳಿದ್ದೆನೆ. ಇಷ್ಟೆಲ್ಲಾ ಅನುಕೂಲತೆ ಒದಗಿಸುವ ಬಗ್ಗೆ ಸರ್ಕಾರ ಯೋಚನೆ ಮಾಡಿದ್ದರೆ ಅವರ ಸ್ಥಿತಿ ಮಾತ್ರ ಇನ್ನೂ ಏತಕ್ಕೆ ಅದೇ ರೀತಿ ಮುಂದುವರೆಯುತ್ತಿದೆ? ಎಂಬುದು ಅರ್ಥವಾಗದ ಪ್ರಶ್ನೆಯಾಗಿದೆ. ಅದಕ್ಕಾಗಿ ಸರ್ಕಾರ ಕೈಗೊಂಡಿರುವಂಥ ಕಾರ್ಯಕ್ರಮಗಳೇನು ಎಂಬುದನ್ನು ತಿಳಿಸಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಶಿವಾನಂದ ಎಸ್.ಪಾಟೀಲ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೂ ಅದರ ಮಾಹಿತಿ ಇದೆ. ಅವರಿಗೆ ಅದರ ಮಾಹಿತಿ ಬಗ್ಗೆ ಕೊರತೆ ಇದೆ ಎಂಬುದನ್ನು ಹೇಳುವುದಿಲ್ಲ. ಇತ್ತೀಚಿನ ನಿರ್ಮಾಣಗಳಲ್ಲಿ ನೇಕಾರರು migrate ಆಗುತ್ತಿರುವುದು ತಮ್ಮ ಗಮನಕ್ಕೂ ಬಂದಿದೆ. ಏಕೆಂದರೆ, ಆ ಸಮಾಜದಲ್ಲಿ ಪ್ರತಿಭಾವಂತ ಮಕ್ಕಳು ಹೊರಹೊಮ್ಮುತ್ತಿರುವುದರಿಂದ migrate ಆಗಿ ನೇಕಾರಿಕೆಯನ್ನು ಬಿಟ್ಟು, ಬೇರೆ ಬೇರೆ ಉದ್ಯೋಗಗಳ ಕಡೆಗೆ ಹೋಗುತ್ತಿದ್ದಾರೆ. ಹಾಗೆಯೇ handloom and powerloom ಕಾರ್ಯವನ್ನು ನಡೆಸುತ್ತಿರುವುದು ಸಹ ಗೊತ್ತಿದೆ. ಆ ಹಿನ್ನೆಲೆಯಲ್ಲಿ ನೇಕಾರಿಕೆಯನ್ನು ಬಿಟ್ಟು ಬೇರೆ ಬೇರೆ ಉದ್ಯೋಗಕ್ಕಾಗಿ ವಲಸೆ ಹೋಗುತ್ತಿರುವುದರಿಂದ ದಿನ ಕಳೆದಂತೆ ಅವರ ಜನಗಣತಿಯಲ್ಲಿ ಸಹ ಕಡಿಮೆಯಾಗುತ್ತಿದೆ, ನೇಕಾರಿಗೆ ಕುಟುಂಬಗಳು ಕಡಿಮೆಯಾಗುತ್ತಿವೆ. ಹಾಗೆಯೇ ಇರುವಂಥ ನೇಕಾರರಿಗೆ `ನೇಕಾರ್ ಸನ್ಮಾನ್ ಯೋಜನೆ' ಅಡಿ ಈ ಮೊದಲು ರೂ.2,000 ಪ್ರೋತ್ಸಾಹ ನೀಡುತ್ತಿದ್ದು, ಈಗ ರೂ.5,000 ವರೆಗೂ ಪ್ರೋತ್ಸಾಹ ನೀಡಲಾಗುತ್ತಿದೆ ಮತ್ತು ಕಚ್ಚಾ ಮಾಲನ್ನು ಒದಗಿಸಿ ಕೊಡುವುದಕ್ಕೆ ಇನ್ನೂ ಹೆಚ್ಚಿನ ಪ್ರಯತ್ನ ಮಾಡಬೇಕಾಗಿದೆ ಎಂಬುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ಕಚ್ಚಾ ಮಾಲನ್ನು ಒದಗಿಸಿಕೊಟ್ಟರೆ, ಇನ್ನೂ ಹೆಚ್ಚಿನ ಕೆಲಸ ಸಿಗುವುದರೊಂದಿಗೆ ಹೆಚ್ಚು ಉದ್ಯೋಗ ಸೃಷ್ಟಿ ಮಾಡಬಹುದೆಂದು ನಾನು ಭಾವಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 595
ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 11.03.2025
ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು.

	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ಮಹಾನಗರ ಪಾಲಿಕೆಯ ಅಧೀನದಲ್ಲಿರುವ ಜಲಮಂಡಳಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೀರು ಸರಬರಾಜು ನೌಕರರ ಸಂಖ್ಯೆ ಎಷ್ಟು;	ಶಿವಮೊಗ್ಗ ಮಹಾನಗರ ಪಾಲಿಕೆಯ ಅಧೀನದಲ್ಲಿರುವ ಜಲಮಂಡಳಿಯಲ್ಲಿ ಒಟ್ಟು 116 ಜನ ನೀರು ಸರಬರಾಜು ನೌಕರರು ಹೊರಗುತ್ತಿಗೆ ಆಧಾರದ ಮೇಲೆ ಸುಮಾರು 15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ.
ಆ)	ಇವರು ಕಳೆದ ಎಷ್ಟು ವರ್ಷಗಳಿಂದ ಹೊರಗುತ್ತಿಗೆ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ;	
ಇ)	ಸ್ಥಳೀಯ ಸಂಸ್ಥೆಗಳ ವಿವಿಧ ವೃಂದಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಈ ಹೊರಗುತ್ತಿಗೆ ನೌಕರರನ್ನು ಖಾಯಂ ನೌಕರರನ್ನಾಗಿ ಪರಿಗಣಿಸಬೇಕೆಂಬ ಬೇಡಿಕೆ ಇದ್ದು ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು;	ರಾಜ್ಯದ ಮಹಾನಗರ ಪಾಲಿಕೆಗಳ (ಬಿಬಿಎಂಪಿ ಹೊರತುಪಡಿಸಿ) ನೀರು ಸರಬರಾಜು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ / ಕ್ಷೇಮಾಭಿವೃದ್ಧಿ / ಸಮಾನ ಕೆಲಸಕ್ಕೆ ಸಮಾನ ವೇತನ /ಗುತ್ತಿಗೆ /ಹೊರಗುತ್ತಿಗೆ ಇತರೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು 1504 ನೀರು ಸರಬರಾಜು ನೌಕರರನ್ನು ಖಾಯಂ ಮಾಡುವ ಬಗ್ಗೆ, ಸರ್ಕಾರಕ್ಕೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಅಭಿಪ್ರಾಯ ಕೋರಲಾಗಿ, ಎಲ್ಲಾ ಹೊರಗುತ್ತಿಗೆ ನೌಕರರ ವೇತನವನ್ನು ಯಥಾಸ್ಥಿತಿ ಪ್ರಕಾರ ಮುಂದುವರೆಸಲು ಮತ್ತು ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆಯಂತೆ ವೇತನ ಪಾವತಿಸಲು ಕ್ರಮವಹಿಸುವಂತೆ ಆರ್ಥಿಕ ಇಲಾಖೆಯು ತಿಳಿಸಿರುತ್ತದೆ. ಅದರಂತೆ, ಸರ್ಕಾರದ ಪತ್ರ ಸಂಖ್ಯೆ: ನಅಇ 11 ಜಿಇಎಲ್ 2023 ದಿನಾಂಕ: 06/03/2024ರಲ್ಲಿ ಎಲ್ಲಾ ಹೊರಗುತ್ತಿಗೆ ನೌಕರರ ವೇತನವನ್ನು ಯಥಾಸ್ಥಿತಿ ಪ್ರಕಾರ ಮುಂದುವರೆಸಲು ಮತ್ತು ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆಯಂತೆ ವೇತನ ಪಾವತಿಸಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರಿಗೆ ನಿರ್ದೇಶನ ನೀಡಲಾಗಿರುತ್ತದೆ. ನಂತರ, ಪೌರಾಡಳಿತ ನಿರ್ದೇಶನಾಲಯದಿಂದ ದಿನಾಂಕ: 25/10/2024ರ ಪತ್ರದಲ್ಲಿ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರುಗಳಿಗೆ ಹೊರಗುತ್ತಿಗೆ ನೌಕರರ ವೇತನವನ್ನು ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆಯಂತೆ ನಿಯಮಾನುಸಾರ ವೇತನ ಪಾವತಿಸಲು ಕ್ರಮವಹಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ. ಮಹಾನಗರ ಪಾಲಿಕೆಗಳಲ್ಲಿ ಹೊರಗುತ್ತಿಗೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳನ್ನು ಖಾಯಂ ನೌಕರರನ್ನಾಗಿ ಪರಿಗಣಿಸಲು ಪ್ರಸ್ತುತ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.
ಈ)	ಈ ನೌಕರರನ್ನು ಹೊರಗುತ್ತಿಗೆಯಿಂದ ಬಿಡುಗಡೆ ಮಾಡಿ ಖಾಯಂಗೊಳಿಸಿ ನೇರ ಪಾವತಿಯಡಿ ಸರ್ಕಾರ ಪರಿಗಣಿಸುವುದೇ?	

ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದು, ಮೂಲಭೂತ ಸೌಲಭ್ಯಗಳಲ್ಲಿ ಬಹಳ ಪ್ರಮುಖವಾಗಿರುವುದು ನೀರು. In particular, ಶಿವಮೊಗ್ಗ ಮಹಾನಗರ ಪಾಲಿಕೆಯಲ್ಲಿ ಎಷ್ಟು ಜನ ನೀರು ಸರಬರಾಜು ಮಾಡುತ್ತಿದ್ದಾರೆ ಎನ್ನುವಂಥದ್ದಾಗಿದೆ. ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಅವರಿಗೆ ಕಾರ್ಪೊರೇಷನ್ ವತಿಯಿಂದ ಸಂಬಳ ನೀಡಲಾಗುತ್ತದೆ. ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವುದರಿಂದ ಅವರಿಗೆ ಸೇವಾ ಭದ್ರತೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಗುತ್ತಿಲ್ಲ. ಅದಲ್ಲದೇ ಏಜೆನ್ಸಿ ಮೂಲಕ ಸಂಬಳ ಒದಗಿಸುವುದರಿಂದ ಅವರಿಗೆ ಸಿಗುವಂಥ ಸೇವಾ ಶುಲ್ಕವು (ಸರ್ವಿಸ್ ಚಾರ್ಜ್) ಕಡಿತಗೊಳ್ಳುತ್ತದೆ. ಈ ರೀತಿಯಾಗಿ ಅವರಿಗೆ ಸರಿಯಾಗಿ ಸಂಬಳ ಸಿಗದೇ ಇರುವ ಕಾರಣಕ್ಕಾಗಿ ಮತ್ತು ಸೇವಾ ಭದ್ರತೆ ಇಲ್ಲದ ಕಾರಣಕ್ಕಾಗಿ ಸುಮಾರು 20 ವರ್ಷಗಳಿಂದ ಸೇವೆ ಸಲ್ಲಿಸಿರುವವರು ಅಲ್ಲಿಂದ ಕೆಲಸ ಬಿಟ್ಟು ಹೋಗುವುದನ್ನು ನೋಡುತ್ತಿದ್ದೇವೆ. ಹಾಗೆಯೇ ಮುಷ್ಕರ ಸಹ ನಡೆಸಿದ್ದು, ಮುಷ್ಕರ ನಡೆಸುವಂಥ ಸಂದರ್ಭದಲ್ಲಿ ಜನರಿಗೆ ತೊಂದರೆಯಾಗದ ರೀತಿ 3 ಪಾಳಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಬೆಳಗ್ಗೆ ನೀರು ಸರಬರಾಜು ಮಧ್ಯಾಹ್ನದ ಮೇಲೆ ಮುಷ್ಕರಕ್ಕೆ ಕೂರುತ್ತಾರೆ ಮತ್ತು ರಾತ್ರಿ ವೇಳೆ ನೀರು ಸರಬರಾಜು ಮಾಡಿ, ಮುಷ್ಕರಕ್ಕೆ ಬಂದು ಕೂರುತ್ತಾರೆ ಹೊರತು ನೀರು ಸರಬರಾಜು ಮಾಡದೇ ಯಾವತ್ತು ಜನರಿಗೆ ತೊಂದರೆ ಮಾಡಿಲ್ಲ. ಕೋವಿಡ್-19 ನಿಂದಾಗಿ ನಾವೆಲ್ಲರೂ ಮನೆಯಲ್ಲಿದ್ದೆವು. ಆದರೆ, ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುವಂಥ ನೀರು ಸರಬರಾಜು ನೌಕರರೇನಿದ್ದಾರೆ, ಅವರು ಕೋವಿಡ್-19 ಸಂದರ್ಭದಲ್ಲಿ ಕೆಲಸ ಮಾಡಿ ನಮ್ಮಗೆಲ್ಲಾ ನೀರು ಒದಗಿಸಿದ್ದಾರೆ. ಅವರಲ್ಲಿ ಶ್ರೀ ಲಂಗರಾಜು, ಶ್ರೀ ಗಂಗಯ್ಯ ಮತ್ತು ಶ್ರೀ ಮಂಜುನಾಥ್ ಎಂಬ 3 ಜನ ನೌಕರರಿಗೆ ಪಾಸಿಟಿವ್ ಬಂದು ಮರಣ ಹೊಂದುತ್ತಾರೆ. ಅವರಿಗೆ ಒಂದು ರೂಪಾಯಿಯನ್ನು ಸಹಕಾರ ಕೊಡಲು ಆಗಲಿಲ್ಲ. ಈ ಹಿಂದೆ 125 ಜನ ನೀರು ಸರಬರಾಜು ನೌಕರರು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಈಗ '116 ಜನರಿದ್ದಾರೆ' ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ನನಗೆ ತಿಳಿದಿರುವ ಹಾಗೆ, ಇಡೀ ರಾಜ್ಯದಲ್ಲಿ ಸುಮಾರು 1,500 ಕ್ಕಿಂತಲೂ ಹೆಚ್ಚು ಮಂದಿ ಹೊರಗುತ್ತಿಗೆ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

(ಮುಂದು)

(188) 11.03.2025/11.20/ಎಸ್‌ಕೆ-ಆರ್‌ಎನ್ **(ಸಭಾಪತಿಯವರ ಉಪಸ್ಥಿತಿ)**

ಶ್ರೀ ಡಿ.ಎಸ್. ಅರುಣ್ (ಮುಂದು):-

ಅವರಿಗೆ ಸೇವಾ ಭದ್ರತೆ ಇಲ್ಲ, ನೇರವಾಗಿ ಹಣ ಪಾವತಿ ಮಾಡುವುದಿಲ್ಲ. ಈ ರೀತಿ ಮೂಲಭೂತ ಸೌಲಭ್ಯವನ್ನು ಕೊಡುವಂತಹ ನೌಕರರನ್ನು ಪರಿಗಣಿಸಬೇಕು ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೇಳುತ್ತದೆ. ಸರ್ಕಾರದವರು ಅವರನ್ನು ಖಾಯಂ ನೇಮಕಾತಿ ಮಾಡಬೇಕು. ಅವರಿಗೆ ಏನೆಲ್ಲಾ ಮೂಲಭೂತ ಸೌಲಭ್ಯಗಳನ್ನು ಕೊಡಬೇಕೋ, ಅದನ್ನೆಲ್ಲಾ ಸರ್ಕಾರ ಕೊಡಬೇಕು. ಇದರ ಬಗ್ಗೆ ಏನು ಸಮಸ್ಯೆ ಇದೆ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಬಿ.ಎಸ್. ಸುರೇಶ್ (ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು):- ಮಾನ್ಯ ಸಭಾಪತಿಯವರೇ, ಎಷ್ಟು ಜನರು ನೀರು ಸರಬರಾಜು ನೌಕರರಾಗಿ ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಶಿವಮೊಗ್ಗ ಮಹಾನಗರ ಪಾಲಿಕೆಯ ಅಧೀನದಲ್ಲಿರುವ ಜಲಮಂಡಳಿಯಲ್ಲಿ ಒಟ್ಟು 116 ಜನ ನೀರು ಸರಬರಾಜು ನೌಕರರು ಹೊರಗುತ್ತಿಗೆ ಆಧಾರದ ಮೇಲೆ ಸುಮಾರು 15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಇಡೀ ರಾಜ್ಯದಲ್ಲಿ ಮಹಾನಗರ ಪಾಲಿಕೆಯಲ್ಲಿ ಸುಮಾರು 1,500 ಜನ ಹಾಗೂ ನಗರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭೆ ಮತ್ತು ಪುರಸಭೆಗಳಲ್ಲಿ ಸುಮಾರು 11,000 ಜನರು ಒಟ್ಟು 13,000 ಜನರು ನೀರು ಸರಬರಾಜು ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಪೌರ ಕಾರ್ಮಿಕರಿಗೆ ಖಾಯಂ ಮಾಡುವುದಕ್ಕೆ ಮತ್ತು ನೇರವಾಗಿ ಹಣವನ್ನು ಪಾವತಿ ಮಾಡುವುದಕ್ಕೆ ಅವಕಾಶವಿದೆ. ನೀರು ಸರಬರಾಜು ಮಾಡುವವರನ್ನು ಖಾಯಂ ಮಾಡುವುದಕ್ಕಾಗಲೀ ಮತ್ತು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವವರಿಗೆ ಈಗ ನೇರವಾಗಿ ಹಣವನ್ನು ಪಾವತಿ ಮಾಡುವಂತಹ ಅವಕಾಶ ನಮ್ಮ ಕಾನೂನಿನಲ್ಲಿಲ್ಲ. ಆ ರೀತಿ ಮಾಡಬೇಕೆಂದರೆ, ಸರ್ಕಾರಕ್ಕೆ ಹೆಚ್ಚು ಹೊರೆಯಾಗುತ್ತದೆ. ಪೌರ ಕಾರ್ಮಿಕರ ಆದ್ಯತೆಯ ಪ್ರಕಾರವಾಗಿ ಸಾವಿರಾರು ಜನ ಪೌರಕಾರ್ಮಿಕರು ಮತ್ತು ಅದರ ಜೊತೆಗೆ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿರುವ ಸುಮಾರು 35,000 ಪೌರ ಕಾರ್ಮಿಕರನ್ನು ಸರ್ಕಾರಿ ನೌಕರರು ಎಂದು ಈಗಾಗಲೇ ಪರಿಗಣಿಸಿದ್ದೇವೆ. ಎಲ್ಲಾ ಮಹಾನಗರಪಾಲಿಕೆಗಳಲ್ಲಿರುವಂತಹ ನೀರು ಸರಬರಾಜು ನೌಕರರಿಗೆ ಕನಿಷ್ಟ ವೇತನ ಕಾರ್ಮಿಕ ಇಲಾಖೆ ನಿಗಧಿ ಮಾಡಿದೆಯೋ, ಅದರ ಪ್ರಕಾರ ವರ್ಷ ವರ್ಷ ನಾವು ಜಾಸ್ತಿ ಮಾಡುವಂತಹದ್ದು. ಇದೆ. ನನ್ನ ಪ್ರಕಾರ ಸುಮಾರು 18,000/- ರಿಂದ 20,000/- ಸಂಬಳ ಅವರಿಗೆ ಸಿಗುತ್ತದೆ. ಸರ್ಕಾರದಿಂದ ಒಂದಿಷ್ಟು percentage ಹಣವನ್ನು ಪೌರ ಕಾರ್ಮಿಕರಿಗೆ ಮಾತ್ರ ಕೊಡುತ್ತೇವೆ. ನೀರು ಸರಬರಾಜು ನೌಕರರಿಗೆ ಸರ್ಕಾರದಿಂದ ಯಾವುದೇ ಅನುದಾನ ಕೊಡುವುದಿಲ್ಲ. ಹಾಗಾಗಿ, ಇದರಲ್ಲಿ ತಾಂತ್ರಿಕ ಸಮಸ್ಯೆ ಇದೆ. ಹೊರ ಗುತ್ತಿಗೆ ಆಧಾರದ ಮೇಲೆ ಸುಮಾರು 13,000 ಜನರಿಗೆ ಕೆಲಸ ಕೊಟ್ಟಿದ್ದೇವೆ.

ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವರಿಗೆ ನೇರ ಪಾವತಿ ಮಾಡುವ ಬಗ್ಗೆ ಮಾನ್ಯ ಸಚಿವರು ಏನಾದರೂ ಪ್ರಯತ್ನ ಮಾಡಿದರೆ, ಅದು ಆಗುತ್ತದೆ. ಕನಿಷ್ಟ ವೇತನದ ಬಗ್ಗೆ ಹೇಳಿದಿರಿ. ಕಾರ್ಮಿಕ ಇಲಾಖೆಯಿಂದ ಕೊಡುವಂತಹ ಕನಿಷ್ಟ ವೇತನ ಮತ್ತು ನೇರ ಪಾವತಿಗೂ ಹಣ ಕೊಡುವಂತಹ ವ್ಯತ್ಯಾಸವಿಲ್ಲ ಅಂದು ಕೊಂಡಿದ್ದೇನೆ. ನಾನು ಹೇಳುವುದೇನೆಂದರೆ, ಹೊರ ಗುತ್ತಿಗೆ ಎಂದು ಹೇಳಿದ ಮೇಲೆ ಸೇವಾ ಶುಲ್ಕವನ್ನು ಮಧ್ಯೆ ಇರುವಂತಹವರಿಗೆ ಕೊಡುವ ಬದಲು ನೇರವಾಗಿ ಅವರಿಗೆ ಹಣ ಕೊಡುವುದು ಸೂಕ್ತ. ಅವರಿಗೆ ಸಿಗಬೇಕಾಗಿರುವಂತಹ ಹಣ ಸಿಗುತ್ತದೆ. ಹಾಗಾಗಿ ನೇರ ಪಾವತಿಗಾದರೂ ಸರ್ಕಾರ ಮನಸ್ಸು ಮಾಡಬೇಕು. ಅವರನ್ನು ಖಾಯಂ ಮಾಡುವುದಕ್ಕಾಗುವುದಿಲ್ಲ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ ವೇತನವನ್ನು ನೇರ ಪಾವತಿ ಮಾಡುವುದಕ್ಕೆ ಏನು ಸಮಸ್ಯೆಯಿದೆ? ಸರ್ಕಾರ ಅದಕ್ಕೊಂದು ನಿರ್ಣಯ ತೆಗೆದುಕೊಂಡರೆ, ಯಾರು ಮೂಲಭೂತ ಸೇವೆಯನ್ನು ಮಾಡುತ್ತಿದ್ದಾರೋ, ಅಂತಹವರಿಗೆ ನೇರವಾಗಿ ಪಾವತಿ ಮಾಡಿದರೆ, ಆಗ ಈ ಮಧ್ಯೆ ಇರುವಂತಹ ಗುತ್ತಿಗೆದಾರರು ಏನಿದ್ದಾರೆ, ಅವರಿಗೆ ಸೇವಾ ಶುಲ್ಕ ಇಲ್ಲದಂತೆ ಮಹಾನಗರ ಪಾಲಿಕೆಯಲ್ಲಿ ಹಗಲಿರುಳು ನೀರು ಸರಬರಾಜು ಮಾಡುವಂತಹ ನೇರವಾಗಿ ನೌಕರರಿಗೆ ಸಿಗುತ್ತದೆ. ನೇರವಾಗಿ ಹಣ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಾವತಿ ಮಾಡುವಂತಹದ್ದಕ್ಕೆ ಸರ್ಕಾರ ಈಗಲಾದರೂ ಗಮನಹರಿಸಿದರೆ, ಖಂಡಿತವಾಗಿಯೂ ಅವರಿಗೆ ನ್ಯಾಯವನ್ನು ಒದಗಿಸುವಂತಹದ್ದಾಗುತ್ತದೆ.

ಶ್ರೀ ಬಿ.ಎಸ್. ಸುರೇಶ್ (ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವ ಬಗ್ಗೆ ನಾನು ಪ್ರಯತ್ನವನ್ನು ಪಡುತ್ತೇನೆ. ಅದರಲ್ಲಿ ತಾಂತ್ರಿಕ ಸಮಸ್ಯೆ ಇದೆ.. ರಾಜ್ಯ ಸರ್ಕಾರದಿಂದ ಸ್ಥಳೀಯ ಸಂಸ್ಥೆಗಳಿಗೆ ಒಂದಿಷ್ಟು ಶೇಕಡವಾರು ಹಣ ಕೊಟ್ಟಾಗ ಮಾತ್ರ ಅವರಿಗೆ ನೇರವಾಗಿ ಹಣ ಕೊಡುವುದಕ್ಕೆ ಸಾಧ್ಯ. ಮಾನ್ಯ ಸದಸ್ಯರು ಹೇಳಿರುವುದರಿಂದ ಕಾರ್ಮಿಕ ಇಲಾಖೆಯವರ ಜೊತೆ ಸಮಾಲೋಚನೆ ಮಾಡಿ, ಸಹಾಯ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	ಶ್ರೀ ಎಸ್. ವಿ.. ಸಂಕನೂರ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	63(569)
ಉತ್ತರಿಸಬೇಕಾದ ದಿನಾಂಕ	11.03.2025
ಉತ್ತರಿಸಬೇಕಾದವರು	ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಗದಗ ಬೆಟಗೇರಿ ನಗರಕ್ಕೆ ಒಳಚರಂಡಿ ಯೋಜನೆಯ ಮೊದಲನೇ ಹಂತದ ಯೋಜನೆ ಯಾವಾಗ ಪ್ರಾರಂಭವಾಯಿತು; ಮುಕ್ತಾಯಕ್ಕೆ ನಿಗದಿಪಡಿಸಿದ ಅವಧಿ ಎಷ್ಟು; ಮಂಜೂರಾದ ಅನುದಾನ ಎಷ್ಟು; (ವಿವರವಾದ ಮಾಹಿತಿ ನೀಡುವುದು)	ಗದಗ ಬೆಟಗೇರಿ ನಗರಕ್ಕೆ ಮೊದಲನೇ ಹಂತದ ಒಳಚರಂಡಿ ಯೋಜನೆಯನ್ನು ದಿನಾಂಕ:28.11.2003 ರಂದು ಪ್ರಾರಂಭಿಸಲಾಯಿತು. ಸದರಿ ಯೋಜನೆಯ ಮುಕ್ತಾಯಕ್ಕೆ 12 ತಿಂಗಳನ್ನು ನಿಗಧಿಪಡಿಸಲಾಗಿತ್ತು. ಈ ಯೋಜನೆಗೆ ರೂ.1114.66 ಲಕ್ಷಗಳನ್ನು ಮಂಜೂರು ಮಾಡಲಾಗಿತ್ತು. ನಂತರದಲ್ಲಿ ರೂ.1494.00 ಲಕ್ಷಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಯಿತು.
ಆ)	ಮೊದಲನೇ ಹಂತದ ಕಾಮಗಾರಿ ಪೂರ್ಣಗೊಂಡು ಕಾರ್ಯಾರಂಭ ಮಾಡಿದೆಯೇ; ಹಾಗಿದ್ದಲ್ಲಿ ಮೊದಲನೇ ಹಂತದ ಯೋಜನೆಯಲ್ಲಿ ಎಷ್ಟು ಮನೆಗಳಿವೆ ಮತ್ತು ಅವುಗಳಿಗೆ ಯುಜಿಡಿ ಸಂಪರ್ಕ ಕಲ್ಪಿಸಲಾಗಿದೆಯೇ? (ವಿವರವಾದ ಮಾಹಿತಿ ನೀಡುವುದು)	ಮೊದಲನೇ ಹಂತದ ಕಾಮಗಾರಿಗಳನ್ನು ದಿನಾಂಕ:30.03.2016 ರಂದು ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿದೆ. ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಮೂಲ ಅಂದಾಜು ಪಟ್ಟಿಯಲ್ಲಿ ಹಾಗೂ ಪರಿಷ್ಕೃತ ಅಂದಾಜು ಪಟ್ಟಿಯಲ್ಲಿ ಒಳಚರಂಡಿ ಗೃಹ ಸಂಪರ್ಕ ಜೋಡಣೆಗೆ ಅವಕಾಶ ಕಲ್ಪಿಸಿರುವುದಿಲ್ಲ. ಮನೆಗಳ ತ್ಯಾಜ್ಯ ನೀರು ಕೊಳವೆಗಳ ಒಳಚರಂಡಿ ಜಾಲಕ್ಕೆ ಜೋಡಿಸುವ ಕಾಮಗಾರಿಯನ್ನು ನಗರ ಸಭೆಯಿಂದ ಸೂಕ್ತ ಸಮಯದಲ್ಲಿ ಕಲ್ಪಿಸದೆ ಇರುವುದರಿಂದ ಕೊಳವೆಗಳಲ್ಲಿ ತ್ಯಾಜ್ಯ ನೀರಿನ ಹರಿವು ಇಲ್ಲವಾಗಿ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಕಾರ್ಯವು ಸ್ಥಗಿತಗೊಂಡಿರುತ್ತದೆ. ತದನಂತರದಲ್ಲಿ ನಗರಸಭೆ ಗದಗ-ಬೆಟಗೇರಿ ವತಿಯಿಂದ ಹಂತ ಹಂತವಾಗಿ ಸುಮಾರು 13,272 ಮನೆಗಳಿಗೆ ಒಳಚರಂಡಿ ಗೃಹ ಸಂಪರ್ಕ ಕಲ್ಪಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ)	ಯು.ಜಿ.ಡಿ 2ನೇ ಹಂತದ ಕಾಮಗಾರಿ ಯಾವಾಗ ಪ್ರಾರಂಭವಾಗಿದೆ ಮತ್ತು ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ ಎಷ್ಟು ಮಂಜೂರಾದ ಹಣ ಎಷ್ಟು;	ಕೇಂದ್ರ ಪುರಸ್ಕೃತ ಅಮೃತ್ 1.0 ಯೋಜನೆಯಡಿ 2ನೇ ಹಂತದ ಒಳಚರಂಡಿ ಕಾಮಗಾರಿಯನ್ನು ದಿನಾಂಕ:17.10.2016 ರಂದು ಪ್ರಾರಂಭಿಸಲಾಗಿದ್ದು, ಸದರಿ ಕಾಮಗಾರಿಯನ್ನು 36 ತಿಂಗಳೊಳಗೆ ಪೂರ್ಣಗೊಳಿಸಲು ಕಾಲಾವಧಿಯನ್ನು ನಿಗದಿಪಡಿಸಲಾಗಿತ್ತು. ಈ ಯೋಜನೆಗೆ ರೂ.151.56 ಕೋಟಿಗಳನ್ನು ಮಂಜೂರು ಮಾಡಲಾಗಿದೆ. ನಿಗದಿಪಡಿಸಲಾದ ಕಾಲಾವಧಿಯಂತೆ ಸದರಿ ಕಾಮಗಾರಿಯನ್ನು ದಿನಾಂಕ:16.10.2019 ರಂದು ಪೂರ್ಣಗೊಳಿಸಬೇಕಾಗಿತ್ತು. ಆದರೆ ವಾಸ್ತವಿಕವಾಗಿ ಸದರಿ ಕಾಮಗಾರಿಯನ್ನು ದಿನಾಂಕ:31.07.2021 ರಂದು ಪೂರ್ಣಗೊಳಿಸಲಾಗಿದೆ.
ಈ)	ಎರಡನೇ ಹಂತದ ಅಮೃತ ಯೋಜನೆಗೆ ಬರುವ ಮನೆಗಳು ಎಷ್ಟು ಮತ್ತು ಅದರಲ್ಲಿ ಎಷ್ಟು ಮನೆಗಳಿಗೆ ಸಂಪರ್ಕ ಒದಗಿಸಲಾಗಿದೆ; (ಮಾಹಿತಿ ನೀಡುವುದು)	ಎರಡನೇ ಹಂತದ ಅಮೃತ ಯೋಜನೆಗೆ 44,447 ಮನೆಗಳು ಬರಲಿದ್ದು, ಈ ಪೈಕಿ ಒಟ್ಟು 28,160 ಮನೆಗಳಿಗೆ ಮಾತ್ರ ಗೃಹ ಸಂಪರ್ಕಗಳನ್ನು ನೀಡಲಾಗಿರುತ್ತದೆ. 13,272 ಮನೆಗಳಿಗೆ ಈಗಾಗಲೇ ನಗರಸಭೆ ವತಿಯಿಂದ ಗೃಹ ಸಂಪರ್ಕವನ್ನು ನೀಡಲಾಗಿದೆ.
ಉ)	ಮೊದಲನೇ ಹಾಗೂ ಎರಡನೇ ಹಂತದ ಯೋಜನೆಗಳು ಯಶಸ್ವಿಯಾಗಿ ಆಗಿರುವುದಿಲ್ಲ ಎಂಬ ಆರೋಪಗಳಿರುವುದು ನಿಜವೇ; ಹಾಗಿದ್ದಲ್ಲಿ, ಕಾರಣಗಳೇನು; (ವಿವರ ನೀಡುವುದು)	ಮೊದಲನೇ ಹಂತದ ಒಳಚರಂಡಿ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ದಿನಾಂಕ:30.03.2016 ರಂದು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿರುತ್ತದೆ. ಸದರಿ ಯೋಜನೆಯಲ್ಲಿ ಗೃಹ ಸಂಪರ್ಕ ಕಲ್ಪಿಸಲು ಅವಕಾಶವಿರುವುದಿಲ್ಲ. ನಗರಸಭೆಯು ನಿಗದಿತ ಶುಲ್ಕ ಭರಿಸಿಕೊಂಡು ಗೃಹ ಸಂಪರ್ಕ ಕಲ್ಪಿಸದಿದ್ದರಿಂದ ತ್ಯಾಜ್ಯ ನೀರು ಹರಿಯದೇ ಮೊದಲನೆಯ ಹಂತದ ಘಟಕಗಳು ಸ್ಥಗಿತಗೊಂಡಿದ್ದವು. ನಂತರ ನಗರಸಭೆಯ ವತಿಯಿಂದ ಹಂತ ಹಂತವಾಗಿ ಸುಮಾರು 13,272 ಮನೆಗಳಿಗೆ ಗೃಹ ಸಂಪರ್ಕಗಳನ್ನು ನೀಡಿರರುವುದರಿಂದ ಸದರಿ ಯೋಜನೆಯ ಕೊಳವೆ ಮಾರ್ಗಗಳು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುತ್ತವೆ. ಎರಡನೇ ಹಂತದ ಒಳಚರಂಡಿ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ದಿನಾಂಕ:30.07.2021 ರಂದು ಯಶಸ್ವಿಯಾಗಿ ಪೂರ್ಣಗೊಳಿಸಿ ಚಾಲನೆ ಗೊಳಿಸಲಾಗಿರುತ್ತದೆ. ಸದರಿ ಯೋಜನೆಯಡಿ 28,160 ಗೃಹ ಸಂಪರ್ಕಗಳನ್ನು ನೀಡಲಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸ್ವಂತ ನಿಧಿಯಲ್ಲಿ ಆದ್ಯತೆಗೆ ಅನುಗುಣವಾಗಿ ಹಾಗೂ ಅನುದಾನದ ಲಭ್ಯತೆಯ ಮೇರೆಗೆ ಕ್ರಿಯಾ ಯೋಜನೆಯನ್ನು ರೂಪಿಸಿ, ಸ್ಮಶಾನಗಳಿಗೆ ಮತ್ತು ವಿದ್ಯುತ್ ಚಿತಾಗಾರಗಳಿಗೆ ಕುಡಿಯುವ ನೀರು, ನೆರಳು ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗಿದೆ. • ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳು 2021-22 ರಿಂದ 2024-25 ರವರೆಗೂ ಎಸ್.ಎಫ್.ಸಿ. ಮುಕ್ತ ನಿಧಿ ಯೋಜನೆಯಡಿ ಸ್ಮಶಾನಗಳಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳನ್ನು ಅನುಬಂಧ -3 ರಲ್ಲಿ ಸಲ್ಲಿಸಿದೆ.

ಇ-ಸಂಖ್ಯೆ: ನಅಇ 66 ಜಿಇಎಲ್ 2025 (ಇ)

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ವಿ. ಸಂಕನೂರ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಗದಗ ಬೆಟಗೇರಿ ನಗರಕ್ಕೆ ಒಳಚರಂಡಿ ಯೋಜನೆಯ ಕುರಿತಾಗಿ ಪ್ರಶ್ನೆಯನ್ನು ಕೇಳಿದ್ದೆ. ಮೊದಲನೇ ಹಂತದೊಳಗೆ ಯೋಜನೆ ಕಾರ್ಯಗತವಾಗುತ್ತಿದೆ. ಮೊದಲನೇ ಹಂತದ ಯೋಜನೆಗೆ ಎಷ್ಟು ಹಣ ನಿಗದಿಪಡಿಸಿದ್ದೀರಿ? ಎರಡನೇ ಹಂತ ಯೋಜನೆಗೆ ಎಷ್ಟು ಹಣ ನಿಗದಿಪಡಿಸಿದ್ದೀರಿ? ಇದು ಯಾವಾಗ ಪ್ರಾರಂಭವಾಯಿತು? ಮತ್ತು ಯಾವಾಗ ಮುಕ್ತಾಯವಾಯಿತು? ಎಷ್ಟು ಮನೆಗಳಿಗೆ ಯು.ಜಿ.ಡಿ. ಸಂಪರ್ಕ ಕಲ್ಪಿಸಿದ್ದೀರಿ? Septic Pond Oxidation ಪಾಲನೆ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದರ ಬಗ್ಗೆ ಮಾಹಿತಿಯನ್ನು ಕೇಳಿದ್ದೆ. ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈ ಉತ್ತರ ನನಗೆ ತೃಪ್ತಿಕರವಾಗಿಲ್ಲ. ಮಾನ್ಯ ಸಚಿವರಿಗೆ ಇಲಾಖೆಯವರು ಸರಿಯಾದ ಮಾಹಿತಿಯನ್ನು ಒದಗಿಸಿಲ್ಲ ಎಂಬುದು ನನ್ನ ಭಾವನೆ. ಮೊದಲನೇ ಮತ್ತು ಎರಡನೇ ಹಂತದ ಯೋಜನೆಯೊಳಗೆ ಬಹಳಷ್ಟು ಲೋಪದೋಷಗಳಾಗಿರುವ ಬಗ್ಗೆ ಸರಿಯಾಗಿ ಉತ್ತರದಲ್ಲಿ ಕೊಟ್ಟಿಲ್ಲ. ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಒಳಚರಂಡಿ ಯೋಜನೆಯ ಮೊದಲನೇ ಹಂತದ ಯೋಜನೆಯೊಳಗೆ 75 ಕಿಲೋ ಮೀಟರ್ ಪೈಪ್‌ಲೈನ್ ಹಾಕಬೇಕು ಎನ್ನುವುದಿತ್ತು. Manhole ೩೦೦೦ ಮಾಡಬೇಕು ಎನ್ನುವುದಿತ್ತು. STP Oxidation Pond and wet-well ಮಾಡಬೇಕು ಎನ್ನುವುದಿತ್ತು. ಇವೆಲ್ಲವನ್ನು ಮಾಡಿದ್ದಾರೆ. ಆ ಇಲ್ಲಿ ಮೂಲಭೂತವಾಗಿ ಏನಾಗಿದೆ ಎಂದರೆ ಪೈಪ್‌ಲೈನ್‌ಅನ್ನು main pipeline ಹಾಕಬೇಕಾಗಿದೆ. ಅದನ್ನು ಎಲ್ಲಾ ಕಡೆಗಳಲ್ಲಿ ಹಾಕಿಲ್ಲ. ಈಗ main road ನಲ್ಲಿ ಪೈಪ್‌ಲೈನ್ ಹಾಕಿದರು. Main road ನಿಂದ ಜನ ವಸತಿ ಮನೆಗಳಿವೆ. Sub-road ನಲ್ಲಿ ಪೈಪ್‌ಲೈನ್ ಹಾಕಿಲ್ಲ. ಅದರ ಬಗ್ಗೆಯೂ ಉತ್ತರದಲ್ಲಿ ಮಾಹಿತಿಯನ್ನು ಒದಗಿಸಿಲ್ಲ. ಉದಾಹರಣೆಗೆ ಹೇಳುವುದಾದರೆ, ವಾರ್ಡ್ ನಂಬರ್ 25, 7, 24, 13 ಮತ್ತು 5 ಇವೆಲ್ಲವುಗಳಲ್ಲಿಯೂ ಕೂಡ main road ನಿಂದ drainage pipe ಅನ್ನು ಒಳಗಡೆ ಹಾಕಲಿಲ್ಲ. ಇದೊಂದು ಮಾಹಿತಿ. ಮೊದಲನೇ plan ಒಳಗೆ ಮನೆಗೆ ಸಂಪರ್ಕ ಕೊಡುವುದು ಇರಲಿಲ್ಲ. ಮನೆಯಿಂದಲೇ ನಗರಸಭೆಗೆ ಹಣವನ್ನು ತುಂಬಿ ಸಂಪರ್ಕ ತೆಗೆದುಕೊಳ್ಳಬೇಕೆಂಬುದು ಇತ್ತು. ನನ್ನ ಪ್ರಶ್ನೆ ಏನೆಂದರೆ, ಆ ಮನೆಯ ಮುಂದೆ ಒಂದು house service connection ಗೆ ಒಂದು chamber ಮಾಡುತ್ತಾರೆ. ಆ chamber ಮಾಡಿಲ್ಲ. ಅವರು ಒಳಚರಂಡಿ ಗೃಹ ಸಂಪರ್ಕವನ್ನು ಹೇಗೆ ತೆಗೆದುಕೊಳ್ಳಬೇಕು? ಗದಗ ಜಿಲ್ಲೆಯ old city ನಲ್ಲಿ ಮೊದಲು ಯೋಜನೆಯನ್ನು ಪ್ರಾರಂಭ ಮಾಡಿದ್ದು. ನಾನು ವಕೀಲ ಚೌಳನಲ್ಲಿ ಇದ್ದೇನೆ. ವಕೀಲ ಚೌಳ, ಶಹಪೂರ್ ಪೇಟೆ, ವಕ್ಕಲಗೇರಿ ಮತ್ತು ಹಳೆ ಬಸ್ ಸ್ಟ್ಯಾಂಡ್ ಪಕ್ಕದಲ್ಲಿ ಗೃಹ ಸಂಪರ್ಕನೇ ಇಲ್ಲ. ಇದರ ಬಗ್ಗೆ ಮಾಹಿತಿಯನ್ನು ಉತ್ತರದಲ್ಲಿ ಕೊಟ್ಟಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಮಾನ್ಯ ಎಸ್.ಫ್ಹಿ. ಸಂಕನೂರರವರೇ, ಮಾನ್ಯ ಸಚಿವರು ಏನು ಮಾಡಬೇಕೆಂಬ ಬಗ್ಗೆ ಹೇಳಿ.

ಶ್ರೀ ಎಸ್.ಫ್ಹಿ. ಸಂಕನೂರ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅದೇನೆಂದರೆ, ಮೊದಲನೇ ಹಂತದ ಯೋಜನೆ ಮತ್ತು ಎರಡನೆ ಹಂತದ ಯೋಜನೆ ಯಶಸ್ವಿಯಾಗಿ ಕಾರ್ಯ ಮಾಡುತ್ತಿದೆಯಾ ಎಂದು ಕೇಳಿದ್ದೆ. ಯೋಜನೆಯನ್ನು ಯಶಸ್ವಿಯಾಗಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಯೋಜನೆಯನ್ನು ಯಶಸ್ವಿಯಾಗಿ ಮಾಡಿಲ್ಲ. ಮೊದಲನೇ ಹಂತದ ಯೋಜನೆಯೊಳಗೆ oxidation pond ಸ್ಥಗಿತವಾಗಿದೆ ಎಂದು ಉತ್ತರ ಕೊಡುತ್ತೀರಿ. ಹಾಗಾದರೆ, ಯಶಸ್ವಿ ಎಲ್ಲಿ ಆಯಿತು? ಇದಕ್ಕೆ ಉತ್ತರವನ್ನು ಕೊಟ್ಟಿದ್ದೀರಿ. ಮೊದಲನೇ Septic tank oxidation pond ಸ್ಥಗಿತಗೊಂಡಿದೆ. ಅದು ಎಷ್ಟು ವರ್ಷವಾಯಿತು ಎಂದರೆ, 22 ವರ್ಷವಾಗಿದೆ. ಗದಗ ಬೆಟಗೇರಿ ನಗರಕ್ಕೆ ಮೊದಲನೇ ಹಂತದ ಒಳಚರಂಡಿ ಯೋಜನೆ ಪ್ರಾರಂಭ ಮಾಡುವುದಕ್ಕೆ 22 ವರ್ಷವಾದರೂ ಅದು ಇನ್ನೂ ಯಶಸ್ವಿಯಾಗಿಲ್ಲ. ಇದು ಸಂಪೂರ್ಣವಾಗಿ failure ಆಗಿದೆ. ನಾನು ಇನ್ನೊಂದು ಪ್ರಶ್ನೆಯನ್ನು ಕೇಳಿದೆ. 2ನೇ ಹಂತದ ಯೋಜನೆ ಯಶಸ್ವಿಯಾಗಿದೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ಸಭಾಪತಿಯವರು:– ಮಾನ್ಯ ಸಂಕನೂರರವರೇ, ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಸುರೇಶ್ (ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು):– ಮಾನ್ಯ ಸಭಾಪತಿಯವರೇ, ಗದಗ ಬೆಟಗೇರಿ ನಗರಕ್ಕೆ ಮೊದಲನೇ ಹಂತದ ಒಳಚರಂಡಿ ಯೋಜನೆಯನ್ನು ದಿನಾಂಕ 28.11.2003 ರಂದು ಪ್ರಾರಂಭಿಸಲಾಯಿತು. ಅದಕ್ಕೆ ಒಂದು ವರ್ಷ ಮಾತ್ರ ಸಮಯ ಕೊಟ್ಟಿದ್ದರು. ಕಾರಣಾಂತರಗಳಿಂದ, ಅಲ್ಲಿರುವ ಒಬ್ಬನು ಟೆಂಡರ್ ತೆಗೆದುಕೊಂಡಿದ್ದ. ಬಹುಶಃ ಓಡಿ ಹೋದ. ಆದಾದ ಮೇಲೆ ಹೊಸ ಟೆಂಡರ್ ಪ್ರಕ್ರಿಯೆ....

ಸಭಾಪತಿಯವರು:– ಮಾನ್ಯ ಸಚಿವರೇ, ಅವನು ಓಡಿ ಹೋಗಿರುವವನ ಮೇಲೆ ಏನು ಕ್ರಮ ತೆಗೆದುಕೊಂಡಿರಿ?

ಶ್ರೀ ಬಿ.ಎಸ್. ಸುರೇಶ್:– ಮಾನ್ಯ ಸಭಾಪತಿಯವರೇ, ಅವನು ಈಗ ಓಡಿ ಹೋಗಿಲ್ಲ.

ಸಭಾಪತಿಯವರು:– ಅವನು ಓಡಿ ಹೋದನೆಂದರೆ, ಅವನ ಮೇಲೆ ಕ್ರಮ ಆಗಬೇಕಲ್ಲವೇ?

ಶ್ರೀ ಬಿ.ಎಸ್. ಸುರೇಶ್:– ಮಾನ್ಯ ಸಭಾಪತಿಯವರೇ, ಅವನನ್ನು ಕಪ್ಪುಪಟ್ಟಿಗೆ ಸೇರಿಸಿ, ಹೊಸ ಟೆಂಡರ್ ಕರೆದಿದ್ದೇವೆ. 2003ರಲ್ಲಿ ಮೊದಲನೇ ಹಂತದ ಒಳಚರಂಡಿ ಯೋಜನೆಗೆ ಸುಮಾರು 11 ಕೋಟಿ ರೂಪಾಯಿಗಳಿಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಸ ಟೆಂಡರ್ ಕರೆದಿದ್ದೇವೆ. ಆ ಯೋಜನೆಗೆ 11 ಕೋಟಿ ರೂಪಾಯಿ ಇದ್ದಿದ್ದನ್ನು ಮತ್ತೆ 15 ಕೋಟಿ ರೂಪಾಯಿಗಳಿಗೆ ಪರಿಷ್ಕೃತ ಅಂದಾಜು ಪಟ್ಟಿ ಮಾಡಿ. ಮೊದಲನೇ ಹಂತದ ಯೋಜನೆಯಲ್ಲಿ ನಾವು connection line ಹಾಕಿದ್ದೇವೆ. ಮಾನ್ಯ ಸದಸ್ಯರು ಹೇಳಿರುವಂತೆ, ಮೊದಲನೇ ಹಂತದ ಯೋಜನೆ ಏನಾಯಿತು ಎಂದರೆ ಒಳಚರಂಡಿ ಗೃಹ ಸಂಪರ್ಕ ಇರಲಿಲ್ಲ. ಬರೀ ಮೈನ್ ಲೈನ್ ಹಾಕಿದ್ದರ ಜೊತೆಯಲ್ಲಿ ಮಾನ್ಯ ಸದಸ್ಯರು ಹೇಳಿರುವ ಪ್ರಕಾರ ಮನೆಗಳಿಗೆ ಸಂಪರ್ಕ ಕೊಟ್ಟಿರಲಿಲ್ಲ. ಆದ್ದರಿಂದ ಮೈನ್ ಲೈನ್‌ಗೆ ತ್ಯಾಜ್ಯ ನೀರು ಬರದಾಗೇ ಹೋಯಿತು. ಯಾವುದೇ ನೀರು ಬರದೇ ಇದ್ದುದರಿಂದ, ಆ ಪೈಪ್‌ಗಳಲ್ಲಿ ಸಂಸ್ಕರಣಾ ಘಟಕಕ್ಕೆ ನೀರು ಹೋಗಲಿಲ್ಲ. ಸಂಸ್ಕರಣಾ ಘಟಕ ನಿಂತು ಹೋಯಿತು. ರೂಲ್ಸ್ ಏನಿರುತ್ತದೆ ಎಂದರೆ, ಮೈನ್ ಲೈನ್ ನಾವು ಹಾಕುವುದು. ಆದರೆ local body ಯಿಂದ ಮಾಡಿ, ಅದನ್ನು ಮನೆಗಳಿಗೆ ಸಂಪರ್ಕ ಕೊಡಬೇಕೆಂದು ರೂಲ್ಸ್ ಮಾಡಿಯೇ ಈ ಲೈನ್ ಹಾಕಿದ್ದೇವೆ. ಆದಾದ ನಂತರ ನಗರಸಭೆ ಗದಗ್-ಬೇಟಗೇರಿ ವತಿಯಿಂದ ಹಂತ ಹಂತವಾಗಿ ಸುಮಾರು 13,000 ಮನೆಗಳಿಗೆ ಒಳಚರಂಡಿ ಗೃಹ ಸಂಪರ್ಕ ಕಲ್ಪಿಸುತ್ತಾರೆ.

(ಮುಂದು)

(189) 11.03.2025/11.30/ಬಿಸಿಹೆಚ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಬಿ.ಎಸ್.ಸುರೇಶ (ಮುಂದು)

ಗೃಹ ಸಂಪರ್ಕ ಕೊಟ್ಟ ನಂತರ ಅಲ್ಲಿ ನೀರು ಹರಿಯುವುದಕ್ಕೆ ಪ್ರಾರಂಭವಾಗುತ್ತದೆ. ಮತ್ತೆ STP (Sewage Treatment Plant) ಕೆಲಸ ಮಾಡುವುದು ಪ್ರಾರಂಭವಾಗುತ್ತದೆ. ಅದಾದನಂತರ U.G.D ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರು ಹೇಳಿರುವ ಪ್ರಕಾರ ಎರಡನೇ ಹಂತದಲ್ಲಿ ನಾವು ಕೆಲಸ ಮಾಡುತ್ತೇವೆ. ಕೇಂದ್ರ ಪುರಸ್ಕೃತ ಅಮೃತ-2ನೇ ಯೋಜನೆ ಅಡಿಯಲ್ಲಿ 36 ತಿಂಗಳು ಅದಕ್ಕೆ ಸಮಯ ನಿಗದಿಪಡಿಸಲಾಗಿದೆ. ಸುಮಾರು ರೂ.151 ಕೋಟಿಗಳ ವೆಚ್ಚದಲ್ಲಿ ಮತ್ತೆ U.G.D ಕೆಲಸವನ್ನು ಪ್ರಾರಂಭ ಮಾಡುತ್ತೇವೆ. 2019ರಲ್ಲಿ ಅದು finish ಆಗಬೇಕಾಗಿತ್ತು, ಆದರೆ ಅದು 2021ರಲ್ಲಿ ಎರಡು ವರ್ಷಗಳ ಕಾಲ ತಡವಾಗಿ household connections ಆಗುತ್ತದೆ. ಮತ್ತೆ ಗದಗ-ಬೆಟಗೇರಿ ನಗರದಲ್ಲಿ ಒಟ್ಟು ಎಷ್ಟು ಮನೆಗಳಿಗೆ household connections ಒದಗಿಸಲಾಗಿದೆ ಎಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಸುಮಾರು 44,447 household connections ಒದಗಿಸಲಾಗಿದೆ. ಎರಡನೇ ಹಂತದಲ್ಲಿ ಸುಮಾರು 28,160 ಮನೆಗಳಿಗೆ ರೂ.151 ಕೋಟಿಗಳ ವೆಚ್ಚದಲ್ಲಿ ಅದಕ್ಕೆ ಗೃಹ ಸಂಪರ್ಕವನ್ನು ಕೊಡುತ್ತೇವೆ. ಅದಕ್ಕಿಂತ ಮುಂಚೆ ಆ Local Body ನಗರ ಸಭೆಯಿಂದ ಸುಮಾರು 12,272 ಮನೆಗಳಿಗೆ ಈಗಾಗಲೇ connection ಕೊಡಲಾಗಿದೆ. ಒಟ್ಟಾರೆಯಾಗಿ ಸುಮಾರು 44,447 ಮನೆಗಳಿಗೆ ನಾವು connection ಕೊಡುತ್ತೇವೆ. ಮಾನ್ಯ ಸದಸ್ಯರು ಕೊನೆಯ ಪ್ರಶ್ನೆ ಏನೆಂದರೆ, ಈ ಯೋಜನೆ success ಆಗಿರುವುದು ನಿಜವೇ ಎಂದು ಪ್ರಶ್ನೆ ಕೇಳಿದ್ದಾರೆ. ಆದರೆ ನನಗೆ ಇರುವ ಮಾಹಿತಿ ಪ್ರಕಾರ U.G.D ಯಲ್ಲಿ ಅತ್ಯಂತ ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದೇವೆ. ನಗರ ಸಭೆಯಲ್ಲಿ ನಿಗದಿತ ಶುಲ್ಕ ಭರಿಸಿಕೊಂಡು ಮೊದಲು ಗೃಹ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಪರ್ಕ ಮಾಡದೇ ಇರುವುದರಿಂದ ನಿಂತುಹೋಯಿತು. ಅದಾದನಂತರ ರೂ.251 + 14 ಕೋಟಿ ಎಲ್ಲಾ ಸೇರಿ ಈಗ ಅಲ್ಲಿ ಎಲ್ಲಾ ಸರಿಯಾಗಿ ಕೆಲಸ ಮಾಡುತ್ತಿದ್ದೇವೆ. ಮೊದಲನೇ ಹಂತದಲ್ಲಿ 13,000 ಮನೆಗಳು ಹಾಗೂ ಅದಾದನಂತರ 28,000 ಮನೆಗಳಿಗೆ ಕೆಲಸ ನಡೆಯುತ್ತಿದೆ. ಪ್ರಸ್ತುತ ಎರಡೂ ಯೋಜನೆಗಳಿಂದ 13.80 ದಶಲಕ್ಷ ಲೀಟರ್ ನೀರಿನ ಸಾಮರ್ಥ್ಯವುಳ್ಳ S.T.P ಯನ್ನು ಮಾಡುತ್ತಿದ್ದೇವೆ. ಸುಮಾರು 8 ದಶಲಕ್ಷ ಲೀಟರ್ ತ್ಯಾಜ್ಯ ನೀರನ್ನು ಸಂಸ್ಕರಣೆ ಮಾಡುತ್ತಿದ್ದೇವೆ. ಅದಾದನಂತರ ಕೆಲವು household connection ಬಿಟ್ಟಿದ್ದೆವು. ಮತ್ತೆ ನಾವು ಅದಕ್ಕೆ ರೂ. 30 ಕೋಟಿಯನ್ನು ಕೊಟ್ಟಿದ್ದೇವೆ. ಯಾವ್ಯಾವು missing lines ಇದೆಯೋ ಆ ಲೈನ್ಸ್ ಎಲ್ಲಾ ಸರಿಪಡಿಸಿ ಮತ್ತೆ ಇನ್ನೊಂದು ಹಾಲಿ ಚಾಲ್ತಿಯಲ್ಲಿರುವ ತ್ಯಾಜ ನೀರು ಸಂಸ್ಕರಣ ಘಟಕವನ್ನು upgradation ಮಾಡುತ್ತಿದ್ದೇವೆ. ಮತ್ತೆ 5 ಕಿಲೋ ಮೀಟರ್ ಒಳಚರಂಡಿ ಜಾಲವನ್ನು ಸಂಪೂರ್ಣ ಮಾಡಿ ಅಲ್ಲಿ ಏನು ಕೆಲಸ balance ಇದೆಯೋ ಅದನ್ನು ರೂ. 30 ಕೋಟಿಯಲ್ಲಿ ಸಂಪೂರ್ಣವಾಗಿ ಕೆಲಸ ಮಾಡಿ ಗದಗ-ಬೆಟಗೇರಿ S.T.P plant ಸರಿಯಾಗಿ ನಡೆಯುವ ರೀತಿ ಮಾಡುತ್ತೇವೆ.

ಸಭಾಪತಿಯವರು:- ಶ್ರೀ ಮಧು.ಜಿ ಮಾದೇಗೌಡ ರವರೇ, ತಾವು ತಮ್ಮ ಪ್ರಶ್ನೆ ಕೇಳಿ.

ಶ್ರೀ ಎಸ್.ವ್ಹಿ.ಸಂಕನೂರ:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ.

ಸಭಾಪತಿಯವರು:- ಶ್ರೀ ಎಸ್.ವ್ಹಿ.ಸಂಕನೂರ ರವರೇ, ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ? ಮಾನ್ಯ ಸಚಿವರು ಇದರ ಬಗ್ಗೆ ಮೀಟಿಂಗ್ ಮಾಡುತ್ತೇವೆಂದು ಹೇಳಿದ್ದಾರಲ್ಲ.

ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಂದನೇ ಹಂತ ಮತ್ತು ಎರಡನೇ ಹಂತ ಯಶಸ್ವಿಯಾಗಿದೆಯೆಂದು ಹೇಳಿದರು. ಆದರೆ ನಾನು ಅದನ್ನು ಒಪ್ಪುವುದಿಲ್ಲ. ಮಾನ್ಯ ಸಚಿವರೇ, ದಯವಿಟ್ಟು ಗದಗ-ಬೆಟಗೇರಿಗೆ ಬನ್ನಿ. ಅಲ್ಲಿ ಮಾನ್ಯ ಕಾನೂನು ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್ ರವರು ಕೂಡ ಇದ್ದಾರೆ. ನಗರ ಸಭೆ ಸದಸ್ಯರ ಜೊತೆ ನೀವು ಚರ್ಚೆ ಮಾಡಿ. ಒಂದು ವೇಳೆ ನಾನು ಹೇಳಿದ್ದು ತಪ್ಪಿತ್ತು ಎಂದರೆ, ನೀವು ನನ್ನ ಮೇಲೆ ಏನು action ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ಮಾನ್ಯ ನಗರಾಭಿವೃದ್ಧಿ ಸಚಿವರು ದಯವಿಟ್ಟು ಗದಗ-ಬೆಟಗೇರಿ ಸಿಟಿ, next ಹುಬ್ಬಳಿ-ಧಾರವಾಡಕ್ಕೆ ಬನ್ನಿ. ಸುಮಾರು 22 ವರ್ಷಗಳಾದರೂ ಕೂಡ ಏನೂ ಆಗಿಲ್ಲ. ಆ ಭಾಗದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್ ರವರು ಇದ್ದಾರೆ. ನಮ್ಮ ಊರಿನಲ್ಲೇ ಸುಮಾರು 22 ವರ್ಷಗಳಿಂದ ಒಳಚರಂಡಿ ವ್ಯವಸ್ಥೆ ಆಗಿಲ್ಲವೆಂದರೆ ಏನು ಸ್ವಾಮಿ, ನೀವು ಯಶಸ್ವಿಯಾಗಿದೆ ಎಂದು ಹೇಳುತ್ತಿದ್ದೀರಿ. ಅಲ್ಲಿ ಅದು ಯಶಸ್ವಿಯಾಗಿಲ್ಲ. ನೀವು ಹೇಳಿದಂತೆ missing lines ಇದೆಯೆಂದು ತಿಳಿದುಕೊಂಡು ಅಲ್ಲಿ ಇನ್ನೂ ಪೈಪ್‌ಲೈನ್‌ಗಳನ್ನೆಲ್ಲ ಹಾಕಿಲ್ಲ. ಮೊದಲನೆಯದಾಗಿ Septic tank and Oxidation Pond ಸ್ಥಗಿತಗೊಂಡಿವೆಯೆಂದು ಹೇಳುತ್ತಿದ್ದೀರಿ. ಮತ್ತೆ ಯಶಸ್ವಿಯಾಗಿದೆಯೆಂದು ಯಾವ ಆಧಾರದ ಮೇಲೆ ಹೇಳುತ್ತೀರಿ?

ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರು ತಪ್ಪು ತಿಳಿದುಕೊಂಡಿದ್ದಾರೆ. Household connection ಕೊಡದಿದ್ದಕ್ಕೆ ಆಗ ಸ್ಥಗಿತಗೊಂಡಿತ್ತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಸುಮಾರು ರೂ.150 ಕೋಟಿ, ಅದಾದ ನಂತರ ರೂ. 15 ಕೋಟಿಗಳನ್ನು ಕೊಟ್ಟಿದ್ದೇವೆ. ಒಟ್ಟಾರೆಯಾಗಿ ರೂ.165 ಕೋಟಿ ವೆಚ್ಚ ಮಾಡಿದ ನಂತರ ಎಲ್ಲಾ S.T.P works ನಡೆಯುತ್ತಿದೆ. ಮೊದಲು ಸ್ಥಗಿತಗೊಂಡಿತ್ತು, ಅದಾದ ನಂತರ ನಾವು ರೂ.165 ಕೋಟಿ ವೆಚ್ಚ ಮಾಡಿದ ನಂತರ 2021ರಲ್ಲಿ ಎಲ್ಲಾ S.T.P ಗಳು ಕೆಲಸ ನಡೆಯುತ್ತಿವೆ. ಅದರಲ್ಲಿ ಇನ್ಯಾವುದು missing lines ಇದೆಯೋ, ಅದಕ್ಕೆ ಮತ್ತೆ ಹೆಚ್ಚುವರಿಯಾಗಿ KUIDFC (Karnataka Urban Infrastructure Development And Finance Corporation) ಯಿಂದ ರೂ. 30 ಕೋಟಿ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಯಾವುದೋ missing lines ಕೆಲವು ಏರಿಯಾದ್ದು ಹೇಳಿದರು. ಅದನ್ನು ಒಳಗೊಂಡಂತೆ ಎಲ್ಲಾ ಲೈನ್‌ಗಳನ್ನೂ ಸರಿಪಡಿಸಿ ಇಡೀ ನಗರದ ತ್ಯಾಜ್ಯ ನೀರು S.T.P ಗೆ ಹೋಗುವಂತೆ ನಾವು ಮಾಡುತ್ತೇವೆ.

ಸಭಾಪತಿಯವರು:– ಶ್ರೀ ಮಧು.ಜಿ ಮಾದೇಗೌಡ ರವರೇ, ತಮ್ಮ ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಎಸ್.ವ್ಹಿ.ಸಂಕನೂರ:– ಮಾನ್ಯ ಸಭಾಪತಿಯವರೇ, ಒಂದು ನಿಮಿಷ septic tank work ಮಾಡುತ್ತಿಲ್ಲ. ದಯವಿಟ್ಟು ಅಲ್ಲಿ ಅದೆಲ್ಲಾ ಮಾಡಬೇಕು.

ಸಭಾಪತಿಯವರು:– ಶ್ರೀ ಬಿ.ಎಸ್.ಸುರೇಶ ರವರೇ, ತಾವು ಅಲ್ಲಿಗೆ ಹೋಗಿ ಒಂದು ಸಭೆ ಮಾಡಿ ಅದನ್ನು ಬಗೆಹರಿಸಿ. ಮಾನ್ಯ ಸಚಿವರೇ, ಮಾನ್ಯ ಶಾಸಕರ ಮನೆಗೆ ಹೋಗಿ ಅಲ್ಲಿಗೂ ಒಮ್ಮೆ ಭೇಟಿ ನೀಡಿ. ಏಕೆಂದರೆ ಅವರ ಮನೆ ಅಲ್ಲೇ ಇದೆ.

ಶ್ರೀ ಬಿ.ಎಸ್.ಸುರೇಶ:– ಮಾನ್ಯ ಸಭಾಪತಿಯವರೇ, ಆಯಿತು.

ಶ್ರೀ ಎಸ್.ವ್ಹಿ.ಸಂಕನೂರ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ದಯವಿಟ್ಟು ಅದನ್ನು ಮಾಡಿಕೊಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	**64(592)**
ಸದಸ್ಯರ ಹೆಸರು	ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	11.03.2025
ಉತ್ತರಿಸುವವರು	ಪೌರಾಡಳಿತ ಮತ್ತು ಹಜ್ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳ (ನಗರಸಭೆ ಪುರಸಭೆ & ಪಟ್ಟಣ ಪಂಚಾಯಿತಿಗಳ) ವ್ಯಾಪ್ತಿಯಲ್ಲಿರುವ ಸಾರ್ವಜನಿಕ ಸ್ಮಶಾನಗಳು ಮತ್ತು ವಿದ್ಯುತ್ ಚಿತಾಗಾರಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳ (ನಗರಸಭೆ, ಪುರಸಭೆ & ಪಟ್ಟಣ ಪಂಚಾಯಿತಿಗಳ) ವ್ಯಾಪ್ತಿಯಲ್ಲಿ ಒಟ್ಟು 2346 ಸಾರ್ವಜನಿಕ ಸ್ಮಶಾನಗಳು ಮತ್ತು 15 ವಿದ್ಯುತ್ ಚಿತಾಗಾರಗಳು ಇರುತ್ತವೆ. ಜಿಲ್ಲಾವಾರು ಸಂಖ್ಯೆಯ ವಿವರವನ್ನು ಅನುಬಂಧ -1 ರಲ್ಲಿ ಸಲ್ಲಿಸಿದೆ.
ಆ)	ಇಲ್ಲಿನ ಸಾರ್ವಜನಿಕ ಸ್ಮಶಾನ, ಚಿತಾಗಾರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ/ ಸ್ಮಶಾನ ಕಾವಲುಗಾರ [ಖಾಯಂ ಮತ್ತು ಗುತ್ತಿಗೆ/ ಹೊರಗುತ್ತಿಗೆ ನೌಕರರ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು:	ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಸ್ಮಶಾನ/ ಚಿತಾಗಾರಗಳಲ್ಲಿ ಕರ್ತವ್ಯ ನಿರ್ವಹಿಸಲು ಯಾವುದೇ ಹುದ್ದೆ ಮಂಜೂರಾಗಿರುವುದಿಲ್ಲವಾದ್ದರಿಂದ ಉದ್ಭವಿಸುವುದಿಲ್ಲ.
ಇ)	ಮಸಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ/ ಗೌರವಧನವನ್ನು ಸರ್ಕಾರ ನಿಗಧಿಪಡಿಸಿದೆಯೇ, ಇಲ್ಲದಿದ್ದಲ್ಲಿ ಕಾರಣಗಳೇನು ಹಾಗೂ ಮಾಸಿಕ ವೇತನ ನಿರ್ಧಿಷ್ಟಪಡಿಸಿದ್ದರೂ ಪಾವತಿಸದೇ ಇದ್ದಲ್ಲಿ ಕಾರಣಗಳೇನು: (ಸಂಪೂರ್ಣ ವಿವರ ನೀಡುವುದು)	
ಈ)	ರಾಜ್ಯದಲ್ಲಿ ಮಸಣ ಕಾರ್ಮಿಕರು ಹಾಗೂ ಅವರ ಕುಟುಂಬಗಳ ಸದಸ್ಯರ ಗಣತಿ ಕಾರ್ಯ ನಡೆದಿದೆಯೆ?, ಇಲ್ಲದಿದ್ದಲ್ಲಿ, ಗಣತಿ ಕಾರ್ಯ ನಡೆಸುವ ಕುರಿತು ಸರ್ಕಾರದ ನಿಲುವೇನು: (ಸಂಪೂರ್ಣ ವಿವರ ನೀಡುವುದು)	
ಉ)	ಹೀಗೆಯೇ ಪ್ರತಿ ಸಾರ್ವಜನಿಕ ಮಸಣಕ್ಕೆ ಒಬ್ಬರಂತೆ ಮಸಣ ನಿರ್ವಾಹಕರು ನೇಮಕಾತಿ ಮಾಡಿಕೊಳ್ಳುವ ಕುರಿತು ಸರ್ಕಾರದ ನಿರ್ಧಾರವೇನು	
ಊ)	ಸಾರ್ವಜನಿಕ ಸ್ಮಶಾನ, ಚಿತಾಗಾರಗಳಲ್ಲಿನ ಸ್ಥಳಗಳಲ್ಲಿ ಕುಡಿಯುವ ನೀರು, ನೆರಳು ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು)	• ಸರ್ಕಾರದ ಸುತ್ತೋಲೆ ದಿನಾಂಕ:16-06-2015 ರಲ್ಲಿ 2015-16 ನೇ ಸಾಲಿನಿಂದ ಅನ್ವಯಿಸುವಂತೆ ರಾಜ್ಯ ಹಣಕಾಸು ಮುಕ್ತನಿಧಿಯ ಅನುದಾನದ ಸಮರ್ಪಕ ಬಳಕೆಯ ಕುರಿತು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ಸದರಿ ಸುತ್ತೋಲೆಯಲ್ಲಿ ಸ್ಮಶಾನ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. (ಪ್ರತಿಯನ್ನು ಅನುಬಂಧ - 2 ರಲ್ಲಿ ಸಲ್ಲಿಸಿದೆ). • ನಗರ ಸ್ಥಳೀಯ ಸಂಸ್ಥೆಗಳು SFC ಮುಕ್ತ ಅನುದಾನದ ಬಳಕೆಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸ್ವಂತ ನಿಧಿಯಲ್ಲಿ ಆದ್ಯತೆಗೆ ಅನುಗುಣವಾಗಿ ಹಾಗೂ ಅನುದಾನದ ಲಭ್ಯತೆಯ ಮೇರೆಗೆ ಕ್ರಿಯಾ ಯೋಜನೆಯನ್ನು ರೂಪಿಸಿ, ಸ್ಮಶಾನಗಳಿಗೆ ಮತ್ತು ವಿದ್ಯುತ್ ಚಿತಾಗಾರಗಳಿಗೆ ಕುಡಿಯುವ ನೀರು, ನೆರಳು ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗಿದೆ. • ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳು 2021-22 ರಿಂದ 2024-25 ರವರೆಗೂ ಎಸ್.ಎಫ್.ಸಿ. ಮುಕ್ತ ನಿಧಿ ಯೋಜನೆಯಡಿ ಸ್ಮಶಾನಗಳಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳನ್ನು ಅನುಬಂಧ -3 ರಲ್ಲಿ ಸಲ್ಲಿಸಿದೆ.

ಇ-ಸಂಖ್ಯೆ: ನಅಇ 66 ಜಿಇಎಲ್ 2025 (ಇ)

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸ್ವಂತ ನಿಧಿಯಲ್ಲಿ ಆದ್ಯತೆಗೆ ಅನುಗುಣವಾಗಿ ಹಾಗೂ ಅನುದಾನದ ಲಭ್ಯತೆಯ ಮೇರೆಗೆ ಕ್ರಿಯಾ ಯೋಜನೆಯನ್ನು ರೂಪಿಸಿ, ಸ್ಮಶಾನಗಳಿಗೆ ಮತ್ತು ವಿದ್ಯುತ್ ಚಿತಾಗಾರಗಳಿಗೆ ಕುಡಿಯುವ ನೀರು, ನೆರಳು ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗಿದೆ. • ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳು 2021-22 ರಿಂದ 2024-25 ರವರೆಗೂ ಎಸ್.ಎಫ್.ಸಿ. ಮುಕ್ತ ನಿಧಿ ಯೋಜನೆಯಡಿ ಸ್ಮಶಾನಗಳಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳನ್ನು ಅನುಬಂಧ -3 ರಲ್ಲಿ ಸಲ್ಲಿಸಿದೆ.

ಇ-ಸಂಖ್ಯೆ: ನಅಇ 66 ಜಿಇಎಲ್ 2025 (ಇ)

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-

ಅನುಬಂಧ-01					
ಕ್ರ ಸಂ	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಗಳ ಹೆಸರು	ವರ್ಗ	ಸ್ಮಶಾನಗಳ ಸಂಖ್ಯೆ	ವಿದ್ಯುತ್ ಚಿತಾಗಾರಗಳ ಸಂಖ್ಯೆ
1	2	3	4	5	6
1	ಕೋಲಾರ	ಕೋಲಾರ	ನ.ಸ.	18	0
2	ಕೋಲಾರ	ಕೆಜಿಎಫ್	ನ.ಸ.	30	0
3	ಕೋಲಾರ	ಮುಳಬಾಗಿಲು	ನ.ಸ.	19	0
4	ಕೋಲಾರ	ಮೂಲೂರು	ಪು.ಸ.	11	0
5	ಕೋಲಾರ	ಬಂಗಾರಪೇಟೆ	ಪು.ಸ.	4	1
6	ಕೋಲಾರ	ಶ್ರೀನಿವಾಸಪುರ	ಪು.ಸ.	8	0
7	ಕೋಲಾರ	ವೇಮಗಲ್-	ಪ.ಪಂ	27	0
8	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ನ.ಸ.	10	0
9	ಚಿಕ್ಕಬಳ್ಳಾಪುರ	ಚಿಂತಾಮಣಿ	ನ.ಸ.	14	0
10	ಚಿಕ್ಕಬಳ್ಳಾಪುರ	ಶಿಡ್ಲಘಟ್ಟ	ನ.ಸ.	11	0
11	ಚಿಕ್ಕಬಳ್ಳಾಪುರ	ಗೌರಿಬಿದನೂರು	ನ.ಸ.	14	0
12	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	ಪು.ಸ.	0	0
13	ಚಿಕ್ಕಬಳ್ಳಾಪುರ	ಗುಡಿಬಂಡೆ	ಪ.ಪಂ	5	0
14	ಬೆಂಗಳೂರು ನಗರ	ಮಾದನಾಯಕನಹಳ್ಳಿ	ನ.ಸ.	3	0
15	ಬೆಂಗಳೂರು ನಗರ	ಹೆಬ್ಬಗೋಡಿ	ನ.ಸ.	6	0
16	ಬೆಂಗಳೂರು ನಗರ	ಆನೇಕಲ್	ಪು.ಸ.	3	0
17	ಬೆಂಗಳೂರು ನಗರ	ಅತ್ತಿಬೆಲೆ	ಪು.ಸ.	4	0
18	ಬೆಂಗಳೂರು ನಗರ	ಬೊಮ್ಮಸಂದ್ರ	ಪು.ಸ.	5	0
19	ಬೆಂಗಳೂರು ನಗರ	ಚಂದಾಪುರ	ಪು.ಸ.	6	0
20	ಬೆಂಗಳೂರು ನಗರ	ಕೋನಪ್ಪನ	ಪು.ಸ.	1	0
21	ಬೆಂಗಳೂರು ನಗರ	ಚಿಕ್ಕಬಾಣವಾರ	ಪು.ಸ.	7	0
22	ಬೆಂಗಳೂರು ನಗರ	ಹುಣಸಮಾರನಹಳ್ಳಿ	ಪು.ಸ.	4	0
23	ಬೆಂಗಳೂರು ನಗರ	ಜಿಗಣಿ	ಪು.ಸ.	10	0
24	ಬೆಂಗಳೂರು ನಗರ	ದೊಡ್ಡತೋಗೂರು	ಪ.ಪಂ	5	0
25	ಬೆಂಗಳೂರು	ದೊಡ್ಡಬಳ್ಳಾಪುರ	ನ.ಸ.	19	0
26	ಬೆಂಗಳೂರು	ಹೊಸಕೋಟೆ	ನ.ಸ.	7	0
27	ಬೆಂಗಳೂರು	ನೆಲಮಂಗಲ	ನ.ಸ.	18	0
28	ಬೆಂಗಳೂರು	ದೇವನಹಳ್ಳಿ	ಪು.ಸ.	6	0
29	ಬೆಂಗಳೂರು	ವಿಜಯಪುರ	ಪು.ಸ.	7	0
30	ಬೆಂಗಳೂರು	ಬಾಶೆಟ್ಟಿಹಳ್ಳಿ	ಪ.ಪಂ	11	0
31	ರಾಮನಗರ	ರಾಮನಗರ	ನ.ಸ.	10	1
32	ರಾಮನಗರ	ಚನ್ನಪಟ್ಟಣ	ನ.ಸ.	20	1
33	ರಾಮನಗರ	ಕನಕಪುರ	ನ.ಸ.	8	1
34	ರಾಮನಗರ	ಮಾಗಡಿ	ಪು.ಸ.	6	1

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

74	ಮಂಡ್ಯ	ಕೆ.ಆರ್.ಪೇಟೆ	ಪು.ಸ.	5	0
75	ಮಂಡ್ಯ	ಪಾಂಡವಪುರ	ಪು.ಸ.	6	0
76	ಮಂಡ್ಯ	ನಾಗಮಂಗಲ	ಪು.ಸ.	10	0
77	ಮಂಡ್ಯ	ಬೆಳ್ಳೂರು	ಪ.ಪಂ	7	0
78	ಚಾಮರಾಜನಗರ	ಚಾಮರಾಜನಗರ	ನ.ಸ.	26	0
79	ಚಾಮರಾಜನಗರ	ಕೊಳ್ಳೇಗಾಲ	ನ.ಸ.	16	0
80	ಚಾಮರಾಜನಗರ	ಗುಂಡ್ಲುಪೇಟೆ	ಪು.ಸ.	6	0
81	ಚಾಮರಾಜನಗರ	ಯಳಂದೂರು	ಪ.ಪಂ	6	0
82	ಚಾಮರಾಜನಗರ	ಹನೂರು	ಪ.ಪಂ	11	0
83	ಮೈಸೂರು	ನಂಜನಗೂಡು	ನ.ಸ.	10	0
84	ಮೈಸೂರು	ಹುಣಸೂರು	ನ.ಸ.	15	0
85	ಮೈಸೂರು	ಹೂಟಗಳ್ಳಿ	ನ.ಸ.	4	1
86	ಮೈಸೂರು	ಕೆ.ಆರ್.ನಗರ	ಪು.ಸ.	6	0
87	ಮೈಸೂರು	ಬನ್ನೂರು	ಪು.ಸ.	13	0
88	ಮೈಸೂರು	ತಿ.ನರಸೀಪುರ	ಪು.ಸ.	20	0
89	ಮೈಸೂರು	ಪಿರಿಯಾಪಟ್ಟಣ	ಪು.ಸ.	16	0
90	ಮೈಸೂರು	ಹೆಚ್.ಡಿ. ಕೋಟೆ	ಪು.ಸ.	10	0
91	ಮೈಸೂರು	ರಮ್ಮನಹಳ್ಳಿ	ಪ.ಪಂ	9	0
92	ಮೈಸೂರು	ಕಡಕೊಳ	ಪ.ಪಂ	13	0
93	ಮೈಸೂರು	ಶ್ರೀರಾಪುರ	ಪ.ಪಂ	6	0
94	ಮೈಸೂರು	ಬೋಗಾದಿ	ಪ.ಪಂ	9	0
95	ಮೈಸೂರು	ಸರಗೂರು	ಪ.ಪಂ	10	0
96	ಹಾಸನ	ಹಾಸನ	ನ.ಸ.	6	0
97	ಹಾಸನ	ಅರಸೀಕರೆಗೆ	ನ.ಸ.	9	0
98	ಹಾಸನ	ಚನ್ನರಾಯಪಟ್ಟಣ	ಪು.ಸ.	4	0
99	ಹಾಸನ	ಹೊಳೆನರಸೀಪುರ	ಪು.ಸ.	8	0
100	ಹಾಸನ	ಸಕಲೇಶಪುರ	ಪು.ಸ.	9	0
101	ಹಾಸನ	ಬೇಲೂರು	ಪು.ಸ.	4	0
102	ಹಾಸನ	ಅರಕಲಗೂಡು	ಪ.ಪಂ	2	0
103	ಹಾಸನ	ಆಲೂರು	ಪ.ಪಂ	2	0
104	ಚಿಕ್ಕಮಗಳೂರು	ಚಿಕ್ಕಮಗಳೂರು	ನ.ಸ.	9	0
105	ಚಿಕ್ಕಮಗಳೂರು	ಕಡೂರು	ಪು.ಸ.	7	0
106	ಚಿಕ್ಕಮಗಳೂರು	ಬೀರೂರು	ಪು.ಸ.	3	1
107	ಚಿಕ್ಕಮಗಳೂರು	ತರೀಕೆರೆ	ಪು.ಸ.	9	0
108	ಚಿಕ್ಕಮಗಳೂರು	ನರಸಿಂಹರಾಜಪುರ	ಪ.ಪಂ	1	0
109	ಚಿಕ್ಕಮಗಳೂರು	ಕೊಪ್ಪ	ಪ.ಪಂ	0	0
110	ಚಿಕ್ಕಮಗಳೂರು	ಶೃಂಗೇರಿ	ಪ.ಪಂ	0	0
111	ಚಿಕ್ಕಮಗಳೂರು	ಮೂಡಿಗೆರೆ	ಪ.ಪಂ	1	0
112	ಚಿಕ್ಕಮಗಳೂರು	ಅಜ್ಜಂಪುರ	ಪ.ಪಂ	5	0

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

113	ಕೊಡಗು	ಮಡಿಕೇರಿ	ನ.ಸ.	14	0
114	ಕೊಡಗು	ಕುಶಾಲನಗರ	ಪು.ಸ	9	0
115	**ಕೊಡಗು**	**ಸೋಮವಾರಪೇಟೆ**	**ಪ.ಪಂ**	**1**	**0**
116	ಕೊಡಗು	ವಿರಾಜಪೇಟೆ	ಪು.ಸ	7	0
117	ಕೊಡಗು	ಪೊನ್ನಂಪೇಟೆ	ಪ.ಪಂ	4	0
117	ದಕ್ಷಿಣ ಕನ್ನಡ	ಬೆಳ್ತಂಗಡಿ	ಪ.ಪಂ	6	0
118	ದಕ್ಷಿಣ ಕನ್ನಡ	ಮೂಡಬಿದ್ರೆ	ಪು.ಸ.	4	0
119	ದಕ್ಷಿಣ ಕನ್ನಡ	ಮುಲ್ಕಿ	ಪ.ಪಂ	12	0
120	ದಕ್ಷಿಣ ಕನ್ನಡ	ಬಂಟ್ವಾಳ	ಪು.ಸ.	3	0
121	ದಕ್ಷಿಣ ಕನ್ನಡ	ಪುತ್ತೂರು	ನ.ಸ.	15	0
122	ದಕ್ಷಿಣ ಕನ್ನಡ	ಸುಳ್ಯ	ಪ.ಪಂ	3	0
123	ದಕ್ಷಿಣ ಕನ್ನಡ	ಉಳ್ಳಾಲ	ನ.ಸ.	2	1
124	ದಕ್ಷಿಣ ಕನ್ನಡ	ಕೋಟೆಕಾರ್	ಪ.ಪಂ	1	0
125	ದಕ್ಷಿಣ ಕನ್ನಡ	ವಿಟ್ಲ	ಪ.ಪಂ	2	0
126	ದಕ್ಷಿಣ ಕನ್ನಡ	ಕಡಬ	ಪ.ಪಂ	1	0
127	ದಕ್ಷಿಣ ಕನ್ನಡ	ಬಜಪೆ	ಪ.ಪಂ	4	0
128	ದಕ್ಷಿಣ ಕನ್ನಡ	ಕಿನ್ನಿಗೋಳಿ	ಪ.ಪಂ	2	0
129	ದಕ್ಷಿಣ ಕನ್ನಡ	ಸೋಮೇಶ್ವರ	ಪು.ಸ.	3	0
130	ಉಡುಪಿ	ಉಡುಪಿ	ನ.ಸ.	11	1
131	ಉಡುಪಿ	ಕಾರ್ಕಳ	ಪು.ಸ.	6	0
132	ಉಡುಪಿ	ಕುಂದಾಪುರ	ಪು.ಸ.	6	0
133	ಉಡುಪಿ	ಕಾಪು	ಪು.ಸ.	15	0
134	ಉಡುಪಿ	ಸಾಲಿಗ್ರಾಮ	ಪ.ಪಂ	7	0
135	ಉಡುಪಿ	ಬೈಂದೂರು	ಪ.ಪಂ	2	0
136	ಹಾವೇರಿ	ಹಾವೇರಿ	ನ.ಸ.	7	0
137	ಹಾವೇರಿ	ರಾಣೇಬೆನ್ನೂರು	ನ.ಸ.	7	0
138	ಹಾವೇರಿ	ಬ್ಯಾಡಗಿ	ಪು.ಸ.	8	0
139	ಹಾವೇರಿ	ಹಾನಗಲ್ಲ	ಪು.ಸ.	3	0
140	ಹಾವೇರಿ	ಸವಣೂರು	ಪು.ಸ.	17	0
141	ಹಾವೇರಿ	ಶಿಗ್ಗಾಂವ	ಪು.ಸ.	2	0
142	ಹಾವೇರಿ	ಬಂಕಾಪುರ	ಪು.ಸ.	6	0
143	ಹಾವೇರಿ	ಹಿರೇಕೆರೂರ	ಪ.ಪಂ	5	0
144	ಹಾವೇರಿ	ಗುತ್ತಲ	ಪ.ಪಂ	3	0
145	ಹಾವೇರಿ	ರಟ್ಟೆಹಳ್ಳಿ	ಪ.ಪಂ	2	0
146	ಉತ್ತರ ಕನ್ನಡ	ಕಾರವಾರ	ನ.ಸ.	18	0
147	ಉತ್ತರ ಕನ್ನಡ	ಅಂಕೋಲಾ	ಪು.ಸ.	3	0
148	ಉತ್ತರ ಕನ್ನಡ	ಕುಮಟಾ	ಪು.ಸ.	9	0
149	ಉತ್ತರ ಕನ್ನಡ	ಹೊನ್ನಾವರ	ಪ.ಪಂ	8	0
150	ಉತ್ತರ ಕನ್ನಡ	ಭಟ್ಕಳ	ಪು.ಸ.	5	0

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

151	ಉತ್ತರ ಕನ್ನಡ	ಜಾಲಿ	ಪ.ಪಂ	8	0
152	ಉತ್ತರ ಕನ್ನಡ	ಶಿರಸಿ	ನ.ಸ.	7	0
153	ಉತ್ತರ ಕನ್ನಡ	ಸಿದ್ದಾಪುರ	ಪ.ಪಂ	20	0
154	ಉತ್ತರ ಕನ್ನಡ	ಹಳಿಯಾಳ	ಪು.ಸ.	7	0
155	ಉತ್ತರ ಕನ್ನಡ	ದಾಂಡೇಲಿ	ನ.ಸ.	3	0
156	ಉತ್ತರ ಕನ್ನಡ	ಯಲ್ಲಾಪುರ	ಪ.ಪಂ	5	0
157	ಉತ್ತರ ಕನ್ನಡ	ಮುಂಡಗೋಡ	ಪ.ಪಂ	6	0
158	ಉತ್ತರ ಕನ್ನಡ	ಮಂಕಿ	ಪ.ಪಂ	6	0
159	ಧಾರವಾಡ	ಅಣ್ಣಿಗೇರಿ	ಪು.ಸ.	4	0
160	ಧಾರವಾಡ	ನವಲಗುಂದ	ಪು.ಸ.	8	0
161	ಧಾರವಾಡ	ಅಳ್ನಾವರ	ಪ.ಪಂ	8	0
162	ಧಾರವಾಡ	ಕಲಘಟಗಿ	ಪ.ಪಂ	9	0
163	ಧಾರವಾಡ	ಕುಂದಗೋಳ	ಪ.ಪಂ	3	0
164	ಗದಗ	ಗದಗ ಬೆಟಗೇರಿ	ನ.ಸ.	14	0
165	ಗದಗ	ಮೂಳಗುಂದ	ಪ.ಪಂ	6	0
166	ಗದಗ	ರೋಣ	ಪು.ಸ.	5	0
167	ಗದಗ	ಗಜೇಂದ್ರಗಡ	ಪು.ಸ.	7	0
168	ಗದಗ	ನರೇಗಲ್ಲ	ಪ.ಪಂ	8	0
169	ಗದಗ	ನರಗುಂದ	ಪು.ಸ.	6	0
170	ಗದಗ	ಶಿರಹಟ್ಟಿ	ಪ.ಪಂ	5	0
171	ಗದಗ	ಲಕ್ಷ್ಮೇಶ್ವರ	ಪು.ಸ.	7	0
172	ಗದಗ	ಮುಂಡರಗಿ	ಪು.ಸ.	6	0
173	ಬೆಳಗಾವಿ	ಗೋಕಾಕ	ನ.ಸ.	23	0
174	ಬೆಳಗಾವಿ	ನಿಪ್ಪಾಣಿ	ನ.ಸ.	8	0
175	ಬೆಳಗಾವಿ	ಅಥಣಿ	ಪು.ಸ.	6	0
176	ಬೆಳಗಾವಿ	ಬೈಲಹೊಂಗಲ	ಪು.ಸ.	7	0
177	ಬೆಳಗಾವಿ	ಚಿಕ್ಕೋಡಿ	ಪು.ಸ.	13	0
178	ಬೆಳಗಾವಿ	ಫಟಪ್ರಭಾ	ಪು.ಸ.	10	0
179	ಬೆಳಗಾವಿ	ಹಾರೂಗೇರಿ	ಪು.ಸ.	10	0
180	ಬೆಳಗಾವಿ	ಹುಕ್ಕೇರಿ	ಪು.ಸ.	29	0
181	ಬೆಳಗಾವಿ	ಕೋಣೂರ	ಪು.ಸ.	8	0
182	ಬೆಳಗಾವಿ	ಕುಡಚಿ	ಪು.ಸ.	6	0
183	ಬೆಳಗಾವಿ	ಮೂಡಲಗಿ	ಪು.ಸ.	4	0
184	ಬೆಳಗಾವಿ	ಮುಗಳಖೋಡ	ಪು.ಸ.	5	0
185	ಬೆಳಗಾವಿ	ಮುನವಳ್ಳಿ	ಪು.ಸ.	3	0
186	ಬೆಳಗಾವಿ	ರಾಮದುರ್ಗ	ಪು.ಸ.	4	0
187	ಬೆಳಗಾವಿ	ಸದಲಗಾ	ಪು.ಸ.	11	0
188	ಬೆಳಗಾವಿ	ಸಂಕೇಶ್ವರ	ಪು.ಸ.	4	0
189	ಬೆಳಗಾವಿ	ಸವದತ್ತಿ-ಯಲ್ಲಮ್ಮ	ಪು.ಸ.	9	0

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

190	ಬೆಳಗಾವಿ	ಉಗಾರಖುರ್ದ	ಪು.ಸ.	4	0
191	ಬೆಳಗಾವಿ	ಐನಾಪೂರ	ಪ.ಪಂ	10	0
192	ಬೆಳಗಾವಿ	ಕಲಗಿ- ಅಕ್ಕತಂಗೇರ	ಪ.ಪಂ	2	0
193	ಬೆಳಗಾವಿ	ಅರಭಾಂವಿ	ಪ.ಪಂ	6	0
194	ಬೆಳಗಾವಿ	ಬೋರಗಾಂವ	ಪ.ಪಂ	7	0
195	ಬೆಳಗಾವಿ	ಚನ್ನಮ್ಮನ ಕಿತ್ತೂರ	ಪ.ಪಂ	5	0
196	ಬೆಳಗಾವಿ	ಚಿಂಚಲಿ	ಪ.ಪಂ	3	0
197	ಬೆಳಗಾವಿ	ಯಕ್ಸಂಬಾ	ಪ.ಪಂ	8	0
198	ಬೆಳಗಾವಿ	ಕಬ್ಬೂರ	ಪ.ಪಂ	6	0
199	ಬೆಳಗಾವಿ	ಕಾಗವಾಡ	ಪ.ಪಂ	7	0
200	ಬೆಳಗಾವಿ	ಕಲ್ಲೋಳಿ	ಪ.ಪಂ	4	0
201	ಬೆಳಗಾವಿ	ಕಂಕಣವಾಡಿ	ಪ.ಪಂ	5	0
202	ಬೆಳಗಾವಿ	ಖಾನಾಪೂರ	ಪ.ಪಂ	9	0
203	ಬೆಳಗಾವಿ	ಮಚ್ಛೆ	ಪ.ಪಂ	1	0
204	ಬೆಳಗಾವಿ	ಎಂ.ಕೆ ಹುಬ್ಬಳ್ಳಿ	ಪ.ಪಂ	4	0
205	ಬೆಳಗಾವಿ	ನಾಗನೂರ	ಪ.ಪಂ	5	0
206	ಬೆಳಗಾವಿ	ಪೀರನವಾಡಿ	ಪ.ಪಂ	6	0
207	ಬೆಳಗಾವಿ	ರಾಯಬಾಗ	ಪ.ಪಂ	5	0
208	ಬೆಳಗಾವಿ	ಶೇಡಬಾಳ	ಪ.ಪಂ	7	0
209	ಬೆಳಗಾವಿ	ಯರಗಟ್ಟಿ	ಪ.ಪಂ	2	0
210	ವಿಜಯಪುರ	ಬಸವನ ಬಾಗೇವಾಡಿ	ಪು.ಸ.	5	0
211	ವಿಜಯಪುರ	ಇಂಡಿ	ಪು.ಸ.	5	0
212	ವಿಜಯಪುರ	ಮುದ್ದೇಬಿಹಾಳ	ಪು.ಸ.	4	0
213	ವಿಜಯಪುರ	ಸಿಂಧಗಿ	ಪು.ಸ.	5	0
214	ವಿಜಯಪುರ	ತಾಳಿಕೋಟೆ	ಪು.ಸ.	4	0
215	ವಿಜಯಪುರ	ಆಲಮೇಲ	ಪ.ಪಂ	6	0
216	ವಿಜಯಪುರ	ದೇವರಹಿಪ್ಪರಗಿ	ಪ.ಪಂ	5	0
217	ವಿಜಯಪುರ	ಕೋಲ್ಹಾರ	ಪ.ಪಂ	2	0
218	ವಿಜಯಪುರ	ನಿಡಗುಂದಿ	ಪ.ಪಂ	2	0
219	ವಿಜಯಪುರ	ಮನಗೂಳಿ	ಪ.ಪಂ	4	0
220	ವಿಜಯಪುರ	ಚಡಚಣ	ಪ.ಪಂ	4	0
221	ವಿಜಯಪುರ	ನಲತವಾಡ	ಪ.ಪಂ	4	0
222	ವಿಜಯಪುರ	ಬಬಲೇಶ್ವರ	ಪ.ಪಂ	5	0
223	ವಿಜಯಪುರ	ತಿಕೋಟಾ	ಪ.ಪಂ	5	0
224	ಬಾಗಲಕೋಟೆ	ಬದಾಮಿ	ಪು.ಸ.	2	0
225	ಬಾಗಲಕೋಟೆ	ಕೆರೂರ	ಪ.ಪಂ	4	0
226	ಬಾಗಲಕೋಟೆ	ಗುಳೇದಗುಡ್ಡ	ಪು.ಸ.	7	0
227	ಬಾಗಲಕೋಟೆ	ಬಾಗಲಕೋಟೆ	ನ.ಸ.	8	1
228	ಬಾಗಲಕೋಟೆ	ಅಮೀನಗಡ	ಪ.ಪಂ	5	0

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

229	ಬಾಗಲಕೋಟೆ	ಕಮತಗಿ	ಪ.ಪಂ	1	0
230	ಬಾಗಲಕೋಟೆ	ಬೀಳಗಿ	ಪ.ಪಂ	1	0
231	ಬಾಗಲಕೋಟೆ	ಹುನಗುಂದ	ಪು.ಸ.	5	0
232	ಬಾಗಲಕೋಟೆ	ಇಲಕಲ್ಲ	ನ.ಸ.	2	0
233	ಬಾಗಲಕೋಟೆ	ಜಮಖಂಡಿ	ನ.ಸ.	2	0
234	ಬಾಗಲಕೋಟೆ	ಮುಧೋಳ	ನ.ಸ.	4	0
235	ಬಾಗಲಕೋಟೆ	ಬೆಳಗಲಿ	ಪ.ಪಂ	4	0
236	ಬಾಗಲಕೋಟೆ	ತೇರದಾಳ	ಪು.ಸ.	6	0
237	ಬಾಗಲಕೋಟೆ	ರಬಕವಿ-ಬನಹಟ್ಟಿ	ನ.ಸ.	14	0
238	ಬಾಗಲಕೋಟೆ	ಮಹಾಲಿಂಗಪುರ	ಪು.ಸ.	6	0
239	ಬಾಗಲಕೋಟೆ	ಲೋಕಾಪುರ	ಪ.ಪಂ	11	0
240	ಬಾಗಲಕೋಟೆ	ಶಿರೂರು	ಪ.ಪಂ	3	0
241	ಬೀದರ್	ಬೀದರ್	ನ.ಸ.	67	0
242	ಬೀದರ್	ಬಸವಕಲ್ಯಾಣ	ನ.ಸ.	17	0
243	ಬೀದರ್	ಹುಮನಾಬಾದ್	ಪು.ಸ.	10	0
244	ಬೀದರ್	ಬಾಲ್ಕಿ	ಪು.ಸ.	11	0
245	ಬೀದರ್	ಚಿಟಗುಪ್ಪ	ಪು.ಸ.	12	0
246	ಬೀದರ್	ಹಳಿಖೇಡ	ಪು.ಸ.	0	0
247	ಬೀದರ್	ಔರಾದ್	ಪ.ಪಂ	6	0
248	ಕಲಬುರಗಿ	ಶಹಾಬಾದ	ನ.ಸ.	13	0
249	ಕಲಬುರಗಿ	ಚಿತ್ತಾಪೂರ	ಪು.ಸ.	9	0
250	ಕಲಬುರಗಿ	ಆಳಂದ	ಪು.ಸ.	15	0
251	ಕಲಬುರಗಿ	ಸೇಡಂ	ಪು.ಸ.	6	0
252	ಕಲಬುರಗಿ	ವಾಡಿ	ಪು.ಸ.	12	0
253	ಕಲಬುರಗಿ	ಚಿಂಚೋಳಿ	ಪು.ಸ.	9	0
254	ಕಲಬುರಗಿ	ಅಫಜಲಪೂರ	ಪು.ಸ.	10	0
255	ಕಲಬುರಗಿ	ಜೇವರ್ಗಿ	ಪು.ಸ.	4	0
256	ಕಲಬುರಗಿ	ಕಾಳಗಿ	ಪ.ಪಂ	6	0
257	ಕಲಬುರಗಿ	ಕಮಲಪೂರ	ಪ.ಪಂ	8	0
258	ಕಲಬುರಗಿ	ಯಡ್ರಾಮಿ	ಪ.ಪಂ	6	0
259	ಯಾದಗಿರಿ	ಯಾದಗಿರಿ	ನ.ಸ.	22	0
260	ಯಾದಗಿರಿ	ಶಹಾಪುರ	ನ.ಸ.	36	0
261	ಯಾದಗಿರಿ	ಕೆಂಭಾವಿ	ಪು.ಸ.	10	0
262	ಯಾದಗಿರಿ	ಸುರಪುರ	ನ.ಸ.	19	0
263	ಯಾದಗಿರಿ	ಕಕ್ಕೇರಾ	ಪು.ಸ.	3	0
264	ಯಾದಗಿರಿ	ಗುರುಮಠಕಲ್	ಪು.ಸ.	10	0
265	ಯಾದಗಿರಿ	ಹುಣಸಗಿ	ಪ.ಪಂ	3	0
266	ರಾಯಚೂರು	ರಾಯಚೂರು	ನ.ಸ.	35	1
267	ರಾಯಚೂರು	ಸಿಂಧನೂರು	ನ.ಸ.	15	0

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

268	ರಾಯಚೂರು	ಲಿಂಗಸಗೂರು	ಪು.ಸ.	11	0
269	ರಾಯಚೂರು	ಮುದಗಲ್	ಪು.ಸ.	10	0
270	ರಾಯಚೂರು	ದೇವದುರ್ಗ	ಪು.ಸ.	8	0
271	ರಾಯಚೂರು	ಮಸ್ಕಿ	ಪು.ಸ.	2	0
272	ರಾಯಚೂರು	ತುರ್ವಿಹಾಳ	ಪ.ಪಂ	5	0
273	ರಾಯಚೂರು	ಸಿರವಾರ	ಪು.ಸ.	2	0
274	ರಾಯಚೂರು	ಬಳಗಾನೂರು	ಪ.ಪಂ	8	0
275	ರಾಯಚೂರು	ಹಟ್ಟಿ	ಪ.ಪಂ	1	0
276	ರಾಯಚೂರು	ಮಾನವಿ	ಪು.ಸ.	20	0
277	ರಾಯಚೂರು	ಕವಿತಾಳ	ಪ.ಪಂ	8	0
278	ಬಳ್ಳಾರಿ	ಸಿರುಗುಪ್ಪ	ನ.ಸ.	8	0
279	ಬಳ್ಳಾರಿ	ಸಂಡೂರು	ಪು.ಸ.	6	0
280	ಬಳ್ಳಾರಿ	ಕಂಪ್ಲಿ	ಪು.ಸ.	6	0
281	ಬಳ್ಳಾರಿ	ಕುರೇಕುಪ್ಪ	ಪು.ಸ.	4	0
282	ಬಳ್ಳಾರಿ	ಕುರುಗೋಡು	ಪು.ಸ.	5	0
283	ಬಳ್ಳಾರಿ	ತೆಕ್ಕಲಕೋಟೆ	ಪ.ಪಂ	8	0
284	ಬಳ್ಳಾರಿ	ಕುಡುತಿನಿ	ಪ.ಪಂ	2	0
285	ವಿಜಯನಗರ	ಹೊಸಪೇಟೆ	ನ.ಸ.	27	0
286	ವಿಜಯನಗರ	ಹೂವಿನಹಡಗಲಿ	ಪು.ಸ.	5	0
287	ವಿಜಯನಗರ	ಹಗರಿಬೊಮ್ಮನಹಳ್ಳಿ	ಪು.ಸ.	9	0
288	ವಿಜಯನಗರ	ಹರಪನಹಳ್ಳಿ	ಪು.ಸ.	10	0
289	ವಿಜಯನಗರ	ಕೂಡಲಗಿ	ಪ.ಪಂ	9	0
290	ವಿಜಯನಗರ	ಕೊಟ್ಟೂರು	ಪ.ಪಂ	6	0
291	ವಿಜಯನಗರ	ಕಮಲಾಪುರ	ಪ.ಪಂ	10	0
292	ವಿಜಯನಗರ	ಮರಿಯಮ್ಮನಹಳ್ಳಿ	ಪ.ಪಂ	8	0
293	ಕೊಪ್ಪಳ	ಕೊಪ್ಪಳ	ನ.ಸ.	8	0
294	ಕೊಪ್ಪಳ	ಭಾಗ್ಯನಗರ	ಪ.ಪಂ	1	0
295	ಕೊಪ್ಪಳ	ಗಂಗಾವತಿ	ನ.ಸ.	17	0
296	ಕೊಪ್ಪಳ	ಕುಷ್ಟಗಿ	ಪು.ಸ.	9	0
297	ಕೊಪ್ಪಳ	ತಾವರಗೇರ	ಪ.ಪಂ	8	0
298	ಕೊಪ್ಪಳ	ಕಾರಟಗಿ	ಪು.ಸ.	1	0
299	ಕೊಪ್ಪಳ	ಕನಕಗಿರಿ	ಪ.ಪಂ	5	
300	ಕೊಪ್ಪಳ	ಯಲಬುರ್ಗಾ	ಪ.ಪಂ	5	0
301	ಕೊಪ್ಪಳ	ಕುಕನೂರು	ಪ.ಪಂ	9	0
ಒಟ್ಟಾರೆ				2346	15

ಮುಖ್ಯ ಅಭಿಯಂತರರು
ಪೌರಾಡಳಿತ ನಿರ್ದೇಶನಾಲಯ
ಜೆ೦ಗಳೂರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-೧೭

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 269 ಎಸ್‌ಎಫ್‌ಸಿ 2015 ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:16-06-2015

ಸುತ್ತೋಲೆ

ವಿಷಯ:2015-16ನೇ ಸಾಲಿನ ರಾಜ್ಯ ಹಣಕಾಸು ಆಯೋಗದ ಮುಕ್ತನಿಧಿ (ಇತರೆ ಅವತರಣದಡಿ ಬಂಡವಾಳ ಆಸ್ತಿಗಳ ಸೃಜನೆ) ಅನುದಾನದ ಬಳಕೆ ಕುರಿತು ಮಾರ್ಗಸೂಚಿಗಳನ್ನು ನಿಗಧಿಪಡಿಸುವ ಬಗ್ಗೆ.

*****

2015-16ನೇ ಸಾಲಿನಲ್ಲಿ ರೂ.103030.00ಲಕ್ಷಗಳ ಮುಕ್ತನಿಧಿ (ಬಂಡವಾಳ ಆಸ್ತಿಗಳ ಸೃಜನೆ) ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ನಿಗಧಿ ಮಾಡಲಾಗಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಾಮಗಾರಿಗಳನ್ನು ಶೀಘ್ರವಾಗಿ ಪ್ರಾರಂಭಿಸಲು ಆಡಳತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಪ್ರಕ್ರಿಯೆಗಳನ್ನು ವಿಳಂಬವಿಲ್ಲದೇ ಕೈಗೊಳ್ಳುವುದು ಮತ್ತು ಯೋಜನೆಗಳನ್ನು ಕಾಲಮಿತಿಯೊಳಗೆ ಸಮರ್ಪಕವಾಗಿ ಅನುಷ್ಠಾನ ಮಾಡಿ ಸಾರ್ವಜನಿಕರು ಯೋಜನೆಗಳ ಪೂರ್ಣ ಪ್ರಯೋಜನ ಪಡೆಯಲು ಅನುವಾಗುವಂತೆ, ಇಲಾಖೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಹಾಗೂ ಇಂಜಿನಿಯರ್‌ಗಳು ಹೆಚ್ಚಿನ ಪರಿಶ್ರಮ ವಹಿಸುವುದು ಅತ್ಯಗತ್ಯವಾಗಿದೆ.

ಈ ಹನ್ನಲೆಯಲ್ಲಿ ಕಾರ್ಯಕ್ರಮದ ಸಮರ್ಪಕ ಅನುಷ್ಠಾನದ ದೃಷ್ಟಿಯಿಂದ 2015-16ನೇ ಸಾಲಿನಿಂದ ಅನ್ವಯಿಸುವಂತೆ ಈ ಕೆಳಕಂಡ ಮಾರ್ಗಸೂಚಿ/ನಿರ್ದೇಶನವನ್ನು ಹೊರಡಿಸಲಾಗಿದೆ.

- ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಯೋಜನೆಯ ನೋಡಲ್ ಅಧಿಕಾರಿಯಾಗಿರುತ್ತಾರೆ.
- ನಗರ ಸ್ಥಳೀಯ ಸಂಸ್ಥೆಗೆ ಹಂಚಿಕೆಯಾದ ಒಟ್ಟು ಅನುದಾನ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳು ಕ್ರಿಯಾ ಯೋಜನೆಯನ್ನು 15 ದಿನಗಳೊಳಗೆ ತಯಾರಿಸುವುದು.
- ಕ್ರಿಯಾಯೋಜನೆ ತಯಾರಾದ ಕೂಡಲೇ ಪೌರ ಸಂಸ್ಥೆಗಳ ಇಂಜಿನಿಯರಿಂಗ್ ಸಿಬ್ಬಂದಿ ಕಾಮಗಾರಿಗಳ ಪ್ರಮಾಣವಾರು ಅಂದಾಜು ಪಟ್ಟಿಯನ್ನು ಸಿದ್ಧಪಡಿಸುವುದು.
- ನಗರ ಸ್ಥಳೀಯ ಸಂಸ್ಥೆಯಿಂದ ಸ್ವೀಕೃತವಾದ ಕ್ರಿಯಾ ಯೋಜನೆಯನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಪರಿಶೀಲಿಸಿ 7 ದಿನಗಳ ಒಳಗೆ ಜಿಲ್ಲಾಧಿಕಾರಿಗಳವರ ಅನುಮೋದನೆ ಪಡೆಯತಕ್ಕದ್ದು.
- ಸುತ್ತೋಲೆಯಲ್ಲಿ ನಿಗಧಿಪಡಿಸಿರುವ ವಿವಿಧ ಕಾಮಗಾರಿ ಅಂಶಗಳು ಹಾಗೂ ಇತರೆ ಅವಕಾಶಗಳನ್ನು ಕ್ರಿಯಾಯೋಜನೆಯಲ್ಲಿ ಅಳವಡಿಸಿರುವ ಬಗ್ಗೆ ಜಿಲ್ಲಾಧಿಕಾರಿಗಳು ಪರಿಶೀಲನೆ ಮಾಡಿ ಕ್ರಿಯಾಯೋಜನೆಗೆ ಅನುಮೋದನೆ ನೀಡತಕ್ಕದ್ದು.

---2

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮುಗಿದ 15 ದಿನಗಳ ಒಳಗೆ ಕಾಮಗಾರಿಗಳನ್ನು ಪ್ರಾರಂಭಿಸುವುದು.
- ಕಾಮಗಾರಿಗಳನ್ನು ಶೀಘ್ರವಾಗಿ ಹಾಗೂ ಗುಣಮಟ್ಟದೊಂದಿಗೆ ನಿರ್ವಹಿಸಲು ಬಿಡಿಬಿಡಿಯಾಗಿ ಟೆಂಡರ್ ಕರೆಯದೆ ಪ್ಯಾಕೇಜ್ ರೀತಿಯಲ್ಲಿ ಟೆಂಡರ್ ಕರೆಯುವುದು.
- ಕಾಮಗಾರಿಗಳನ್ನು ಕೈಗೊಳ್ಳುವಾಗ ಅಲ್ಪಾವಧಿ ಟೆಂಡರ್ ಸೇರಿದಂತೆ ಎಲ್ಲಾ ಟೆಂಡರ್ ಪ್ರಕ್ರಿಯೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ ಮತ್ತು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
- ನಗರ ಸ್ಥಳೀಯ ಸಂಸ್ಥೆಗೆ ನಿಗಧಿಮಾಡಿರುವ ಪೂರ್ಣ ಅನುದಾನಕ್ಕೆ ಅನುಮೋದನೆ ನೀಡಿರುವ ಕ್ರಿಯಾ ಯೋಜನೆಗೆ ಅನುಗುಣವಾಗಿ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಸಕ್ಷಮ ಪ್ರಾಧಿಕಾರಗಳು ನೀಡುವುದು.
- ಅನುಮೋದಿತ ಕ್ರಿಯಾ ಯೋಜನೆಯ ಪ್ರತಿಯನ್ನು ಜಿಲ್ಲಾಧಿಕಾರಿಗಳು ಪೌರಾಡಳಿತ ನಿರ್ದೇಶಕರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ಕ್ರಿಯಾಯೋಜನೆ ಸಿದ್ಧಪಡಿಸುವಾಗ ಹಿಂದುಳಿದ/ಕೊಳಚೆ ಪ್ರದೇಶದ ಅಭಿವೃದ್ಧಿ ಹಾಗೂ ಶೌಚಾಲಯ, ನೀರು, ಬೀದಿ ದೀಪ, ರಸ್ತೆ ನಿರ್ಮಾಣ ಮುಂತಾದ ಮೂಲಭೂತ ಸೌಕರ್ಯಗಳಿಗೆ ಪ್ರಥಮ ಆದ್ಯತೆ ನೀಡುವುದು.
- ಟೆಂಡರ್ ಪ್ರಕ್ರಿಯೆಯನ್ನು ಜಿಲ್ಲಾಧಿಕಾರಿಗಳ ಅನುಮೋದನೆಯೊಂದಿಗೆ ಅಲ್ಪಾವಧಿ ಟೆಂಡರ್ ಮೂಲಕ ನಿರ್ವಹಿಸುವುದು. ವರ್ಷದ ಕೊನೆಯಲ್ಲಿ ಟೆಂಡರ್ ಕರೆಯದೆ ವರ್ಷದ ಪ್ರಾರಂಭದಲ್ಲಿಯೇ ಕರೆಯಲು ಕ್ರಮ ತೆಗೆದುಕೊಳ್ಳುವುದು.
- ರಾಜ್ಯ ಮಟ್ಟದಲ್ಲಿ ಪೌರಾಡಳಿತ ನಿರ್ದೇಶಕರು ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಪ್ರತಿ ತಿಂಗಳು ಪ್ರಗತಿ ಪರಿಶೀಲನೆ ಮಾಡುವುದು ಮತ್ತು ಅನುಷ್ಠಾನ ವೇಳೆಯಲ್ಲಿ ಉಂಟಾಗುವ ತೊಂದರೆಗಳನ್ನು ಸಕ್ಷಮ ಪ್ರಾಧಿಕಾರದಿಂದ ಪರಿಹರಿಸಿಕೊಳ್ಳುವುದು.

ಮುಕ್ತನಿಧಿ ಅನುದಾನದ ಬಳಕೆಗೆ ಸೂತ್ರಗಳು:

A) 1) ಬಿಡುಗಡೆಗೊಳಿಸಿದ ಅನುದಾನದಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ/23/ಹಿಎನ್‌ಜಿ/2014 ದಿನಾಂಕ 18/09/2014ರ ಅನ್ವಯ ಶೇ.24.10 ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ (ಶೇ. 17.15)/ ಪರಿಶಿಷ್ಟ ಪಂಗಡ (ಶೇ. 6.95) ದವರಿಗಾಗಿ ಮೀಸಲಿರಿಸಿ, ಖರ್ಚು ಮಾಡುವುದು.

2) ಹಾಗೂ ಇತರೆ ಬಡಜನರ ಕಲ್ಯಾಣಕ್ಕಾಗಿ ಶೇಕಡಾ 7.25 ರಷ್ಟು ಅನುದಾನವನ್ನು ಮೀಸಲಿರಿಸುವುದು ಮತ್ತು ಈ ನಿಧಿಯನ್ನು ಸುತ್ತೋಲೆ ಸಂಖ್ಯೆ: ನಅಇ 415 ಜಿಇಎಲ 2011, ದಿನಾಂಕ:27-02-2012ರಲ್ಲಿ ಸೂಚಿಸಿರುವಂತೆ ನಗರದ ಇತರೆ ಬಡಜನರಿಗಾಗಿ, ಮತ್ತು ಶೇ.3ರಷ್ಟು ಅನುದಾನವನ್ನು ಅಂಗವಿಕಲರ ಅಭಿವೃದ್ಧಿಗಾಗಿ ಖರ್ಚು ಮಾಡುವುದು. ಈ ಬಗ್ಗೆ ಜಾತಿ ನಿರಪೇಕ್ಷವಾಗಿ/ಮಾರ್ಗಸೂಚಿ ಸೂತ್ರಗಳ ಅನ್ವಯ ಕಾರ್ಯಕ್ರಮ/ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ, ಜಿಲ್ಲಾಧಿಕಾರಿಯವರಿಂದ ಅನುಮೋದನೆ ಪಡೆದು ನಿಗಧಿತ ಸಮಯದೊಳಗೆ ಕಾರ್ಯಗತಗೊಳಿಸುವುದು.

---3

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3) ಹಿಂದಿನ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನದ ಅನುಮೋದಿತ ಕ್ರಿಯಾಯೋಜನೆಯಲ್ಲಿ ಇರುವ ಹಾಗೂ ಮುಕ್ತ ಸಾಲಿಗೆ ಮುಂದುವರೆದಿರುವ ಕಾಮಗಾರಿಗಳನ್ನು (Spillover works) ಪೂರ್ಣಗೊಳಿಸಲು ಅವಶ್ಯವಿರುವ ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳು ಕ್ರಿಯಾ ಯೋಜನೆ ಸಿದ್ಧಪಡಿಸುವ ಸಾಲಿಗೆ ನಿಗಧಿಯಾಗಿರುವ ಒಟ್ಟು ಅನುದಾನದಲ್ಲಿ ಕಡ್ಡಾಯವಾಗಿ ಮೀಸಲಿಡತಕ್ಕದ್ದು.

B) ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಪೂರ್ವದಲ್ಲಿ ಮೇಲಿನ ಕಂಡಿಕೆ (1), (2) ಮತ್ತು (3) ರಲ್ಲಿ ತಿಳಿಸಿರುವ ಉದ್ದೇಶಗಳಿಗೆ ಸಂಪೂರ್ಣ ಅನುದಾನವನ್ನು ಮೀಸಲಿಟ್ಟಿರುವ ಬಗ್ಗೆ ಖಚಿತಪಡಿಸಿಕೊಂಡು ನಂತರ ಉಳಿಯುವ ಅನುದಾನದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಈ ಕೆಳಕಂಡ ಕಾಮಗಾರಿಗಳಿಗೆ ಜಿಲ್ಲಾಧಿಕಾರಿಗಳು ಅನುಮೋದನೆ ನೀಡತಕ್ಕದ್ದು.

1) ಕುಡಿಯುವ ನೀರಿನ ಯೋಜನೆಗೆ ಅದರಲ್ಲೂ ಅಭಾವ ಪರಿಸ್ಥಿತಿ ನಿಭಾಯಿಸುವ ಯೋಜನೆಗಳಿಗೆ ಆದ್ಯತೆಯ ಮೇಲೆ ಅವಕಾಶ ಕಲ್ಪಿಸುವುದು.
2) ತರಕಾರಿ ಮಾರುಕಟ್ಟೆ, ಮಾಂಸ, ಕೋಳಿ ಹಾಗೂ ಮೀನು ಮಾರುಕಟ್ಟೆ ಮತ್ತು ಸಣ್ಣ ಪ್ರಮಾಣದ ಮಾರುಕಟ್ಟೆ (Mini Markets) ನಿರ್ಮಾಣ.
3) ನಿರ್ಮಲ ನಗರ ಅನುಮೋದಿತ ಮಾದರಿಯಂತೆ ಸುಸಜ್ಜಿತ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡುವುದು.
4) ಸಾರ್ವಜನಿಕ ಶೌಚಾಲಯಗಳ ನಿರ್ಮಾಣಕ್ಕೆ ಸ್ಥಳೀಯ ಸಂಸ್ಥೆಗೆ ಸೇರಿರುವ ಹಾಗ ಲಭ್ಯವಿಲ್ಲದ ಪ್ರಕರಣಗಳಲ್ಲ ಮಾತ್ರ ನಿಯಮಾನುಸಾರ ಜಮೀನಿನ ಖರೀದಿಗೆ ಅವಕಾಶ ಕಲ್ಪಿಸುವುದು.
5) ಸ್ಮಶಾನ ಅಭಿವೃದ್ಧಿ.
6) ಆಂತರಿಕ ರಸ್ತೆಗಳ ಮತ್ತು ಚರಂಡಿಗಳ ನಿರ್ಮಾಣ. (ಮಣ್ಣಿನ ರಸ್ತೆ ಹಾಗೂ ಕಲ್ಲು ಕಟ್ಟಡದ ಚರಂಡಿಗಳ ನಿರ್ಮಾಣಕ್ಕೆ ಅವಕಾಶವಿಲ್ಲ) ಧೀರ್ಘಕಾಲ ಬಾಳಿಕೆ ಬರುವ ಸಿಮೆಂಟ್ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ಒತ್ತು ನೀಡುವುದು.
7) ಸ್ಥಳೀಯ ಸಂಸ್ಥೆಗಳು ಯಾವುದಾದರು ಸಾಲವನ್ನು ಹೊಂದಿದ್ದಲ್ಲ ಅದರ ಮರುಪಾವತಿಗೆ ಅವಕಾಶ ಕಲ್ಪಿಸತಕ್ಕದ್ದು.
8) ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಯೋಜನಾ ವೆಚ್ಚದ ಶೇಕಡ 10 ರಷ್ಟನ್ನು ಸ್ಥಳೀಯ ಸಂಸ್ಥೆಯ ವಂತಿಕೆಯಾಗಿ ಪ್ರತ್ಯೇಕವಾದ ಖಾತೆಗೆ ಜಮೆ ಮಾಡತಕ್ಕದ್ದು.
9) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗಧಿಪಡಿಸಿರುವ ಮಾನದಂಡಗಳಂತೆ ಕೊಳಚೆ ನೀರು ಸಂಸ್ಕರಣೆ ಮಾಡಲು ಅವಶ್ಯವಿರುವ ಆಧುನಿಕ ಸೌಲಭ್ಯಗಳನ್ನು ಕಲ್ಪಿಸುವುದು ಹಾಗೂ ಸಂಸ್ಕರಣೆಗಾಗಿ EM ದ್ರಾವಣ ಅಥವಾ Micro bial ತಂತ್ರಜ್ಞಾನ ಬಳಸಲು ಕ್ರಮ ಕೈಗೊಳ್ಳುವುದು.
10) ಇತರೆ ಬಾಬ್ತು/ಯೋಜನೆಗಳಲ್ಲಿ ಇರುವ ಕೊರತೆಯನ್ನು (Short fall/viability gap funding) ಸರಿಪಡಿಸಿಲು ಉಪಯೋಗಿಸತಕ್ಕದ್ದು.
11) ಈ ಮೇಲ್ಕಂಡ ಯೋಜನೆಗಳು ಪೌರ ಸಂಸ್ಥೆಗಳಲ್ಲ ಪರಿಪೂರ್ಣವಾಗಿದ್ದಾಗ ಮಾತ್ರ ಜಿಲ್ಲಾಧಿಕಾರಿಗಳ ಪೂರ್ವ ಅನುಮತಿ ಪಡೆದು ಬೇರೆ ಯೋಜನೆಗಳಿಗೆ ಅನುದಾನ ವರ್ಗಾಯಿಸಿಕೊಳ್ಳಬಹುದು.

---4

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

-4-

ಮೇಲಿನ ಕಂಡಿಕೆ (A) ಮತ್ತು (B) ಯಲ್ಲಿ ಸೂಚಿಸಿರುವ ಕಾಮಗಾರಿಗಳನ್ನು ಕೈಗೊಳ್ಳುವಾಗ ಬಡ ಜನರು ವಾಸಿಸುವ ಪ್ರದೇಶ ಮತ್ತು ಕೊಳಚೆ ಪ್ರದೇಶಗಳಲ್ಲಿ ಈ ಕಾರ್ಯ ಚಟುವಟಿಕೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಅಳವಡಿಸಿಕೊಳ್ಳತಕ್ಕದ್ದು. ಅಲ್ಲದೆ ಬಡವರು ಹೆಚ್ಚಾಗಿ ವಾಸಿಸುತ್ತಿರುವ ಬಡಾವಣೆಗಳಲ್ಲಿ/ಕೊಳಚೆ ಪ್ರದೇಶಗಳಲ್ಲಿ ನಾಗರೀಕ ಮೂಲ ಸೌಕರ್ಯ ಮತ್ತು ಸೇವೆಗಳನ್ನು ಸಮಗ್ರವಾಗಿ ಒದಗಿಸಲು ಕಾರ್ಯಕ್ರಮ ಹಮ್ಮಿಕೊಳ್ಳತಕ್ಕದ್ದು.

ಈ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಾಗ ವೆಚ್ಚವು ಶೇಕಡಾ 20ಕ್ಕಿಂತ ಕಡಿಮೆ ಇಲ್ಲದಂತೆ ನಿಗಧಿಗೊಳಿಸಿ. ಈ ಸೌಲಭ್ಯವನ್ನು ಸಮುದಾಯದ ಬಡ ವರ್ಗದ ಜನರಿಗೆ ಒದಗಿಸುವಂತೆ ಸೂಚಿಸಿದೆ.

ಮೇಲೆ ನಿಗಧಿಪಡಿಸಿರುವ ಮಾರ್ಗಸೂಚಿಗಳು / ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಂಡು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಯೋಜನೆಯ ಅನುಷ್ಠಾನಕ್ಕೆ ಅವಶ್ಯ ಕ್ರಮಗಳನ್ನು ಕೈಗೊಂಡು ಪೂರ್ಣಗೊಳಿಸಿದಾಗುವ ಸಂಪೂರ್ಣ ಅನುದಾನವನ್ನು ವರ್ಷಾಂತ್ಯದ ಒಳಗೆ ಕಡ್ಡಾಯವಾಗಿ ಬಳಕೆ ಮಾಡಿಕೊಳ್ಳತಕ್ಕದ್ದು.

ಇದಕ್ಕೆ ವ್ಯತಿರಿಕ್ತವಾಗಿ ಕಾರ್ಯನಿರ್ವಹಿಸಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ವಿಶೇಷ ಸೂಚನೆ:- ಆರಂಭಿಕ ಶಿಲ್ಕನ್ನು ಒಳಗೊಂಡಂತೆ ಶೇ.75ರಷ್ಟು ಪ್ರಗತಿ ಸಾಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಮಾತ್ರ ಮುಂದಿನ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು. ಹಣ ಬಳಕೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ, ಜಿಲ್ಲಾಧಿಕಾರಿ ಮೇಲು ಸಹಿಯೊಂದಿಗೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಕೆ.ಎಸ್. ಭಾಗ್ಯಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪ್ರತಿಯನ್ನು :

1) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
2) ಎಲ್ಲಾ ಜಿಲ್ಲಾಧಿಕಾರಿಗಳು. ಪೌರಾಡಳಿತ ನಿರ್ದೇಶನಾಲಯದ ಮುಖಾಂತರ.
3) ಎಲ್ಲಾ ಮಹಾನಗರಪಾಲಿಕೆಗಳ ಆಯುಕ್ತರು. ಪೌರಾಡಳಿತ ನಿರ್ದೇಶನಾಲಯದ ಮುಖಾಂತರ.
4) ಎಲ್ಲಾ ನಗರಸಭೆಗಳ ಪೌರಾಯುಕ್ತರು/ಮುಖ್ಯಾಧಿಕಾರಿಗಳು/ಎಲ್ಲಾ ಪುರಸಭೆ/ಪಟ್ಟಣ ಪಂಚಾಯತಿಗಳು ಪೌರಾಡಳಿತ ನಿರ್ದೇಶನಾಲಯದ ಮುಖಾಂತರ.
5) ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
6) ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ.
7) ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಆಪ್ತ ಕಾರ್ಯದರ್ಶಿ.
8) ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರ ಆಪ್ತ ಸಹಾಯಕರು
9) ಉಪ ಕಾರ್ಯದರ್ಶಿ ಮತ್ತು ಜಂಟಿ ನಿರ್ದೇಶಕರು(ಯೋಜನೆ), ನಗರಾಭಿವೃದ್ಧಿ ಇಲಾಖೆ
10) ಜಂಟಿ ನಿರ್ದೇಶಕರು (ಆಡಳಿತ), ಜಂಟಿ ನಿರ್ದೇಶಕರು (ಅಭಿವೃದ್ಧಿ), ಜಂಟಿ ನಿರ್ದೇಶಕರು (ಹಣಕಾಸು) ಮತ್ತು ಅಧೀಕ್ಷಕ ಅಭಿಯಂತರರು. ಪೌರಾಡಳಿತ ನಿರ್ದೇಶನಾಲಯ.
11) ಶಾಖಾ ರಕ್ಷಕ ಕಡತ
12) ಹೆಚ್ಚುವರಿ ಪ್ರತಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Workwise Progress of SFC UNTIED 2021-22 Report

ಅನುಬಂಧ-3

Rs. in Lakhs

S.No	DistrictName	UlbName	Sector Name	Work Name	Estimate Cost	Expenditure Cost	Work Status
1	Chikkaballapur	Bagepalli	Burial Ground	7.25 solar Street light for Muslim Burial Ground Bagepalli	1.52	1.40	Work Completed
2	Dakshina kannada	Mangaluru	Burial Ground	ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಿ.ನಂ.13 ಕುಂಜತ್ತಬೈಲ್ ಉತ್ತರ ವಾರ್ಡಿನಲ್ಲಿ ಬರುವ ಜ್ಯೋತಿ ನಗರದಲ್ಲಿ ಸಾರ್ವಜನಿಕ ಹಿಂದೂ ರುದ್ರ ಭೂಮಿಯ ಅಭಿವೃದ್ಧಿ ಕಾಮಗಾರಿ (Plo No. 123178)	12.80	10.97	Work Completed
3	Dakshina kannada	Mangaluru	Burial Ground	ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಿ.ನಂ.18ನೇ ಕಾವೂರು ವಾರ್ಡಿನ ಆಕಾಶಭವನ ಪರಿಶಿಷ್ಟ ಜಾತಿಗೆ ಮೀಸಲಿಟ್ಟ ಸ್ಮಶಾನದ ದಫನ ಮಾಡುವ ಕಟ್ಟಡದ ಛಾವಣಿಗೆ ಶೀಟ್ ಅಳವಡಿಕೆ ಹಾಗೂ ವಿಶ್ರಾಂತಿ ಕೊಠಡಿಗೆ ಕಿಟಕಿ ಬಾಗಿಲು ಅಳವಡಿಸಿ ಅಭಿವೃದ್ಧಿ ಕಾಮಗಾರಿ (Plo No.121448)	5.00	3.89	Work Completed
4	Raichur	Sindanoor	Burial Ground	ಸಿಂಧನೂರು ನಗರದ ಹಿರೇ ಹಳ್ಳದ ಮಾಧ್ಯದಲ್ಲಿರುವ (ರೇಣುಕಾಶ್ರಮ ಪಕ್ಕದಲ್ಲಿ) ಸಾರ್ವಜನಿಕ ಸ್ಮಶಾನದಲ್ಲಿ ಬೋರವೆಲ್ ಕೊರೆದು ಹ್ಯಾಂಡ್ ಪಂಪ್ ಅಳವಡಿಸುವ ಕಾಮಗಾರಿ	1.00	0.99	Work Completed
5	Vijapura	Indi	Burial Ground	Ward no 21 Implemention of burial ground	1.00	1.00	Work Completed
6	Vijapura	Vijapura	Burial Ground	2:WARD NO 13 DEVELOPMENT OF SC GRARE YARD OPPOSITE TO MAJID IN INDI ROAD	13.33	13.33	Work Completed
7	Vijapura	Vijapura	Burial Ground	3:WARD NO 17 DEVELOPMENT OF SC GRARE YARD IN ALLAPUR ONI	20.00	0.00	Work Completed
8	Yadgir	Yadgir	Burial Ground	Providing seats to SC community Gravy Yard in Ward No 20 in Yadgiri City	1.94	1.28	Work Completed
				TOTAL	56.59	32.86	

Workwise Progress of SFC UNTIED 2022-23 Report

Rs. in Lakhs

S.No	DistrictName	UlbName	Sector Name	Work Name	Estimate Cost	Expenditure Cost	Work Status
1	Bidar	Bidar	Burial Ground	Construction of Compound wall to ST Grave Yard at Chidri in Ward No. 23	8.00	0.00	Work Started
2	Dharwad	Alnavara	Burial Ground	Development of Muslim samaj burial ground	4.00	4.00	Work Completed
3	Mandya	Malavalli	Burial Ground	Construction of Compound to Public Graveyard in Thammadahalli Road of Malavalli TMC Limits	5.00	4.58	Work Completed
4	Mysuru	Rammanahalli	Burial Ground	Construction of compound wall to Veerashaiva Lingayat burial ground at Alanahalli Village	12.25	11.02	Work Completed
5	Mysuru	T.Narasipura	Burial Ground	Construction of Shelter at Alagudu SC Burial Ground in TMC TNarasipura Limits	5.28	1.87	Work Completed
6	Vijapura	Vijapura	Burial Ground	2020-21 ನೇ ಸಾಲಿನ ಮುಂದುವರೆದ ಕಾಮಗಾರಿ ವಾರ್ಡ ನಂ-17 ಅಲ್ಲಾಪುರ ಒಣಿ ಪ.ಜಾತಿಯ ಸ್ಮಶಾನ ಅಭಿವೃದ್ಧಿ ಪಡಿಸಿವುದು ಮುಂದುವರೆದ ಭಾಗ	13.37	0.00	Work Completed
7	Vijayanagara	Kudligi	Burial Ground	Construction of Room for Muslim Burial ground to store equipment's in Kotturu road	3.13	0.00	Work Started
				TOTAL	51.03	21.47	

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Workwise Progress of SFC UNTIED 2023-24 Report

S.No	DistrictName	UlbName	Sector Name	Work Name	Rs. in Lakhs Estimate Cost	Expenditure Cost	Work Status
1	Belagavi	Kudachi	Burial Ground	Development of ST Burual Ground	0.85	0.30	Work Completed
2	Belagavi	Ugar Khurd	Burial Ground	Development of Burial Ground of SC community in ward no 9	2.76	1.75	Work Started
3	Chamarajanagara	Gundlupete	Burial Ground	Development of Burial Ground at Ward no 10 Chamarajanagara Road	15.00	0.00	Under Tender Process
4	Dharwad	Alnavara	Burial Ground	Construction of Shed at Tilakanagar veerashiava Smashan burial machine	5.00	4.73	Work Completed
5	Kalaburagi	Aland	Burial Ground	Construction of Compound Wall For Graveyard at W no 7	5.00	0.00	Work Started
6	Mysuru	Kadakola	Burial Ground	ಕಡಕೊಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಮಂಡಕಳ್ಳಿ ಗ್ರಾಮದ ಕುರುಬ ಸಮುದಾಯದ ಸ್ಮಶಾನ ಅಭಿವೃದ್ಧಿ ಕಾಮಗಾರಿ	4.26	4.24	Work Started
7	Mysuru	Rammanahalli	Burial Ground	ಪಟ್ಟಣ ಪಂಚಾಯಿತಿ ವ್ಯಾಪ್ತಿಯ ನಾಡನಹಳ್ಳಿ ಪರಿಶಿಷ್ಟ ಜಾತಿಯವರ ಸ್ಮಶಾನದಲ್ಲಿ ನೀರಿನ ವ್ಯವಸ್ಥೆ ಕಲ್ಪಿಸುವುದು ಮತ್ತು ಸ್ಮಶಾನ ಅಭಿವೃದ್ಧಿಪಡಿಸುವುದು.	9.60	9.60	Work Completed
8	Mysuru	T.Narasipura	Burial Ground	ತಿ.ನರಸೀಪುರ ಪುರಸಭೆ ವ್ಯಾಪ್ತಿಯಲ್ಲಿ ಮಲೀನ ನೀರು ಶುದ್ಧೀಕರಣ ಘಟಕದ ಎದುರುಗಡೆ ಇರುವ ಸಾರ್ವಜನಿಕ ಸ್ಮಶಾನದಲ್ಲಿ ಶೆಡ್ ನಿರ್ಮಾಣ ಕಾಮಗಾರಿ	4.58	0.00	Under Tender Process
9	Mysuru	T.Narasipura	Burial Ground	ತಿ.ನರಸೀಪುರ ಪುರಸಭೆ ವ್ಯಾಪ್ತಿಯ ವಾರ್ಡ್ ನಂ 07ರ ಆರ್ಯ ಮಹಲ್ ಎದುರುಗಡೆ ಇರುವ ತ್ರಿವೇಣಿನಗರದ ಪರಿಶಿಷ್ಟ ಜಾತಿಯ ಸ್ಮಶಾನ ಅಭಿವೃದ್ಧಿ ಮುಂದುವರೆದ ಕಾಮಗಾರಿ	1.30	0.35	Work Started
10	Mysuru	T.Narasipura	Burial Ground	ತಿ.ನರಸೀಪುರ ಪುರಸಭೆ ವ್ಯಾಪ್ತಿಯಲ್ಲಿನ ಚೌಹಳ್ಳಿ ರಸ್ತೆಯ ಎಸ್ ಟಿ ಪಿ ಲ್ಯಾಂಡ್ ಎದುರುಗಡೆ ಇರುವ ಸಾರ್ವಜನಿಕ ಸ್ಮಶಾನ ಅಭಿವೃದ್ಧಿ	30.00	25.42	Work Completed
11	Mysuru	T.Narasipura	Burial Ground	ತಿ.ನರಸೀಪುರ ಪುರಸಭೆ ವ್ಯಾಪ್ತಿಯ ವಾರ್ಡ್ ನಂ 7ರ ಆರ್ಯಮಹಲ್ ಎದುರುಗಡೆ ಇರುವ ತ್ರಿವೇಣಿನಗರದ ಪರಿಶಿಷ್ಟ ಜಾತಿಯ ಸ್ಮಶಾನ ಅಭಿವೃದ್ಧಿ ಕಾಮಗಾರಿ	6.95	5.65	Work Completed
12	Yadgir	Shahapura	Burial Ground	Construction of Grave yard compound wall for SC community people at ward no 2 in Shahapur city	1.38	1.03	Work Completed
				TOTAL	39.63	32.44	

Workwise Progress of SFC UNTIED 2024-25 Report

S.No	DistrictName	UlbName	Sector Name	Work Name	Rs. in Lakhs Estimate Cost	Expenditure Cost	Work Status
1	Chamarajanagara	Hannur	Burial Ground	Compound construction work in Scheduled Caste Cemetery in Ward No. 11 of Hanur town.	2.75	0.00	Under Tender Process
2	Chamarajanagara	Hannur	Burial Ground	Compound construction work in the Muslim cemetery in Ward No. 13 of Hanur town	2.76	0.00	Under Tender Process
3	Kalaburagi	Kalaburagi	Burial Ground	Improvement of Graveyard in Ward No.12 of Kalaburagi city.	24.00	0.00	Work Started
4	Mysuru	Kadakola	Burial Ground	ಕಡಗೊಳ ಪಟ್ಟಣ ಪಂಚಾಯಿತಿಯ ಮಂಡಕಳ್ಳಿ ಗ್ರಾಮದ ಕುಂಬಾರ ಜನಾಂಗದ ಸ್ಮಶಾನದ ಅಭಿವೃದ್ಧಿ ಕಾಮಗಾರಿ (ಮುಂದುವರಿದ ಕಾಮಗಾರಿ)	3.54	0.00	Under Tender Process
5	Mysuru	Kadakola	Burial Ground	ಕಡಗೊಳ ಪಟ್ಟಣ ಪಂಚಾಯಿತಿ ಮಂಡಕಳ್ಳಿ ಗ್ರಾಮದಲ್ಲಿ ವ್ಯಾಪ್ತಿಯ ಸ್ಮಶಾನ ಅಭಿವೃದ್ಧಿ ಕಾಮಗಾರಿ (ಮುಂದುವರಿದ ಕಾಮಗಾರಿ)	6.92	0.00	Work Started
6	Mysuru	Rammanahalli	Burial Ground	ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ರಮ್ಮನಹಳ್ಳಿ ಹಾಗೂ ಅಲನಹಳ್ಳಿ ಸ್ಮಶಾನ ಅಭಿವೃದ್ಧಿ ಕಾಮಗಾರಿ	9.60	0.00	Work Started
7	Mysuru	Rammanahalli	Burial Ground	ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ರಮ್ಮನಹಳ್ಳಿಯಲ್ಲಿ ನಾಯಕರ ಸ್ಮಶಾನ ಅಭಿವೃದ್ಧಿ ಮುಂದುವರೆದ ಕಾಮಗಾರಿ	3.84	0.00	Work Completed
8	Uttara Kannada	Haliyala	Burial Ground	Installation of silicon chamber for cremation in Hindu crematorium on the left side of the fish Market road.	4.02	4.02	Work Completed
9	Yadgir	Yadgir	Burial Ground	Developing of Walmiki Community Burial Ground (Chairs and Plantation) in Yadgir City.	2.00	0.00	Work Started
				TOTAL	59.43	4.02	

ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಪ್ರಸ್ತುತ ರಾಜ್ಯದ ವಿವಿಧ ನಗರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಳೀಯ ಸಂಸ್ಥೆಗಳ (ನಗರ ಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ) ವ್ಯಾಪ್ತಿಯಲ್ಲಿರುವ ಸಾರ್ವಜನಿಕ ಸ್ಮಶಾನಗಳು ಮತ್ತು ವಿದ್ಯುತ್ ಚಿತಾಗಾರಗಳು ಎಷ್ಟಿವೆ ಎಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಅವರು ಸುಮಾರು 2,346 ಸಾರ್ವಜನಿಕ ಸ್ಮಶಾನಗಳು ಹಾಗೂ 15 ವಿದ್ಯುತ್ ಚಿತಾಗಾರಗಳು ಇರುತ್ತವೆ ಎಂದು ಹೇಳಿದ್ದಾರೆ. ಆದರೆ ಇಡೀ ರಾಜ್ಯದಲ್ಲಿ ಹಳ್ಳಿಗಾಡಿನಲ್ಲೂ ಸೇರಿದರೆ 50,000 ಕ್ಕಿಂತ ಹೆಚ್ಚಿನ ಸಾರ್ವಜನಿಕ ಸ್ಮಶಾನಗಳಿವೆ. ಇವತ್ತು ಚಿತಾಗಾರದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು ಯಾರೂ ಕೂಡ ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಸಾರ್ವಜನಿಕ ಸ್ಮಶಾನ, ಚಿತಾಗಾರಗಳಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಆದರೆ ಮಾನ್ಯ ಸಚಿವರು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಸ್ಮಶಾನ/ಚಿತಾಗಾರಗಳಲ್ಲಿ ಕರ್ತವ್ಯ ನಿರ್ವಹಿಸಲು ಯಾವುದೇ ಹುದ್ದೆ ಮಂಜೂರಾಗಿರುವುದಿಲ್ಲವಾದ್ದರಿಂದ ಉದ್ಭವಿಸುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಸಾರ್ವಜನಿಕ ಸ್ಮಶಾನಗಳಲ್ಲಿ ಕೋವಿಡ್-19 ಸಂದರ್ಭದಲ್ಲೂ ಕೂಡ ಈ ಕಾರ್ಮಿಕರು ಸಹಾಯಕ್ಕೆ ಬಂದಿದ್ದಾರೆ. ಇವತ್ತಿನದಿವಸ ಹುದ್ದೆಗಳನ್ನು ಮಂಜೂರು ಮಾಡಿ ಅವರಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ರಹೀಂಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):- ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಲಾಗಿದೆ. ಆದರೂ ಕೂಡ ಸಾರ್ವಜನಿಕ ಸ್ಮಶಾನಗಳಲ್ಲಿ daily wages workers ಆಗಲೀ ಮತ್ತು Local Body ಯಲ್ಲಿ ಬೇರೆ ರೀತಿಯಿಂದ ಮಾಡುತ್ತಾರೆ. ಆದರೆ ಸರ್ಕಾರದಿಂದ ಇಲ್ಲಿಯವರೆಗೂ ಅದಕ್ಕೆ ಯಾವುದೇ ಹುದ್ದೆಗಳನ್ನು ಮಂಜೂರು ಮಾಡಿಲ್ಲ. ಆದರೂ ಕೂಡ ಮಾನ್ಯ ಶಾಸಕರು ಹೇಳಿದ್ದಾರೆ. ಇದರ ಬಗ್ಗೆ ನಾನು ಅವರ ಜೊತೆಗೆ ಚರ್ಚೆ ಮಾಡಿ, future plan ಮಾಡಿಕೊಂಡು ಅವರಿಗೆ permit ಮಾಡುವುದಕ್ಕೆ ಮತ್ತು daily wages ಮಾಡುವುದಕ್ಕೆ ಅಲ್ಲಿ ಯಾರು responsibility ಯನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡುತ್ತೇನೆ.

ಶ್ರೀ ಮಧು ಜಿ. ಮಾದೇಗೌಡ:- ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಸ್ಮಶಾನದಲ್ಲಿರತಕ್ಕಂಥ ಕಾರ್ಮಿಕರನ್ನು ಯಾರೂ ಕೂಡ ಗುರುತಿಸುತ್ತಿಲ್ಲ. ಅವರಿಗೆ ಯಾವುದೇ ರೀತಿಯ ಸೌಲಭ್ಯಗಳು ಕೂಡ ಸಿಗುತ್ತಿಲ್ಲ. ಅವರಿಗೆ ವಿಳಾಸದ ದೃಢೀಕರಣ ಪತ್ರ ಕೂಡ ಸಿಗುತ್ತಿಲ್ಲ. ಅವರು ವಾಸ ಮಾಡುವುದಕ್ಕೂ ಕೂಡ ಒಂದು ಮನೆ ಇಲ್ಲ. ಆದ್ದರಿಂದ ಅವರನ್ನು ಗುರುತಿಸುವಂತಹ ಕೆಲಸ ಆಗಬೇಕು ಮತ್ತು ಅವರ ಮಕ್ಕಳಿಗೆ ಉಚಿತವಾದ ಶಿಕ್ಷಣವನ್ನು ಕೊಡುವಂಥ ಕೆಲಸ ಆಗಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ರಹೀಂಖಾನ್:- ಮಾನ್ಯ ಸಭಾಪತಿಯವರೇ, future action plan ಮಾಡಿ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು : ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 606

ಉತ್ತರಿಸ ಬೇಕಾದ ದಿನಾಂಕ : 11.03.2025

ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ	ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಆಕರಿಸುವ ಮಾರುಕಟ್ಟೆ ಶುಲ್ಕ ಹಾಗೂ ಬಳಕೆದಾರರ ಶುಲ್ಕದಲ್ಲಿ ಬದ್ಧ ವೆಚ್ಚಗಳನ್ನು (Committed Expenditure) ಕಳೆದು ಉಳಿಕೆ ಆಗುವ ಮೊತ್ತದಲ್ಲಿ ಮಾರುಕಟ್ಟೆ ಪ್ರಾಂಗಣದಲ್ಲಿ ಅವಶ್ಯವಿರುವ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ಚರಂಡಿ, ಶೌಚಾಲಯ, ರೈತಭವನ, ಮುಚ್ಚು ಹರಾಜು ಕಟ್ಟೆ, ಗೋದಾಮು, ಮಳಿಗೆ, ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಗ್ರಾಮೀಣ ಮಾರುಕಟ್ಟೆಗಳ ಅಭಿವೃದ್ಧಿ - ನಬಾರ್ಡ್ ಕಾಮಗಾರಿಗಳ ಯೋಜನೆಯಡಿ ಈ ಕೆಳಕಂಡಂತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಕಾಮಗಾರಿಗಳ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ. • ಆರ್.ಐ.ಡಿ.ಎಫ್-28 ರಡಿ 18 ಕಾಮಗಾರಿಗಳನ್ನು ಅಂದಾಜು ರೂ.179.13 ಕೋಟಿ ವೆಚ್ಚದಲ್ಲಿ ಕೈಗೊಂಡಿದ್ದು, 06 ಕಾಮಗಾರಿಗಳು ಪೂರ್ಣ ಗೊಂಡಿರುತ್ತವೆ. 11 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಒಂದು ಕಾಮಗಾರಿಯನ್ನು ಕೈಬಿಡಲಾಗಿರುತ್ತದೆ. • ಆರ್.ಐ.ಡಿ.ಎಫ್-29ರಡಿ 70 ಕಾಮಗಾರಿಗಳನ್ನು ಅಂದಾಜು ರೂ.210.00 ಕೋಟಿ ವೆಚ್ಚದಲ್ಲಿ ಕೈಗೊಂಡಿದ್ದು, 28 ಕಾಮಗಾರಿಗಳು ಪೂರ್ಣ ಗೊಂಡಿರುತ್ತವೆ. ಉಳಿದ 42 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. • ಆರ್.ಐ.ಡಿ.ಎಫ್-30ರಡಿ 10 ಕಾಮಗಾರಿಗಳನ್ನು ಅಂದಾಜು ರೂ.144.75 ಕೋಟಿ ವೆಚ್ಚದಲ್ಲಿ ಕೈಗೊಂಡಿದ್ದು, ಟೆಂಡರ್ ಕರೆಯಲಾಗಿರುತ್ತದೆ. 2024-25ರ ಆಯವ್ಯಯ ಘೋಷಣೆಯಲ್ಲಿ ಘೋಷಿಸಲಾದ ಈ ಕೆಳಕಂಡ ಯೋಜನೆ/ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ :- 1. ಕಂಡಿಕೆ-44 :- ರಾಜ್ಯದಲ್ಲಿ 40,000 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿರುವ ಪುಷ್ಪ ಬೆಳೆಗಳ ಮಾರಾಟ ಮತ್ತು ರಫ್ತನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		7. ಕಂಡಿಕೆ-69(6) :- ಎ.ಪಿ.ಎಂ.ಸಿ.ಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುವ ಕುರಿತಂತೆ ನೋಡಲ್ ಏಜೆನ್ಸಿಯಾದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಬೆಂಗಳೂರು ಇವರಿಗೆ ಸಮಿತಿಗಳ ಮಾಹಿತಿಯನ್ನು ಈಗಾಗಲೇ ನೀಡಲಾಗಿದ್ದು, ಬೆಸ್ಕಾಂ ವತಿಯಿಂದ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. 8. ಕಂಡಿಕೆ-71 :- ರಾಜ್ಯದಲ್ಲಿ ಕಬ್ಬು ಬೆಳೆಗಾರರ ಹಿತ ಕಾಯಲು ಮತ್ತು ತೂಕದಲ್ಲಾಗುವ ಮೋಸ ತಡೆಗಟ್ಟಲು ಎಲ್ಲಾ ಸಕ್ಕರೆ ಕಾರ್ಖಾನೆಗಳ ಬಳಿ ತೂಕದಯಂತ್ರಗಳನ್ನು ಎ.ಪಿ.ಎಂ.ಸಿ.ಗಳ ಮೂಲಕ ಸ್ಥಾಪಿಸಲಾಗುವುದೆಂಬ ಘೋಷಣೆಗೆ ಸಂಬಂಧಿಸಿದಂತೆ ಆಯ್ದ 14 ಸ್ಥಳಗಳಲ್ಲಿ ತೂಕದ ಯಂತ್ರ ಸ್ಥಾಪಿಸಲು ಟೆಂಡರ್ ಕರೆಯಲಾಗಿರುತ್ತದೆ.
ಆ	ಹೊಸ ಶೀತಲಗೃಹಗಳನ್ನು ನಿರ್ಮಿಸುವ ಯೋಜನೆಯಡಿಯಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಹೊಸದಾಗಿ ನಿರ್ಮಿಸಲು ಮುಂದಾಗಿದೆ;	RIDF-29ರಡಿ 1) ಬ್ಯಾಡಗಿ, 2) ವಿಜಯಪುರ (ಬಸವನಬಾಗೇವಾಡಿ ಮತ್ತು ದ್ರಾಕ್ಷಿ ಬೆಳೆಗಾರರ ಸಂಘದ ಜಾಗ), 3) ಯಲಬುರ್ಗಾ (ಕುಕನೂರು ಮಾರುಕಟ್ಟೆ ಪ್ರಾಂಗಣದಲ್ಲಿ) ಶೀತಲ ಗೃಹ ಸ್ಥಾಪಿಸಲು ಕ್ರಮವಹಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. RIDF-30 ರಡಿ 1) ಬೆಳಗಾವಿ, 2) ಗದಗ, 3) ಮೈಸೂರು, 4) ರಾಣೇಬೆನ್ನೂರು (ಮೆಗಾ ಮಾರುಕಟ್ಟೆ- 3 ಸಂಖ್ಯೆ), 5) ತುಮಕೂರು, 6) ಸಿರಾ (ಮನಂಗಿ ಉಪ ಪ್ರಾಂಗಣ), 7) ಗುಂಡ್ಲುಪೇಟೆ, 8) ಬಳ್ಳಾರಿ ಮತ್ತು 9) ಯಲಬುರ್ಗಾ (ಚಿಕ್ಕೊಪ್ಪ ಉಪ ಪ್ರಾಂಗಣ) ಗಳಲ್ಲಿ ಶೀತಲ ಗೃಹ ಸ್ಥಾಪಿಸಲು ಟೆಂಡರ್ ಕರೆಯಲಾಗಿರುತ್ತದೆ.
ಇ	ಇದಕ್ಕಾಗಿ ಕಳೆದ ಎರಡು ವರ್ಷಗಳಲ್ಲಿ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿದೆ?	ಗ್ರಾಮೀಣ ಮಾರುಕಟ್ಟೆಗಳ ಅಭಿವೃದ್ಧಿ-ನಬಾರ್ಡ್ ಕಾಮಗಾರಿಗಳು ಯೋಜನೆಯಡಿ ಆಯವ್ಯಯ ಅವಕಾಶ ಕಲ್ಪಿಸಿದ, ಬಿಡುಗಡೆ ಮಾಡಿದ ವಿವರ ಈ ಕೆಳಕಂಡಂತಿದೆ :- (ರೂ. ಲಕ್ಷಗಳಲ್ಲಿ)

ಕ್ರ. ಸಂ.	ಆರ್ಥಿಕ ವರ್ಷ	ಆಯವ್ಯಯ ಅವಕಾಶ	ಬಿಡುಗಡೆ ಮಾಡಿದ ಮೊತ್ತ
1	2023-24	3000.00	3000.00
2	2024-25	11365.20	11365.20

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

DEPARTMENT OF AGRICULTURAL MARKETING

Annexure-I

RIDF 28, RIDF-29 & RIDF-30 PROJECTS

Sl. No.	Name of the Project	Taluk	Project Cost	Work Status
	RIDF - 28			
1	Construction of Shop cum Godown, Concrete Road and RCC Drain at Main Market Yard & Construction of Compound wall West side, Internal C.C.Road and Drain at Chikkanayakanahalli Sub Market Yard at APMC Huliyar	Huliyar	673.00	Physically Completed
2	Infrastructure facilities at Nayakana Santhe of APMC Challakere	Challakere	1000.00	Work under progress
3	Infrastructure facilities at Main Market Yard of APMC Holalkere	Holalkere	500.00	Work under progress
4	Construction of CC & BT roads, drains and shops in MMY of APMC Yeshwanthapura	Yeshwanthapura	1000.00	Work under progress
5	Construction of covered auction platform in shandy maidana, construction of commercial shops in MMY, Construction of rural godowns in dfferent villages of Shikaripura Taluk	Shikaripura	1550.00	Work under progress
6	Construction of Retaining wall, CC Road and Drain in Main Market Yard of APMC Sulya	Sulya	500.00	Physically Completed
7	Construction of covered auction platform, CC Road, Asphalt Road, CC drain, Office building and Toilet block for cotton Market at Begur Sub Market yard of APMC Gundlupet	Gundlupete	600.00	Work under progress
8	Construction of CC & BT Roads, drains, UGD lines, covered auction platforms and canteen building at B block, Vegetable and fruits market in MMY of APMC Mysore	Mysore	3000.00	Work under progress
9	Construction of CC Road, Drain & Compound wall at Vegetable Market yard in Main Market Yard of APMC Bagalkote	Bagalkot	1000.00	Physically Completed
10	Construction of CC Road, RCC Drain and Shops at Masur Sub Market yard of APMC Hirekerur	Hirekerur	200.00	Physically Completed
11	Infrastructure facilities at Main Market Yard of APMC Savanur	Savanur	500.00	Dropped
12	Construction of CC Road and RCC drain to main market yard of APMC at Hubbali	Hubbali	1190.00	Work under progress
13	Construction of CC Road, CD drain and Shops at main market yard and Hulgur sub market yard of APMC Shiggaon	Shiggaon	1000.00	Work under progress
14	Construction of CC Road, Drain and Culvert at B block in Main Market Yard of APMC Gangavathi	Gangavathi	500.00	Physically Completed
15	Providing infrastructure facilities (CC Road, Drain & CAP) at main market yard of APMC Bellary	Bellary	1000.00	Physically Completed
16	Construction of Shop cum Godowns, covered auction platform, office building and canteen building at Gonakanahalli Market yard of APMC HoskoteMarket Yard at APMC Hoskote	Hoskote	2300.00	Work under progress
17	Construction of CC & BT road, RCC drain and electrifications works Gonakanahalli Market yard of APMC Hoskote	Hoskote	700.00	Work under progress

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Sl. No.	Name of the Project	Taluk	Project Cost	Work Status
18	Construction of Shops, covered auction platforms and UGD at Fruit Market and Binnymill market of APMC Binnipete	F&V Binnipete	700.00	Work under progress
	RIDF - 28 TOTAL		**17913.00**	

RIDF - 29				
1	Construction of BT Road, RCC Drain,, Yard Electrification & Water Supply work at Main market yard of Yaragatti APMC	Yaragatti	250.00	Work under progress
2	Construction of C.C.Road and RCC drain at MMY and BT Road and RCC drain at SMY Kittur of APMC Bailhongala	Bailhongala	250.00	Work under progress
3	Construction of C.C.Road and RCC drain and Compound wall at SMY Kagawada of APMC Athani	Athani	250.00	Work under progress
4	*Construction of C.C.Road, RCC drain and Covered* Auction Platform at Vegetable Market Yard of APMC Koppal	Koppal	250.00	Work under progress
5	Construction of C.C.Road, drain and Compound wall in Hirebagewadi sub market yard of APMC Belagavi	Belagavi	600.00	Work under progress
6	Construction of C.C.Road and RCC drain at MMY of APMC Davanagere	Davanagere	300.00	Physically Completed
7	Construction of C.C.Road, RCC drain and Toilet block at Main market yard of APMC Karwara	Karwara	250.00	Work under progress
8	Construction of C.C.Platform and RCC drain in Fruits and Vegetable Market in MMY of APMC Shahapura	Shahapura	300.00	Physically Completed
9	Construction of CC Road, RCC Drain, 2 No CAP, 2 No. of 500 MT capacity Godowns and 1 OHT at Srirampura Sub Market yard of APMC Hosadurga	Hosadurga	250.00	Work under progress
10	Construction of CC Road, RCC drain and voered Auction platform at MMY of APMC Honnali	Honnali	150.00	Physically Completed
11	Construction of RCC drain and 2 Covered Auction Platform at MMY of APMC Jagalur	Jagalur	150.00	Physically Completed
12	Construction of 5 shop cum Godown, Canteen & RCC Drain at SMY Santhebenbur of APMC Channagiri	Channagiri	250.00	Physically Completed
13	Construction of CC Road, RCC drain, CAP & Compound wall at MMY of APMC Karkala	Karkala	250.00	Work under progress
14	Construction of 1000 MT Capacity Godown at MMY and C.C.Road and RCC drain at SMY Akkialur of APMC Hanagal	Hanagal	250.00	Physically Completed
15	Construction of C.C.Road, RCC drain in SMY Vemagala and Covered Auction Platform at MMY of APMC Kolar	Kolar	150.00	Work under progress
16	Construction of Covered Auction Platform at A&B block in MMY and Gurumitkal SMY of APMC Yadagiri	Yadagiri	350.00	Work under progress
17	Construction of C.C.Road, RCC drain, yard Electrification in Yadrami Sub market yard and Yard Electrification in MMY of APMC Jevargi	Jevargi	250.00	Work under progress
18	Construction of BT Road, RCC drain at Cotton market B Wing of APMC Raichur	Raichur	250.00	Work under progress
19	Construction of 14 godowns in and around villages of APMC Nippani and Construction of BT Road & RCC dain at MMY of APMC Nippani	Nippani (Chikkodi)	600.00	Work under progress

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Sl. No.	Name of the Project	Taluk	Project Cost	Work Status
20	Construction of CC road & RCC Drain MMY of APMC Sirsi	Sirsi	250.00	Work under progress
21	Construction of Godown and Covered Auction platform at MMY and Construction CC Road & Covered Acution platform at Chikkajogihalli SMY of APMC Kudligi	Kudligi	250.00	Work under progress
22	Construction of CC road, RCC drain at MMY of APMC Chikkamagalur	Chikkamagalur	250.00	Physically Completed
23	Construction of C.C.Road and RCC drain at MMY of APMC Sindagi	Sindagi	300.00	Physically Completed
24	Construction of C.C.Road & Compound wall at SMY Keur and CC road at MMY of APMC Badami	Badami	300.00	Physically Completed
25	Construction of C.C.Road, RCC drain & Toilet block at MMY of APMC Afzalpura	Afzalpura	150.00	Work under progress
26	Construction of BT Road, RCC drain & Yard Electrification at MMY of APMC Naragunda	Naragunda	300.00	Work under progress
27	Construction C.C.Road, RCC drain at SMY Srirampura & MMY of APMC Hosadurga	Hosadurga	250.00	Work under progress
28	Construction C.C.Road, RCC drain 22 shops at Gandsi of APMC Arasikere	Arasikere	300.00	Physically Completed
29	Construction C.C.Road and RCC Drain at MMY of APMC Kadur	Kadur	200.00	Physically Completed
30	Construction C.C.Road, RCC Drain & Compound wall in Maski SMY C.C.Road, RCC Drain at MMY of APMC Lingasugur	Lingasugur	250.00	Work under progress
31	Construction C.C.Road, RCC Drain in MMY & Covered Auction Platform at Kerur SMY of APMC Siruguppa	Siruguppa	250.00	Work under progress
32	Constructionof C.C.Pavement and drain at Main market yard of APMC Kampli	Kampli	250.00	Work under progress
33	Construction of CC Road and RCC Drain in MMY of APMC Hospete	Hospete	250.00	Physically Completed
34	Construction of CC Road and RCC Drain in MMY of APMC Bellary	Bellary	500.00	Physically Completed
35	Construction 2 nos. 300 MT Capacity Godown and Covered Auction Platform at Main market yard of APMC Harappnahall	Harappnahall	200.00	Work under progress
36	Construction of CC Roads & C.C.Box Drain at Main market yard of APMC Sagara	Sagara	250.00	Physically Completed
37	Providing Compound Wall at a new premises yard of APMC KGF	KGF	250.00	Work under progress
38	Construction of Compound Wall, fruits and Vegetable Market to an extent of 2.0 acre land Manangi Village of APMC Sira	Sira	300.00	Work under progress
39	Construction of CC & Compound wall at SMY & BT road at MMY of APMC Hunagunda	Hunagunda	250.00	Physically Completed
40	Construction of Compound Wall at Kadaballi SMY, CC Road, RCC Drain, CAP & Yard Electrification of MMY of APMC Nagamangala	Nagamangala	300.00	Physically Completed
41	Construction CC Road and RCC Drain at Hasanapura & Khanapura SMY of APMC Surapura	Surapura	250.00	Work under progress
42	Construction of C.C.Road, RCC Drain & OHT at Rippenpet SMY of APMC Hosanagar	Hosnanagar	250.00	Work under progress
43	Construction of CC Road, RCC Drain, Toilet block & Yard Electrification Turvihal SMY of APMC Sindanur	Sindanur	250.00	Work under progress

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Sl. No.	Name of the Project	Taluk	Project Cost	Work Status
44	Construction of C.C.Road & RCC Drain SMY Mudebihal and CC, BT & RCC Drain at MMY of APMC Talikote	Talikote	500.00	Physically Completed
45	Construction of CC Road & RCC Drain at MMY of APMC K.R.Nagara	K.R.Nagara	300.00	Work under progress
46	Construction of C.C.Road & Toilet block at Hegare Rural Shandy & CAP at SMY Gandehalli at APMC Belur Limit	Belur	150.00	Work under progress
47	Construction of C.C.Road, RCC Drain & CAP at MMY & Cattle Sub Market Yard of APMC Nanjangudu	Nanjangudu	300.00	Work under progress
48	Construction of Compound Wall at Toravi, rural shandy at Kolar Town and Godown at Vadavadagi Village of APMC Vijayapura limit	Vijayapura	1100.00	Work under progress
49	Construction of CC Road and RCC Drain at SMY Chadachana and MMY of APMC Indi	Indi	300.00	Physically Completed
50	Construction of CC Road, RCC Drain & Retaining wall at MMY of APMC Holenarsipura	Holenarasipura	100.00	Physically Completed
51	Construction of CC Platform at MMY of APMC Devadurga	Devadurga	100.00	Work under progress
52	Construction of C.C.Road, RCC Drain & CAP at Didiga SMY of APMC Channarayapatna	Channarayapatna	100.00	Work under progress
53	Construction of C.C.Road & RCC Drain at MMY of APMC Kustagi	Kustagi	100.00	Physically Completed
54	Construction of CC Road & RCC Drain at MMY of APMC Udupi	Udupi	100.00	Physically Completed
55	Construction of CC Road, RCC Drain in Shabad SMY of APMC Chittapura	Chittapura	100.00	Physically Completed
56	Construction of Compound Wall at Savalagi SMY of APMC Jamakhandi	Jamakhandi	100.00	Physically Completed
57	Construction of CC Road, RCC Drain and Compound wall at MMY of APMC Yellapura	Yellapura	100.00	Physically Completed
58	Construction of CC Road, RCC Drain, toilet block & water supply work at MMY of APMC Honnavar	Honnavar	100.00	Physically Completed
59	Construction of BT Road and RCC Drain at MMY of APMC Kundagola	Kundagola	100.00	Work under progress
60	Construction of CC Road & drains in extended cattle market yard at MMY of APMC Hoovinahadagli	Hoovina hadagali	100.00	Physically Completed
61	Construction of White topping road at MMY C.C.Road, RCC drain, 1000 MT Godown at SMY Basavana Bagewadi of APMC Vijyapura	Vijyapura	1200.00	Work under progress
62	Construction of CC Road, RCC Drain & Compound Wall at Shivani SMY of APMC Tarikere	Tarikere	300.00	Work under progress
63	Construction of CC Road & RCC Drain at MMY of APMC Sedam	Sedam	300.00	Work under progress
64	Construction of CC Road, Drain and Compound Wall at MMY & Construction of Compound Wall at Chandragutti SMY of APMC Soraba	Soraba	300.00	Work under progress
65	Construction of Cold Storage at SMY Chikkabasur of APMC Byadagi	Byadagi	1000.00	Work under progress
66	Construction of Cold Storage at Basavanabagewadi SMY and Vijyapura district Graphes co-operative Society of APMC Vijyapura	Vijyapura (Basavanabagewadi)	750.00	Work under progress
67	Construction of C.C.Road, rising of drain and UGD at B block in Bandipalya MMY of APMC Mysore	Mysore	400.00	Physically Completed

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Sl. No.	Name of the Project	Taluk	Project Cost	Work Status
68	Construction of CC Road, RCC Drain & Compound wall Tomato SMY Peregodu of APMC Bagepalli	Bagepalli	300.00	Work under progress
69	Construction of CC Road, drains improvement to drain & Yard Electrification in MMY of APMC Gadag	Gadag	300.00	Physically Completed
70	Construction of CC Road & Cold Storage at Kukanur MMY of APMC Yelaburga	Yelaburga	700.00	Work under progress
	RIDF-29 TOTAL		**21000.00**	

RIDF - 30				
1	Construction of 2240 MT Capacity Cold Storage at APMC Belagavi	Belagavi	950.00	Tender Called
2	Construction of 4480 MT Capacity Cold Storage at APMC Gadag	Gadag	1480.00	Tender Called
3	Construction of 3750 MT Capacity Cold Storage at APMC Mysore	Mysore	1500.00	Tender Called
4	Construction of 3 Nos. 8974 MT Capacity Cold Storage at Mega Market of APMC Ranebennur	Ranebennur	3000.00	Tender Called
5	Construction of 1950 MT Capacity Cold Storage at Main Market yard of APMC Tumkur	Tumkur	800.00	Tender Called
6	Construction of 2850 MT Capacity Cold Storage at Manangi Sub Market yard of APMC Sira in Tumkur District	Sira	1030.00	Tender Called
7	Construction of 2200 MT Capacity Cold Storage at Main Market yard of APMC Gundlupete in Chamarajangar district	Gundlupete	890.00	Tender Called
8	Construction of 3000 MT Capacity Cold Storage at Main Market yard of APMC Bellary	Bellary	1175.00	Tender Called
9	Construction of 2850 MT Capacity Cold Storage at Chikoppa Sub Market yard of APMC Yelburga	Yelburga	1150.00	Tender Called
10	Development of Infrastructure facilities for New Chilly Market at Cotton Market A Wing of APMC Raichur	Raichur	2500.00	Tender Called
	RIDF-30 TOTAL		**14475.00**	

ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಬಹಳ ಪ್ರಮುಖವಾದುದು ಎಂದರೆ, "ಜೈ ಜವಾನ್, ಜೈ ಕಿಸಾನ್" ಎಂದು ಹೇಳುತ್ತೇವೆ. ಇವತ್ತಿನ ದಿವಸ ಜವಾನ್ ದೇಶವನ್ನು ಕಾಯಬೇಕಾದರೆ, ರೈತ ಅವರಿಗೆ ಊಟ ಕೊಡದಿದ್ದರೆ ಆತ ಆ border ಕೂಡ ಕಾಯುವುದಕ್ಕೆ ಆಗುವುದಿಲ್ಲ. ಇವತ್ತಿನ ದಿವಸ ಅಂತಹ ರೈತರ ಹಿತವನ್ನು ಕಾಪಾಡತಕ್ಕಂಥ ರೀತಿಯಲ್ಲಿ ಸರ್ಕಾರ ಬಹಳ ತಪ್ಪು ಹೆಜ್ಜೆಯನ್ನಿಡುತ್ತಿದೆ ಎಂದು ಮಾನ್ಯ ಸಚಿವರು ಕೊಟ್ಟರತಕ್ಕಂಥ ಉತ್ತರದಿಂದ ನನಗೆ ಗೊತ್ತಾಗುತ್ತಿದೆ. ನಾನು ಕೇಳರತಕ್ಕಂಥದ್ದು ಏನೆಂದರೆ ಬರತಕ್ಕಂಥ ಆದಾಯದಲ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ರೈತರಿಗೆ ಯಾವ ರೀತಿಯ ಅನುಕೂಲಗಳನ್ನು ಮಾಡಿಕೊಟ್ಟಿದ್ದೀರಿ ಎಂಬ ಪ್ರಶ್ನೆಯನ್ನು ಕೇಳಿದ್ದೆನು. ಅಲ್ಲಿ ವರ್ತಕರಿಗೆ ಕುಡಿಯುವ ನೀರು, U.G.D ವ್ಯವಸ್ಥೆ ಮತ್ತು ರಸ್ತೆ ವ್ಯವಸ್ಥೆಯನ್ನು ಮಾಡಿದ್ದೇವೆ ಎನ್ನತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಾನು ಕೇಳತಕ್ಕಂಥದ್ದು ಏನೆಂದರೆ, ರೈತರುಗಳು ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ಬಂದಂತಹ ಸಂದರ್ಭದಲ್ಲಿ late

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುತ್ತದೆ. ಆಗ ಅವರಿಗೆ ವಿಶ್ರಾಂತಿ ಗೃಹಗಳನ್ನು ಮಾಡುವ ಯಾವುದೇ ರೀತಿಯ ಪ್ರಸ್ತಾವನೆ ಆಗಿಲ್ಲ. ಆದಾದನಂತರ, ನಬಾರ್ಡ್ ದುಡ್ಡು ಕೊಟ್ಟಿದೆ, ಆ ದುಡ್ಡನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿದ್ದಾರೆ. ನಾನು ಅದರ ಅಂಕಿ-ಅಂಶಗಳನ್ನು ಹೇಳುತ್ತಿದ್ದೇನೆ. ಒಟ್ಟು 98 ವರ್ಕ್‌ಗಳು ನಡೆಯುತ್ತಿರುವ ಮಾಹಿತಿಯನ್ನು ನೀಡಿದ್ದಾರೆ. ಆ 98 ವರ್ಕ್‌ನಲ್ಲಿ, 10 ವರ್ಕ್‌ಗಳು progress ನಲ್ಲಿವೆ ಎಂದು ಹೇಳಿದ್ದಾರೆ. ಇನ್ನು 14 ವರ್ಕ್‌ಗಳಿಗೆ ಅವರು ಟೆಂಡರ್ ಕರೆಯಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಸುಮಾರು ರೂ.530 ಕೋಟಿ ರೂಪಾಯಿಗಳ transaction ನಲ್ಲಿ ಇನ್ನೂ ಸುಮಾರು 64 ಕೆಲಸಗಳು ಸಾಕಷ್ಟು ವರ್ಷಗಳಿಂದ progress ನಲ್ಲಿವೆ. ಇಂತಹ ಅಂಕಿ-ಅಂಶಗಳನ್ನು ಕೊಡುವುದರಿಂದ ಸರ್ಕಾರ ಮತ್ತು ರೈತರ ಹಿತವನ್ನು ಕಾಪಾಡುವುದರಲ್ಲಿ ಸರ್ಕಾರ ತಪ್ಪು ಹೆಜ್ಜೆಯನ್ನು ಇಡುತ್ತಿದೆ. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಇದಕ್ಕೆ ಸರಿಯಾದಂತಹ ಮಾಹಿತಿಯನ್ನು ಕೊಡಬೇಕೆಂದು ಕೇಳುತ್ತಿದ್ದೇನೆ.

(ಮುಂದು)

(190)11.3.2025/11.40/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಶಿವಾನಂದ ಎಸ್. ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ ಹಾಗೂ ಕೃಷಿ ಮಾರುಕಟ್ಟೆ ಸಚಿವರು):- ಮಾನ್ಯ ಸಭಾಪತಿಯವರೇ, ಸರ್ಕಾರ ಯಾವಾಗಲೂ ರೈತರ ಹಿತವನ್ನೇ ಕಾಪಾಡುತ್ತದೆ ಹೊರತು ಬೇರೆ ಏನೂ ಕೆಲಸ ಮಾಡುವುದಿಲ್ಲ. ನಾನು ಕೊಟ್ಟಿರುವಂತಹ ಉತ್ತರದಲ್ಲಿ ಎ.ಪಿ.ಎಂ.ಸಿ.ಗಳು ಏನೇನು ಕೆಲಸ ಮಾಡಿವೆ ಎಂಬ ಮಾಹಿತಿ ಕೇಳಿದ್ದರು ಅದಕ್ಕೆ ಆ ಮಾಹಿತಿ ಕೊಟ್ಟಿದ್ದೇವೆ. ನಾವು ನಿರಂತರವಾಗಿ ರೈತ ಭವನಗಳನ್ನು ಕಟ್ಟಿದ್ದೇವೆ. ಜೊತೆಗೆ ರೈತರು ಬೆಳೆದಂತಹ ಬೆಳೆಗಳನ್ನು ಸಂಗ್ರಹಣೆ ಮಾಡುವಂತಹ warehouse ಗಳನ್ನು ಕೂಡ ಕಟ್ಟಿದ್ದೇವೆ. ಆದರೆ ಹಿಂದಿನ ನಿಮ್ಮ ಸರ್ಕಾರ ಎ.ಪಿ.ಎಂ.ಸಿ. ಕಾನೂನನ್ನು ಹಿಂಪಡೆದುಕೊಂಡ ಕೂಡಲೇ ಆ ಪ್ರಾಂಗಣಗಳ ಸ್ಥಿತಿಗತಿ ಏನಾಯಿತು ಎನ್ನುವುದು ತಮಗೆ ಗೊತ್ತಿದೆ. ಸುದ್ಯೆವದಿಂದ ನೀವೇ Joint Select Committee ಮಾಡಿದಿರಿ. ಎಲ್ಲರ ಸಲಹೆ ತೆಗೆದುಕೊಂಡು ಪುನಃ ಎ.ಪಿ.ಎಂ.ಸಿ. ಯನ್ನು ಕಳೆದ ವರ್ಷವೇ ನಾವು ಪ್ರಾರಂಭ ಮಾಡಿದ್ದೇವೆ. ಅದಕ್ಕೆ ಹಿಂದೆ ಮಾಡಿದ್ದಂತಹ ತಪ್ಪು ಮಾಡಬಾರದೆಂದು ರೈತರು ಬೆಳೆದ ಮಾಲನ್ನು ಶೀತಲ ಗೃಹದಲ್ಲಿಡುವಂತಹ ವ್ಯವಸ್ಥೆಯನ್ನು ಮೊದಲ ಬಾರಿಗೆ ನಾವು ಒಂಭತ್ತು ಕಡೆಗಳಲ್ಲಿ ಪ್ರಾರಂಭ ಮಾಡುತ್ತಿದ್ದೇವೆ. ಮೊದಲು ಮೂರು ಕಡೆ ಆರ್.ಐ.ಡಿ.ಎಫ್-28 ಮತ್ತು 29ರಲ್ಲಿ ಮತ್ತು ಆರ್.ಐ.ಡಿ.ಎಫ್-30 ಯೋಜನೆಯಲ್ಲಿ ಕೂಡ ನಾವು ಈ ಪ್ರಯತ್ನ ಮಾಡುತ್ತಿದ್ದೇವೆ. ಅದರ ಜೊತೆಗೆ ಯಾವ ಯಾವ ಎ.ಪಿ.ಎಂ.ಸಿ. ಯಲ್ಲಿ ಏನೇನು ಅವರಿಗೆ ಅವಶ್ಯಕತೆ ಇರುತ್ತದೆ ಅವರ ಕಡೆಯಿಂದ action plan ತರಿಸಿಕೊಂಡು ಮಾರುಕಟ್ಟೆ ಸಮಿತಿಯವರು ಏನು ಸಲಹೆ ಸೂಚನೆಗಳನ್ನು ಕೊಡುತ್ತಾರೆ ಅದನ್ನು ನಾವು ಜಾರಿಗೆ ತಂದಿದ್ದೇವೆ. ಇದರಲ್ಲಿ ಬೇರೆ ಏನೂ ಮಾಡಿಲ್ಲ.

ಶ್ರೀ ಸಿ.ಎನ್. ಮಂಜೇಗೌಡ:- ಮಾನ್ಯ ಸಭಾಪತಿಯವರೇ, ನಾನು ಮೈಸೂರು ಎ.ಪಿ.ಎಂ.ಸಿ. ಯಲ್ಲಿ ಸುಮಾರು ಐದು ವರ್ಷಗಳ ಕಾಲ ಅಧ್ಯಕ್ಷನಾಗಿದ್ದೆ. ಇಲ್ಲಿಯವರೆಗೂ ರೈತರು ಬೆಳೆದ ಉತ್ಪನ್ನಗಳಿಗೆ cold storage ಮಾಡಿರಲಿಲ್ಲ. ಅದು ಬೇರೆ ಪ್ರಶ್ನೆ. ಗೋದಾಮುಗಳನ್ನು ಮಾಡಿದ್ದೀರಿ. ಆದರೆ ಬೆಳೆ ಬೆಳೆದುಕೊಂಡು ಬಂದವರಿಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾತ್ರಿ ಮಲಗಿಕೊಳ್ಳುವುದಕ್ಕೆ ಜಾಗವೆಲ್ಲಿದೆ? ಅದನ್ನು ಮಾಡಬೇಕಲ್ಲವೇ? ಇವತ್ತು ರಾಜ್ಯದಲ್ಲಿ ಒಟ್ಟು 167 ಎ.ಪಿ.ಎಂ.ಸಿ. ಮಾರುಕಟ್ಟೆಗಳಿವೆ. ಅದರಲ್ಲಿ ಇವತ್ತು competitive ಮಾರುಕಟ್ಟೆಯಲ್ಲಿ ಹಣ ಕೊಟ್ಟರೆ ಮಾರುಕಟ್ಟೆಯೇ ಮನೆ ಬಾಗಿಲಿಗೆ ಬರುತ್ತದೆ. ಇದು ತಮಗೆಲ್ಲಾ ಗೊತ್ತಿರುವಂತಹ ವಿಚಾರ. ರೈತರು ಬೆಳೆದಂತಹ ವಸ್ತುಗಳಿಗೆ ಬೆಲೆ ಸಿಗಬೇಕೆಂದರೆ, ಇವತ್ತು ಎಲ್ಲಾ ಕಡೆಯೂ ಆನ್‌ಲೈನ್ ಸೌಲಭ್ಯವಿದೆ. ಇದರಲ್ಲಿ ಎಷ್ಟು ಎ.ಪಿ.ಎಂ.ಸಿ. ಗೆ ನೀವು ಆನ್‌ಲೈನ್ ಸೌಲಭ್ಯವನ್ನು ಕೊಟ್ಟಿದ್ದೀರಿ? ಬಾಕಿ ಇನ್ನು ಎಷ್ಟು ಎ.ಪಿ.ಎಂ.ಸಿ.ಗಳಿಗೆ ಆನ್‌ಲೈನ್ ಸೌಲಭ್ಯ ಕೊಟ್ಟಿಲ್ಲ? ಇದು ಮೊದಲನೆಯದು. ಇ-ಮಾರುಕಟ್ಟೆ ಸೌಲಭ್ಯವನ್ನು ಎಷ್ಟು ಜಿಲ್ಲೆಗಳಿಗೆ ಕೊಟ್ಟಿದ್ದೀರಿ? ಇನ್ನೂ ಎಷ್ಟು ಜಿಲ್ಲೆಗೆ ಬಾಕಿ ಇದೆ? ಅದು ಏತಕ್ಕೆ ಬಾಕಿ ಇದೆ? ಇದು ನಿನ್ನೆ ಮೊನ್ನೆ ಪ್ರಾರಂಭವಾದ ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲ. ಈ ಎ.ಪಿ.ಎಂ.ಸಿ.ಗೆ ನೂರಾರು ವರ್ಷಗಳ ಇತಿಹಾಸ ಇರುವಂತಹದ್ದು. ಇವಿಷ್ಟು ನನ್ನ ಉಪ ಪ್ರಶ್ನೆಗಳು.

ಶ್ರೀ ಶಿವಾನಂದ ಎಸ್. ಪಾಟೀಲ:- ನಿಮಗೆ ಎಲ್ಲಾ ಗೊತ್ತಿದೆ. ReMS (Rashtriya e-Market Services) ನೀವೇ ಪ್ರಾರಂಭ ಮಾಡಿದ್ದೀರಿ. ಎರಡು ವರ್ಷ ಎ.ಪಿ.ಎಂ.ಸಿ. ಬಂದ್ ಆಗಿದ್ದು ಎಲ್ಲಾ 171 ಎ.ಪಿ.ಎಂ.ಸಿ. ಯಲ್ಲಿ ReMS ಈಗಾಗಲೇ ಇದೆ. ಯಾವ ರಾಜ್ಯದಲ್ಲಿ ಯಾವ ಎ.ಪಿ.ಎಂ.ಸಿ.ಯಲ್ಲಿ ಸಾಯಂಕಾಲದವರೆಗೆ ಏನೇನು ವ್ಯವಹಾರಗಳಾಗುತ್ತವೆ ಎಂಬುದು ನಮಗೆ ಗೊತ್ತಾಗುತ್ತದೆ.

ಶ್ರೀ ಸಿ.ಎನ್. ಮಂಜೇಗೌಡ:- ಮೈಸೂರು ಮಾನ್ಯ ಮುಖ್ಯಮಂತ್ರಿಗಳ ತವರು ಜಿಲ್ಲೆ. ಮೊನ್ನೆ ತಾನೇ ಅವರು 319 ಕೋಟಿ ರೂಪಾಯಿಗಳನ್ನು runway extension ಗೆ ಕೊಟ್ಟಿದ್ದಾರೆ. ಮೊನ್ನೆ ದಿವಸ ನಾವು ರಿಂಗ್ ರಸ್ತೆಯಲ್ಲಿ ಹೋಗಬೇಕಾದರೆ ಅದರ ಕೆಳಗಡೆ floriculture cold storage ಮಾಡಬಹುದು ಎಂಬ ಪ್ರಸ್ತಾವನೆಯನ್ನು ಸರ್ಕಾರಕ್ಕೆ ನಾನಿದ್ದಾಗಲೇ ಕಳುಹಿಸಿಕೊಟ್ಟಿದ್ದೆ. ಆದರೆ ಅದು ಇವತ್ತಿನವರೆಗೂ ಅನುಷ್ಠಾನವಾಗಿಲ್ಲ. ಏರೋಪ್ಲೇನ್ ಬರುತ್ತಿದೆ, runway ವಿಸ್ತಾರವಾಗುತ್ತಿದೆ.

ಸಭಾಪತಿಯವರು:- ಮಾನ್ಯ ಸಚಿವರೇ, ಒಂದು ಕೆಲಸ ಮಾಡಿ. ಮಾನ್ಯ ಮಂಜೇಗೌಡರನ್ನು ಕೂರಿಸಿಕೊಂಡು ಅಧಿಕಾರಿಗಳನ್ನು ಕರೆದು ಮಾತನಾಡಿ.

ಶ್ರೀ ಶಿವಾನಂದ ಎಸ್. ಪಾಟೀಲ:- ಮಾನ್ಯ ಸಭಾಪತಿಯವರೇ, ಅವರೇನು ಪ್ರಸ್ತಾವನೆ ಕೊಡುತ್ತಾರೋ ಅದನ್ನು ಮಾಡುತ್ತೇವೆ. Floriculture cold storage ಮಾಡಿದ್ದೇವೆ.

ಶ್ರೀ ಸಿ.ಎನ್. ಮಂಜೇಗೌಡ:- ಎಲ್ಲಿದೆ cold storage?

ಶ್ರೀ ಶಿವಾನಂದ ಎಸ್. ಪಾಟೀಲ:- ಈಗಿದೆ, ಆರ್.ಐ.ಡಿ.ಎಫ್.30 . . .

ಶ್ರೀ ಸಿ.ಎನ್. ಮಂಜೇಗೌಡ:- ಎ.ಪಿ.ಎಂ.ಸಿ. ಒಳಗೆ cold storage ಇರುವ ಜಾಗದ ವಿಚಾರದಲ್ಲಿ dispute ಆಗಿ ಇವತ್ತಿನವರೆಗೂ ಕೋರ್ಟ್‌ನಲ್ಲಿದೆ.

ಶ್ರೀ ಶಿವಾನಂದ ಎಸ್. ಪಾಟೀಲ:- ರನ್ ವೇಗೆ ನಮಗೇನು ಸಂಬಂಧವಿದೆ? ನೀವು ಮೈಸೂರು ಎ.ಪಿ.ಎಂ.ಸಿ. ಯನ್ನು ಊರ ಹೊರಗಿನ ಮಾರುಕಟ್ಟೆಗೆ ಶಿಫ್ಟ್ ಮಾಡಿಕೊಂಡು ಯಾರ್ಯಾರನ್ನೋ . . . ಅದನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನೇ ಸ್ವತಃ ಹೋಗಿ ನೋಡಿಕೊಂಡು ಬಂದಿದ್ದೇನೆ. ತಾವು ಏನು ಸಲಹೆ ಕೊಡುತ್ತೀರೋ ಕೊಡಿ, ನಾನು ಬಂದು ಮಾಡುತ್ತೇನೆ.

ಸಭಾಪತಿಯವರು:– ನೀವು ಅವರನ್ನು ಕರೆದುಕೊಂಡು ಆಮೇಲೆ ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 594+495

ಸದಸ್ಯರು ಹೆಸರು : ಶ್ರೀ ಪಿ. ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಹಾಗೂ ಡಾ. ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 11.03.2025

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಉತ್ತರ ಕರ್ನಾಟಕದ ಬಾಗಲಕೋಟೆಯಲ್ಲಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು 18 ವರ್ಷಗಳಿಂದ ತೋಟಗಾರಿಕಾ ಬೆಳೆಗಳಿಗೆ ಸಂಬಂಧಿಸಿದಂತೆ ಯಶಸ್ವಿಯಾಗಿ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳು ಕೈಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.	ಹೌದು. ಬಾಗಲಕೋಟೆಯಲ್ಲಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ದೇಶದಲ್ಲಿ ಶೈಕ್ಷಣಿಕ, ಸಂಶೋಧನಾ ಮತ್ತು ವಿಸ್ತರಣಾ ಚಟುವಟಿಕೆಗಳಲ್ಲಿ ಉತ್ತಮ ಸಾಧನೆ ಮಾಡಿರುತ್ತದೆ. ಕಳೆದ 7 ವರ್ಷಗಳಿಂದಲೂ ಪ್ರತಿ ವರ್ಷ ICAR ಸಂಸ್ಥೆಯು ನಡೆಸುವ Junior Research Fellowship ಪರೀಕ್ಷೆಯಲ್ಲಿ ಸತತವಾಗಿ ದೇಶದಲ್ಲಿ ಅತೀ ಹೆಚ್ಚು ಸ್ಥಾನಗಳನ್ನು ಗಳಿಸುವ ಮೂಲಕ ಪ್ರಥಮ ಸ್ಥಾನದಲ್ಲಿದೆ. ಈ ಸಂಬಂಧ ICAR ಸಂಸ್ಥೆಯಿಂದ ಪುರಸ್ಕಾರ ಪ್ರಮಾಣ ಪತ್ರ ಪಡೆದಿರುತ್ತದೆ. ಸಂಶೋಧನೆಯಲ್ಲಿ ಒಟ್ಟು 46 ವಿವಿಧ ತೋಟಗಾರಿಕೆ ಬೆಳೆಗಳ ತಳಿಗಳನ್ನು ಅಭಿವೃದ್ಧಿ ಪಡಿಸಿ ಬಿಡುಗಡೆಗೊಳಿಸಲಾಗಿದೆ ಹಾಗೂ 300 ಆಧುನಿಕ ತಾಂತ್ರಿಕತೆಗಳನ್ನು ಅಭಿವೃದ್ಧಿಪಡಿಸಿ ರೈತರ ಅನುಕೂಲಕ್ಕಾಗಿ ಕೈಪಿಡಿಯಲ್ಲಿ ಪ್ರಕಟಿಸಲಾಗಿದೆ. Yes, The University of Horticultural Sciences in Bagalakot has excelled in academic, research and extension activities in the country. For the past 7 years, it has consistently secured the highest number of positions in the country in the Junior Research Fellowship examination conducted by ICAR every year. It has received a certificate of appreciation from ICAR in this regard. 46 different varieties has been released and 300 technologies has been released for the forming community.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ	ಯಶಸ್ವಿಯಾಗಿ ನಡೆಯುತ್ತಿರುವ ಈ ತೋಟಗಾರಿಕೆ ವಿಶ್ವವಿದ್ಯಾಲಯಗಳ ಅಡಿಯಲ್ಲಿ ಬರುವ ಕೆಲವೆ ತೋಟಗಾರಿಕಾ ಕಾಲೇಜುಗಳನ್ನು ಪುತ್ಯೇಕಿಸಿ ಹೊಸದಾಗಿ ಪ್ರಾರಂಭಿಸಿರುವ ಸಮಗ್ರ ಕೃಷಿ ವಿಶ್ವವಿದ್ಯಾಲಯಗಳಿಗೆ ವರ್ಗಾಯಿಸಿರುವುದು ನಿಜವೇ;	ಹೌದು. ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ಕಾಲುವೆ ಫಾರಂನಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯವನ್ನು (Integrated University) ಸ್ಥಾಪಿಸುವುದಕ್ಕೆ ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಿ ಕೃಷಿ ಇಲಾಖೆಯು ದಿನಾಂಕ: 28.01.2025 ರಂದು ಆದೇಶ ಹೊರಡಿಸಿರುತ್ತದೆ. ಮುಂದುವರೆದು, ಕೃಷಿ ಇಲಾಖೆಯ ದಿನಾಂಕ:12.02.2025 ರ ಆದೇಶದಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯದ ವಿಶೇಷಾಧಿಕಾರಿಯನ್ನು ನೇಮಿಸಿ ಬಾಗಲಕೋಟೆಯ ಕುಲಪತಿಗಳೊಂದಿಗೆ ಸಮಾಲೋಚಿಸಿ ನೂತನ ವಿಶ್ವವಿದ್ಯಾಲಯಕ್ಕೆ ಈಗಾಗಲೇ ರಾಜ್ಯ ಸರ್ಕಾರ/ಐ.ಸಿ.ಎ.ಆರ್ ಇತರೆ ಯೋಜನೆಗಳಲ್ಲಿ ನಿಗಧಿಪಡಿಸಿದ ಕಾರ್ಯಕ್ರಮಗಳು ಹಣಕಾಸಿನ ಅನುಧಾನ ಮಾನವ ಸಂಪನ್ಮೂಲಗಳನ್ನು, ಮೂಲ ಸೌಕರ್ಯಗಳನ್ನು ಹಾಗೂ ವಾಹನಗಳನ್ನು ಯಥಾವತ್ತಾಗಿ ವರ್ಗಾಯಿಸಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ. Yes, The Agriculture Department has issued an order dated 28.01.2025 giving the government's in-principle approval for the establishment of an Integrated University of Agriculture and Horticulture at Vishweshwaraiah Canal Farm in Mandya district. Further, in the Govt Order of Agricultrure Department dated 12.02.2025 Special Officer for the University of Agriculture and Horticulture Sciences, Mandya has been oppointed with instructions to take action for getting transferred on as it is basis, the already existing funds, human resource, infrastructure and vehicles under State Government /I.C.A.R schemes in consultation with the Vice Chancellor, Bagalakote.
ಇ	ಅದರೆ ಇತ್ತೀಚಿಗೆ ಮಂಡ್ಯ ಕೃಷಿ ವಿಶ್ವವಿದ್ಯಾಲಯದ ಸಮಿತಿಯು ಅದನ್ನು ಸಮ್ಮಿಶ್ರ ವಿಶ್ವವಿದ್ಯಾಲಯಗಳಾಗಿ (Intergrated) ರೂಪಿಸಿರುವ	ಬಂದಿದೆ. ಇತ್ತೀಚೆಗೆ ಮಂಡ್ಯ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಸಮಿತಿಯು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

	ಸಲಹೆ ನೀಡಿ, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ ಅಧೀನದಲ್ಲಿನ ಕಾಲೇಜು, ವಿಸ್ತರಣಾ ಘಟಕ ಹಾಗೂ ಸಂಶೋಧನಾ ಕೇಂದ್ರಗಳನ್ನು ಸೇರ್ಪಡೆಗೊಳಿಸುವ ಮೂಲಕ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಅಸ್ತಿರಗೊಳಿಸಲು ಹೊರಟಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ;	ವ್ಯಾಪ್ತಿಯಲ್ಲಿ ಬರುವ ತೋಟಗಾರಿಕೆ ಮಹಾವಿದ್ಯಾಲಯ ಮೈಸೂರು, ತೋಟಗಾರಿಕೆ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ, ಅರಸೀಕೆರೆ, AICRP (ತಾಳೆ) ಅರಸೀಕೆರೆ, ತೋಟಗಾರಿಕೆ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ, ಸೋಮನಹಳ್ಳಿ, ಕಾವಲ್ (ಹಾಸನ) ಮತ್ತು AICRP (ಆಲೂಗಡ್ಡೆ), ಹಾಸನ ಇವುಗಳನ್ನು ಯಥಾವತ್ತಾಗಿ (As is where is basis) ಹಸ್ತಾಂತರಿಸಲು ಶಿಫಾರಸ್ಸು ಮಾಡಿರುತ್ತದೆ. Yes, it has been brought to government attention. Recently, the Mandya Agriculture and Horticulture University Committee have been recommended for handover on an as is where is basis below mentioned colleges of University of Horticultural Sciences, Horticulture, Mysore, Horticulture Research and Extension Centre, Arasikere, AICRP (Thale) Arasikere, Horticulture Research and Extension Centre, Somanahalli Kaval (Hassan) and AICRP (Potato), Hassan
ಈ	ಬಂದಿದ್ದಲ್ಲಿ, ವರದಿಯ ಶಿಫಾರಸ್ಸುಗಳನ್ನು ಪುನರ್ ಪರಿಶೀಲಿಸುವ ಅಂಶ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಈ ತೋಟಗಾರಿಕೆ ವಿಶ್ವವಿದ್ಯಾಲಯ ಕುರಿತಂತೆ ಸರ್ಕಾರ ಕೈಗೊಂಡ ಕ್ರಮಗಳಾವುವು? (ಮಾಹಿತಿ ಒದಗಿಸುವುದು)	ಇತ್ತೀಚಿನ ದಿನಗಳಲ್ಲಿ ಆದೇಶ ಹೊರಡಿಸಿದ್ದು, ಈ ಬಗ್ಗೆ ಪರಿಶೀಲಿಸಲಾಗುತ್ತಿದೆ. As the Government Order is issued recently, this is being examined.

ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೇ, ತಮಗೂ ಸಹ ಸರಿಯಾಗಿ ಮಾಹಿತಿ ಇದೆ. ಉತ್ತರ ಕರ್ನಾಟಕದ ರೈತರ ಜೀವಾಳವಾಗಿರುವಂತಹ ಹಾಗೂ ತುಂಬಾ ಯಶಸ್ವಿಯಾಗಿ ನಡೆಯುತ್ತಿರುವ ಬಾಗಲಕೋಟೆಯಲ್ಲಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕುರಿತು ಈ ಪ್ರಶ್ನೆ ಇದೆ. ಈಗ ಅಲ್ಲಿರುವ ಆತಂಕವೇನೆಂದರೆ, ಸರ್ಕಾರವು ಈ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಮುಚ್ಚುತ್ತಿದೆ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಸಂಯೋಜಿತ ಕಾಲೇಜುಗಳು/ಸಂಸ್ಥೆಗಳು, 10 ತೋಟಗಾರಿಕಾ ಮಹಾ ವಿದ್ಯಾಲಯಗಳು, 12 ಸಂಶೋಧನಾ ಮತ್ತು ವಿಸ್ತರಣಾ ಕೆಂದ್ರಗಳು, 12 ತೋಟಗಾರಿಕಾ ವಿಸ್ತರಣಾ ಘಟಕಗಳು 24

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಗಳಲ್ಲಿ ವಿಸ್ತರಣೆಗೊಂಡಿವೆ. ಇವೆಲ್ಲವನ್ನೂ ಅವರು ಹೊಸದಾಗಿ ಸ್ಥಾಪನೆಗೊಂಡಿರುವ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳಿಗೆ ವರ್ಗಾವಣೆ ಮಾಡುತ್ತಿದ್ದಾರೆ ಎನ್ನುವ ಆತಂಕ ಇದೆ. ಇದು ಸತ್ಯವೇ ಎಂಬ ಬಗ್ಗೆ ನನ್ನ ಮೂಲ ಪ್ರಶ್ನೆಯಿದೆ. ನಂತರ ಉಳಿದ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಉತ್ತರ ಕರ್ನಾಟಕದ ಬಾಗಲಕೋಟೆಯಲ್ಲಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು 18 ವರ್ಷಗಳಿಂದ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ಯಶಸ್ವಿಯಾಗಿ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳು ಕೈಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಮಾನ್ಯ ಸಚಿವರು ಹೌದು ಎಂದು ಹೇಳಿದ್ದಾರೆ. ಈ ವಿಶ್ವವಿದ್ಯಾಲಯದಲ್ಲಿ 10 ತೋಟಗಾರಿಕಾ ಮಹಾ ವಿದ್ಯಾಲಯಗಳ 12 ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರಗಳನ್ನು ಹೊಂದಿರುವುದಲ್ಲದೆ 12 ತೋಟಗಾರಿಕಾ ವಿಸ್ತರಣಾ ಘಟಕಗಳು, ಐ.ಸಿ.ಆರ್.ಪಿ. ಸೆಂಟರ್, ಕೃಷಿ ವಿಜ್ಞಾನ ಕೇಂದ್ರಗಳನ್ನು ಹೊಂದಿ ರಾಜ್ಯದಲ್ಲಿಯೇ ಅತ್ಯಂತ ದೊಡ್ಡದಾದ ಕೃಷಿ ಕ್ಷೇತ್ರದ, ರೈತಾಪಿ ಕ್ಷೇತ್ರದ ವಿಶ್ವವಿದ್ಯಾಲಯವಾಗಿ ಬೆಳೆದು ನಿಂತಿದೆ. ಈಗಾಗಲೇ ಇಷ್ಟು ವರ್ಷಗಳ ಅವಧಿಯಲ್ಲಿ ಕಳೆದ ಏಳು ವರ್ಷಗಳಿಂದ ಐ.ಸಿ.ಎ.ಆರ್. ಸಂಸ್ಥೆಯಿಂದ ಕೊಡುವ Junior Research Fellowship ಪರೀಕ್ಷೆಯಲ್ಲಿ ಸತತವಾಗಿ ದೇಶದಲ್ಲಿ ಅತೀ ಹೆಚ್ಚು ಸ್ಥಾನಗಳನ್ನು ಗಳಿಸುವ ಮೂಲಕ ಪ್ರಥಮ ಸ್ಥಾನದಲ್ಲಿದೆ. ಇದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಅದಕ್ಕೆ ಪ್ರಶಸ್ತಿ ಸಹ ಬಂದಿದೆ. ದೇಶದಲ್ಲಿಯೇ ನಂ.1 ಸ್ಥಾನದಲ್ಲಿದೆ. ಇವತ್ತು ನಾನು ಕೇಳಿದ ಎರಡನೇ ಪ್ರಶ್ನೆಗೆ ಸಮರ್ಪಕವಾಗಿ ಉತ್ತರ ಕೊಟ್ಟಿಲ್ಲ. ಎಲ್ಲದಕ್ಕೂ ಒಪ್ಪಿಕೊಂಡಿದ್ದಾರೆ. ಎರಡನೆಯದಾಗಿ, ಯಶಸ್ವಿಯಾಗಿ ನಡೆಯುತ್ತಿರುವ ಈ ತೋಟಗಾರಿಕೆ ವಿಶ್ವವಿದ್ಯಾಲಯಗಳ ಅಡಿಯಲ್ಲಿ ಬರುವ ಕೆಲವೇ ತೋಟಗಾರಿಕಾ ಕಾಲೇಜುಗಳನ್ನು ಪ್ರತ್ಯೇಕಿಸಿ ಹೊಸದಾಗಿ ಪ್ರಾರಂಭಿಸಿರುವ ಸಮಗ್ರ ಕೃಷಿ ವಿಶ್ವವಿದ್ಯಾಲಯಗಳಿಗೆ ವರ್ಗಾಯಿಸಿರುವುದು ನಿಜವೇ ಎಂಬ ಪ್ರಶ್ನೆಗೆ ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಮಾನ್ಯ ಸಚಿವರು ಸಮಂಜಸವಾದ ಉತ್ತರವನ್ನು ಕೊಡಲಿಲ್ಲ. ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ಕಾಲುವೆ ಫಾರಂನಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯವನ್ನು Integrated University ಆಗಿ ಸ್ಥಾಪಿಸುವುದಕ್ಕೆ ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಿ ಕೃಷಿ ಇಲಾಖೆಯು ದಿನಾಂಕ 28.01.2025ರಂದು ಆದೇಶ ಹೊರಡಿಸಿರುತ್ತದೆ. ಮುಂದುವರೆದು, ಕೃಷಿ ಇಲಾಖೆಯ ದಿನಾಂಕ 12.2.2025ರ ಆದೇಶದಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ ಇಲ್ಲಿಗೆ ವಿಶೇಷಾಧಿಕಾರಿಯನ್ನು ನೇಮಿಸಿ ಬಾಗಲಕೋಟೆಯ ಕುಲಪತಿಗಳೊಂದಿಗೆ ಸಮಾಲೋಚಿಸಿ ಎಂದು ಹೇಳುತ್ತಿದ್ದಾರೆ. ಅಲ್ಲಿನ ಜನರು ಸಮಾಲೋಚನೆ ಮಾಡಿಯೇ Integrated University ಮಾಡುವುದಕ್ಕೆ ಹೊರಟಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಸಭಾಪತಿಯವರು:- ಮಾನ್ಯ ಸಚಿವರೇ, ಮಾನ್ಯ ಪೂಜಾರ್‌ರವರು ಹೇಳುವುದು ಇಷ್ಟೇ, ರಾಜ್ಯಕ್ಕೆ ಒಂದು ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿದ್ದೀರಿ. ನೀವು ತುಂಡು ತುಂಡು ಮಾಡಿ ಎಲ್ಲಾ ವಿಶ್ವವಿದ್ಯಾಲಯಕ್ಕೆ ಕೊಟ್ಟರೆ ಏತಕ್ಕೆ ಮಾಡಬೇಕಾಗಿತ್ತು? ಈಗ ನೀವು ರಾಜೀವ್ ಗಾಂಧಿ ವಿಶ್ವವಿದ್ಯಾಲಯ ಹಾಗೂ ಬೇರೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾಲಯಗಳನ್ನು ಮಾಡಿದ್ದೀರಿ. ಉತ್ತರ ಕರ್ನಾಟಕದಲ್ಲಿರುವಂತಹ ವಿಶ್ವವಿದ್ಯಾಲಯವನ್ನು ಎಲ್ಲಾ ಕಡೆಗೆ ಕಳುಹಿಸುವುದು ಸರಿಯಲ್ಲ, ಕಳುಹಿಸಬಾರದು ಎಂಬ ಸ್ಪಷ್ಟವಾದ ಉದ್ದೇಶವಿದೆ. ಕಳುಹಿಸಬಾರದು ಎಂದು ನಾನು ಸಹ ಸಲಹೆ ಮಾಡುತ್ತೇನೆ.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮೊದಲನೆ ಪ್ರಶ್ನೆಗೆ ಉತ್ತರವನ್ನು ಒಪ್ಪಿಕೊಂಡಿದ್ದಾರೆ. Rank ಕೊಡುವುದಕ್ಕೆ ನಾವು ಸಹ ಹೋಗಿದ್ದೆವು. ಎರಡನೇ ಪ್ರಶ್ನೆ Integrated University ಬಗ್ಗೆ ಮಾನ್ಯ ಸದಸ್ಯರಿಬ್ಬರ ಪ್ರಶ್ನೆಗೆ ಸಂಬಂಧಿಸಿದಂತೆ ಎಲ್ಲಾ ಜನಪ್ರತಿನಿಧಿಗಳ ಒತ್ತಡದಿಂದ ಕ್ಯಾಬಿನೆಟ್ ತೀರ್ಮಾನವಾಗಿದೆ. ಕ್ಯಾಬಿನೆಟ್‌ನಲ್ಲಿ ಮಂಡ್ಯ, ಮೈಸೂರು, ಹಾಸನ ಭಾಗದಲ್ಲಿ ಮೈಸೂರು ಕೃಷಿ ವಿಶ್ವವಿದ್ಯಾಲಯವೊಂದನ್ನು ಸ್ಥಾಪನೆ ಮಾಡಬೇಕೆಂಬ ದೃಷ್ಟಿಕೋನದಲ್ಲಿ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆ. ಇದರ ಬಗ್ಗೆ ಪ್ರತಿಯೊಂದು ವಿಶ್ವವಿದ್ಯಾಲಯ ಕೂಡ divide ಆಗಬೇಕೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ.

(ಮುಂದು)

(191) 11.03.2025 (11.50) ಹೆಚ್‌ವಿ.ವಿಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ(ಮುಂದು):-

ಸನ್ಮಾನ್ಯ ಸಭಾಪತಿಯವರೇ, ಆ ಭಾಗದ ಜನ ಪ್ರತಿನಿಧಿಗಳು, ಚುನಾಯಿತ ಎಂ.ಎಲ್.ಎ.,ಗಳು ಮತ್ತು ಚುನಾಯಿತ ಪ್ರನಿಧಿಗಳು, "ಬಾಗಲಕೋಟೆ ನಮಗೆ ಬಹಳ ದೂರವಾಗುತ್ತದೆ, ಇಲ್ಲಿಯೇ ಒಂದು ಸಮ್ಮಿಶ್ರ ವಿಶ್ವವಿದ್ಯಾಲಯವನ್ನು ಮಾಡಿಕೊಡಿ" ಎನ್ನುವ ಬೇಡಿಕೆಯ ಹಿನ್ನೆಲೆಯಲ್ಲಿ ಎಲ್ಲ ಜನಪ್ರತಿನಿಧಿಗಳ ಮನವಿಯ ಮೇರೆಗೆ ಇವತ್ತು ಸಚಿವ ಸಂಪುಟ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ.

ಸಭಾಪತಿಯವರು:- ಮಾನ್ಯ ಸಚಿವರೇ, ಇಲ್ಲಿನ ಜನಪ್ರತಿನಿಧಿಗಳ ಮನವಿಯನ್ನು ತಾವು ಆಲಿಸಿದ್ದೀರಿ, ಅದೇ ರೀತಿಯಲ್ಲಿ ಉತ್ತರ ಕರ್ನಾಟಕ ಭಾಗದ ಜನ ಪ್ರತಿನಿಧಿಗಳ ಸಲಹೆಯನ್ನು ಸಹ ಕೇಳಬೇಕಾಗಿತ್ತು. ಅವರೊಂದಿಗೆ ಮೀಟಿಂಗ್ ಮಾಡಬೇಕಾಗಿತ್ತು.

ಡಾ॥ ತಳವಾರ್ ಸಾಬಣ್ಣ:- ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಈ ವಿಶ್ವವಿದ್ಯಾಲಯಕ್ಕೆ Rank ಕೊಟ್ಟಿದ್ದಾರೆ, ಸುಮಾರು ೩೦೦ ಎಕರೆ ಜಾಗವನ್ನು ಸಹ ಕೊಟ್ಟಿದ್ದಾರೆ. ಇಲ್ಲಿ ಸುಸಜ್ಜಿತವಾಗಿರುವ ಕಟ್ಟಡ ಇದೆ. ಅಂತರರಾಷ್ಟ್ರೀಯ ಮಟ್ಟದ ಅಧ್ಯಾಪಕರು ಮತ್ತು ಉಪನ್ಯಾಸಕರು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಒಂದು ವೇಳೆ ಆ ವಿಶ್ವವಿದ್ಯಾಲಯದಲ್ಲಿ ಇರುವಂತಹ ಸಂಸ್ಥೆಗಳು ವರ್ಗಾವಣೆಯಾದರೆ ಅಲ್ಲಿನ ರೈತರು ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ವಿಶ್ವವಿದ್ಯಾಲಯವನ್ನು ಇಲ್ಲಿಗೆ ತರುವುದರ ಬಗ್ಗೆ ನಮ್ಮ ತಕರಾರಿಲ್ಲ. ಆದರೆ ಅಲ್ಲಿನ ರೈತರಿಗೆ ಈ ವಿಶ್ವವಿದ್ಯಾಲಯದಿಂದ ಅನುಕೂಲವಾಗುತ್ತಿದೆ. ರೈತರು ತೋಟಗಾರಿಕಾ ಬೆಳೆಗಳನ್ನು ಬೆಳೆಯುವುದರ ಮೂಲಕ ಅವರ ಆದಾಯ ಹೆಚ್ಚಾಗಿದೆ. ಈಗ ಸರ್ಕಾರ ತೆಗೆದುಕೊಂಡಿರುವ ನಿರ್ಧಾರದಿಂದ ಅವರಿಗೆ ಕೊಡಲಿ ಪೆಟ್ಟು ಕೊಟ್ಟಂತಾಗುತ್ತದೆ. ಇಲ್ಲಿರುವಂತಹ ಪ್ರಾಧ್ಯಾಪಕರುಗಳಿಗೆ ಕೆಲಸ ಇಲ್ಲದಂತಾಗುತ್ತದೆ. ಅಲ್ಲಿ ಕಟ್ಟಿರುವ ಕಟ್ಟಡ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರುಪಯುಕ್ತವಾಗುತ್ತದೆ, ಇದರಿಂದಾಗಿ un-utilization ನಂತಾಗುತ್ತದೆ. ಸರ್ಕಾರವೇ ಆಸಕ್ತಿ ವಹಿಸಿ ಈ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿತ್ತು. ಆದರೆ ಈಗ ಈ ಸರ್ಕಾರ ತೆಗೆದುಕೊಳ್ಳುತ್ತಿರುವ ನಿರ್ಧಾರ ಆ ಭಾಗದ ರೈತರು ಮತ್ತು ವಿಶ್ವವಿದ್ಯಾಲಯಕ್ಕೆ ಮರಣಶಾಸನ ಬರೆದಂತಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾಲಯಗಳನ್ನು ಮುಚ್ಚುವಂತಹ ಅಭಿಯಾನವನ್ನು ಈ ಸರ್ಕಾರ ದಯವಿಟ್ಟು ಕೈಬಿಡಬೇಕಾಗಿದೆ. ಈ ವಿಶ್ವವಿದ್ಯಾಲಯವನ್ನು ವರ್ಗಾವಣೆ ಮಾಡುವ ಕ್ರಮವನ್ನು ನಾನು ಕಠೋರವಾಗಿ ವಿರೋಧ ಮಾಡುತ್ತಿದ್ದೇನೆ.

ಶ್ರೀ ಪಿ.ಹೆಚ್.ಪೂಜಾರ್:– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವ ಲಿಖಿತ ರೂಪದ ಉತ್ತರದಲ್ಲಿ, "....ವಿಶೇಷಾಧಿಕಾರಿಯನ್ನು ನೇಮಿಸಿ ಬಾಗಲಕೋಟೆಯ ಕುಲಪತಿಗಳೊಂದಿಗೆ ಸಮಾಲೋಚಿಸಿ" ಎಂದು ಉಲ್ಲೇಖ ಮಾಡಿದ್ದಾರೆ. ಇದು ಸತ್ಯಕ್ಕೆ ದೂರವಾಗಿರುವ ಸಂಗತಿಯಾಗಿದೆ. ಇದಕ್ಕೆ ಕುಲಪತಿಗಳು ಒಪ್ಪಿಗೆಯನ್ನು ಕೊಟ್ಟಿಲ್ಲ. ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ಒಪ್ಪಿಗೆಯನ್ನು ತೆಗೆದುಕೊಂಡಿಲ್ಲ. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಸತ್ಯಕ್ಕೆ ದೂರವಾಗಿರುವ ಅಂಶವನ್ನು ತಿಳಿಸಿದ್ದಾರೆ. ಏತಕ್ಕೋಸ್ಕರ ಈ ರೀತಿಯ ವರದಿಯನ್ನು ನೀಡಲಾಗಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸಭಾಪತಿಯವರು:– ಈ ವಿಚಾರದ ಬಗ್ಗೆ ಸುದೀರ್ಘವಾಗಿರುವ ಚರ್ಚೆಯಾಗಬೇಕಾಗಿದೆ ಅದಕ್ಕಾಗಿ ಇದನ್ನು ಅರ್ಧಗಂಟೆ ಕಾಲಾವಧಿಯ ಚರ್ಚೆಯಡಿಯಲ್ಲಿ ತೆಗೆದುಕೊಳ್ಳಲಾಗುತ್ತದೆ.

(ಗೊಂದಲ)

ಶ್ರೀ ಪಿ.ಹೆಚ್.ಪೂಜಾರ್:– ಸನ್ಮಾನ್ಯ ಸಭಾಪತಿಯವರೇ, ಆಡಳಿತ ಮಂಡಳಿಯೂ ಇದಕ್ಕೆ ಒಪ್ಪಿಗೆ ಕೊಟ್ಟಿಲ್ಲ; ಕುಲಪತಿಗಳೂ ಒಪ್ಪಿಗೆಯನ್ನು ಕೊಟ್ಟಿಲ್ಲ. ಸತ್ಯಕ್ಕೆ ದೂರವಾಗಿರುವ ಮಾಹಿತಿಯನ್ನು ಮಾನ್ಯ ಸಚಿವರು ನೀಡುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್(ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):– ಸನ್ಮಾನ್ಯ ಸಭಾಪತಿಯವರೇ, ಸುಳ್ಳು ಹೇಳಿ ನಾನು ಮನೆಗೆ ಹೋಗುವ ಪ್ರಮೇಯವಿಲ್ಲ.

(ಗೊಂದಲ)

ಶ್ರೀ ಟಿ.ಎ.ಶರವಣ:– ಸನ್ಮಾನ್ಯ ಸಭಾಪತಿಯವರೇ, ತಾವು ಮಾನ್ಯ ಸದಸ್ಯರುಗಳ ರಕ್ಷಣೆಗೆ ಬರಬೇಕಾಗಿದೆ.

ಸಭಾಪತಿಯವರು:– ಎಲ್ಲರೂ ಕುಳಿತುಕೊಳ್ಳಿ. ಸದರಿ ವಿಷಯವನ್ನು ನಾನು ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ಪರಿವರ್ತಿಸಿದ್ದೇನೆ. ಮುಂದಿನ ಪ್ರಶ್ನೆ ಶ್ರೀ ಐವನ್ ಡಿ'ಸೋಜಾ ಅವರದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	**509**
ಸದಸ್ಯರ ಹೆಸರು	ಶ್ರೀ ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	11.03.2025
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕರಾವಳಿ ಕರ್ನಾಟಕಕ್ಕೆ ಪ್ರತ್ಯೇಕವಾದ ಮರಳು ನೀತಿ ಜಾರಿಗೆ ತರುವುದಾಗಿ ಘೋಷಿಸಿದ್ದು, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು;	• ದಿನಾಂಕ 01.12.2021 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ನ್ನು ಜಾರಿಗೊಳಿಸಲಾಗಿರುತ್ತದೆ. • ಸದರಿ ತಿದ್ದುಪಡಿ ನಿಯಮ 31-ZA ರಲ್ಲಿ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾಣೆ ಮಂತ್ರಾಲಯದ O.M ಸಂಖ್ಯೆ 11-83/ 2005-IA-III (Vol-III), ದಿನಾಂಕ 08.11.2011ರ ಆದೇಶದಂತೆ, ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ವಲಯ (CRZ) ಪ್ರದೇಶಗಳಲ್ಲಿ ಮರಳು ದಿಬ್ಬಗಳನ್ನು ತೆರವುಗೊಳಿಸಲು ಸಾಂಪ್ರದಾಯಿಕ ಮರಳು ತೆಗೆಯುವ ವ್ಯಕ್ತಿ / ಸಮುದಾಯದವರಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. • ಅಂತೆಯೇ, ತಿದ್ದುಪಡಿ ನಿಯಮ 31-ZB ರಲ್ಲಿ, ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ (Non-CRZ) ಉನ್ನತ ಶ್ರೇಣಿಯ ಹಳ್ಳ / ನದಿ ಪಾತ್ರಗಳ ವ್ಯಾಪ್ತಿಯಲ್ಲಿ ಗುರುತಿಸುವ ಮರಳು ಬ್ಲಾಕ್‌ಗಳನ್ನು ಜಿಲ್ಲೆಯ ಸಾಂಪ್ರದಾಯಿಕ ಮರಳು ತೆಗೆಯುವ ಸಮುದಾಯದವರಿಗೆ ಟೆಂಡರ್-ಕಂ-ಹರಾಜು ಮೂಲಕ ಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. • ಮುಂದುವರೆದು, ದಿನಾಂಕ 17.03.2023ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023ನ್ನು ಜಾರಿಗೆ ತಂದಿದ್ದು, ಸದರಿ ತಿದ್ದುಪಡಿ ನಿಯಮ 31-ZB(3) ರಲ್ಲಿ ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ (Non-CRZ) ಕಿಂಡಿ ಅಣೆಕಟ್ಟು ಪ್ರದೇಶಗಳಲ್ಲಿ ಹೂಳಿನೊಂದಿಗೆ ದೊರೆಯುವ ಮರಳನ್ನು ಜಿಲ್ಲೆಯ ಸಾಂಪ್ರದಾಯಿಕ ಮರಳು ತೆಗೆಯುವ ಸಮುದಾಯದವರಿಗೆ ಟೆಂಡರ್-ಕಂ-ಹರಾಜು ಮೂಲಕ ಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. • ಮೇಲ್ಕಂಡಂತೆ, ಕರಾವಳಿ ಜಿಲ್ಲೆಯ ಸಾಂಪ್ರದಾಯಿಕ ಮರಳು ತೆಗೆಯುವ ವ್ಯಕ್ತಿ / ಸಮುದಾಯದವರಿಗೆ ಜಿಲ್ಲಾ ವ್ಯಾಪ್ತಿಯ ಮರಳು ತೆಗೆಯುವ ಎಲ್ಲಾ ಮೂಲಗಳಾದ ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿ, ಕಿಂಡಿ ಅಣೆಕಟ್ಟು ಪ್ರದೇಶಗಳಲ್ಲಿ ಮತ್ತು CRZ ನದಿ ಪಾತ್ರದ ಮರಳು ದಿಬ್ಬಗಳಲ್ಲಿ ದೊರೆಯುವ ಮರಳನ್ನು ತೆಗೆದು ವಿಲೇವಾರಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅ)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತ್ಯೇಕವಾಗಿ ಮಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮರಳು ಅಭಾವ ವಿದ್ದು, Non-CRZ ಪರವಾನಿಗೆ ನೀಡಿದ ಇಲಾಖೆಗೆ ಮರಳು ಬೇಡಿಕೆ ಇಲ್ಲದೇ ಇರುವುದು ಹಾಗೂ CRZ ಪ್ರದೇಶದಲ್ಲಿ ಯಥೇಚ್ಛವಾಗಿ ಅಕ್ರಮ ಮರಳು ದಂಧೆ ನಡೆಸುತ್ತಿರುವವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು;	• ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯ IV, V ಮತ್ತು ಉನ್ನತ ಶ್ರೇಣಿಯ ಹಳ್ಳ /ನದಿಗಳ ಪಾತ್ರಗಳಲ್ಲಿ ಟೆಂಡರ್ ಕಂ-ಹರಾಜು ಮೂಲಕ 18 ಮತ್ತು ಸರ್ಕಾರಿ ಕಾಮಗಾರಿಗಳಿಗೆ 05 ಮರಳು ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. • ಮುಂದುವರೆದು, ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 16 ಎಂ-ಸ್ಯಾಂಡ್ ಘಟಕಗಳು ಕಾರ್ಯ ನಿರ್ವಹಿಸುತ್ತಿರುತ್ತವೆ. ಸದರಿ ಮೂಲಗಳಿಂದ ಮಂಗಳೂರು ಹಾಗೂ ಸುತ್ತಮುತ್ತಲಿನ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆಯಾಗುತ್ತಿದ್ದು, ಜಿಲ್ಲೆಯಲ್ಲಿ ಮರಳಿನ ಅಭಾವ ಇರುವುದು ಕಂಡುಬಂದಿರುವುದಿಲ್ಲ. • IV, V ಮತ್ತು ಉನ್ನತ ಶ್ರೇಣಿಯ ಹಳ್ಳ /ನದಿಗಳ ಪಾತ್ರಗಳಲ್ಲಿ ಸರ್ಕಾರಿ ಕಾಮಗಾರಿಗಳಿಗಾಗಿ ಲೋಕೋಪಯೋಗಿ ಇಲಾಖೆಗೆ 04 ಮತ್ತು ಸಣ್ಣ ನೀರಾವರಿ ಇಲಾಖೆಗೆ 01 ಮರಳು ಬ್ಲಾಕ್ ಸೇರಿದಂತೆ ಒಟ್ಟು 05 ಮರಳು ಬ್ಲಾಕ್ ಗಳಿಗೆ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. • ಈ ಪೈಕಿ ಲೋಕೋಪಯೋಗಿ ಇಲಾಖೆಯ 02 ಮರಳು ಬ್ಲಾಕ್ ಗಳಲ್ಲಿ ಗಣಿಗಾರಿಕೆಯನ್ನು ಪ್ರಾರಂಭಿಸಿ 01 ಮರಳು ಬ್ಲಾಕ್ ನಿಂದ ಈಗಾಗಲೇ ಇಲಾಖಾ ಕಾಮಗಾರಿಗಳಿಗೆ ಮರಳು ಪೂರೈಕೆಯಾಗುತ್ತಿರುತ್ತದೆ. ಉಳಿದ 02 ಮರಳು ಬ್ಲಾಕ್ ಗಳಲ್ಲಿ ಗಣಿಗಾರಿಕೆ ಪ್ರಾರಂಭಿಸಬೇಕಾಗಿರುತ್ತದೆ. ಸಣ್ಣ ನೀರಾವರಿ ಇಲಾಖೆಯ 01 ಮರಳು ಬ್ಲಾಕ್ ನಲ್ಲಿ ಗಣಿಗಾರಿಕೆ ನಡೆಸಿ ಇಲಾಖೆಯ ಕಾಮಗಾರಿಗಳಿಗೆ ಪೂರೈಕೆಯಾಗುತ್ತಿರುತ್ತದೆ. • ದಕ್ಷಿಣ ಕನ್ನಡ ಜಿಲ್ಲೆಯ CRZ ನದಿ ಪಾತ್ರಗಳ ಪ್ರದೇಶದಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಜಿಲ್ಲಾ ಹಾಗೂ ತಾಲ್ಲೂಕು ಮರಳು ಸಮಿತಿಯಿಂದ ನಿಯಮಾನುಸಾರ ಕ್ರಮ ವಹಿಸಲಾಗಿದ್ದು, ಅಕ್ರಮ ಮರಳು ದಂಧೆ ಪ್ರಕರಣಗಳನ್ನು ಪತ್ತೆ ಹಚ್ಚಿ, ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಪೊಲೀಸ್ ಠಾಣೆ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ದಾಖಲಿಸಿದ್ದು ಹಾಗೂ ದಂಡ ವಿಧಿಸಿ, ಸಂಗ್ರಹಿಸಲಾಗಿರುತ್ತದೆ. • ಅದರಂತೆ, 2023-24 ಮತ್ತು 2024-25ನೇ ಸಾಲಿನ ಜನವರಿ ಅಂತ್ಯದವರೆಗೆ ಜಿಲ್ಲಾ ಮರಳು ಸಮಿತಿಯಿಂದ CRZ ವ್ಯಾಪ್ತಿಯ ನದಿ ಪಾತ್ರಗಳ ಪ್ರದೇಶದಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳಡಿ ಕೈಗೊಂಡ ಕ್ರಮದ ವಿವರಗಳು ಈ ಕೆಳಕಂಡಂತಿದೆ:

ವರ್ಷ	ಪತ್ತೆಯಾದ ಪ್ರಕರಣಗಳು	ಸಂಗ್ರಹಿಸಲಾದ ದಂಡ (₹ಲಕ್ಷಗಳಲ್ಲಿ)	ದಾಖಲಾದ FIR / PCR
2023-24	108	42.90	5
2024-25 (ಜನವರಿ ಮಾಹೆವರೆಗೆ)	59	14.72	27
ಒಟ್ಟು	167	57.62	32

...3

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ)	ಅಕ್ರಮ ಮರಳುಗಾರಿಕೆಯನ್ನು ಸಕ್ರಮಗೊಳಿಸಲು ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದ್ದು; ಈ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟಗೊಂಡರೂ ಯಾವುದೇ ಕ್ರಮ ಕೈಗೊಳ್ಳದೇ ಇರಲು ಕಾರಣವೇನು;	• ಅಕ್ರಮ ಮರಳುಗಾರಿಕೆಯನ್ನು ಸಕ್ರಮಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. • ಮುಂದುವರೆದು, ದಕ್ಷಿಣ ಕನ್ನಡ ಜಿಲ್ಲೆಯ Non CRZ ವ್ಯಾಪ್ತಿಯ ಉನ್ನತ ಶ್ರೇಣಿಯ ಹಳ್ಳ / ನದಿ ಪಾತ್ರಗಳ ಪ್ರದೇಶಗಳಲ್ಲಿ ಅನಧಿಕೃತ ಮರಳು ಗಣಿಗಾರಿಕೆ ನಡೆಯುತ್ತಿದ್ದ ಪ್ರದೇಶ / ಸ್ಥಳಗಳನ್ನು ಪತ್ತೆ ಹಚ್ಚಿ, ಅಂತಹ ಒಟ್ಟು 11 ಪ್ರದೇಶಗಳಲ್ಲಿ ಮರಳು ನಿಕ್ಷೇಪವಿರುವ ಬಗ್ಗೆ ಖಚಿತಪಡಿಸಿಕೊಂಡು ತಾಲ್ಲೂಕು ಮರಳು ಸಮಿತಿಯಿಂದ ಹೊಸ ಮರಳು ಬ್ಲಾಕ್ ಗಳನ್ನು ಗುರುತಿಸಲಾಗಿರುತ್ತದೆ. • ಈ ಪೈಕಿ 06 ಬ್ಲಾಕ್ ಗಳನ್ನು ಈಗಾಗಲೇ ಟೆಂಡರ್-ಕಂ-ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿರುತ್ತದೆ. ಉಳಿದ 05 ಮರಳು ಬ್ಲಾಕ್ ಗಳಿಗೆ ಟೆಂಡರ್-ಕಂ-ಹರಾಜು ಮೂಲಕ ವಿಲೇಪಡಿಸಲು ಜಿಲ್ಲಾ ಮರಳು ಸಮಿತಿಯು ಅನುಮೋದನೆ ನೀಡಿದ್ದು, ಸದರಿ ಮರಳು ಬ್ಲಾಕ್ ಗಳನ್ನು ಟೆಂಡರ್-ಕಂ-ಹರಾಜು ಪ್ರಕ್ರಿಯೆಗೆ ಒಳಪಡಿಸಲು ಕ್ರಮವಹಿಸಲಾಗಿದೆ. • ಮೇಲ್ಕಂಡಂತೆ ಜಿಲ್ಲಾ ಮತ್ತು ತಾಲ್ಲೂಕು ಮರಳು ಸಮಿತಿಗಳಿಂದ ಅನಧಿಕೃತ ಗಣಿಗಾರಿಕೆ ನಡೆಯುತ್ತಿರುವ ಸ್ಥಳಗಳನ್ನು ಪತ್ತೆ ಹಚ್ಚಿ ನಿಯಮಾನುಸಾರ ಗಣಿಗಾರಿಕೆಗೆ ಒಳಪಡಿಸಲು ಹಾಗೂ ಅನಧಿಕೃತ ಗಣಿಗಾರಿಕೆ ನಡೆಸುತ್ತಿದ್ದವರ ವಿರುದ್ಧ ನಿಯಮಾನುಸಾರ ಪ್ರಕರಣ ದಾಖಲಿಸಲು ಹಾಗೂ ದಂಡ ವಿಧಿಸಿ ಸಂಗ್ರಹಿಸಲು ಕ್ರಮ ವಹಿಸಲಾಗುತ್ತಿದೆ. ಅನಧಿಕೃತ ಗಣಿಗಾರಿಕೆ ತಡೆಗಟ್ಟಲು ಜಿಲ್ಲಾಡಳಿತದಿಂದ ಆದ್ಯತೆ ಮೇಲೆ ಕ್ರಮ ವಹಿಸಲಾಗಿದೆ.
ಈ)	ಮರಳು ಮಾಫಿಯಾ ದಂಧೆಗೆ ಯಾವುದೇ ಕ್ರಮ ಕೈಗೊಳ್ಳದೇ ಕಾನೂನು ಉಲ್ಲಂಘನೆ ಆಗಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ಈ ಸಂಬಂಧ ಎಷ್ಟು ಪ್ರಕರಣ ದಾಖಲಾಗಿದೆ; ಎಷ್ಟು ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ; ಸರ್ಕಾರಕ್ಕೆ ಉಂಟಾದ ತೆರಿಗೆ ನಷ್ಟ ಎಷ್ಟು; (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವಿವರ ನೀಡುವುದು)	• ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಗಣಿಗಾರಿಕೆಯನ್ನು ನಿಯಂತ್ರಿಸಲು ಜಿಲ್ಲಾ ಹಾಗೂ ತಾಲ್ಲೂಕು ಮರಳು ಸಮಿತಿಯಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. • ಅದರಂತೆ, 2024-25ನೇ ಸಾಲಿನ ಜನವರಿ ಅಂತ್ಯದವರೆಗೆ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳಡಿ ಒಟ್ಟು 173 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿರುತ್ತದೆ. • ಸದರಿ ಪ್ರಕರಣಗಳಲ್ಲಿ 107 ಲಾರಿ ವಾಹನಗಳು, 91 ದೋಣಿಗಳು, 06 ಮೋಟಾರ್ ಯಂತ್ರಗಳು, 01 ಡ್ರೆಡ್ಜಿಂಗ್ ಯಂತ್ರ ಮತ್ತು 13 ಗ್ಯಾಸ್ ಸಿಲೆಂಡರ್ ಗಳನ್ನು ವಶಪಡಿಸಿಕೊಂಡು ಸಂಬಂಧಪಟ್ಟ ಪೊಲೀಸ್ / ನ್ಯಾಯಾಲಯಗಳಲ್ಲಿ 82 ಮೊಕದ್ದಮೆಗಳನ್ನು ದಾಖಲಿಸಲಾಗಿರುತ್ತದೆ ಹಾಗೂ ₹54.04 ಲಕ್ಷಗಳ ದಂಡ ವಿಧಿಸಿ ಸಂಗ್ರಹಿಸಲಾಗಿರುತ್ತದೆ. • ಮುಂದುವರೆದು, ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ 2024-25ನೇ ಸಾಲಿನ ಜನವರಿ ಅಂತ್ಯದವರೆಗೆ ಒಟ್ಟು 103 ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ಪತ್ತೆ ಹಚ್ಚಲಾಗಿರುತ್ತದೆ. ಸದರಿ ಪ್ರಕರಣಗಳಲ್ಲಿ 90 ವಾಹನಗಳು ಹಾಗೂ 06 ದೋಣಿಗಳು ವಶಪಡಿಸಿಕೊಂಡು ₹19.59 ಲಕ್ಷಗಳ ದಂಡ ವಿಧಿಸಿ ಸಂಗ್ರಹಿಸಲಾಗಿರುತ್ತದೆ.

...4

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಙ)	ಕರಾವಳಿಯಲ್ಲಿ ಅಕ್ರಮ ಮರಳು ದಂಧೆ ತಡೆಗಟ್ಟಲು ಸರ್ಕಾರದ ಮುಂದೆ ಇರುವ ಯೋಜನೆಗಳು ಯಾವುವು; ಮರಳು ದಂಧೆಯಲ್ಲಿ ಶಾಮೀಲು ಆಗಿರುವವರ ವಿರುದ್ಧ ಸರ್ಕಾರದ ಕ್ರಮವೇನು (ವಿವರ ನೀಡುವುದು)	• ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಲ್ಲಿ ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿರುತ್ತದೆ. • ಸದರಿ ಸಮಿತಿಗಳಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ. • ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 4(1), 4(1-A) ಮತ್ತು ಕಲಂ 21 ಮತ್ತು 22 ರಡಿಯಲ್ಲಿ ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 31-R(12) ರಡಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ. • ಜಿಲ್ಲಾ ವ್ಯಾಪ್ತಿಯಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮರಳು ಸಮಿತಿಯಿಂದ ಚೆಕ್ ಪೋಸ್ಟ್ ಸ್ಥಾಪನೆ ಮಾಡಲು ಮತ್ತು ಚಾಲಿತದಳ ತಂಡವನ್ನು ರಚಿಸಿಕೊಂಡು ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ನಿಯಮ ರೂಪಿಸಲಾಗಿರುತ್ತದೆ. • ಮರಳು ಹಾಗೂ ಇತರೆ ಉಪಖನಿಜ ಸಾಗಾಣಿಕೆ ವಾಹನಗಳ ಚಲನವಲನಗಳ ಮೇಲೆ ನಿಗಾವಹಿಸಲು ಕೇಂದ್ರೀಕೃತ One State One GPS ವ್ಯವಸ್ಥೆಯನ್ನು ಜಾರಿಗೊಳಿಸ ಲಾಗಿರುತ್ತದೆ. • ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು "ಖನಿಜ ಸಂರಕ್ಷಣಾ ಪಡೆ" ಯನ್ನು ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ. • ಮೇಲ್ಕಂಡಂತೆ, ಅಕ್ರಮ ಮರಳು ಗಣಿಗಾರಿಕೆಯನ್ನು ನಿಯಂತ್ರಿಸಲು ಸರ್ಕಾರದಿಂದ ಕ್ರಮ ವಹಿಸಲಾಗಿರುತ್ತದೆ. • ಅಕ್ರಮ ಮರಳು ದಂಧೆಯಲ್ಲಿ ಶಾಮೀಲಾದ ವ್ಯಕ್ತಿಗಳ ವಿರುದ್ಧ ನಿಯಮಗಳನ್ವಯ ದಂಡ ವಸೂಲಿ ಮಾಡಲು ಹಾಗೂ ಸಂಬಂಧಪಟ್ಟ ಪೋಲೀಸ್ ಠಾಣೆ ಹಾಗೂ ಮಾನ್ಯ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಕ್ರಮ ವಹಿಸಲಾಗುತ್ತಿದೆ.

ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):– ಸನ್ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿರುವ ದೊಡ್ಡ ದೊಡ್ಡ ಸಮಸ್ಯೆಗಳಲ್ಲಿ ಮರಳುಗಾರಿಕೆ ಸಮಸ್ಯೆ ಅತ್ಯಂತ ದೊಡ್ಡ ಸಮಸ್ಯೆಯಾಗಿದೆ. ಅಕ್ರಮ ಮರಳುಗಾರಿಕೆಯಲ್ಲಿ ಪೋಲೀಸರು ಮತ್ತು ಅಧಿಕಾರಿಗಳು ಒಟ್ಟಾಗಿ ದಂಧೆಕೋರರೊಂದಿಗೆ ಸೇರಿಕೊಂಡು ಒಂದು ರೀತಿಯ ವ್ಯವಹಾರವನ್ನು ಮಾಡುತ್ತಿದ್ದಾರೆ. ಇದರಿಂದಾಗಿ ಸಾಮಾನ್ಯ ಜನರಿಗೆ ತೊಂದರೆಯಾಗಿದೆ. ನಮ್ಮ ಊರಿನಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಾವೂರು ಹುಲಿಯಾ ಎನ್ನುವ ಒಂದು ದ್ವೀಪವಿದೆ. ಇದೊಂದು 125 ಎಕರೆಯ ವಿಸ್ತೀರ್ಣವನ್ನು ಹೊಂದಿರುವಂತಹ ದ್ವೀಪವಾಗಿದೆ. ಮರಳು ತೆಗೆದು...ತೆಗೆದು ಈಗ 125 ಎಕರೆಯಲ್ಲಿ ಕೇವಲ 88 ಎಕರೆ ಮಾತ್ರ ಉಳಿದುಕೊಂಡಿದೆ. ಇದರಿಂದ ಅಲ್ಲಿ ಮರಳು ತೆಗೆದಯುವ ದಂಧೆ ಯಾವ ರೀತಿಯಲ್ಲಿ ನಡೆಯುತ್ತಿದೆ ಎನ್ನುವುದು ತಮಗೆ ಗೊತ್ತಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವಂತಹ ಲಿಖಿತರೂಪದ ಉತ್ತರದ ಮೊದಲನೆಯ ಪುಟದ ಐದನೆಯ ಕಂಡಿಕೆಯಲ್ಲಿ;" ಮೇಲ್ಕಂಡಂತೆ ಕರಾವಳಿ ಜಿಲ್ಲೆಯ ಸಾಂಪ್ರದಾಯಿಕ ಮರಳು ತೆಗೆಯುವ ವ್ಯಕ್ತಿ/ಸಮುದಾಯದವರಿಗೆ ಜಿಲ್ಲಾ ವ್ಯಾಪ್ತಿಯ ಮರಳು ತೆಗೆದಯುವ ಎಲ್ಲಾ ಮೂಲಗಳಾದ ಉನ್ನತ ಶ್ರೇಣಿಯ ಹಳ್ಳ, ನದಿ ಪಾತ್ರಗಳಲ್ಲಿ, ಕಿಂಡಿ ಅಣೆಕಟ್ಟು ಪ್ರದೇಶಗಳಲ್ಲಿ ಮತ್ತು ಸಿ.ಆರ್.ಝಡ್., ನದಿ ಪಾತ್ರದ ಮರಳು ದಿಬ್ಬಗಳಲ್ಲಿ ದೊರೆಯುವ ಮರಳನ್ನು ತೆಗೆದು ವಿಲೇವಾರಿ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ" ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾಗಿರುವ ಸಂಗತಿಯಾಗಿದೆ. ಇಂತಹ ಉತ್ತರವನ್ನು ಮಾನ್ಯ ಸಚಿವರಿಗೆ ಅಧಿಕಾರಿಗಳು ಬರೆದುಕೊಟ್ಟಿರಬಹುದು. ಸುಪ್ರೀಂ ಕೋರ್ಟಿನ ಆದೇಶದ ಪ್ರಕಾರ ಸಿ.ಆರ್.ಝಡ್., ಪ್ರದೇಶದಲ್ಲಿ ಮರಳು ತೆಗೆಯುವುದನ್ನು ನಿಲ್ಲಿಸಿ ಸುಮಾರು ಎರಡು ವರ್ಷಗಳಾಗಿವೆ. ಈ ಪ್ರದೇಶದಲ್ಲಿ ಮರಳನ್ನು ತೆಗೆಯುವುದಕ್ಕೆ ಅವಕಾಶವಿಲ್ಲ. ಆದರೆ, ಸಿ.ಆರ್.ಝಡ್., ಪ್ರದೇಶಗಳಲ್ಲಿ ಯಥೇಚ್ಛವಾಗಿ ಮರಳು ತೆಗೆಯುವಂತಹ ದಂಧೆ ನಡೆಯುತ್ತಿದೆ. ಯಾವ ಅಧಿಕಾರಿಗಳು ಕೇರ್ ಮಾಡುವುದಿಲ್ಲ. ಮರಳು ತೆಗೆಯುತ್ತಿದ್ದಾರೆ ನಮ್ಮ ಮನೆ ಮತ್ತು ಜಾಗವನ್ನು ಉಳಿಸಿ ಎಂದು ಅಲ್ಲಿನ ಜನರು ನೀರಿನಲ್ಲಿ ನಿಂತುಕೊಂಡು ಪ್ರತಿಭಟನೆ ಮಾಡುತ್ತಿರುವಂತಹ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ಯಾವುದೇ ಅಧಿಕಾರಿಗಳು ಕೇರ್ ಮಾಡುವುದಿಲ್ಲ. ಪತ್ರಿಕೆಗಳಲ್ಲಿ "ನಿಯಂತ್ರಣಕ್ಕೆ ಬಾರದ ಮರಳು ಅಕ್ರಮ ದಂಧೆ; ಕಣ್ಣು ಮುಚ್ಚಿ ಕುಳಿತ ಅಧಿಕಾರಿಗಳು; ಕ್ಯಾರೇ ಎನ್ನದ ದಂಧೆಕೋರರು" ಎನ್ನುವ ಸುದ್ದಿ ಪ್ರಕಟವಾಗಿದೆ. ಇಷ್ಟಾದರೂ ಸಹ ಸರ್ಕಾರ ಅಕ್ರಮ ಮರಳುಗಾರಿಕೆಯ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ನನ್ನ ಸಲಹೆಯೇನೆಂದರೆ, ಮಂಗಳೂರಿನ ಕರಾವಳಿ ಪ್ರದೇಶಕ್ಕೆ ಹಿಂದೆ "ಸ್ಯಾಂಡ್ ಬಜಾರ್" ಎಂದು ಮಾಡಿದ್ದರು. ಸ್ಯಾಂಡ್ ಬಜಾರ್ ಎಂದರೆ, ಸಿ.ಆರ್.ಝಡ್., ಮತ್ತು ನಾನ್-ಸಿ.ಆರ್.ಝಡ್., ಪ್ರದೇಶದಲ್ಲಿ ಮರಳನ್ನು ತೆಗೆದು app ಮೂಲಕ ಯಾರಿಗೆ ಮರಳಿನ ಅವಶ್ಯಕತೆ ಇದೆ ಅವರು ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಅವರಿಗೆ ಬೇಕಾಗಿರುವ ಸ್ಥಳಕ್ಕೆ ಮರಳನ್ನು ಸರಬರಾಜು ಮಾಡಲಾಗುತ್ತದೆ. ಅದರ ಬೆಲೆಯನ್ನು ಜಿಲ್ಲಾಡಳಿತ ನಿಗದಿ ಮಾಡಿತ್ತು. ಆದರೆ, ಆ app ನ್ನು ಮುಚ್ಚಿಯೇ ಬಿಟ್ಟಿದ್ದಾರೆ. ಈ ವ್ಯವಸ್ಥೆಯನ್ನು ಮುಚ್ಚಿದ ನಂತರ ಸರ್ಕಾರ "ಕಾಲಾನುಕಾಲಕ್ಕೆ ನಾವು ಪ್ರತ್ಯೇಕವಾಗಿರುವ ಮರಳು ನೀತಿಯನ್ನು ತರುತ್ತೇವೆ" ಎನ್ನುವ ಮಾತನ್ನು ಹೇಳಿತ್ತು. ಕರಾವಳಿ ಭಾಗದಲ್ಲಿ ಮಳೆ ಹೆಚ್ಚಾಗಿ ಬರುತ್ತದೆ. ಫಲ್ಗುಣಿ ಮತ್ತು ನೇತ್ರಾವತಿ ನದಿಗಳಿಂದ ನಮ್ಮಲ್ಲಿ ನಿರಂತರವಾಗಿ ನೀರು ಹರಿದು ಹೋಗುತ್ತಿರುತ್ತದೆ. ಇದರಿಂದಾಗಿ ಮರಳು ಪಕ್ಕದಲ್ಲಿ ಸಂಗ್ರಹವಾಗುತ್ತಿರುತ್ತದೆ. ಈ ಮರಳನ್ನು ತೆಗೆದು ಮಾರಾಟ ಮಾಡುವುದಕ್ಕೆ ನಮಗೆ ಸಿ.ಆರ್.ಝಡ್.,ನಲ್ಲಿ ಅವಕಾಶ ಮಾಡಿಕೊಡಬೇಕಾಗಿದೆ.

ಸಭಾಪತಿಯವರು:- ಮಾನ್ಯ ಐವನ್ ಡಿ'ಸೋಜಾರವರೇ, ಪ್ರಶ್ನೋತ್ತರ ಅವಧಿಯಲ್ಲಿ ಭಾಷಣ ಮಾಡುವ ರೀತಿಯಲ್ಲಿ ಮಾತನಾಡುತ್ತಿದ್ದೀರಿ. ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಐವನ್ ಡಿ'ಸೋಜಾ:– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರ ಸರಿಯಾಗಿಲ್ಲ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ(ಗಣಿ ಭೂವಿಜ್ಞಾನ ಮತ್ತು ತೋಟಗಾರಿಕಾ ಸಚಿವರು):– ಸನ್ಮಾನ್ಯ ಸಭಾಪತಿಯವರೇ, ಸಿ.ಆರ್.ಝಡ್., ವಲಯದಲ್ಲಿ ಮರಳು ದಿಬ್ಬವನ್ನು ತೆಗೆಯಲು ಮತ್ತು ತೆರವುಗೊಳಿಸಲು ನಮ್ಮ ನಿಯಮಗಳಲ್ಲಿ ಅವಕಾಶವಿದೆ. ಆದರೆ, ತೆರವುಗೊಳಿಸಿರುವ ಮರಳನ್ನು ಚಟುವಟಿಕೆಗಳಿಗೆ ಅವಕಾಶ ನಿರ್ಬಂಧಿತ NGT (National Green Tribunal) ಎಂದು ನಮ್ಮ ಇಲಾಖೆಯ ಆದೇಶವಿದೆ. ಅದೇ ರೀತಿಯಲ್ಲಿ ಮಾನ್ಯ ಸದಸ್ಯರು ಉಲ್ಲೇಖ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳಬೇಕಾದರೆ, ಜಿಲ್ಲಾ ಆಡಳಿತಕ್ಕೆ ಈಗ ನಾವು ಹೆಚ್ಚಿನ ಅವಕಾಶವನ್ನು ಕೊಡುತ್ತಿದ್ದೇವೆ. ಜಿಲ್ಲಾ ಆಡಳಿತದಲ್ಲಿ ಕೆ.ಡಿ.ಪಿ., ಮೀಟಿಂಗ್‌ನಲ್ಲಿ ತಾವುಗಳು ಮತ್ತು ಜಿಲ್ಲಾಧಿಕಾರಿಗಳು ಸೇರಿ ತಮಗೆ ಬೇಕಾಗಿರುವ ರೀತಿಯಲ್ಲಿ ಪರ್ಮಿಟ್ ವ್ಯವಸ್ಥೆ ಆಗಿರಬಹುದು ಇನ್ನಿತರ ನಿಯಮಗಳನ್ನು ರೂಪಿಸಿಕೊಳ್ಳುವುದಕ್ಕೆ ಒಂದು ಸಮಿತಿಯನ್ನು ರಚನೆ ಮಾಡಿ, ಆ ಸಮಿತಿಯ ಮುಖಾಂತರ ಆಗುಹೋಗುಗಳನ್ನು ಸರಿದೂಗಿಸಿಕೊಂಡು ಎಸ್.ಪಿ., ಹಾಗೂ ಡಿ.ಸಿ.,ಯವರ ಅಧ್ಯಕ್ಷತೆಯಲ್ಲಿ ಜನಪ್ರತಿನಿಧಿಗಳು ಸೇರಿ ಆ ಕೆಲಸವನ್ನು ಮಾಡುತ್ತಾರೆ ಎನ್ನುವ ವಿಶ್ವಾಸ ನನಗಿದೆ.

ಶ್ರೀ ಐವನ್ ಡಿಸೋಜಾ:– ಸನ್ಮಾನ್ಯ ಸಭಾಪತಿಯವರೇ, ನಾನು ನಮ್ಮ ಕರಾವಳಿ ಭಾಗಕ್ಕೆ ಪ್ರತ್ಯೇಕವಾಗಿರುವ ಮರಳುನೀತಿಯನ್ನು ತರಬೇಕೆಂದು ನಮ್ಮ ಸಚಿವರಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ನಮ್ಮ ಭಾಗದಲ್ಲಿ ಮಳೆ ಯಥೇಚ್ಛವಾಗಿ ಬರುತ್ತದೆ. ವರ್ಷವಿಡಿ ನೀರು ಹರಿಯುತ್ತಿರುತ್ತದೆ. ಆಗ ಮರಳು ಪಕ್ಕದಲ್ಲಿ ಸಂಗ್ರಹವಾಗುತ್ತದೆ. ನಮ್ಮಲ್ಲಿ ನೀರಿನಲ್ಲಿ (instream) ಮುಳುಗಿ ಮರಳನ್ನು ತೆಗೆದು ದೋಣಿಗಳಲ್ಲಿ ತುಂಬಿ, ಅದನ್ನು ನದಿಪಾತ್ರಕ್ಕೆ ಬಂದು ಮರಳನ್ನು ಕೊಡುತ್ತಾರೆ. ನಮ್ಮ ಊರಿನಲ್ಲಿ ಯಥೇಚ್ಛವಾಗಿ ಮಳೆ ಬಂದು ಮರಳು ಸಂಗ್ರಹವಾಗುತ್ತದೆ. ಈ ಮರಳನ್ನು ತೆಗೆಯದೇ ಹೋದರೇ, ನದಿ ನೀರಿನ ಪ್ರಮಾಣ ಹೆಚ್ಚಾಗಿ ನದಿಪಾತ್ರದಲ್ಲಿರುವ ಪ್ರದೇಶಗಳಿಗೆ ನೀರು ತುಂಬಿ ಮಳೆಗಾಲದಲ್ಲಿ ತೊಂದರೆಯಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ, ಮಾನ್ಯ ಸಚಿವರು ಮಂಗಳೂರಿನಲ್ಲಿ ಆಗಬಹುದು ಅಥವಾ ಬೆಂಗಳೂರಿನಲ್ಲಿ ಆಗಬಹುದು ನಮ್ಮ ಭಾಗದ ಎಲ್ಲ ಚುನಾಯಿತ ಪ್ರತಿನಿಧಿಗಳ ಸಭೆಯನ್ನು ಕರೆದು ನಮಗೆ ಪ್ರತ್ಯೇಕವಾಗಿರುವ ಮರಳುನೀತಿಯನ್ನು ರೂಪಿಸಿಕೊಡಬೇಕಾಗಿರುವ ಅನಿವಾರ್ಯತೆ ಇದೆ.

ಸನ್ಮಾನ್ಯ ಸಭಾಪತಿಯವರೇ, ಮಂಗಳೂರಿನಲ್ಲಿ ಮನೆ ಕಟ್ಟುವುದಕ್ಕೆ ಮರಳು ಕೇಳಿದರೆ, ಸಂಜೆ ಒಬ್ಬ ಗಿರಾಕಿ ಬರುತ್ತಾನೆ. ಅವನಿಗೆ ಆರ್ಡರ್ ಮಾಡಬೇಕು. ರಾತ್ರಿ ಬಂದು ಸೈಟ್ ನೋಡಿ ಹೋಗಿ ರಾತ್ರಿ 12.00 ಗಂಟೆಗೆ ಬಂದು ಮರಳನ್ನು unload ಮಾಡಿ ಹೋಗುತ್ತಾರೆ. ಇದರಿಂದಾಗಿ ಅಲ್ಲಿನ ವ್ಯವಸ್ಥೆ ಸಂಪೂರ್ಣವಾಗಿ ಹಾಳಾಗಿದೆ. ಅಲ್ಲಿನ ಅಧಿಕಾರಿಗಳು ಕಣ್ಮುಚ್ಚಿ ಕುಳಿತುಕೊಂಡಿದ್ದಾರೆ.

(ಮುಂದುವರಿದಿದೆ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(192) 11.03.2025 / 12.00 / ಪಿಕೆ:ಬಿಎನ್ಎಸ್ (ಸಭಾಪತಿಗಳ ಉಪಸ್ಥಿತಿ)

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:- ಮಾನ್ಯ ಸಭಾಪತಿಗಳೆ, ವಾಸ್ತವವಾಗಿ ಅಲ್ಲಿ ಏನೇನು ಸಮಸ್ಯೆಗಳಿವೆಯೋ ಆ ಕುರಿತು ಎಲ್ಲರೂ ಸೇರಿ ಒಂದು ಸಭೆಯನ್ನು ನಡೆಸಿ ಕೂಲಂಕಷವಾಗಿ ಪರಿಶೀಲನೆ ಮಾಡೋಣ.

ಶ್ರೀ ಐವನ್ ಡಿ'ಸೋಜಾ:- ಮಂಗಳೂರಿಗೆ ಪ್ರತ್ಯೇಕ ಮರಳು ನೀತಿಯನ್ನು ರೂಪಿಸಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಹೆಚ್.ಎಸ್.ಗೋಪಿನಾಥ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 585
ಉತ್ತರಿಸಬೇಕಾದ ದಿನಾಂಕ : 11-03-2025
ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸಹಕಾರ ಸಂಘಗಳಲ್ಲಿ ಮಹಿಳೆಯರ ಪಾತ್ರವನ್ನು ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	ಸಹಕಾರ ಸಂಘಗಳಲ್ಲಿ ಮಹಿಳೆಯರ ಪಾತ್ರವನ್ನು ಹೆಚ್ಚಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ. 1) ವಿವಿಧ ರೀತಿಯ ಸಹಕಾರ ಸಂಘಗಳಲ್ಲಿ ಮಹಿಳೆಯರನ್ನು ಸದಸ್ಯರನ್ನಾಗಿ ನೋಂದಾಯಿಸಲು ಅವರ ಪರವಾಗಿ ಸರ್ಕಾರದಿಂದ ಷೇರು ಸಹಾಯಧನವನ್ನು ನೀಡುವ ಯೋಜನೆಯನ್ನು ಸರ್ಕಾರದಿಂದ ಅನುಷ್ಠಾನಗೊಳಿಸಲಾಗಿದೆ. 2) ಸಹಕಾರ ಸಂಘಗಳ ಆಡಳಿತ ಮಂಡಳಿ ನಿರ್ದೇಶಕರಲ್ಲಿ 02 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸಲಾಗಿದೆ. 3) ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವ ಮಹಿಳಾ ಅಭ್ಯರ್ಥಿಗಳಿಗೆ ಚುನಾವಣಾ ಠೇವಣಿಯಲ್ಲಿ ಶೇ.50 ರಷ್ಟು ರಿಯಾಯಿತಿ ಅವಕಾಶ ಕಲ್ಪಿಸಲಾಗಿರುತ್ತದೆ. 4) ಮಹಿಳಾ ಸಹಕಾರ ಸಂಘಗಳ ನೋಂದಣಿ ಶುಲ್ಕದಲ್ಲಿ ಶೇ.50ರಷ್ಟು ರಿಯಾಯಿತಿ ಸೌಲಭ್ಯವಿರುತ್ತದೆ. 5) ಗ್ರಾಮೀಣ ಮತ್ತು ಪಟ್ಟಣ ಪ್ರದೇಶದ ಮಹಿಳೆಯರು ಕನಿಷ್ಠ 10 ಮತ್ತು ಗರಿಷ್ಠ 20 ಸದಸ್ಯರನ್ನು ಒಳಗೊಂಡ ಸ್ವ-ಸಹಾಯ ಗುಂಪುಗಳನ್ನು ರಚಿಸಿಕೊಂಡು ಪ್ರಾಥಮಿಕ ಕೃಷಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಪತ್ತಿನ ಸಹಕಾರ ಸಂಘಗಳಲ್ಲಿ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಉಳಿತಾಯ ಖಾತೆಯನ್ನು ತೆರೆದು ಉಳಿತಾಯವನ್ನು ಕೈಗೊಳ್ಳಲು ಉತ್ತೇಜಿಸುವುದು ಮತ್ತು ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಸ್ವ-ಸಹಾಯ ಗುಂಪುಗಳಿಗೆ ಅವಶ್ಯವಿರುವ ಸಾಲವನ್ನು ಒದಗಿಸುವುದು.
		೬) ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳದ ಕಾರ್ಯವ್ಯಾಪ್ತಿಯ 16 ಜಿಲ್ಲಾ ಹಾಲು ಒಕ್ಕೂಟಗಳಲ್ಲಿ 4693 ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, 13.61 ಲಕ್ಷ ಹಾಲು ಉತ್ಪಾದಕ ಮಹಿಳಾ ಸದಸ್ಯರು ನೋಂದಣಿಯಾಗಿದ್ದು, ಇದರಲ್ಲಿ 4.45 ಲಕ್ಷ ಉತ್ಪಾದಕರು ಸಕ್ರಿಯ ಸದಸ್ಯರಾಗಿದ್ದು, ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲು ಸರಬರಾಜು ಮಾಡುತ್ತಿರುತ್ತಾರೆ. ಈ ಸದಸ್ಯರುಗಳಿಗೆ ಹೈನುಗಾರಿಕೆಯನ್ನು ಉತ್ತೇಜಿಸಲು ಕರ್ನಾಟಕ ಸಹಕಾರಿ ಹಾಲು ಮಹಾಮಂಡಳ ಮತ್ತು ರಾಜ್ಯ ಸರ್ಕಾರದ ರಾಷ್ಟ್ರೀಯ ಜೀವನೋಪಾಯ ಅಭಿಯಾನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆರವರು ಪ್ರತಿ ವರ್ಷ 250 ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳನ್ನು ಆಯ್ಕೆ ಮಾಡಿ ಅದರಲ್ಲಿ ಗ್ರಾಮೀಣ ಪ್ರದೇಶದ ಬಡ ಮತ್ತು ಕಡುಬಡ ಕುಟುಂಬಗಳ ಮಹಿಳೆಯರನ್ನು ಸ್ವ-ಸಹಾಯ ಗುಂಪು, ಒಕ್ಕೂಟ, ವಿವಿಧ ಬಗೆಯ ಉತ್ಪಾದಕರ ಗುಂಪುಗಳ ಮತ್ತು ಉತ್ಪಾದಕ ಸಂಸ್ಥೆಗಳ ಮೂಲಕ ಸಂಘಟಿಸಿ ಕೃಷಿ, ಹೈನುಗಾರಿಕೆ ಮತ್ತು ಕೃಷಿಯೇತರ ಜೀವನೋಪಾಯ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸುವ ಧ್ಯೇಯ ಹೊಂದಿದ್ದು, ಇದರಿಂದ ಹೈನುಗಾರಿಕೆಯನ್ನು ಉತ್ತೇಜಿಸಿದಂತಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಹೌದು.
ಆ)	ಹಿಂದುಳಿದ ವರ್ಗಗಳ ವಿಶೇಷವಾಗಿ ಮಹಿಳೆಯರ ಆದಾಯ ಉತ್ಪಾದನೆಗೆ ಅವಕಾಶಗಳನ್ನು ಸೃಷ್ಟಿಸಲಾಗಿದೆಯೇ;	1) ಮಹಿಳಾ ಸ್ವ-ಸಹಾಯ ಗುಂಪುಗಳು ಸ್ವಂತ ಉದ್ಯೋಗವನ್ನು ಕೈಗೊಂಡು ಆದಾಯ ವೃದ್ಧಿಸಲು ರೂ.5.00 ಲಕ್ಷಗಳ ವರೆಗಿನ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ಮತ್ತು ರೂ.5.00 ಲಕ್ಷದಿಂದ ರೂ.10.00 ಲಕ್ಷಗಳ ವರೆಗಿನ ಸಾಲವನ್ನು ಶೇ.4 ರ ಬಡ್ಡಿ ದರದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ವಿತರಿಸಲಾಗುತ್ತದೆ. 2) ಕರ್ನಾಟಕ ಸಹಕಾರಿ ಹಾಲು ಮಹಾಮಂಡಳದ 16 ಜಿಲ್ಲಾ ಹಾಲು ಒಕ್ಕೂಟಗಳ ಹಾಲು ಉತ್ಪಾದಕ ಮಹಿಳಾ ಸದಸ್ಯರುಗಳಿಗೆ ವಿಶೇಷವಾಗಿ ಹಿಂದುಳಿದ ವರ್ಗಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಾಗೂ ವಿಧವ ಮಹಿಳೆಯರಿಗೆ ಹೈನುಗಾರಿಕೆಯನ್ನು ಉತ್ತೇಜಿಸಿ ಮಹಿಳೆಯರಿಗೆ ಆರ್ಥಿಕತೆಯನ್ನು ಹೆಚ್ಚಿಸಲು ಸರ್ಕಾರವು ಹಾಗೂ ಕರ್ನಾಟಕ ಸಹಕಾರಿ ಹಾಲು ಮಹಾಮಂಡಳದಿಂದ ಹೈನುರಾಸು ಖರೀದಿಗಾಗಿ ಬಡ್ಡಿ ರಹಿತ, ಸುತ್ತು ನಿಧಿಯನ್ನು ಸಾಲದ ರೂಪದಲ್ಲಿ ನೀಡಲಾಗುವುದು ಅಲ್ಲದೆ, ವಿವಿಧ ರೀತಿಯ ತಾಂತ್ರಿಕ ತರಬೇತಿಗಳನ್ನು ಮತ್ತು ಅರಿವು ಕಾರ್ಯಕ್ರಮಗಳಾದ ಆರೋಗ್ಯ ಮತ್ತು ಪೌಷ್ಟಿಕ ಆಹಾರ, ಶುದ್ಧ ಹಾಲು ಉತ್ಪಾದನೆ, ಪಶು ಆಹಾರ ಮತ್ತು ಮೇವು ಅಭಿವೃದ್ಧಿ, ಲಿಂಗ ಸೂಕ್ಷ್ಮತೆ, ಕಾನೂನು ಸಾಕ್ಷರತೆಗಳ ಬಗ್ಗೆ ಅರಿವು ಮೂಡಿಸಲಾಗುವುದು. ವಿಶೇಷವಾಗಿ ಮಹಿಳೆಯರಿಗೆ ಶೈಕ್ಷಣಿಕ ಅಧ್ಯಯನ ಪ್ರವಾಸವನ್ನು ಕೈಗೊಂಡು ಹೈನುಗಾರಿಕೆಯ ಆಧುನಿಕತೆಯ ಬಗ್ಗೆ ಗುಜರಾತಿನ ಅಮೂಲ್ ಗೆ ಕಳುಹಿಸಿಕೊಡುವ ಮುಖಾಂತರ ಹೈನುಗಾರಿಕೆಯನ್ನು ವೃದ್ಧಿಸಿಕೊಂಡು ಮಹಿಳೆಯರ ಆದಾಯವನ್ನು ಹೆಚ್ಚಿಸಲು ಸಹಾಯಕವಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ)	ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರವು ಯಾವುದಾದರೂ ಯೋಜನೆಗಳನ್ನು ರೂಪಿಸಿದೆಯೇ; (ವಿವರ ಒದಗಿಸುವುದು)	ಹೌದು. ಗ್ರಾಮೀಣ ಮತ್ತು ಪಟ್ಟಣ ಪ್ರದೇಶದ ಮಹಿಳಾ ಸ್ವ-ಸಹಾಯ ಗುಂಪುಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ವೈಯಕ್ತಿಕ ಮತ್ತು ಕುಟುಂಬ ನಿರ್ವಹಣೆ ಉದ್ದೇಶಕ್ಕಾಗಿ ಪಡೆಯುವ ರೂ.5.00 ಲಕ್ಷಗಳ ವರೆಗಿನ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ಮತ್ತು ಸ್ವಂತ ಉದ್ಯೋಗವನ್ನು ಕೈಗೊಂಡು ಆದಾಯ ವೃದ್ಧಿಸಲು ರೂ.5.00 ಲಕ್ಷದಿಂದ ರೂ.10.00 ಲಕ್ಷಗಳವರೆಗಿನ ಸಾಲವನ್ನು ಶೇ.4 ರ ಬಡ್ಡಿ ದರದಲ್ಲಿ ವಿತರಿಸಲು ಸರ್ಕಾರದಿಂದ ಯೋಜನೆಯನ್ನು ರೂಪಿಸಲಾಗಿದೆ. 2024-25 ನೇ ಸಾಲಿನಲ್ಲಿ ಜನವರಿ ಅಂತ್ಯದ ವರೆಗೆ 14,807 ಸ್ವ-ಸಹಾಯ ಗುಂಪುಗಳಿಗೆ ರೂ.659.42 ಕೋಟಿಗಳ ಸಾಲವನ್ನು ವಿತರಿಸಲಾಗಿದ್ದು, 93,060 ಸ್ವ-ಸಹಾಯ ಗುಂಪುಗಳಿಂದ ರೂ.1,841.95 ಕೋಟಿ ಸಾಲದ ಹೊರಬಾಕಿ ಹೊಂದಿರುತ್ತದೆ. ಈ ಸಾಲಿನಲ್ಲಿ ವಸೂಲಾಗುವ ಸಾಲಗಳಿಗೆ ಸ್ವ-ಸಹಾಯ ಗುಂಪುಗಳ ಪರವಾಗಿ ಸರ್ಕಾರವು ಸಹಕಾರ ಸಂಸ್ಥೆಗಳಿಗೆ ನೀಡಲು ರೂ.124.80 ಕೋಟಿಗಳ ಆಯವ್ಯಯ ಅವಕಾಶ ಒದಗಿಸಲಾಗಿದೆ. ಕರ್ನಾಟಕ ಸಹಕಾರಿ ಹಾಲು ಮಹಾಮಂಡಳ ಸಂಜೀವಿನಿ ಕೆ.ಎಸ್.ಆರ್.ಎಲ್.ಪಿ.ಎಸ್. ಸಂಸ್ಥೆ ವತಿಯಿಂದ ದೀನ ದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ (ಡೇ-ಎನ್.ಆರ್.ಎಲ್.ಎಂ) ಕಾರ್ಯಕ್ರಮಗಳನ್ನು 2011-12ನೇ ಸಾಲಿನಿಂದ ರಾಜ್ಯಾದ್ಯಂತ ಅನುಷ್ಠಾನ ಮಾಡಲಾಗುತ್ತಿದ್ದು, ಅನುಷ್ಠಾನ ಸಂಬಂಧ ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಹೊರಡಿಸಿರುವ ಆದೇಶದ ಪ್ರತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ರಾಜ್ಯ ಸರ್ಕಾರವು ಮಹಿಳೆಯರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಷೇರು ಸಹಾಯಧನ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಇದರಲ್ಲಿ ಗ್ರಾಮೀಣ ಮಹಿಳೆಯರು ಒಳಗೊಂಡಿರುತ್ತಾರೆ. ಸದರಿ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಿಳೆಯರನ್ನು ಸದಸ್ಯರನ್ನಾಗಿ ನೋಂದಾಯಿಸಿದ ವಿವರ ಈ ಕೆಳಕಂಡಂತೆ ಇರುತ್ತದೆ. **ವರ್ಷ** | **ಅನುದಾನದ ಮೊತ್ತ (ರೂ.ಲಕ್ಷಗಳಲ್ಲಿ)** | **ಮಹಿಳೆಯರ ಸಂಖ್ಯೆ** 2021-22 | 63.04 | 13,160 2022-23 | 24.85 | 4847 2023-24 | 23.09 | 4848 2024-25 (ಈವರೆಗೆ) | 15.74 | 3343
ಈ)	ಸರ್ಕಾರವು ಸಹಕಾರ ಸಂಘಗಳ ಮೂಲಕ ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿಯನ್ನು ನೀಡುತ್ತಿದೆಯೇ; (ವಿವರ ಒದಗಿಸುವುದು)	ಸಹಕಾರ ಇಲಾಖೆಯು ಸಹಕಾರ ಸಂಘಗಳ ಮೂಲಕ ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿಯನ್ನು ನೀಡಲು ಯಾವುದೇ ಯೋಜನೆ ರೂಪಿಸಿರುವುದಿಲ್ಲ. ಆದರೆ ಸಹಕಾರ ಸಂಘಗಳಲ್ಲಿ ರಚಿಸಿರುವ ಸ್ವ-ಸಹಾಯ ಗುಂಪುಗಳ ಸದಸ್ಯರನ್ನು ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (ಎನ್.ಆರ್.ಎಲ್.ಎಮ್) ಯೋಜನೆಯಡಿಯಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರಚಿಸಿರುವ ಸ್ವ-ಸಹಾಯ ಗುಂಪುಗಳ ಫೆಡೆರೇಷನ್‌ಗಳಲ್ಲಿ ಸದಸ್ಯತ್ವವನ್ನು ಪಡೆದು ಎನ್.ಆರ್.ಎಲ್.ಎಮ್ ಯುನಿಕ್ ಕೋಡ್ ಗಳನ್ನು ನೀಡುವುದರ ಮೂಲಕ ಸದಸ್ಯರಿಗೆ ಕೌಶಲ್ಯಾಭಿವೃದ್ಧಿಯನ್ನು ನೀಡಲಾಗುತ್ತಿದೆ. ಇದಲ್ಲದೇ ಸಹಕಾರ ಸಂಘಗಳು ತಮ್ಮ ಸದಸ್ಯರಿಗೆ ಕೌಶಲ್ಯಾಭಿವೃದ್ಧಿಯನ್ನು ನೀಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		1. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಸ್ವ-ಸಹಾಯ ಗುಂಪುಗಳನ್ನು ರಚಿಸಲು ಮತ್ತು ಅವರ ಸಾಲವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವುದನ್ನು ನಿರ್ವಹಿಸಲು ಪ್ರತ್ಯೇಕವಾಗಿ ಕ್ಷೇತ್ರ ವೀಕ್ಷಕರನ್ನು ನೇಮಕ ಮಾಡಲಾಗಿದೆ. 2. ಕೌಶಲ್ಯಾಭಿವೃದ್ಧಿ ಇಲಾಖೆಯ ಮತ್ತು ವಿವಿಧ ಇಲಾಖೆಗಳಿಂದ ಆಯೋಜನೆಗೊಳಿಸುತ್ತಿರುವ ಮೇಳಗಳಲ್ಲಿ ಸಹಕಾರ ಸಂಸ್ಥೆಗಳು ರಚಿಸಿದ ಸ್ವ-ಸಹಾಯ ಗುಂಪುಗಳ ಸಿದ್ದ ವಸ್ತುಗಳನ್ನು ಸಹ ಪ್ರದರ್ಶಿಸಲು ಕ್ರಮ ಜರುಗಿಸಲಾಗುತ್ತಿದೆ. ಇದಲ್ಲದೆ ಕೇಂದ್ರ ಸರ್ಕಾರದ GEM (Government e-Market place) Portal ಅನ್ನು ಸಹಕಾರ ಸಂಘಗಳು ಸಹ ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದೆ. 3. ಅಮೇಜಾನ್‌ನಂತಹ ಖಾಸಗಿ e-commerce ಸಂಸ್ಥೆಗಳ ಮೂಲಕವೂ ಸಹ ಮಹಿಳಾ ಸ್ವ-ಸಹಾಯ ಗುಂಪುಗಳು ಸಿದ್ದಪಡಿಸಿರುವ ವಸ್ತುಗಳನ್ನು ಮಾರಾಟ ಮಾಡಲು ಸಂಬಂಧಪಟ್ಟ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ಮೂಲಕ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ತರಬೇತಿ ನೀಡಲಾಗಿದೆ. 4. ಬೀದರ್ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ರಚಿಸಿದ RUDSET (Rural Development and Self Employment Training Institute) ಮೂಲಕ ಸ್ವ-ಸಹಾಯ ಗುಂಪುಗಳಿಗೆ ವಿವಿಧ ಸ್ವಂತ ಉದ್ಯೋಗಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ ಹಾಗೂ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ತರಬೇತಿ ಸಂಸ್ಥೆಗಳಲ್ಲಿ ಸ್ವ- ಸಹಾಯ ಗುಂಪುಗಳಿಗೆ ತರಬೇತಿ ನೀಡಲು ಜಿಲ್ಲಾ ಸಹಕಾರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಬ್ಯಾಂಕುಗಳಿಗೆ ನಿಬಂಧಕರು ಸೂಚನೆ ನೀಡಿರುತ್ತಾರೆ. 5. ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಲ್ಲಿ ಸ್ವ-ಸಹಾಯ ಗುಂಪುಗಳನ್ನು ರಚಿಸಿ ಗ್ರಾಮ ಮಟ್ಟದಲ್ಲಿ ಪಂಚಾಯಿತಿ ಮೂಲಕ ನೋಂದಾಯಿಸಿಕೊಂಡು ಸರ್ಕಾರದ ಕೌಶಲ್ಯಾಭಿವೃದ್ಧಿ ಸೌಲಭ್ಯವನ್ನು ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ಪಡೆಯುತ್ತಿರುತ್ತಾರೆ.
ಊ)	ಇಲ್ಲದಿದ್ದಲ್ಲಿ, ಭವಿಷ್ಯದಲ್ಲಿ ಸಹಕಾರ ಸಂಘಗಳ ಮೂಲಕ ಮಹಿಳೆಯರ ಕೌಶಲ್ಯಾಭಿವೃದ್ಧಿಗೆ ಸರ್ಕಾರ ಪರಿಗಣಿಸಿ ಕ್ರಮಕೈಗೊಳ್ಳುವುದೇ?	ಸಹಕಾರ ಸಂಘಗಳ ಮೂಲಕ ಮಹಿಳೆಯರ ಕೌಶಲ್ಯಾಭಿವೃದ್ಧಿಗೆ ಸರ್ಕಾರ ಮೇಲಿನಂತೆ ಈಗಾಗಲೇ ಕ್ರಮ ವಹಿಸಲಾಗಿರುತ್ತದೆ.

ಸಂಖ್ಯೆ: ಸಿಒ 53 ಸಿಎಲ್‌ಎಸ್ 2025

K. N. Rajanna

(ಕೆ.ಎನ್.ರಾಜಣ್ಣ)
ಸಹಕಾರ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ

ಕರ್ನಾಟಕ ಸರ್ಕಾರ

ಸಂಜೀವಿನಿ – ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
Department of Skill Development, Entrepreneurship and Livelihood

ಸಂ.4, 2ನೇ ಮತ್ತು 3ನೇ ಮಹಡಿ, ಮೈಸೂರ್ ಷುಗರ್ ಬಿಲ್ಡಿಂಗ್,
ರವೀಂದ್ರ ಕಲಾ ಕ್ಷೇತ್ರದ ಎದುರು, ಬೆಂಗಳೂರು-560002.
ದೂರವಾಣಿ: 080-23564271, ಇ-ಮೇಲ್: nrlmkarnataka@gmail.com

No 4, 2nd& 3rd floor, My Sugar Building, JC road,
Opp to Ravindra Kala Kshetra, Bangalore -560002
Ph No: 080-23564271, e-mail: nrlmkarnataka@gmail.com

ಸಂಖ್ಯೆ:ಕೆಎಸ್ಆರ್ಎಲ್ಪಿಎಸ್/ಎಲ್ಹೆಚ್/ಕ್ಷೀ.ಸಂ-4/36/2022-23, ದಿನಾಂಕ:29-01-2024

ಮಂಜೂರಾತಿ ಆದೇಶ

ವಿಷಯ: 4ನೇ ಹಂತದ ಕ್ಷೀರ ಸಂಜೀವಿನಿ ಯೋಜನೆ ಅನುಷ್ಠಾನಕ್ಕೆ ಮಂಜೂರಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಪತ್ರದ ಸಮ ಸಂಖ್ಯೆ: ದಿನಾಂಕ: 03.03.2023.
2. ದಿನಾಂಕ:22.01.2024ರಂದು ಪರಸ್ಪರ ಒಪ್ಪಿ ಮಾಡಿಕೊಂಡ ಒಡಂಬಡಿಕೆ (MoU)ರಂತೆ.

---*/*/*---

ಪ್ರಸ್ತಾವನೆ:-

ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ ಸಂಸ್ಥೆ ವತಿಯಿಂದ ದೀನ ದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ (ಡೇ-ಎನ್ಆರ್ಎಲ್ಎಂ) ಕಾರ್ಯಕ್ರಮಗಳನ್ನು 2011-12ನೇ ಸಾಲಿನಿಂದ ರಾಜ್ಯಾದ್ಯಂತ ಅನುಷ್ಠಾನ ಮಾಡಲಾಗುತ್ತಿದೆ.

ಗ್ರಾಮೀಣ ಜನರ ಬಡತನ ನಿವಾರಣೆ ಮಾಡುವುದು ಈ ಅಭಿಯಾನದ ಮುಖ್ಯ ಗುರಿಯಾಗಿದ್ದು, ಗ್ರಾಮೀಣ ಪ್ರದೇಶದ ಬಡ ಮತ್ತು ಕಡುಬಡ ಕುಟುಂಬಗಳ ಮಹಿಳೆಯರನ್ನು ಸ್ವ-ಸಹಾಯ ಗುಂಪು, ಒಕ್ಕೂಟ, ವಿವಿಧ ಬಗೆಯ ಉತ್ಪಾದಕರ ಗುಂಪುಗಳ ಮತ್ತು ಉತ್ಪಾದಕ ಸಂಸ್ಥೆಗಳ ಮೂಲಕ ಸಂಘಟಿಸಿ, ಕೃಷಿ, ಹೈನುಗಾರಿಕೆ ಮತ್ತು ಕೃಷಿಯೇತರ ಜೀವನೋಪಾಯ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವ ಧ್ಯೇಯ ಹೊಂದಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ ಮತ್ತು ಕೆಎಂಎಫ್ ಸಹಯೋಗದೊಂದಿಗೆ ರಾಜ್ಯದ 15 ಹಾಲು ಉತ್ಪಾದಕರ ಒಕ್ಕೂಟಗಳ ವ್ಯಾಪ್ತಿಯ ಜಿಲ್ಲೆಗಳಲ್ಲಿ 3 ಹಂತಗಳ ಕ್ಷೀರ ಸಂಜೀವಿನಿ ಯೋಜನೆಯಡಿ ಒಟ್ಟು 573 ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳನ್ನು ಅಳವಡಿಸಿ ಸುಮಾರು 22920 ಮಹಿಳೆಯರಿಗೆ ಕೆಎಂಎಫ್ ಮೂಲಕ ವಿವಿಧ ತಾಂತ್ರಿಕ ಕೌಶಲ್ಯಾಭಿವೃದ್ಧಿ, ಸಾಮಾಜಿಕ ಮತ್ತು ಆರ್ಥಿಕ ಬಲವರ್ಧನೆಗೆ ಪೂರಕವಾದ ತರಬೇತಿಗಳು ಮತ್ತು ಅಗತ್ಯ ಆರ್ಥಿಕ ಸಹಾಯ ಕಲ್ಪಿಸಿಕೊಡಲಾಗುತ್ತಿದೆ.

2022-23ನೇ ಮತ್ತು 2023-24ನೇ ಸಾಲಿನ ಡೇ-ಎನ್ಆರ್ಎಲ್ಎಂ ಕಾರ್ಯಕ್ರಮಗಳ ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆಯನ್ವಯ 250 ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಮೂಲಕ 10000 ದುರ್ಬಲ ವರ್ಗದ ಮಹಿಳೆಯರನ್ನು "4ನೇ ಹಂತರ ಕ್ಷೀರ ಸಂಜೀವಿನಿ ಯೋಜನೆ"ಯಡಿ ಆವರಿಸಲು ಯೋಜಿಸಲಾಗಿದೆ. ಈ ಯೋಜನೆಯಡಿ ಯೋಜಿಸಿರುವ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಟುವಟಿಕೆ/ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಉಲ್ಲೇಖ (1) ರಂತೆ ಒಟ್ಟು ರೂ.2061.14 ಲಕ್ಷಗಳಿಗೆ ಅಂದಾಜಿಸಲಾಗಿದೆ. ಇದರಲ್ಲಿ ಡೇ-ಎನ್ಆರ್ಎಲ್ಎಂನ ಪಾಲು ರೂ.1228.53 ಲಕ್ಷಗಳು ಮತ್ತು ಕೆಎಂಎಫ್ ಮತ್ತು ಜಿಲ್ಲಾ ಒಕ್ಕೂಟಗಳ ಪಾಲು ರೂ.832.57 ಲಕ್ಷಗಳು ಎಂದು ನಿಗಧಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಮುಂದುವರೆದು, ದಿನಾಂಕ:22.01.2024 ರಂದು ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಎಂಎಫ್ ರವರೊಂದಿಗೆ ಒಡಂಬಡಿಕೆ (MoU) ಪತ್ರಕ್ಕೆ ಪರಸ್ಪರ ಒಪ್ಪಿ ಸಹಿ ಮಾಡಲಾಗಿದೆ. ಅದರಂತೆ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸುವುದು.

ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಅನುಬಂಧ-1 ರನ್ವಯ ಯೋಜಿತ ಕಾರ್ಯಕ್ರಮಗಳನ್ನು ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ ಮತ್ತು ಕೆಎಂಎಫ್ನ ಸಹಯೋಗದೊಂದಿಗೆ ಪರಿಣಾಮಕಾರಿಯಾಗಿ ಮತ್ತು ನಿಗಧಿತ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಬೇಕಾಗಿರುವುದರಿಂದ ಈ ಕೆಳಕಂಡ ಆದೇಶ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, 2023-24ನೇ ಸಾಲಿನ ಹೈನುಗಾರಿಕೆ ಚಟುವಟಿಕೆಗಳನ್ನು ಕೆಎಂಎಫ್ ಸಹಯೋಗದೊಂದಿಗೆ ರಾಜ್ಯದ ಎಲ್ಲಾ ಜಿಲ್ಲೆಗಳ ವ್ಯಾಪ್ತಿಯ ಆಯ್ದ ಗ್ರಾಮ ಪಂಚಾಯತ್/ ಗ್ರಾಮಗಳಲ್ಲಿ 250 ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಮೂಲಕ 10000 ದುರ್ಬಲ ವರ್ಗದ ಮಹಿಳೆಯರನ್ನು 4ನೇ ಹಂತದ ಕ್ಷೀರ ಸಂಜೀವಿನಿ ಯೋಜನೆಯಡಿ ಆಳವಡಿಸಿಕೊಳ್ಳಲು ತೀರ್ಮಾನಿಸಲಾಗಿದ್ದು, ದಿನಾಂಕ:22.01.2024 ರಂದು ಒಡಂಬಡಿಕೆ (MoU) ಮಾಡಿಕೊಳ್ಳಲಾಗಿದೆ. ಅದರಂತೆ ಮಹಿಳಾ ರೈತರಿಗೆ ಅಗತ್ಯ ತರಬೇತಿ, ಶೈಕ್ಷಣಿಕ ಪ್ರವಾಸ, ಹೈನುರಾಸು ಖರೀದಿ ಮತ್ತು ಇತರೆ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಮತ್ತು ಕಾಲಮಿತಿಯಲ್ಲಿ ಅನುಷ್ಠಾನ ಮಾಡಲು ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ನ ಪಾಲು ರೂ.1228.53 ಲಕ್ಷಗಳು ಮತ್ತು ಕೆಎಂಎಫ್ನ ಪಾಲು ರೂ.832.57 ಲಕ್ಷಗಳು ಒಟ್ಟಾರೆ ಮೊತ್ತ ರೂ.2061.10 ಲಕ್ಷಗಳ ಅನುದಾನವನ್ನು ಕ್ರಿಯಾ ಯೋಜನೆ ಮತ್ತು ಬೇಡಿಕೆ ಆಧಾರದ ಮೇಲೆ ಬಿಡುಗಡೆ ಮಾಡಲು ಈ ಕೆಳಕಂಡ ಕಾರ್ಯಚರಣೆ ಕಾಯತಂತ್ರ/ಷರತ್ತುಗಳಿಗೆ ಒಳಪಟ್ಟು ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಿದೆ.

ಕಾರ್ಯಚರಣೆ ಕಾರ್ಯತಂತ್ರ/ಷರತ್ತುಗಳು.

1. ಯೋಜನೆಯಡಿ ಆಯ್ಕೆ ಮಾಡುವ ಗ್ರಾಮ ಪಂಚಾಯತ್/ಗ್ರಾಮಗಳನ್ನು ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ನ ಆಯಾಯ ಜಿಲ್ಲಾ ಅಭಿಯಾನ ನಿರ್ವಹಣಾ ಘಟಕಗಳ ಅಧಿಕಾರಿ/ ಸಿಬ್ಬಂದಿಗಳೊಂದಿಗೆ ಚರ್ಚಿಸಿ ಅಂತಿಮಗೊಳಿಸುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2. ಮಹಿಳಾ ಸಹಕಾರಿ ಹಾಲು ಉತ್ಪಾದಕರ ಗುಂಪುಗಳಲ್ಲಿ ಕಡು ಬಡವರು, ದುರ್ಬಲ ವರ್ಗದ ಮಹಿಳೆಯರಾದ ವಿಧವೆಯರು, ಒಂಟಿ ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು, ಕನಿಷ್ಠ ಮಂಗಳ ಮುಖಿಯರು, ಅಲ್ಪಸಂಖ್ಯಾತ ಮತ್ತು ಇಡಬ್ಲ್ಯೂಎಸ್ ಮಹಿಳೆಯರಿಗೆ ಆದ್ಯತೆ ನೀಡುವುದು.
3. ಪರಿಶಿಷ್ಟ ಜಾತಿ (ಕನಿಷ್ಠ 15%), ಪರಿಶಿಷ್ಟ ಪಂಗಡ, ಕನಿಷ್ಠ (7.5%) ಅಲ್ಪಸಂಖ್ಯಾತ ಮತ್ತು ಇಡಬ್ಲ್ಯೂಎಸ್ (ಕನಿಷ್ಠ 10%) ಮಹಿಳೆಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೀಸಲಾತಿ ನಿಯಮಾನುಸಾರ ಆದ್ಯತೆ ನೀಡಿ ಗರಿಷ್ಠ ಪ್ರಯಾಣದಲ್ಲಿ ಯೋಜನೆಯಡಿ ಆವರಿಸುವುದು.
4. ಕಲ್ಯಾಣ ಕರ್ನಾಟಕ ವ್ಯಾಪ್ತಿಗೆ ಒಳಪಡುವ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಅತೀ ಹೆಚ್ಚಿನ ಡಬ್ಲ್ಯೂಡಿಸಿಎಸ್‌ಗಳನ್ನು (ಕನಿಷ್ಠ 82) 4ನೇ ಹಂತದ ಕ್ಷೀರ ಸಂಜೀವಿನಿ ಯೋಜನೆಯಡಿ ಅಳವಡಿಸಿಕೊಳ್ಳಲು ಅಗತ್ಯ ಕ್ರಮಕೈಗೊಳ್ಳುವುದು.
5. ಯೋಜನೆಯ ಪರಿಣಾಮಕಾರಿ ಮತ್ತು ನಿಗಧಿತ ಕಾಲಮಿತಿಯ ಅನುಷ್ಠಾನಕ್ಕಾಗಿ ಕ್ಷೀರ ಸಂಜೀವಿನಿ ಯೋಜನೆ ಹೆಸರಿನಲ್ಲಿ ಪ್ರತ್ಯೇಕವಾಗಿ ವಿಭಾಗ ರಚಿಸಿ ಅಗತ್ಯವಿರುವ ಸಮರ್ಪಿತ ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜಿಸುವುದು ಮತ್ತು ವಿವರವನ್ನು ಈ ಕಛೇರಿಗೆ ಸಲ್ಲಿಸುವುದು.
5. ಯೋಜನೆಯಲ್ಲಿ ಪ್ರಸ್ತಾಪಿಸಿರುವ ಚಟುವಟಿಕೆಗಳು/ಕಾರ್ಯಕ್ರಮಗಳನ್ನು ನಿಗದಿತ ಅವಧಿಯಲ್ಲಿ ಅನುಷ್ಠಾನ ಮಾಡಲು ಮಾಸಿಕ ಕ್ರಿಯಾ ಯೋಜನೆ ಮತ್ತು ಕಾಲಾನುಕ್ರಮ (Action plan and time line) ಯೋಜನೆಯನ್ನು ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್‌ಗೆ ಸಲ್ಲಿಸುವುದು.
6. ಮಾಸಿಕ ಪ್ರಗತಿ ವರದಿ ಮತ್ತು ಕ್ರಿಯಾ ಯೋಜನೆಯನ್ನು ಪ್ರತಿ ತಿಂಗಳ 10ನೇ ತಾರೀಖಿನೊಳಗೆ ತಪ್ಪದೇ ಅಭಿಯಾನ ನಿರ್ದೇಶಕರಿಗೆ ಸಲ್ಲಿಸುವುದು.
7. ಯೋಜನೆಯ ಪರಿಣಾಮಕಾರಿ ಅನುಷ್ಠಾನ ಮತ್ತು ಗರಿಷ್ಠ ಪ್ರಮಾಣದ ಅನುಕೂಲ ಕಲ್ಪಿಸಲು "ಪಶು ಸಂಗೋಪನಾ" ಇಲಾಖೆಯ ಅಧಿಕಾರಿಗಳೊಂದಿಗೆ ಸಂಪರ್ಕ ಸಾಧಿಸಿ ಪ್ರಸ್ತುತ ಚಾಲ್ತಿಯಲ್ಲಿರುವ ವಿವಿಧ ಕಾರ್ಯಕ್ರಮಗಳನ್ನು ಒಗ್ಗೂಡಿಸಲು ಕಾರ್ಯತಂತ್ರ ರೂಪಿಸಿ ಅಗತ್ಯ ಕ್ರಮ ಕೈಗೊಳ್ಳುವುದು.
8. ಮೊದಲನೇ ಹಂತದ ಕ್ಷೀರ ಸಂಜೀವಿನಿ ಯೋಜನೆಯಡಿ ತೆರೆದಿರುವ ಉಳಿತಾಯ ಖಾತೆಯನ್ನು 4ನೇ ಹಂತದ ಯೋಜನೆಗೂ ಬಳಸಿಕೊಳ್ಳುವುದು.
9. ಯೋಜನೆಯ ಅವಧಿ:- ಮೊದಲನೇ ಕಂತಿನ ಅನುದಾನ ಬಿಡುಗಡೆಯಾದ ದಿನಾಂಕದಿಂದ 18 ತಿಂಗಳು ಮಾತ್ರ. ಆದರೆ, ಎಲ್ಲಾ 40 ಆದ್ಯತಾ ಗುಂಪಿನ ಮಹಿಳೆಯರು ಹೈನುರಾಸು ಖರೀದಿಸುವವರೆಗೂ ಅಗತ್ಯ ಸಹಕಾರವನ್ನು ವಿಸ್ತರಿಸುವುದು/ ನೀಡುವುದು.
10. ಮಹಿಳಾ ಹಾಲು ಉತ್ಪಾದಕರ ಗುಂಪಿನಲ್ಲಿರುವ 40 ಸದಸ್ಯರುಗಳು ಮೊದಲನೇ ಸುತ್ತಿನಲ್ಲಿ ಹೈನುರಾಸು ಖರೀದಿಸಿದ ನಂತರ, ಜೀವನೋಪಾಯ ನಿಧಿ ಶೀರ್ಷಿಕೆಯಡಿ ಪ್ರತಿ ಗುಂಪಿಗೆ ಬಿಡುಗಡೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವ ಅನುದಾನವನ್ನು ಮರು ಬಳಕೆ ಮಾಡಲು ಅಭಿಯಾನ ನಿರ್ದೇಶಕರು ನೀಡುವ ಆದೇಶದಂತೆ ಕ್ರಮವಹಿಸುವುದು.

11. ಯೋಜನೆಯ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಿಡುಗಡೆಯಾದ ಅನುದಾನವನ್ನು ಬೇರೆ ಯಾವುದೇ ಉದ್ದೇಶಗಳಿಗೆ ಬಳಸದೇ ಮಂಜೂರಾದ ಉದ್ದೇಶಕ್ಕೆ ಮಾತ್ರ ಬಳಸುವುದು.
12. ಯೋಜನೆಯ ಅನುಷ್ಠಾನ ಪ್ರಕ್ರಿಯೆಯಲ್ಲಿ ಆಗಿಂದಾಗ್ಗೆ ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ ನೀಡುವ ಸಲಹೆ ಸೂಚನೆಗಳನ್ವಯ ಅನುಷ್ಠಾನ ಕಾರ್ಯ ಕೈಗೊಳ್ಳುವುದು.
13. ಪ್ರತೀ ತ್ರೈಮಾಸಿಕ 10ನೇ ತಾರೀಖಿನೊಳಗೆ ಅನುದಾನ ಬಳಕೆ ಪ್ರಮಾಣ ಪತ್ರವನ್ನು ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ ಸಂಸ್ಥೆಗೆ ನಿಯಮಿತವಾಗಿ ಸಲ್ಲಿಸುವುದು.
14. ಯೋಜನೆಯಡಿ ಬಿಡುಗಡೆಯಾದ ಅನುದಾನದ ಖರ್ಚುವೆಚ್ಚಗಳಿಗೆ ಸಂಬಂಧಿಸಿದ ಎಲ್ಲಾ ವೋಚರ್ಗಳು/ ಬಿಲ್ಲುಗಳನ್ನು ನಿರ್ವಹಿಸುವುದು, ಅಗತ್ಯವೆನಿಸಿದಾಗ ಸದರಿ ಬಿಲ್ಲುಗಳನ್ನು ಈ ಕಛೇರಿಗೆ ಸಲ್ಲಿಸಬೇಕಾಗುತ್ತದೆ.
15. ಅಭಿಯಾನ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆಸುವ ಪ್ರಗತಿ ಪರೀಶೀಲನಾ ಸಭೆಗೆ ಅಗತ್ಯ ಮಾಹಿತಿಯೊಂದಿಗೆ ಹಿರಿಯ ಅಧಿಕಾರಿಗಳು ಹಾಜರಾಗುವುದು.
16. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗುವ ಪ್ರಗತಿ ಪರೀಶೀಲನಾ ಸಭೆಗಳಿಗೆ ಅಗತ್ಯ ಮಾಹಿತಿಯೊಂದಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು/ ಸಿಬ್ಬಂದಿಗಳು ತಪ್ಪದೇ ಹಾಜರಾಗುವುದು.
17. ಕ್ಷೀರ ಸಂಜೀವಿನಿ ಯೋಜನೆಯಡಿ ಆಯ್ಕೆ ಮಾಡುವ ಮಹಿಳಾ ಫಲಾನುಭವಿಗಳು ಸ್ವ-ಸಹಾಯ ಗುಂಪಿನಲ್ಲಿ ಸದಸ್ಯತ್ವ ಹೊಂದಿರುವುದು ಕಡ್ಡಾಯ.
18. ಗುಂಪಿನ ಪ್ರತಿ ಸದಸ್ಯರ ಮಾಹಿತಿಯನ್ನು ಡೇ-ಎನ್ಆರ್ಎಲ್ಎಂನ ಎಂಐಎಸ್ನಲ್ಲಿ ನಿಗದಿತ ಸಮಯದಲ್ಲಿ ಎಂಟ್ರಿ ಮಾಡಲು ಅನುಕೂಲವಾಗುವಂತೆ ಅಗತ್ಯ ಮಾಹಿತಿಯನ್ನು ಆಯಾ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಿಗೆ ಒದಗಿಸುವುದು ಮತ್ತು ಲೋಕೋಸ್ನಲ್ಲಿ ಎಂಟ್ರಿ ಆಗಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.
19. ಯೋಜನೆಯಡಿ ಅಳಡಿಸಿಕೊಳ್ಳುವ ಎಲ್ಲಾ ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಸುಸ್ಥಿರತೆ ಮತ್ತು ಆರ್ಥಿಕ ಸಬಲೀಕರಣಕ್ಕೆ ಪೂರಕವಾಗಿ ಕೆಎಂಎಫ್ ವತಿಯಿಂದ ಅಗತ್ಯವಿರುವ ಕಡೆ ಸೋಲಾರ್ ಪ್ಯಾಕ್, ಎಎಂಸಿಯು, ಇಲೆಕ್ಟ್ರಾನಿಕ್ ತೂಕದ ಯಂತ್ರ, ಸಂಘದ ಕಟ್ಟಡ ನಿರ್ಮಾಣ ಮತ್ತು ಇತ್ಯಾದಿ ಮೂಲಭೂತ ಸೌಲಭ್ಯ / ಸೌಕರ್ಯಗಳನ್ನು ಒದಗಿಸಿಕೊಡಲು ತಮ್ಮ ಹಂತದಲ್ಲಿ ನಿರ್ಧಾರ ತೆಗೆದುಕೊಂಡು ಸೂಕ್ತ ಕಾರ್ಯತಂತ್ರ ರೂಪಿಸಿ ಸಮಗ್ರವಾಗಿ ಅಭಿವೃದ್ಧಿ ಮಾಡಲು ಕ್ರಮವಹಿಸುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

20. ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ ಮತಿಯಿಂದ ಅಥವಾ ತಮ್ಮ ಸಂಸ್ಥೆಮತಿಯಿಂದ ಹೊಸದಾಗಿ ರಚಿಸುವ ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳನ್ನು ಮೊದಲನೇ ಪ್ರಾಶಸ್ತ್ಯದಲ್ಲಿ 4ನೇ ಹಂತದ ಯೋಜನೆಯಡಿ ತಳವಡಿಸಿಕೊಳ್ಳುವುದು.

21. ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳಲ್ಲಿ ನಡೆಸಲು ಯೋಜಿಸಿರುವ ಓರಿಯೇಂಟೇಶನ್ ಕಾರ್ಯಕ್ರಮಗಳಲ್ಲಿ ಸಂಜೀವಿನಿ-ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ ವಿವಿಧ ಹಂತದ ಸಿಬ್ಬಂದಿಗಳು ಮತ್ತು ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಬಳಸಿಕೊಂಡು ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಕ್ರಮವಹಿಸುವುದು.

22. 4ನೇ ಹಂತದ ಕ್ಷೀರ ಸಂಜೀವಿನಿ ಯೋಜನೆಯಡಿಯ ಮಹಿಳಾ ಫಲಾನುಭವಿಗಳಿಗೆ ಮತ್ತು ಈಗಾಗಲೇ ತೊಡಗಿಸಿಕೊಂಡಿರುವ ಫಲಾನುಭವಿ ಮಹಿಳೆಯರಿಗೆ ಡೇರಿಗೆ ಸಂಬಂಧಿಸಿದ ಉತ್ಪನ್ನಗಳ ಸಾಮರ್ಥ್ಯವರ್ಧನೆ ಮಾಡಲು ಕೆಎಂಎಫ್ ಮತಿಯಿಂದ ಅಗತ್ಯ ತಂತ್ರಜ್ಞಾನ ಮತ್ತು ತರಬೇತಿಯನ್ನು ನೀಡುವುದು.

23. ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ ಮತಿಯಿಂದ ಸ್ಥಾಪಿಸಲು ಉದ್ದೇಶಿರುವ ಸಂಜೀವಿನಿ ಸೂಪರ್ ಮಾರ್ಕೆಟ್ ಮಾರಾಟ ಮಳಿಗೆಗಳಲ್ಲಿ ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡಲು ಅಗತ್ಯವಿರುವ ಉತ್ಪನ್ನಗಳನ್ನು ಕೆಎಂಎಫ್ ಮತಿಯಿಂದ ನೇರವಾಗಿ ಸರಬರಾಜು ಮಾಡಲು ಸೂಕ್ತ ಕಾರ್ಯತಂತ್ರ ರೂಪಿಸುವುದು.

24. ಕಾಫಿಮಂಡಳಿ ಮತ್ತು ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ ಸಹಯೋಗದೊಂದಿಗೆ ರಾಜ್ಯದ ವಿವಿಧ ಸ್ಥಳಗಳಲ್ಲಿ ಪಾಣಿಜ್ಯ ಕಾಫಿ ಮಳಿಗೆಗಳನ್ನು ತೆರೆಯಲು ನಿರ್ಧರಿಸಲಾಗಿದೆ. ಸದರಿ ಮಳಿಗೆಗಳಲ್ಲಿ ಕಾಫಿ ಕಾರ್ಯಾಚರಣೆಗೆ ಅಗತ್ಯವಿರುವ ಹಾಲನ್ನು ಸ್ಥಳೀಯ ಸೊಸೈಟಿಗಳ ಮೂಲಕ ಒದಗಿಸಲು ಇರುವ ಅವಕಾಶಗಳ ಬಗ್ಗೆ ತಿಳಿಸುವುದು.

25. ಬೆಂಗಳೂರಿನ ಅನುಷ್ಠಾನದಲ್ಲಿ ಕಂಡು ಬರುವ ಉತ್ತಮ ಅಭ್ಯಾಸಗಳ ಯಶೋಗಾಥೆಗಳನ್ನು ದಾಖಲಿಸುವುದು. ಛಾಯಾಚಿತ್ರ ಮತ್ತು ವೀಡಿಯೋ ದಾಖಲಾತಿಗಳನ್ನು ಆಗಿಂದಾಗ್ಗೆ ಸಲ್ಲಿಸುವುದು.

ಅಭಿಯಾನ ನಿರ್ದೇಶಕರು,
ಸ್ವರ್ಣಜಯಂತಿ-ಕೆಎಸ್ಆರ್ಎಲ್ಪಿಎಸ್

ಇವರಿಗೆ.

ವ್ಯವಸ್ಥಾಪಕ ನಿರ್ದೇಶಕರು, ಕೆಎಂಎಫ್ ಬೆಂಗಳೂರು.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

1. ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು, ರವರುಗಳಿಗೆ ರವಾನಿಸಿತ್ತಾ ಸ್ಥಳೀಯ ತಂಡಗಳು ಯೋಜನೆಯ ಪ್ರಗತಿ ಪರಿಶೀಲನೆ ಮಾಡುವಂತೆ ಕೋರಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2. ಅಪರ ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್, ಬೆಂಗಳೂರು.
3. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, (ಕಾರ್ಯಾಚರಣೆ), ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್, ಬೆಂಗಳೂರು.
4. ಮುಖ್ಯ ಹಣಕಾಸು ಅಧಿಕಾರಿರವರು, ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್, ಬೆಂಗಳೂರು.
5. ಯೋಜನಾ ನಿರ್ದೇಶಕರು, ಡೇ-ಎನ್ಆರ್ಎಲ್ಎಂ, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು.
6. ಆಯುಕ್ತರು, ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳು, ಬೆಂಗಳೂರು.
7. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ರವಾನಿಸುತ್ತಾ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಸದಸ್ಯರುಗಳಿಗೆ ಅಗತ್ಯವಿರುವ ಸಾಲ ಮತ್ತು ಇನ್ನಿತರೆ ಸಹಾಯಧನ ಸೌಲಭ್ಯ ಒದಗಿಸಿಕೊಡುವಂತೆ ತಮ್ಮ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಅಭಿವೃದ್ಧಿ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಮತ್ತು ತಮ್ಮ ಅಧೀನ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.
8. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ರವರಿಗೆ ರವಾನಿಸುತ್ತಾ ವಿಶೇಷವಾಗಿ ರಚಿಸಿರುವ ಪರಿಶಿಷ್ಟ ಪಂಗಡದ ಮಹಿಳಾ ಹಾಲು ಉತ್ಪಾದಕರ ಗುಂಪು/ಸಂಘಗಳಿಗೆ ಅವಕಾಶವಿರುವ ಅನುದಾನ ಒದಗಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.
9. ನಿರ್ದೇಶಕರು, ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ರವಾನಿಸುತ್ತಾ ರಚಿಸಿರುವ ಅಲ್ಪ ಸಂಖ್ಯಾತ ಮಹಿಳಾ ಹಾಲು ಉತ್ಪಾದಕರ ಗುಂಪು/ಸಂಘಗಳಿಗೆ ಅವಕಾಶವಿರುವ ಅನುದಾನ ಒದಗಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.
10. ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರುಗಳು ಮತ್ತು ಅಪರ ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರುಗಳು, ಕೆಎಸ್ಆರ್ಎಲ್ಪಿಎಸ್, ಬೆಂಗಳೂರು ಇವರುಗಳಿಗೆ ರವಾನಿಸುತ್ತಾ, ಉಸ್ತುವಾರಿ ಜಿಲ್ಲೆಗಳಿಗೆ ಭೇಟಿ ನೀಡಿದಾಗ ಕ್ಷೀರ ಸಂಜೀವಿನಿ ಯೋಜನೆಯ ಸೊಸೈಟಿಗಳಿಗೆ ಭೇಟಿ ನೀಡಿ ಪ್ರಗತಿ ಪರಿಶೀಲಿಸಿ ವರದಿ ನೀಡುವುದು.
11. ಕಛೇರಿ ಪ್ರತಿ/ರಕ್ಷಾ ಕಡತ.

ಪ್ರತಿಯನ್ನು ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಹಾಗೂ ಅಧ್ಯಕ್ಷರು ಕಾರ್ಯಕಾರಿ ಸಮಿತಿ, ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್, ಬೆಂಗಳೂರುರವರ ಆಪ್ತ ಶಾಖೆಗೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು ರವರ ಆಪ್ತ ಶಾಖೆಗೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರ ಆಪ್ತ ಶಾಖೆಗೆ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು ರವರ ಆಪ್ತ ಶಾಖೆಗೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು ರವರ ಆಪ್ತ ಶಾಖೆಗೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-1

2023-24ನೇ ಸಾಲಿನಲ್ಲಿ ಸಂಜೀವಿನಿ-ಕೆಎಸ್ಆರ್ಎಲ್ಪಿಎಸ್ ಮತ್ತು ಕೆಎಂಎಫ್ ಸಹಯೋಗದಲ್ಲಿ 4ನೇ ಹಂತದ ಕ್ಷೀರ ಸಂಜೀವಿನಿ ಯೋಜನೆಯಡಿ ಅನುಷ್ಠಾನಕ್ಕಾಗಿ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವ ವಿವರ

ಕ್ರ ಸಂ	ಚಟುವಟಿಕೆಗಳು	ಘಟಕ	ಘಟಕ ದರ (ರೂ.ಗಳಲ್ಲಿ)	ಒಟ್ಟು ಘಟಕ	ಒಟ್ಟು ಮೊತ್ತ (ರೂ.ಲಕ್ಷ ಗಳಲ್ಲಿ)	ಎನ್ಆರ್ ಎಲ್ಎಂ ಪಾಲು (59.61%)	ಕೆಎಂಎಫ್/ ಒಕ್ಕೂಟಗಳ ಪಾಲು (40.41%)	ಶೇಕಡವಾರು ಹೂಡಿಕೆ		
								NRLM	KMF	BOTH
1	ಹೈನುರಾಸು ನಿರ್ವಹಣೆ ತರಬೇತಿ (ಗ್ರಾಮ ಮಟ್ಟದಲ್ಲಿ-3 ದಿನ)	3	0.00125	10000	37.50	37.50	0.00	1.82	0.00	1.82
2	ಮೇಘಾ ಡೇರಿ/ಜಾನುವಾರು ಮೇವು ಘಟಕ್ಕೆ ಕ್ಷೇತ್ರ ಭೇಟಿ - (1 ದಿನ)	1	0.00300	10000	30.00	30.00	0.00	1.46	0.00	1.46
3	ಹೈನುರಾಸು ಖರೀದಿಗೆ ಸಮುದಾಯ ಬಂಡವಾಳ ನಿಧಿ ಹೂಡಿಕೆ	No's	0.460	3500	1610.00	0	563.50	50.77	27.34	78.11
4	ಜಾನುವಾರು ವಿಮೆ ಗುರಿ ರೂ. 1000/- (ಪ್ರತಿ ಸದಸ್ಯರಿಗೆ)	No's	0.01	10000	100.00	0	100.00	0.00	4.85	4.85
5	ಮೇವು ಮತ್ತು ಮೇವು ಬೆಳೆ ಅಭಿವೃದ್ಧಿ ಕುರಿತ ಅರಿವು ಕಾರ್ಯಕ್ರಮ	1	0.055	250	13.75	8.11	5.64	0.39	0.27	0.67
6	ಮಹಿಳೆಯರ ಆರೋಗ್ಯ ಮತ್ತು ಪೌಷ್ಟಿಕತೆ ಕುರಿತ ಅರಿವು ಕಾರ್ಯಕ್ರಮ	1	0.055	250	13.75	8.11	5.64	0.39	0.27	0.67
7	ಲಿಂಗತ್ವ ಸಂವೇದನೆ, ಕಾನೂನು ಸಾಕ್ಷರತೆ ಮತ್ತು ಕೌಟುಂಬಿಕ ಹಿಂಸೆ ಕುರಿತ ಅರಿವು ಕಾರ್ಯಕ್ರಮ	1	0.055	250	13.75	8.11	5.64	0.39	0.27	0.67
8	ಪಶು ಆರೋಗ್ಯ ಶಿಬಿರ ಮತ್ತು ಬ್ಯಾಂಕ್ ಸಂಪರ್ಕ ಕುರಿತ ಅರಿವು ಕಾರ್ಯಕ್ರಮ	1	0.055	250	13.75	8.12	5.64	0.39	0.27	0.67
9	ಮಹಿಳಾ ವಿಸ್ತರಣಾ ಅಧಿಕಾರಿ/ಎನ್ಜಿಒ ವೇತನ ರೂ. 28000/- ಮತ್ತು ಪ್ರಯಾಣ ಭತ್ಯೆ ರೂ. 4000/- ಪ್ರತಿ ತಿಂಗಳು	18	0.320	15	86.40	0	86.40	0.00	4.19	4.19
10	ಮೈಕ್ರಾಡ ಸಂಸ್ಥೆ ಸಿಬ್ಬಂದಿಗಳ ಗೌರವಧನ (3 ಒಕ್ಕೂಟಗಳಲ್ಲಿ ಮಾತ್ರ)	18	0.300	3	16.20	0	16.20	0.00	0.79	0.79
11	ಮೇಲ್ವಿಚಾರಣೆ ವೆಚ್ಚ ತಿಂಗಳಿಗೆ ರೂ 20000/- ರಂತೆ 15 ಒಕ್ಕೂಟಗಳಿಗೆ	18	0.200	15	54.00	36.18	17.82	1.76	0.86	2.62
12	ಪುಸ್ತಕ/ಕೈಪಿಡಿ/ಕರಪತ್ರಗಳ ಮುದ್ರಣ ಮತ್ತು ಇನ್ನಿತರೆ ವೆಚ್ಚಗಳು	LS	LS	250	42.00	42.00	0.00	2.04	0.00	2.04
13	ಆಡಳಿತಾತ್ಮಕ/ಪೆಚ್ಚುಪರ/ಕಾರ್ಯಾಚರಣೆ ವೆಚ್ಚ (ಕ್ಷೀರ ಸಂಜೀವಿನಿ ಸಿಬ್ಬಂದಿಗಳು)	18	1.667	1	30.00	3.90	26.10	0.19	1.3	1.46
ಒಟ್ಟು					**2061.10**	**182.03**	**832.58**	**59.61**	**40.4**	**100.00**

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Details of Unions and districtwise Functional DCS, Registered members and Total Active Men and Women milk Pourers

SL. NO	UNIONS		DISTRICT NAME	FUNCTIONING DCS	General DCS	Women DCS	TOTAL Registered Members	TOTAL Men Registered Members	TOTAL WOMEN Registered Members	TOTAL ACTIVE Milk Pourers	Active Men Milk Pourers	Active Women Milk Pourers
		1	BENGALURU RURAL	754	666	58	95524	46811	48717	34379	22448	11931
		2	BENGALURU URBAN	666	592	72	79270	38842	40428	17664	10672	6992
		3	RAMANAGARA	805	794	111	161695	7925	82464	57010	31851	25159
1	BAMUL		UNION TOTAL	2293	2052	241	336489	164880	171609	109053	64971	44082
2	BEMUL	4	BELAGAVI	616	451	165	118783	58204	60579	31494	18681	12813
3	CHAMUL	5	CHAMARAJANAGARA	465	377	88	100612	49300	51312	32517	20526	11991
4	CHIMUL	6	CHIKKABALLAPURA	978	852	126	154870	75886	78984	39601	24141	15460
		7	DHARAWAD	207	84	123	27210	13333	13877	11973	5092	6881
		8	GADAG	202	102	100	27405	13428	13977	7765	3378	4387
		9	UTTARA KANNADA	296	193	103	31048	15214	15834	11251	7044	4207
5	DHAMUL		UNION TOTAL	705	379	326	85663	41975	43688	30989	15514	15475
		10	DAKSHINA KANNADA	406	292	114	84182	41249	42933	29093	15952	13141
		11	UDUPI	343	243	100	68802	33713	35089	22878	8028	14850
6	DKMUL		UNION TOTAL	749	535	214	152984	74962	78022	51971	23980	27991
		12	CHIKKAMAGALURU	277	113	164	40638	19913	20725	15776	5685	10091
		13	HASSAN	1410	731	679	204045	99982	104063	84583	34269	50314
		14	KODAGU	39	22	17	7012	3436	3576	2419	1080	1339
7	HAMUL		UNION TOTAL	1726	866	860	251695	123331	128364	102778	41034	61744
8	HAVEMUL	15	HAVERI	439	319	120	65712	32199	33513	23686	15396	8290
		16	BIDAR	253	141	112	60198	29497	30701	5584	2312	3272
		17	KALBURGI	168	129	39	25477	12484	12993	4435	2461	1974
		18	YADGIR	18	6	12	5192	2544	2648	170	55	115
9	KBYMUL		UNION TOTAL	439	276	163	90867	44525	46342	10189	4828	5361
10	KOMUL	19	KOLAR	969	850	119	156817	76840	79977	42358	24750	17608
11	MANMUL	20	MANDYA	1305	720	585	281650	138009	143642	101266	41884	59382
12	MYMUL	21	MYSURU	1218	817	401	224487	109999	114488	103199	47113	56086
		22	BALLARI	64	13	51	18792	9208	9584	1385	834	551
		23	KOPPAL	273	166	107	36376	17824	18552	11099	5070	6029
		24	RAICHUR	131	79	52	20166	9881	10285	3553	1729	1824
		25	VIJAYANAGARA	350	183	167	44869	21986	22883	16364	7171	9193
13	RBKVMUL		UNION TOTAL	818	441	377	120203	58899	61304	32401	14804	17597
		26	CHITRADURGA	342	249	93	41310	20242	21068	19422	10127	9295
		27	DAVANAGERE	410	246	164	61828	30296	31532	34806	16447	18359
		28	SHIVAMOGGA	571	368	203	67719	33182	34537	35217	16357	18860
14	SHIMUL		UNION TOTAL	1323	863	460	170857	83720	87137	89445	42931	46514
15	TUMUL	29	TUMAKURU	1354	986	368	271400	132986	138414	83483	46013	37470
		30	BAGALKOTE	350	288	62	60805	29794	31011	13657	9529	6128
		31	VIJAYAPURA	140	122	18	25043	12271	12772	4520	3228	1292
16	VIMUL		UNION TOTAL	490	410	80	85848	42066	43782	20177	12757	7420
	GRAND TOTAL			15887	11194	4693	2668937	1307779	1361158	904607	459323	445284

ಶ್ರೀ ಹೆಚ್.ಎಸ್.ಗೋಪಿನಾಥ್:– ಮಾನ್ಯ ಸಭಾಪತಿಗಳೆ, ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದಲ್ಲಿ 13.61 ಲಕ್ಷ ಹಾಲು ಉತ್ಪಾದಕ ಮಹಿಳಾ ಸದಸ್ಯರು ನೋಂದಣಿಯಾಗಿದ್ದಾರೆ, ಇದರಲ್ಲಿ 4.45 ಲಕ್ಷ ಹಾಲು ಉತ್ಪಾದಕರು ಸಕ್ರಿಯರಾಗಿದ್ದಾರೆ ಎಂದು ತಿಳಿಸಿದ್ದಾರೆ. ಅದೇರೀತಿ ಸ್ವಉದ್ಯೋಗ ಮಾಡುವಂಥವರಿಗೆ ಮತ್ತು ಅನೇಕ ಕಡೆ ತರಬೇತಿಗಳನ್ನು ಕೊಡುತ್ತಿದ್ದೇವೆ ಎಂದು ಹೇಳಿದ್ದೀರಿ. ಈ ಕುರಿತು ಏನಾದರೂ ಅಂಕಿಅಂಶಗಳು ಇವೆಯೇ? ಇದರಲ್ಲಿ ಎಷ್ಟು ಫಲಾನುಭವಿಗಳಿದ್ದಾರೆ? ಅವರ ಆರ್ಥಿಕ ಪರಿಸ್ಥಿತಿ ಹೇಗಿದೆ ಎಂದು ತಿಳಿದುಕೊಳ್ಳುವುದಕ್ಕೆ ಸರ್ವೆಯನ್ನೇನಾದರೂ ಮಾಡಿಸಿದ್ದೀರಾ? ರಾಜ್ಯ ಮಹಿಳಾ ಒಕ್ಕೂಟ ಅಸ್ತಿತ್ವದಲ್ಲಿದೆ ಎಂದು ಹೇಳಿದ್ದೀರಿ; ಇದಕ್ಕೆ ನಮ್ಮ ಸರ್ಕಾರದ ಕಡೆಯಿಂದ ಅನುದಾನ ಕೊಟ್ಟಿದ್ದೀರಾ?

ಶ್ರೀ ಕೆ.ಎನ್.ರಾಜಣ್ಣ:– ಮಾನ್ಯ ಸಭಾಪತಿಗಳೆ, ಹಿಂದುಳಿದ ವರ್ಗಗಳ, ವಿಶೇಷವಾಗಿ ಮಹಿಳಾ ಆದಾಯ ಉತ್ಪಾದನೆಗೆ ಅವಕಾಶಗಳನ್ನು ಸೃಷ್ಟಿಸಿಲಾಗಿದೆಯೇ ಎಂದು ಕೇಳಿರುವ ಪ್ರಶ್ನೆಗೆ, ಸರ್ಕಾರ ಈ ದಿಸೆಯಲ್ಲಿ ಏನೆಲ್ಲಾ ಮಾಡಿದೆ ಎನ್ನುವುದರ ಬಗ್ಗೆ ಉತ್ತರದಲ್ಲಿ ತಿಳಿಸಲಾಗಿದೆ. ತಾವು, ಎಷ್ಟು ಜನ ಫಲಾನುಭವಿಗಳಾಗಿದ್ದಾರೆ, ಎಷ್ಟು ವ್ಯಯವಾಗಿದೆ, ಫಲಾನುಭವಿಗಳಿಂದ ಎಷ್ಟು ಆದಾಯ ಉತ್ಪತ್ತಿಯಾಗಿದೆ ಎನ್ನುವುದರ ವಿವರಗಳನ್ನು ಕೇಳಿದ್ದೀರಿ. ಆ ವಿವರಗಳು ಈಗ ನನ್ನಲ್ಲಿ ಇಲ್ಲ. ಮುಂದೆ ಅದಕ್ಕೆ ಅವಕಾಶ ಕೊಟ್ಟರೆ ಆ ವಿವರಗಳನ್ನು ಒದಗಿಸಿ ಕೊಡುತ್ತೇನೆ

ಶ್ರೀಮತಿ ಭಾರತಿ ಶೆಟ್ಟಿ:– ರಾಜ್ಯ ಮಟ್ಟದ ಮಹಿಳಾ ಸಹಕಾರಿ ಸಂಘ ಇದೆಯೇ?

ಶ್ರೀ ಕೆ.ಎನ್.ರಾಜಣ್ಣ:– ಮಾನ್ಯ ಸಭಾಪತಿಗಳೆ, ರಾಜ್ಯ ಮಟ್ಟದ ಮಹಿಳಾ ಬ್ಯಾಂಕುಗಳನ್ನು ಮಾಡಬೇಕೆಂದು ಮೊನ್ನೆಯ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಅದರ ಮೇಲೆ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ ಯೋಚನೆ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಮತಿ ಭಾರತಿ ಶೆಟ್ಟಿ:– ನಾನು, ಮಹಿಳಾ ಸಹಕಾರಿ ಸಂಘ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಕೆ.ಎನ್.ರಾಜಣ್ಣ:– "ಅಕ್ಕ" ಎನ್ನುವ ಹೆಸರಿನಲ್ಲಿ ಒಂದು ಸಂಸ್ಥೆ ಇದೆ. ಇದರಲ್ಲಿ ಕೆಲವು ರಿಜಿಸ್ಟರ್ಡ್, ಅನ್‌ರಿಜಿಸ್ಟರ್ಡ್ ಇರುತ್ತವೆ. ನಾವು ಸರ್ಕಾರದ ವತಿಯಿಂದಲೇ ಅಧಿಕೃತವಾಗಿ . . .

ಶ್ರೀಮತಿ ಭಾರತಿ ಶೆಟ್ಟಿ:– ರಾಜ್ಯ ಮಹಿಳಾ ಫೆಡರೇಷನ್ ಕೂಡ ಇದೆ.

ಶ್ರೀ ಕೆ.ಎನ್.ರಾಜಣ್ಣ:– ರಾಜ್ಯ ಮಹಿಳಾ ಫೆಡರೇಷನ್ ಕೋ-ಆಪರೇಟಿವ್ ಸೊಸೈಟಿ ಇದೆ. ಅವರು ಏನು ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದ್ದಾರೆ ಎಂಬುದನ್ನು ಪ್ರತ್ಯೇಕವಾಗಿ ನಿಮಗೆ ತಿಳಿಸಿಕೊಡುತ್ತೇನೆ. ಶ್ರೀಮತಿ ಶಕುಂತಲಾ ಬೆಲ್ದಾಳೆ ಅವರ ಅಧ್ಯಕ್ಷತೆಯಲ್ಲಿ ಈ ಒಂದು ಸಹಕಾರಿ ಸಂಸ್ಥೆ ಇದೆ ಎನ್ನುವುದು ತಮಗೂ ಸಹ ಗೊತ್ತಿದೆ. ಅವರು ಹೆಚ್ಚಿನ ರೀತಿಯಲ್ಲಿ ತಮ್ಮ ಕಾರ್ಯಚಟುವಟಿಕೆಗಳನ್ನು ವಿಸ್ತಾರ ಮಾಡಬೇಕಾಗಿತ್ತು; ಆದರೆ ಮಾಡಿಲ್ಲ.

ಶ್ರೀಮತಿ ಭಾರತಿ ಶೆಟ್ಟಿ:– ಮಾನ್ಯ ಸಭಾಪತಿಗಳೆ, ಅವರ ಹತ್ತಿರ ದುಡ್ಡು ಇಲ್ಲ; ಸರ್ಕಾರ ದುಡ್ಡು ಕೊಟ್ಟಿಲ್ಲ.

ಶ್ರೀ ಕೆ.ಎನ್.ರಾಜಣ್ಣ:– ಮಾನ್ಯ ಸಭಾಪತಿಗಳೆ, ಸಹಕಾರ ಸಂಸ್ಥೆಗಳಿಗೆ ಸರ್ಕಾರ ದುಡ್ಡು ಕೊಡುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	505(69)
ಉತ್ತರಿಸಬೇಕಾದ ದಿನಾಂಕ	11.03.2025
ಉತ್ತರಿಸಬೇಕಾದವರು	ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ)ಕಡೆಯ ಸಭೆ ನಡೆದಿದ್ದು ಯಾವಾಗ? (ದಿನಾಂಕದೊಂದಿಗೆ ವಿವರಗಳ ಮಾಹಿತಿ ಒದಗಿಸುವುದು).	ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಡೆಯದಾಗಿ ಸಾಮಾನ್ಯ ಸಭೆಯು ದಿನಾಂಕ:08.07.2024ರಂದು ಜರುಗಿದ್ದು ಸದರಿ ಸಭೆಯ ಸಭಾ ಸೂಚನಾ ಪತ್ರದ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.
ಆ)	ಈ ನಗರಾಭಿವೃದ್ಧಿ ಪ್ರಾಧಿಕಾರಗಳ ಸಭೆಗಳನ್ನು ನಿಯಮಿತವಾಗಿ ಯಾವ ಅವಧಿಯೊಳಗೆ ನಡೆಸಬೇಕಾಗಿದೆ. ಇದಕ್ಕೆ ಇರುವ ಕಾನೂನು ನಿಬಂಧನೆಗಳೇನು; (ಇದಕ್ಕೆ ಸಂಬಂಧಿಸಿದ ಸರ್ಕಾರದ ಆದೇಶದ ಪ್ರತಿ ಒದಗಿಸುವುದು) ನಿಯಮಿತ ಕಾಲಾವಧಿಯೊಳಗೆ ಸಭೆ ನಡೆಸದಿದ್ದರೆ ಅದಕ್ಕೆ ಜವಾಬ್ದಾರರು ಯಾರು? (ಇದಕ್ಕೆ ಸಂಬಂಧಿಸಿದ ಸರ್ಕಾರದ ಆದೇಶ ಪ್ರತಿಗಳೊಂದಿಗೆ ಮಾಹಿತಿ ಒದಗಿಸುವುದು)	ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 8 (i) ಮತ್ತು (ii) ಈ ಕೆಳಕಂಡಂತಿರುತ್ತದೆ **(ಅನುಬಂಧ-2).** 8. ಪ್ರಾಧಿಕಾರದ ಸಭೆ (Meeting of the Authority).-(1) ಪ್ರಾಧಿಕಾರದ ಸಭೆಗಳು ಅಧ್ಯಕ್ಷನಿಂದ ಆಯೋಜಿಸಲ್ಪಡತಕ್ಕದ್ದು ಮತ್ತು ಅವುಗಳು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಯಾವುದೇ ಸ್ಥಳದಲ್ಲಿ ಆಯೋಜಿಸಲ್ಪಡತಕ್ಕದ್ದು. (2) ಪ್ರಾಧಿಕಾರವು ಯುಕ್ತ ಸಮಯದಲ್ಲಿ ಸಭೆ ಸೇರತಕ್ಕದ್ದು ಮತ್ತು ಸಭೆಗಳ ವ್ಯವಹಾರಗಳ ನಿರ್ವಹಣೆಯ ಸಂದರ್ಭದಲ್ಲಿ ಯುಕ್ತ ನಿಯಮ ಮತ್ತು ನಡವಳಿಗಳನ್ನು ಪಾಲನೆ ಮಾಡತಕ್ಕದ್ದು. ಪ್ರತಿ ತಿಂಗಳಿಗೆ ಕನಿಷ್ಠ ಒಂದು ಸಭೆಯನ್ನು ಆಯೋಜಿಸತಕ್ಕದ್ದು. ಒಟ್ಟಾರೆ ಸದಸ್ಯರುಗಳ ಪೈಕಿ ಕನಿಷ್ಠ ಅರ್ಧದಷ್ಟು ಸದಸ್ಯರುಗಳು ಹಾಜರಿರದ ಹೊರತು ಯಾವುದೇ ಸಭೆಯಲ್ಲಿ ವ್ಯವಹಾರಗಳನ್ನು ನಡೆಸತಕ್ಕದ್ದಲ್ಲ. ಸದರಿ ಕಾಯ್ದೆಯ ಅವಕಾಶದಂತೆ ಪ್ರಾಧಿಕಾರದ ಅಧ್ಯಕ್ಷರು ನಿಯಮಿತ ಕಾಲಾವಧಿಯೊಳಗೆ ಸಭೆಯನ್ನು ಆಯೋಜಿಸಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ -1

ಸಂಖ್ಯೆ: ಬ.ನ.ಪಾ.ಅಡಳಿತ/ಸಭೆ/01/2024-25

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ
ಕಾರ್ಯಾಲಯ, ಬಳ್ಳಾರಿ.
ದಿನಾಂಕ: 03/07/2024

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಕಲಂ 8(1) ರಂತೆ ಹೊರಡಿಸಲಾದ
ಸಭೆಯ ಸೂಚನಾ ಪತ್ರ

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯನ್ನು ಸನ್ಮಾನ್ಯ ಶ್ರೀ ಜೆ.ಎಸ್.ಆಂಜನೇಯಲು, ಅಧ್ಯಕ್ಷರು ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 03/07/2024 ರಂದು ಮಧ್ಯಾಹ್ನ : 11-00 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರ ಕೊಠಡಿಯಲ್ಲಿ ನಿಗಧಿಪಡಿಸಲಾಗಿದ್ದ ಸಭೆಯನ್ನು ಕಾರಣಾಂತರಗಳಿಂದ ದಿನಾಂಕ: 08/07/2024 ರಂದು ಬೆಳಿಗ್ಗೆ 11-00 ಗಂಟೆಗೆ ಮುಂದೂಡಲಾಗಿರುತ್ತದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಸಭೆಗೆ ಹಾಜರಾಗಿ ಸಭೆಯ ಕಲಾಪಗಳನ್ನು ಯಶಸ್ವಿಗೊಳಿಸಬೇಕೆಂದು ಕೋರಲು ಮಾನ್ಯ ಅಧ್ಯಕ್ಷರುಗಳವರ ನಿರ್ದೇಶನದಂತೆ ತಿಳಿಸಲಾಗಿದೆ.

3/7/24

ಆಯುಕ್ತರು,
ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ,
ಬಳ್ಳಾರಿ.

ಇವರಿಗೆ,

01	ಸನ್ಮಾನ್ಯ ಶ್ರೀ ಜೆ.ಎಸ್.ಆಜನೇಯಲು, ಅಧ್ಯಕ್ಷರು ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ	:	ಅಧ್ಯಕ್ಷರು
02	ಸನ್ಮಾನ್ಯ ಶ್ರೀ ಬಿ. ನಾಗೇಂದ್ರ, ಶಾಸಕರು ಬಳ್ಳಾರಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರ, ಬಳ್ಳಾರಿ.	:	ಸದಸ್ಯರು
03	ಸನ್ಮಾನ್ಯ ಶ್ರೀ ಎನ್.ಭರತ್ ರೆಡ್ಡಿ, ಶಾಸಕರು, ಬಳ್ಳಾರಿ ನಗ ರ ವಿಧಾನ ಸಭಾ ಕ್ಷೇತ್ರ, ಬಳ್ಳಾರಿ	:	ಸದಸ್ಯರು
04	ಸನ್ಮಾನ್ಯ ಶ್ರೀ ವೈ.ಎಂ.ಸತೀಶ್, ಶಾಸಕರು (ವಿಧಾನ ಪರಿಷತ್), ಬಳ್ಳಾರಿ	:	ಸದಸ್ಯರು
05	ಸನ್ಮಾನ್ಯ ಶ್ರೀ ಪಿ.ಗಾದೆಪ್ಪ ತಂದೆ ಪಿ.ಓಬಣ್ಣ, ಗಾಂಧಿನಗರ, ಬಳ್ಳಾರಿ.	:	ಸದಸ್ಯರು
06	ಸನ್ಮಾನ್ಯ ಶ್ರೀ ಕೆ.ಶಿವಕುಮಾರ್, ಬಳ್ಳಾರಿ.	:	ಸದಸ್ಯರು
07	ಸನ್ಮಾನ್ಯ ಶ್ರೀ ಕೆ.ಎಸ್.ಭರತ್ ಕುಮಾರ್, ಬಳ್ಳಾರಿ.	:	ಸದಸ್ಯರು
08	ಸನ್ಮಾನ್ಯ ಶ್ರೀ ರಂಜಿತ್.ಕೆ ಬಳ್ಳಾರಿ.	:	ಸದಸ್ಯರು
09	ಸನ್ಮಾನ್ಯ ಶ್ರೀಮತಿ ವಿಜೇತ ಜೆರಾಲ್ಡ್, ಬಳ್ಳಾರಿ.	:	ಸದಸ್ಯರು
10	ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ	:	ಸದಸ್ಯರು
11	ಮಾನ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಬಳ್ಳಾರಿ	:	ಸದಸ್ಯರು
12	ಮಾನ್ಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬಳ್ಳಾರಿ	:	ಸದಸ್ಯರು
13	ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಿಭಾಗ, ಬಳ್ಳಾರಿ	:	ಸದಸ್ಯರು
14	ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಜೆಸ್ಕಾಂ, ಬಳ್ಳಾರಿ	:	ಸದಸ್ಯರು
15	ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಕೆ.ಯು.ಡಬ್ಲೂ.ಎಸ್. ಅಂಡ್ ಡಿ.ಬಿ, ಬಳ್ಳಾರಿ	:	ಸದಸ್ಯರು
16	ಮಾನ್ಯ ಆಯುಕ್ತರು, ಮಹಾನಗರ ಪಾಲಿಕೆ, ಬಳ್ಳಾರಿ	:	ಸದಸ್ಯರು
17	ಮಾನ್ಯ ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ	:	ಸದಸ್ಯರು
18	ಮಾನ್ಯ ನಗರ ಯೋಜಕ ಸದಸ್ಯರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ	:	ಸದಸ್ಯರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-2

8. ಪ್ರಾಧಿಕಾರದ ಸಭೆ (Meeting of the Authority).–(1) ಪ್ರಾಧಿಕಾರದ ಸಭೆಗಳು ಅಧ್ಯಕ್ಷನಿಂದ ಆಯೋಜಿಸಲ್ಪಡತಕ್ಕದ್ದು ಮತ್ತು ಅವುಗಳು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಯಾವುದೇ ಸ್ಥಳದಲ್ಲಿ ಆಯೋಜಿಸಲ್ಪಡತಕ್ಕದ್ದು.

(2) ಪ್ರಾಧಿಕಾರವು ಯುಕ್ತ ಸಮಯದಲ್ಲಿ ಸಭೆ ಸೇರತಕ್ಕದ್ದು ಮತ್ತು ಸಭೆಗಳ ವ್ಯವಹಾರಗಳ ನಿರ್ವಹಣೆಯ ಸಂದರ್ಭದಲ್ಲಿ ಯುಕ್ತ ನಿಯಮ ಮತ್ತು ನಡವಳಿಗಳನ್ನು ಪಾಲನೆ ಮಾಡತಕ್ಕದ್ದು. ಪ್ರತಿ ತಿಂಗಳಿಗೆ ಕನಿಷ್ಠ ಒಂದು ಸಭೆಯನ್ನು ಆಯೋಜಿಸತಕ್ಕದ್ದು. ಒಟ್ಟಾರೆ ಸದಸ್ಯರುಗಳ ಪೈಕಿ ಕನಿಷ್ಠ ಅರ್ಧದಷ್ಟು ಸದಸ್ಯರುಗಳು ಹಾಜರಿರದ ಹೊರತು ಯಾವುದೇ ಸಭೆಯಲ್ಲಿ ವ್ಯವಹಾರಗಳನ್ನು ನಡೆಸತಕ್ಕದ್ದಲ್ಲ.

(3) ಒಂದು ವೇಳೆ, ಯಾವುದೇ ಕಾರಣದಿಂದ ಅಧ್ಯಕ್ಷನು ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದ ಪಕ್ಷದಲ್ಲಿ, ಸಭೆಯಲ್ಲಿ ಉಪಸ್ಥಿತರಿರುವಂತಹ ಸದಸ್ಯರುಗಳಿಂದ ಆಯ್ಕೆಯಾದಂತಹ ಯಾರೇ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(4) ಪ್ರಾಧಿಕಾರದ ಸಭೆಯ ಮುಂದೆ ಉದ್ಭವಿಸುವಂತಹ ಎಲ್ಲಾ ಪ್ರಶ್ನೆಗಳನ್ನು ಹಾಜರಿರುವಂತಹ ಸದಸ್ಯರುಗಳ ಬಹುಮತದ ಆಧಾರದ ಮೇಲೆ ಮತ್ತು ಮತದಾನದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಒಂದು ವೇಳೆ ಸಮಾನ ಸಂಖ್ಯೆಯ ಮತಗಳು ಚಲಾವಣೆಯಾದ ಪಕ್ಷದಲ್ಲಿ, ಅಧ್ಯಕ್ಷ ಅಥವಾ ಆತನ ಅನುಪಸ್ಥಿತಿಯಲ್ಲಿ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತಹ ಸದಸ್ಯನು ದ್ವಿತೀಯ ಅಥವಾ ನಿರ್ಣಯಾತ್ಮಕ ಮತವನ್ನು ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು.

(5) ಪ್ರಾಧಿಕಾರದ ಯಾವುದೇ ಸಭೆಯಲ್ಲಿ ಅಥವಾ ಅದರ ಸಮಿತಿಯಲ್ಲಿ, ಯಾರೇ ಸದಸ್ಯನು ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ತಾನೇ ನೇರವಾಗಿ ಅಥವಾ ಪರೋಕ್ಷವಾಗಿ ಆತನ ಪಾಲುದಾರನ ಮೂಲಕ ಅಂತಹ ವಿಷಯಕ್ಕೆ ಸಂಬಂಧಿಸಿದಂತೆ, ಯಾವುದೇ ಹಿತಾಸಕ್ತಿಯನ್ನು ಅಥವಾ ಪಾಲನ್ನು ಹೊಂದಿದ್ದ ಪಕ್ಷದಲ್ಲಿ, ಅಂತಹ ಸದಸ್ಯನು ಮತದಾನದಲ್ಲಿ ಪಾಲ್ಗೊಳ್ಳತಕ್ಕದ್ದಲ್ಲ ಅಥವಾ ಮತ ಚಲಾಯಿಸತಕ್ಕದ್ದಲ್ಲ.

9. ಸಮಿತಿಗಳ ರಚನೆ (Appointment of Committees).–(1) ಪ್ರಾಧಿಕಾರವು ಕಾಲಕಾಲಕ್ಕೆ, ಅಧ್ಯಕ್ಷ, ಆಯುಕ್ತ ಮತ್ತು ಅದು ಸೂಕ್ತವೆಂದು ಅಭಿಪ್ರಾಯಪಟ್ಟಂತೆ ಅಂತಹ ಇತರ ಸದಸ್ಯರುಗಳನ್ನೊಳಗೊಂಡ ಸಮಿತಿಗಳನ್ನು ರಚಿಸಬಹುದು ಮತ್ತು ಸರ್ಕಾರದ ಅನುಮೋದನೆಯೊಂದಿಗೆ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಮತ್ತು ಅಂತಹ ಯುಕ್ತ ಅವಧಿಗೆ ಅಂತಹ ಸಮಿತಿಗಳೊಂದಿಗೆ ಸೇರಬಹುದು. ಅದು ಅಪೇಕ್ಷಿಪಡುವಂತಹ ಯಾರೇ ವ್ಯಕ್ತಿಯ ಅಥವಾ ವ್ಯಕ್ತಿಗಳ ಸಹಾಯ ಅಥವಾ ಸಲಹೆಗಳು ಅವಶ್ಯಕವಿದ್ದಲ್ಲಿ, ಈ ಅಧಿನಿಯಮದ ಉದ್ದೇಶಗಳಿಗೆ ಸಂಬಂಧಿಸಿದಂತಹ ವಿಷಯ ಕುರಿತಂತೆ ಅವುಗಳನ್ನು ಅಂತಹ ಸಮಿತಿಗಳಿಗೆ ಅದು ವಿಚಾರಣೆ ಮತ್ತು ವರದಿಗಾಗಿ ವಹಿಸಬಹುದು.

(2) ಉಪ-ಪ್ರಕರಣ (1)ರಡಿಯಲ್ಲಿ ರಚಿಸಲ್ಪಟ್ಟ ಪ್ರತಿಯೊಂದು ಸಮಿತಿಯೂ ಸಹ ಪ್ರಾಧಿಕಾರವು ಕಾಲಕಾಲಕ್ಕೆ ಅಂತಹ ಸಮಿತಿಗೆ ನೀಡಿದ ಯಾವುದೇ ಸೂಚನೆಗಳಿಗೆ ಬದ್ಧತೆಯನ್ನು ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ಯಾವುದೇ ಸಮಯದಲ್ಲಿ ಈ ರೀತಿ ನೇಮಕಮಾಡಿದ ಸಮಿತಿಯ ಯಾವುದೇ ಸಮಿತಿಯ ರಚನೆಯನ್ನು ಮಾರ್ಪಡಿಸಬಹುದು ಅಥವಾ ಅಂತಹ ನೇಮಕಾತಿಯನ್ನು ರದ್ದುಪಡಿಸಬಹುದು. ಅಧ್ಯಕ್ಷನು ಅಂತಹ ಪ್ರತಿಯೊಂದು ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು.

10. ವಿವಿಧ ಪ್ರಾಧಿಕಾರಗಳ ಅಧಿಕಾರಗಳು (Powers of different Authorities).–(1) ಪ್ರಾಧಿಕಾರದ ಪರವಾಗಿ, ಆಯುಕ್ತನು, ಯಾವುದೇ ಅಂದಾಜುಗಳನ್ನು ಮಂಜೂರು ಮಾಡಬಹುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಗಳೆ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಸಭೆಯನ್ನು ಕಡೆಯದಾಗಿ ಯಾವಾಗ ಮಾಡಲಾಗಿತ್ತು ಎಂದು ಕೇಳಿದ್ದೆ. 8.7.2024ರಂದು ಸದರಿ ಸಭೆ ನಡೆದಿದೆ ಎಂದು ಉತ್ತರ ಕೊಟ್ಟಿದ್ದಾರೆ. Duration of the meeting, ಯಾವಾಗ meeting conduct ಮಾಡಬೇಕು? Periodically ಎಷ್ಟು meetings ಮಾಡಬೇಕು ಎಂಬ ಪ್ರಶ್ನೆಗೆ ಪ್ರತಿ ತಿಂಗಳು ಸಭೆ ಮಾಡಬೇಕೆಂದು ಹೇಳಿದ್ದಾರೆ. ಮಾನ್ಯ ಸಭಾಪತಿಗಳೆ, ಇಬ್ಬರು ಶಾಸಕರು ಬುಡಾ ಅಧ್ಯಕ್ಷರ ಮೇಲೆ ಆರೋಪ ಮಾಡಿ, ಸರ್ಕಾರಕ್ಕೆ ಈ ಕುರಿತು ನಾವು ಪತ್ರ ಬರೆದಿದ್ದೇವೆ ಎಂದು ಹೇಳಿದ್ದಾರೆ. ಬಹುಶಃ ಇದು ಜೂನ್ ತಿಂಗಳಿನಲ್ಲಿ ಆಗಿರಬೇಕು. ಇದಾದ ಮೇಲೆ ಮೀಟಿಂಗ್ ಆಗಿಲ್ಲ. ಮತ್ತೆ, ಲೋಕಾಯುಕ್ತದವರು ರೇಡ್ ಮಾಡಿದ್ದಾರೆ. ಇದರಲ್ಲಿ 6 ಅಧಿಕಾರಿಗಳು ಸಿಕ್ಕಿ ಹಾಕಿಕೊಂಡಿದ್ದಾರೆ. ಲೋಕಾಯುಕ್ತದವರು, N.A. norms, single layout procedure, Government grant ನ ವಿವರ ಕೊಡಿ ಎಂದು ಕೇಳಿದ್ದಾರೆ. ಬುಡಾ ಕಮಿಷನರ್‌ರವರ ಪೋಸ್ಟ್ 10.12.2024ನಿಂದ ಖಾಲಿ ಇದೆ. ಅಲ್ಲಿನ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. Single layout approval ಏನು ಎನ್ನುವುದು ನನಗೂ ಗೊತ್ತಾಗಿಲ್ಲ. ಸುಮ್ಮನೆ ಒಂದು bundle approval ಮಾಡಿಸಿಕೊಳ್ಳುತ್ತಾರೆ. ಅದರ ಸಲುವಾಗಿ ಬೇರೆ ಲೇಔಟ್ ಮಾಡಿದವರಿಗೆ ಏಕೆ ತೊಂದರೆ ಕೊಡುತ್ತಿದ್ದೀರಿ? ಎಲ್ಲಾ layout ಗಳ approval ನಿಂತು ಹೋಗಿದೆ. ಬುಡಾದಲ್ಲಿ ಇದುವರೆಗೂ ಬಜೆಟ್ ಪ್ರೆಸೆಂಟ್ ಮಾಡಿಲ್ಲ. ಅಲ್ಲದೇ, ಬುಡಾದಲ್ಲಿ ಏನೇನೂ ಕೆಲಸ ಆಗುತ್ತಿಲ್ಲ. ನಾನು ಒಂದು ಉದಾಹರಣೆ ಕೊಡುತ್ತೇನೆ. ಕನಕದುರ್ಗಮ್ಮ ದೇವಸ್ಥಾನದ ಹತ್ತಿರ ಒಂದು railway underpass ಇದ್ದು, ಅದನ್ನು ಅಗಲೀಕರಣ ಮಾಡಬೇಕೆಂದು 4-5 ವರ್ಷಗಳ ಹಿಂದಿನಿಂದಲೂ ಒಂದು ಪ್ರಪೋಸಲ್ ಇದೆ. 2022ನೇ ನವೆಂಬರ್ ತಿಂಗಳಿನಲ್ಲಿ ರೂ. 8.84 ಕೋಟಿ ಹಣವನ್ನು ಕೊಟ್ಟಿದ್ದಾರೆ. ಬುಡಾದವರು ಇಲ್ಲಿಯವರೆಗೂ ಒಂದು ಜಾಗವನ್ನು ಗುರುತಿಸಿ ಆ ಜಾಗವನ್ನು ಹಸ್ತಾಂತರ ಮಾಡುವುದಕ್ಕೆ ಆಗುತ್ತಿಲ್ಲ. Road alignment ಅನ್ನು decide ಮಾಡುವುದಕ್ಕೆ ಆಗುತ್ತಿಲ್ಲ. ಇದು ಬುಡಾದ ಪರಿಸ್ಥಿತಿಯಾಗಿದೆ. ಬುಡಾದ ವತಿಯಿಂದ ಅಪ್ರೂವಲ್ ಕೊಡುವುದರಲ್ಲಿ, ಅಭಿವೃದ್ಧಿ ಮಾಡುವುದರಲ್ಲಿ ತೊಂದರೆ ಆಗುತ್ತಿದೆ. ಈ ಸಂಬಂಧ ನೀವು ಯಾವರೀತಿ ಪರಿಹಾರ ಕೊಡುತ್ತೀರಿ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಅವರ ಹತ್ತಿರವೇ ಉತ್ತರ ಇದೆ. ದಿನಾಂಕ 8.7.2024ರಂದು ಒಂದು ಸಭೆ ನಡೆದಿತ್ತು. ಈ ಸಭೆಗಳು ನಿಯಮಿತವಾಗಿ ಯಾವ ಅವಧಿಯಲ್ಲಿ ನಡೆಯಬೇಕು; ಯಾರು ಅಧ್ಯಕ್ಷರಾಗಿರಬೇಕು ಎನ್ನುವ ಪ್ರಶ್ನೆ ಕೇಳಿದ್ದಾರೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯಿದೆ ಪ್ರಕಾರ ಪ್ರಾಧಿಕಾರದ ಸಭೆಗಳು, meeting of the Authority, ಅದು ಅಧ್ಯಕ್ಷರಿಂದ ಆಯೋಜನೆ ಆಗುತ್ತದೆ. ಪ್ರಾಧಿಕಾರದ ಸಭೆಗಳು ಯುಕ್ತ ಸಮಯದಲ್ಲಿ ನಡೆಯಬೇಕು ಮತ್ತು ಯುಕ್ತ ನಿಯಮಗಳನ್ನು ಪಾಲನೆ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ಅಲ್ಲಿ ಲೋಕಾಯುಕ್ತದ ರೇಡ್ ಆಗಿ 6 ಜನರನ್ನು ಅರೆಸ್ಟ್ ಮಾಡಿದರು. ಅದರಿಂದ ಬಹಳ ಹುಷಾರಾಗಿ ನೋಡಿ, ಕೂಲಂಕಷವಾಗಿ ಪರಿಶೀಲನೆ ಮಾಡಿ ಸಭೆಗಳನ್ನು ಮಾಡಬೇಕೆಂದು ನಾನು ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏಕೆಂದರೆ ಮೂಡಾ ಮತ್ತು ಬುಡಾ ಎರಡೂ ಪರಸ್ಪರ ಹತ್ತಿರ ಇವೆ. ಮಾಡದೇ ಇರುವ ತಪ್ಪಿಗೆ ಮೂಡಾದಲ್ಲಿ ಏನೇನು ಆಪಾದನೆ ಬಂತು ಎನ್ನುವುದನ್ನು ನೋಡಿದ್ದೇವೆ. ತಡವಾಗಿಯಾದರೂ ಸರಿಯಾಗಿ ಆಗಬೇಕು ಎನ್ನುವುದು ನನ್ನ ಮತ್ತು ಸರ್ಕಾರದ ಉದ್ದೇಶವಾಗಿದೆ. ಇವೆಲ್ಲವನ್ನೂ ನೋಡಿ ಸಭೆಯನ್ನು ಸ್ಥಗಿತಗೊಳಿಸಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ, bundle of single site allotments ನೂರು-ಇನ್ನೂರು ಕೊಟ್ಟು ಅಲಾಟ್ ಮಾಡಿಸಿಕೊಂಡು ಹೋಗುತ್ತಿದ್ದರು. ನಂತರ ಏನು ಮಾಡುತ್ತಾರೆ ಎನ್ನುವುದರ ಬಗ್ಗೆ ಲೆಕ್ಕಾಚಾರ ಸಿಗುತ್ತಿರಲಿಲ್ಲ. ನಾನು ಮಂತ್ರಿಯಾದ ಮೇಲೆ , ರಾಜ್ಯದ ಎಲ್ಲಾ ಅಭಿವೃದ್ಧಿ ಪ್ರಾಧಿಕಾರಗಳ ಕಮಿಷನರ್‌ಗಳ ಸಭೆಯನ್ನು ನಿರಂತರವಾಗಿ ಮಾಡಿ, ಕೂಲಂಕಷವಾಗಿ ಪರಿಶೀಲನೆ ಮಾಡುತ್ತಿದ್ದೇನೆ. ಮಾನ್ಯ ಸಭಾಪತಿಗಳೆ, ಇಬ್ಬರು ಎಂಎಲ್‌ಎಗಳು, ಅವ್ಯವಹಾರ ನಡೆದಿದೆ ಎಂದು ಪತ್ರ ಬರೆದಿದ್ದರು. ಆ ಕುರಿತು ಕೂಡ ಎನ್‌ಕ್ವೈರಿ ಮಾಡಿಸುತ್ತಿದ್ದೇನೆ. ಮತ್ತೆ, ಅಧ್ಯಕ್ಷರು, ಸದಸ್ಯರು ಮತ್ತು ಅಧಿಕಾರಿಗಳು ಸೇರಿ ಶೇಕಡ 50ರಷ್ಟು ಕೋರಂ ಇರಬೇಕು. ಆಗ ಮಾತ್ರ ಸಭಾನಡವಳಿಕೆ ಆಗುತ್ತದೆ. ಇಂತಹ ಸಭೆಗಳನ್ನು ಪ್ರತಿ ತಿಂಗಳು ನಡೆಸಬೇಕು. ಈ ಅಧಿವೇಶನ ಮುಗಿದ ಮೇಲೆ ಮತ್ತೊಂದು ಸಭೆ ನಡೆಸಿ ಅಲ್ಲಿ ಏನೇನು ಸಮಸ್ಯೆಗಳಿವೆಯೋ ಅವುಗಳನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ಮೈ.ಎಂ.ಸತೀಶ್:- ಮಾನ್ಯ ಸಭಾಪತಿಗಳೆ, ಆದಷ್ಟು ಬೇಗ ಮೀಟಿಂಗ್ ನಡೆಯುವ ಹಾಗೆ ಕ್ರಮವಹಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರಿಗೆ ನಮ್ಮ ಬಳ್ಳಾರಿಯ ಬಗ್ಗೆ ಆಸಕ್ತಿ ಇದ್ದಹಾಗಿಲ್ಲ; ಅಲ್ಲಿ ಬಿಸಿಲು ಜಾಸ್ತಿ ಇರುತ್ತದೆಯಾದ್ದರಿಂದ ನೆಗ್ಲೆಕ್ಟ್ ಮಾಡುತ್ತಿದ್ದಾರೆ ಎಂದೆನಿಸುತ್ತಿದೆ.

ಸಭಾಪತಿಯವರು:- ಪ್ರತಿ ತಿಂಗಳು ಮೀಟಿಂಗ್ ಆಗಬೇಕು ಎನ್ನುವುದು ನಿಮ್ಮ ಕಳಕಳಿಯಾಗಿದೆ. ಅಷ್ಟನ್ನು ಹೇಳಿ ಸಾಕು.

ಶ್ರೀ ಬಿ.ಎಸ್.ಸುರೇಶ:- ಮಾನ್ಯ ಸಭಾಪತಿಗಳೆ, ನಾವು ಯಾವುದನ್ನೂ ನೆಗ್ಲೆಕ್ಟ್ ಮಾಡಿಲ್ಲ. ಎಲ್ಲವೂ ನಮ್ಮ ಗಮನದಲ್ಲಿದೆ. ಎಲ್ಲವನ್ನೂ ಹುಷಾರಾಗಿ ಮಾಡುತ್ತಿದ್ದೇವೆ. ತಣ್ಣಗಿರುವ ಪ್ರದೇಶವಾದ ಮೈಸೂರಿನ ವಿಷಯವಾಗಿ ಯಾವರೀತಿಯ ಕಾಟ ಕೊಟ್ಟರು ಎನ್ನುವುದು ಗೊತ್ತಿದೆ. ಬಳ್ಳಾರಿ ಪ್ರದೇಶ ಬಿಸಿಲಿನ ಪ್ರದೇಶವಾಗಿದೆ ಎಂದು ನೆಗ್ಲೆಕ್ಟ್ ಮಾಡುತ್ತಿಲ್ಲ. ಕಾನೂನಿನ ಪ್ರಕಾರ ಏನಿದೆಯೋ ಅದನ್ನು ಮಾಡಿಕೊಡುತ್ತೇವೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 552

ಸದಸ್ಯರು ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 11.03.2025

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿರುವ ಒಟ್ಟು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಭಿವೃದ್ಧಿಗೆ ಎಷ್ಟು ಅನುದಾನ ನೀಡಲಾಗಿದೆ: ವಿಶ್ವವಿದ್ಯಾಲಯವಾರು/ಅನುದಾನವಾರು ಮಾಹಿತಿ ಒದಗಿಸುವುದು: ಯಾವ ಮಾನದಂಡಗಳ ಆಧಾರದ ಮೇಲೆ ಅನುದಾನ ನೀಡಲಾಗುತ್ತಿದೆ: (ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ಒಂದು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಬಾಗಲಕೋಟೆಯಲ್ಲಿರುತ್ತದೆ. ಈ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಪ್ರಸಕ್ತ 2024-25ನೇ ಸಾಲಿನಲ್ಲಿ ಒಟ್ಟು ರೂ.11,320.94 ಲಕ್ಷಗಳ ಅನುದಾನ ನೀಡಲಾಗಿದೆ. ವಿವರಗಳು ಈ ಕೆಳಕಾಣಿಸಿದಂತಿವೆ:-

ಲೆಕ್ಕ ಶೀರ್ಷಿಕೆ-ವಿವರ	ರೂ. ಲಕ್ಷಗಳಲ್ಲಿ
101 – ಸಹಾಯಾನುದಾನ ವೇತನ(Grants-in aid –Salary)	10617.93
103 - ಸಹಾಯಾನುದಾನ ಸಾಮಾನ್ಯ(Grants-in aid –General)	337.93
115 - ಸಹಾಯಾನುದಾನ-ಗುತ್ತಿಗೆ ಹೊರಗುತ್ತಿಗೆ (Grants-in aid – Contractual & Outsource)	55.36
118- ಸಹಾಯಾನುದಾನ ವಿಶ್ರಾಂತಿ ವೇತನಗಳು(Grants-in aid –Pension)	239.47

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		422 -ಪರಿಶಿಷ್ಟ ಜಾತಿ ಉಪ ಯೋಜನೆ(Sub Plan of Schedule Caste)	42.15
		423-ಗಿರಿಜನ ಉಪ ಯೋಜನೆ(Sub Plan of Tribe People)	28.10
		ಒಟ್ಟು	**11320.94**
		There is a Horticultural Sciences University in the state at Bagalkot. A total of Rs. 11320.94 lakhs has been provided for the development of this university in the current year 2024-25, the details of which are as follows:-	
		AB/AC	**Rs. Lakhs**
		101 –Grants-in aid – Salary	10617.93
		103 -Grants-in aid – Genearal	337.93
		115 -Grants-in aid – Contractual & Outsource	55.36
		118-Grants-in aid – Pension	239.47
		422 -Sub Plan of Schedule Caste	42.15
		423-Sub Plan of Tribe People	28.10
		Total	**11320.94**
ಆ	ಸದರಿ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಖಾಯಂ ಆಗಿ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಒಟ್ಟು ನೌಕರರ ಸಂಖ್ಯೆ ಎಷ್ಟು: (ಹುದ್ದೆವಾರು ಮಾಹಿತಿ ನೀಡುವುದು)	ಪ್ರಸ್ತುತ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಖಾಯಂ ನೌಕರರು-750 ಮತ್ತು ಹೊರಗುತ್ತಿಗೆ ನೌಕರರು -328. ಹುದ್ದೆವಾರು ವಿವರವಾದ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. The total number of permanent employees currently working in the University of Horticultural Sciences, Bagalkot is-750 and outsourced employees-328. The detailed post-wise information is provided in the appendix.	

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ	ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ/ಗುತ್ತಿಗೆ ನೌಕರರಿಗೆ ಪ್ರತಿ ತಿಂಗಳು ವೇತನ ಪಾವತಿ ಮಾಡಲಾಗುತ್ತಿದೆಯೇ?	ಹೌದು. Yes,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ (Annexure)

NO OF EMPLOYEES IN UNIVERSITY OF HORTICULTURAL SCIENCES, BAGALKOT		
PERMANENT EMPLOYEES		
S.NO	**PARTICULARS**	**NO**
1	OFFICERS	03
2	PROFESSOR	9
3	ASSOCIATE PROFESSOR	14
4	ASSISTANT PROFESSOR	277
5	TECHNICAL/RESEARCH / PROGRAMME ASSISTANT / FARM MANAGER	14
6	DEPUTY REGISTRAR	1
7	DEPUTY ADMINISTRATIVE OFFICER	1
8	DEPUTY COMPTROLLER	3
9	EXECUTIVE ENGINEER	1
10	ASSISTANT REGISTRAR	8
11	ASSISTANT ADMINISTRATIVE OFFFICER	9
12	STORE PURCHASE OFFICER	0
13	ASSISTANT COMPTROLLER	20
14	ASSISTANT EXECUTIVE ENGINEER (CIVIL)	3
15	ASSISTANT EXECUTIVE ENGINEER (ELECTRICAL)	1
16	ASSISTANT MEDICAL OFFICER	9
17	ASSISTANT LADY MEDICAL OFFICER	1
18	LIBRARY ASSISTANT	3
19	SUPERINTENDENT (ACCOUNTS)	20
20	SUPERINTENDENT (GENERAL)	15
21	PERSONAL SECRETARY	7
22	ASSISTANT ENGINEER (CIVIL)	5
23	ASSISTANT ENGINEER (ELECTRICAL)	1
24	ASSISTANT ENGINEER (AUTO)	1
25	SENIOR ASSISTANT	44
26	STENOGRAPHER	9
27	JUNIOR ENGINEER (CIVIL)	3
28	JUNIOR ENGINEER (ELECTRICAL)	1

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

29	ASSISTANT CUM COMPUTER OPERATOR	81
30	FIELD ASSISTANT	67
31	LAB ASSISTANT	63
32	CARETAKER	3
33	TELEPHONE OPERATOR	2
34	JUNIOR TECHNICIAN	6
35	PHARMACIST	1
36	SHELF ASSISTANT	1
37	TRACTOR DRIVER	2
38	DRIVER (HV)	10
39	DRIVER (LV)	8
40	ATTENDER	3
41	LAB ATTENDER	5
42	PLUMBER	1
43	ASSISTANT COOK CUM CARETAKER	1
44	APAIRYMAN	1
45	PUMP ATTENDER	1
46	WARDBOY	1
47	MESSENGER	6
48	GARDENER	1
49	WATCHMAN	1
50	JANITOR	1
51	FARM LABOUR	1
	TOTAL FILLED	**750**

ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಚೇರಿ, ಮಹಾವಿದ್ಯಾಲಯ ಹಾಗೂ ವಿವಿಧ ಕೇಂದ್ರಗಳಲ್ಲಿ ದಿನಾಂಕ 01.10.2024 ರಿಂದ 28.03.2025 ರ ಅವಧಿಯವರೆಗೆ (179 ದಿನಗಳು) ಅಂಶಕಾಲಿಕ /ಕ್ರೋಢೀಕೃತ/ಗೌರವಧನ ಆಧಾರದ ಮೇಲೆ ಕೆಲಸ ನಿರ್ವಹಿಸುವರು.

ಅಂಶಕಾಲಿಕ

1	ASSISTANT COOK	1
2	ASSISTANT COOK CUM CARETAKER	3
3	ASSISTANT CUM COMPUTER OPERATOR	18
4	ATTENDER	2
5	BULLOCKMAN	6
6	COOK	1
7	COOK CUM CARETAKER	11
8	DRIVER (HV)	1

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

9	DRIVER (LV)	18
10	FARM LABOUR	24
11	FIELD ASSISTANT	5
12	GARDENER/MALI	46
13	GRAFTER	2
14	HELPER	6
15	HELPER (MARKING)	1
16	HELPER (SPORTS)	1
17	JANITOR	17
18	JR TECHNICIAN	1
19	JR TECHNICIAN (ELEC)	7
20	LABORATORY ASSISTANT	2
21	MECHANIC	1
22	MESSENGER	42
23	PLUMBER	2
24	SHELF ASSISTANT	5
25	TRACTOR DRIVER	6
26	WARD BOY	1
27	WATCHMAN	36
	ಕ್ರೋಢೀಕೃತ	
28	ASSISTANT COOK CUM CARETAKER	2
29	DRIVER (HV)	1
30	DRIVER (LV)	20
31	PLUMBER	2
32	TRACTOR DRIVER	4
	ಗೌರವಧನ	
33	LIBRARY ASSISTANT	2
	TOTAL	**297**
34	MRE/DRE ನೌಕರರು	15
OUT SOURCE		
1	SECURITY SUPERVISOR	3
2	SECURITY GUARD	9
3	SWEEPER	4
	Grand Total	**328**

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿರುವ ಒಟ್ಟು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಭಿವೃದ್ಧಿಗೆ ಎಷ್ಟು ಅನುದಾನ ನೀಡಲಾಗಿದೆ ಎಂದು ಪ್ರಶ್ನೆ ಕೇಳಿದ್ದೇನೆ. ಈಗಾಗಲೇ ಮಾನ್ಯ ಸಚಿವರು ಮಾಹಿತಿಯನ್ನು ಕೊಟ್ಟಿದ್ದಾರೆ. ಅದರ ಜೊತೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿರುವಂತಹ ಒಟ್ಟು ನೌಕರದಾರರ ಸಂಖ್ಯೆ ಎಷ್ಟು, ಎಷ್ಟು ಜನರು ಹುದ್ದೆಯಲ್ಲಿದ್ದಾರೆ, ಹೊರಗುತ್ತಿಗೆದಾರರ ಸಂಖ್ಯೆ ಎಷ್ಟು, ಅವರ ಸಂಭಾವನೆ ಎಷ್ಟು ಎಂದು ಪ್ರಶ್ನೆ ಕೇಳಿದ್ದೇನೆ, ಸಂಪೂರ್ಣವಾದಂತಹ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಹಿತಿಯನ್ನು ಮಾನ್ಯ ಸಚಿವರು ಒದಗಿಸಿರುವುದಿಲ್ಲ. ನಾನು ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತಿದ್ದೇನೆ, ಒಟ್ಟು 750 ಖಾಯಂ ನೌಕರರು ಇದ್ದಾರೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ನನಗೆ ಗೊತ್ತಿರುವ ಹಾಗೆ 1,419 ಮಂಜೂರಾದ ಹುದ್ದೆಗಳು ಇವೆ. ಅಲ್ಲಿ 750 ನೌಕರರು ಇದ್ದಾರೆ ಎಂದು ಉತ್ತರದಲ್ಲಿ ಮಾಹಿತಿಯನ್ನು ಕೊಟ್ಟಿದ್ದಾರೆ. ಈ ಮಾಹಿತಿ ಸರಿಯಿಲ್ಲ. ಉಳಿದಿರುವಂತಹ ಹುದ್ದೆಗಳನ್ನು ಯಾವಾಗ ತುಂಬುತ್ತಾರೆ? 669 ಹುದ್ದೆಗಳು ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಖಾಲಿ ಇವೆ. ಈ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ತುಂಬಿ ತೋಟಗಾರಿಕೆ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಈ ನೌಕರರುಗಳನ್ನು ಕೊಡುತ್ತಾರೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. 328 ಹೊರಗುತ್ತಿಗೆ ನೌಕರರು ಇದ್ದಾರೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಅವರಿಗೆ ಪ್ರತಿ ದಿನ ಸಂಭಾವನೆ ಎಷ್ಟು ಎಂಬುದನ್ನು ಉತ್ತರದಲ್ಲಿ ಕೊಟ್ಟಿಲ್ಲ. ಪ್ರತಿ ದಿವಸ 341 ರೂಪಾಯಿಗಳನ್ನು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವವರಿಗೆ ಸಂಭಾವನೆ ಕೊಡುತ್ತಿದ್ದಾರೆ. ಇದು ಲೇಬರ್ ಆಕ್ಟ್‌ಗೆ ತದ್ವಿರುದ್ಧವಾಗಿರುವಂಥದ್ದು. ಅವರ ಸಂಭಾವನೆಯನ್ನು ಹೆಚ್ಚು ಮಾಡಬೇಕು. ಇವರು ತಾತ್ಕಾಲಿಕ ನೌಕರರಾಗಿದ್ದಾರೆ. ಇವರನ್ನು ವರ್ಷದಲ್ಲಿ ಕೇವಲ ಆರು ತಿಂಗಳು ಮಾತ್ರ ಹುದ್ದೆಗೆ ತೆಗೆದುಕೊಳ್ಳುತ್ತಾರೆ. ಇನ್ನು ಆರು ತಿಂಗಳು ಅವರು ಖಾಲಿ ಇರಬೇಕು. 341 ರೂಪಾಯಿಗಳ ಸಂಭಾವನೆ ಕೊಟ್ಟರೆ ಇವರು ಉಪಜೀವನವನ್ನು ಹೇಗೆ ನಡೆಸುವುದಕ್ಕಾಗುತ್ತದೆ, ಇವರು ಬದುಕುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ದಿನಗೂಲಿ ನೌಕರರಿಗೂ ಕೂಡ ಹೆಚ್ಚಿನ ಸಂಭಾವನೆ ಕೊಡತಕ್ಕಂಥದ್ದನ್ನು ಮಾಡಬೇಕು. ಖಾಲಿ ಇರುವಂತಹ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತಾರೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):- ಮಾನ್ಯ ಸಭಾಪತಿಯವರೇ, ಒಟ್ಟು 1,410 ಮಂಜೂರಾದ ಹುದ್ದೆಗಳಿವೆ. ಅದರಲ್ಲಿ 750 ಹುದ್ದೆಗಳನ್ನು ಭರ್ತಿ ಮಾಡಿದ್ದೇವೆಂದು ಉತ್ತರದಲ್ಲಿ ಕೊಟ್ಟಿದ್ದೇವೆ. ಉತ್ತರದಲ್ಲಿ ಮಂಜೂರಾದ ಹುದ್ದೆಗಳ ಬಗ್ಗೆ ಬರೆದಿಲ್ಲ ಅಷ್ಟೆ. ಆದರೆ 1,410 ಮಂಜೂರಾದ ಹುದ್ದೆಗಳಂತೂ ಇವೆ. 750 ಭರ್ತಿಯಾದ ಹುದ್ದೆಗಳು. ಇದರ ಬಗ್ಗೆ ಮಾನ್ಯ ಸದಸ್ಯರು ಮಾಹಿತಿ ಕೊಟ್ಟಿರುವುದು ಮತ್ತು ನಮ್ಮ ಇಲಾಖೆಯಿಂದ ಮಾಹಿತಿ ಕೊಟ್ಟಿರುವುದು ಇವೆಲ್ಲಾ ಸರಿಯಿದೆ. ಇದರಲ್ಲೇನು ಮುಚ್ಚುಮರೆ ಇಲ್ಲ.

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:- ಮಾನ್ಯ ಸಭಾಪತಿಯವರೇ, 750 ಹುದ್ದೆಗಳಿವೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. 1,410 ಮಂಜೂರಾದ ಹುದ್ದೆಗಳಿವೆ ಎಂದು ಉತ್ತರದಲ್ಲಿ ಬರೆದಿಲ್ಲ. ಉಳಿದಿರುವ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡುತ್ತಾರೆ ಎಂಬುದನ್ನು ಹೇಳಿ. ಇರತಕ್ಕ ವಿಶ್ವವಿದ್ಯಾಲಯಕ್ಕೆ ನೌಕರರನ್ನು ಭರ್ತಿ ಮಾಡುವುದಕ್ಕಾಗುತ್ತಿಲ್ಲ. ಆದರೂ ಮತ್ತೊಂದು ವಿಶ್ವವಿದ್ಯಾಲಯವನ್ನು ಮಾಡುತ್ತಿದ್ದಾರೆ. ಈಗಿರುವ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾಲಯವನ್ನು ಸ್ಟ್ರೆಂಥನ್ ಮಾಡಿ, ಅದಕ್ಕೆ ಬೇಕಾಗಿರುವಂತಹ ಆರ್ಥಿಕ ವ್ಯವಸ್ಥೆಯನ್ನು ಮಾಡಿ, ಮಂಜೂರಾದ ಹುದ್ದೆಗಳನ್ನು ಭರ್ತಿ ಮಾಡಿ. ಅದನ್ನು ಬಿಟ್ಟು ಮತ್ತೊಂದು ವಿಶ್ವವಿದ್ಯಾಲಯವನ್ನು ಮಾಡುತ್ತೇವೆಂದು ಹೇಳಿದರೆ ಅದು ಸರಿಯಲ್ಲ. ಇರತಕ್ಕಂಥ ವಿಶ್ವವಿದ್ಯಾಲಯವನ್ನೇ ಸ್ಟ್ರೆಂಥನ್ ಮಾಡಿ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:- ಆಗ ನೀವೇ ಸರ್ಕಾರದಲ್ಲಿದ್ದೀರಿ, ಏನು ಮಾಡಿದ್ದೀರಿ?

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:- ಈಗ ನೀವು ಇದ್ದೀರಿ, ನೀವು ಮಾಡಿ ಎಂದು ನಾನು ಕೇಳುತ್ತಿದ್ದೇನೆ. ನಾವು ಇದ್ದಾಗ ಮತ್ತೊಂದು ವಿಶ್ವವಿದ್ಯಾಲಯವನ್ನು ಮಾಡಿಲ್ಲ.

(ಗೊಂದಲ)

ಶ್ರೀ ಟಿ.ಎ.ಶರವಣ:- ಅವರು ಸರಿಯಿಲ್ಲ ಎಂದು ಜನರು ನಿಮ್ಮನ್ನು ಆಡಳಿತ ಪಕ್ಷವಾಗಿ ಕೂರಿಸಿದ್ದಾರೆ.

(ಗೊಂದಲ)

ಸಭಾಪತಿಯವರು:- ಮಾನ್ಯ ಶರವಣರವರೇ, ಮಾನ್ಯ ಕೇಶವ ಪ್ರಸಾದ್‌ರವರೇ, ತಾವು ಇನ್ನು ಮೇಲೆ ಪದೇಪದೇ ಎದ್ದು ನಿಂತು ಮಾತನಾಡಿದರೆ ಹೊರಗೆ ಹಾಕುತ್ತೇನೆ. ನನ್ನ ಅನುಮತಿ ಇಲ್ಲದೆ ಏನು ಬೇಕಾದರೂ ಮಾತನಾಡಬಹುದೇ?

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:- ಮಾನ್ಯ ಸಭಾಪತಿಯವರೇ, ಇರತಕ್ಕಂಥ ಒಂದೇ ಒಂದು ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ೩೦೦ ಕ್ಕಿಂತ ಹೆಚ್ಚು ಬೆಳೆಗಳನ್ನು ಸಂಶೋಧನೆ ಮಾಡುತ್ತಿದ್ದಾರೆ. ೩೦ಕ್ಕಿಂತ ಹೆಚ್ಚು ಸಂಶೋಧನಾ ಕೇಂದ್ರಗಳಿಗೆ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯು ICAR (Indian Council of Agricultural Research) ಅಪ್ರೂವಲ್ ಕೊಟ್ಟಿದೆ. ಉತ್ತಮ ರೀತಿಯಿಂದ ಅವರು ಕೆಲಸ ಮಾಡುತ್ತಿದ್ದಾರೆ. ಆ ವಿಶ್ವವಿದ್ಯಾಲಯಕ್ಕೆ ಇನ್ನಷ್ಟು ಶಕ್ತಿಯನ್ನು ಕೊಡಬೇಕು. ತೋಟಗಾರಿಕೆ ಬೆಳೆ ನಮ್ಮಲ್ಲಿ ಇನ್ನಷ್ಟು ಬೆಳೆಯಬೇಕು ಎನ್ನುವ ಆಶಯ ನಮ್ಮದಾಗಿದೆ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ವಿಜಯಪುರ, ಬಾಗಲಕೋಟೆ ಜಿಲ್ಲೆಯಲ್ಲಿ ದ್ರಾಕ್ಷಿ ಬೆಳೆ ಅತ್ಯಂತ ಪ್ರಸಿದ್ಧವಾಗಿರುವಂಥದ್ದು. ಅಲ್ಲಿ ಇನ್ನಷ್ಟು ಸಂಶೋಧನೆಗಳಾಗಬೇಕು. ೬೬೦ ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ವಿಶ್ವವಿದ್ಯಾಲಯವನ್ನು ನಡೆಸುವುದು ಹೇಗೆ? ಇದರ ಜೊತೆಗೆ ಮತ್ತೊಂದು ವಿಶ್ವವಿದ್ಯಾಲಯವನ್ನು ಮಾಡುವುದಕ್ಕೆ ಹೊರಟಿದ್ದಾರೆ. ನನ್ನ ಕಳಕಳಿ ಏನಿದೆ ಎಂದರೆ, ವಿಶ್ವವಿದ್ಯಾಲಯಕ್ಕೆ ಶಕ್ತಿ ತುಂಬಿ. ಇಲ್ಲಿರುವಂತಹ ತಾತ್ಕಾಲಿಕ ಗುತ್ತಿಗೆದಾರ ನೌಕರರನ್ನು ಖಾಯಂ ನೌಕರರನ್ನಾಗಿ ಮಾಡಿಕೊಳ್ಳಿ. ಅವರಿಗೆ ವರ್ಷ ಪೂರ್ತಿ ಕೆಲಸವನ್ನು ಕೊಟ್ಟು ಸಂಪೂರ್ಣವಾಗಿ ಪೇಮೆಂಟ್ ಮಾಡುವಂತಹ ಕೆಲಸ ಮಾಡಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:- ಮಾನ್ಯ ಸಭಾಪತಿಯವರೇ, ಸಿ ಮತ್ತು ಡಿ ಗ್ರೂಪ್ ಹುದ್ದೆಗಳು ೨೮೦ ಹುದ್ದೆಗಳು ಇತ್ತು. ಅದರಲ್ಲಿ ಸಿ ಮತ್ತು ಡಿ ಗ್ರೂಪ್ ಹುದ್ದೆಗಳು ಸ್ವಲ್ಪ ಜಾಸ್ತಿ ಇತ್ತು ಎನ್ನುವ ಮಾಹಿತಿ ಇದೆ. ಅದೇ ನಿಟ್ಟಿನಲ್ಲಿ ಇನ್ನು 450 ಹುದ್ದೆಗಳು ಭರ್ತಿ ಆಗಬೇಕಾಗಿದೆ. ಆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ನಾವು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:- ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:- ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **564**
ಸದಸ್ಯರ ಹೆಸರು : **ಶ್ರೀ. ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**
ಉತ್ತರಿಸುವ ದಿನಾಂಕ : **11/03/2025**
ಉತ್ತರಿಸುವ ಸಚಿವರು : **ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು**

	ಪ್ರಶ್ನೆ	ಉತ್ತರ
ಅ	ರಾಯಚೂರು ಜಿಲ್ಲೆಯ ಲಿಂಗಸಗೂರು ಪಟ್ಟಣದ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ಮಾಹಿತಿ ಒದಗಿಸುವುದು);	ರಾಯಚೂರು ಜಿಲ್ಲೆಯ ಲಿಂಗಸಗೂರು ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ. ಲಿಂಗಸಗೂರು ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಜಿಲ್ಲಾಧಿಕಾರಿ, ರಾಯಚೂರು ಜಿಲ್ಲೆ ರವರಿಂದ ಸಲ್ಲಿಸಲಾಗುವ ದಾಖಲೆಗಳನ್ವಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ನಿಯಮಾನುಸಾರ ಅರ್ಹವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದಲ್ಲಿ ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರಲ್ಲಿನ ಮಾನದಂಡಗಳನ್ವಯ ಆಡಳಿತಾತ್ಮಕ ಹಿತದೃಷ್ಟಿಯಿಂದ ನಿಯಮಾನುಸಾರ ಪರಿಶೀಲಿಸಲಾಗುತ್ತದೆ.
ಆ	ಲಿಂಗಸಗೂರು ಪಟ್ಟಣವು ಸರ್ಕಾರದ ಸೌಲಭ್ಯಗಳಿಂದ ವಂಚಿತವಾಗಿದ್ದು ಈ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;	
ಇ	ಸದರಿ ಪುರಸಭೆಯಲ್ಲಿ ದಿನಗೂಲಿ ಆಧಾರದ ಮೇಲೆ ಸುಮಾರು ವರ್ಷಗಳಿಂದ ಕೆಲಸ ಮಾಡುತ್ತಿರುವ 40 ಜನ ನೀರು ಸರಬರಾಜುದಾರರನ್ನು ಖಾಯಂ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ಇದ್ದಲ್ಲಿ, ಸಂಪೂರ್ಣ ಮಾಹಿತಿ ಒದಗಿಸುವುದು)?	ಲಿಂಗಸಗೂರಿನ ಪುರಸಭೆಯಲ್ಲಿ ದಿನಗೂಲಿ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ 24 ನೀರು ಸರಬರಾಜು ನೌಕರರನ್ನು ಸಕ್ರಮಾತಿಗೊಳಿಸಲು ನಿರ್ದೇಶನ ನೀಡುವಂತೆ ಕೋರಿ ಜಿಲ್ಲಾಧಿಕಾರಿ, ರಾಯಚೂರು ಜಿಲ್ಲೆ ರವರು ದಿನಾಂಕ:08/01/2025 ರ ಪತ್ರದನ್ವಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಉಮಾದೇವಿ ಪ್ರಕರಣದಲ್ಲಿ ನೀಡಿರುವ ತೀರ್ಪಿನ ಮೇರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಸಿಆಸುಇ 25 ಸೇಸ್ಥಅ 2003(ಭಾ); ದಿನಾಂಕ:13/11/2006 ರನ್ವಯ ದಿನಗೂಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ನೌಕರರನ್ನು ಖಾಯಂ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಲಿಂಗಸಗೂರು ಪುರಸಭೆಯಲ್ಲಿ ದಿನಗೂಲಿ / ಕ್ಷೇಮಾಭಿವೃದ್ಧಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ 24 ಸಿಬ್ಬಂದಿಯನ್ನು ಒಳಗೊಂಡಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀರು ಸರಬರಾಜು ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಿ ದರ್ಜೆ ನೌಕರರಾದ ಸಹಾಯಕರು/ಹೆಲ್ಪರ್/ವಾಲ್ವಮನ್‌ಗಳ ಎಲ್ಲಾ ಹೊರಗುತ್ತಿಗೆ ನೌಕರರ ವೇತನವನ್ನು ಯಥಾಸ್ಥಿತಿ ಪ್ರಕಾರ ಮುಂದುವರೆಸಲು ಹಾಗೂ ಕಾರ್ಮಿಕ ಇಲಾಖೆಯ ಕನಿಷ್ಟ ವೇತನ ಕಾಯ್ದೆಯಂತೆ ವೇತನ ಪಾವತಿಸಲು ಕ್ರಮವಹಿಸುವಂತೆ ಸರ್ಕಾರದ ದಿನಾಂಕ:06/03/2024 ರ ಪತ್ರದನ್ವಯ ಈಗಾಗಲೇ ಪೌರಾಡಳಿತ ನಿರ್ದೇಶಕರಿಗೆ ನಿರ್ದೇಶನ ನೀಡಲಾಗಿರುತ್ತದೆ.

ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ರಾಯಚೂರು ಜಿಲ್ಲೆಯ ಲಿಂಗಸಗೂರು ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಎಲ್ಲಾ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ. ಮಾನ್ಯ ಸಚಿವರು ದಯವಿಟ್ಟು ಅದನ್ನು ತರಿಸಿಕೊಂಡು ಸುಮಾರು ೫೦,೦೦೦ ಜನಸಂಖ್ಯೆಯನ್ನು ಒಳಗೊಂಡ ಲಿಂಗಸಗೂರು ಪಟ್ಟಣವನ್ನು ಗ್ರೇಟ್-2 ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಿದರೆ ಬಹಳಷ್ಟು ಅನುಕೂಲವಾಗುತ್ತದೆ. ಈಗಾಗಲೇ ೮ ಕಿ.ಮೀ.ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಹಳ್ಳಿಗಳನ್ನು ಸೇರಿಸಿ ನಕ್ಷೆಯನ್ನು ತಯಾರು ಮಾಡಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದೆ. ಅದೇ ರೀತಿ ನಗರಸಭೆಯನ್ನು ಮಾಡಬೇಕಾದರೆ ೫೦,೦೦೦ ಜನಸಂಖ್ಯೆ ಇರಬೇಕು. ೫೦,೦೦೦ ಕ್ಕಿಂತಲೂ ಹೆಚ್ಚು ಜನಸಂಖ್ಯೆ ಕೂಡ ಇದೆ. ಅದರ ಜೊತೆಗೆ ೫ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಪುರಸಭೆಯ ವರಮಾನ ಕೂಡ ಇದೆ. ಹಾಗಾಗಿ ದಯವಿಟ್ಟು ಮಾನ್ಯ ಸಚಿವರು ಅದನ್ನು ಜಿಲ್ಲಾಧಿಕಾರಿಗಳಿಗೆ ಹೇಳಬೇಕು. ಈಗ ನಾವು ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಆ ಪ್ರಸ್ತಾವನೆಯನ್ನು ಜರೂರಾಗಿ ತರಿಸಿಕೊಂಡು ಲಿಂಗಸಗೂರು ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಾಗಲೇ 24 ಡಿ ಗ್ರೂಪ್ ದಿನಗೂಲಿ ನೌಕರರನ್ನು ಖಾಯಂಗೊಳಿಸಲು ಸುಪ್ರೀಂ ಕೋರ್ಟ್ ಆದೇಶದಂತೆ ಮಾಡುವುದಕ್ಕೆ ಬರುವುದಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಅವರು ಸುಮಾರು 21 ವರ್ಷಗಳಿಂದ ನಿರಂತರವಾಗಿ ಒಂದು ದಿನವು ರಜೆ ಹಾಕದೆ ಕೆಲಸವನ್ನು ಮಾಡಿದ್ದಾರೆ. ಈಗಾಗಲೇ ಅವರಿಗೆ 50-60 ವರ್ಷಗಳಾಗಿವೆ. ದಯವಿಟ್ಟು ಅವರನ್ನು ಮಾನವೀಯತೆ ದೃಷ್ಟಿಯಿಂದ ಖಾಯಂಗೊಳಿಸಬೇಕೆಂದು ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರಹೀಂ ಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು):- ಮಾನ್ಯ ಸಭಾಪತಿಯವರೇ, ಲಿಂಗಸಗೂರು ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಜಿಲ್ಲಾಧಿಕಾರಿಗಳ ಹತ್ತಿರ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು DMA (Directorate of Municipal Administration) ನಿಂದ ಪತ್ರ ಬರೆದು ಆ ಪ್ರಪೋಸಲ್‌ನ್ನು ಸರ್ಕಾರಕ್ಕೆ ತರಿಸಿ ತೀರ್ಮಾನ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರು ಮತ್ತೊಂದು ಪ್ರಪೋಸಲ್‌ನ್ನು ಹೇಳಿದ್ದಾರೆ. 24 ನೀರು ಸರಬರಾಜು ನೌಕರರನ್ನು ಸಕ್ರಮಾತಿಗೊಳಿಸುವ ಬಗ್ಗೆ ಈಗ ಮಾನ್ಯ ಭೈರತಿ ಸುರೇಶ್‌ರವರು ಮಾತನಾಡಿದ್ದಾರೆ. ಉಮಾದೇವಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಿಂದ ಆದೇಶವಾಗಿದೆ. ಅದರಿಂದ ಇದು ಸ್ವಲ್ಪ ಸಮಸ್ಯೆಯಾಗಿದೆ. ಆದರೂ ಮತ್ತೊಂದು ಸಲ ವಿವರವಾದ ಮಾಹಿತಿಯನ್ನು ತೆಗೆದುಕೊಂಡು ನಾನು ಕನ್ಸಿಡರ್ ಮಾಡುತ್ತೇನೆ.

ಶ್ರೀ ಶರಣಗೌಡ ಬಯ್ಯಾಪುರ:- ಮಾನ್ಯ ಸಭಾಪತಿಯವರೇ, ಪೌರ ಕಾರ್ಮಿಕರ ಬಗ್ಗೆ ಸ್ವಲ್ಪ ಕಾಳಜಿಯನ್ನು ತೆಗೆದುಕೊಳ್ಳಬೇಕು. ಏಕೆಂದರೆ, ದಿನ ನಿತ್ಯ ಪೌರ ಕಾರ್ಮಿಕರು ನಮ್ಮ ಸ್ವಚ್ಛತೆಯನ್ನು ಕಾಪಾಡುತ್ತಾರೆ. ಅವರ ಬಗ್ಗೆ ಕೇವಲ ಸುಪ್ರೀಂ ಕೋರ್ಟ್ ಆದೇಶವಿದೆ ಎಂದು ಮುಂದೆ ಹಾಕಿಕೊಂಡು ಹೋಗುವುದಕ್ಕಿಂತ ಸರ್ಕಾರದ ಮಟ್ಟದಲ್ಲಿ ಚರ್ಚೆ ಮಾಡಿ. ಅವರು 20 ವರ್ಷಗಳಿಂದ ಒಂದು ದಿವಸ ಕೂಡ ರಜೆ ಹಾಕದೆ ಕೆಲಸ ಮಾಡಿದ್ದಾರೆ. ದಯವಿಟ್ಟು ಮಾನವೀಯತೆ ದೃಷ್ಟಿಯಿಂದ ಅವರು ಮನುಷ್ಯರು ಎಂದು ಪರಿಗಣಿಸಿದರೆ ಸಾಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಹೀಂ ಖಾನ್:- ಮಾನ್ಯ ಸಭಾಪತಿಯವರೇ, ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	**534**
ಸದಸ್ಯರ ಹೆಸರು	ಡಾ|| ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	11.03.2025
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಮರಳು ಗಣಿಗಾರಿಕೆಯಿಂದ ಬರುತ್ತಿರುವ ತೆರಿಗೆ ಹಣ ಎಷ್ಟು;</td><td>2022-23ನೇ ಸಾಲಿನಿಂದ 2024-25ನೇ ಸಾಲಿನ ಜನವರಿ ಅಂತ್ಯದವರೆಗೆ ರಾಜ್ಯದಲ್ಲಿ ಮರಳು ಗಣಿಗಾರಿಕೆಯಿಂದ ವರ್ಷವಾರು ಸಂಗ್ರಹಿಸಲಾಗಿರುವ ರಾಜಧನ, ಹೆಚ್ಚುವರಿ ನಿಯತಕಾಲಿಕ ಮೊತ್ತ, ಹೆಚ್ಚುವರಿ ಮೊತ್ತ, ಮರಳು ಮಾರಾಟ ಮತ್ತು ಡಿಎಂಎಫ್ ಮೊತ್ತದ ವಿವರಗಳು ಈ ಕೆಳಕಂಡಂತಿವೆ:
<table>
<tr><th>ವರ್ಷ</th><th>ಮರಳಿನ ಪ್ರಮಾಣ (ಮೆಟ್ರಿಕ್ ಟನ್ ಗಳಲ್ಲಿ)</th><th>ಸಂಗ್ರಹಿಸಲಾದ ರಾಜಧನ ಹಾಗೂ ಇತರೆ ಮೊತ್ತಗಳು (₹ ಲಕ್ಷಗಳಲ್ಲಿ)</th><th>ಸಂಗ್ರಹಿಸಲಾದ ಡಿಎಂಎಫ್ ಮೊತ್ತ (₹ ಲಕ್ಷಗಳಲ್ಲಿ)</th></tr>
<tr><td>2022-23</td><td>3040621</td><td>8445.59</td><td>243.44</td></tr>
<tr><td>2023-24</td><td>3091720</td><td>5944.22</td><td>235.68</td></tr>
<tr><td>2024-25 (20.02.2025 ರ ಅಂತ್ಯಕ್ಕೆ)</td><td>2410236</td><td>3568.45</td><td>198.85</td></tr>
</table></td></tr>
<tr><td>ಆ)</td><td>ಹೊಸ ಮರಳು ಗಣಿಗಾರಿಕೆ ನೀತಿ ಅನ್ವಯ ಎಷ್ಟು ಮರಳು ಗಣಿಗಾರಿಕೆ ಬ್ಲಾಕ್ ಗಳನ್ನು ಗುರುತಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)</td><td>• ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 31-U ರಂತೆ IV, V ಮತ್ತು ಉನ್ನತ ಶ್ರೇಣಿಯ ಹಳ್ಳ / ನದಿಗಳ ಪಾತ್ರಗಳಲ್ಲಿ ಲಭ್ಯವಿರುವ ಮರಳು ಬ್ಲಾಕ್ ಗಳನ್ನು ಇ-ಟೆಂಡರ್ ಮೂಲಕ ಮರಳು ವಿಲೇವಾರಿಗೆ ಅವಕಾಶ ಕಲ್ಪಿಸಲಾಗಿರುತ್ತದೆ.
• ಅದರಂತೆ ದಿನಾಂಕ 03.12.2024 ರಂದು ಮಾರ್ಗಸೂಚಿಗಳು ಹಾಗೂ ಮಾದರಿ ಟೆಂಡರ್ ಡಾಕ್ಯೂಮೆಂಟ್ ನ್ನು ಹೊರಡಿಸಲಾಗಿರುತ್ತದೆ.
• ಸದರಿ ಮಾರ್ಗಸೂಚಿಗಳು ಹಾಗೂ ಮಾದರಿ ಟೆಂಡರ್ ಡಾಕ್ಯೂಮೆಂಟ್ ನಂತೆ ರಾಜ್ಯದಲ್ಲಿ ಒಟ್ಟು 260 ಮರಳು ಬ್ಲಾಕ್ ಗಳನ್ನು ಗುರುತಿಸಲಾಗಿದೆ.
ತಾಲ್ಲೂಕುವಾರು ವಿವರಗಳನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ.</td></tr>
<tr><td>ಇ)</td><td>ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ: ಕಳೆದ</td><td>ಬಂದಿರುತ್ತದೆ.
• ರಾಜ್ಯದಲ್ಲಿ ಉಪಖನಿಜದ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ, ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994 ರಂತೆ ಮೊಕದ್ದಮೆಗಳನ್ನು -</td></tr>
</table>

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

	-05 ವರ್ಷಗಳಿಂದ ಅಕ್ರಮ ಗಣಿಗಾರಿಕೆಯಿಂದಾಗಿ ರಾಜ್ಯ ಸರ್ಕಾರಕ್ಕೆ ಆಗುತ್ತಿರುವ ತೆರಿಗೆ ನಷ್ಟ ಎಷ್ಟು: (ವರ್ಷವಾರು ವಿವರ ನೀಡುವುದು).	-ದಾಖಲಿಸಲಾಗಿರುತ್ತದೆ ಹಾಗೂ ದಂಡವನ್ನು ವಿಧಿಸಿ ಸಂಗ್ರಹಿಸಲಾಗಿರುತ್ತದೆ. • ಅದರಂತೆ, ಕಳೆದ 05 ವರ್ಷಗಳಲ್ಲಿ ಉಪಖನಿಜದ ಅಕ್ರಮ ಗಣಿಗಾರಿಕೆ ಚಟುವಟಿಕೆಗಳಡಿ ಸಂಗ್ರಹಿಸಲಾದ ದಂಡ ಮತ್ತು ದಾಖಲಿಸಲಾದ ಮೊಕದ್ದಮೆಗಳ ವಿವರಗಳನ್ನು **ಅನುಬಂಧ-02 ರಲ್ಲಿ** ನೀಡಲಾಗಿದೆ.
ಈ)	ದಿನಾಂಕ 01.01.2020 ರಿಂದ 31.01.2025 ರ ವರೆಗೆ ರಾಜ್ಯ ದಲ್ಲಿ ಅಕ್ರಮ ಮರಳು ಗಣಿಗಾರಿಕೆ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿದೆ: ಎಷ್ಟು ದಂಡ ವಿಧಿಸಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು)	ದಿನಾಂಕ 01.04.2019 ರಿಂದ 31.01.2025 ರವರೆಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳ ವಿರುದ್ಧ ದಾಖಲಿಸಿರುವ ಮೊಕದ್ದಮೆಗಳು ಹಾಗೂ ಸಂಗ್ರಹಿಸಲಾದ ಜಿಲ್ಲಾವಾರು ದಂಡದ ಮೊತ್ತದ ವಿವರಗಳನ್ನು **ಅನುಬಂಧ- 03 ರಲ್ಲಿ** ನೀಡಲಾಗಿದೆ.
ಉ)	ಅಕ್ರಮ ಗಣಿಗಾರಿಕೆ ತಡೆಯುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು:	• ರಾಜ್ಯದಲ್ಲಿ ಅನಧಿಕೃತ ಮರಳು ಹಾಗೂ ಇತರೆ ಉಪಖನಿಜಗಳ ಗಣಿಗಾರಿಕೆಯನ್ನು ನಿಯಂತ್ರಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆ ಯಲ್ಲಿ ಜಿಲ್ಲಾ ಟಾಸ್ಕ್‌ಫೋರ್ಸ್ (ಗಣಿ) ಸಮಿತಿ / ಮರಳು ಸಮಿತಿಯನ್ನು ರಚಿಸಲಾಗಿರುತ್ತದೆ. • ಮೇಲ್ಕಂಡ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಗಣಿ ಮತ್ತು ಭೂವಿಜ್ಞಾನ, ಪ್ರಾದೇಶಿಕ ಸಾರಿಗೆ ಇಲಾಖೆ ಹಾಗೂ ಇತರೆ ಇಲಾಖೆಗಳನ್ನೊಳಗೊಂಡ ಅಧಿಕಾರಿಗಳು ಸದಸ್ಯರು ಗಳಾಗಿರುತ್ತಾರೆ. • ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಉಪ ಖನಿಜಗಳ ಗಣಿಗಾರಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 21 ಮತ್ತು 22ರಡಿ ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 43 ಮತ್ತು 46 ರಂತೆ ಅನಧಿಕೃತ ಗಣಿಗಾರಿಕೆ ನಿಯಮ 31-R (12) ರಡಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ. • ಅದರಂತೆ, ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ತನಿಖಾ ಠಾಣೆ ಹಾಗೂ ಚಾಲಿತದಳ ತಂಡವನ್ನು ರಚಿಸಿಕೊಂಡು ಅನಧಿಕೃತ ಉಪಖನಿಜಗಳ ಗಣಿಗಾರಿಕೆ / ಸಾಗಾಣಿಕೆ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ವಹಿಸಲಾಗುತ್ತಿದೆ. • ಮರಳು ಹಾಗೂ ಇತರೆ ಉಪಖನಿಜ ಸಾಗಾಣಿಕೆ ವಾಹನಗಳ ಚಲನವಲನಗಳ ಮೇಲೆ ನಿಗಾವಹಿಸಲು ಕೇಂದ್ರೀಕೃತ One state One GPS ವ್ಯವಸ್ಥೆಯನ್ನು ಜಾರಿಗೊಳಿಸಲಾಗಿರುತ್ತದೆ.

...3

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		• ಅನಧಿಕೃತ ಮರಳು ಹಾಗೂ ಇತರ ಉಪಖನಿಜಗಳ ಗಣಿಗಾರಿಕೆ / ಸಾಗಾಣಿಕೆ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು "ಖನಿಜ ಸಂರಕ್ಷಣಾ ಪಡೆ" ಯನ್ನು ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ. • ಅದರಂತೆ, ರಾಜ್ಯದಲ್ಲಿ ಅನಧಿಕೃತ ಉಪಖನಿಜಗಳ ಗಣಿಗಾರಿಕೆ ತಡೆಗಟ್ಟಲು ಕ್ರಮ ವಹಿಸಲಾಗಿರುತ್ತದೆ.
ಊ)	ರಾಜ್ಯದಲ್ಲಿ ಪ್ರತಿ ಟನ್ ಮರಳಿಗೆ ಸರ್ಕಾರ ಪ್ರಸ್ತುತ ನಿಗದಿ ಪಡಿಸಿರುವ ದರವೆಷ್ಟು:	• ಸರ್ಕಾರದ ಆದೇಶ ಸಂಖ್ಯೆ ಸಿಐ 344 ಎಂಎಂಎನ್ 2019 (ಭಾಗ-2), ದಿನಾಂಕ 10.07.2020 ರಂತೆ, I, II ಮತ್ತು III ನೇ ಶ್ರೇಣಿಯ ಹಳ್ಳಗಳ ಪಾತ್ರಗಳಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ವಿಲೇವಾರಿ ಮಾಡುವ ಪ್ರತಿ ಮೆಟ್ರಿಕ್ ಟನ್ ಮರಳಿಗೆ ₹300/-ಗಳ ಮಾರಾಟ ದರ ನಿಗದಿ ಪಡಿಸಲಾಗಿರುತ್ತದೆ. • ಸರ್ಕಾರದ ಆದೇಶ ಸಂಖ್ಯೆ ಸಿಐ-ಎಂಎಂಎನ್/115/2024, ದಿನಾಂಕ 03.12.2024 ರಂತೆ, IV, V ಮತ್ತು ಉನ್ನತ ಶ್ರೇಣಿಗಳ ಹೊಳೆ/ ನದಿಗಳಲ್ಲಿ ಹಾಗೂ ಅಣೆಕಟ್ಟು ಜಲಾಶಯ ಮತ್ತು ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರಗಳಲ್ಲಿ ಮರಳು ಗಣಿಗಾರಿಕೆ ನಡೆಸಿ, ಸಾರ್ವಜನಿಕರಿಗೆ ಮತ್ತು ಸರ್ಕಾರಿ ಕಾಮಗಾರಿಗಳಿಗೆ ಪೂರೈಸುವ ಮರಳಿಗೆ ಮತ್ತು ನದಿಪಾತ್ರದಲ್ಲಿ ಗುರುತಿಸುವ ಮರಳು ಬ್ಲಾಕ್ ಗಳನ್ನು ಟೆಂಡರ್ ಮೂಲಕ ಗುತ್ತಿಗೆ ಪಡೆದು ಮರಳು ಬ್ಲಾಕ್ ಗಳಿಂದ ಸಾರ್ವಜನಿಕರಿಗೆ ಮತ್ತು ಸರ್ಕಾರಿ ಕಾಮಗಾರಿಗಳಿಗೆ ಪೂರೈಸುವ ಮರಳಿನ ಮಾರಾಟ ದರವನ್ನು ₹850/- ಗಳಿಗೆ ನಿಗದಿಪಡಿಸಲಾಗಿರುತ್ತದೆ.
ಋ)	ಸರ್ಕಾರ ನಿಗದಿ ಪಡಿಸಿರುವ ದರಕ್ಕೂ ಗ್ರಾಹಕರಿಗೆ ಮಾರುಕಟ್ಟೆಯಲ್ಲಿ ಸಿಗುತ್ತಿರುವ ಮರಳಿನ ದರಕ್ಕೂ ಬಹಳ ವ್ಯತ್ಯಾಸ ವಿದ್ದು, ಇದರಿಂದ ಗ್ರಾಹಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಬಂದಿರುತ್ತದೆ. ಸರ್ಕಾರದಿಂದ ಮರಳಿನ ಸ್ಯಾಕ್ ಯಾರ್ಡ್ ದರವನ್ನು ನಿಗದಿ ಪಡಿಸಲಾಗಿರುತ್ತದೆ. ಗ್ರಾಹಕರಿಗೆ ಸ್ಯಾಕ್ ಯಾರ್ಡ್ ನಿಂದ ಗಮ್ಯ ಸ್ಥಳಕ್ಕೆ ತಲುಪುವ ಸಾಗಾಣಿಕೆ ವೆಚ್ಚವು ತಗುಲುವುದರಿಂದ ಸರ್ಕಾರದಿಂದ ನಿಗದಿಪಡಿಸಿರುವ ದರಕ್ಕೂ ಮತ್ತು ಮಾರುಕಟ್ಟೆಯಲ್ಲಿ ಸಿಗುತ್ತಿರುವ ದರಕ್ಕೂ ವ್ಯತ್ಯಾಸವಿರುತ್ತದೆ.

ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, Rules are many, followers are few. ಅಂದರೆ, ನಿಯಮಗಳು ಹಲವಾರು ಪಾಲಿಸುವವರು ವಿರಳ. ಸಿಸಿ ಕ್ಯಾಮರಾವನ್ನು ಅಳವಡಿಸಿದ್ದೇವೆ, ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿರುತ್ತದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ 10 ಮೆಟ್ರಿಕ್ ಟನ್ ಮರಳು ಸಾಗಿಸಲು ಲಾರಿಗೆ ಪರ್ಮಿಟ್ ತೆಗೆದುಕೊಂಡು 18 ರಿಂದ 24 ಮೆಟ್ರಿಕ್ ಟನ್

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಿ ತೆಗೆದುಕೊಂಡು ಹೋಗುತ್ತಿರುವಂಥವರು ಇದ್ದಾರೆ. ಅಲ್ಲಿ ಒಂದು ಪರ್ಮಿಟ್‌ನಿಂದ 4 ರಿಂದ 5 ಲೋಡ್‌ಗಳ ಮರಳು ಸಾಗಾಣಿಕೆಯಾಗುತ್ತಿದೆ. ಸರ್ಕಾರಕ್ಕೆ 10 ಲಕ್ಷ ರೂಪಾಯಿಗಳ ರಾಯಲ್ಟಿ ಬಂದರೆ, 50 ಲಕ್ಷ ದಿಂದ ಒಂದು ಕೋಟಿ ರೂಪಾಯಿಗಳನ್ನು ಲೂಟಿ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಜಿಪಿಎಸ್ ಅನ್ನು ಅಳವಡಿಸುವುದರ ಜೊತೆಗೆ, ಮೊನ್ನೆ ಶಾಸಕರ ಮಗನ ಹೆಸರಿನ ಧ್ವನಿಯಲ್ಲಿ ಅಧಿಕಾರಿಗೆ ಧಮ್ಕಿ ಹಾಕಿರುವುದನ್ನು ನಾವು ಕೇಳಿದ್ದೇವೆ. ಆ ನಿಟ್ಟಿನಲ್ಲಿ ರೆಡ್ ಜೋನ್ ಏರಿಯಾದಲ್ಲಿ ರಿಸರ್ವ್ ಪೊಲೀಸ್‌ರನ್ನು ಹಾಕಿದರೆ ಅನುಕೂಲವಾಗುತ್ತದೆ. ಜಿಲ್ಲೆಯ ಅಧಿಕಾರಿಗಳಿಗೆ ಎರಡು ವಾಹನಗಳನ್ನು ಕೊಟ್ಟಿದ್ದಾರೆ. ಎರಡು ತಾಲ್ಲೂಕಿಗೆ ಒಂದು ವಾಹನವನ್ನು ಕೊಟ್ಟರೆ ಅನುಕೂಲವಾಗುತ್ತದೆ. ಪೆನಾಲ್ಟಿ ಕ್ಲಾಜ್ ಅನ್ನು 10,000 ರೂಪಾಯಿಗಳ ಬದಲಿಗೆ ಎರಡರಿಂದ ಮೂರು ಪಟ್ಟು ಪೆನಾಲ್ಟಿ ಹಾಕಿದರೆ ಅನುಕೂಲವಾಗುತ್ತದೆ ಎಂದು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತಿದ್ದೇನೆ.

(ಮುಂದು)

(194) 11/03/2025 12:20 ಎಸ್‌ಪಿಆರ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಡಾ॥ ಧನಂಜಯ ಸರ್ಜಿ(ಮುಂದು):-

ಒಂದು ಲಕ್ಷ ಮೆಟ್ರಿಕ್ ಟನ್‌ನ ಪ್ರಮಾಣದಷ್ಟು ಕ್ವಾರಿ ಹರಾಜು ಆದರೆ, ಸುಮಾರು ಶೇಕಡಾ 60 ರಷ್ಟು ಅಂದರೆ, 60,000 ಮೆಟ್ರಿಕ್ ಟನ್‌ನ ರಾಜಧನವನ್ನು ಒಂದೇ ಬಾರಿಗೆ ಕಟ್ಟಿ, ಕ್ವಾರಿಯನ್ನು ಹರಾಜು ಮಾಡಿದರೆ, ರಾಜಧನವೂ ಸಹ ಜಾಸ್ತಿಯಾಗುತ್ತದೆ. ಶೇಕಡಾ 50 ರಷ್ಟು ಸಕ್ರಿಯ ದಂಡದ ಏನು ಸಮಸ್ಯೆ ಇದೆ ಅದನ್ನೂ ಸಹ ತಡೆಹಿಡಿದಂತಾಗುತ್ತದೆ ಎನ್ನುವುದು ನನ್ನ ಅನಿಸಿಕೆಯಾಗಿದೆ. ಮೂರನೆಯದಾಗಿ, ನಿಯಮಗಳ ಸರಳೀಕರಣ ಮಾಡಬೇಕಾಗುತ್ತದೆ. ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ಪ್ರಸ್ತಾಪಿಸಿದ ಅಂಶಕ್ಕೆ ಈಗಷ್ಟೇ ಸಚಿವರು ತಿಳಿಸಿದ್ದರು. ಜಿಲ್ಲಾಡಳಿತಕ್ಕೆ ಹಸ್ತಾಂತರ ಮಾಡಿದರೆ ಬಹಳವಾಗಿ ಅನುಕೂಲವಾಗುತ್ತದೆ. ರಾಜ್ಯ ನೀತಿಯಿಂದಾಗಿ ವಿಳಂಬವಾದರೆ, 3 – 6 ತಿಂಗಳ ಕಾಲ ಅಂದರೆ ಜನವರಿ ಮಾಹೆಯಿಂದ ಮೇ ಮಾಹೆಯವರೆಗೆ ಮರಳನ್ನು ತೆಗೆಯಲು ಸಾಧ್ಯತೆ ಇದೆ. ಒಂದು ವೇಳೆ ನಿಗದಿತ ಸಮಯದಲ್ಲಿ ಆಗಲಿಲ್ಲವೆಂದಾದರೆ, ಅನಾವಶ್ಯಕವಾಗಿ ಮರಳಿನ ಬೆಲೆ ಜಾಸ್ತಿಯಾಗುತ್ತದೆ. ಈ ನಿಟ್ಟಿನಲ್ಲಿ ಬೇಡಿಕೆಯು ಹೆಚ್ಚಾಗಿ ಜನರಿಗೆ ಬಹಳ ದುಬಾರಿಯಾಗುತ್ತದೆ. ಗುತ್ತಿಗೆಯನ್ನು ಪಡೆದುಕೊಂಡ ಮೇಲೆ, ಪರಿಸರ ಇಲಾಖೆಯ ಒಪ್ಪಿಗೆಯನ್ನು ಪಡೆದುಕೊಳ್ಳಲು ಪುನಃ ರಾಜ್ಯ ಸರ್ಕಾರಕ್ಕೆ ಮನವಿಯು ಹೋಗುತ್ತದೆ. ಅಲ್ಲಿಯೂ ಸಹ ವಿಳಂಬವಾಗುವ ಸಾಧ್ಯತೆಗಳಿರುತ್ತವೆ. ಹಾಗಾಗಿ ಗುತ್ತಿಗೆಯನ್ನು ಹರಾಜು ಮಾಡುವುದಕ್ಕೆ ಮುಂಚಿತವಾಗಿಯೇ ಪರಸರ ಇಲಾಖೆಯ ಒಪ್ಪಿಗೆಯನ್ನು ನೀಡಿದರೆ ಬಹಳವಾಗಿ ಅನುಕೂಲವಾಗುತ್ತದೆ ಎಂದು ಸಚಿವರಿಗೆ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):- ಮಾನ್ಯ ಸಭಾಪತಿಯವರೆ, ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಸಾಕಷ್ಟು ಮಾಹಿತಿಯನ್ನು ಒದಗಿಸಲಾಗಿದೆ. ನಮ್ಮ ರಾಜ್ಯದಲ್ಲಿ ಒಟ್ಟು 206 ಮರಳು ಗಣಿಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ. 879 ಎಂ-ಸ್ಯಾಂಡ್

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(Manufactured Sand) ಘಟಕಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿವೆ. ಮುಖ್ಯವಾಗಿ ಹೇಳುವುದಾದರೆ, ನನ್ನ ಪ್ರಕಾರ ಎಂ-ಸ್ಯಾಂಡ್ ಘಟಕಗಳನ್ನು ಜಾಸ್ತಿ ಮಾಡಿದರೆ, ಮರಳಿನ ಅಭಾವ ಕಡಿಮೆಯಾಗುತ್ತದೆ. ಇವುಗಳು ನಮ್ಮ ನೈಸರ್ಗಿಕ ಹವಾಗುಣದ ಪರವಾಗಿರುತ್ತವೆ ಮತ್ತು ನದಿ, ಹಳ್ಳಗಳು ಉಳಿಯುತ್ತವೆ. ಆ ದೃಷ್ಟಿಕೋನದಲ್ಲಿ ಇಲಾಖೆಯ ವತಿಯಿಂದ ಎಂ-ಸ್ಯಾಂಡ್ ಘಟಕಗಳಿಗೆ ಜಾಸ್ತಿ ಒತ್ತನ್ನು ಕೊಡಲಾಗುತ್ತಿದೆ. ಸದಸ್ಯರು ಪ್ರಶ್ನಿಸಿದಂತೆ, ಒಟ್ಟು 23,582 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಇದರಲ್ಲಿ ಒಟ್ಟು 47.6 ಕೋಟಿ ರೂಪಾಯಿಗಳಷ್ಟು ಹಣವು ದಂಡದ ರೂಪದಲ್ಲಿ ನಮ್ಮ ಇಲಾಖೆಗೆ ಈಗಾಗಲೇ ಪಾವತಿಯಾಗಿದೆ. ಒಟ್ಟು 7,629 ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲಾಗಿದೆ ಎಂಬ ಮಾಹಿತಿಯನ್ನು ಸದಸ್ಯರಿಗೆ ಈಗಾಗಲೇ ಲಿಖಿತ ಮೂಲಕ ತಿಳಿಸಲಾಗಿದೆ. ಇದರ ಬಗ್ಗೆ ನಾವು ಕೂಲಂಕಷವಾಗಿ ಪರಿಶೀಲಿಸಿ, ಜಿಲ್ಲಾ ಟಾಸ್ಕ್ ಫೋರ್ಸ್‌ಗೆ ಹೆಚ್ಚು ಒತ್ತನ್ನು ನೀಡಲಾಗುತ್ತಿದೆ. ಜಿಲ್ಲಾಧಿಕಾರಿಗಳು, ಜಿಲ್ಲಾ ದಂಡಾಧಿಕಾರಿಗಳನ್ನು ಒಳಗೊಂಡಂತೆ ಮರಳು ಸಮಿತಿಯನ್ನು ರಚನೆ ಮಾಡಿ, ಇದರ ಮುಖಾಂತರ ಆ ಭಾಗದಲ್ಲಿ ಜಿಲ್ಲೆಯ ಪ್ರತಿಯೊಂದು ವಿಚಾರಗಳ ಆಗುಹೋಗುಗಳ ಬಗ್ಗೆ ಅಲ್ಲಿಯೇ ಪರಿಶೀಲನೆ ಮಾಡಿ, ಅವರು ಈ ಬಗ್ಗೆ ಹೆಚ್ಚು ಒತ್ತನ್ನು ನೀಡಲು ನಾವು ಈಗಾಗಲೇ ಪ್ರಾರಂಭಿಸಿದ್ದೇವೆ.

ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಈ ನಿಟ್ಟಿನಲ್ಲಿ ಸೆಕ್ಯೂರಿಟಿಯನ್ನು ಹೆಚ್ಚಾಗಿ ಒದಗಿಸಬೇಕೆಂದು ಕೋರುತ್ತೇನೆ. ಹರಾಜು ಮಾಡಬೇಕಾದರೆ, ಶೇಕಡಾ 60 ರಷ್ಟು ಹರಾಜು ಮಾಡಿದರೆ, ಅದಕ್ಕೆ ರಾಜಧನ ಕಟ್ಟುವಂತಾದರೆ, ಅಕ್ರಮ ದಂಧೆಯನ್ನು ತಡೆಯುವುದಕ್ಕೆ ಅದು ತುಂಬಾ ಉತ್ತಮ ವಿಧಾನವಾಗುತ್ತದೆ. ರಾಜ್ಯ ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ ಹಸ್ತಾಂತರವಾದರೆ ಈಗಾಗಲೇ ತಿಳಿಸಿದಂತೆ ತುಂಬಾ ಅನುಕೂಲವಾಗುತ್ತದೆ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:- ಮಾನ್ಯ ಸಭಾಪತಿಯವರೆ, ರಾಜ್ಯ ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ ಈಗಾಗಲೇ ಹಸ್ತಾಂತರ ಮಾಡಲಾಗಿದೆ. ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಯೂ ಸಹ ಇದಕ್ಕೆ ಸದಸ್ಯರಾಗಿರುತ್ತಾರೆ. ಸೆಕ್ಯೂರಿಟಿ ಒದಗಿಸುವ ವಿಚಾರವನ್ನು ಇವರಿಗೆ ತಿಳಿಸಲಾಗುತ್ತದೆ.

ಡಾ॥ ಧನಂಜಯ ಸರ್ಜಿ:- ಮಾನ್ಯ ಸಭಾಪತಿಯವರೆ, ಪರಿಸರ ಇಲಾಖೆಯ ಒಪ್ಪಿಗೆಯನ್ನು ಪಡೆದುಕೊಳ್ಳುವುದಕ್ಕೆ ಇನ್ನೂ ವಿಳಂಬವಾಗುತ್ತಿದೆ. ಹೀಗಾಗಿ ಇಲ್ಲಿ ಬಹಳ ಸಮಯ ವ್ಯರ್ಥವಾಗುತ್ತಿದೆ. ಇದನ್ನು ಸರಳೀಕರಣ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:- ಮಾನ್ಯ ಸಭಾಪತಿಯವರೆ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮಾಲಿನ್ಯ ನಿಯಂತ್ರಣ ಮಂಡಳಿಯವರೊಂದಿಗೆ ಮಾತನಾಡಿ, ಈ ಪ್ರಕ್ರಿಯೆಯನ್ನು ವೇಗಗೊಳಿಸುವಂತೆ ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ದಿನೇಶ್ ಗೂಳಿಗೌಡ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 514
ಉತ್ತರಿಸಬೇಕಾದ ದಿನಾಂಕ : 11-03-2025
ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದ ಸಹಕಾರ ಕ್ಷೇತ್ರಕ್ಕೆ ಹಣಕಾಸು ನೆರವು ನೀಡುವ ಸಂಸ್ಥೆಗಳಾವುವು;	ರಾಜ್ಯದ ಸಹಕಾರ ಕ್ಷೇತ್ರದಲ್ಲಿ ಸಹಕಾರ ಸಂಘಗಳಿಗೆ ಹಣಕಾಸು ನೆರವು ನೀಡುವ ಪ್ರಮುಖ ಸಂಸ್ಥೆಗಳು ಈ ಕೆಳಗಿನಂತಿರುತ್ತವೆ. 1. ನಬಾರ್ಡ್ (National Bank for Agricultural and Rural Development) 2. ಎನ್‌ಸಿಡಿಸಿ (National Cooperative Development Corporation) 3. ಎನ್‌ಡಿಡಿಬಿ (National Dairy Development Board) ಮೇಲಿನ ಸಂಸ್ಥೆಗಳಲ್ಲದೆ ವಿವಿಧ ವಾಣಿಜ್ಯ ಬ್ಯಾಂಕುಗಳು ಸಣ್ಣ ಪ್ರಮಾಣದಲ್ಲಿ ವಾಣಿಜ್ಯ ಬ್ಯಾಂಕಿಗೆ ಅಧ್ಯರ್ಪಿತಗೊಂಡ ಸುಮಾರು 30 ಸಹಕಾರ ಸಂಘಗಳಿಗೆ ಕೃಷಿ ಸಾಲ ವಿತರಿಸುತ್ತಿರುತ್ತವೆ.
ಆ)	2020-21 ರಿಂದ 2024-25ನೇ ಸಾಲಿನವರೆಗೆ ಸಹಕಾರ ಕ್ಷೇತ್ರಕ್ಕೆ ನಬಾರ್ಡ್ (ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರ್ ಅಂಡ್ ರೂರಲ್ ಡೆವಲಪ್‌ಮೆಂಟ್) ಸೇರಿದಂತೆ ಇನ್ನಿತರೆ ಸಂಸ್ಥೆಗಳಿಂದ ಎಷ್ಟೆಷ್ಟು ಹಣಕಾಸು ನೆರವು ಬಂದಿದೆ; (ವರ್ಷವಾರು ಹಾಗೂ ಸಂಸ್ಥೆಗಳವಾರು ಸಂಪೂರ್ಣ ವಿವರ ನೀಡುವುದು)	2020-21 ರಿಂದ 2024-25ನೇ ಸಾಲಿನವರೆಗೆ ಸಹಕಾರ ಕ್ಷೇತ್ರಕ್ಕೆ ಹಣಕಾಸು ಸಂಸ್ಥೆಗಳಿಂದ ನೀಡಿದ ಸಾಲದ ವಿವರ ಕೆಳಗಿನಂತಿದೆ.

(ರೂ.ಕೋಟಿಗಳಲ್ಲಿ)

ವರ್ಷ	ನಬಾರ್ಡ್					ಎನ್‌ಸಿಡಿಸಿ ಯಿಂದ	ಎನ್‌ಡಿಡಿಬಿ ಯಿಂದ
	ಅಪೆಕ್ಸ್ ಬ್ಯಾಂಕಿಗೆ ನೀಡಿರುವ ಸಾಲ				ಕಸ್ಕಾರ್ಡ್ ಬ್ಯಾಂಕಿಗೆ ನೀಡಿರುವ ಸಾಲ		
	ಅಲ್ಪಾವಧಿ ಕೃಷಿ ಸಾಲ			ಮಧ್ಯಮಾವಧಿ/ ದೀರ್ಘಾವಧಿ ಕೃಷಿ ಸಾಲ			
	ರಿಯಾಯಿತಿ ಬಡ್ಡಿ ದರ		ಹೆಚ್ಚಿನ ಬಡ್ಡಿ ದರದಲ್ಲಿ				
	ಸಾಮಾನ್ಯ ಸಂದರ್ಭ	ಕೋವಿಡ್ ಸಂದರ್ಭ					
2020-21	5500.00	1700.00	3500.00	1429.40	315.61	170.11	83.29
2021-22	5483.90	1415.00	2000.00	1493.19	350.00	163.57	24.56
2022-23	5550.00	–	4500.00	2416.30	400.00	111.48	170.55
2023-24	5600.00	–	5200.00	2199.62	408.55	259.96	116.74
2024-25 (ಫೆಬ್ರವರಿ ಅಂತ್ಯಕ್ಕೆ)	3236.11	–	8580.00	1128.65	547.80	433.73	85.39

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ	2020-21 ರಿಂದ 2024-25ನೇ ಸಾಲಿನ ಹಣಕಾಸು ವರ್ಷಗಳಲ್ಲಿ ಸದರಿ ಸಂಸ್ಥೆಗಳಿಂದ ಪೂರ್ವ ನಿರ್ಧಾರಿತದಂತೆ ಪೂರ್ಣ ಹಣಕಾಸು ನೆರವು ಬಂದಿದೆಯೇ; ಇಲ್ಲದಿದ್ದಲ್ಲಿ, ಯಾವ ಯಾವ ಸಂಸ್ಥೆಗಳಿಂದ ಎಷ್ಟೆಷ್ಟು ಹಣಕಾಸು ನೆರವು ಬರಬೇಕಾಗಿತ್ತು; (ಸಂಪೂರ್ಣ ವಿವರ ನೀಡುವುದು)	2020-21 ರಿಂದ 2024-25 ನೇ ಸಾಲಿನ ಹಣಕಾಸು ವರ್ಷಗಳಲ್ಲಿ ನಬಾರ್ಡ್ ಸಂಸ್ಥೆಯಿಂದ ತನ್ನ ರಿಯಾಯಿತಿ ಬಡ್ಡಿ ದರದ ಅಲ್ಪಾವಧಿ ಕೃಷಿ ಸಾಲ ನೀತಿಗೆ ಹೋಲಿಸಿದ್ದಲ್ಲಿ ಪೂರ್ಣ ಹಣಕಾಸು ನೆರವು ನೀಡಿರುವುದಿಲ್ಲ. ನಬಾರ್ಡ್ ಸಂಸ್ಥೆ 2024-25 ನೇ ಸಾಲಿನ SAO(Seasonal Agricultural Operation) ಸಾಲ ನೀತಿಯಲ್ಲಿ ಕೇಂದ್ರ ಸರ್ಕಾರ STCRC ಅಡಿಯಲ್ಲಿ ನೀಡುವ ಹಂಚಿಕೆಗೆ ಒಳಪಟ್ಟು ಡಿಸಿಸಿ ಬ್ಯಾಂಕುಗಳ RLP (Realistic Lending Programme) ಯ ಶೇ.40 ರಷ್ಟು ಪುನರ್ಧನ ನೀಡಲು ತಿಳಿಸಲಾಗಿತ್ತು. ಕಳೆದ 5 ವರ್ಷಗಳಲ್ಲಿ ನಬಾರ್ಡ್ ಸಾಲದ ನೀತಿಗೆ ಅನುಗುಣವಾಗಿ ಕಡಿಮೆಯಾಗಿರುವ ಪುನರ್ಧನದ ಪ್ರಮಾಣ ಈ ಕೆಳಗಿನಂತಿರುತ್ತದೆ. (ರೂಕೋಟಿಗಳಲ್ಲಿ)

ವರ್ಷ	RLP ಪ್ರಕಾರ ಅಪೆಕ್ಸ್ ಬ್ಯಾಂಕ್ ಸಲ್ಲಿಸಿದ ಬೇಡಿಕೆ	ಶೇ.40 ರಷ್ಟು ಪ್ರಮಾಣದ ಅರ್ಹ ಪುನರ್ಧನದ ಮೊತ್ತ	ಮಂಜೂರಾದ ಸಾಲದ ಮಿತಿ	ಕೊರತೆ
2020-21	15,100.00	6040.00	5500.00	540.00
2021-22	18,000.00	7200.00	5483.90	1716.10
2022-23	23,195.98	9278.39	5550.00	3728.39
2023-24	22,927.44	9170.98	5600.00	3570.98
2024-25	22,902.00	9160.80	3236.11	5924.69

		ಅಪೆಕ್ಸ್ ಬ್ಯಾಂಕ್ 2024-25 ನೇ ಸಾಲಿಗೆ ಪುನರ್ಧನ ಪಡೆಯಲು ಅರ್ಹತೆ ಹೊಂದಿಲ್ಲದೇ ಇರುವ ಬೀದರ್ ಡಿಸಿಸಿ ಬ್ಯಾಂಕ್ ಹೊರತುಪಡಿಸಿ ಉಳಿದ ಡಿಸಿಸಿ ಬ್ಯಾಂಕುಗಳ RLP (Realistic Lending programme) ಪ್ರಕಾರ ರೂ.22,902 ಕೋಟಿ ಅಲ್ಪಾವಧಿ ಕೃಷಿ ಸಾಲ ಪಡೆಯಲು ನಬಾರ್ಡ್ ಸಂಸ್ಥೆಗೆ ಪುನರ್ಧನಕ್ಕಾಗಿ ಅರ್ಜಿ ಸಲ್ಲಿಸಿದ್ದು, ಇದಕ್ಕೆ ಎದುರಾಗಿ ನಬಾರ್ಡ್ ರೂ.3236.11 ಕೋಟಿಗಳ ಪುನರ್ಧನದ ಮಿತಿಯನ್ನು ಮಾತ್ರ ರಿಯಾಯಿತಿ ಬಡ್ಡಿ ದರದಲ್ಲಿ (ಶೇ.4.50%) ಮಂಜೂರು ಮಾಡಿರುತ್ತದೆ. ಕಳೆದ ವರ್ಷದಲ್ಲಿ ಈ ಮಿತಿ 5600 ಕೋಟಿಗಳಿದ್ದು, ಇದಕ್ಕೆ ಹೋಲಿಸಿದಲ್ಲಿ ರೂ.2363.89 ಕೋಟಿಗಳು ಕಡಿಮೆಯಾಗಿರುತ್ತದೆ. ಎನ್‌ಸಿಡಿಸಿ ಮತ್ತು ಎನ್‌ಡಿಡಿಬಿ ಸಂಸ್ಥೆಗಳ ಬಡ್ಡಿ ದರಗಳು ಹೆಚ್ಚಾಗಿದ್ದು, ಕಡಿಮೆ ಸಂಖ್ಯೆಯ ಸಹಕಾರ ಸಂಘಗಳು ಸಾಲಕ್ಕೆ ಅರ್ಜಿ ಸಲ್ಲಿಸಿದ್ದು, ಸಹಕಾರ ಸಂಘಗಳು ಸಲ್ಲಿಸಿದ ಅರ್ಜಿಗಳಿಗೆ ಪೂರ್ಣ ಪ್ರಮಾಣದಲ್ಲಿ ಸಾಲ ವಿತರಿಸಲಾಗಿದೆ.
ಈ)	ಸದರಿ ವರ್ಷಗಳಲ್ಲಿ ಬಾಕಿಯಿರುವ ಅವಶ್ಯ ಹಣಕಾಸಿನ ಕೊರತೆ ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	2020-21 ರಿಂದ 2023-24 ನೇ ಸಾಲಿನವರೆಗೆ ನಬಾರ್ಡ್ ರಿಯಾಯಿತಿ ಬಡ್ಡಿ ದರದ ಪುನರ್ಧನದ ಸಾಲದ ಮಿತಿಯನ್ನು ಪೂರ್ವ ನಿರ್ಧಾರದಂತೆ ಕಡಿಮೆ ಮಾಡಿದ್ದರೂ ಸಹ ನಬಾರ್ಡ್ ನಿಶ್ಚಿತ (ಹೆಚ್ಚಿನ) ಬಡ್ಡಿ ದರದ SAO(Seasonal Agricultural Operation) ಸಾಲ ನೀತಿಯಲ್ಲಿ ಡಿಸಿಸಿ ಬ್ಯಾಂಕುಗಳ RLP (Realistic Lending programme) ಯ ಶೇ.60 ರಷ್ಟು ಪುನರ್ಧನ ಪಡೆಯಲು ಅವಕಾಶ ಇದ್ದು, ಈ ಮಿತಿಯನ್ನು ಡಿಸಿಸಿ ಬ್ಯಾಂಕುಗಳು ಉಪಯೋಗಿಸಿಕೊಳ್ಳುತ್ತಿರುತ್ತವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ರಾಜ್ಯ ಸರ್ಕಾರದಿಂದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳು ಅರ್ಹರಿರುವಂತೆ ರಿಯಾಯಿತಿ ಬಡ್ಡಿದರದ ಅಲ್ಪವಧಿ ಕೃಷಿ ಸಾಲದ ಮಿತಿಯನ್ನು ಮಂಜೂರು ಮಾಡಲು ನಬಾರ್ಡ್‌ನ್ನು ಕೋರಲಾಗಿದೆ. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳು ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಹೆಚ್ಚಿನ ಠೇವಣಿ ಸಂಗ್ರಹಿಸಲು ಕಾರ್ಯಕ್ರಮ ರೂಪಿಸಲು ಸೂಚಿಸಲಾಗಿದೆ. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ಕಾರ್ಯವ್ಯಾಪ್ತಿಯಲ್ಲಿರುವ ಎಲ್ಲಾ ಸಹಕಾರ ಸಂಘಗಳ ಕಾಯ್ದಿಟ್ಟ ನಿಧಿಗಳನ್ನು ಹಾಗೂ ಇನ್ನಿತರೆ ನಿಧಿಗಳನ್ನು ಖಡ್ಡಾಯವಾಗಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳಲ್ಲಿ ತೊಡಗಿಸಲು ಕ್ರಮ ಜರುಗಿಸಲು ಸಹಕಾರ ಇಲಾಖಾಧಿಕಾರಿಗಳಿಗೆ ಸೂಚಿಸಲಾಗಿದೆ.

ಶ್ರೀ ದಿನೇಶ್ ಗೂಳಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ರಾಜ್ಯದ ಸಹಕಾರ ಕ್ಷೇತ್ರಕ್ಕೆ ಕೇಂದ್ರದ ಯಾವ ಯಾವ ಹಣಕಾಸು ಸಂಸ್ಥೆಗಳು ಯಾವ ಯಾವ ರೀತಿಯಲ್ಲಿ ನೆರವನ್ನು ನೀಡುತ್ತವೆ ಎಂಬುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆನು.

ನಬಾರ್ಡ್(National Bank for Agricultural and Rural Development), ಎನ್‌ಸಿಡಿಸಿ (National Cooperative Development Bank) ಮತ್ತು ಎನ್‌ಡಿಡಿಬಿ (National Dairy Development Board) ಮೂರು ಹಣಕಾಸು ಸಂಸ್ಥೆಗಳು ನೆರವನ್ನು ನೀಡುತ್ತವೆ ಎಂಬ ಉತ್ತರವನ್ನು ಸಚಿವರು ನೀಡಿದ್ದಾರೆ. 2023-24 ನೇ ಸಾಲಿನಲ್ಲಿ ನಬಾರ್ಡ್ ಸಂಸ್ಥೆಯು ರಾಜ್ಯದ ರೈತರಿಗೆ ಅಪೆಕ್ಸ್ ಬ್ಯಾಂಕ್ ಮುಖಾಂತರ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲವನ್ನು ನೀಡುವುದಕ್ಕೆ 5,600 ಕೋಟಿ ರೂಪಾಯಿಗಳಷ್ಟು ಹಣವನ್ನು ನೀಡಿತ್ತು. ಆದರೆ ಪ್ರಸಕ್ತ ವರ್ಷದಲ್ಲಿ 3,236 ಕೋಟಿ ರೂಪಾಯಿಗಳನ್ನು ಮಾತ್ರವೇ ನೀಡಿದೆ. ಇದನ್ನು ನೋಡಿದಾಗ ಸುಮಾರು 2,364 ಕೋಟಿ ರೂಪಾಯಿಗಳು ಕಡಿಮೆಯಾಗಿವೆ. ಇದಕ್ಕೆ ಕಾರಣವೇನೆಂದು ನಾನು ಕೇಳಬಯಸುತ್ತೇನೆ. ರಾಜ್ಯ ಸರ್ಕಾರವು ಹಣಕಾಸು ನೆರವು ಕೋರಿ ಪ್ರಸ್ತಾವನೆಯನ್ನು ಸಲ್ಲಿಸುವುದು ವಿಳಂಬವಾಯಿತೇ? ಕಳೆದ ಐದು ವರ್ಷಗಳಲ್ಲಿ ನಬಾರ್ಡ್ ಮತ್ತಿತರೆ ಹಣಕಾಸು ಸಂಸ್ಥೆಗಳು ರಾಜ್ಯಕ್ಕೆ 5,924 ಕೋಟಿ ರೂಪಾಯಿಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಸಾಲ ಕೊಡುವುದಕ್ಕಾಗಿ ಕಡಿಮೆ ಮೊತ್ತವನ್ನು ನೀಡಿದ್ದಾರೆ. ಇದಕ್ಕೂ ಸಹ ಕಾರಣವೇನೆಂಬುದನ್ನು ಸಚಿವರು ತಿಳಿಸಬೇಕು.

ಶ್ರೀ ಕ್ಯಾತ್ಸಂದ ಎನ್.ರಾಜಣ್ಣ (ಸಹಕಾರ ಸಚಿವರು):- ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರವು general Line of Credit (LOC) ಅನ್ನು ಭಾರತೀಯ ರಿಸರ್ವ್ ಬ್ಯಾಂಕಿನಿಂದ ನಬಾರ್ಡ್ ಹಣಕಾಸು ಸಂಸ್ಥೆಗೆ ಹಣ ಬಿಡುಗಡೆಯಾಗುತ್ತದೆ. ನಬಾರ್ಡ್ ಸಂಸ್ಥೆಯಿಂದ SAO (Seasonal Agricultural Operation) ಸಾಲ ನೀತಿ ಅಡಿ ರೈತರಿಗೆ ಸಾಲ ನೀಡುವ ಉದ್ದೇಶಕ್ಕಾಗಿಯೇ ನಮ್ಮ ರಾಜ್ಯಕ್ಕೆ ಹಣ ಬರುತ್ತದೆ. ಕಳೆದ ಬಾರಿಯ 2023-24 ನೇ ಸಾಲಿನಲ್ಲಿ ರಾಜ್ಯ ಸರ್ಕಾರಕ್ಕೆ 5,600 ಕೋಟಿ ರೂಪಾಯಿಗಳಷ್ಟು ಹಣ ಬಂದಿತ್ತು. 2024-25 ನೇ ಸಾಲಿಗೆ 2,340 ಕೋಟಿ ರೂಪಾಯಿಗಳನ್ನು ಮಾತ್ರವೇ ನೀಡಿದ್ದಾರೆ. ನಂತರದಲ್ಲಿ ಮುಖ್ಯಮಂತ್ರಿಗಳೂ ಸಹ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಮನವಿ ಮಾಡಿಕೊಂಡರು. ಅದೇ ರೀತಿಯಾಗಿ ನಾನೂ ಸಹ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೆ. ಇದಲ್ಲದೇ, ನಮ್ಮ ರಾಜ್ಯವನ್ನು ಪ್ರತಿನಿಧಿಸುವ ರಾಜ್ಯಸಭಾ ಮತ್ತು ಲೋಕಸಭಾ ಸಂಸದರಿಗೂ ಪತ್ರವನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರೆದು, ನಮ್ಮ ರಾಜ್ಯಕ್ಕೆ ನೀಡಿರುವ ಮೊತ್ತವು ಕಡಿಮೆಯಾಗಿರುವ ಬಗ್ಗೆ ತಿಳಿಸಿದ್ದೇನೆ. ಈ ರೀತಿಯಾಗಿ ಹಣ ಕಡಿಮೆಯಾಗಿದ್ದಲ್ಲಿ ಬಹಳಷ್ಟು ರೈತರಿಗೆ ತೊಂದರೆಯಾಗುತ್ತದೆ ಎನ್ನುವ ಅಂಶದ ಬಗ್ಗೆ ಒತ್ತಾಯಿಸಿದ ನಂತರ ಹೆಚ್ಚುವರಿಯಾಗಿ 896 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರವು ನೀಡಿದೆ. ನಮ್ಮ ರಾಜ್ಯದ ಒಟ್ಟಾರೆ ಬೇಡಿಕೆಯು 9,219 ಕೋಟಿ ರೂಪಾಯಿಗಳು. ನಮ್ಮ ಸರ್ಕಾರದ ವತಿಯಿಂದ ಹಾಗೂ ಅಪೆಕ್ಸ್ ಬ್ಯಾಂಕಿನಿಂದಲೂ ಸಹ ನಬಾರ್ಡ್ ಸಂಸ್ಥೆಗೆ ಹಾಗೂ ಕೇಂದ್ರ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಲಾಗಿತ್ತು. ಆದರೆ, ದುರ್ದೈವ ಏನೆಂದರೆ, ಕಳೆದ ಬಾರಿ ನೀಡಿದ 5,600 ಕೋಟಿ ರೂಪಾಯಿಗಳ ಮೊತ್ತಕ್ಕಿಂತಲೂ ಕಡಿಮೆ ಮೊತ್ತವನ್ನು ಈ ಬಾರಿ ನೀಡಲಾಗಿದೆ. ಸರ್ವೇ ಸಾಮಾನ್ಯವಾಗಿ ಶೇಕಡಾ 10-20 ರಷ್ಟು ಜಾಸ್ತಿ ಮೊತ್ತವನ್ನು ನೀಡಬೇಕು. ಆದರೆ ನಮಗೆ ಕೇಂದ್ರ ಸರ್ಕಾರವು ಶೇಕಡಾ 58 ರಷ್ಟು ಕಡಿಮೆ ಮೊತ್ತವನ್ನು ನೀಡಿದೆ. ಹೀಗಾಗಿ ಈ ಸಂಬಂಧ ನಾವು ಪತ್ರ ವ್ಯವಹಾರವನ್ನು ಮಾಡುತ್ತಿದ್ದೇವೆ. ಪತ್ರ ವ್ಯವಹಾರದ ನಂತರ ಹೆಚ್ಚುವರಿಯಾಗಿ 896 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಇನ್ನೂ ಹೆಚ್ಚಿನ ಮೊತ್ತವನ್ನು ನಮಗೆ ನೀಡಬಹುದು ಎಂಬ ಆಶಾಭಾವನೆಯನ್ನು ಹೊಂದಿದ್ದೇವೆ. ಇಲ್ಲಿ ಹಣದ ಲಭ್ಯತೆಯ ಆಧಾರದ ಮೇಲೆ ರೈತರಿಗೆ ನೀಡುವ ಸಾಲದ ಸೌಲಭ್ಯವನ್ನು ಹೆಚ್ಚು ಮಾಡುವ ಅಂಶವನ್ನು ಪರಿಶೀಲಿಸಲಾಗುತ್ತದೆ.

ಶ್ರೀ ದಿನೇಶ್ ಗೂಳಿಗೌಡ:- ಮಾನ್ಯ ಸಭಾಪತಿಯವರೆ, ಕಳೆದ ಸಾಲಿನಲ್ಲಿ ನಮ್ಮ ರಾಜ್ಯದ 21 ಲಕ್ಷ ರೈತರಿಗೆ ಸಹಕಾರಿ ಬ್ಯಾಂಕುಗಳ ಮುಖಾಂತರ ಒಟ್ಟು 17,960 ಕೋಟಿ ರೂಪಾಯಿಗಳಷ್ಟು ಸಾಲವನ್ನು ನೀಡಲಾಗಿತ್ತು. ಮುಖ್ಯ ಮಂತ್ರಿಗಳು ಪ್ರಸಕ್ತ ಸಾಲಿಗೆ ಮಂಡಿಸಿರುವ ಆಯವ್ಯಯದಲ್ಲಿ ಈ ವರ್ಷದಲ್ಲಿ 37 ಲಕ್ಷ ರೈತರಿಗೆ 28,000 ಕೋಟಿ ರೂಪಾಯಿಗಳಷ್ಟು ಸಾಲವನ್ನು ನೀಡುವ ಗುರಿಯನ್ನು ಹೊಂದಿದ್ದೇವೆ ಎಂಬುದಾಗಿ ತಿಳಿಸಿದ್ದಾರೆ. ಕೇಂದ್ರ ಸರ್ಕಾರವು ನಮ್ಮ ರಾಜ್ಯಕ್ಕೆ ಹಣಕಾಸಿನ ನೆರವನ್ನು ನೀಡಿಲ್ಲವೆಂದಾದರೆ, ಸರ್ಕಾರವು ಪರ್ಯಾಯವಾಗಿ ಏನು ವ್ಯವಸ್ಥೆಯನ್ನು ಮಾಡಿಕೊಂಡಿದೆ ಎಂಬುದನ್ನು ತಿಳಿಸಬೇಕು. ಒಂದು ವೇಳೆ ಇದು ಆಗಿಲ್ಲವೆಂದಾದರೆ, ಇನ್ಯಾವ ಬೇರೆ ಮೂಲದಿಂದ ಗುರಿಯನ್ನು ಸಾಧಿಸುವುದಕ್ಕೆ ಸರ್ಕಾರ ಪ್ರಯತ್ನವನ್ನು ಮಾಡುತ್ತದೆ ಎಂಬುದರ ಬಗ್ಗೆಯೂ ಸಹ ಸಚಿವರು ತಿಳಿಸಬೇಕು. ವಿರೋಧ ಪಕ್ಷದ ನಾಯಕರನ್ನೊಳಗೊಂಡಂತೆ, ಸರ್ವ ಪಕ್ಷದ ಸದಸ್ಯರ ನಿಯೋಗವನ್ನು ಕರೆದುಕೊಂಡು ಕೇಂದ್ರ ಸರ್ಕಾರಕ್ಕೆ ಹೋಗಿ ಕೇಂದ್ರ ಸರ್ಕಾರಕ್ಕೆ ನಮ್ಮ ಮನವಿಯನ್ನು ಮನವರಿಕೆ ಮಾಡುತ್ತದೆಯೇ ಎಂಬ ಬಗ್ಗೆಯೂ ಸಹ ಸಚಿವರು ತಿಳಿಸಬೇಕು. ರೈತರಿಗೆ ಸಾಲದ ನೆರವನ್ನು ನೀಡುವುದರ ಬಗ್ಗೆ ಸರ್ಕಾರವು ಯಾವ ರೀತಿಯಾಗಿ ಯೋಚನೆಯನ್ನು ಮಾಡಿದೆ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಕ್ಯಾತ್ಸಂದ ಎನ್.ರಾಜಣ್ಣ:- ಮಾನ್ಯ ಸಭಾಪತಿಯವರೆ, ಸರ್ವೇ ಸಾಮಾನ್ಯವಾಗಿ ಸಹಕಾರ ಸಂಘಗಳ ಮೂಲಕ ನೀಡಲಾಗುವ ಸಾಲವು ಸರ್ಕಾರವು ನೀಡುವ ಸಾಲವೆಂದು ಜನ ಸಾಮಾನ್ಯರು ತಿಳಿದುಕೊಂಡಿರುತ್ತಾರೆ. ಹಳ್ಳಿ ರೈತರು ಸಹಕಾರ ಸಂಘಗಳಿಂದ ನೀಡುವ ಸಾಲವು ಸರ್ಕಾರದ ಸಾಲ, ಸರ್ಕಾರದ ದುಡ್ಡು ಎಂದು ತಿಳಿದುಕೊಂಡಿರುತ್ತಾರೆ. ಇದರಲ್ಲಿ ರಾಜ್ಯ ಸರ್ಕಾರದ 10/- ರೂಪಾಯಿಯಷ್ಟೂ ಬಂಡವಾಳವಿರುವುದಿಲ್ಲ. ಇದರಲ್ಲಿ ಸರ್ಕಾರದ ಪಾತ್ರವೇನೆಂದರೆ, ರೈತರು ಕಟ್ಟಬೇಕಾದ ಬಡ್ಡಿ ಹಣವನ್ನು ಸರ್ಕಾರವು ತುಂಬಿ ಕೊಡುತ್ತದೆ. ಇದನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರತುಪಡಿಸಿ, ಅವರಿಗೆ ನೀಡುವ ಸಾಲದ ಹಣವು ಸಂಪೂರ್ಣವಾಗಿ ಅಪೆಕ್ಸ್ ಬ್ಯಾಂಕ್ ಮತ್ತು ನಬಾರ್ಡ್ ಹಣಕಾಸು ಸಂಸ್ಥೆಯಿಂದ ಪಡೆದ ಸಾಲವಾಗಿರುತ್ತದೆ. ಅವರಲ್ಲಿರುವ ಠೇವಣಿಯ ಮೊತ್ತವಾಗಿರುತ್ತದೆ. ಅದೇ ರೀತಿಯಾಗಿ ಜಿಲ್ಲಾ ಬ್ಯಾಂಕುಗಳೂ ಸಹ ಹಣ ನೀಡುತ್ತವೆ. ಒಟ್ಟಾರೆಯಾಗಿ ನಮಗೆ ಒಳ ಬರುವ refinance ಕೇವಲ ಶೇಕಡಾ 30 ರಿಂದ ಶೇಕಡಾ 35 ರಷ್ಟು ಮಾತ್ರವೇ ಇರುತ್ತದೆ. ಉದಾಹರಣೆಗೆ ಹೇಳುವುದಾದರೆ, ನಾವು 100/- ರೂಪಾಯಿಗಳ ಸಾಲವನ್ನು ನೀಡಿದರೆ, ಕೇವಲ 30-35 ರೂಪಾಯಿಗಳಷ್ಟು refinance ಬರುತ್ತದೆ. ಬ್ಯಾಂಕ್‌ಗಳ ಆರ್ಥಿಕ ಶಕ್ತಿಗನುಗುಣವಾಗಿ ಹಾಗೂ NPA (Non-Performing Assets) ಅನ್ನು ಲೆಕ್ಕ ಹಾಕಿ ಶೇಕಡಾ 35 ರಿಂದ ಶೇಕಡಾ 40 ರಷ್ಟರ ಒಳಗೆ ಹಣವನ್ನು ನೀಡುತ್ತಾರೆ. ಇನ್ನುಳಿದ ಹಣವನ್ನು ಸ್ವಂತ ಸಂಪನ್ಮೂಲಗಳಿಂದ ಅಪೆಕ್ಸ್ ಬ್ಯಾಂಕಿನವರು ಠೇವಣಿದಾರರ ಹಣದಲ್ಲಿ ಮತ್ತು ಡಿ.ಸಿ.ಸಿ. ಬ್ಯಾಂಕಿನವರು ಅವರ ಠೇವಣಿದಾರರ ಹಣದಲ್ಲಿ ಕೊಡುತ್ತಾರೆ. ಅದರಲ್ಲಿಯೂ ಸಹ ಜಿಲ್ಲಾ ಬ್ಯಾಂಕುಗಳಿಗೆ ನಷ್ಟವಾಗುತ್ತಿರುವುದು ನನ್ನನ್ನು ಆದಿಯಾಗಿ ಇಲ್ಲಿರುವ ಎಲ್ಲರಿಗೂ ಗೊತ್ತಿದೆ. ಅದು ಏನೇ ಇದ್ದರೂ ಸಹ, ಸದಸ್ಯರು ಈಗಾಗಲೇ ಪ್ರಸ್ತಾಪಿಸಿದಂತೆ, ಇಡೀ ದೇಶಯಲ್ಲಿಯೇ ನಬಾರ್ಡ್ ಸಂಸ್ಥೆಯು ಹಣ ನೀಡುವ ಮಿತಿಯನ್ನು ಕೇಂದ್ರ ಸರ್ಕಾರವು ಕಡಿಮೆ ಮಾಡಿದೆ. ಆದರೆ, ನಮ್ಮ ಸರ್ಕಾರದ ಮುಖ್ಯಮಂತ್ರಿಗಳು ಕೇಂದ್ರದ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಈ ಬಗ್ಗೆ ಮನವಿಗಳನ್ನು ಸಲ್ಲಿಸಿದ್ದಾರೆ. ಈ ರೀತಿಯಾಗಿ ದೇಶದ ಯಾವುದೇ ರಾಜ್ಯದಲ್ಲಿಯೂ ಸಹ ಮಾಡಿರುವುದಿಲ್ಲ. ಈ ರೀತಿಯಾಗಿ ನಾವು ಮಾತ್ರವೇ ಮಾಡಿದ್ದೇವೆ. ಇದರ ಪರಿಣಾಮವಾಗಿ 896 ಕೋಟಿ ರೂಪಾಯಿಗಳ ಹೆಚ್ಚುವರಿ ಮೊತ್ತವನ್ನು ನೀಡಿದ್ದಾರೆ. ಇನ್ನೂ ಹೆಚ್ಚಿನ ಮೊತ್ತವು ನಮ್ಮ ರಾಜ್ಯ ಸರ್ಕಾರಕ್ಕೆ ಬರುತ್ತದೆ ಎನ್ನುವ ಆಶಾಭಾವನೆಯನ್ನು ನಾನು ಹೊಂದಿದ್ದೇನೆ.

(ಮುಂದು)

(195) 11.03.2025 12.30 ಬಿಕೆಪಿ/ ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಕ್ಯಾತ್ಸಂದ ಎನ್.ರಾಜಣ್ಣ (ಮುಂದು):-

ಅದೇ ರೀತಿಯಾಗಿ ಮಾನ್ಯ ಸದಸ್ಯರು ಸರ್ವಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗಬೇಕೆಂದು ಹೇಳಿದ್ದಾರೆ. ಈಗಾಗಲೇ, ಮಾನ್ಯ ಮುಖ್ಯಮಂತ್ರಿಗಳೆ ಸ್ವಯಂ ಆಗಿ ಸನ್ಮಾನ್ಯ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಮನವಿಯನ್ನು ಒಪ್ಪಿಸಿರುವ ಹಿನ್ನಲೆಯಲ್ಲಿ, ಆದರ ಅಗತ್ಯತೆಯು ಈಗ ಕಾಣುತ್ತಿಲ್ಲವೆಂದು ನಾನು ಭಾವಿಸಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **578**
ಸದಸ್ಯರ ಹೆಸರು : ಶ್ರೀ. ಭೀಮರಾವ್ ಬಸವರಾಜು ಪಾಟೀಲ್
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : **11/03/2025**
ಉತ್ತರಿಸುವ ಸಚಿವರು : **ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು**

	ಪ್ರಶ್ನೆ	ಉತ್ತರ
ಅ	ಪುರಸಭೆ ಮತ್ತು ನಗರಸಭೆ ಸದಸ್ಯರ ಗೌರವಧನ ಹೆಚ್ಚಳಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು;	ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರು ಹಾಗೂ ಮಹಾನಗರ ಪಾಲಿಕೆಗಳ ಮೇಯರ್-ಉಪಮೇಯರ್, ಸದಸ್ಯರ ಗೌರವಧನವನ್ನು ಹೆಚ್ಚಳ ಮಾಡುವುದಕ್ಕಾಗಿ ಪರಿಶೀಲಿಸಿ, ಪ್ರಸ್ತುತ ನೀಡುತ್ತಿರುವ ಗೌರವಧನವನ್ನು ಪರಿಷ್ಕರಿಸಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆಯು ದಿನಾಂಕ:02/05/2023 ಮತ್ತು ದಿನಾಂಕ:23/01/2024 ರಂದು ಅಭಿಪ್ರಾಯ ನೀಡಿದ್ದು, ಗೌರವಧನವನ್ನು ಪರಿಷ್ಕರಿಸುವ ಪ್ರಸ್ತಾವನೆಯನ್ನು ಒಪ್ಪಿರುವುದಿಲ್ಲ. ಪ್ರಸ್ತುತ ಗೌರವಧನ ಪರಿಷ್ಕರಣೆ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.
ಆ	ಕೈಗೊಂಡಿದ್ದರೆ ಎಷ್ಟು ಗೌರವಧನ ಹೆಚ್ಚಳ ಮಾಡಲಾಗಿದೆ; ಇಲ್ಲದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಹೆಚ್ಚಳ ಮಾಡಲಾಗುವುದು (ಮಾಹಿತಿ ನೀಡುವುದು)?	ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರು ಹಾಗೂ ಮಹಾನಗರ ಪಾಲಿಕೆಗಳ ಮೇಯರ್-ಉಪಮೇಯರ್, ಸದಸ್ಯರಿಗೆ ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ:ನಅಇ 156 ಎಂಎಲ್ಆರ್ 2015; ದಿನಾಂಕ:15/09/2016 ರಲ್ಲಿರುವಂತೆ ಆಯಾ ಸ್ಥಳೀಯ ಸಂಸ್ಥೆಯ ಸಂಪನ್ಮೂಲಗಳಿಂದ ಮಾಸಿಕ ಗೌರವಧನವನ್ನು ಪಾವತಿಸಲಾಗುತ್ತಿದೆ.

ಶ್ರೀ ಭೀಮರಾವ್ ಬಸವರಾಜು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಕಳೆದ ಎರಡು ವರ್ಷದ ಹಿಂದೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು, ಆದರೆ, ಅವರು ಒಪ್ಪಲಿಲ್ಲವೆಂದು ಉತ್ತರದಲ್ಲಿ ನೀಡಿದ್ದಾರೆ. ಮಾನ್ಯ ಸಭಾಪತಿಯವರೆ, ಆದರೆ, ಸಮಾರು 10-15 ವರ್ಷಗಳಿಂದ ಏನು ರಾಜ್ಯದ ಪುರಸಭೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಗೌರವಧನವನ್ನು ಕೊಡುತ್ತಿದ್ದಾರೆ. ಅದರಂತೆ, ಅಧ್ಯಕ್ಷರಿಗೆ 4,800/- ರೂಪಾಯಿಗಳು. ಉಪಾಧ್ಯಕ್ಷರಿಗೆ 2,400/- ರೂಪಾಯಿಗಳು ಹಾಗೂ ಸದಸ್ಯರುಗಳಿಗೆ 1,200/- ರೂಪಾಯಿಗಳನ್ನು ಗೌರವಧನವನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತಿದ್ದಾರೆ. ಆದರೆ, ಸುಮಾರು 15 ವರ್ಷಗಳಿಂದ ಯಾವುದೇ ಸರ್ಕಾರವು ಇವರುಗಳ ಗೌರವಧನವನ್ನು ಜಾಸ್ತಿ ಮಾಡಲಿಲ್ಲ. ಈಗಾಗಲೇ ಹಿಂದೆ ಇದ್ದಂತಹ ಸರ್ಕಾರವಾಗಲಿ ಅಥವಾ ಈಗಿರುವಂತಹ ಸರ್ಕಾರವಾಗಲಿ ಪಂಚಾಯತಿಯ ಮೆಂಬರ್‌ಗಳ ಗೌರವಧನವನ್ನು ಜಾಸ್ತಿ ಮಾಡಿದ್ದೀರಿ. , ಅದಕ್ಕೆ ನಾನು ಧನ್ಯವಾದಗಳನ್ನು ಹೇಳಬಯಸುತ್ತೇನೆ. ಏಕೆಂದರೆ, ಮುಂಚೆ ಪಂಚಾಯತಿಯ ಮೆಂಬರ್‌ಗಳ ಅಧ್ಯಕ್ಷರ ಗೌರವಧನವು 3,000/- ರೂಪಾಯಿ ಇತ್ತು. ಅದನ್ನು 6,000/- ರೂಪಾಯಿ ಮಾಡಲಾಗಿದೆ. ಉಪಾಧ್ಯಕ್ಷರಿಗೆ 2,000/- ರೂಪಾಯಿಗಳು ಇತ್ತು. ಅದನ್ನು 4,000/- ರೂಪಾಯಿ ಮಾಡಲಾಗಿದೆ.

ಸಭಾಪತಿಯವರು:- ಮಾನ್ಯ ಸದಸ್ಯರೆ, ಏನಾಗಬೇಕೆಂಬುದನ್ನು ಹೇಳಿ.

ಶ್ರೀ ಭೀಮರಾವ್ ಬಸವರಾಜು ಪಾಟೀಲ್:- ಅವರುಗಳ ಗೌರವಧನವನ್ನು ಜಾಸ್ತಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳತ್ತೇನೆ.

ಶ್ರೀ ರಹೀಂ ಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು):- ಮಾನ್ಯ ಸದಸ್ಯರು, ಏನು ಪ್ರಶ್ನೆಯನ್ನು ಕೇಳಿದ್ದಾರೆ, ನಾನು ಸಹ ಅದರ ಪರವಾಗಿ ಇದ್ದೇನೆ. ಸುಮಾರು ವರ್ಷಗಳಿಂದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ಗೌರವಧನ ತುಂಬಾ ಕಡಿಮೆ ಇದೆ. ಈಗಾಗಲೇ, ನಾನು ಒಂದು ಬಾರಿ recommend ಮಾಡಿ ದುಪ್ಪಟ್ಟು ಮಾಡಬೇಕೆಂದು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಿದ್ದೇನೆ. ಆದರೆ, ಆರ್ಥಿಕ ಇಲಾಖೆಯಿಂದ ಇನ್ನೂ clearance ಬಂದಿಲ್ಲ. ಅದರ clearance ಆಗಿ ಬಂದ ಮೇಲೆ ನಾನು immediate ಆಗಿ ಮಾಡುತ್ತೇನೆ.

ಸಭಾಪತಿಯವರು:- ಮಾನ್ಯ ಶರವಣರವರೇ, ತಮ್ಮ ತಡೆಹಿಡಯಲಾದ ಪ್ರಶ್ನೆಗೆ ಉತ್ತರವನ್ನು ನೀಡಲು ಮಾನ್ಯ ಸಚಿವರು ಬಂದಿರುವುದಿಲ್ಲ. ಅವರಿಗೆ ಆರಾಮಿಲ್ಲದ ಕಾರಣ ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆಂದು ಪತ್ರವನ್ನು ಕಳುಹಿಸಿ ಕೊಟ್ಟಿದ್ದಾರೆ. ಇದನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎ.ಶರವಣ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ತಾವೇ ಪೀಠದಿಂದ ಕಳೆದ ಮಂಗಳವಾರ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದ್ದೀರಿ.

ಸಭಾಪತಿಯವರು:- ಮಾನ್ಯ ಸಚಿವರು ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆಂದರೆ, ಅವರನ್ನು ಹೇಗೆ ಕರೆದುಕೊಂಡು ಬರಲಿ. ಅವರು ಮುಂದಿನ ವಾರ ಬಂದಾಗ ಇದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎ.ಶರವಣ (ವಿಧಾನಸಭಾ ಕ್ಷೇತ್ರ):- ಮಾನ್ಯ ಸದಸ್ಯರಿಲ್ಲವೆಂದರೆ ಏನು, ಸರ್ಕಾರ ಅವರ ಪರವಾಗಿ ಉತ್ತರವನ್ನು ಕೊಡಲಿ. ನಮಗೆ ಉತ್ತರವು ಸಿಗಬೇಕೆಲ್ಲವೇ. ನಾವು ಉತ್ತರವನ್ನು ಕೇಳುವುದು ಏತಕ್ಕೆ?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:- ಮಾನ್ಯ ಸಚಿವರು ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆ, ಅವರನ್ನು ನಾನೇ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಅವರು ಬಂದಾಗ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಬಿ.ಎ.ಶರವಣ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಈ ರೀತಿಯಾದರೆ ಹೇಗೆ?

ಆ) ತಡೆಹಿಡಿಯಲಾದ ಪ್ರಶ್ನೆಗಳು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	**6 (02)**
ಸದಸ್ಯರ ಹೆಸರು	ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	11.03.2025
ಉತ್ತರಿಸುವವರು	ಪೌರಾಡಳಿತ ಮತ್ತು ಹಜ್ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿರುವ ಪೌರಕಾರ್ಮಿಕರ ಸಂಖ್ಯೆ ಎಷ್ಟು: ಅದರಲ್ಲಿ ಖಾಯಂ ಪೌರಕಾರ್ಮಿಕರ ಸಂಖ್ಯೆ ಎಷ್ಟು: ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು)	ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಖಾಯಂ ಪೌರಕಾರ್ಮಿಕರ ಸಂಖ್ಯೆ: 9155 ಮತ್ತು ನೇರಪಾವತಿ ಪೌರಕಾರ್ಮಿಕರ ಸಂಖ್ಯೆ: 2127 ಸೇರಿ ಒಟ್ಟಾರೆ ಸಂಖ್ಯೆ: 11,282 ಪೌರಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. (ಜಿಲ್ಲಾವಾರು ಮಾಹಿತಿ ಅನುಬಂಧ-1ರಲ್ಲಿ ಸಲ್ಲಿಸಿದೆ). ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016 ದಿನಾಂಕ: 07.08.2017 ರಲ್ಲಿ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆ ನೀಡುವುದನ್ನು ಸ್ಥಗಿತಗೊಳಿಸಲಾಗಿರುವುದರಿಂದ ಹೊರಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
(ಆ)	ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಲ್ಲಿ ಪ್ರತಿಯೊಬ್ಬ ಕಾರ್ಮಿಕ ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರತಿಯೊಬ್ಬ ಕಾರ್ಮಿಕ ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸಿರುತ್ತಾರೆ: ಸದರಿ ಕಾರ್ಮಿಕರ ಸರಾಸರಿ ಸೇವಾವಧಿ ಎಷ್ಟು: (ವಿವರ ನೀಡುವುದು)	ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರು ಇರುವುದಿಲ್ಲ. ಸರ್ಕಾರದ ಆದೇಶ ಸಂ: ನಅಇ 126 ಟಿಎಂಎಸ್ 2016, ದಿನಾಂಕ: 07.08.2017 ರಲ್ಲಿ ರಾಜ್ಯದಲ್ಲಿನ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆ ಮೂಲಕ ನಿರ್ವಹಿಸುವುದನ್ನು ಸ್ಥಗಿತಗೊಳಿಸಲಾಗಿರುತ್ತದೆ. ಸದರಿ ಆದೇಶದನ್ವಯ ಆ ಸಂದರ್ಭದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದ ಪೌರಕಾರ್ಮಿಕರನ್ನು ನೇರಪಾವತಿ ತರಲು ನಿರ್ದೇಶನ ನೀಡಲಾಗಿರುತ್ತದೆ. ಅದರನ್ವಯ ನೇರಪಾವತಿಗೆ ಅಳವಡಿಸಿಕೊಂಡು, ನಂತರ 2017, 2022, 2024ರ ಆದೇಶಗಳ ರೀತ್ಯಾ ಅರ್ಹ ಪೌರಕಾರ್ಮಿಕರನ್ನು ನೇರ ನೇಮಕಾತಿಗೆ ಒಳಪಡಿಸಲಾಗಿರುತ್ತದೆ ಹಾಗೂ ಉಳಿದವರನ್ನು ನೇಮಕಾತಿಗೊಳಿಸುವ ಪ್ರಕ್ರಿಯೇ ಚಾಲ್ತಿಯಲ್ಲಿರುತ್ತದೆ.
(ಇ)	ಕನಿಷ್ಠ 3 ವರ್ಷಗಳಿಗಿಂತ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸಿದ ನೌಕರರನ್ನು ಖಾಯಂಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು: (ವಿವರ ನೀಡುವುದು)	1. ಸರ್ಕಾರದ ಆದೇಶ ಸಂಖ್ಯೆ ನಅಇ 126 ಟಿಎಂಎಸ್ 2016 ದಿನಾಂಕ: 04.12.2017ರ ರೀತ್ಯಾ 2603 ಪೌರಕಾರ್ಮಿಕರುಗಳನ್ನು ಖಾಯಂ ಮಾಡಿಕೊಳ್ಳಲಾಗಿರುತ್ತದೆ. (ಅನುಬಂಧ-2) 2. ಸರ್ಕಾರದ ಆದೇಶ ಸಂಖ್ಯೆ ನಅಇ 176 ಜಿಇಎಲ್ 2022(ಭಾ-2)(ಇ) ದಿನಾಂಕ: 23.11.2022ರ ರೀತ್ಯಾ 4126 ಪೌರಕಾರ್ಮಿಕರುಗಳನ್ನು ಖಾಯಂ ಮಾಡಿಕೊಳ್ಳಲಾಗಿರುತ್ತದೆ. (ಅನುಬಂಧ-2) 3. ಸರ್ಕಾರದ ಆದೇಶ ಸಂಖ್ಯೆ: ನಅಇ 57 TMS 2024 (ಇ), ದಿನಾಂಕ: 27.09.2024 ರಲ್ಲಿ 1100 ಹುದ್ದೆಗಳನ್ನು ಹಂಚಿಕೆ ಮಾಡಿ ಆದೇಶಿಸಲಾಗಿರುವಂತೆ ಸದರಿ ಹುದ್ದೆಗಳನ್ನು ಸ್ಥಳೀಯ ಸಂಸ್ಥೆವಾರು ಹಂಚಿಕೆ ಮಾಡಿ ಆಯಾ ಜಿಲ್ಲಾಧಿಕಾರಿಗಳ ಹಂತದಲ್ಲಿ ಅಗತ್ಯ ಕ್ರಮವಹಿಸಲು ದಿನಾಂಕ:23.10.2024 ರಲ್ಲಿ ನಿರ್ದೇಶನಾಲಯದಿಂದ ಆದೇಶಿಸಲಾಗಿರುತ್ತದೆ. ಅದರಂತೆ ಕೋಲಾರ, ಚಿತ್ರದುರ್ಗ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ದಾವಣಗೆರೆ, ಉತ್ತರಕನ್ನಡ ಮತ್ತು ಯಾದಗಿರಿ (05) ಜಿಲ್ಲೆಗಳಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದು, ಅದರಲ್ಲಿ ಕೋಲಾರ ಜಿಲ್ಲೆಯ ಕೋಲಾರ ನಗರಸಭೆಯಲ್ಲಿ 66 ಪೌರಕಾರ್ಮಿಕರನ್ನು ಖಾಯಂ ಮಾಡಿಕೊಳ್ಳಲಾಗಿರುತ್ತದೆ. ಎತನ್ಮಧ್ಯೆ ಸರ್ಕಾರದ ಸುತ್ತೋಲೆ ಸಂಖ್ಯೆ:ಸೇಆಸುಇ 388 ಸೆನೆನಿ 2024, ದಿನಾಂಕ:25.11.2024ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಆದೇಶಿಸಲಾಗಿರುವುದರಿಂದ ಜಿಲ್ಲಾಧಿಕಾರಿಗಳ ಹಂತದಲ್ಲಿ ಅಧಿಸೂಚನೆ ಹೊರಡಿಸಿರುವುದಿಲ್ಲ.
(ಈ)	ಗುತ್ತಿಗೆ ಹಾಗೂ ಹೊರಗುತ್ತಿಗೆಯಲ್ಲಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರಿಗೆ ನೀಡುತ್ತಿರುವ ವೇತನ ಎಷ್ಟು? (ವಿವರ ನೀಡುವುದು)	ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016 ದಿನಾಂಕ: 07.08.2017 ರಲ್ಲಿ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆ ನೀಡುವುದನ್ನು ಸ್ಥಗಿತಗೊಳಿಸಲಾಗಿರುತ್ತದೆ. ನೇರಪಾವತಿ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆಯು 2024-25 ನೇ ಸಾಲಿಗೆ ನಿಗದಿಪಡಿಸಿರುವ ಕನಿಷ್ಟ ವೇತನದ ಪ್ರಕಾರ ನಗರಸಭೆ ಗ್ರೇಡ್-1 ರೂ.**22,205**/-, ನಗರಸಭೆ ಗ್ರೇಡ್-2 ರೂ. **21,706**/- ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ರೂ. **21,208**/- ವೇತನ ನೀಡಲಾಗುತ್ತಿದ್ದು ESI & PF ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-01

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಮತ್ತು ನೇರ ಪಾವತಿ ಪೌರಕಾರ್ಮಿಕರ ಮಾಹಿತಿ

ಕ್ರಸಂ	ಜಿಲ್ಲೆಯ ಹೆಸರು	ಖಾಯಂ ಪೌರಕಾರ್ಮಿಕರ ಸಂಖ್ಯೆ	ನೇರಪಾವತಿ ಪೌರಕಾರ್ಮಿಕರ ಸಂಖ್ಯೆ
1	ಬೆಳಗಾವಿ	726	108
2	ಬಾಗಲಕೋಟೆ	626	22
3	ಬೀದರ್	378	29
4	ಬೆಂಗಳೂರು (ನಗರ)	90	131
5	ಚಾಮರಾಜನಗರ	160	72
6	ಚಿಕ್ಕಮಗಳೂರು	198	123
7	ಚಿತ್ರದುರ್ಗ	251	71
8	ದಾವಣಗೆರೆ	132	56
9	ಧಾರವಾಡ	102	1
10	ಹಾಸನ	366	10
11	ಹಾವೇರಿ	346	102
12	ಕಲಬುರಗಿ	347	1
13	ಕೊಡಗು	63	15
14	ಕೋಲಾರ	326	149
15	ಕೊಪ್ಪಳ	234	123
16	ಮಂಡ್ಯ	296	99
17	ಮೈಸೂರು	445	46
18	ರಾಮನಗರ	207	99
19	ಶಿವಮೊಗ್ಗ	237	86
20	ಉಡುಪಿ	263	18
21	ಯಾದಗಿರಿ	231	57
22	ಬಳ್ಳಾರಿ	184	0
23	ಉತ್ತರ ಕನ್ನಡ	294	22
24	ವಿಜಯಪುರ	356	10
25	ಚಿಕ್ಕಬಳ್ಳಾಪುರ	213	83
26	ತುಮಕೂರು	290	56
27	ದಕ್ಷಿಣ ಕನ್ನಡ	238	87
28	ವಿಜಯನಗರ	449	57
29	ರಾಯಚೂರು	580	145
30	ಗದಗ	330	101
31	ಬೆಂಗಳೂರು (ಗ್ರಾ)	197	148
	GRAND TOTAL	9155	2127

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-12

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿಶೇಷ ನೇಮಕಾತಿಯಡಿ ಭರ್ತಿಮಾಡಲಾಗಿರುವ ಪೌರಕಾರ್ಮಿಕರ ಮಾಹಿತಿ

ಕ್ರಸಂ	ಜಿಲ್ಲೆಯ ಹೆಸರು	2017	2022	2024
1	ಬೆಳಗಾವಿ	344	238	
2	ಬಾಗಲಕೋಟೆ	117	375	
3	ಬೀದರ್	107	258	
4	ಬೆಂಗಳೂರು (ನಗರ)	8	175	
5	ಚಾಮರಾಜನಗರ	31	34	
6	ಚಿಕ್ಕಮಗಳೂರು	44	58	
7	ಚಿತ್ರದುರ್ಗ	74	78	ನೇಮಕಾತಿ ಪ್ರಕ್ರಿಯೇ ಚಾಲ್ತಿಯಲ್ಲಿರುತ್ತದೆ.
8	ದಾವಣಗೆರೆ	50	46	ನೇಮಕಾತಿ ಪ್ರಕ್ರಿಯೇ ಚಾಲ್ತಿಯಲ್ಲಿರುತ್ತದೆ.
9	ಧಾರವಾಡ	69	19	
10	ಹಾಸನ	109	172	
11	ಹಾವೇರಿ	82	157	
12	ಕಲಬುರಗಿ	212	19	
13	ಕೊಡಗು	18	17	
14	ಕೋಲಾರ	108	119	66 ನೇಮಕಾತಿ ಪ್ರಕ್ರಿಯೇ ಚಾಲ್ತಿಯಲ್ಲಿರುತ್ತದೆ.
15	ಕೊಪ್ಪಳ	89	161	
16	ಮಂಡ್ಯ	85	103	
17	ಮೈಸೂರು	33	282	
18	ರಾಮನಗರ	44	107	
19	ಶಿವಮೊಗ್ಗ	47	85	
20	ಉಡುಪಿ	61	154	
21	ಯಾದಗಿರಿ	68	59	ನೇಮಕಾತಿ ಪ್ರಕ್ರಿಯೇ ಚಾಲ್ತಿಯಲ್ಲಿರುತ್ತದೆ.
22	ಬಳ್ಳಾರಿ	177	58	
23	ಉತ್ತರ ಕನ್ನಡ	50	174	ನೇಮಕಾತಿ ಪ್ರಕ್ರಿಯೇ ಚಾಲ್ತಿಯಲ್ಲಿರುತ್ತದೆ.
24	ವಿಜಯಪುರ	177	169	
25	ಚಿಕ್ಕಬಳ್ಳಾಪುರ	56	70	
26	ತುಮಕೂರು	83	143	
27	ದಕ್ಷಿಣ ಕನ್ನಡ	9	207	
28	ವಿಜಯನಗರ	0	195	
29	ರಾಯಚೂರು	152	181	
30	ಗದಗ	26	141	
31	ಬೆಂಗಳೂರು (ಗ್ರಾ)	73	72	
	GRAND TOTAL	2603	4126	66

ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಶ್ರೀ ಎನ್. ರವಿಕುಮಾರ್‌ರವರ ಪರವಾಗಿ):- ಮಾನ್ಯ ಸಭಾಪತಿಯವರೆ, ಪೌರಕಾರ್ಮಿಕರಿಗೆ ಸಂಬಂಧಪಟ್ಟಂತೆ ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿ ಬಹಳ ಮುಖ್ಯವಾಗಿ ಸರ್ಕಾರವು ಪೌರಕಾರ್ಮಿಕರನ್ನು ಯಾವ ತರಹದ ನೌಕರರೆಂದು ಗಮನದಲ್ಲಿ ಇಟ್ಟಿಕೊಂಡಿದೆ ಎಂಬುದು ನನ್ನ ಪ್ರಶ್ನೆಯಾಗಿದೆ. ಏಕೆಂದರೆ, ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಬರುವಂತಹ ಯಾವುದೇ ಸರ್ಕಾರಿ ಸಿಬ್ಬಂದಿ ತನ್ನ ಕೆಲಸವನ್ನು ಬೆಳಿಗ್ಗಿನ ಜಾವ ೩.೦೦

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥವಾ 4.00 ಗಂಟೆಗೆ ಪ್ರಾರಂಭ ಮಾಡುವುದಿಲ್ಲ. ಇವತ್ತು ಇಡೀ ರಾಜ್ಯದಲ್ಲಿ, ಶಿಕ್ಷಣ ಇಲಾಖೆಯಲ್ಲಿ ಬರುವಂತಹ ಶಿಕ್ಷಕರ ತರುವಾಯ ಬರುವಂತಹ ತೀ ಹೆಚ್ಚಿನ ಸಂಖ್ಯೆಯಲ್ಲಿ ಇರುವಂತಹವರು ಯಾರಾದರೂ ಇದ್ದಾರೆ ಎಂದರೆ, ಅದು ಪೌರಕಾರ್ಮಿಕರು. ಈ ಪೌರಕಾರ್ಮಿಕರ ಬದುಕು ಯಾವ ರೀತಿಯಾಗಿದೆ ಅಂದರೆ, ಅಂತ್ಯತ ಪ್ರಮುಖವಾಗಿರುವಂತಹ ಕೆಲಸವನ್ನು ನಿರ್ವಹಣೆ ಮಾಡುವಂತಹ ಒಂದು ವೃಂದ, ಇವತ್ತು ಅಂತ್ಯತ neglect ಆಗಿರುವಂತಹ ಅಥವಾ ಸರ್ಕಾರದ ಕಣ್ಣಿಗೆ ಕಾಣದಂತಹ ಪರಿಸ್ಥಿತಿಗೆ ತಲುಪಿದ್ದಾರೆ. ಇವತ್ತೇನಾದರೂ ಪೌರಕಾರ್ಮಿಕರು ಎರಡು ದಿವಸ ಕೆಲಸ ಮಾಡುವುದನ್ನು ನಿಲ್ಲಿಸಿ ಬಿಟ್ಟರೆ ಇಡೀ ರಾಜ್ಯದ್ಯಂತ ಒಂದು ದೊಡ್ಡ ಆಹಾಕಾರ ಏಳುತ್ತದೆ.

ಸಭಾಪತಿಯವರು:- ಮಾನ್ಯ ಸದಸ್ಯರೆ, ಏನಾಗಬೇಕೆಂದನ್ನು ಹೇಳಿ.

ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸಚಿವರಲ್ಲಿ ಹೇಳುವಂತಹದ್ದು ಏನೆಂದರೆ, ತಾವು ಈ ಹೊರಗುತ್ತಿಗೆ ಆಧಾರದ ಮೇಲೆ, ಎರಡು ರೀತಿ ಅಂದರೆ, ಒಂದು ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳ ಮೂಲಕ ಅವರೆ ಹೊರಗುತ್ತಿಗೆ ಆಧಾರದ ಮೇಲೆ ಪೌರ ಕಾರ್ಮಿಕರನ್ನು ತೆಗೆದುಕೊಂಡಿರುವುದು ಹಾಗೂ ಮತ್ತೊಂದು third-party contract ಅನ್ನು ಕೊಟ್ಟಿರುವಂತಹದ್ದು. ಈ ಸಮಸ್ಯೆಯನ್ನು ಯಾವಾಗ ಬಗೆಹರಿಸುತ್ತೀರಿ? ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಏಕೆಂದರೆ, ಕೆಳದ ಬಾರಿ ಸುಮಾರು 13,000 ಸಾವಿರಕ್ಕೂ ಹೆಚ್ಚು ಖಾಯಂ ನೌಕರಾತಿಯನ್ನು ಕೊಟ್ಟಿದ್ದೀರಿ.... ಇದನ್ನು ಯಾವಾಗ ಮಾಡುತ್ತೀರಿ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವವರಿಗೆ ಸರಿಯಾದ ಸಮಯಕ್ಕೆ ಸಂಬಳ ಹೋಗುತ್ತಿಲ್ಲ. ಅವರಿಗೆ ನೀವು ಕೊಡುವಂತಹ ಸಂಬಳದಲ್ಲಿ ಸಾಕಷ್ಟು ಹಣವು ಕಡಿತವಾಗುತ್ತಿದೆ. ಈ ಎಲ್ಲಾ ಸಮಸ್ಯೆಯು ಮಾನ್ಯ ಸಚಿವರ ಗಮನದಲ್ಲಿದೆಯೇ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ರಹೀಂ ಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು):- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಇದನ್ನು ಗಮನದಲ್ಲಿ ಇಟ್ಟುಕೊಂಡು 3 ತಿಂಗಳಲ್ಲಿ clear ಮಾಡಿಸುತ್ತೇನೆ.

ಸಭಾಪತಿಯವರು:- ಮಾನ್ಯ ಸಚಿವರು, ಅದು ಆರ್ಥಿಕ ಇಲಾಖೆಗೆ ಹೋಗಿದೆ, ಇದನ್ನು 3 ತಿಂಗಳಲ್ಲಿ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಶ್ರೀ ಎನ್. ರವಿಕುಮಾರವರ ಪರವಾಗಿ):- ಮಾನ್ಯ ಸಭಾಪತಿಯವರೆ, ಇದು ಇಡೀ ರಾಜ್ಯ ಪ್ರತಿ ನಗರದಲ್ಲಿ, ಪಟ್ಟಣದಲ್ಲಿ ಇರುವಂತಹ ಸಮಸ್ಯೆಯಾಗಿದೆ. ಕೆಲಸ ಮಾಡುತ್ತಿರುವವರಿಗೆ ಸಂಬಳವನ್ನೇ ಕೊಡುತ್ತಿಲ್ಲ.

ಸಭಾಪತಿಯವರು:- ಮಾನ್ಯ ಸಚಿವರೆ, ಮೂರು ತಿಂಗಳಲ್ಲ ಒಳಗೆ ಮಾಡಿ ಕೊಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಶ್ರೀ ಬಿ.ಎಸ್. ಸುರೇಶ್ (ನಗರಾಭಿವೃದ್ಧಿ ಸಚಿವರು):- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ಮಾಹಿತಿ ಕೊರತೆ ಇದೆ. ಎಲ್ಲರಿಗೂ ಸಂಬಳವನ್ನು ಸರಿಯಾಗಿ ಕೊಡುತ್ತಿದ್ದೇವೆ. ಸರ್ಕಾರದ ಪ್ರಥಮ ಆದ್ಯತೆ ರಾಜ್ಯ ಎಲ್ಲಾ ಪೌರಕಾರ್ಮಿಕರಿಗೆ....(ಗೊಂದಲ) ಸುಮಾರು ೩೦,೦೦೦ ಪೌರಕಾರ್ಮಿಕರನ್ನು ಸರ್ಕಾರಿ ನೌಕರರೆಂದು ಪರಿಗಣನೆ ಮಾಡಿರುವುದು ಮಾನ್ಯ ಸಿದ್ದರಾಮಯ್ಯನವರ ಸರ್ಕಾರ, ಕಾಂಗ್ರೆಸ್ ಸರ್ಕಾರ. ಈ ಸರ್ಕಾರದ ಪ್ರಥಮ ಆದ್ಯತೆ ರಾಜ್ಯದ ಎಲ್ಲಾ ಪೌರಕಾರ್ಮಿಕರನ್ನು ಹಾಗೂ ಪರಿಶಿಷ್ಟ ಜಾತಿಯವರನ್ನು ನಮ್ಮ ಬಂಧುಗಳೆಂದು ತಿಳಿದುಕೊಂಡು ಅವರನ್ನು ಖಾಯಂ ಮಾಡಿರುವುದು ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ, ಕಾಂಗ್ರೆಸ್ ಸರ್ಕಾರ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೆ, ...

ಶ್ರೀ ಬಿ.ಎಸ್. ಸುರೇಶ್:- ಮಾನ್ಯ ಸಭಾಪತಿಯವರೆ, ಏನು ಆಗಿದೆ, ಆಗಿರುವಂತಹದ್ದನ್ನೇ ಹೇಳುತ್ತಿದ್ದೇನೆ. ಪೌರಕಾರ್ಮಿಕರಾಗಿ ಕೆಲಸ ಮಾಡುವವರು ಬಹಳ ಕೆಳಸ್ಥರದಿಂದ ಬಂದಿರುವಂತಹವರು, ನಮ್ಮ ಆದ್ಯತೆ ಇಡೀ ರಾಜ್ಯದಲ್ಲಿ ಇರುವಂತಹ ಎಲ್ಲಾ ಪೌರಕಾರ್ಮಿಕರನ್ನು ಒಂದು, ಅವರು ಸರ್ಕಾರಿ ನೌಕರರಾಗಬೇಕು ಹಾಗೂ ಅವರಿಗೆ ಮೊದಲ ಆದ್ಯತೆಯನ್ನು ನೀಡಬೇಕು. ಅವರ ಖಾತೆಗಳಿಗೆ ನೇರವಾಗಿ ಹಣ ಜಮೆಯಾಗಬೇಕು ಹಾಗೂ ಅವರನ್ನು ಹಂತ-ಹಂತವಾಗಿ ಎಲ್ಲರನ್ನೂ ಸರ್ಕಾರಿ ನೌಕರರೆಂದು ಪರಿಗಣನೆ ಮಾಡಬೇಕೆಂದು ಸರ್ಕಾರದ ಉದ್ದೇಶ. ಇದನ್ನು ಹಂತ-ಹಂತವಾಗಿ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಪಿ.ಎಚ್.ಪೂಜಾರ್:- ಮಾನ್ಯ ಸಭಾಪತಿಯವರೆ, ...

ಸಭಾಪತಿಯವರು:- ಮಾನ್ಯ ಪೂಜಾರ್ ರವರೆ, ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೆ, ಒಂದು ನಿಮಿಷ ...

(ಗೊಂದಲ)

ಶ್ರೀ ಬಿ.ಎಸ್. ಸುರೇಶ್:- ಮಾನ್ಯ ಸಭಾಪತಿಯವರೆ, ಪೌರಕಾರ್ಮಿಕರ ಬಗ್ಗೆ ಇವರಿಗಿಂತ ಜಾಸ್ತಿ ನಮಗೆ ತಾಳಜಿ ಇದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಶ್ರೀ ಎನ್. ರವಿಕುಮಾರವರ ಪರವಾಗಿ):- ಆದರೆ, ನೀವೇನು ಮಾಡುತ್ತಿಲ್ಲ.

ಶ್ರೀ ಬಿ.ಎಸ್. ಸುರೇಶ್:- ಮಾನ್ಯ ಸಭಾಪತಿಯವರೆ, ನಾವೇ ಜಾಸ್ತಿ ಖಾಯಂ ಮಾಡಿರುವುದು. Go to the records.

ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೆ, ಈಗ ಮಾನ್ಯ ಸಚಿವರು ಮೂರು ತಿಂಗಳಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ.

ಸಭಾಪತಿಯವರು:- ಅದನ್ನು clarify ಮಾಡಿದ್ದಾರೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೆ, ಹಾಗಾದರೆ, ಅವರಿಗೆ ಸಂಬಳವನ್ನು ಕೊಟ್ಟಿಲ್ಲವೆ?

ಶ್ರೀ ಬಿ.ಎಸ್. ಸುರೇಶ್:- ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈ ಬಗ್ಗೆ confusion ಇದೆ. ಅವರು ಸಂಬಳದ ಬಗ್ಗೆ ಹೇಳುತ್ತಿಲ್ಲ.

ಶ್ರೀ ಚೆಲವಾದಿ ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೆ, ನಮ್ಮ ಸರ್ಕಾರವು ಸುಮಾರು 13,000 ಪೌರಕಾರ್ಮಿಕರನ್ನು ಖಾಯಂಗೊಳಿಸಿರುತ್ತದೆ. ಆದರೆ, ಮಾನ್ಯ ಸಚಿವರು ನಾವು ಮಾಡಿದ್ದೇವೆಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಸುರೇಶ್:- ಮಾನ್ಯ ಸಭಾಪತಿಯವರೆ, ಸುಮಾರು ೩೦೦೦೦ ಪೌರಕಾರ್ಮಿಕರನ್ನು ಖಾಯಂಗೊಳಿಸಿರುವುದು ನಮ್ಮ ಕಾಂಗ್ರೆಸ್ ಸರ್ಕಾರ. I will give you the records.

(ಮುಂದು)

(196) 11.03.2025 12.40 ಎಸ್‌ವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ೩ ತಿಂಗಳಲ್ಲಿ ಕೊಡುತ್ತೇವೆ ಎಂದು ಮಾನ್ಯ ಸಚಿವರು ಹೇಳಿದರು.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಿ.ಎಸ್.ಸುರೇಶ:- ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಗೊಂದಲವಿದೆ. ಅವರು ಸಂಬಳದ ಬಗ್ಗೆ ಹೇಳುತ್ತಿಲ್ಲ. ಕರೆಕ್ಟ್ ಆಗಿ ಹೇಳಲಿ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ 13,000 ಪೌರ ಕಾರ್ಮಿಕರನ್ನು ಖಾಯಂಗೊಳಿಸಿದ್ದು ನಾವು. ಇನ್ನೂ 35,000 ಪೌರಕಾರ್ಮಿಕರನ್ನು ಖಾಯಂ ಮಾಡಬೇಕಾಗಿದೆ. ಆದರೆ ಇನ್ನೂ ಒಂದನ್ನೂ ಮಾಡಿಲ್ಲ.

(ಗೊಂದಲ)

ಶ್ರೀ ಬಿ.ಎಸ್.ಸುರೇಶ್:- 300 ಜನರ ಖಾಯಮಾತಿಯನ್ನು ನಾನೇ ಮಾಡಿದ್ದೇನೆ. ಮಾನ್ಯ ಅರುಣ್ ಅವರೆ, ಹೇಳಿ. ಶಿವಮೊಗ್ಗ ಮಹಾನಗರ ಪಾಲಿಕೆಯದ್ದು ಯಾರು ಮಾಡಿದ್ದು? ಪೌರ ಕಾರ್ಮಿಕರು ಸರ್ಕಾರಿ ನೌಕರರು ಎಂದು ನಾವು ಮಾಡಿದ್ದು.

(ಗೊಂದಲ)

ಶ್ರೀ ಈಶ್ವರ ಬಿ. ಖಂಡ್ರೆ:- ಹಿಂದೆ 2017-18ರಲ್ಲಿ ನಮ್ಮ ಸರ್ಕಾರ ಇದ್ದಾಗ ಪೌರಕಾರ್ಮಿಕರನ್ನು ಖಾಯಂ ಮಾಡಬೇಕೆಂದು ತೀರ್ಮಾನ ಮಾಡಿ process start ಮಾಡಿಸಿದ್ದು ನಾವು.

(ಗೊಂದಲ)

ಶ್ರೀ ಈಶ್ವರ ಬಿ. ಖಂಡ್ರೆ:- ಪೌರ ಕಾರ್ಮಿಕರಿಗೆ ಅವರ ಮನೆಗಾಗಿ ರೂ. 7 ಲಕ್ಷಗಳನ್ನು ಕೊಟ್ಟಿದ್ದು ನಾವು. ಅವರಿಗೆ ಎಲ್ಲಾ ರೀತಿಯ ಸಂರಕ್ಷಣೆಯನ್ನು ಕೊಟ್ಟಿದ್ದು ನಾವು.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಮಾನ್ಯ ಸಚಿವರೆ, ತಾವು ಎಲ್ಲಾ ರೀತಿಯ ಸಂರಕ್ಷಣೆಯನ್ನು ಕೊಟ್ಟಿದ್ದಿದ್ದರೆ ಅವರಿಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ.

(ಗೊಂದಲ)

ಶ್ರೀ ಕೆ.ಎಸ್.ನವೀನ್:- ಮಾನ್ಯ ಸಭಾಪತಿಯವರೆ, ಒಂದು ನಿಮಿಷ...ಒಂದೇ ಒಂದು clarification.

(ಗೊಂದಲ)

ಸಭಾಪತಿಯವರು:- ಮಾನ್ಯ ನವೀನ್ ಅವರೆ, ಕುಳಿತುಕೊಳ್ಳಿ. ಮಾನ್ಯ ಶರವಣ ಅವರೆ, ನೀವು ಮುಂದಿನ ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಕೆ.ಎಸ್.ನವೀನ್:- ಮಾನ್ಯ ಸಭಾಪತಿಯವರೆ, ಇದು ಬಹಳ important ಇದೆ. ಇದು ರಾಜ್ಯದ ಸಮಸ್ಯೆಯಾಗಿದೆ. ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಮಾನ್ಯ ನವೀನ್ ಅವರೆ, ಆಯಿತು. ನೀವು ಬರೆದುಕೊಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	52+93
ಸದಸ್ಯರ ಹೆಸರು	ಶ್ರೀ ಕೆ.ಎಸ್ ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಹಾಗೂ ಶ್ರೀ ಟಿ.ಎ.ಶರವಣ (ವಿಧಾನ ಸಭಾ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	11.03.2025
ಉತ್ತರಿಸಬೇಕಾದ ಸಚಿವರು	ಸಣ್ಣ ಕೈಗಾರಿಕೆ ಮತ್ತು ಸದಾರ್ವಜನಿಕ ವಲಯ ಉದ್ಯಮಗಳ ಸಚಿವರು
ಉತ್ತರಿಸುವ ಸಚಿವರು	ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ.	ಪ್ರಶ್ನೆಗಳು	ಉತ್ತರ
ಅ)	ರಾಜ್ಯ ಸರ್ಕಾರದ ಆಡಳಿತದಲ್ಲಿ ಬರುವ ಸಾರ್ವಜನಿಕ ವಲಯ ಉದ್ಯಮಗಳು ಯಾವುವು: (ವಿವರ ಒದಗಿಸುವುದು)	ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.
ಆ)	ಇದರಲ್ಲಿ ಆರ್ಥಿಕ ಸಂಕಷ್ಟದಲ್ಲಿರುವ ಉದ್ಯಮಗಳು ಯಾವುವು ಮತ್ತು ನಷ್ಟದ ಪ್ರಮಾಣ ಎಷ್ಟು ಹಾಗೂ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು: (ವಿವರ ಒದಗಿಸುವುದು)	ಆರ್ಥಿಕ ಸಂಕಷ್ಟದಲ್ಲಿರುವ ಉದ್ಯಮಗಳ ಮಾಹಿತಿಯನ್ನು ಅನುಬಂಧ-2 ಮತ್ತು ಸಿಬ್ಬಂದಿಗಳ ಸಂಖ್ಯೆಯನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ.
ಇ)	ಆರ್ಥಿಕ ಸಂಕಷ್ಟದಲ್ಲಿರುವ ಉದ್ಯಮಗಳನ್ನು ಪುನಶ್ಚೇತನಗೊಳಿಸಲು ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ.	ನಷ್ಟದಲ್ಲಿರುವ ಉದ್ದಿಮೆಗಳನ್ನು ಪುನಃಶ್ಚೇತನಗೊಳಿಸುವುದು ಅವಶ್ಯವೆಂದು ಸರ್ಕಾರ ಪರಿಗಣಿಸಿದ ಸಂದರ್ಭದಲ್ಲಿ ಅಂತಹ ಸಾರ್ವಜನಿಕ ಉದ್ದಿಮೆಗಳಿಗೆ ಅನುದಾನ, ಸಾಲ, ಈಕ್ವಿಟಿ, ಖಾತರಿಗಳ ರೂಪದಲ್ಲಿ ಹಣಕಾಸಿನ ನೆರವನ್ನು ನೀಡಲಾಗುತ್ತಿದೆ. ಅಲ್ಲದೆ, ಉದ್ದಿಮೆಗಳ ಆಡಳಿತಾತ್ಮಕ ಸುಧಾರಣೆ ಕೈಗೊಳ್ಳಲು ಮತ್ತು ಅಧಿಕಾರಿ/ನೌಕರರ ಕಾರ್ಯವೈಖರಿಯನ್ನು ಉತ್ತಮಪಡಿಸುವ ಮೂಲಕ ಉದ್ದಿಮೆಗಳನ್ನು ಅಭಿವೃದ್ಧಿಪಡಿಸಲು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ)	ಸಾರ್ವಜನಿಕ ವಲಯ ಉದ್ಯಮಗಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)	ಸಾರ್ವಜನಿಕ ವಲಯ ಉದ್ಯಮಗಳ ಕೇಂದ್ರ ಕಛೇರಿಗೆ ನೇರವಾಗಿ ಸರ್ಕಾರದಿಂದ ಬಿಡುಗಡೆ ಮಾಡಲಾಗುತ್ತಿದ್ದು, 2023-24ನೇ ಸಾಲಿಗೆ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನದ ಮಾಹಿತಿಯನ್ನು ಅನುಬಂಧ-4 ರಲ್ಲಿ ಲಗತ್ತಿಸಿದೆ. ಸರ್ಕಾರವು ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಜಿಲ್ಲಾವಾರು ಅನುದಾನವನ್ನು ಬಿಡುಗಡೆ ಮಾಡುವುದಿಲ್ಲ.
ಉ)	ಸದರಿ ಉದ್ದಿಮೆಗಳನ್ನು ಮುಚ್ಚುವ ಪ್ರಸ್ತಾವ ಸರ್ಕಾರದ ಮುಂದಿದೆಯೇ? (ಸಂಪೂರ್ಣ ವಿವರ ನೀಡುವುದು)	ನಿಷ್ಕ್ರೀಯ/ಆರ್ಥಿಕವಾಗಿ ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಸಮಗ್ರ ಮೌಲ್ಯಮಾಪನವನ್ನು ಕೈಗೊಂಡು ಅದರ ಆಧಾರದ ಮೇಲೆ ವಿವಿಧ ಪ್ರಕ್ರಿಯೆ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಸರ್ಕಾರದ ಆದೇಶ ಸಂಖ್ಯೆ FD 10 INV 2025, ದಿನಾಂಕ::15.02.2025ರಲ್ಲಿ ಎಲ್ಲಾ ಆಡಳಿತ ಇಲಾಖೆಗಳಿಗೆ ಸೂಚನೆಗಳನ್ನು ನೀಡಲಾಗಿದೆ.

ಆಇ 44 ಐಎನ್‌ವಿ 2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-1

ರಾಜ್ಯ ಸರ್ಕಾರದ ಆಡಳಿತದಲ್ಲಿ ಬರುವ ಸಾರ್ವಜನಿಕ ಉದ್ದಿಮೆಗಳು

ಕ್ರ. ಸಂ.	ಸಾರ್ವಜನಿಕ ಉದ್ದಿಮೆಗಳು
1.	ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್
2.	ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
3.	ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ
4.	ಮೈಸೂರ್ ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್
5.	ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ
6.	ದಿ ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್
7.	ಮೈಸೂರು ಕಾಗದ ಕಾರ್ಖಾನೆ ನಿಯಮಿತ
8.	ಮೈಸೂರು ಸಕ್ಕರೆ ಕಂಪನಿ ನಿಯಮಿತ
9.	ಎನ್‌ಜಿಇಎಫ್ (ಹುಬ್ಬಳ್ಳಿ) ನಿಯಮಿತ
10.	ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
11.	ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ
12.	ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
13.	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ
14.	ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ
15.	ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಶನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್
16.	ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್
17.	ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಯಮಿತ
18.	ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
19.	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
20.	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
21.	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
22.	ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
23.	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
24.	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
25.	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಿತ
26.	ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
27.	ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
28.	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
29.	ಡಿ ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್
30.	ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

31.	ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ
32.	ಕರ್ನಾಟಕ ರಾಜ್ಯ ದ್ವಿದಳ ಧಾನ್ಯಗಳ ಅಭಿವೃದ್ಧಿ ಮಂಡಳಿ ನಿಯಮಿತ
33.	ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ
34.	ಕಾವೇರಿ ನೀರಾವರಿ ನಿಗಮ ನಿಯಮಿತ
35.	ಕರ್ನಾಟಕ ನೀರಾವರಿ ನಿಗಮ ನಿಯಮಿತ
36.	ಕೃಷ್ಣಾಭಾಗ್ಯ ಜಲ ನಿಗಮ ನಿಯಮಿತ
37.	ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ
38.	ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ
39.	ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ
40.	ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆ
41.	ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
42.	ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
43.	ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
44.	ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ
45.	ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ
46.	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
47.	ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ
48.	ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ
49.	ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ
50.	ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
51.	ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ
52.	ಕರ್ನಾಟಕ ರಾಜ್ಯ ಉಗ್ರಾಣ ನಿಗಮ
53.	ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತ
54.	ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ
55.	ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್ಕರ್)
56.	ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ
57.	ಡಾ॥ ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ
58.	ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
59.	ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ
60.	ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ
61.	ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ
62.	ಕರ್ನಾಟಕ ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ
63.	ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ನಿಯಮಿತ
64.	ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

65.	ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ನಿಯಮಿತ
66.	ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ ನಿಯಮಿತ
67.	ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ
68.	ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ
69.	ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ
70.	ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ನಿಯಮಿತ
71.	ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ ನಿಯಮಿತ
72.	ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ
73.	ಕರ್ನಾಟಕ ಅಲೆಮಾರಿ ಅರೆ-ಅಲೆಮಾರಿ ಅಭಿವೃದ್ಧಿ ನಿಗಮ ನಿಯಮಿತ
74.	ಕರ್ನಾಟಕ ನಗರ ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
75.	ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ
76.	ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
77.	ತಡದಿ ಪೋರ್ಟ್ ಲಿಮಿಟೆಡ್
78.	ಹುಬ್ಬಳ್ಳಿ ಧಾರವಾಡ ಬಿಆರ್‌ಟಿಎಸ್ ಕಂಪನಿ ಲಿ.,
79.	ಇನ್ವೆಸ್ಟ್ ಕರ್ನಾಟಕ ಫೋರಮ್
80.	ತುಮಕೂರು ಮಷಿನ್ ಟೂಲ್ ಪಾರ್ಕ್
81.	ಹುಬ್ಬಳ್ಳಿ ಧಾರವಾಡ ಸ್ಮಾರ್ಟ್ ಸಿಟಿ ಲಿಮಿಟೆಡ್
82.	ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್
83.	ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್
84.	ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್
85.	ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್
86.	ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
87.	ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
88.	ರೈಲು ಮೂಲ ಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ಲಿ.,
89.	ಬೆಂಗಳೂರು ಸಂಯೋಜಿತ ರೈಲು ಮೂಲ ಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ
90.	ಸಿಬಿಐಸಿ ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್ ಲಿ.,
91.	ಕೆಪಿಸಿ ಗ್ಯಾಸ್ ಪವರ್ ಕಾರ್ಪೋರೇಷನ್ ಲಿ.,
92.	ರಾಯಚೂರು ಪವರ್ ಕಾರ್ಪೋರೇಷನ್ ಲಿ.,
93.	ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
94.	ಪವರ್ ಕಂಪನಿ ಆಫ್ ಕರ್ನಾಟಕ ಲಿ.,
95.	ಕರ್ನಾಟಕ ಪ್ರವಾಸೋದ್ಯಮ ಮೂಲ ಸೌಕರ್ಯ ನಿಯಮಿತ
96.	ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ
97.	ಆಹಾರ ಕರ್ನಾಟಕ ನಿಯಮಿತ
98.	ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ ನಿಯಮಿತ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

99.	ಕರ್ನಾಟಕ ಅಂತರಗಂಗಾ ಮೈಕ್ರೋ ಇರಿಗೇಷನ್ ನಿಗಮ ನಿಯಮಿತ
100.	ಬೆಂಗಳೂರು ಜೈವಿಕ ನಾವೀನ್ಯತಾ ಕೇಂದ್ರ
101.	ಕರ್ನಾಟಕ ವೃತ್ತಿಪರ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಯಮಿತ
102.	ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ
103.	ಕರ್ನಾಟಕ ಗಣಿಗಾರಿಕೆ ಪರಿಸರ ಪುನಶ್ಚೇತನ ನಿಗಮ ನಿಯಮಿತ
104.	ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ
105.	ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
106.	ಬೆಂಗಳೂರು ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಕಂಪನಿ ಲಿ.
107.	ವಿಜ್ಞಾನ ಗ್ಯಾಲರಿ ಬೆಂಗಳೂರು
108.	ಕರ್ನಾಟಕ ಆಸ್ತಿ ನಿರ್ವಹಣೆ ಕಂಪನಿ ಪ್ರೈ.ಲಿ.
109.	ಕರ್ನಾಟಕ ಟ್ರಸ್ಟಿ ಕಂಪನಿ ಪ್ರೈ.ಲಿ.
110.	ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತ
111.	ಕರ್ನಾಟಕ ರಾಜ್ಯ ಆಗ್ರೋ ಕಾರ್ನ್ ಪ್ರಾಡೆಕ್ಟ್ಸ್ ಲಿ.,
112.	ಮೈಸೂರು ತಂಬಾಕು ಕಂಪನಿ ನಿಯಮಿತ
113.	ಕರ್ನಾಟಕ ಪಲ್ಪ್‌ವುಡ್ ಲಿ.,
114.	ಕರ್ನಾಟಕ ಕೃಷಿ ಕೈಗಾರಿಕೆಗಳ ನಿಗಮ ನಿಯಮಿತ
115.	ಬೆಂಗಳೂರು ಪಿಆರ್‌ಆರ್ ಅಭಿವೃದ್ಧಿ ನಿಗಮ ನಿಯಮಿತ
116.	ಕರ್ನಾಟಕ ರಾಜ್ಯ ವೆನೀರ್ಸ್ ಲಿ.,
117.	ದಿ, ಮೈಸೂರು ಮ್ಯಾಚ್ ಕಂಪನಿ ಲಿ.,
118.	ದಿ. ಮೈಸೂರು ಲ್ಯಾಂಪ್ ವರ್ಕ್ಸ್ ಲಿ.,
119.	ಮೈಸೂರು ಕಾಸ್‌ಮೇಟಿಕ್ಸ್ ಲಿ.,
120.	ಎನ್‌ಜಿಇಎಫ್ ಲಿ., ಬೆಂಗಳೂರು.
121.	ಕರ್ನಾಟಕ ಟೆಲಿಕಾಮ್ ಲಿ.,
122.	ದಿ.ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ಲಿ.,
123.	ವಿಜಯನಗರ ಸ್ಟೀಲ್ ಲಿ.,
124.	ದಿ.ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತ
125.	ಬೆಂಗಳೂರು ಉಪನಗರ ರೈಲು ಕಂಪನಿ ನಿಯಮಿತ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-2

2023-24ನೇ ಆರ್ಥಿಕ ಸಾಲಿನಲ್ಲಿ ಆರ್ಥಿಕ ಸಂಕಷ್ಟದಲ್ಲಿರುವ ಉದ್ಯಮಗಳು ಹಾಗೂ ನಷ್ಟದ ಪ್ರಮಾಣ

(ರೂ.ಲಕ್ಷಗಳಲ್ಲಿ)

1.	ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ	211.05
2.	ದಿ ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್	321.00
3.	ಮೈಸೂರು ಕಾಗದ ಕಾರ್ಖಾನೆ ನಿಯಮಿತ	4874.00
4.	ಮೈಸೂರು ಸಕ್ಕರೆ ಕಂಪನಿ ನಿಯಮಿತ	4197.62
5.	ಎನ್‌ಜಿಇಎಫ್ (ಹುಬ್ಬಳ್ಳಿ) ನಿಯಮಿತ	1792.00
6.	ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ	143.27
7.	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ	ಲೆಕ್ಕಪತ್ರ ಅಂತಿಮಗೊಂಡಿರುವುದಿಲ್ಲ
8.	ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ	326.72
9.	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ	386316.00
10.	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ	264020.00
11.	ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ	20378.00
12.	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ	34654.00
13.	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ	489438.00
14.	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಿತ	181582.77
15.	ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	16112.00
16.	ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	32248.00
17.	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ	205630.00
18.	ಡಿ ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್	ಲೆಕ್ಕಪತ್ರ ಅಂತಿಮಗೊಂಡಿರುವುದಿಲ್ಲ
19.	ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ	815.31
20.	ಕಾವೇರಿ ನೀರಾವರಿ ನಿಗಮ ನಿಯಮಿತ	351710.00
21.	ಕರ್ನಾಟಕ ನೀರಾವರಿ ನಿಗಮ ನಿಯಮಿತ	209372.76
22.	ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ	48.88
23.	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ	946.00
24.	ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ	375.42
25.	ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ	61.00
26.	ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್ಕರ್)	ಲೆಕ್ಕಪತ್ರ ಅಂತಿಮಗೊಂಡಿರುವುದಿಲ್ಲ
27.	ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ	6078.00

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

28.	ತಡದಿ ಪೋರ್ಟ್ ಲಿಮಿಟೆಡ್	0.13
29.	ಹುಬ್ಬಳ್ಳಿ ಧಾರವಾಡ ಬಿಆರ್‌ಟಿಎಸ್ ಕಂಪನಿ ಲಿ.,	63.00
30.	ಬೆಂಗಳೂರು ಸಂಯೋಜಿತ ರೈಲು ಮೂಲ ಸೌಕರ್ಯ ಅಭಿವೃದ್ಧಿ	1.39
31.	ರಾಯಚೂರು ಪವರ್ ಕಾರ್ಪೋರೇಷನ್ ಲಿ.,	173548.00
32.	ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ	5194.00 (ಸಂಚಿತ)
33.	ಆಹಾರ ಕರ್ನಾಟಕ ನಿಯಮಿತ	11.33
34.	ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ	104.02

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-3

ಸಾರ್ವಜನಿಕ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ

ಕ್ರ. ಸಂ.	ಸಾರ್ವಜನಿಕ ಉದ್ದಿಮೆಗಳು	ಸಿಬ್ಬಂದಿಗಳ ಸಂಖ್ಯೆ (ಖಾಯಂ, ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಸೇರಿದಂತೆ)
1.	ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್	587
2.	ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ	3919
3.	ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ	1419
4.	ಮೈಸೂರ್ ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್	82
5.	ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ	232
6.	ದಿ ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್	87
7.	ಮೈಸೂರು ಕಾಗದ ಕಾರ್ಖಾನೆ ನಿಯಮಿತ	115
8.	ಮೈಸೂರು ಸಕ್ಕರೆ ಕಂಪನಿ ನಿಯಮಿತ	65
9.	ಎನ್‌ಜಿಇಎಫ್ (ಹುಬ್ಬಳ್ಳಿ) ನಿಯಮಿತ	102
10.	ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ	177
11.	ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ	149
12.	ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ	61
13.	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ	68
14.	ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ	51
15.	ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಶನ್ ಅಂಡ್	29
16.	ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್	3220
17.	ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ	74
18.	ಕರ್ನಾಟಕ ವಿದ್ಯುತ್ ನಿಗಮ ನಿಯಮಿತ	3550
19.	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ	20786
20.	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ	20156
21.	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ	13556
22.	ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ	5292
23.	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ	8032
24.	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ	9272
25.	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಿತ	36191
26.	ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	20167
27.	ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	20987
28.	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ	28119

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

29.	ಡಿ ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್	31
30.	ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ	255
31.	ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು	43
32.	ಕರ್ನಾಟಕ ರಾಜ್ಯ ದ್ವಿದಳ ಧಾನ್ಯಗಳ ಅಭಿವೃದ್ಧಿ ಮಂಡಳಿ	12
33.	ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ	48
34.	ಕಾವೇರಿ ನೀರಾವರಿ ನಿಗಮ ನಿಯಮಿತ	2749
35.	ಕರ್ನಾಟಕ ನೀರಾವರಿ ನಿಗಮ ನಿಯಮಿತ	2894
36.	ಕೃಷ್ಣಾಭಾಗ್ಯ ಜಲ ನಿಗಮ ನಿಯಮಿತ	1297
37.	ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ	509
38.	ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ	136
39.	ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ	53
40.	ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆ	823
41.	ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ	1056
42.	ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ	480
43.	ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ	174
44.	ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ	151
45.	ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ	360
46.	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ	142
47.	ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ	1769
48.	ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ	493
49.	ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ	1001
50.	ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ	261
51.	ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ	53
52.	ಕರ್ನಾಟಕ ರಾಜ್ಯ ಉಗ್ರಾಣ ನಿಗಮ	678
53.	ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತ	23
54.	ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ	108
55.	ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ	119
56.	ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ	152
57.	ಡಾ॥ ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ	153
58.	ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	313
59.	ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ	173
60.	ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ	52
61.	ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ	64
62.	ಕರ್ನಾಟಕ ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮ	07
63.	ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ನಿಯಮಿತ	58

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

64.	ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ	06
65.	ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ನಿಯಮಿತ	25
66.	ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ ನಿಯಮಿತ	54
67.	ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ	05
68.	ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ	23
69.	ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ	05
70.	ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ನಿಯಮಿತ	ಯಾವದೇ ಹುದ್ದೆಗಳು ಸೃಜನೆಯಾಗಿರುವುದಿಲ್ಲ. ಡಿ ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಸಿಬ್ಬಂದಿಗಳೇ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.
71.	ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ ನಿಯಮಿತ	ಯಾವದೇ ಹುದ್ದೆಗಳು ಸೃಜನೆಯಾಗಿರುವುದಿಲ್ಲ. ಡಿ ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಸಿಬ್ಬಂದಿಗಳೇ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ
72.	ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ	05
73.	ಕರ್ನಾಟಕ ಅಲೆಮಾರಿ ಅರೆ-ಅಲೆಮಾರಿ ಅಭಿವೃದ್ಧಿ ನಿಗಮ ನಿಯಮಿತ	ಯಾವದೇ ಹುದ್ದೆಗಳು ಸೃಜನೆಯಾಗಿರುವುದಿಲ್ಲ. ಡಿ ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಸಿಬ್ಬಂದಿಗಳೇ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ
74.	ಕರ್ನಾಟಕ ನಗರ ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು	307

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

75.	ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ	48
76.	ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ	710
77.	ತಡದಿ ಪೋರ್ಟ್ ಲಿಮಿಟೆಡ್	-
78.	ಹುಬ್ಬಳ್ಳಿ ಧಾರವಾಡ ಬಿಆರ್‌ಟಿಎಸ್ ಕಂಪನಿ ಲಿ.,	80
79.	ಇನ್ವೆಸ್ಟ್ ಕರ್ನಾಟಕ ಫೋರಮ್	13
80.	ತುಮಕೂರು ಮಷಿನ್ ಟೂಲ್ ಪಾರ್ಕ್	09
81.	ಹುಬ್ಬಳ್ಳಿ ಧಾರವಾಡ ಸ್ಮಾರ್ಟ್ ಸಿಟಿ ಲಿಮಿಟೆಡ್	26
82.	ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್	38
83.	ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್	32
84.	ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್	20
85.	ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್	16
86.	ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್	28
87.	ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್	19
88.	ರೈಲು ಮೂಲ ಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ಲಿ.,	193
89.	ಬೆಂಗಳೂರು ಸಂಯೋಜಿತ ರೈಲು ಮೂಲ ಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ	ಪ್ರಾರಂಭಿಕ ಹಂತದಲ್ಲಿದ್ದು, ಯಾವುದೇ ಸಿಬ್ಬಂದಿ ಇರುವುದಿಲ್ಲ.
90.	ಸಿಬಿಐಸಿ ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್ ಲಿ.,	14
91.	ಕೆಪಿಸಿ ಗ್ಯಾಸ್ ಪವರ್ ಕಾರ್ಪೋರೇಷನ್ ಲಿ.,	ಪ್ರಾರಂಭಿಕ ಹಂತದಲ್ಲಿದ್ದು, ಯಾವುದೇ ಸಿಬ್ಬಂದಿ ಇರುವುದಿಲ್ಲ.
92.	ರಾಯಚೂರು ಪವರ್ ಕಾರ್ಪೋರೇಷನ್ ಲಿ.,	158
93.	ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ	46
94.	ಪವರ್ ಕಂಪನಿ ಆಫ್ ಕರ್ನಾಟಕ ಲಿ.,	65
95.	ಕರ್ನಾಟಕ ಪ್ರವಾಸೋದ್ಯಮ ಮೂಲ ಸೌಕರ್ಯ ನಿಯಮಿತ	11
96.	ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ	12
97.	ಆಹಾರ ಕರ್ನಾಟಕ ನಿಯಮಿತ	02
98.	ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ	17
99.	ಕರ್ನಾಟಕ ಅಂತರಗಂಗಾ ಮೈಕ್ರೋ ಇರಿಗೇಷನ್ ನಿಗಮ	-
100.	ಬೆಂಗಳೂರು ಜೈವಿಕ ನಾವೀನ್ಯತಾ ಕೇಂದ್ರ	17
101.	ಕರ್ನಾಟಕ ವೃತ್ತಿಪರ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ	294
102.	ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ	26
103.	ಕರ್ನಾಟಕ ಗಣಿಗಾರಿಕೆ ಪರಿಸರ ಪುನಶ್ಚೇತನ ನಿಗಮ	29
104.	ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ	41

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

105.	ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ	299
106.	ಬೆಂಗಳೂರು ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಕಂಪನಿ ಲಿ.	33
107.	ವಿಜ್ಞಾನ ಗ್ಯಾಲರಿ ಬೆಂಗಳೂರು	38
108.	ಕರ್ನಾಟಕ ಆಸ್ತಿ ನಿರ್ವಹಣೆ ಕಂಪನಿ ಪ್ರೈ.ಲಿ.	05
109.	ಕರ್ನಾಟಕ ಟ್ರಸ್ಟಿ ಕಂಪನಿ ಪ್ರೈ.ಲಿ.	01
110.	ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತ	ಮುಚ್ಚಲ್ಪಟ್ಟಿದೆ. ನಿಗಮಗಳನ್ನು ಮುಚ್ಚಾಲಾಗಿದ್ದು, ಸಮಾಪನಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.
111.	ಕರ್ನಾಟಕ ರಾಜ್ಯ ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ಲಿ.,	
112.	ಮೈಸೂರು ತಂಬಾಕು ಕಂಪನಿ ನಿಯಮಿತ	
113.	ಕರ್ನಾಟಕ ಪಲ್ಪ್‌ವುಡ್ ಲಿ.,	
114.	ಕರ್ನಾಟಕ ಕೃಷಿ ಕೈಗಾರಿಕೆಗಳ ನಿಗಮ ನಿಯಮಿತ	
115.	ಬೆಂಗಳೂರು ಪೆರಿಫೆರಲ್ ಅಭಿವೃದ್ಧಿ ನಿಗಮ ನಿಯಮಿತ	
116.	ಕರ್ನಾಟಕ ರಾಜ್ಯ ವೆನೀರ್ಸ್ ಲಿ.,	
117.	ದಿ. ಮೈಸೂರು ಮ್ಯಾಚ್ ಕಂಪನಿ ಲಿ.,	
118.	ದಿ. ಮೈಸೂರು ಲ್ಯಾಂಪ್ ವರ್ಕ್ಸ್ ಲಿ.,	
119.	ಮೈಸೂರು ಕಾಸ್ಮೇಟಿಕ್ಸ್ ಲಿ.,	
120.	ಎನ್‌ಜಿಇಎಫ್ ಲಿ., ಬೆಂಗಳೂರು.	
121.	ಕರ್ನಾಟಕ ಟೆಲಿಕಾಮ್ ಲಿ.,	
122.	ದಿ.ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ಲಿ.,	
123.	ವಿಜಯನಗರ ಸ್ಟೀಲ್ ಲಿ.,	
124.	ದಿ.ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತ	
125.	ಬೆಂಗಳೂರು ಉಪನಗರ ರೈಲು ಕಂಪನಿ ನಿಯಮಿತ	

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-4

2023-24ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಸಾರ್ವಜನಿಕ ಉದ್ದಿಮೆಗಳು	ಬಿಡುಗಡೆಯಾಗಿರುವ
1.	ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ	1000.00
2.	ಮೈಸೂರು ಸಕ್ಕರೆ ಕಂಪನಿ ನಿಯಮಿತ	5000.00
3.	ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ	307.87
4.	ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ	21828.68
5.	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ	729444.00
6.	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ	14317.56
7.	ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ	217168.66
8.	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ	5558.00
9.	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ	6797.00
10.	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಿತ	160218.53
11.	ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	89020.00
12.	ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	12149.55
13.	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ	122733.04
14.	ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ	100.00
15.	ಕರ್ನಾಟಕ ರಾಜ್ಯ ದ್ವಿದಳ ಧಾನ್ಯಗಳ ಅಭಿವೃದ್ಧಿ ಮಂಡಳಿ ನಿಯಮಿತ	50.00
16.	ಕಾವೇರಿ ನೀರಾವರಿ ನಿಗಮ ನಿಯಮಿತ	253953.00
17.	ಕರ್ನಾಟಕ ನೀರಾವರಿ ನಿಗಮ ನಿಯಮಿತ	451601.52
18.	ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆ	233.00
19.	ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ	2909.37
20.	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ	94700.00
21.	ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ	63964.45
22.	ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ	190201.00
23.	ಕರ್ನಾಟಕ ರಾಜ್ಯ ಉಗ್ರಾಣ ನಿಗಮ	25100.00
24.	ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ	3700.00
25.	ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ	17500.00
26.	ಡಾ॥ ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ	8833.50
27.	ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	10000.00
28.	ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ	8584.24
29.	ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ	4394.50
30.	ಕರ್ನಾಟಕ ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ	1300.00

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

31.	ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ನಿಯಮಿತ	4709.06
32.	ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ	900.00
33.	ಕರ್ನಾಟಕ ಸಹಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ನಿಯಮಿತ	400.00
34.	ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ ನಿಯಮಿತ	10500.00
35.	ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ	800.00
36.	ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ	6100.00
37.	ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ	1000.00
38.	ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ನಿಯಮಿತ	500.00
39.	ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ ನಿಯಮಿತ	900.00
40.	ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ	1000.00
41.	ಕರ್ನಾಟಕ ಅಲೆಮಾರಿ ಅರೆ-ಅಲೆಮಾರಿ ಅಭಿವೃದ್ಧಿ ನಿಗಮ ನಿಯಮಿತ	1200.00
42.	ಕರ್ನಾಟಕ ನಗರ ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ	600.00
43.	ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ	395200.00
44.	ಇನ್ವೆಸ್ಟ್ ಕರ್ನಾಟಕ ಫೋರಮ್	6026.00
45.	ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್	5900.00
46.	ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್	3600.00
47.	ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್	5900.00
48.	ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್	2450.00
49.	ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್	8600.00
50.	ರೈಲು ಮೂಲ ಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ಲಿ.,	541.82
51.	ರಾಯಚೂರು ಪವರ್ ಕಾರ್ಪೋರೇಷನ್ ಲಿ.,	1841.05
52.	ಪವರ್ ಕಂಪನಿ ಆಫ್ ಕರ್ನಾಟಕ ಲಿ.,	64616.00
53.	ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ	150.00
54.	ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರಾಟ ನಿಗಮ	60.00
55.	ಬೆಂಗಳೂರು ಜೈವಿಕ ನವೀಕರಣ ಕೇಂದ್ರ	403.00
56.	ಕರ್ನಾಟಕ ವೃತ್ತಿಪರ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಯಮಿತ	17606.43
57.	ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ	211.44
58.	ಬೆಂಗಳೂರು ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಕಂಪನಿ ಲಿ.	20410.00
59.	ವಿಜ್ಞಾನ ಗ್ಯಾಲರಿ ಬೆಂಗಳೂರು	27.03
60.	ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ	496262.00

ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಈಗ ಒಂದು ನಿಮಿಷವಾಗಿದೆ. ಮಾನ್ಯ ಸಭಾಪತಿಯವರು ನಮ್ಮ ನೆರವಿಗೆ ಬಂದಿದ್ದಾರೆಂದು ಭಾವಿಸುತ್ತೇನೆ. ಯಾವ್ಯಾವ ಸರ್ಕಾರಿ ಕಂಪನಿಗಳು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಷ್ಟು ವರ್ಷಗಳಿಂದ ನಷ್ಟದಲ್ಲಿವೆ, ಅದರ ಪ್ರಮಾಣ ಎಷ್ಟು ಎಂದು ಕೇಳಿದ್ದೇನೆ. ಬಹಳಷ್ಟು ಕಂಪನಿಗಳು ನಷ್ಟದಲ್ಲಿವೆ, 49 ಕಂಪನಿಗಳು ಬಂದ್ ಮಾಡುವಂತಹ ಪರಿಸ್ಥಿತಿಯಲ್ಲಿದೆ ಎಂದು ಹಲವಾರು ಪತ್ರಿಕೆಗಳಲ್ಲಿ ವರದಿಗಳು ಕೂಡ ಬಂದಿದೆ. ಆದರೆ ಇವತ್ತು ನೀವು ಕೊಟ್ಟಿರುವ ಉತ್ತರವನ್ನು ನೋಡಿದರೆ ನನಗೆ surprise ಆಗುತ್ತಿದೆ. 2020ರ ಜುಲೈ 31ರ ಒಳಗಾಗಿ ಬಹಳಷ್ಟು ಕಂಪನಿಗಳನ್ನು float ಮಾಡುವುದಾಗಿ ವರದಿ ಮಾಡಿದ್ದಾರೆ.

(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)

ಆದರೂ ನೀವು ಕೊಟ್ಟಿರುವ ಉತ್ತರದಿಂದ ನನಗೆ ಅಷ್ಟು ಸಮಾಧಾನವಾಗುತ್ತಿಲ್ಲ. ಸರ್ಕಾರದ ವ್ಯಾಪ್ತಿಯಲ್ಲಿ ICD ಮುಂತಾದವು ನಷ್ಟದಲ್ಲಿವೆ. ಸರ್ಕಾರದ ವತಿಯಿಂದ ನೀವು take over ಮಾಡಬೇಕು ಮತ್ತು ಮುಂದಕ್ಕೆ ತೆಗೆದುಕೊಂಡು ಹೋಗಲಿಕ್ಕೆ ಏನೂ ನೆರವು ನೀಡುತ್ತಿಲ್ಲ. ಸರ್ಕಾರದ ಪಾಲಿಸಿ ESCOM ನಿಂದ ಸರಬರಾಜು ಮಾಡುವಂಥದ್ದು ಯಾವುದೂ ಕೂಡ ಉತ್ಪಾದನೆಯಾಗುವುದಿಲ್ಲ. ಆದರೂ ಕೂಡ ಬಳಕೆದಾರರು ಬಳಸುವ ವಿದ್ಯುತ್‌ಗೆ ಕೂಡ ಬಿಲ್ ಅನ್ನು ಪಾವತಿ ಮಾಡುತ್ತಾರೆ. ನಷ್ಟ ಎಂದು ಬರುವುದು ಏಕೆ ಎಂದು ನನಗೆ ಅರ್ಥವಾಗಿಲ್ಲ. ಜೊತೆಗೆ ಈ ರಾಜ್ಯದಲ್ಲಿ ನಷ್ಟದಲ್ಲಿರುವಂಥದ್ದು ಸರ್ಕಾರಿ ಸ್ವಾಮ್ಯದ ಕಂಪನಿಗಳು. ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ನನಗೆ ಸ್ಪಷ್ಟ ಉತ್ತರ ಕೊಟ್ಟಿರಲಿಲ್ಲ.

ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಇದರಲ್ಲಿ ನನ್ನ ಪ್ರಶ್ನೆಯೂ ಇದೆ. ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಡುವ ಸಾರ್ವಜನಿಕ ವಲಯದ ಉದ್ಯಮಗಳಿಗೆ ಸಂಬಂಧಪಟ್ಟಂತಹ ಪ್ರಶ್ನೆಗೆ ಸರ್ಕಾರ ಸಂಖ್ಯೆಗಳನ್ನು ಕೊಟ್ಟಿದೆ. ಸರ್ಕಾರಕ್ಕೆ ನಾನು ಕೇಳಬಯಸುವುದೇನೆಂದರೆ ತಾವು ಪಟ್ಟಿ ಮಾಡಿರುವ 125 ಸಾರ್ವಜನಿಕ ಉದ್ಯಮಗಳ ಪೈಕಿ 34 ನಷ್ಟದಲ್ಲಿದೆ ಎಂದು ತಾವು ತಿಳಿಸಿದ್ದೀರಿ. ಆದರೆ ಸರ್ಕಾರ ಈ ನಷ್ಟದಲ್ಲಿರುವ ಕಂಪನಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಆ ಸಂದರ್ಭದಲ್ಲಿ ಸ್ಥಾಪನೆ ಮಾಡಿತ್ತು. ಇದನ್ನು ಹೊರಗೆ ತರುವುದಕ್ಕೆ ಅಥವಾ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ತಂದು ಬಂಡವಾಳ ಕೊಟ್ಟು ಸರಿ ಮಾಡುವಂಥ ಯೋಜನೆ ಸರ್ಕಾರದ ಮುಂದೆ ಇದೆಯೇ? ಅಥವಾ ಈ ಎಲ್ಲಾ 34 ಕಂಪನಿಗಳನ್ನು ಮತ್ತು ಅಲ್ಲಿರುವಂತಹ ಬಂಡವಾಳವನ್ನು ಸರ್ಕಾರ zero off ಮಾಡಿ ಮುಚ್ಚುವಂಥ ಕೆಲಸ ಮಾಡುತ್ತದೆಯೇ? ಮಾನ್ಯ ಸಚಿವರು ಉತ್ತರ ಹೇಳಿದ ನಂತರ ಒಂದು ಸಣ್ಣ ಉಪ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) (ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರ ಪರವಾಗಿ):- ಮಾನ್ಯ ಸಭಾಪತಿಯವರೆ, ದಿನಾಂಕ 25.05.2022ರ ಒಂದು ಆದೇಶದಲ್ಲಿ ಕರ್ನಾಟಕ ಸರ್ಕಾರದ ಸಾರ್ವಜನಿಕ ಉದ್ದಿಮೆಗಳಿಗೆ ಇದ್ದಂತಹ ಪ್ರತ್ಯೇಕವಾದ ಇಲಾಖೆಯನ್ನು ಆರ್ಥಿಕ ಇಲಾಖೆಯ ಜೊತೆಯಲ್ಲಿ ಸೇರಿಸಲಾಗಿದೆ. 125 ಸಾರ್ವಜನಿಕ ಉದ್ದಿಮೆಗಳಿವೆ. ಅದರಲ್ಲಿ ಕರ್ನಾಟಕ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀರಾವರಿ ನಿಗಮ, ವಿಶ್ವೇಶ್ವರಯ್ಯ ನೀರಾವರಿ ನಿಗಮ ಬರುತ್ತದೆ. ನಮ್ಮ ಎಲ್ಲಾ ಅಭಿವೃದ್ಧಿ ನಿಗಮಗಳು ಅಂದರೆ ಮರಾಠಾ ಅಭಿವೃದ್ಧಿ ನಿಗಮ ಇರಬಹುದು, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ಇರಬಹುದು; ಇವೆಲ್ಲವೂ ಬರುತ್ತದೆ. ಈಗಾಗಲೇ ಕೇಳಿದ್ದಂತಹ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿದೆ. 125ರಲ್ಲಿ 34 ಕಂಪನಿಗಳು ನಷ್ಟದಲ್ಲಿವೆ. ಈ 34 ಕಂಪನಿಗಳಲ್ಲಿ ಅಂದರೆ ಇದಕ್ಕೆ ಹೊರತುಪಡಿಸಿ ಸುಮಾರು 14 ಕಂಪನಿಗಳು ಮುಚ್ಚಿವೆ. ಅದರಿಂದ ಯಾವುದೇ ರೀತಿಯ ಉಪಯೋಗವಿಲ್ಲ ಎಂದು ಸರ್ಕಾರದ ಹಂತದಲ್ಲಿ ತೀರ್ಮಾನ ಮಾಡಲಾಗಿದೆ. ಈಗ ಮಾನ್ಯ ಸದಸ್ಯರು ಇದರ ಪುನಶ್ಚೇತನದ ಬಗ್ಗೆ ಕೇಳಿದ್ದು, ಪುನಶ್ಚೇತನಕ್ಕೆ ಬಂಡವಾಳವನ್ನು ಪುನಃ ಸರ್ಕಾರದಿಂದ ಹಾಕಬೇಕಾಗುತ್ತದೆ. ಆ ನಿಟ್ಟಿನಲ್ಲಿ ಪುನಶ್ಚೇತನಗೊಳಿಸಿದರೆ ಇದು ಮುಂದೆ ಸಹಕಾರಿಯಾಗುತ್ತದೆ; ಒಳ್ಳೆಯದಾಗುತ್ತದೆ ಎಂದು ಇದ್ದರೆ, ಅದರ ಬಗ್ಗೆ ಅವಶ್ಯಕತೆ ಎನ್ನಿಸಿದ್ದರೆ ಅಂತಹ ಸಂದರ್ಭದಲ್ಲಿ ಸರ್ಕಾರ ಎಲ್ಲಾ ಸಾರ್ವಜನಿಕ ಉದ್ದಿಮೆಗಳಿಗೆ ಅನುದಾನ ಕೊಡುವಂಥದ್ದು, ಸಾಲ ಕೊಡುವಂಥದ್ದು, equity ಮುಖಾಂತರ ಸಾಲ ಕೊಡುವ ರೂಪದಲ್ಲಿ ಹಣಕಾಸಿನ ನೆರವನ್ನು ನೀಡಿ ಒಂದು ವೇಳೆ ಅದು ಕಾರ್ಯಗತವಾಗುತ್ತದೆ ಎನ್ನುವುದಾದರೆ ಅದರ ಬಗ್ಗೆ ಪರಿಶೀಲನೆ ಮಾಡಲಾಗುವುದು ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಟಿ.ಎ.ಶರವಣ:– ಮಾನ್ಯ ಸಚಿವರೆ, ಪರಿಶೀಲನೆ ಮಾಡುವುದಷ್ಟೇ ಅಲ್ಲ, ಲಾಭದತ್ತ ತೆಗೆದುಕೊಂಡು ಹೋಗುವುದಕ್ಕೆ ನೀವು ತೆಗೆದುಕೊಳ್ಳುವ ಕ್ರಮಗಳೇನು? ಎರಡನೆಯದಾಗಿ ಈ ಉಪ ಸಮಿತಿಯನ್ನು ರಚನೆ ಮಾಡಿದ್ದೀರಿ. ಅದು ತೆಗೆದುಕೊಂಡಿರುವ ನಿರ್ಧಾರಗಳೇನು ಎಂದು ಕೇಳಬಯಸುತ್ತೇನೆ.

ಶ್ರೀ ಈಶ್ವರ ಬಿ. ಖಂಡ್ರೆ:– ಮಾನ್ಯ ಶರವಣ ಅವರೆ, ಇವೆಲ್ಲಾ ಕಂಪನಿಗಳ ಮೌಲ್ಯಮಾಪನ ಆರ್ಥಿಕ ಇಲಾಖೆಯವರು ಮಾಡುವುದಾಗಿ ಹೇಳಿದ್ದಾರೆ. ಮೌಲ್ಯಮಾಪನ ಮಾಡಿ ಯಾವುದು viable ಇದೆ ಅಂತಹ ಕಂಪನಿಗಳನ್ನು ಪುನಶ್ಚೇತನ ಮಾಡಲಿಕ್ಕೆ ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಟಿ.ಎ.ಶರವಣ:– ಮಾನ್ಯ ಸಚಿವರೆ, ಮೌಲ್ಯಮಾಪನ ಆಗಿದೆಯೇ? ಅದರ ಪ್ರಮುಖ ಅಂಶಗಳೇನು?

ಶ್ರೀ ಈಶ್ವರ ಬಿ. ಖಂಡ್ರೆ:– ಸಭೆಯಲ್ಲಿ ಏನು decide ಮಾಡಿದ್ದಾರೆ ಎಂದರೆ,

"To conduct a thorough evaluation of various defunct/non-working/loss making companies and any other which fall under similar category."

ಅಂದರೆ ಮೌಲ್ಯಮಾಪನ ಮಾಡಬೇಕು ಎಂದಾಗಿದೆ. ಆದರೆ ಸಂಪೂರ್ಣವಾದಂತಹ ಮೌಲ್ಯಮಾಪನ ಆಗಿಲ್ಲ. ಇದು ತೀರ್ಮಾನ ಮಾಡಿರುವುದು ದಿನಾಂಕ 15.02.2025ರಂದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"To take necessary action on the evaluated companies as per Annexure-3 for liquidation of merger/amalgamation as the case may be, to be completed latest by 31st July 2015."

ಜುಲೈ 2025ರೊಳಗಾಗಿ ಯಾವ ಯಾವ ಕಂಪನಿಗಳು ನಷ್ಟದಲ್ಲಿವೆ ಆ ಕಂಪನಿಗಳನ್ನು ಸಮಾಪನೆಗೊಳಿಸಬೇಕು ಅಥವಾ ಬೇರೆ ಬೇರೆ ಲಾಭದಾಯಕ ಕಂಪನಿಗಳ ಜೊತೆಯಲ್ಲಿ ವಿಲೀನ ಮಾಡಬೇಕೊ ಎನ್ನುವುದರ ಬಗ್ಗೆ ದಿನಾಂಕ 31.07.2025ರೊಳಗೆ ತೀರ್ಮಾನ ಮಾಡಬೇಕು ಎಂದು decision ಆಗಿದೆ.

(ಮುಂದು)

(197) 11-03-2025/12.50/ಎಂವಿ-ಎಂಡಿ (ಉಪ ಸಭಾಪತಿಯವರ ಉಪಸ್ಥಿತಿ)

ಶ್ರೀ ಈಶ್ವರ ಬಿ. ಖಂಡ್ರೆ (ಮುಂದು):-

"To evaluate other companies also which can be targeted for better Return on investment."

ಈಗಾಗಲೇ ರಾಜ್ಯ ಸರ್ಕಾರದ ಸಾವಿರಾರು ಕೋಟಿ ರೂಪಾಯಿಗಳ ಹಣವನ್ನು 125 ಸಾರ್ವಜನಿಕ ಉದ್ಯಮಗಳಿಗೆ ಕೊಡಲಾಗಿದೆ. ಪ್ರತಿಯೊಂದು ಉದ್ಯಮ ಮತ್ತು ನಿಗಮಗಳು ಏನಿವೆ, ಅವೆಲ್ಲವನ್ನೂ ಸೇರಿಸಿಕೊಂಡು, ಅವುಗಳ ಮೌಲ್ಯಮಾಪನ ಮಾಡಿ, ಇನ್ನು ಉತ್ತಮವಾಗಿ ಅದರ ಕಾರ್ಯಕ್ಷಮತೆ ಹೆಚ್ಚಿಗೆ ಆಗಬೇಕು ಮತ್ತು ಅದರಿಂದ ಲಾಭವೂ ಸಹ ಹೆಚ್ಚಿಗೆ ಬರಬೇಕು ಎನ್ನುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕೆಂಬ ತೀರ್ಮಾನ ಮಾಡಲಾಗಿದೆ. ಆರ್ಥಿಕ ಇಲಾಖೆ ಇದನ್ನು ಅತ್ಯಂತ ಗಂಭೀರವಾಗಿ ಪರಿಗಣನೆ ಮಾಡಿ, ಅದನ್ನು ಸರಿಪಡಿಸುವಂತಹ ಕೆಲಸ ಮಾಡುತ್ತೇವೆ.

ಶ್ರೀ ಶರವಣ.ಟಿ.ಎ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಷ್ಟದಲ್ಲಿರುವಂತಹ ಈ ಕಂಪನಿಗಳ ಬಗ್ಗೆ ರಾಷ್ಟ್ರಮಟ್ಟದಲ್ಲಿ ನ್ಯಾಯಾಲಯಕ್ಕೆ ಏನಾದರೂ ಅರ್ಜಿಯನ್ನು ಸಲ್ಲಿಸಿದ್ದಾರೆಯೇ? ಅದರ ಬಗ್ಗೆ ಏನಾದರೂ ಮಾಹಿತಿ ಇದೆಯೇ ಎಂಬುದು ಬೇಕು.

ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):- ಮಾನ್ಯ ಸಭಾಪತಿಯವರೇ, ನನಗೆ ಮಾನ್ಯ ಸದಸ್ಯರ ಈ ಪ್ರಶ್ನೆ ಮತ್ತು ಮಾಹಿತಿ ಇಲ್ಲ. ನಾನು ಅದರ ಬಗ್ಗೆ ಮಾಹಿತಿ ತರಿಸಿಕೊಂಡು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನನ್ನದು ಒಂದು ಉಪಪ್ರಶ್ನೆ ಏನೆಂದರೆ, ಈಗ ಮುಚ್ಚಲ್ಪಟ್ಟಿರುವಂತಹ ಉದ್ಯಮಗಳ ಪಟ್ಟಿಯಲ್ಲಿ ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ಎಂದು ಇದೆ. ನಾನು ಇದನ್ನು ಸರ್ಕಾರದ ಗಮನಕ್ಕೆ ತರುವಂತಹ ಪ್ರಯತ್ನ ಮಾಡುತ್ತೇನೆ. ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ಎಂದು ಮಾಡಿದ್ದರು. ಈ ಹಿಂದೆ ಇಡೀ ರಾಜ್ಯಕ್ಕೆ food process ಮಾಡಿ, ಅಂಗನವಾಡಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇತ್ಯಾದಿಗಳಿಗೆ material ಗಳನ್ನು ಸರಬರಾಜು ಮಾಡುವುದಕ್ಕೋಸ್ಕರ ಬಹಳ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದಂತಹ ಸಂಸ್ಥೆ. ಲಾಭ ಬರುತ್ತಿದ್ದಂಹ ಈ ಸಂಸ್ಥೆಯನ್ನು ಯಾವುದೋ ಕಾರಣಕ್ಕೋಸ್ಕರ third party ಯಿಂದ purchase ಮಾಡಬೇಕೆಂದು, ಆ ಸಂಸ್ಥೆಯನ್ನೇ ರಾಜ್ಯದ ಎಲ್ಲಾ ಕಡೆಗಳಲ್ಲಿ ಮುಚ್ಚಿ ಹಾಕಿದ್ದಾರೆ. ಅದರಲ್ಲೂ ವಿಶೇಷವಾಗಿ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಅದು 35 ವರ್ಷಗಳ ಹಿಂದೆ ಸ್ಥಾಪನೆಯಾಗಿದ್ದಂತಹ ಕೈಗಾರಿಕೆ. ನಾನು ಮಾನ್ಯ ಸಚಿವರು ಮತ್ತು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಯಾವ ಕೈಗಾರಿಕೆ mismanagement ನಿಂದ ಬಂದ್ ಆಗಿವೆ, ಆ mismanagement ನಿಂದ ಬಂದ್ ಆಗಿರುವಂಥದ್ದಕ್ಕೆ ಸರ್ಕಾರ relook ಮಾಡಬೇಕು. ಮತ್ತೊಂದು ಬಾರಿ ಸರ್ಕಾರ ಆ ಕಡೆಗೆ ಗಮನ ಕೊಡಬೇಕು. ಅದು ಕೆಲವರ ಕಾರಣಕ್ಕೋಸ್ಕರ close ಆಗಿಲ್ಲ. ಅದನ್ನು ಬೇಕು ಎಂತಲೆ ಮುಚ್ಚುವಂತಹ ಕೆಲಸ ಮಾಡಿರುವಂಥದ್ದು ಆಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಚರ್ಚೆ ಮಾಡಿ, ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಈಶ್ವರ ಬಿ, ಖಂಡ್ರೆ:– ಮಾನ್ಯ ಸಭಾಪತಿಯವರೇ, ಈಗಾಗಲೇ ಸುಮಾರು 16 ಕಂಪನಿಗಳು ಬಹಳಷ್ಟು ನಷ್ಟದಲ್ಲಿವೆ. ಇವತ್ತು ಅವುಗಳಿಂದ ಯಾವುದೇ ರೀತಿಯ ಉಪಯೋಗವಾಗುವುದಿಲ್ಲ ಎಂದು ಅದರ ಬಗ್ಗೆ ತೀರ್ಮಾನ ಮಾಡಿ, ಅವುಗಳನ್ನು ಈಗಾಗಲೇ ಮುಚ್ಚಲ್ಪಟ್ಟಿದೆ. ಅದನ್ನು ಹೊರತುಪಡಿಸಿ ಯಾವ 34 ಕಂಪನಿಗಳು ನಷ್ಟದಲ್ಲಿವೆ ಅದನ್ನು ಪುನಶ್ಚೇತನಗೊಳಿಸುವ ಬಗ್ಗೆ ಮತ್ತು ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನಪಡುತ್ತೇವೆ.

ಶ್ರೀ ಶರವಣ.ಟಿ.ಎ:– ಮಾನ್ಯ ಸಭಾಪತಿಯವರೇ, ನಾನು ಕೇಳಿದ ವಿಷಯದ ಬಗ್ಗೆ ಮಾಹಿತಿ.

ಶ್ರೀ ಈಶ್ವರ ಬಿ. ಖಂಡ್ರೆ:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ವಿಷಯದ ಬಗ್ಗೆ ಮಾಹಿತಿ ಇಲ್ಲ. ಅದರ ಮಾಹಿತಿ ತರಿಸಿಕೊಂಡು, ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 239
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 06.03.2025 **(ಒಳಾಡಳಿತ ಇಲಾಖೆಯಿಂದ ವರ್ಗಾವಣೆಗೊಂಡಿರುತ್ತದೆ)**
ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು.

	ಪ್ರಶ್ನೆ	ಉತ್ತರ
ಅ)	ರಾಜ್ಯದ ಬೃಹತ್ ಮತ್ತು ಇತರ ನಗರ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟು ಅವಧಿಯನ್ನು ನಿಗಧಿಪಡಿಸಲಾಗಿದೆಯೇ: ನಿಗಧಿಪಡಿಲಾಗಿದ್ದರೆ ಯಾವ ಯಾವ ನಗರಗಳಲ್ಲಿ ಗರಿಷ್ಠ ಎಷ್ಟು ಸಮಯದವರೆಗೆ ವ್ಯಾಪಾರ ವಹಿವಾಟು ನಡೆಸಬಹುದು: (ಎಷ್ಟು ಗಂಟೆಯಿಂದ ಎಷ್ಟು ಗಂಟೆಗಳವರೆಗೆ ಎಂಬ ಮಾಹಿತಿ ಸಹಿತ ವಿವರ ನೀಡುವುದು)	2024-25 ನೇ ಸಾಲಿನ ಆಯ-ವ್ಯಯ ಭಾಷಣ ಕಂಡಿಕೆ 269 ರಲ್ಲಿ ಘೋಷಿಸಲಾದಂತೆ ರಾಜ್ಯದ ಬೃಹತ್ ಮತ್ತು ಇತರ ನಗರ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟು ಅವಧಿಯನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ/94/ಎಂಎನ್ಇ/2024. ದಿನಾಂಕ: 23-08-2024 ರಲ್ಲಿ ಬೆಂಗಳೂರು ಹಾಗೂ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವಾಣಿಜ್ಯ ವ್ಯಾಪಾರದ ದೃಷ್ಟಿಯಿಂದ ರಾತ್ರಿಯ ವೇಳೆ ವ್ಯಾಪಾರ-ವಹಿವಾಟಿನ ನಿರ್ಭಂದಕ್ಕೆ ಬೆಳಗಿನ ಜಾವ 1.00 ಗಂಟೆಯವರೆಗೆ ವಿನಾಯತಿ ನೀಡಿ ಆದೇಶಿಸಲಾಗಿರುತ್ತದೆ. **(ಅನುಬಂಧದಲ್ಲಿ ನೀಡಿದೆ)**
ಆ)	ಈಗಾಗಲೇ ಸರ್ಕಾರ ನಿಗಧಿಪಡಿಸಿರುವ ವ್ಯಾಪಾರ ವಹಿವಾಟು ಅವಧಿಯ (duration) ಮಾನದಂಡಗಳು ರಾಜ್ಯದ ಸಣ್ಣ ನಗರಗಳಿಗೆ ಅನ್ವಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದ ಹಿನ್ನಲೆಯಲ್ಲಿ ಈ ನಿಯಮಗಳನ್ನು ಗೃಹ ಇಲಾಖೆ ಮಾರ್ಪಡಿಸಲು ವಹಿಸಲಾದ ಕ್ರಮಗಳೇನು	ಸರ್ಕಾರದ ಆದೇಶ ಸಂಖ್ಯೆ: ನಅಇ/94/ಎಂಎನ್ಇ/2024. ದಿನಾಂಕ: 23-08-2024 ರಲ್ಲಿ ಸರ್ಕಾರ ನಿಗಧಿಪಡಿಸಿರುವ ವ್ಯಾಪಾರ ವಹಿವಾಟು ಅವಧಿಯ (duration) ಮಾನದಂಡಗಳು ರಾಜ್ಯದ ಮಹಾನಗರ ಪಾಲಿಕೆಗಳಿಗೆ ಮಾತ್ರ ಅನ್ವಯವಾಗುತ್ತದೆ. ರಾಜ್ಯದ ಸಣ್ಣ ನಗರಗಳಿಗೆ ಅನ್ವಯಿಸುವುದಿಲ್ಲ.
ಇ)	ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ದೇವಸ್ಥಾನ ಸಂಬಂಧಿತ (ಟೆಂಪಲ್ ಟೋರಿಸಂ) ಹಾಗೂ ಇತರ ಪ್ರವಾಸೋದ್ಯಮ ಅವಕಾಶಗಳ ಹಿನ್ನಲೆಯಲ್ಲಿ ಸಾರ್ವಜನಿಕ ಸಾರಿಗೆ ಸಹಿತ ವ್ಯಾಪಾರ ವಹಿವಾಟು ಅವಧಿಯನ್ನು ವಿಸ್ತರಿಸುವ ಬಗ್ಗೆ ಗೃಹ ಇಲಾಖೆ ಸಂಬಂಧಪಟ್ಟ ಇತರ ಇಲಾಖೆಗಳೊಂದಿಗೆ ಸಮಾಲೋಚನೆ ನಡೆಸಿದೆಯೇ:	ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ದೇವಸ್ಥಾನ ಸಂಬಂಧಿತ (ಟೆಂಪಲ್ ಟೋರಿಸಂ) ಹಾಗೂ ಇತರ ಪ್ರವಾಸೋದ್ಯಮ ಅವಕಾಶಗಳ ಹಿನ್ನಲೆಯಲ್ಲಿ ಸಾರ್ವಜನಿಕ ಸಾರಿಗೆ ಸಹಿತ ವ್ಯಾಪಾರ ವಹಿವಾಟು ಅವಧಿಯನ್ನು ವಿಸ್ತರಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ)	ಸದರಿ ಜಿಲ್ಲೆಗಳಲ್ಲಿ ಸುರಕ್ಷತೆ, ಭದ್ರತೆ ಹಾಗೂ ಕಾನೂನು ಸುವ್ಯವಸ್ಥೆ ನೆಪದಲ್ಲಿ ನಿಗದಿತ ಅವಧಿಯ ನಂತರ ವ್ಯಾಪಾರ ವಹಿವಾಟುಗಳನ್ನು ಪೊಲೀಸರು ಬಲವಂತವಾಗಿ ಬಂದುಮಾಡಿಸುತ್ತಿರುವ ಬಗ್ಗೆ ವ್ಯಾಪಾರೋದ್ಯಮಿಗಳು, ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳು ನೀಡಿದ ಮನವಿಗಳ ಕುರಿತು ಸರ್ಕಾರ ಯಾವ ರೀತಿ ಕ್ರಮವಹಿಸುತ್ತಿದೆ?	ಈ ಬಗ್ಗೆ ವ್ಯಾಪಾರೋದ್ಯಮಿಗಳಿಂದಾಗಲಿ ಸಾರ್ವಜನಿಕರಿಂದಾಗಲಿ, ಜನ ಪ್ರತಿನಿಧಿಗಳಿಂದಾಗಲಿ ಯಾವುದೇ ಮನವಿಗಳು ಸ್ವೀಕೃತವಾಗಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2024-25ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 269ರಲ್ಲಿ ಘೋಷಿಸಿರುವಂತೆ ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ ರಾತ್ರಿಯ ವೇಳೆ ವ್ಯಾಪಾರ ವಹಿವಾಟಿನ ತೆರೆದಿರುವ ಅವಧಿಯನ್ನು ಬೆಳಗಿನ ಜಾವ 1.00 ಗಂಟೆಯವರೆಗೆ ವಿಸ್ತರಿಸುವ ಬಗ್ಗೆ.

ಓದಲಾಗಿದೆ:
1. 2024-25ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 269.
2. ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ 1976.
3. ಕರ್ನಾಟಕ ಅಬಕಾರಿ(ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967
4. ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961.
5. ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: E-LD 4 LET 2019, ದಿನಾಂಕ: 02.01.2021.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ದಿನಾಂಕ:06.07.2024.
7. ಸರ್ಕಾರದ ಆದೇಶ ಸಂಖ್ಯೆ: ನಅಇ 298 ಎಂಎನ್‌ಮೈ 2024, ದಿನಾಂಕ:29.07.2024 ಮತ್ತು ತಿದ್ದುಪಡಿ ಆದೇಶ ದಿನಾಂಕ:06.08.2024.

****

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ 2024-25ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 269 ರಲ್ಲಿ "ಬೆಂಗಳೂರು ಹಾಗೂ 10 ಮಹಾನಗರ ಪಾಲಿಕೆಗಳಲ್ಲಿ ವಾಣಿಜ್ಯ -ವ್ಯಾಪಾರದ ದೃಷ್ಟಿಯಿಂದ ರಾತ್ರಿಯ ವೇಳೆ ವ್ಯಾಪಾರ-ವಹಿವಾಟಿನ ಮೇಲಿನ ನಿರ್ಬಂಧವನ್ನು ಬೆಳಗಿನ ಜಾವ ಒಂದು ಗಂಟೆಯವರೆಗೆ (01:00 am) ವಿಸ್ತರಿಸಲಾಗುವುದು" ಎಂದು ಘೋಷಿಸಲಾಗಿದೆ.

ಮೇಲೆ (2) ರಲ್ಲಿ ಓದಲಾದ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 ರ ಕಲಂ 378(b) ರಲ್ಲಿ ಮುನ್ಸಿಪಲ್ ಕಮೀಷನರ್‌ರವರಿಗೆ ಮಾರ್ಕೆಟ್, ಬಜಾರ್ ಇತ್ಯಾದಿಗಳ ಮೇಲಿನ ಪರವಾನಗಿ, ವೇಳೆ ನಿಗದಿ, ದಿನಗಳ ನಿರ್ಧರಣದ ಅಧಿಕಾರವನ್ನು ನೀಡಲಾಗಿರುತ್ತದೆ.

ಮೇಲೆ (3) ರಲ್ಲಿ ಓದಲಾದ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 4 ರ ಅಡಿಯಲ್ಲಿ ಅಬಕಾರಿ ಆಯುಕ್ತರಿಗೆ ಸದರಿ ನಿಯಮಗಳ ಅಡಿ ಲೈಸೆನ್ಸ್ ಪಡೆದ ಬಾರ್ & ರೆಸ್ಟೋರೆಂಟ್, ಹೋಟೆಲ್‌ಗಳು ಇತ್ಯಾದಿಗಳು ತೆರೆದಿರುವ ಅವಧಿಯಲ್ಲಿ ನಿಗದಿಪಡಿಸಲು ಅಧಿಕಾರವಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲೆ (4) ರಲ್ಲಿ ಓದಲಾದ ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ ಅಧಿನಿಯಮ, 1961 ರ ಕಲಂ 11 ರಲ್ಲಿ ಸರ್ಕಾರದಿಂದ ಅಧಿಸೂಚನೆ ಹೊರಡಿಸಿ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು ತೆರೆದಿರುವ ಅವಧಿಯನ್ನು ನಿಗದಿಪಡಿಸಲು ಅವಕಾಶವಿರುತ್ತದೆ.

ಅದರಂತೆ ಮೇಲೆ (5) ರಲ್ಲಿ ಓದಲಾದ ದಿನಾಂಕ: 02-01-2021 ರ ಅಧಿಸೂಚನೆಯಲ್ಲಿ ಕಾರ್ಮಿಕ ಇಲಾಖೆಯು ಹತ್ತು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ನೌಕರರನ್ನು ಹೊಂದಿದ ರಾಜ್ಯದಲ್ಲಿನ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು ದಿನದ 24 ಗಂಟೆಯೂ ತೆರೆದಿರಲು ಅವಕಾಶವನ್ನು ಕಲ್ಪಿಸಿರುತ್ತದೆ.

ಮೇಲೆ (6)ರಲ್ಲಿ ಓದಲಾದ ದಿನಾಂಕ:06.07.2024ರ ಸಭಾ ನಡವಳಿಯಲ್ಲಿ 2024-25ನೇ ಸಾಲಿನಲ್ಲಿ ಆಯವ್ಯಯ ಭಾಷಣದ ಕಂಡಿಕೆ 269ರಲ್ಲಿ ಬೆಂಗಳೂರು ಹಾಗೂ 10 ಮಹಾನಗರ ಪಾಲಿಕೆಗಳಲ್ಲಿ ವಾಣಿಜ್ಯ ವ್ಯಾಪಾರದ ದೃಷ್ಟಿಯಿಂದ ರಾತ್ರಿಯ ವೇಳೆ ವ್ಯಾಪಾರ ವಹಿವಾಟಿನ ಮೇಲಿನ ನಿರ್ಬಂಧವನ್ನು ಬೆಳಗಿನ ಜಾವ ಒಂದು ಗಂಟೆಯವರೆಗೆ(1.00 am) ವಿಸ್ತರಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯಿಂದ ಸರ್ಕಾರಿ ಆದೇಶವೊಂದನ್ನು ಹೊರಡಿಸಲಾಗುವುದು ಎಂದು ನಿರ್ಣಯಿಸಲಾಗಿರುತ್ತದೆ.

ಅದರಂತೆ, ಮೇಲೆ (7)ರಲ್ಲಿ ಓದಲಾದ, ಸರ್ಕಾರದ ಆದೇಶ ಮತ್ತು ತಿದ್ದುಪಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಣಿಜ್ಯ-ವ್ಯಾಪಾರದ ದೃಷ್ಟಿಯಿಂದ ರಾತ್ರಿಯ ವೇಳೆ ವ್ಯಾಪಾರ-ವಹಿವಾಟಿನ ಮೇಲಿನ ನಿರ್ಬಂಧಕ್ಕೆ ಬೆಳಗಿನ ಜಾವ ಒಂದು ಗಂಟೆಯವರೆಗೆ (01:00 am) ವಿನಾಯಿತಿ ನೀಡಿ ಆದೇಶಿಸಲಾಗಿರುತ್ತದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಣಿಜ್ಯ-ವ್ಯಾಪಾರದ ದೃಷ್ಟಿಯಿಂದ ರಾತ್ರಿಯ ವೇಳೆ ವ್ಯಾಪಾರ-ವಹಿವಾಟಿನ ಮೇಲಿನ ನಿರ್ಬಂಧಕ್ಕೆ ಬೆಳಗಿನ ಜಾವ ಒಂದು ಗಂಟೆಯವರೆಗೆ (01:00 am) ವಿನಾಯಿತಿ ನೀಡಿ ಆದೇಶಿರುವಂತೆ ರಾಜ್ಯದ ಇತರೆ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವಾಣಿಜ್ಯ-ವ್ಯಾಪಾರದ ದೃಷ್ಟಿಯಿಂದ ರಾತ್ರಿಯ ವೇಳೆ ವ್ಯಾಪಾರ-ವಹಿವಾಟಿನ ಮೇಲಿನ ನಿರ್ಬಂಧಕ್ಕೆ ವಿನಾಯಿತಿ ನೀಡುವುದು ಅವಶ್ಯವೆಂದು ಮನಗಂಡು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 94 ಎಂಎನ್‌ಇ 2024,
ಬೆಂಗಳೂರು, ದಿನಾಂಕ: 23.08.2024

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2024-25ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ 269 ರಲ್ಲಿ ಘೋಷಿಸಲಾದಂತೆ ರಾಜ್ಯದ ಎಲ್ಲಾ 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವಾಣಿಜ್ಯ ವ್ಯಾಪಾರದ ದೃಷ್ಟಿಯಿಂದ ರಾತ್ರಿಯ ವೇಳೆ ವ್ಯಾಪಾರ-ವಹಿವಾಟಿನ ಮೇಲಿನ ನಿರ್ಬಂಧಕ್ಕೆ, ಬೆಳಗಿನ ಜಾವ ಒಂದು ಗಂಟೆಯವರೆಗೆ (01:00 am) ವಿನಾಯಿತಿ ನೀಡಿ ಆದೇಶಿಸಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಆದೇಶವನ್ನು ದಿನಾಂಕ:06.07.2024ರಂದು ನಡೆದ ಸಭೆಯಲ್ಲಿ ಆರ್ಥಿಕ ಇಲಾಖೆ ನೀಡಿದ ಸಹಮತಿ ಹಾಗೂ ಯೋಜನಾ ಇಲಾಖೆಯು ಹಿಂಬರಹ ಸಂಖ್ಯೆ: PDS-DPD/54/2024, ದಿನಾಂಕ:02.07.2024 ರಲ್ಲಿ ನೀಡಿರುವ ಅಭಿಪ್ರಾಯದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ನಾಗೇಶ್ ಕೆ.) 23/08/2024
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
(ಮಹಾನಗರಪಾಲಿಕೆ-2)
23/08/24

ಇವರಿಗೆ:

ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆ ಉತ್ತರದಲ್ಲಿ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವಾಣಿಜ್ಯ ವ್ಯಾಪಾರದ ದೃಷ್ಟಿಯಿಂದ ರಾತ್ರಿ ವೇಳೆ 1.00 ಗಂಟೆಯವರೆಗೆ ವಿನಾಯಿತಿ ನೀಡಿ ಆದೇಶಿಸಲಾಗಿರುತ್ತದೆ ಎಂದು ಹೇಳಿದ್ದಾರೆ. ಅದಕ್ಕೆ ನಾನು ಮಾನ್ಯ ಸಚಿವರಿಗೆ ಏನು ಹೇಳುತ್ತೇನೆಂದರೆ, ಕೇವಲ ನಗರಪಾಲಿಕೆಗಳು ಮಾತ್ರವಲ್ಲ, ಅದನ್ನು ನಗರಸಭೆಯ ವ್ಯಾಪ್ತಿಯಲ್ಲಿ 1.00 ಗಂಟೆಯವರೆಗೆ ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮತ್ತೆ ನನ್ನ ಎರಡನೆ ಪ್ರಶ್ನೆ ಏನೆಂದರೆ, 'Temple Tourism' ಗಳಿಗೆ ಮತ್ತು ಪ್ರವಾಸೋದ್ಯಮ ಅವಕಾಶಗಳ ಹಿನ್ನೆಲೆ ಇರುವುದರಿಂದ ಅವಧಿಯನ್ನು ವಿಸ್ತರಿಸಿದ್ದಾರೆಯೇ ಎಂದು ಕೇಳಿದ್ದೇನೆ. ಅದಕ್ಕೆ ಉತ್ತರದಲ್ಲಿ ಇಲ್ಲವೆಂದು ಹೇಳಿದ್ದಾರೆ. ನಾನು ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಅದರಲ್ಲೂ ಮುಖ್ಯವಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ 'Temple Tourism' ಎಂದರೆ, ಅದು ಕೇವಲ ಟೂರಿಸಂ ಅಲ್ಲ. ಅಲ್ಲಿ ದೇವಸ್ಥಾನಗಳು ಮತ್ತು ದೈವಸ್ಥಾನಗಳು ಸಹ ಇರುತ್ತವೆ. ಅಲ್ಲಿ ನಡೆಯುವಂತಹ ಎಲ್ಲಾ ರೀತಿಯ ಕಾರ್ಯಕ್ರಮಗಳು ಸಹ ರಾತ್ರಿ ವೇಳೆ ನಡೆಯುವಂಥದ್ದು. ಅದು ಯಕ್ಷಗಾನ ಇರಬಹುದು, ದೈವಸ್ಥಾನಗಳಿಗೆ ನರ್ತನ ಕೊಡುವುದು ಆಗಬಹುದು. ಇವುಗಳೆಲ್ಲಾ ರಾತ್ರಿ ವೇಳೆ ನಡೆಯುವಂಥದ್ದು. ಇವತ್ತು ಅದಕ್ಕೋಸ್ಕರ ಅಲ್ಲಿ ಏನಾಗಿದೆ ಎಂದರೆ, ಅಲ್ಲಿ ಮೈಕ್ ಹಾಕಿದರೆ 10.00 ಗಂಟೆಗೆ ಬಂದು ಅದನ್ನು ಬಂದ್ ಮಾಡುತ್ತಾರೆ. ಅಲ್ಲಿ ಅವರು ಅದನ್ನು ಮಾಡಬಾರದು. ಅದು especially ದೈವಸ್ಥಾನ ಮತ್ತು ದೇವಸ್ಥಾನಗಳಲ್ಲಿ ನಡೆಯುವಂಥದ್ದು. ಯಾವುದೋ ಜಾತಿ ಮತ್ತು ಧರ್ಮವನ್ನು ಗುರಿಯನ್ನಾಗಿಟ್ಟುಕೊಂಡು ಅಲ್ಲಿ ಈ ವಹಿವಾಟನ್ನು ಮಾಡಬಾರದು ಎಂದು ಹೇಳುತ್ತಿದ್ದಾರೆ. ಇದನ್ನು ಸಹ ಮಾನ್ಯ ಸಚಿವರು ಗಮನದಲ್ಲಿಟ್ಟುಕೊಳ್ಳಬೇಕು. ಅದೇ ರೀತಿ ಪೊಲೀಸ್ ಅಧಿಕಾರಿಗಳು ರಾತ್ರಿ 10.00 ಗಂಟೆಗೆ ಬಂದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ಬಂದ್ ಮಾಡುವಂಥದ್ದನ್ನು ನಿಲ್ಲಿಸಬೇಕು. ಇದಕ್ಕೆ ಮಾನ್ಯ ಸಚಿವರು ಗಮನಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ, ರಾಜ್ಯದ ಬೃಹತ್ ಮತ್ತು ಇತರ ನಗರ ಪ್ರದೇಶಗಳಲ್ಲಿ ಎಷ್ಟು ಗಂಟೆಯವರೆಗೆ ವ್ಯಾಪಾರ ವಹಿವಾಟುಗಳನ್ನು ನಡೆಸುವುದಕ್ಕೆ ಸರ್ಕಾರದಿಂದ ಅನುಮತಿ ಇದೆಯೇ ಎಂದು ಕೇಳಿದ್ದಾರೆ. ನಾವು ಅದಕ್ಕೆ 2024-25ನೇ ಸಾಲಿನ ಬಜೆಟ್ ಭಾಷಣದಲ್ಲಿ ಹೇಳಿದ್ದೆವು. ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳಲ್ಲಿ ರಾತ್ರಿ 1.00 ಗಂಟೆಯವರೆಗೆ ವ್ಯಾಪಾರ ವಹಿವಾಟುಗಳಿಗೆ ಅನುಮತಿ ಇದೆ ಎಂದು ತಿಳಿಸಿದ್ದೇವೆ. ಮುಂದುವರೆದು ಮಾನ್ಯ ಸದಸ್ಯರು ಇದು ಸಣ್ಣ ನಗರಗಳಿಗೆ ಅನ್ವಯವಾಗುತ್ತದೆಯೆ ಎಂದು ಕೇಳಿದ್ದಾರೆ. ಇದಕ್ಕೆ ನಾವು ಅನ್ವಯವಾಗುವುದಿಲ್ಲವೆಂದು ಹೇಳಿದ್ದೇವೆ. ಅದು ಸತ್ಯವಿದೆ. ಅದೇ ರೀತಿ ಮುಂದುವರೆದು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ 'Temple Tourism' ರಾತ್ರಿಯವರೆಗೆ ನಡೆಯುತ್ತದೆ. ಇದರ ಅನುಮತಿಗೆ ಸಂಬಂಧಪಟ್ಟಂತೆ ಸರ್ಕಾರದಿಂದ ಏನಾದರೂ ಪ್ರಸ್ತಾವನೆ ಇದೆಯೆ ಎಂದು ಕೇಳಿದ್ದಾರೆ. ಇದುವರೆಗೆ ಸರ್ಕಾರದ ಮುಂದೆ ಆ ರೀತಿಯ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಜನಪ್ರತಿನಿಧಿಗಳು ಎಲ್ಲರೂ ಸಭೆ ಸೇರಿ, ಇದನ್ನು ಸಣ್ಣ ನಗರಗಳಿಗೂ ಸಹ ಈ ಒಂದು ಸಮಯ ವಿಸ್ತರಣೆಯನ್ನು ಕೇಳಿ, ಅದಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ ಪಕ್ಷದಲ್ಲಿ, ನಾನು ಇದಕ್ಕೆ ಸಂಬಂಧಪಟ್ಟಂತೆ ಅದರಲ್ಲೂ ಮುಖ್ಯವಾಗಿ ಪೋಲೀಸ್ ಇಲಾಖೆಯವರ ಜೊತೆ ಮಾತನಾಡಬೇಕಾಗುತ್ತದೆ. ಪೋಲೀಸ್ ಇಲಾಖೆಯವರ ಜೊತೆ ಕೂಡಿಕೊಂಡು ಇನ್ನು ಬೇರೆ ಬೇರೆ ಯಾವ್ಯಾವ ಇಲಾಖೆಗಳು ಇವೆ, ಆ ಎಲ್ಲಾ ಇಲಾಖೆಗಳ ಜೊತೆ ಸಮಾಲೋಚನೆ ಮಾಡಿ, ಜನಪ್ರತಿನಿಧಿಗಳ ಜೊತೆಯಲ್ಲಿಯೂ ಸಹ ಸಭೆ ಮಾಡಿ, ನಾನು ಇದನ್ನು ಮಾಡುವುದಕ್ಕೆ ಪ್ರಯತ್ನಪಡುತ್ತೇನೆ.

ಶ್ರೀ ಮಂಜುನಾಥ್ ಭಂಡಾರಿ:- ಮಾನ್ಯ ಸಭಾಪತಿಯವರೇ, ಈಗ ಇದು ಎಲ್ಲಾ ಪತ್ರಿಕೆಗಳಲ್ಲೂ ವರದಿ ಸಹ ಬರುತ್ತಿದೆ. ಅಂದರೆ, ರಾತ್ರಿ 7.00 ಗಂಟೆಯ ನಂತರ ಕರಾವಳಿ ಸ್ತಬ್ಧ ಏಕೆ ಎಂದು. ಅದಕ್ಕೆ ನಾನು ಮಾನ್ಯ ಸಚಿವರಿಗೆ ಏನು ಹೇಳುತ್ತೇನೆಂದರೆ, ಮಾನ್ಯ ಸಚಿವರೆ ಜನಪ್ರತಿನಿಧಿಗಳ ಒಂದು ಸಭೆಯನ್ನು ಕರೆಯಲಿ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಇರಬಹುದು, ಉತ್ತರ ಕನ್ನಡ ಜಿಲ್ಲೆ ಇರಬಹುದು. ಕರಾವಳಿ ಜಿಲ್ಲೆಗಳ ಸಭೆಯನ್ನು ಕರೆದು, ಅದರಲ್ಲಿ ನಗರಪಟ್ಟಣಗಳಲ್ಲಿ ಕೇವಲ ನಗರಪಾಲಿಕೆ ಎಂದು ಹೇಳಿದರೆ, ಮಂಗಳೂರು ಸಿಟಿ ಮಾತ್ರ ಇದರ ವ್ಯಾಪ್ತಿಗೆ ಬರುವಂಥದ್ದು. ಇದು ಕೇವಲ ಮಂಗಳೂರು ಸಿಟಿಗೆ ಮಾತ್ರವಲ್ಲ, ಇಡೀ ಎರಡೂ ಜಿಲ್ಲೆಗಳಿಗೆ ಆಗಬೇಕು. ಅದರಲ್ಲೂ ರಾತ್ರಿ ವೇಳೆಯಲ್ಲಿ ಯಕ್ಷಗಾನ ನಡೆಯುವುದಕ್ಕೆ ಯಾವುದೇ ರೀತಿಯ ತೊಂದರೆಯನ್ನು ಕೊಡಬಾರದು. ಮತ್ತೆ ದೇವಸ್ಥಾನದಲ್ಲಿ ನಡೆಯುವಂತಹ ಕಾರ್ಯಕ್ರಮಗಳಿಗೆ ತೊಂದರೆ ಕೊಡಬಾರದು. ಅಲ್ಲಿ ಪೋಲೀಸ್‌ನವರು 10.00 ಗಂಟೆಯ ನಂತರ ಯಾವುದೇ ಕಾರ್ಯಕ್ರಮ ನಡೆಯುವುದಕ್ಕೆ ಬಿಡುತ್ತಿಲ್ಲ. ಇದು ಆಗಬಾರದು ಎನ್ನುವುದು ನನ್ನದು ಮನವಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಿ.ಎಸ್.ಸುರೇಶ:– ಮಾನ್ಯ ಸಭಾಪತಿಯವರೇ, ಅದಕ್ಕೆ ನನ್ನ ಸಹಮತ ಇದೆ. ಆದರೆ, ಪತ್ರಿಕೆಗಳಲ್ಲಿ ಬಂದ ಕೂಡಲೇ ಪ್ರಸ್ತಾವನೆ ಬಂದಿದೆ ಎಂದು ಅರ್ಥವಲ್ಲ. ಜನಪ್ರತಿನಿಧಿಗಳಾದ ಎಂ.ಎಲ್.ಎ., ಎಂ.ಎಲ್.ಸಿ., ಮತ್ತು ಮಂತ್ರಿಗಳು ಇದ್ದಾರೆ. ಇವರೆಲ್ಲರೂ ಸಹ ಒಟ್ಟಿಗೆ ಒಂದು ಸಭೆಯನ್ನು ಮಾಡಿ, ಏನಾದರೂ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟರೆ, definite ಆಗಿ ಅದನ್ನು ಸಣ್ಣ ನಗರಗಳಿಗೂ ಸಹ ವಿಸ್ತರಣೆ ಮಾಡುತ್ತೇವೆ.

ಉಪ ಸಭಾಪತಿಯವರು:– ಮಾನ್ಯ ಸಚಿವರೆ, ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿಯವರು ಸ್ವಲ್ಪ ತೊಂದರೆಯಾಗದ ರೀತಿ ನೋಡಿಕೊಳ್ಳಿ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್.ಸುರೇಶ:– ಮಾನ್ಯ ಸಭಾಪತಿಯವರೇ, ಅದಕ್ಕೆ ಪ್ರಸ್ತಾವನೆ ಬರಲಿ. ಅವರು ಯಾವಾಗ ಹೇಳುತ್ತಾರೋ, ಆಗ ಮೀಟಿಂಗ್ ಕರೆದು ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನಪಡುತ್ತೇನೆ.

ಶ್ರೀ ಮಂಜುನಾಥ್ ಭಂಡಾರಿ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮೀಟಿಂಗ್ ಕರೆಯುವಂತೆ ತಿಳಿಸಿ.

ಶ್ರೀ ಬಿ.ಎಸ್.ಸುರೇಶ:– ಮಾನ್ಯ ಸಭಾಪತಿಯವರೇ, ನಾನು ಅದನ್ನು ತಮಗೆ ಹೇಳಿದ್ದೇನೆ.

ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಈಶ್ವರ ಬಿ. ಖಂಡ್ರೆ:– (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):– ಮಾನ್ಯ ಸಭಾಪತಿಯವರೇ, ದಿನಾಂಕ 11ನೇ ಮಾರ್ಚ್, 2025, ಸಮೂಹ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 105 ಪ್ರಶ್ನೆಗಳ ಪೈಕಿ 58 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಸಭಾಪತಿಯವರು:– ಮಂಡಿಸಲಾಯಿತು.

(ಉತ್ತರಗಳನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3. ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸರ್ಕಾರದಿಂದ ಸಕಾಲದಲ್ಲಿ ಉತ್ತರಗಳು ಬಾರದಿರುವ ಕುರಿತು.

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ, ಕಳೆದ ವಾರ ನನ್ನ ಪ್ರಶ್ನೆಯನ್ನು ತಡೆಹಿಡಿದು, ಮುಂದಿನ ಮಂಗಳವಾರ ಉತ್ತರ ಕೊಡಿಸುತ್ತೇನೆಂದು ತಾವು ಹೇಳಿದ್ದೀರಿ. ಅದು ಮಾನ್ಯ ಮುಜರಾಯಿ ಇಲಾಖೆಯ ಸಚಿವರನ್ನು ಕುರಿತು ಕೇಳಿದಂತಹ ಪ್ರಶ್ನೆ. ಆ ಪ್ರಶ್ನೆಯನ್ನು ಕಳೆದ ಮಂಗಳವಾರದಂದು ಕೇಳಿರುವುದು. ಅದಕ್ಕೆ ಉತ್ತರವನ್ನು ಈ ಮಂಗಳವಾರ ಕೊಡಿಸುತ್ತೇನೆಂದು ಹೇಳಿದ್ದರು.

ಉಪ ಸಭಾಪತಿಯವರು:– ಮಾನ್ಯ ಸಭಾನಾಯಕರೆ, ಅದಕ್ಕೆ ಕೂಡಲೇ ಉತ್ತರವನ್ನು ಕೊಡಿಸುವಂಥದ್ದು ಆಗಬೇಕು.

ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಡಿಸುತ್ತೇವೆ.

ಉಪ ಸಭಾಪತಿಯವರು:– ಆಯಿತು.

ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ,...

ಉಪ ಸಭಾಪತಿಯವರು:– ಮಾನ್ಯ ಎಸ್.ಎಲ್.ಭೋಜೇಗೌಡರೆ, ತಾವು ಕುಳಿತುಕೊಳ್ಳಿ.

ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ದಯಮಾಡಿ ಇದೇ ವಿಷಯ. ಈಗ ಮಾನ್ಯ ಸದಸ್ಯರ ವಿಷಯ ಆದಮೇಲೆ ನನ್ನ ವಿಷಯ ಬಂದಿದೆ.

ಉಪ ಸಭಾಪತಿಯವರು:– ಮಾನ್ಯ ಎಸ್.ಎಲ್.ಭೋಜೇಗೌಡರೆ, ತಮ್ಮದು ಏನು ವಿಷಯ ಬಂದಿದೆ?

ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಬೆಳಗಾವಿ ಅಧಿವೇಶನದಲ್ಲಿ 840 ಪ್ರಶ್ನೆಗಳಿಗೆ ಸುಮಾರು 300 ಪ್ರಶ್ನೆಗಳಿಗೆ ಸರ್ಕಾರ ಉತ್ತರ ನೀಡಿಲ್ಲ. ಈಗ ಅಧಿವೇಶನ ಪ್ರಾರಂಭವಾಗಿ ನಾಲ್ಕರಿಂದ ಐದನೇ ದಿನದಿಂದ ನಡೆಯುತ್ತಿದೆ. ಈಗ ನಾವು 415 ಪ್ರಶ್ನೆಗಳನ್ನು ಕೇಳಿದ್ದೇವೆ. ಅದರಲ್ಲಿ 299 ಪ್ರಶ್ನೆಗಳಿಗೆ ಉತ್ತರ ನೀಡಿ. ಇನ್ನೂ 116 ಪ್ರಶ್ನೆಗಳಗ ಉತ್ತರ ಬಂದಿಲ್ಲ. ಈಗ 166 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲವೆಂದರೆ, how do I expect answers from the Government?

ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):– ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಏನೇನು ಪ್ರಶ್ನೆಗಳನ್ನು ಕೇಳಿದ್ದಾರೆ, ಆ ಎಲ್ಲಾ ಪ್ರಶ್ನೆಗಳಿಗೂ ಕೂಡ ಉತ್ತರ ಒದಗಿಸುವಂತಹ ಕೆಲಸ ಮಾಡುತ್ತೇವೆ.

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, ಈಗ 116 ಪ್ರಶ್ನೆಗಳಿಗೆ ಎಷ್ಟು ದಿವಸದಲ್ಲಿ ಉತ್ತರ ಕೊಡುತ್ತಾರೆಂದು ಅದನ್ನು ತಮ್ಮ ಮುಖಾಂತರ ಹೇಳಿಸಿ.

ಉಪ ಸಭಾಪತಿಯವರು:– ಈ ಸದನ ಮುಗಿಯುವುದರೊಳಗೆ ಮಾನ್ಯ ಸದಸ್ಯರ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡಿಸುವಂತಹ ವ್ಯವಸ್ಥೆ ಆಗಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):- ಮಾನ್ಯ ಸಭಾಪತಿಯವರೇ, ಈ ಸದನ ಮುಗಿಯುವುದರ ಒಳಗಾಗಿ ಮಾನ್ಯ ಸದಸ್ಯರ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡಿಸುವಂತಹ ವ್ಯವಸ್ಥೆ ಮಾಡುತ್ತೇವೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(198) 11.03.2025 01.00 LL-AK **(ಉಪ ಸಭಾಪತಿಯವರ ಉಪಸ್ಥಿತಿ)**

4. ನಿಯಮ 58 ಎ ಮೇರೆಗೆ ಶೂನ್ಯವೇಳೆ ಸೂಚನೆಗಳು

ಅ) ವಿಷಯ:- ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೆಟ್ಟಿಂಗ್ ದಂಧೆ ನಡೆಸುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಕುರಿತು.

\- - -

ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:10.03.2025 ರ 'ಪ್ರಜಾಪ್ರಗತಿ' ದಿನಪತ್ರಿಕೆಯಲ್ಲಿ ನಮೂದಾಗಿರುವಂತೆ, ಇನ್ನೇನು ಕೆಲವೇ ದಿನಗಳಲ್ಲಿ ಐಪಿಲ್ ಕ್ರಿಕೆಟ್ ಆರಂಭವಾಗಲಿದ್ದು, ಅದರ ಜೊತೆಗೆ ಬೆಟ್ಟಿಂಗ್ ಭೂತ ಸಹ ತಲೆ ಎತ್ತಲಿರುವುದು ಆತಂಕಕಾರಿ ವಿಷಯ. ಇದರಿಂದ ಅನೇಕರು ತಮ್ಮ ಮನೆ ಮಠಗಳನ್ನು ಕಳೆದುಕೊಂಡು, ಕುಟುಂಬವನ್ನು ಬೀದಿ ಪಾಲು ಮಾಡುವ ಸಂದರ್ಭ ಎದುರಾಗಿದೆ. ಇತ್ತೀಚೆಗೆ ಕೆಲವು ಪುಂಡರು ಟಿಕೇಟ್ ಖರೀದಿಸಿ, ಕ್ರೀಡಾಂಗಣದಲ್ಲಿ ಕುಳಿತು, ಮುಂದೆ ಏನಾಗಲಿದೆ ಎನ್ನುವುದನ್ನು ದೂರವಾಣಿ ಮೂಲಕ ಮಾಹಿತಿ ಕೊಟ್ಟು, ಬೆಟ್ಟಿಂಗ್ ದಂಧೆ ಮಾಡುವುದು ಸರ್ವೇ ಸಾಮಾನ್ಯವಾಗಿಬಿಟ್ಟಿದೆ. ನೇರ ಪ್ರಸಾರದ ಕ್ರಿಕೆಟ್‌ಗೂ, ಟಿವಿಯಲ್ಲಿ ಪ್ರಸಾರವಾಗುವುದಕ್ಕೂ ಕೆಲವು ಸೆಂಕೆಂಡ್‌ಗಳ ಅಂತರವಿರುವುದರಿಂದ, ಬೆಟ್ಟಿಂಗ್ ದಂಧೆಕೋರರು ಇದರ ಅವಕಾಶವನ್ನು ಸಂಪೂರ್ಣವಾಗಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಹಲವು ಯುವಕ-ಯುವತಿಯರು ತಮ್ಮ ಹಣ, ಆಸ್ತಿ ಕಳೆದುಕೊಂಡು ಕುಟುಂಬವನ್ನು ಬೀದಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುತ್ತಾರೆ. ಬೆಟ್ಟಿಂಗ್ ಆಡುವಂತಹವರು ಹೆಚ್ಚಾಗಿ ಕಾಲೇಜು ವಿದ್ಯಾರ್ಥಿಗಳು, ಯುವಕರು, ಕೆಲಸ ಮಾಡುವಂತಹವರು ಐಪಿಎಲ್ ಬೆಟ್ಟಿಂಗ್ ಮೋಹಕ್ಕೆ ಬಲಿಯಾಗುತ್ತಿದ್ದಾರೆ. ಇದರಿಂದ ಅನೇಕ ಕುಟುಂಬಗಳು ಅನಾಥವಾಗಿ, ತಮ್ಮ ಮಕ್ಕಳನ್ನು ಕಳೆದುಕೊಳ್ಳುವಂತಹ ಪ್ರಸಂಗ ಎದುರಾಗಿದೆ. ಇದು ಗ್ರಾಮೀಣ ಭಾಗಕ್ಕೂ ಹಬ್ಬಿ ಕೂಲಿ ನಾಲಿ ಮಾಡಿ ಜೀವನ ನಿರ್ವಹಣೆ ಮಾಡುತ್ತಿರುವ ಕುಟುಂಬಗಳು ಬೆಟ್ಟಿಂಗ್ ದಂಧೆಯಿಂದ ಹಣ ಕಳೆದುಕೊಂಡು ಆರ್ಥಿಕ ಸಂಕಷ್ಟ ಎದುರಿಸುವ ವಾತಾವರಣ ನಿರ್ಮಾಣವಾಗಿದೆ. ಈ ಬೆಟ್ಟಿಂಗ್ ದಂಧೆಯನ್ನು ಹೋಗಲಾಡಿಸಿ, ಯುವಕರ, ಗ್ರಾಮೀಣ ಭಾಗದ ಜನರ ಜೀವನವನ್ನು ಕಾಪಾಡುವ ನಿಟ್ಟಿನಲ್ಲಿ, ಪೊಲೀಸ್ ಇಲಾಖೆ ಎಚ್ಚೆತ್ತುಕೊಂಡು ಬೆಟ್ಟಿಂಗ್ ದಂಧೆಕೋರರ ವಿರುದ್ಧ ಕ್ರಮ ಕೈಗೊಳ್ಳಲು ವಿಶೇಷ ತಂಡ ರಚನೆ ಮಾಡುವ ಸಂಬಂಧ ಶೂನ್ಯ ವೇಳೆಯಲ್ಲಿ ಮಾನ್ಯ ಗೃಹ ಸಚಿವರ ಬಳಿ ಚರ್ಚಿಸಬಯಸುತ್ತೇನೆ.

ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ರಾಮೋಜಿಗೌಡರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಗೃಹ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ವಿಷಯ:- ರಾಜ್ಯದಲ್ಲಿ ವ್ಯಾಪಿಸುತ್ತಿರುವ ಬೊಜ್ಜಿನ ಸಮಸ್ಯೆ ಕುರಿತಂತೆ ನುರಿತ ವೈದ್ಯರು, ಸಂಶೋಧಕರು ಮುಂತಾದವರಿಂದ ವರದಿ ಪಡೆದು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಕುರಿತು.

\- - -

ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. 44 ಕೋಟಿ ಭಾರತೀಯರಿಗೆ ಬೊಜ್ಜಿನ ಆತಂಕ ಪರಿಸ್ಥಿತಿ ಸಾಧ್ಯತೆ ಬಗ್ಗೆ ಲ್ಯಾನ್ಸೆಟ್ ವರದಿಯು ತನ್ನ ಜಾಗತಿಕ ವಿಶ್ಲೇಷಣೆಯಲ್ಲಿ ಬಹಿರಂಗಪಡಿಸಿರುವ ಹಿನ್ನೆಲೆಯಲ್ಲಿ ನಮ್ಮ ರಾಜ್ಯ ಎಚ್ಚೆತ್ತುಕೊಳ್ಳುವ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರುತ್ತೇನೆ.

44 ಕೋಟಿ ಭಾರತೀಯರಿಗೆ ಬೊಜ್ಜಿನ ಆತಂಕ ಪರಿಸ್ಥಿತಿ ಮುಂದುವರಿದರೆ 2050ಕ್ಕೆ ಗಂಭೀರವಾಗುವ ಸಾಧ್ಯತೆ ಬಗ್ಗೆ ಲ್ಯಾನ್ಸೆಟ್ ವರದಿಯು ತನ್ನ ಜಾಗತಿಕ ವಿಶ್ಲೇಷಣೆಯಲ್ಲಿ ಬಹಿರಂಗಪಡಿಸಿದೆ.

2050 ರ ವೇಳೆಗೆ ಭಾರತದಲ್ಲಿ 21.8 ಕೊಟಿ ಪುರುಷರು ಮತ್ತು 23.1 ಕೋಟಿ ಮಹಿಳೆಯುರು ಸೇರಿದಂತೆ ಒಟ್ಟು 44.9 ಕೋಟಿ ಜನರು ಬೊಜ್ಜಿನ ಸಮಸ್ಯೆಗೆ ತುತ್ತಾಗಲಿದ್ದಾರೆ. ಒಟ್ಟಾರೆ ಜನಸಂಖ್ಯೆ ಸುಮಾರು ಮೂರನೇ ಒಂದು ಭಾಗದಷ್ಟು ಜನರು ಅಧಿಕ ತೂಕ ಮತ್ತು ಬೊಜ್ಜಿನ ಸಮಸ್ಯೆ ಎದುರಿಸಲಿದ್ದಾರೆ. ಈ ಮೂಲಕ ಅತೀ ಹೆಚ್ಚು ಬೊಜ್ಜಿನ ಸಮಸ್ಯೆಯಿಂದ ಬಳಲುತ್ತಿರುವ ಚೀನಾವನ್ನು ಭಾರತ ಹಿಂದಿಕ್ಕಲಿದೆ. ಇಂತಹ ಒಂದು ಭಯಾನಕ ವರದಿ ಪ್ರಕಟಣೆಯನ್ನು ಕರ್ನಾಟಕ ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು.

ಈ ರಾಜ್ಯದಲ್ಲಿ ಅಂತಹ ಯಾವುದೇ ಅಪಾಯ ಬಾರದಂತೆ ಮುನ್ನಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಭಾರತವೇ ಮೆಚ್ಚುವ ರೀತಿಯಲ್ಲಿ ಕರ್ನಾಟಕ ಕ್ರಾಂತಿಕಾರಿ ಹೆಜ್ಜೆಯನ್ನು ಇಡಬೇಕಾಗಿದೆ. ಶಾಲಾ ಕಾಲೇಜು ಹಂತದಲ್ಲಿಯೇ ಇದರ ಬಗ್ಗೆ ವಿದ್ಯಾರ್ಥಿಗಳಲ್ಲಿ, ಯುವಕರಲ್ಲಿ ಅರಿವು ಮೂಡಿಸುವ ಕ್ರಮ, ಶಾಲೆಯಲ್ಲಿ ಒಂದು ಪಿರಿಯೆಡ್ ಯೋಗಾ, ವ್ಯಾಯಾಮ ಪರಿಚಯಿಸುವುದು, ರಾಜ್ಯದಲ್ಲಿ ಆರೋಗ್ಯಕ್ಕೆ ಮಾರಕವಾಗುವಂತಹ ಜಂಕ್‌ಫುಡ್ ನಿಯಂತ್ರಿಸಲು, ಕಲಬೆರಕೆ ಕೊನೆಗಾಣಿಸಲು, ದುಶ್ಚಟಗಳಿಂದ ಜನರನ್ನು ದೂರ ಇಡುವಂತಹ ಸಮರೋಪಾದಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಮ್ಮ ಸರ್ಕಾರ ದೇಶದ ಎಲ್ಲ ರಾಜ್ಯಗಳಿಗೆ ಮಾದರಿಯಾಗಬೇಕಾಗಿದೆ. ಈ ಶಕ್ತಿ ನಮ್ಮ ಮಾನ್ಯ ಮುಖ್ಯಮಂತ್ರಿಯವರಿಗೆ ಇದೆ.

ರಾಜ್ಯದಲ್ಲಿ ಬೊಜ್ಜಿನ ಆತಂಕ ನಿರ್ಮಾಣವಾಗದ ರೀತಿಯಲ್ಲಿ, ಇದನ್ನು ತಗ್ಗಿಸುವ ನಿಟ್ಟಿನಲ್ಲಿ ಈ ಬಗ್ಗೆ ವಿವಿಧ ವಿಭಾಗದ ನುರಿತ ತಜ್ಞರು, ಶಿಕ್ಷಣ ತಜ್ಞರು, ಯೋಗ ತಜ್ಞರು, ಸಂಶೋಧಕರು, ವೈದ್ಯರು ಮುಂತಾದ ವಿವಿಧ ರಂಗದ ತಜ್ಞರ ಒಂದು ಸಮಿತಿ ರಚಿಸಿ 6 ತಿಂಗಳಲ್ಲಿ ಅವರ ವರದಿ ಪಡೆದು ಸಮರೋಪಾದಿಯಲ್ಲಿ ಈ ವರದಿ ಜಾರಿಗೆ ತರುವ ನಿಟ್ಟಿನಲ್ಲಿ ಕ್ರಮ ಜರುಗಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ನಂತರ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ) ವಿಷಯ:- ಪಂಚಗಂಗಾವಳ ನದಿಯ ಹೂಳನ್ನು ತೆಗೆದು ಮೀನುಗಾರಿಕೆ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸುವ ಕುರಿತು.

\- - -

ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. "ಹೂಳು ತುಂಬಿ ದಿಬ್ಬವಾದ ಪಂಚಗಂಗಾವಳಿ, ಸರಕಾರದ ಗಾಢ ಮೌನ ಮತ್ತು ಹೂಳೆತ್ತಲು ಆಗ್ರಹ" ಎಂಬ ಶೀರ್ಷಿಕೆಯಡಿ ದಿನಾಂಕ 06/03/2025ರ 'ಜನಪ್ರತಿನಿಧಿ' ಪತ್ರಿಕೆಯಲ್ಲಿ ವರದಿಯಾಗಿದೆ.

ಅತ್ಯಂತ ಅಪರೂಪದ ಪಂಚಗಂಗಾವಳ ಪ್ರದೇಶ ಕಂಡು ಬರುವುದಿದ್ದರೆ ಅದು ಕುಂದಾಪುರದಲ್ಲಿ ಮಾತ್ರ. ಆದರೆ ಇದು ಆಳುವ ವರ್ಗದ ನಿರ್ಲಕ್ಷ್ಯಕ್ಕೆ ಗುರಿಯಾಗಿ ಯಾವುದೇ ಅಭಿವೃದ್ಧಿ ಕಾಣದೆ, ಹೂಳು ತುಂಬಿ ಹೊಳೆಯೇ ಬತ್ತಿ ಬರಡಾದಂತಾಗಿದೆ. ಗಂಗಾವಳಿಯಲ್ಲಿ ಸಾವಿರಾರು ಲೋಡು ಹೂಳು ತುಂಬಿರುವ ಪರಿಣಾಮ ನದಿಯ ನೀರಿನ ಸಂಚಾರದ ವ್ಯತ್ಯಯವಾಗಿ ಜನಜೀವನಕ್ಕೂ ತೊಂದರೆಯಾಗುತ್ತಿದೆ.

ಕುಂದಾಪುರ ಪುರಸಭಾ ವ್ಯಾಪ್ತಿಯ ಉತ್ತರ ದಿಕ್ಕಿನಲ್ಲಿರುವ ಪಂಚಗಂಗಾವಳಿ ನದಿಯನ್ನು ಅವಲಂಬಿತರಾಗಿ ಸುಮಾರು ೫೦೦ಕ್ಕೂ ಹೆಚ್ಚು ಕುಟುಂಬಗಳು ಸುಮಾರು ವರ್ಷಗಳಿಂದ ತಮ್ಮ ಬದುಕನ್ನು ಕಟ್ಟಿಕೊಂಡು ಬರುತ್ತಿದ್ದಾರೆ. ಈ ಕುಟುಂಬಗಳಿಂದ ಮೀನುಗಾರಿಕೆ, ಚಿಪ್ಪು ಹೆಕ್ಕುವಂಥದ್ದು, ಮೀನು ಸಾಕಾಣಿಕೆ, ದೋಣಿ ಚಲಿಸುವಂಥದ್ದು, ಪ್ರವಾಸೋದ್ಯಮ ಹೀಗೆ ಹಲವಾರು ಚಟುವಟಿಕೆಗಳು ನಡೆಯುತ್ತಿರುತ್ತದೆ. ಈ ಹಿಂದೆ ಈ ನದಿ ಪಾತ್ರದಲ್ಲಿ ಸಾಂಪ್ರದಾಯಿಕ ಮರಳುಗಾರಿಕೆ ನಡೆಯುತ್ತಿತ್ತು. ಇದರ ಪರಿಣಾಮವಾಗಿ ಅಲ್ಲಿ ಯಾವುದೇ ಹೂಳು ಶೇಖರಣೆಯಾಗುತ್ತಿರಲಿಲ್ಲ. ಇತ್ತೀಚಿನ ಹೊಸ ಕಾನೂನಿನ ಪರಿಣಾಮ ಯಾವುದೇ ಮರಳುಗಾರಿಕೆ ನಡೆಯದೇ ನದಿಯಲ್ಲಿ ಹೂಳು ತುಂಬಿ ನದಿ ಪಾತ್ರ ತುಂಬಿರುತ್ತದೆ. ಇದರಿಂದ ಮಳೆಗಾಲದಲ್ಲಿ ಕೃತಕ ನೆರೆ ಬಂದು ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸುತ್ತಿದೆ.

ಪಂಚಗಂಗಾವಳಿ ಪ್ರವಾಸೋಧ್ಯಮ ವಿಚಾರ ಸರಕಾರದ ಕಡತಗಳಲ್ಲಿಯೇ ಗೆದ್ದಲು ತಿನ್ನುತ್ತಿದೆ. ಇಂತಹ ಅದ್ಭುತ ಪರಿಸರವನ್ನು ಪ್ರವಾಸೋದ್ಯಮಕ್ಕೂ ಬಳಸದಿರುವ ಪ್ರವಾಸೋದ್ಯಮ ಇಲಾಖೆಯ ಅಸಡ್ಡೆ ಎದ್ದು ಕಾಣುತ್ತದೆ. ಸ್ಥಳೀಯ ಒತ್ತಡ ಇಲ್ಲದಿರುವುದರಿಂದ ಒಂದು ದಶಕದ ಹಿಂದೆ ಈ ಬಗ್ಗೆ ಸಮೀಕ್ಷೆ ನಡೆಸಿದ ಲೋಕೋಪಯೋಗಿ ಹಾಗೂ ಪ್ರವಾಸೋದ್ಯಮ ಇಲಾಖೆ ಅನಂತರ ಸುಮ್ಮನಾದವು. ಸರಕಾರಗಳು ಪ್ರವಾಸೋದ್ಯಮ ಅಭಿವೃದ್ಧಿಯ ಮಂತ್ರ ಪಠಿಸುತ್ತಿವೆಯೇ ಹೊರತು ಕಾರ್ಯಾನುಷ್ಠಾನಕ್ಕೆ ಮುಂದಾಗುತ್ತಿಲ್ಲ

ಇತ್ತೀಚೆಗೆ ಕೋಡಿಯಲ್ಲಿ ಉಪ್ಪು ನೀರು ಕೃಷಿಭೂಮಿ ನುಗ್ಗುವಲ್ಲಿ ಪಂಚಗಂಗಾವಳಿಯಲ್ಲಿ ಹೂಳು ತುಂಬಿರುವುದು ಕೂಡಾ ಕಾರಣವಾಗಿದೆ. ನದಿಯನ್ನು ಅವಲಂಬಿತರಾದ ಮೀನುಗಾರರ ಜೀವನ ಬಹಳ ಸಂಕಷ್ಟಕ್ಕೀಡಾಗಿದೆ. ಆದ್ದರಿಂದ ಸ್ಥಳೀಯ ಮೀನುಗಾರರ ಹಿತದೃಷ್ಟಿಯಿಂದ ಪಂಚಗಂಗಾವಳಿ ನದಿಯ ಹೂಳನ್ನು ತೆಗೆದು ಮೀನುಗಾರಿಕೆ ಚಟುವಟಿಕೆಗಳಿಗೆ ಅನುಕೂಲ ಮಾಡಿಕೊಡಬೇಕಾಗಿ ಹಾಗೂ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕೆಂದು ಮಾನ್ಯ ಮೀನುಗಾರಿಕೆ, ಬಂದರು ಹಾಗೂ ಒಳನಾಡು ಜಲಸಾರಿಗೆ ಮಂತ್ರಿಗಳನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಮಂಕಾಳ ವೈದ್ಯ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವ ವಿಚಾರ ನಿಜವಾಗಿದೆ. ಏಕೆಂದರೆ, ನಾವು dredging ಮಾಡುವುದು ಬೋಟ್ ಎಲ್ಲಿ ಹೋಗುತ್ತದೆ ಅಂದರೆ, ನದಿ ಮತ್ತು ಸಮುದ್ರ ಸೇರುವಲ್ಲಿ ಅಥವಾ ಡಾಕ್ ಇರುವಲ್ಲಿ ಮಾತ್ರ ನಾವು ಹೂಳೆತ್ತುವುದಕ್ಕೆ ನಮ್ಮ ಇಲಾಖೆಯಲ್ಲಿ ಅವಕಾಶವಿದೆ. ಈ ಹಿಂದೆ ಅಲ್ಲಿ ಸಾಂಪ್ರದಾಯಿಕ ಮರಳುಗಾರಿಕೆ ಮಾಡುತ್ತಿದ್ದರು. ಅಂದರೆ, ಸ್ಥಳೀಯ ಜನರ ಅನುಕೂಲಕ್ಕಾಗಿ ಹಾಗೂ ಇತ್ತೀಚೆಗೆ ಅಲ್ಲಿಂದ ಬೆಂಗಳೂರು ನಗರಕ್ಕೆ ಕೂಡ ಮರಳನ್ನು ಮಾರಾಟ ಮಾಡುತ್ತಿದ್ದರು. ಅಂದರೆ, ಅಷ್ಟು ದೊಡ್ಡ ಪ್ರಮಾಣದಲ್ಲಿ ಮರಳುಗಾರಿಕೆ ನಡೆಯುತ್ತಿತ್ತು. ಇದರಿಂದಾಗಿ, ಈ ಹಿಂದೆ ಅಲ್ಲಿ ಅಷ್ಟೊಂದು ಹೂಳು ತುಂಬುತ್ತಿರಲಿಲ್ಲ. ಹಾಗಾಗಿ, ಅಲ್ಲಿ ಮರಳುಗಾರಿಕೆಗೆ ಅವಕಾಶ ಮಾಡಿಕೊಟ್ಟರೆ ಮಾತ್ರ ಈ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು, ಇಲ್ಲವಾದರೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಆ ನದಿ ಸುಮಾರು 25 ಕಿಲೋಮೀಟರ್‌ನಷ್ಟು ಉದ್ದ ಇರುತ್ತದೆ. ಅಲ್ಲದೇ, ಅಲ್ಲಿ 5 ನದಿಗಳ ಸಂಗಮವಾಗುತ್ತದೆ. ಆ 5 ನದಿ ಸಂಗಮವಾಗುವಲ್ಲಿ ಮತ್ತು ಆ 5 ನದಿಗಳಲ್ಲಿ ಹೂಳು ತುಂಬಿಕೊಂಡಿರುತ್ತದೆ. ಆದಾಗ್ಯೂ, ನಾನು ಖುದ್ದಾಗಿ ಅಲ್ಲಿಗೆ ಹೋಗಿ ಪರಿಶೀಲನೆ ಮಾಡಿ, ಅಲ್ಲಿ ಏನು ಮಾಡುವುದಕ್ಕೆ ಸಾಧ್ಯವಿದೆ ಅದನ್ನು ಮಾಡುವಂತಹ ಕೆಲಸವನ್ನು ಮಾಡುತ್ತೇನೆ.

ಉಪ ಸಭಾಪತಿಯವರು:- ಮಾನ್ಯ ಸದಸ್ಯರು ತಮ್ಮ ಶೂನ್ಯವೇಳೆ ಪ್ರಸ್ತಾವನೆಯಲ್ಲಿ "ಸರ್ಕಾರದ ಗಾಢ ಮೌನ" ಎಂದು ಉಲ್ಲೇಖ ಮಾಡಿರುತ್ತಾರೆ. ಅದಕ್ಕೆ ತಾವು ಸ್ಪಷ್ಟೀಕರಣ ನೀಡಬೇಕು.

ಶ್ರೀ ಮಂಕಾಳ ವೈದ್ಯ:- ಮಾನ್ಯ ಸಭಾಪತಿಯವರೇ, ಅನಾದಿ ಕಾಲದಿಂದಲೂ ಅಲ್ಲಿ ಮರಳುಗಾರಿಕೆ ಮಾಡುತ್ತಿದ್ದರು. ಅದನ್ನು ಕೆಲವು ವರ್ಷಗಳ ಹಿಂದೆ ಅಂದರೆ, ಕಳೆದ 5 ವರ್ಷಗಳ ಹಿಂದೆ ಮರಳುಗಾರಿಕೆಯನ್ನು ಬಂದ್ ಮಾಡಿರುತ್ತಾರೆ. ಅಲ್ಲಿ ಮೊದಲು ಏನು ಆಗುತ್ತಿತ್ತು ಎಂದರೆ, ಪ್ರತಿ ವರ್ಷ ಅಲ್ಲಿ ಮಳೆ ಬಂದಾಗ ಮರಳು ಬಂದು ತುಂಬಿಕೊಳ್ಳುತ್ತದೆ. ಆದರೆ, ಈ ವರ್ಷ ಅಲ್ಲಿ ಮಳೆ ಹೆಚ್ಚಾಗಿ ಬಿದ್ದಿರುತ್ತದೆ. ಅದರಿಂದಾಗಿ, ಅಲ್ಲಿ ಹೆಚ್ಚು ಮರಳು ಬಂದು ಸುಮಾರು ಕಿಲೋಮೀಟರ್‌ಗಟ್ಟಲೆ ಮರಳು ಶೇಖರಣೆಯಾಗಿರುತ್ತದೆ. ಅದನ್ನು ತೆಗೆಯುವುದಕ್ಕೆ ದೊಡ್ಡ ಸಮಸ್ಯೆ ಇದೆ. ಆ ಮರಳನ್ನು ತೆಗೆಯುವುದಕ್ಕೆ ಸರ್ಕಾರ ಬೇರೆ ಯಾವುದಾದರೂ ರೀತಿ ಅವಕಾಶ ಮಾಡಿಕೊಟ್ಟರೆ, ಸರ್ಕಾರಕ್ಕೆ ಅನುಕೂಲವಾಗುತ್ತದೆ ಮತ್ತು ಸಾಮಾನ್ಯ ಜನರಿಗೆ, ಬಡವರಿಗೂ ಸಹ ಅನುಕೂಲವಾಗುತ್ತದೆ. ಏಕೆಂದರೆ, ಇವೊತ್ತಿನ ದಿವಸ ಮರಳು ಬೆಲೆ ದುಪ್ಪಟ್ಟು ಆಗಿದೆ. ಹಾಗಾಗಿ, ಎಂ-ಸ್ಯಾಂಡ್ ಉಪಯೋಗ ಮಾಡಬೇಕಿದೆ.

ಉಪ ಸಭಾಪತಿಯವರು:- ಮಾನ್ಯ ಸಚಿವರೇ, ತಾವೇ ಸರ್ಕಾರ.

ಶ್ರೀ ಮಂಕಾಳ ವೈದ್ಯ:- ಮಾನ್ಯ ಸಭಾಪತಿಯವರೇ, ಅದಕ್ಕಾಗಿಯೇ ನಾನು ಹೇಳಿದ್ದೇನೆಂದರೆ, ಇದನ್ನು ಪರಿಶೀಲನೆ ಮಾಡಿ, ನಂತರ ಅದನ್ನು ಸರ್ಕಾರದ ಗಮನಕ್ಕೆ ತಂದು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಒಂದು ವರ್ಷ ಅಲ್ಲಿ ಹೂಳು ತೆಗೆದು ನಂತರ ಹಾಗೆಯೇ ಬಿಟ್ಟರೆ ಪುನಃ ಅಲ್ಲಿ ಮರಳು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೇಖರಣೆಯಾಗುತ್ತದೆ. ಆದರೆ, ಅಲ್ಲಿ ಮರಳುಗಾರಿಕೆಗೆ ಅನುಮತಿ ನೀಡಿದರೆ ಅದು ಸುಮಾರು ೮ ತಿಂಗಳು ನಡೆಯುವಂಥ ವ್ಯವಹಾರ ಆಗಿರುತ್ತದೆ. ಹಾಗಾಗಿ, ಇದನ್ನು ಮಾಡಲೇಬೇಕು. ಇದು ಬಹಳ ಅಗತ್ಯವುಂಟು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ) ವಿಷಯ:– ವಯೋವೃದ್ಧ ತಂದೆ–ತಾಯಿಯನ್ನು ಹೆತ್ತ ಮಕ್ಕಳೇ ಮನೆಯಿಂದ ಆಚೆ ಹಾಕುತ್ತಿದ್ದು, ಬೆಳಗಾವಿ ವೈದ್ಯಕೀಯ ಸಂಸ್ಥೆಯೇ ಆಶ್ರಯ ತಾಣವಾಗಿರುವ ಕುರಿತು.

– – –

ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ದಿನಾಂಕ: 10.03.2025 ರಂದು "ಬೆಳಗಾವಿ ಸರ್ಕಾರಿ ಆಸ್ಪತ್ರೆ ಈಗ ವೃದ್ಧಾಶ್ರಮ" ಎಂದು 'ಸಂಯುಕ್ತ ಕರ್ನಾಟಕ' ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ವಯೋವೃದ್ಧ ತಂದೆ–ತಾಯಂದಿರನ್ನು ಹೆತ್ತ ಮಕ್ಕಳೇ ಮನೆಯಿಂದ ಹೊರ ಹಾಕುತ್ತಿದ್ದು, ಹಿರಿಯ ಜೀವಿಗಳಿಗೆ ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ (ಬಿಮ್ಸ್)ಯ ಆಸ್ಪತ್ರೆಯೇ ಈಗ ಆಸರೆ ಆಗಿದೆ. ವೃದ್ಧಾಪ್ಯದ ವೇಳೆ ಮಕ್ಕಳ ಆರೈಕೆಯಲ್ಲಿ ಜೀವನದ ಕೊನೆಯ ದಿನ ಕಳೆಯಬೇಕಾದ ಹಿರಿಯ ಜೀವಿಗಳು ಅಕ್ಷರಶಃ ಅನಾಥರಾಗುತ್ತಿದ್ದಾರೆ. ಅನಾರೋಗ್ಯದ ನೆಪ ಮಾಡಿಕೊಂಡು ಬೆಳಗಾವಿ ಬಿಮ್ಸ್ ಆಸ್ಪತ್ರೆಗೆ ಪೋಷಕರನ್ನು ದಾಖಲಿಸಿ ಹೋದ ಮಕ್ಕಳು ಮತ್ತೆ ಮರಳಿ ತಲೆ ಹಾಕುತ್ತಿಲ್ಲ.

ಆರೋಗ್ಯದಿಂದ ಗುಣಮುಖರಾದ ಮೇಲೂ ಮಕ್ಕಳು ಪೋಷಕರನ್ನು ಕರೆದುಕೊಂಡು ಹೋಗುವುದಿಲ್ಲ. ಕಳೆದ 2 ವರ್ಷದಲ್ಲಿ ಬರೋಬ್ಬರಿ 152 ವೃದ್ಧರಿಗೆ ಈ ಆಸ್ಪತ್ರೆಯು ಆಶ್ರಯ ತಾಣವಾಗಿರುತ್ತದೆ" ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಈ ಕುರಿತು ಕ್ರಮ ಕೈಗೊಳ್ಳಲು ಹಾಗೂ ಸೂಕ್ತ ನಿರ್ದೇಶನ ನೀಡಲು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ. ನಾಗರಾಜುರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಊ) ವಿಷಯ:– ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯ ಮುದದೇನೂರು ಕಾವಲು ಗ್ರಾಮದ ಸರ್ವೆ ನಂ.1 6.31 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ಮಾಡಲು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ

– – –

ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯ ಮುದದೇನೂರು ಕಾವಲು ಗ್ರಾಮದ ಸರ್ವೇ ನಂ.01 ರ 6.31 ಹೆಕ್ಟೇರ್ ಪರಿಭಾವಿತ ಅರಣ್ಯ ಪ್ರದೇಶದಲ್ಲಿ ಕಲ್ಲು ಗಣಿ ಗುತ್ತಿಗೆ ಕ್ರಷರ್ ಲೈಸೆನ್ಸ್ ಮಂಜೂರಾತಿಗಾಗಿ ಅರಣ್ಯ ತೀರುವಳಿಗಾಗಿ ಸದರಿ ಅರಣ್ಯ ಪ್ರದೇಶದ ಬದಲಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ತಾವರಗೇರಾ ಹೋಬಳಿಯ ಮ್ಯಾದರಡೊಕ್ಕಿ ಗ್ರಾಮದ ಸರ್ವೇ ನಂ 90 ರ ವಿಸ್ತೀರ್ಣ 15.24 ಎಕರೆ ಪ್ರದೇಶವನ್ನು ಗುರುತಿಸಿದ್ದು, ಸ್ಥಾನಿಕ ಪರಿಶೀಲನೆ ಮಾಡಿ ನೋಡಿ ಇಂತಹ ಪರಿಹಾರಾತ್ಮಕ ನೆಡುತೋಪು ಬೆಳೆಸುವುದರಿಂದ ಅರಣ್ಯ ಪ್ರದೇಶ ಹೆಚ್ಚಿಸಬಹುದಾಗಿರುತ್ತದೆ. ಅಲ್ಲದೆ ಸದರಿ ಪ್ರದೇಶವು ವನ್ಯಪ್ರಾಣಿಗಳಿಗೆ ಅನುಕೂಲಕರ ಸ್ಥಳವಾಗಿರುತ್ತದೆ ಹಾಗೂ ಶೇ 80 ರಷ್ಟು ಸ್ಥಳದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಯೋಗ್ಯವಾಗಿರುತ್ತದೆ ಹಾಗೂ ಇಲಾಖೆಗೆ ಕನಿಷ್ಟ 25 ಹೆಕ್ಟೇರ್ ಭೂಮಿ ಒಂದೇ ಕಡೆ ಪರಿಹಾರಾತ್ಮಕ ನೆಡುತೋಪಿಗಾಗಿ ಸದರಿ ಜಮೀನು ನೀಡಿದಲ್ಲಿ ಮ್ಯಾದರಡೊಕ್ಕಿ ಪರಿಭಾವಿತ ಅರಣ್ಯ ಪ್ರದೇಶದಿಂದ ದೂರವಿರುವ ಈ ಪ್ರದೇಶವನ್ನು ನಿರ್ವಹಣೆ ಮಾಡಲು ಸಾಧ್ಯವಾಗುತ್ತದೆ ಎಂಬ ವರದಿಯನ್ನು ನೀಡಲಾಗಿದೆ. ಆದುದರಿಂದ, ಪರಿಹಾರಾತ್ಮಕ ಭೂಮಿಯನ್ನು ನೀಡಿರುವುದರಿಂದ ಸದರಿ ಪ್ರದೇಶದಲ್ಲಿ ಗಣಿಗಾರಿಕೆ ಮಾಡಲು ನಿರಾಕ್ಷೇಪಣಾ ಪತ್ರವನ್ನು ಅರಣ್ಯ ಇಲಾಖೆಯವರು ನೀಡಬೇಕಿದ್ದು, ಈ ಸಂಬಂಧ ಸೂಕ್ತ ಕ್ರಮ ವಹಿಸುವ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವ ಕುರಿತು ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

(ಮುಂದು)

(199) 11.03.2025 1.10 ವೈಎಲ್–ಎಕೆ (ಉಪ ಸಭಾಪತಿಯವರ ಉಪಸ್ಥಿತಿ)

ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):– ಮಾನ್ಯ ಸಭಾಪತಿಯವರೇ, ಈಗಾಗಲೇ ಅಲ್ಲಿ ಗಣಿಗಾರಿಕೆ ನಡೆಯುತ್ತಿದ್ದು ಅಥವಾ ಗಣಿಗಾರಿಕೆಯನ್ನು ಪ್ರಾರಂಭ ಮಾಡಬೇಕೆಂದರೆ ಅದು ಪರಿಭಾವಿತ ಅರಣ್ಯ (Deemed Forest) ವ್ಯಾಪ್ತಿಗೆ ಬರುತ್ತದೆ. ಪರಿಭಾವಿತ ಅರಣ್ಯ ವ್ಯಾಪ್ತಿಯಲ್ಲಿ ಬಂದ ಕಾರಣ ಈ ಮೊದಲು ನಿರಾಕ್ಷೇಪಣಾ ಪತ್ರವನ್ನು ಅರಣ್ಯ ಇಲಾಖೆ ವತಿಯಿಂದ ನೀಡಲಾಗುತ್ತಿದ್ದು, ಈಗ ಅದನ್ನು ವಾಪಸ್ಸು ಪಡೆಯಲಾಗಿದೆ. ಈ ಸರ್ವೆ ನಂಬರ್‌ನ ಪೂರ್ತಿ ಜಮೀನು ಪರಿಭಾವಿತ ಅರಣ್ಯ ವ್ಯಾಪ್ತಿ ಅಡಿ ಬರುತ್ತದೆ. ಕರ್ನಾಟಕ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರಣ್ಯ ಇಲಾಖೆ ಮತ್ತು ಗಣಿ ಹಾಗೂ ಭೂ ವಿಜ್ಞಾನ ಇಲಾಖೆಯ ಜಂಟಿ ಕಾರ್ಯಚರಣೆಯಲ್ಲಿ ಈ ಕ್ವಾರಿಯನ್ನು ಬಂದ್ ಮಾಡಲಾಗಿದೆ. ಯಾವುದೇ ಗಣಿಗಾರಿಕೆ ಇರಬಹುದು ಅಥವಾ ಇನ್ನಿತರ ಯಾವುದೇ linear projects ಗೆ ಅರಣ್ಯ ಇಲಾಖೆಯ ಜಮೀನು ಕೊಡಬೇಕೆಂದರೆ ರಾಜ್ಯ ಸರ್ಕಾರಕ್ಕೆ ಮಾತ್ರ ಅಧಿಕಾರ ಇರುವುದಿಲ್ಲ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ MoEF (Ministry of Environment and Forests) ಗೆ ಕಳುಹಿಸಬೇಕಾಗುತ್ತದೆ. ಈಗ ಅದರಂತೆ ಇವರು PARIVESH (Pro-Active and Responsive facilitation by Interactive, Virtuous, and Environmental Single Window Hub) portal ನಲ್ಲಿ Forest Clearance ಸಲುವಾಗಿ ಒಂದು ಅರ್ಜಿ ಹಾಕಿದ್ದಾರೆ. ಅರಣ್ಯ ತೀರುವಳಿಗಾಗಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಸಲ್ಲಿಸಿದ್ದು, ನಮ್ಮ ಇಲಾಖೆಯ ಅಧಿಕಾರಿಗಳು ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಹಾಗೆಯೇ ಕೃಷಿಗೂ ಜಮೀನು ಕೊಟ್ಟಿದ್ದಾರೆ ಎನ್ನುವಂಥ ಮಾಹಿತಿ ಕೊಟ್ಟಿದ್ದಾರೆ. ಈ ಸಂಬಂಧ ನಾನು ಅಧಿಕಾರಿಗಳಿಗೂ ಹೇಳಿದ್ದು, ಆದಷ್ಟು ಬೇಗ Forest Clearance ಮಾಡಲು ಸೂಚನೆ ಕೊಟ್ಟಿದ್ದೇನೆ. ಕ್ರಮಬದ್ಧವಾಗಿ ಪ್ರಸ್ತಾವನೆ ಬಂದರೆ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಊ) ವಿಷಯ:- ರಾಜ್ಯದಲ್ಲಿ ಯುವಕರು ಮಾದಕ ವ್ಯಸನಿಗಳಾಗಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ.

ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ದಿನಾಂಕ: 10.03.2025 ರಂದು 'ವಿಜಯವಾಣಿ' ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ ರಾಜ್ಯದಲ್ಲಿ ಯುವಕರು ಮಾದಕ ವ್ಯಸನಿಗಳಿಗೆ ಹೆಚ್ಚು ತುತ್ತಾಗುತ್ತಿದ್ದಾರೆ. ಕೆಲಸದಿಂದ ತೆಗೆದು ಹಾಕಿದ್ದಕ್ಕೆ ಬೇಸರಗೊಂಡು, ಇಲ್ಲವೇ ಇನ್ನಿತರ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದುದ್ದನ್ನು ಗಮನಿಸಬಹುದು.

ಯಶವಂತಪುರ ರೈಲ್ವೆ, ಪ್ಯಾರಲಲ್ ರಸ್ತೆ ನಿವಾಸಿ ಸುನೀಲ್ ಕುಮಾರ್ ಅವರು ದುಶ್ಚಟಕ್ಕೆ ಬಲಿಯಾಗಿದ್ದಾರೆ. ಕೊತ್ತನೂರಿನ ಡಿಎನ್‌ಬಿ ರಶ್ಮಿ ಲೇಔಟ್‌ನ ಪಿಜಿಯಲ್ಲಿ ಘಟನೆ ನಡೆದಿದೆ. ಇವರ ಸಹೋದರ ಅರುಣ್‌ಕುಮಾರ್ ನೀಡಿದ ದೂರಿನ ಮೇರೆಗೆ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುನೀಲ್‌ಕುಮಾರ್ ಪದವೀಧರನಾಗಿದ್ದು, ಮದ್ಯ ಮತ್ತು ಮಾದಕ ವಸ್ತು ವ್ಯಸನಿಗಳಾಗಿದ್ದ. ಹೀಗಾಗಿ ಮನೆಯವರು ಆತನಿಗೆ ಹಣ ಕೊಡುತ್ತಿರಲಿಲ್ಲ. ವೃತ್ತಿಯಲ್ಲಿ ಮೆಕಾನಿಕ್ ಅಗಿದ್ದ ಆತ ನಾಲ್ಕೈದು ತಿಂಗಳಿನಿಂದ ಕೊತ್ತನೂರು ಗ್ಯಾರೇಜ್‌ವೊಂದರಲ್ಲಿ ಕೆಲಸ ಮಾಡಿಕೊಂಡಿದ್ದು, ಸಮೀಪದ ಪಿ.ಜಿ.ಯಲ್ಲಿ ವಾಸವಾಗಿದ್ದ. ಕೆಲ ದಿನಗಳ ಹಿಂದೆ ಗ್ಯಾರೇಜ್‌ನಲ್ಲಿದ್ದ ಸಾವಿರಾರು ರೂಪಾಯಿ ಮೌಲ್ಯದ ಕಾಪರ್ ವೈರ್‌ಗಳನ್ನು ಕದಿದ್ದಕ್ಕೆ ಮಾಲೀಕರು ಕೆಲಸದಿಂದ ತೆಗೆದು ಹಾಕಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಲಸದಿಂದ ತೆಗೆದುಹಾಕಿದ್ದಕ್ಕೆ ನೊಂದಿದ್ದ ಸುನೀಲ್ ಕುಮಾರ್ ಮಾರ್ಚ್ 7 ರಂದು ಬೆಳಗ್ಗೆ ಗ್ಯಾರಜ್ ಮಾಲೀಕನಿಗೆ 'ನನ್ನನ್ನು ಕ್ಷಮಿಸಿ ಅಣ್ಣ ಎಂದು ಸಂದೇಶ ಕಳುಹಿಸಿ' ಪಿ.ಜಿ.ಯಲ್ಲೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಇಂತಹ ದುಶ್ಚಟಕ್ಕೆ ನೂರಾರು ಯುವಕರು ಬಲಿಯಾಗುತ್ತಿದ್ದಾರೆ. ವಿದ್ಯಾವಂತರು ದುಶ್ಚಟಕ್ಕೆ ಒಳಗಾಗುತ್ತಿರುವ ಹಿನ್ನೆಲೆಯಲ್ಲಿ ಪೋಷಕರು ನಿಗಾವಹಿಸುವುದರ ಜೊತೆಗೆ ಗೃಹ ಇಲಾಖೆಯ ಪ್ರಕರಣಗಳನ್ನು ಪತ್ತೆ ಹಚ್ಚಿ, ಯುವಕರನ್ನು ಕೌನ್ಸಿಲಿಂಗ್‌ಗೆ ಒಳಪಡಿಸಬೇಕು. ಇದಕ್ಕೆ ಸರ್ಕಾರವು ಪ್ರತ್ಯೇಕವಾಗಿ ಕಾರ್ಯಕ್ರಮ ರೂಪಿಸಿ, ಯುವಕರಿಗೆ ಜೀವನದ ಮಹತ್ವವನ್ನು ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಗೃಹ ಸಚಿವರಿಗೆ ಒತ್ತಾಯಿಸುತ್ತಿದ್ದೇನೆ.

ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಋ) ವಿಷಯ:- ರಾಜ್ಯದಲ್ಲಿ ಪೆಟ್ರೋಲಿಯಂ ಉತ್ಪನ್ನಗಳಲ್ಲಿಯೂ ಕಲಬೆರಕೆ ಮಾಡಿ ಮಾರಾಟ ಮಾಡುತ್ತಿರುವ ಕುರಿತು.

ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೇ, ದಿನಾಂಕ: 11.03.2025 ರ 'ವಿಜಯವಾಣಿ' ದಿನಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ರಾಜ್ಯದಲ್ಲಿ ಹಾಗೂ ದೇಶದಲ್ಲಿ ದಿನನಿತ್ಯದ ಬಳಕೆಯ ಆಹಾರ ಪದಾರ್ಥಗಳಾದ ಅಕ್ಕಿ, ಬೇಳೆ, ಸಕ್ಕರೆಯಂತಹ ವಸ್ತುಗಳ ಕಲಬೆರಕೆ ಪ್ರಕರಣ ಹೆಚ್ಚುತ್ತಿರುವ ನಡುವೆಯೇ, ಇತ್ತೀಚೆಗೆ ಪೆಟ್ರೋಲಿಯಂ ಉತ್ಪನ್ನಗಳಲ್ಲೂ ಕೂಡ ಕಲಬೆರಕೆ ಮಾಡಿ ಮಾರಾಟ ಮಾಡುತ್ತಿರುವ ಆಘಾತಕಾರಿ ವಿಚಾರ ಬೆಳಕಿಗೆ ಬಂದಿದೆ. ಸಾರ್ವಜನಿಕ ವಲಯದ ತೈಲ ಮಾರುಕಟ್ಟೆ, ಕಂಪನಿಗಳ (ಒಎಂಸಿ) ಔಟ್‌ಲೆಟ್‌ಗಳಲ್ಲಿ ಕಲಬೆರಕೆ ಇಂಧನದ ಜತೆಗೆ ಅವ್ಯವಹಾರ, ಅಕ್ರಮ ಮಾರಾಟ ಮತ್ತು ಖರೀದಿ ಹಾಗೂ ಅಳತೆಯಲ್ಲಿ ಮೋಸ ಮಾಡುತ್ತಿರುವ ಕುರಿತು ದೇಶಾದ್ಯಂತ ಲಕ್ಷಾಂತರ ದೂರುಗಳು ದಾಖಲಾಗಿವೆ.

1955ರ ಅಗತ್ಯ ಸರಕುಗಳ ಕಾಯ್ದೆಯಡಿ ಕೇಂದ್ರ ಸರ್ಕಾರ ಮೋಟಾರ್ ಸ್ಪಿರಿಟ್ ಮತ್ತು ಹೈ ಸ್ಪೀಡ್ ಡೀಸೆಲ್ (ಪೂರೈಕೆ, ವಿತರಣೆ ಮತ್ತು ದುಷ್ಕೃತ್ಯಗಳ ತಡೆಗಟ್ಟುವಿಕೆ ನಿಯಂತ್ರಣ) ನಿಯಮ 2005 ಜಾರಿಗೆ ತಂದಿದೆ. ಇದರನ್ವಯ ಪೆಟ್ರೋಲಿಯಂ ಉತ್ಪನ್ನಗಳ ಕಲಬೆರಕೆ ಸೇರಿ ಇನ್ನಿತರ ದುಷ್ಕೃತ್ಯ ಕಂಡುಬಂದಲ್ಲಿ ಅಂತಹವರ ವಿರುದ್ಧ ದಂಡನಾತ್ಮಕ ಕ್ರಮ ಕೈಗೊಳ್ಳುವ ಅಧಿಕಾರ ಒದಗಿಸಲಾಗಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಮಾಹಿತಿ ಅನ್ವಯ 2019 ರಿಂದ 2024 ರ ಡಿಸೆಂಬರ್ ವರೆಗೆ ದೇಶದಾದ್ಯಂತ 3,04,265 ಪ್ರಕರಣಗಳು ದಾಖಲಾಗಿದ್ದು, ಕರ್ನಾಟಕದಲ್ಲೂ ಪ್ರಕರಣ ದಾಖಲಾಗಿದ್ದು ಕಲಬೆರಕೆ ಮಾಡಿದ ಆರೋಪದ ಮೇಲೆ 6 ಪೆಟ್ರೋಲಿಯಂ ಉತ್ಪನ್ನ ಔಟ್‌ಲೆಟ್‌ಗಳ ಪರವಾನಾಗಿಯನ್ನು ರದ್ದುಗೊಳಿಸಿರುವುದು ಸ್ವಾಗತಾರ್ಹ. ಆದರೆ ಇಂತಹ ಕಲಬೆರಕೆ ಹಾಗೂ ಅಕ್ರಮ ಮಾರಾಟಗಳು ಗ್ರಾಮೀಣ ಭಾಗಗಳಲ್ಲೂ ಇತ್ತೀಚೆಗೆ ಹೆಚ್ಚುತ್ತಿವೆ. ಇದರಿಂದಾಗಿ ವಾಯುಮಾಲಿನ್ಯವು ಹೆಚ್ಚುತ್ತಿದ್ದು ಕಲ್ಮಶ ಗಾಳಿ ಸೇವನೆಗೆ ದಾರಿಮಾಡಿಕೊಡುತ್ತಿದೆ. ಆದ್ದರಿಂದ ಇಂತಹ ತಪಾಸಣಾ ಕಾರ್ಯಾಚರಣೆಯನ್ನು ಇನ್ನಷ್ಟು ಸೂಕ್ತವಾಗಿ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ತಮ್ಮ ಮೂಲಕ ಇಂಧನ ಸಚಿವರಿಗೆ ಒತ್ತಾಯಿಸುತ್ತೇನೆ.

ಶ್ರೀ ಈಶ್ವರ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎ) ವಿಷಯ:- ಕಿತ್ತೂರು ಚೆನ್ನಮ್ಮ ಹೆಸರಿನಲ್ಲಿ ಸರ್ಕಾರ ಪ್ರತ್ಯೇಕ ಪ್ರಾಧಿಕಾರ ಸ್ಥಾಪಿಸಿದ್ದು, ಅನುದಾನ ಹಂಚಿಕೆ, ಅಭಿವೃದ್ಧಿ ವಿಚಾರದಲ್ಲಿ ತಾರತಮ್ಯ ಮಾಡುತ್ತಿರುವ ಬಗ್ಗೆ.

ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾಡ ರಕ್ಷಣೆ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಿತ್ತೂರು ರಾಣಿ ಚನ್ನಮ್ಮನ ಹೆಸರಿನಲ್ಲಿ ಸರ್ಕಾರವು ಪ್ರತ್ಯೇಕ ಪ್ರಾಧಿಕಾರ ಸ್ಥಾಪಿಸಿದೆ, ಆದರೆ, ಅನುದಾನ ಹಂಚಿಕೆ, ಅಭಿವೃದ್ಧಿ ಸಂಗತಿಯಲ್ಲಿ ತಾರತಮ್ಯ ಮಾಡುತ್ತಿದೆ ಎಂಬ ಕೂಗು ಆ ಭಾಗದ ಜನಸಾಮನ್ಯರಲ್ಲಿ ಸಹಜವಾಗಿ ಬರುತ್ತಿದೆ, ಭಾರತದ ಪ್ರಪ್ರಥಮ ಸ್ವಾತಂತ್ರ್ಯ ಹೋರಾಟಗಾರ್ತಿ, ಕನ್ನಡಿಗರ ತಾಯಿ ಹಾಗೂ ಬ್ರಿಟಿಷರ ದೊಡ್ಡ ಸೈನ್ಯದ ವಿರುದ್ಧ ಹೋರಾಡಿದ ವೀರ ಮಹಿಳೆ ಮತ್ತು ಚೆನ್ನಮ್ಮನಿಂದಾಗಿ ಕಿತ್ತೂರು ಪ್ರಸಿದ್ಧವಾಗಿರುವುದು ಗಮನಾರ್ಹ. ಆದರೆ, ಸರ್ಕಾರವು ಸದರಿ ಪ್ರಾಧಿಕಾರಕ್ಕೆ ಅನುದಾನ ನೀಡದೇ ಇರುವುದು ನೋವಿನ ಸಂಗತಿಯಾಗಿದೆ,

ರಾಜ್ಯದ ವಿವಿಧ ಅಭಿವೃದ್ಧಿ ಪ್ರಾಧಿಕಾರಗಳಿಗೆ ಭರಪೂರ ಅನುದಾನ ನೀಡಿ ಅಭಿವೃದ್ಧಿ ಪಡಿಸುತ್ತಿರುವುದು ಸ್ವಾಗತಾರ್ಹ. ಆದರೆ, ಕಿತ್ತೂರು ಕರ್ನಾಟಕದ ಕಿತ್ತೂರು ಪ್ರಾಧಿಕಾರದ ಕುರಿತು ಸರ್ಕಾರ ಯಾವ ಕಾರಣಕ್ಕೆ ಉದಾಸೀನತೆ ತೋರುತ್ತಿದೆ? ಕಿತ್ತೂರು ಅಭಿವೃದ್ಧಿ ಪ್ರಾಧಿಕಾರವು 2008ರಲ್ಲಿ ರಚನೆಯಾಗಿದ್ದು, 17 ವರ್ಷಗಳಲ್ಲಿ ಕೇವಲ 43.75 ಕೋಟಿ ರೂ. ಅನುದಾನವನ್ನು ಸರಕಾರ ನೀಡಿದೆ. ಪ್ರಾಧಿಕಾರ ರಚನೆ ಮಾಡಿ 7 ಹುದ್ದೆಗೆ ಮಂಜೂರಾತಿ ನೀಡಿದ್ದರೂ ಸಹ ಇಲ್ಲಿಯವರೆಗೆ ಯಾವ ಹುದ್ದೆಯನ್ನು ಸಹ ನೇಮಕ ಮಾಡಿಲ್ಲ. ಕಚೇರಿಯೂ ಇಲ್ಲ ಇತಿಹಾಸ ತಜ್ಞರನ್ನು ಸದಸ್ಯರನ್ನಾಗಿ ನೇಮಕ ಮಾಡಲೂ ಮಿನಮೇಷ ಎಣಿಸಲಾಗುತ್ತಿದೆ.

ಪ್ರತಿ ವರ್ಷ ಕಿತ್ತೂರು ಉತ್ಸವದಲ್ಲಿ ಭಾಗವಹಿಸುವ ಮಾನ್ಯ ಮುಖ್ಯಮಂತ್ರಿಗಳು, ಸಚಿವರು, ಶಾಸಕರು ಕಿತ್ತೂರು ಕೋಟೆ ಅಭಿವೃದ್ಧಿಪಡಿಸಿ, ಪ್ರವಾಸಿ ಕೇಂದ್ರವಾಗಿಸುವ ಭರವಸೆ ನೀಡುತ್ತಾರೆ. ಆದರೆ, ಆದ್ಯಾವುದೂ ಕಾರ್ಯರೂಪಕ್ಕೆ ಬರುವುದಿಲ್ಲ. ಅದನ್ನು ಗಮನಿಸಿದರೆ ರಾಣಿ ಚನ್ನಮ್ಮ ಹಾಗೂ ಕಿತ್ತೂರು ಕೇವಲ ಭಾಷಣದ ವಸ್ತುವೇ? ಎಂಬ ಭಾವನೆ ಮೂಡುವಂತಾಗಿದೆ. ಮಾತು ಮಾತಿಗೂ ಚನ್ನಮ್ಮನ ಸ್ಮರಿಸುವ ರಾಜಕಾರಣಿಗಳು, ಅನುದಾನ ತಾರತಮ್ಯ ಧೋರಣೆ ಬಗ್ಗೆ ಮಾತನಾಡದೇ ಇರುವುದು ದುರದೃಷ್ಟಕರ ಸಂಗತಿಯಾಗಿದೆ. ಆದ್ದರಿಂದ ಈ ಕೂಡಲೇ ಸರ್ಕಾರವು ಸದರಿ ಪ್ರಾಧಿಕಾರಕ್ಕೆ ಹೆಚ್ಚಿನ ಅನುದಾನ ನೀಡಿ, ಅಭಿವೃದ್ಧಿ ಪಡಿಸುವಂತೆ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಉತ್ತರ ಒದಗಿಸಲಾಗುವುದು.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(200) 11.03.2025/1.20/ಎಸ್‌ಕೆ-ಎಕೆ (ಉಪ ಸಭಾಪತಿಯವರ ಉಪಸ್ಥಿತಿ)

ಏ) ವಿಷಯ:- ಸಿ.ಇ.ಟಿ. (ಸಾಮಾನ್ಯ ಪ್ರವೇಶ ಪರೀಕ್ಷೆ) ಕ್ರೈಸ್ತ ಸಮುದಾಯದ ಗುಡ್‌ಫ್ರೈಡೆ ದಿವಸದಂದು ನಡೆಸಲು ಉದ್ದೇಶಿಸಿರುವುದನ್ನು ಮುಂದೂಡುವ ಕುರಿತು.

ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಉನ್ನತ ವಿದ್ಯಾಭ್ಯಾಸಕ್ಕಾಗಿ ನಿರ್ಧರಿತವಾಗಿರುವ ಸಿ.ಇ.ಟಿ (ಸಾಮಾನ್ಯ ಪ್ರವೇಶ ಪರೀಕ್ಷೆ)ಯು ಏಪ್ರಿಲ್ ತಿಂಗಳ 16, 17, 18ನೇ ತಾರೀಖಿನಂದು ನಡೆಸಲು ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ನಿರ್ಧರಿಸಿರುತ್ತಾರೆ. ಏಪ್ರಿಲ್ ತಿಂಗಳ 16, 17 18ನೇ ದಿನಗಳು ಕ್ರೈಸ್ತ ಸಮುದಾಯಕ್ಕೆ ಪವಿತ್ರವಾದ ವಾರವಾಗಿದೆ. "18 ರಂದು ಗುಡ್‌ಫ್ರೈಡೆ" ಸರ್ಕಾರಿ ರಜೆಯಿದೆ. ಅನೇಕ ಕ್ರೈಸ್ತ ಸಂಘಗಳು ಮೇಲಿನ ಪರೀಕ್ಷೆಗಳಿಗೆ ಕೇಂದ್ರಗಳನ್ನಾಗಿ ಗುರುತಿಸಲಾಗಿದೆ. ಕ್ರೈಸ್ತ ಧರ್ಮಕ್ಕೆ ಸೇರಿದ ಸಾವಿರಾರು ವಿದ್ಯಾರ್ಥಿಗಳು ಸಿ.ಇ.ಟಿ ಪರೀಕ್ಷೆಯಲ್ಲಿ ಭಾಗವಹಿಸಲು ಈಗಾಗಲೇ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಕ್ರೈಸ್ತ ಸಮುದಾಯದ ಅತ್ಯಂತ ಪ್ರಮುಖವಾದ ಈ ವಾರವನ್ನು "ಹೋಲಿ ವೀಕ್" ಎಂದು ಕರೆಯುತ್ತಾರೆ. ಸೋಮವಾರದಿಂದ ಆದಿತ್ಯವಾರದವರೆಗೆ ಕ್ರೈಸ್ತರು ಉಪವಾಸ ಮತ್ತು ಚರ್ಚ್‌ಗಳಲ್ಲಿ ಪ್ರಾರ್ಥನೆಯಲ್ಲಿ ತೊಡಗಿರುತ್ತಾರೆ. ದಿನಾಂಕ 19 ರಂದು (ನಿರ್ಬಂಧಿತ ರಜೆ) ಇದೆ. ದಿನಾಂಕ 20 ರಂದು ಈಸ್ತರ್ ಹಬ್ಬವನ್ನು ಆಚರಿಸಲಾಗುತ್ತಿದೆ. ಅಲ್ಲದೇ, ಈವರೆಗೆ ನಡೆದ ಎಲ್ಲಾ ಸಿ.ಇ.ಟಿ., ಪರೀಕ್ಷೆಗಳು ಶನಿವಾರ ಮತ್ತು ಆದಿತ್ಯವಾರ ನಡೆಸಲಾಗಿದೆ. ಕ್ರೈಸ್ತ ಸಮುದಾಯದ ಪವಿತ್ರವಾದ ಏಸುವಿನನ್ನು ಶಿಲುಬೆಗೆ ಏರಿಸಿದ ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ನೀಡಿದ ರಜೆಯನ್ನು ಗಮನಿಸದೇ ಇರುವುದರಿಂದ, ಕ್ರೈಸ್ತ ಸಮುದಾಯವು ಇದನ್ನು ಪುನರ್ ಪರಿಶೀಲಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದೆ.

ಇದೊಂದು ಸಾರ್ವಜನಿಕ ಮಹತ್ವವಾದ ವಿಷಯವಾಗಿರುವುದರಿಂದ ಈ ವಿಷಯವನ್ನು ನಾನು ತಮ್ಮ ಮೂಲಕ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ತರಲು ಬಯಸುತ್ತೇನೆ.

ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಐ) **ವಿಷಯ:- ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ಅನುದಾನ ಕೊರತೆಯಿಂದ ಇಂದಿರಾ ಕ್ಯಾಂಟಿನನ್ನು ಮುಚ್ಚಿರುವ ಬಗ್ಗೆ.**

ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಬಡವರು, ಕಾರ್ಮಿಕರು ವಿದ್ಯಾರ್ಥಿಗಳ ಪಾಲಿಗೆ ಆಸರೆಯಾಗಿದ್ದ ಚಾಮರಾಜನಗರದ ಗುಂಡ್ಲುಪೇಟೆ ಪಟ್ಟಣದ ಇಂದಿರಾ ಕ್ಯಾಂಟಿನ್ ದಿಢೀರ್ ಮುಚ್ಚಿರುವ ಕುರಿತು ಇಂದಿನ "ಕನ್ನಡಪ್ರಭ" ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

2013ರಲ್ಲಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ಆರಂಭಗೊಂಡ ಇಂದಿರಾ ಕ್ಯಾಂಟಿನ್‌ನ ಟೆಂಡರ್ ಬದಲು ಹಾಗೂ ಅನುದಾನವಿಲ್ಲ ಎಂಬ ಕಾರಣದ ಹಿನ್ನೆಲೆಯಲ್ಲಿ ಕಳೆದ ಮೂರು ದಿನಗಳಿಂದ ಮುಚ್ಚಿರುವ ಸಂಗತಿ ತಿಳಿದು ಬಂದಿರುತ್ತದೆ. ಪರಿಣಾಮ ಬಡವರು ಕಾರ್ಮಿಕರು ಹಾಗೂ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿದ್ದು, ಇಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ಕಳೆದ 6 ತಿಂಗಳುಗಳಿಂದ ವೇತನ ನೀಡದಿರುವುದು ರೇಷನ್ ಹಾಗೂ ಗ್ಯಾಸ್ ಸಲುವಾಗಿ ಅನುದಾನ ಒದಗಿಸದಿರುವುದು ದುರ್ದೈವದ ಸಂಗತಿಯಾಗಿರುತ್ತದೆ. ಇದರಿಂದಾಗಿ ಇಂದಿರಾ ಕ್ಯಾಂಟಿನ್‌ಗೆ ಬೀಗ ಜಡಿಯಲಾಗಿದೆ. ಟೆಂಡರ್ ಅವಧಿ ಪೂರ್ಣಗೊಳ್ಳುವ ಮೊದಲೇ ಹೊಸ ಟೆಂಡರ್ ನೀಡಲು ಕ್ರಮ ಕೈಗೊಳ್ಳದಿರುವುದು ಸರ್ಕಾರದ ಲೋಪವಾಗಿರುತ್ತದೆ.

ಸರ್ಕಾರ ತಕ್ಷಣವೇ ಬಡವರು ಕಾರ್ಮಿಕರು ಮತ್ತು ಬಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಗುಂಡ್ಲುಪೇಟೆಯ ಇಂದಿರಾ ಕ್ಯಾಂಟಿನ್‌ಗೆ ಮರುಚಾಲನೆ ನೀಡಿ ಆಹಾರ ವಿತರಣೆ ಮಾಡಲು ಕ್ರಮ ಕೈಗೊಳ್ಳಬೇಕು ಹಾಗೂ ಅಗತ್ಯವಿರುವ ಅನುದಾನವನ್ನು ಸಹ ಕೂಡಲೇ ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಒತ್ತಾಯಿಸುತ್ತೇನೆ.

ಶ್ರೀ ಈಶ್ವರ ಬಿ. ಖಂಡ್ರೆ (ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒ) **ವಿಷಯ:- ಮುಧೋಳ ಜಿಲ್ಲೆ ಗ್ರಂಥಾಲಯಗಳಲ್ಲಿ ರತ್ನತ್ರಯರಲ್ಲಿ ಒಬ್ಬರಾದ ರನ್ನನ ಸಾಹಿತ್ಯ ಜೀವನದ ಕುರಿತು ಕೃತಿಗಳು ಸಂಗ್ರಹ, ಭಾಷಾಂತರದಂತಹ ಕಾರ್ಯಗಳನ್ನು ಪೂರ್ಣಗೊಳಿಸಲು ಸರ್ಕಾರ ಮುಂದಾಗಬೇಕಾದ ಕುರಿತು.**

ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ದಿನಾಂಕ 1103.2025ರಂದು ಕನ್ನಡ ದಿನಪತ್ರಿಕೆಯೊಂದರಲ್ಲಿ ಪ್ರಕಟಣೆಗೊಂಡಿರುವ "ರನ್ನ ಸಂಶೋಧನೆ ಕೇಂದ್ರಕ್ಕೆ ಗರ" ಎಂಬ ಶೀರ್ಷಿಕೆಯಡಿ ವರದಿಯಾಗಿರುವುದನ್ನು ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೋರುತ್ತೇನೆ.

ಇತ್ತೀಚೆಗಷ್ಟೇ 6ನೇ ರನ್ನ ಸಾಂಸ್ಕೃತಿಕ ವೈಭವ ಭರ್ಜರಿಯಾಗಿ ನಡೆದಿದ್ದು, ಜಿಲ್ಲೆಯ ಜನರಿಗೆ ಅತ್ಯಂತ ಸಂತೋಷ ತಂದಿರುವುದು ಸರಿಯಷ್ಟೇ ಆದರೆ 16 ವರ್ಷಗಳೇ ಕಳೆದರೂ ರನ್ನ ಸಂಶೋಧನೆ ಕೇಂದ್ರ ಮಾತ್ರ ಸಕ್ರಿಯವಾಗುತ್ತಿಲ್ಲ ಎಂಬುದು ಜನರಿಗೆ ಅಸಮಾಧಾನ ತಂದಿದೆ. ಹೌದು 2009 ರಲ್ಲಿ ಇಲ್ಲಿನ ರನ್ನ ಗ್ರಂಥಾಲಯದಲ್ಲಿ ರನ್ನ ಸಂಶೋಧನಾ ಕೇಂದ್ರದ ಬೋರ್ಡ್ ನೇತು ಹಾಕಲಾಗಿದೆ. ಅದರೆ, ಸಂಶೋಧನಾ ಕೇಂದ್ರ ಚಟುವಟಿಕೆಗಳಿಗೆ ಅವಕಾಶ ಇಲ್ಲದೇ ಇರುವುದು ವರದಿಯಾಗಿದೆ.

ಕವಿ ಚಕ್ರವರ್ತಿ ರನ್ನನ ಬಗ್ಗೆ ಇರುವ ದಾಖಲೆಗಳ ಕುರಿತು ಸಂಗ್ರಹಣೆ ಹಾಗೂ ಅವುಗಳ ಸಂಗ್ರಹಣೆಗೆ ಮ್ಯೂಜಿಯಂ ಕಾರ್ಯಗಳು ನಡೆಯುತ್ತಿಲ್ಲ. ಸಂಶೋಧನೆ ಕೇಂದ್ರದ ಮೂಲಕ ರನ್ನನ ಕೃತಿಗಳನ್ನು ಪ್ರಕಟಿಸಿ ಜನರಿಗೆ ಮುಟ್ಟಿಸುವ ಕೆಲಸ ಅಗುತ್ತಿಲ್ಲ. ಈ ಕಾರ್ಯವನ್ನು ರಾಜ್ಯ ಸರ್ಕಾರ ಅತ್ಯಗತ್ಯವಾಗಿ ಮಾಡಬೇಕಾಗಿದೆ. ಕವಿಯ 5 ಕೃತಿಗಳು ಹಳೆಗನ್ನಡದಿಂದ ಕನ್ನಡಕ್ಕೆ ಭಾಷಾಂತರಗೊಳಿಸಬೇಕಿದೆ. ರನ್ನನ ಬಗ್ಗೆ ಸ್ಪಷ್ಟವಾಗಿರುವ ಸಂಶೋಧನೆಗಳು ನಡೆಯಬೇಕಿದೆ. ಆದರೆ, ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಮಾತ್ರ ಈ ಕುರಿತು ಗಮನ ಹರಿಸುತ್ತಿಲ್ಲ ಎಂಬ ದೂರುಗಳಿವೆ.

ಕವಿ ರನ್ನನ ಕೆಲ ಹಳಗನ್ನಡದ ಗ್ರಂಥಗಳು ಕನ್ನಡಕ್ಕೆ ಭಾಷಾಂತರಿಸುವ ಅಗತ್ಯವಿದ್ದು, ಕವಿಗಳು, ಬರಹಗಾರರು ಮತ್ತು ಸಂಶೋಧಕರಿಗೆ ಈ ಕಾರ್ಯ ಒದಗಿಸಿದರೆ ಭಾಷಾಂತರಕ್ಕೆ ಚಾಲನೆ ದೊರೆಯಲಿದೆ. ಮುಧೋಳದಲ್ಲಿನ ಗ್ರಂಥಾಲಯದಲ್ಲಿ ರನ್ನನ ಕಾವ್ಯ ಗದಾಯುದ್ಧ ಕುರಿತು ಎರಡು ಕೃತಿಗಳು ಮಾತ್ರ ಇವೆ. ರನ್ನನ ಜೀವನ, ಸಾಹಿತ್ಯದ ಕುರಿತು ಬರಹಗಾರರು, ಲೇಖಕರು ತಮ್ಮ ಕೃತಿಗಳನ್ನು ಗ್ರಂಥಾಲಯಕ್ಕೆ ಒದಗಿಸಬೇಕಾಗಿದೆ. ಅದು ಅನಿವಾರ್ಯವೂ ಆಗಿದೆ.

ರನ್ನನ ಕುರಿತು ಮುದೋಳ, ಬೆಳಗಲಿ ಸೇರಿದಂತೆ ರಾಜ್ಯದ ಇತರೆ ಜಿಲ್ಲೆಗಳಲ್ಲಿರುವ ಮಾಹಿತಿ ಮತ್ತು ಸಾಹಿತ್ಯ ಸಂಗ್ರಹಕ್ಕೆ ಜಿಲ್ಲಾಡಳಿತ ನಿರ್ದೇಶನ ನೀಡಬೇಕು. ಸಂಶೋಧನಾ ವಿದ್ಯಾರ್ಥಿಗಳಿಗೆ ರನ್ನನ ಸಾಹಿತ್ಯದ ಕುರಿತು ಸಂವಾದಗಳನ್ನು ಏರ್ಪಡಿಸಬೇಕು. ಇತ್ತೀಚೆಗೆ ಬೆಳಗಲಿ ಹಾಗೂ ಮುಧೋಳದಲ್ಲಿ ರನ್ನ ವೈಭವ 2025 ಎಂಬ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅತ್ಯದ್ಭುತ ಕಾರ್ಯಕ್ರಮ ಆಯೋಜನೆಯಲ್ಲಿ ಸ್ಥಳೀಯ ಹಾಗೂ ನಾಡಿನ ಹಿರಿಯ, ಕಿರಿಯ ಸಾಹಿತಿಗಳು, ಲೇಖಕರು, ಸಂಶೋಧಕರು ರನ್ನನ ಕೃತಿಗಳ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ ಇನ್ನು ಹೆಚ್ಚಿನ ಸಂಶೋಧನೆ ಕಾರ್ಯಗಳು ಆಗಬೇಕೆಂದು ಒತ್ತಾಯಿಸಿದ್ದಾರೆ.

ಈ ನಿಟ್ಟಿನಲ್ಲಿ ರತ್ನತ್ರಯದಲ್ಲಿ ಒಬ್ಬರಾದ ರನ್ನನ ಸಾಹಿತ್ಯ ಜೀವನದ ಕುರಿತು ಕೃತಿಗಳು ಸಂಗ್ರಹ, ಭಾಷಾಂತರ ಅಂತಹ ಮಹತ್ವದ ಕಾರ್ಯಗಳನ್ನು ಪೂರ್ಣಗೊಳಿಸಲು ನಾನು ತಮ್ಮ ಮೂಲಕ ರಾಜ್ಯ ಸರ್ಕಾರ ಮುಂದಾಗಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಶಿವರಾಜ ಎಸ್ ತಂಗಡಗಿ (ಕನ್ನಡ ಮತ್ತು ಸಂಸ್ಕೃತಿ ಸಚಿವರು):- ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು, ಮಾನ್ಯ ಸದಸ್ಯರಿಗೆ ನಾಳೆ ಉತ್ತರವನ್ನು ಒದಗಿಸುತ್ತೇನೆ.

೮. ಪ್ರಕಟಣೆ

ಉಪ ಸಭಾಪತಿಯವರು:- ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯ "ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2025" ಹಾಗೂ "ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ (ತಿದ್ದುಪಡಿ) ವಿಧೇಯಕ, 2025ನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಹಾಗೂ ಈ ಕೆಳಕಂಡ ವಿಧೇಯಕಗಳನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿರುತ್ತದೆಂದು ಮತ್ತು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ, 2024, (ವಿಧೇಯಕ ಸಂಖ್ಯೆ 34)
2. ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂಖ್ಯೆ-2)
3. ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂಖ್ಯೆ-4)
4. ಕರ್ನಾಟಕ ಕಿರು (Micro) ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ವಿಧೇಯಕ, 2025 (ವಿಧೇಯಕ ಸಂಖ್ಯೆ-6)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

6. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ

ಸಭಾಪತಿಯವರು:– ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾನ್ಯ ಎಸ್.ವಿ. ಸಂಕನೂರರವರೇ, ತಾವು ಮಾತನಾಡಿ. ತಮಗೆ ಮಾತನಾಡುವುದಕ್ಕೆ ಹತ್ತು ನಿಮಿಷ ಸಮಯ ಅವಕಾಶ ಮಾಡಿಕೊಟ್ಟಿದ್ದೇನೆ. ದಯವಿಟ್ಟು, ಸಮಯವನ್ನು ಪಾಲನೆ ಮಾಡಿ.

ಶ್ರೀ ಎಸ್.ವಿ. ಸಂಕನೂರ (ಪದವೀಧರರ ಕ್ಷೇತ್ರ):– ಮಾನ್ಯ ಸಭಾಪತಿಯವರೇ,

ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ,

ಉಪ ಸಭಾಪತಿಯವರು:– ಮಾನ್ಯ ನಾಗರಾಜುರವರೇ, ತಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ತಾವು ಆತುರ ಪಡಬೇಡಿ.

ಶ್ರೀ ಎಂ. ನಾಗರಾಜು:– ಮಾನ್ಯ ಸಭಾಪತಿಯವರೇ, ಇದೇ ವಿಷಯದ ಕುರಿತಾಗಿ ಮಾತನಾಡಿದ್ದೆ. ಹಾಗಾಗಿ ಉಳಿದ ಭಾಗವನ್ನು ಮುಂದುವರೆಸುತ್ತೇನೆ.

ಶ್ರೀಮತಿ ಭಾರತಿ ಶೆಟ್ಟಿ:– ಮಾನ್ಯ ಸದಸ್ಯರು ಮಾತನಾಡಿದ್ದು ಆಗಿದೆ.

ಉಪ ಸಭಾಪತಿಯವರು:– ಮಾನ್ಯ ಸದಸ್ಯರೇ, ತಾವು ಮಾತನಾಡಿದ್ದಾಗಿದ್ದರೆ ಒಂದು ನಿಮಿಷ ಕುಳಿತುಕೊಳ್ಳಿ. ಈಗ ಸಮಯವಿಲ್ಲ. ನಾಳೆಯಿಂದ ಬಜೆಟ್ ಮೇಲೆ ಚರ್ಚೆಯಾಗಬೇಕಾಗಿದೆ. ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿ ಆಗಿದೆ. ಮಾನ್ಯ ನಾಗರಾಜುರವರೇ, ತಮ್ಮ ಮಾತನ್ನು ಐದು ನಿಮಿಷದಲ್ಲಿ ಮುಗಿಸಿ. ಈಗ ತಾವು ಮಾತನಾಡಿ.

ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಪೀಠಕ್ಕೆ ಗೌರವ ಕೊಟ್ಟು, ನನ್ನ ಮಾತನ್ನು ಹತ್ತು ನಿಮಿಷದಲ್ಲಿ ಮುಗಿಸುತ್ತೇನೆ.

ಉಪ ಸಭಾಪತಿಯವರು:– ಮಾನ್ಯ ನಾಗರಾಜುರವರೇ, ಸಮಯವನ್ನು ಕಡ್ಡಾಯವಾಗಿ ಪಾಲನೆ ಮಾಡತಕ್ಕದ್ದು.

ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ನಾನು ಮೊನ್ನೆ ತಾನೇ ಐದು ಗ್ಯಾರಂಟಿ ವಿಚಾರಗಳನ್ನು ಮಾತನಾಡಿದ್ದೆ ಮತ್ತು ಸರ್ಕಾರ ಕೈಗೊಂಡಿರುವ ಹಲವಾರು ಕ್ರಮಗಳ ಬಗ್ಗೆ ವಿಚಾರವನ್ನು ಪ್ರಸ್ತಾಪ ಮಾಡಿರುವುದು ನಿಜ. ಮೊನ್ನೆ ನನ್ನ ಮಾತನ್ನು ಎಲ್ಲಿ ನಿಲ್ಲಿಸಿದ್ದೇನೆಯೋ, ಅದರ ಮುಂದಿನ ಭಾಗವನ್ನು ಮಾತನಾಡುವುದಕ್ಕೆ ಇಷ್ಟ ಪಡುತ್ತೇನೆ. ಕರ್ನಾಟಕದಲ್ಲಿ ರಾಜ್ಯಪಾಲರ ಭಾಷಣದ ಬಗ್ಗೆ ಅತ್ಯಂತ ಗೌರವ ಕೊಡುವುದರ ಬಗ್ಗೆ ವಿಶ್ಲೇಷಣೆ ಮಾಡಿ, ಕೃತಜ್ಞತೆಗಳನ್ನು ಹೇಳುವಂತಹ ವಿಚಾರದಲ್ಲಿ ನಾವೆಲ್ಲರೂ ವಂದನಾ ನಿರ್ಣಯ ಕೈಗೊಳ್ಳಬೇಕೆಂದು ನಾವು ಇಲ್ಲಿ ಸೇರಿರುವಂತಹದ್ದು. ಈ ವಿಚಾರ ಮಾತನಾಡುವ ಸಂದರ್ಭದಲ್ಲಿ ತನೇ ತಾರೀಖಿನಂದು ಮಾನ್ಯ ರಾಜ್ಯಪಾಲರು ಭಾಷಣವನ್ನು ಮಾಡಿರುತ್ತಾರೆ. ಅದು ಅತ್ಯುತ್ತಮವಾದ ಭಾಷಣವಾಗಿದೆ ಎಂದು ಈಗಾಗಲೇ ಹೇಳಿರುವಂತಹದ್ದನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಮ್ಮ ಗಮನಕ್ಕೆ ತರಬಯಸುತ್ತೇನೆ. ರಾಜ್ಯಪಾಲರ ಭಾಷಣದ ವಿಚಾರ ಬಂದಾಗ, ಪ್ಯಾರಾಗ್ರಾಫ್ 2 ರಲ್ಲಿ ಹೇಳಿರುವುದನ್ನು ನೋಡಿದಾಗ, 2024-25ನೇ ಸಾಲಿನಲ್ಲಿ ಬಜೆಟ್‌ನಲ್ಲಿ 344 ಘೋಷಣೆಗಳಿದ್ದವು. ಅದರ ಪೈಕಿ 331 ಘೋಷಣೆಗಳ ಅನುಷ್ಠಾನಕ್ಕಾಗಿ ಸರ್ಕಾರಿ ಆದೇಶ ಹೊರಡಿಸಿರುವುದು ಸ್ವಾಗತಾರ್ಹ ವಿಚಾರ ಎಂದು ಹೇಳಬಯಸುತ್ತೇನೆ. ತದನಂತರ ಪ್ಯಾರಾಗ್ರಾಫ್ 3 ರಲ್ಲಿರುವಂತೆ, ಸರ್ಕಾರ ಕೈಗೊಂಡಿರುವಂತಹ ಅತ್ಯುತ್ತಮವಾದ ಮೂಲಭೂತ ಸೌಲಭ್ಯಗಳ ವಿಚಾರಗಳು ಇರಬಹುದು. ಐದು ಗ್ಯಾರಂಟಿ ಯೋಜನೆಗಳನ್ನು ಕೊಟ್ಟಿರುವಂತಹ ವಿಚಾರ ಇರಬಹುದು. ಈ ಎಲ್ಲಾ ಒಟ್ಟಾರೆಯಾಗಿ ಆಗಿರುವಂತಹ ಪರಿಣಾಮ ಏನೆಂದರೆ, ಕರ್ನಾಟಕ ರಾಜ್ಯದಲ್ಲಿ ಆತ್ಮಹತ್ಯೆ, ಬಡತನದ ಹಲವಾರು ಪ್ರಕರಣಗಳನ್ನು ನಾವು ನೋಡಿದ್ದೇವೆ. ಸಾಲದ ಭಾದೆಯಿಂದ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ನಾನು ನೋಡಿರುವ ಸಂದರ್ಭದಲ್ಲಿ ಅದಕ್ಕೆ ಎಲ್ಲವೂ ಪರಿಹಾರದ ರೀತಿಯಲ್ಲಿ ರೈತರು ಆತ್ಮಹತ್ಯೆ ಕಡಿಮೆಯಾಗಿರುವ ಬಗ್ಗೆ ಸರ್ಕಾರ ಕೈಗೊಂಡಿರುವಂತಹ ಕಲ್ಯಾಣ ಕಾರ್ಯಕ್ರಮಗಳು ಕಾರಣ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಹಾಗೆಯೇ, ಪ್ಯಾರಾಗ್ರಾಫ್ 4 ರಲ್ಲಿರುವಂತೆ, ಹೈನುಗಾರಿಕೆ ವಿಚಾರದ ಬಗ್ಗೆ ಹೇಳುತ್ತೇನೆ. ನಾನು ಕೂಡ ಪಶು ಪಾಲನಾ ಸಮುದಾಯದಿಂದ ಬಂದವನು. ಮಾನ್ಯ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸಚಿವರು ಕೂಡ ಸದನದಲ್ಲಿದ್ದಾರೆ. ಮಾನ್ಯ ಸಚಿವರು ಹೈನುಗಾರಿಕೆಗೆ ಒತ್ತು ಕೊಟ್ಟಿರುವಂತಹದ್ದು. ಕರ್ನಾಟಕ ರಾಜ್ಯದಲ್ಲಿ ಪ್ರತಿ ದಿನ 1 ಕೋಟಿ ಲೀಟರ್ ಹಾಲನ್ನು ಸಂಗ್ರಹಿಸಿದ್ದು ದೇಶದಲ್ಲಿಯೇ ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ ಎಂಬ ಉದಾಹರಣೆ ಮಾತನ್ನು ಹೇಳುತ್ತಿದ್ದೇನೆ.

(ಮುಂದು)

(201) 11.03.2025/1.30/ಬಿಸಿಹೆಚ್-ಆರ್‌ಎನ್ (ಉಪ ಸಭಾಪತಿಯವರ ಉಪಸ್ಥಿತಿ)

ಶ್ರೀ ಎಂ.ನಾಗರಾಜು (ಮುಂದು)

ಮತ್ತೆ ಕುರಿಗಳು, ಮೇಕೆಗಳು, ಹಸುಗಳು ಮತ್ತು ಪಶುಗಳು ಯಾವುದಾದರೂ ಕೂಡ ಆಕಸ್ಮಿಕವಾಗಿ ಮರಣ ಹೊಂದಿದಾಗ ಅದಕ್ಕೆ ಸರ್ಕಾರಗಳು ಸಹಾಯ ಮಾಡಬೇಕೆಂದು ಸುಮಾರು ರೂ.26.6 ಕೋಟಿಗಳನ್ನು ಈಗಾಗಲೇ ಖರ್ಚು ಮಾಡಿರುವುದು ಒಳ್ಳೆಯ ಬೆಳವಣಿಗೆ. ಅದನ್ನು ಇನ್ನು ಸ್ವಲ್ಪ ಹೆಚ್ಚು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಹಾಗೆಯೇ ಪ್ಯಾರಾ ನಂಬರ್ 9ರಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವ ದೃಷ್ಟಿಯಿಂದ 2002ರಲ್ಲಿ ಡಾ. ಡಿ.ಎಂ.ನಂಜುಂಡಪ್ಪನವರ ನೇತೃತ್ವದಲ್ಲಿ ಒಂದು ಕಮಿಟಿ ರಚನೆ ಮಾಡಿದ್ದರು. ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸುವುದಕ್ಕೋಸ್ಕರ ಒಂದು ಸಮಿತಿಯನ್ನು ರಚನೆ ಮಾಡಿ ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿರುತ್ತಾರೆ. ಆ ವರದಿಯನ್ನು ಸರ್ಕಾರವು ಬಹಳ ಪ್ರಾಮುಖ್ಯತೆಯಿಂದ ಸ್ವೀಕರಿಸಿ, ಅದನ್ನು ಅನುಷ್ಠಾನಗೊಳಿಸುವುದಕ್ಕೋಸ್ಕರ ಡಾ. ಎಂ.ಗೋವಿಂದರಾವ್ ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ಸಮಿತಿಯ ವರದಿಯನ್ನು ಆಧರಿಸಿ ಇದುವರೆಗೆ ರೂ.37,662 ಕೋಟಿಗಳನ್ನು ಖರ್ಚು ಮಾಡಲಾಗಿದೆ. ಕರ್ನಾಟಕ ರಾಜ್ಯದಲ್ಲಿ, ಹಳೆಯ ಮೈಸೂರು ಇರಬಹುದು, ಉತ್ತರ ಕರ್ನಾಟಕ ಇರಬಹುದು ಮತ್ತು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಲ್ಯಾಣ ಕರ್ನಾಟಕ ಇರಬಹುದು. ಎಲ್ಲವೂ ಕೂಡ ಕನ್ನಡಿಗರ ನಾಡು ಆಗಿರತಕ್ಕಂಥದ್ದು ಸಮತೋಲನವಾಗಿ ಬೆಳೆಯಬೇಕೆಂಬ ದಿಟ್ಟ ನಿಲುವನ್ನು ತೆಗೆದುಕೊಂಡಿರತಕ್ಕಂಥ ಸನ್ಮಾನ್ಯ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರದ ಕ್ರಮಗಳನ್ನು ನಾನು ಈ ಸಂದರ್ಭದಲ್ಲಿ ಪ್ರಸಂಶಿಸಲು ಇಚ್ಛೆಪಡುತ್ತೇನೆ. ಅದೇ ರೀತಿ ಅಭಿವೃದ್ಧಿ ವಿಚಾರಕ್ಕೋಸ್ಕರ Capital Investment ವಿಚಾರ ಬಂದಾದ ಸಾಕಷ್ಟು ಬಾರಿ ಟೀಕೆ ಟಿಪ್ಪಣಿಗಳನ್ನು ಮಾಡಿದ್ದರು. ಈ ಗ್ಯಾರಂಟಿ ಯೋಜನೆಗಳಿಗೆ ಕೊಡುವುದರಿಂದ ರೂ.52,000 ಕೋಟಿಗಳನ್ನು ನೀವು ಕೇವಲ ಕಲ್ಯಾಣ ಕಾರ್ಯಕ್ರಮಗಳಿಗೆ ಕೊಡುತ್ತಿದ್ದೀರಿ. ನೀವು ಅಭಿವೃದ್ಧಿಗೆ ದುಡ್ಡು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಟೀಕೆ-ಟಿಪ್ಪಣಿಗಳನ್ನು ಮಾಡಿದಂತಹ ಸಂದರ್ಭದಲ್ಲಿ ಕಳೆದ ಬಾರಿ 2024-2025ರಲ್ಲಿ ಶೇ.15.1 ರಷ್ಟು ದುಡ್ಡನ್ನು Capital Investment ಖರ್ಚು ಮಾಡಿರುವುದು ಕೂಡ ಒಂದು ಒಳ್ಳೆಯ ಬೆಳವಣಿಗೆ. ಒಂದು ಸುಭದ್ರವಾಗಿರತಕ್ಕಂಥ ಸರ್ಕಾರ ಮಾಡಬೇಕಾದಂತಹ ಕೆಲಸವನ್ನು ಮಾಡಿದೆ ಎನ್ನವ ಮಾತನ್ನು ಹೇಳುತ್ತಿದ್ದೇನೆ. ಪ್ಯಾರಾ ನಂಬರ್ 14ರಲ್ಲಿ ನಮ್ಮ ರಾಜ್ಯದಲ್ಲಿ Tax Collection ನೋಡಿದಾಗ, GST Collection increase ಆಗಿರುವುದನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿ ಸಮಾಜದಲ್ಲಿ ಆರ್ಥಿಕ ದರ್ಬಲವಾಗಿರತಕ್ಕಂಥವರ ಮೇಲೆ ಕಿರುಕುಳ, ಹಿಂಸೆ ಮತ್ತು ಒತ್ತಡದಲ್ಲಿ ಸಾಲ collection ಮಾಡುತ್ತಿದ್ದರು. ಇದು ಸಮಸ್ಯೆಗಳಾಗಿರತಕ್ಕಂಥ ವಿಚಾರದಲ್ಲಿ ಅವರಿಗೆ ಕಡಿವಾಣ ಹಾಕಬೇಕೆಂದು ಆರ್ಥಿಕವಾಗಿ ದುರ್ಬಲವಾಗಿರುವವರ ಮೇಲೆ ದೌರ್ಜನ್ಯ ನಡೆಯಬಾರದು, ಕಿರುಕುಳ ನಡೆಯಬಾರದು ಮತ್ತು ಅವರ ಮೇಲೆ ಆಗತಕ್ಕಂಥ ಮಾನಸಿಕ ಹಿಂಸೆಗಳನ್ನು ತಡೆಗಟ್ಟುವುದಕ್ಕೋಸ್ಕರ ರಾಜ್ಯ ಸರ್ಕಾರ ಒಂದು ಸುಗ್ರೀವಾಜ್ಞೆಗಳನ್ನು ತಂದು ಅಂತಹ ವಿಚಾರಗಳಲ್ಲಿ ಕಡಿವಾಣ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿರುವುದು ಕೂಡ ಒಳ್ಳೆಯ ಬೆಳವಣಿಗೆಯನ್ನು ಗೌರವಾನ್ವಿತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿರುವುದು ಬಹಳ ಸ್ವಾಗತಾರ್ಹವಾದ ಕ್ರಮ ಎನ್ನುವ ವಿಚಾರವನ್ನು ಹೇಳುತ್ತಿದ್ದೇನೆ. ಅದೇರೀತಿ ಪ್ಯಾರಾ ನಂಬರ್ 20ರಲ್ಲಿ ಜನವರಿ 2025ರ ಅಂತ್ಯಕ್ಕೆ 20.22 ಲಕ್ಷ ರೈತರಿಗೆ ಸುಮಾರು ರೂ.16,942 ಕೋಟಿಗಳನ್ನು ಬೆಳೆ ಸಾಲ ಮತ್ತು 46,000 ರೈತರಿಗೆ ರೂ.1,442 ಕೋಟಿಗಳ ಮಧ್ಯಮಾವಧಿ ಮತ್ತು ಧೀರ್ಘಾವಧಿ ಕೃಷಿ ಸಾಲಗಳನ್ನು ವಿತರಿಸಲಾಗಿದೆ. ಈ ವರ್ಷದಲ್ಲಿ ಸಹಕಾರ ಸಂಘಗಳಿಗೆ ಬಡ್ಡಿ ಸಹಾಯಧನ ನೀಡಲು ರೂ.1,451 ಕೋಟಿಗಳನ್ನು ಒದಗಿಸಿ ಖರ್ಚು ಮಾಡಿರುವುದು ಕೂಡ ಉತ್ತಮ ಕೆಲಸಗಳಿಗೆ ಕೈಗನ್ನಸಿಯಾಗಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಅದೇರೀತಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಬೃಹತ್ ಕೈಗಾರಿಕಾ ಸಚಿವರ ನೇತೃತ್ವದಲ್ಲಿ ರಾಜ್ಯ ಸರ್ಕಾರವು ರೂ.40,000 ಕೋಟಿ ಬಂಡವಾಳ ಹೂಡಿಕೆಯ ಯೋಜನೆ ಇಟ್ಟುಕೊಂಡು KWIN (knowledge, Well-being, and Innovation) City ಎಂದು ಮಾಡುವುದಕ್ಕೋಸ್ಕರ ಅದನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಒಂದು ಉತ್ತಮವಾದ ಯೋಜನೆಯನ್ನು ಮಾಡಿ ಇದರಿಂದ ರೂ.80,000 ಹುದ್ದೆಗಳನ್ನು ಸೃಷ್ಟಿಮಾಡಲು ಸರ್ಕಾರ ಮಾಡಿಕೊಂಡಿರತಕ್ಕಂಥ ಬಹುದೊಡ್ಡ ಯೋಜನೆಯನ್ನು ಬೆಂಗಳೂರಿನ ಗ್ರಾಮಾಂತರ ಪ್ರದೇಶದಲ್ಲಿ ಮಾಡುತ್ತಿರುವ ಯೋಜನೆಯನ್ನು ಕೂಡ ನಾನು ಸ್ವಾಗತ ಮಾಡುತ್ತೇನೆ. ಅದನ್ನೂ ಕೂಡ ಗೌರವಾನ್ವಿತ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖ ಮಾಡಿರುವುದನ್ನು ಕೂಡ ನಾನು ಸ್ವಾಗತ ಮಾಡುತ್ತೇನೆ. ಅದೇ ರೀತಿ ನೇಕಾರ ಸಮ್ಮಾನ್ ಯೋಜನೆಯಡಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2024-25ನೇ ಸಾಲಿಗೆ 1,16,189 ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಗೆ ಒಟ್ಟು ರೂ.81 ಕೋಟಿಗಳ ಅನುದಾನ ನೀಡಿ ಅವರಿಗೆ ಸಹಾಯವನ್ನು ಮಾಡಿರುವುದನ್ನು ಕೂಡ ಬಹಳ ಸ್ವಾಗತವಾಗಿರತಕ್ಕಂಥದ್ದು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದೊಂದಿಗೆ 148.17 ಕಿಲೋಮೀಟರ್ ಉದ್ದದ ಬೆಂಗಳೂರು ಉಪನಗರ ರೈಲ್ವೆ ಯೋಜನೆಯ ಜಾಲವನ್ನು ರಚನೆ ಮಾಡುವುದಕ್ಕಾಗಿ ರೂ.15,767 ಕೋಟಿಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರ ಕಟಿಬದ್ಧವಾಗಿ ಖರ್ಚು ಮಾಡುತ್ತಿರುವುದಕ್ಕೂ ಕೂಡ ಗೌರವಾನ್ವಿತ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖಿಸಿರುವುದು ಕೂಡ ಬಹಳ ಸ್ವಾಗತಾರ್ಹವಾದ ಕ್ರಮ ಎಂದು ಹೇಳುತ್ತಿದ್ದೇನೆ. ಪ್ಯಾರಾ ನಂಬರ್ 34 ರಲ್ಲಿರುವಂತೆ ನವೆಂಬರ್ 2024ರ ದಿನಾಂಕ 19ರಿಂದ 21 ರವರೆಗೆ ಆಯೋಜಿಸಿದ್ದ ಬೆಂಗಳೂರು Tech Summit ಮಾಡಿರಕ್ಕಂಥದ್ದು ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ಭಾರತ ದೇಶದಲ್ಲಿಯೇ ಅತ್ಯುತ್ತಮವಾದಂತ ಒಂದು ಟೆಕ್-ಶೃಂಗಸಭೆಯನ್ನು ಮಾಡುತ್ತಾರೆ. ಟೆಕ್-ಶೃಂಗಸಭೆಯಲ್ಲಿ ಭಾಗವಹಿಸಿದ್ದ 51 ದೇಶಗಳಿಂದ ಒಟ್ಟಾರೆ ಸುಮಾರು 35,000 ಕ್ಕೂ ಹೆಚ್ಚು ಪ್ರತಿನಿಧಿಗಳನ್ನು to help the entire start-up companies today, to do innovation in the matter of technology, ಆಕರ್ಷಣೆ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಪ್ಯಾರಾ-38 ರಲ್ಲಿ . . .

ಉಪ ಸಭಾಪತಿಯವರು:- ಮಾನ್ಯ ಎಂ.ನಾಗರಾಜುರವರೇ, ನಿಮಗೆ 5 ನಿಮಿಷ ಮಾತನಾಡಲು ಅವಕಾಶ ಕೊಡಲಾಗಿತ್ತು. ಆದರೆ ತಾವು ಸುಮಾರು 15 ನಿಮಿಷಗಳ ಕಾಲ ಮಾತನಾಡಿದ್ದೀರಿ, ಸಾಕು.

ಶ್ರೀ ಎಂ.ನಾಗರಾಜು:- ಮಾನ್ಯ ಸಭಾಪತಿಯವರೇ, ನಾನು 5 ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ.

ಉಪ ಸಭಾಪತಿಯವರು:- ಮಾನ್ಯ ಎಂ.ನಾಗರಾಜುರವರೇ, ಆಗುವುದಿಲ್ಲ. ನೀವು ಕೇವಲ 2 ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಎಂ.ನಾಗರಾಜು:- ಮಾನ್ಯ ಸಭಾಪತಿಯವರೇ, Ok.

ಉಪ ಸಭಾಪತಿಯವರು:- ಮಾನ್ಯ ಎಂ.ನಾಗರಾಜುರವರೇ, ನೀವು ನಿನ್ನೆ ದಿವಸ ಸುಮಾರು 15 ನಿಮಿಷಗಳ ಕಾಲ ಮಾತನಾಡಿದ್ದೀರಿ. ಒಟ್ಟು ಸುಮಾರು 25 ನಿಮಿಷಗಳ ಕಾಲ ಮಾತನಾಡಿದ್ದೀರಿ.

ಶ್ರೀ ಎಂ.ನಾಗರಾಜು:- ಮಾನ್ಯ ಸಭಾಪತಿಯವರೇ, 5 ನಿಮಿಷಕ್ಕಿಂತ ಹೆಚ್ಚಿಗೆ 1 ನಿಮಿಷ ತೆಗೆದುಕೊಳ್ಳುವುದಿಲ್ಲ.

ಉಪ ಸಭಾಪತಿಯವರು:- ಮಾನ್ಯ ಎಂ.ನಾಗರಾಜುರವರೇ, ಆಗುವುದಿಲ್ಲ. 2 ನಿಮಷದಲ್ಲಿ ಮಾತನಾಡಿ ಮುಗಿಸಿ. ನಾನು ಬೆಲ್ ಮಾಡಿದ ಕೂಡಲೇ ಮಾತನಾಡುವುದನ್ನು ನಿಲ್ಲಿಸಿ.

ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಹಾಗಾಗಿ ನಾನು ಕೇಳುತ್ತಿರುವುದು ಒಟ್ಟಾರೆ ಹೇಳುವುದಾದರೆ hostels ವಿಚಾರ ಇರಬಹುದು ಮತ್ತು ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ಯಾವುದೇ ವಿಚಾರಗಳಿದ್ದರೂ ಕೂಡ ಎಲ್ಲವನ್ನೂ ಕೂಡ ಸಮತೋಲನದಿಂದ ಆಲೋಚನೆ ಮಾಡಿ ಒಂದು ಅಭಿವೃದ್ಧಿಯ ಪರಿಕಲ್ಪನೆಯನ್ನಿಟ್ಟುಕೊಂಡು ಕೆಲಸ ಮಾಡುತ್ತಿರುವಂತಹ ಸರ್ವರಿಗೂ ಸಮಾನವಾಗಿರತಕ್ಕಂಥ ಆಡಳಿತವನ್ನು ಕೊಡುತ್ತಿರತಕ್ಕಂಥದ್ದನ್ನು ನಾವೆಲ್ಲರೂ ಕೂಡ ಸ್ವಾಗತ ಮಾಡಬೇಕಾಗುತ್ತದೆ. ವಿಶೇಷವಾಗಿ ಈ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರವನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಕಳೆದ 11 ವರ್ಷಗಳಲ್ಲಿ ಈ ದೇಶದಲ್ಲಿ ಬೆಲೆ ಏರಿಕೆ ಗಗನಕ್ಕೇರಿದ ಸಂದರ್ಭದಲ್ಲಿ ಅದನ್ನು ನಾವು ತಡೆಗಟ್ಟುವುದಕ್ಕೋಸ್ಕರ ಈ ಗ್ಯಾರಂಟಿ ಯೋಜನೆಗಳನ್ನು ಕೊಟ್ಟಿರುವುದು ಸಾಕಷ್ಟು ಸಹಾಯ ಆಗಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಒಂದುಕಡೆ ಕೃಷಿ ಬಿಕ್ಕಟ್ಟು ಆಗಿರುತ್ತದೆ. ಆ ಸಂದರ್ಭದಲ್ಲೂ ಕೂಡ ಕೇಂದ್ರ ಸರ್ಕಾರದ ಹಲವಾರು ನಿರ್ಣಯಗಳಿಂದ ರೈತರು ಕಂಗಾಲಾದಾಗ ಅವರಿಗೆ ಸಹಾಯ ಮಾಡುವುದಕ್ಕೆ ಸಬ್ಸಿಡಿಗಳನ್ನು ಕರ್ನಾಟಕ ರಾಜ್ಯದಲ್ಲಿ ಕೊಟ್ಟಿರುವುದು ಬಹಳ ಸಂತೋಷಕರ ಸಂಗತಿ. ಒಟ್ಟಾರೆಯಾಗಿ ಹೇಳುವುದಾದರೆ, ಕೇಂದ್ರ ಸರ್ಕಾರ ಇರಬಹುದು ಅಥವಾ ರಾಜ್ಯಸರ್ಕಾರ ಇರಬಹುದು. ಕರ್ನಾಟಕ ರಾಜ್ಯ ಒಂದು ಅಭಿವೃದ್ಧಿಶೀಲವಾಗಿರತಕ್ಕಂಥ ರಾಜ್ಯ. ಕರ್ನಾಟಕ ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ನಾವು ಅವರಿಗೆ ರೂ.100 ಕೊಟ್ಟರೆ, ಅಲ್ಲಿಂದ ನಮಗೆ ಕೇವಲ ರೂ.13 ಬರುತ್ತಿದೆ. ಎಲ್ಲೋ ಒಂದುಕಡೆ ಮಲತಾಯಿ ಧೋರಣೆ ತೋರುತ್ತಿರುವುದನ್ನು ನಾನು ಖಂಡಿಸುತ್ತೇನೆ ಎಂದು ನಾನು ಸದನದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕೊನೆಗೆ ಒಂದು ಮಾತು ಹೇಳುವುದಾದರೆ, ಹಲವಾರು ವಿಚಾರಗಳಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಇವತ್ತಿನವರೆಗೂ ಕೂಡ ಹಲವಾರು ಯೋಜನೆಗಳನ್ನು ಕೊಟ್ಟಿದ್ದರು. ಉದಾಹರಣೆಗೆ ಹೇಳುವುದಾದರೆ 'ನಿರ್ಮಲ್ ಭಾರತ್ ಅಭಿಯಾನ್' ಎಂದು ಒಂದು ಕಾರ್ಯಕ್ರಮ ಇರುತ್ತದೆ. ಅದನ್ನು label change ಮಾಡಿ, 'ಸ್ವಚ್ ಭಾರತ್' ಎಂಬ ಕಾರ್ಯಕ್ರಮ ಕೊಡುವುದಕ್ಕೆ ಯೋಚನೆ ಮಾಡುತ್ತಾರೆ. ಬರೀ label change ಮಾಡುವುದರಿಂದ ಏನೂ ಆಗುವುದಕ್ಕೆ ಸಾಧ್ಯವೇ ಇಲ್ಲ. ಆದರೂ ಕೂಡ ಆ ರೀತಿ ಮಾಡತಕ್ಕಂಥ ಕೆಲಸವನ್ನು ಕೇಂದ್ರ ಸರ್ಕಾರ ಮಾಡುತ್ತದೆ. NULM (National Urban Livelihoods Mission) ಎಂದು ಯು.ಪಿ.ಎ ಸರ್ಕಾರ ಮಾಡಿರುತ್ತದೆ. ಅದನ್ನು 'ದೀನ್ ದಯಾಳ್ ಅಂತ್ಯೋದಯ ಯೋಜನೆ' ಎಂದು ಮಾಡುತ್ತಾರೆ. U.P.A., Government ನಲ್ಲಿ free LPG connection to BPL families ಎಂದು ಕೊಟ್ಟಿರುತ್ತಾರೆ. Pradhan Mantri Ujval Yojana ಎಂದು ಜಾರಿಗೆ ತರುತ್ತಾರೆ. ಆ ರೀತಿಯ ಹಲವಾರು ಯೋಜನೆಗಳನ್ನು ಕೇಂದ್ರ ಸರ್ಕಾರ, U.P.A., Governments ಜಾರಿಗೆ ತಂದಿದೆ. UPA-1 and UPA-2 ಶ್ರೀಮತಿ ಇಂದಿರಾಗಾಂಧಿಯವರು ಕೊಟ್ಟಂತಹ ಯೋಜನೆಗಳನ್ನು ಕೇವಲ ಲೇಬಲ್‌ಗಳನ್ನು change ಮಾಡಿ ಈ ದೇಶದಲ್ಲಿ ಮಂಕುಬೂದಿ ಎರಚಲು ಹೋಗಿರುವುದನ್ನು ಒಪ್ಪಲು ಸಾಧ್ಯವಿಲ್ಲ. ಹಾಗಾಗಿ, ಇಡೀ ದೇಶಕ್ಕೆ ಮಾದರಿಯಾಗಿರುವ ಸರ್ಕಾರವನ್ನು ಕರ್ನಾಟಕದಲ್ಲಿ ಕೊಡುತ್ತಿದೆ. ಕರ್ನಾಟಕ ರಾಜ್ಯದ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡುವುದು. ಅದು ಗ್ಯಾರಂಟಿ ಯೋಜನೆಗಳು ಇರಬಹುದು ಅಥವಾ ಬಂಡವಾಳ ಹೂಡಿಕೆ ವಿಚಾರಗಳು ಇರಬಹುದು. ನಾವು ಏನೇ ಮಾಡಿದರೂ ಕೂಡ most disciplined financial administration ಅದು ಯಾವುದಾದರೂ ಇದ್ದರೆ ಅದು ಕರ್ನಾಟಕ ರಾಜ್ಯದಲ್ಲಿ ಎನ್ನುವ ಮಾತನ್ನು ಹೇಳುತ್ತೇನೆ. ಸಾರಿಗೆ ವ್ಯವಸ್ಥೆಯಲ್ಲೂ ಕೂಡ ಅತ್ಯುತ್ತಮವಾದಂತಹ ಸಾರಿಗೆ ವ್ಯವಸ್ಥೆಯನ್ನು ಕೊಟ್ಟಿರುವುದರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಉಪ ಸಭಾಪತಿಯವರು:- ಮಾನ್ಯ ಎಂ.ನಾಗರಾಜುವರೇ, ನಿಮ್ಮ ಸಮಯ ಮುಗಿಯಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಂ.ನಾಗರಾಜು:– ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಹಾಗಾಗಿ ನಾನು ಹೇಳುವುದೇನೆಂದರೆ, ಕೇಂದ್ರ ಸರ್ಕಾರ ಎನ್ನುವುದು ರಾಜ್ಯ ಸರ್ಕಾರದ ಜೊತೆಗೂಡಿ ಒಕ್ಕೂಟ ವ್ಯವಸ್ಥೆಯನ್ನು ಸದೃಢಗೊಳಿಸಬೇಕೆಂದರೆ ಕರ್ನಾಟಕದಂತಹ ಪ್ರಗತಿಪರವಾದ ರಾಜ್ಯಕ್ಕೆ ಮೀಸಲಾಗಿರುವ ನಮಗೆ ತೆರಿಗೆ ಪಾಲಿನ ಹಣವನ್ನು ಕೊಡತಕ್ಕಂಥ ಕೆಲಸವನ್ನು ಕೇಂದ್ರ ಸರ್ಕಾರ ಮಾಡಬೇಕೆಂದು ನಾನು ಆಗ್ರಹವನ್ನು ಮಾಡುತ್ತೇನೆ. ಕೊನೆಯದಾಗಿ ನಾನು ಒಂದು ಮಾತನ್ನು ಹೇಳುವುದಾದರೆ, ಗೌರವಾನ್ವಿತ ರಾಜ್ಯಪಾಲರು ಹೇಳಿರತಕ್ಕಂಥ ಎಲ್ಲಾ ವಿಚಾರಗಳನ್ನು ಕರ್ನಾಟಕ ರಾಜ್ಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಪಾರದರ್ಶಕವಾಗಿರತಕ್ಕಂಥ, ಜನಪರವಾಗಿರತಕ್ಕಂಥ ಅಭಿವೃದ್ಧಿಶೀಲವಾಗಿರತಕ್ಕಂಥ ವಿಚಾರಧಾರೆಯನ್ನು ಕೊಟ್ಟಿರುವುದನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಈ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಯಾರು ಕ್ಯಾಬಿನೆಟ್ ಸಚಿವರುಗಳಿದ್ದಾರೋ ಅವರೆಲ್ಲರಿಗೂ ಕೂಡ ಈ ರಾಜ್ಯವನ್ನು ಅಭಿವೃದ್ಧಿಯ ಕಡೆಗೆ ಕೊಂಡೊಯ್ಯತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಹಿಂದಿನ ಸರ್ಕಾರಗಳು ಲಕ್ಷಾಂತರ ರೂಪಾಯಿಗಳು ಸಾಲವನ್ನು ಮಾಡಿ, ಈ ರಾಜ್ಯದ ಆರ್ಥಿಕ ಸ್ಥಿತಿಯನ್ನು **(ಗೊಂದಲ)** ಮಾಡುತ್ತಾರೆ.

ಉಪ ಸಭಾಪತಿಯವರು:– ಮಾನ್ಯ ಎಸ್.ವ್ಹಿ.ಸಂಕನೂರರವರೇ, ತಾವು ಎದ್ದು ಮಾತನಾಡದಿದ್ದರೆ ನಿಮ್ಮ ಸಮಯ ಹೋಗುತ್ತದೆ.

ಶ್ರೀ ಎಂ.ನಾಗರಾಜು:– ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ನನ್ನ ಎರಡು ಪಾಯಿಂಟ್ ಹೇಳಿ ಮುಗಿಸುತ್ತೇನೆ.

ಉಪ ಸಭಾಪತಿಯವರು:– ಮಾನ್ಯ ಎಂ.ನಾಗರಾಜುವರೇ, ಇಲ್ಲ, ನೀವು ಮಾತನಾಡುವುದು continue ಮಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ.ನಾಗರಾಜು:– ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

ಉಪ ಸಭಾಪತಿಯವರು:– ಮಾನ್ಯ ಎಂ.ನಾಗರಾಜುವರೇ, ನೀವು conclude ಮಾಡಿದ್ದೀರಿ. No, ನಿಮಗೆ ಸಮಯ ಕೊಡುವುದೇ ಕಷ್ಟ. ತಾವು ದಯವಿಟ್ಟು ಕುಳಿತುಕೊಳ್ಳಿ. ನೀವು ಸುಮ್ಮನೆ ಸಮಯ ಹಾಳುಮಾಡಬೇಡಿ.

ಶ್ರೀ ಎಂ.ನಾಗರಾಜು:– ಮಾನ್ಯ ಸಭಾಪತಿಯವರೇ, ಸರ್ವಜನಾಂಗದ ಶಾಂತಿಯ ತೋಟದ ಪರಿಕಲ್ಪನೆಯನ್ನು ಇಟ್ಟುಕೊಂಡು ಯಾರಾದರು ಅಭಿವೃದ್ಧಿಯ ಕೆಲಸವನ್ನು ಮಾಡಿದ್ದಾರೆಂದರೆ ಅದು ಸನ್ಮಾನ್ಯ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ಎಂದು ಹೇಳಿ, ನನ್ನ ಎರಡು ಮಾತನ್ನು ಮುಗಿಸುತ್ತಿದ್ದೇನೆ.ಧನ್ಯವಾದಗಳು.

ಉಪ ಸಭಾಪತಿಯವರು:– ಸರಿ.

ಶ್ರೀ ಎಸ್.ವ್ಹಿ.ಸಂಕನೂರ:– ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಇಲ್ಲಿಯವರೆಗೆ ಹಲವಾರು ಗೌರವಾನ್ವಿತ ಸದಸ್ಯರುಗಳು ಗೌರವಾನ್ವಿತ ರಾಜ್ಯಪಾಲರ ಭಾಷಣಕ್ಕೆ. . .

ಉಪ ಸಭಾಪತಿಯವರು:– ಮಾನ್ಯ ಎಸ್.ವ್ಹಿ.ಸಂಕನೂರರವರೇ, ತಾವು ಕೂಡ ಸಮಯ ಪರಿಪಾಲನೆ ಮಾಡಿ. 10 ನಿಮಿಷದಲ್ಲಿ ಮಾತನಾಡಿ ಮುಗಿಸಿ. ಏಕೆಂದರೆ ಬೇಗ ಮುಗಿಯಲಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ವ್ಹಿ.ಸಂಕನೂರ:- ಮಾನ್ಯ ಸಭಾಪತಿಯವರೇ, ಅವರಿಗೆ ಅರ್ಧ ಗಂಟೆ ಸಮಯ ಕೊಟ್ಟಿದ್ದೀರಿ, ನನಗೆ ಮಾತ್ರ 10 ನಿಮಿಷ . . .

ಉಪ ಸಭಾಪತಿಯವರು:- ಮಾನ್ಯ ಎಸ್.ವ್ಹಿ.ಸಂಕನೂರ ರವರೇ, ಆಯಿತು ಮಾತನಾಡಿ.

ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸತಕ್ಕಂಥ ಪ್ರಸ್ತಾವದ ಮೇಲೆ ಹಲವಾರು ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ವಿಶೇಷವಾಗಿ ನಮ್ಮ ವಿರೋಧ ಪಕ್ಷದ ಎಲ್ಲರೂ ಮಾತನಾಡಿದ್ದಾರೆ. ಗೌರವಾನ್ವಿತ ರಾಜ್ಯಪಾಲರ ಮುಖಾಂತರ ಹಲವಾರು ಸುಳ್ಳುಗಳನ್ನು ಹೇಳಿಸಿದ್ದಾರೆ ಎಂದು ಎಲ್ಲರೂ ಕೂಡ ಮಾತನಾಡಿದ್ದಾರೆ. ಅದಕ್ಕೆ ನನ್ನ ಸಹಮತ ಕೂಡ ಇದೆ. ನಾನು ನನ್ನ ಮತಕ್ಷೇತ್ರಕ್ಕೆ ಸಂಬಂಧಿಸಿದಂತಹ ವಿಷಯಗಳನ್ನೇ ಗೌರವಾನ್ವಿತ ರಾಜ್ಯಪಾಲರ ಭಾಷಣದ ಮೇಲೆ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಗೌರವಾನ್ವಿತ ರಾಜ್ಯಪಾಲರ ಭಾಷಣದ ಮೊದಲನೇ ಪೇಜ್‌ನಲ್ಲಿ ಗೌರವಾನ್ವಿತ ರಾಜ್ಯಪಾಲರಿಂದ ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಚೆನ್ನಾಗಿದೆ ಎಂದು ಹೇಳಿಸಿದ್ದಾರೆ. ಒಂದುವೇಳೆ ಸರ್ಕಾರದ ಆರ್ಥಿಕ ಸ್ಥಿತಿ ಚೆನ್ನಾಗಿದ್ದರೆ ನಾನು ಸರ್ಕಾರಕ್ಕೆ ಪ್ರಶ್ನೆ ಮಾಡುವುದೇನೆಂದರೆ, ನೌಕರರಿಗೆ ಸರಿಯಾಗಿ ಪೆನ್ಷನ್ ಕೊಡುವುದಕ್ಕೆ ಆಗಿಲ್ಲ. ವಿಶೇಷವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ಪೆನ್ಷನ್ ಕೊಡುವುದಕ್ಕೆ ಆಗಿಲ್ಲ. ಮಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ಪೆನ್ಷನ್ ಕೊಡುವುದಕ್ಕೆ ಇವರ ಹತ್ತಿರ ಹಣ ಇಲ್ಲ. ಎರಡನೆಯದಾಗಿ, Guest Teachers ಗೆ ಪ್ರಾಥಮಿಕ ಶಾಲಾ ಹಂತದಿಂದ ಹಿಡಿದು ವಿಶ್ವವಿದ್ಯಾಲಗಳವರೆಗೆ ಪಾಲಿಟೆಕ್ನಿಕ್ ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ Guest Lecturers ಸಾವಿರಾರು ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

(ಮುಂದು)

(202)11.3.2025/1.40/ಎಂ.ಎಂ-ವಿ.ಕೆ (ಉಪ ಸಭಾಪತಿಯವರ ಉಪಸ್ಥಿತಿ)

ಶ್ರೀ ಎಸ್.ವ್ಹಿ. ಸಂಕನೂರ (ಮುಂದು):-

ಮೂರನೆಯದಾಗಿ, ಸರ್ಕಾರದ ಪ್ರತಿಷ್ಠಿತ ಗ್ಯಾರಂಟಿ ಯೋಜನೆಯಾದ 'ಗೃಹಲಕ್ಷ್ಮಿ' ಯೋಜನೆಗೆ ಕಳೆದ ಮೂರು ತಿಂಗಳಿನಿಂದ ಹಣ ಕೊಡುವುದಕ್ಕೆ ಸರ್ಕಾರಕ್ಕೆ ಆಗುತ್ತಿಲ್ಲ. ಇವತ್ತು ಗುತ್ತಿಗೆದಾರರಿಗೆ ಬಾಕಿ ಹಣ ಕೊಡುವುದಕ್ಕಾಗುತ್ತಿಲ್ಲ. ನನ್ನ ಪ್ರಶ್ನೆಯೇನೆಂದರೆ, ಆರ್ಥಿಕ ಸ್ಥಿತಿ ಚೆನ್ನಾಗಿದೆಯೆಂದು ಹೇಳುತ್ತಿರುವಾಗ ಇದನ್ನೆಲ್ಲಾ ಏತಕ್ಕೆ ಮಾಡಿಲ್ಲ? ಇದರ ಅರ್ಥವೇನೆಂದರೆ, ಆರ್ಥಿಕ ಸ್ಥಿತಿ ಸರಿಯಿಲ್ಲವೆಂದು ಬಹಳ ಸ್ಪಷ್ಟವಾಗುತ್ತದೆ. ಇನ್ನೊಂದು ವಿಚಾರವನ್ನು ನಾನು ಪ್ರಸ್ತಾಪ ಮಾಡುವುದೇನೆಂದರೆ, ನಾನು ಪದವೀಧರರ ಕ್ಷೇತ್ರದಿಂದ ಆಯ್ಕೆಯಾದ ವಿಧಾನ ಪರಿಷತ್ ಸದಸ್ಯನಾಗಿರುವುದರಿಂದ ರಾಜ್ಯಪಾಲರ ಭಾಷಣದಲ್ಲಿ ನಿರುದ್ಯೋಗಿ ಪದವೀಧರರಿಗೆ ಏನಾದರೂ ಒಂದು ಸಿಹಿ ಸುದ್ದಿ ಕೊಡುತ್ತಾರೆ ಎನ್ನುವ ನಿರೀಕ್ಷೆ ಇತ್ತು. ಏಕೆಂದರೆ, ಇವರು ಚುನಾವಣಾ ಪ್ರಣಾಳಿಕೆಯಲ್ಲಿ ಕೆಲವೊಂದು ಭರವಸೆ ಕೊಟ್ಟಿದ್ದರು. ಮೊದಲನೇ ಭರವಸೆ ಏನೆಂದರೆ, ರಾಜ್ಯ ಸರ್ಕಾರದಲ್ಲಿ ಬೇರೆ ಬೇರೆ ಇಲಾಖೆಗಳಲ್ಲಿ ಏನೇನು ಹುದ್ದೆಗಳು ಖಾಲಿ ಇವೆ ಆ ಎಲ್ಲಾ ಹುದ್ದೆಗಳನ್ನೂ ತುಂಬುತ್ತೇವೆ ಎಂಬ ಭರವಸೆಯನ್ನು ಕೊಟ್ಟಿದ್ದರು. ಆದರೆ ಆದುದ್ದೇನು? ಇವತ್ತು ಬೇರೆ ಬೇರೆ ಇಲಾಖೆಗಳಲ್ಲಿ 7,80,738 ಹುದ್ದೆಗಳಿವೆ. ಅದರಲ್ಲಿ ಖಾಲಿ ಹುದ್ದೆಗಳು 2,76,000

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವೆ. ಆದರೆ ಈಗ 1/3 ರಷ್ಟು ಕೂಡ ತುಂಬುತ್ತಿಲ್ಲ. ಎಲ್ಲಾ ಹುದ್ದೆಗಳನ್ನೂ ತುಂಬುತ್ತೇವೆ ಎಂದು ಚುನಾವಣಾ ಪ್ರಣಾಳಿಕೆಯಲ್ಲಿ promise ಮಾಡುವುದು ಒಂದು, ಆದರೆ ಶಿಕ್ಷಣ ಇಲಾಖೆಯಲ್ಲಿ 2,76,000 ಹುದ್ದೆಗಳನ್ನು ತುಂಬುತ್ತೇವೆಂದು ಹೇಳಿದ್ದಾರೆ.

ಇನ್ನೊಂದು ಮಹತ್ವದ ಮತ್ತು ಸೋಜಿಗದ ಸಂಗತಿಯೊಂದನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಶಿಕ್ಷಣ ಇಲಾಖೆಯಲ್ಲಿ 1,300 ಹುದ್ದೆಗಳನ್ನು ತುಂಬಿದ್ದೇವೆಂದು ಹೇಳುತ್ತಾರೆ. ಉನ್ನತ ಶಿಕ್ಷಣ ಇಲಾಖೆಯಲ್ಲಿ 1,088 ಹುದ್ದೆಗಳನ್ನು ನಾವು ತುಂಬಿದ್ದೇವೆಂದು ಹೇಳಿದ್ದಾರೆ. ಆದರೆ ನಿಜ ಸ್ಥಿತಿ ಏನೆಂದರೆ, ಈ ಎರಡೂ ಹುದ್ದೆಗಳನ್ನು ಅದು ಪ್ರೈಮರಿ ಇರಬಹುದು, ಉನ್ನತ ಶಿಕ್ಷಣ ಇಲಾಖೆ ಇರಬಹುದು ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಪ್ರಾರಂಭ ಮಾಡಿದ್ದು ಬಿ.ಜೆ.ಪಿ. ಸರ್ಕಾರ. ನಾವು ಆರ್ಥಿಕ ಇಲಾಖೆಯಿಂದ ಅನುಮತಿ ತೆಗೆದುಕೊಂಡು ಪರೀಕ್ಷೆ ನಡೆಸಿ, ಲಿಸ್ಟ್ ಪ್ರಕಟ ಮಾಡಿ ಇನ್ನೇನು ಆದೇಶ ಕೊಡಬೇಕೆನ್ನುವ ಹಂತದಲ್ಲಿ ಆ ವಿಚಾರ ಕೋರ್ಟ್‌ಗೆ ಹೋಯಿತು. ಈ ಎಲ್ಲಾ ಕೆಲಸಗಳನ್ನು ಶೇ.90ರಷ್ಟು ಮಾಡಿರುವುದು ನಾವು. ಆದರೆ credit ತೆಗೆದುಕೊಂಡವರು ಇವರು. ಇವರು ಬರೀ ಆದೇಶ ಪತ್ರಗಳನ್ನು ಕೊಟ್ಟರು. ರಾಜ್ಯಪಾಲರ ಭಾಷಣದಲ್ಲಿ ಇದನ್ನು ಪ್ರಸ್ತಾಪ ಮಾಡಬಹುದಾಗಿತ್ತಲ್ಲಾ? ಬಿ.ಜೆ.ಪಿ. ಸರ್ಕಾರದ ಸಾಧನೆಯನ್ನು ಪ್ರಸ್ತಾಪ ಮಾಡಿಲ್ಲ ಇದು ಬಹಳ ವಿಷಾದಕರ ಸಂಗತಿಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೊಂದು ವಿಷಯವೇನೆಂದರೆ, ಖಾಸಗಿ ಶಿಕ್ಷಣ ಸಂಸ್ಥೆಗಳು 2015-2020ರವರೆಗೆ ನಿವೃತ್ತಿಯಿಂದ ಖಾಲಿಯಾದ ಹುದ್ದೆಗಳನ್ನು ತುಂಬುವುದಕ್ಕೆ ಅವಕಾಶ ಕೊಟ್ಟಿರಲಿಲ್ಲ. ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಏಕೆಂದರೆ, 2015-20ರವರೆಗೆ ನಿವೃತ್ತಿಯಿಂದ ಖಾಲಿಯಾದ ಹುದ್ದೆಗಳನ್ನು ತುಂಬುವುದಕ್ಕೆ ಅನುಮತಿ ಕೊಟ್ಟರು. ಆದರೆ ಸಮಸ್ಯೆಯೇನೆಂದರೆ, ಒಳಮೀಸಲಾತಿ ನಿಗದಿಪಡಿಸುವುದಕ್ಕೆ ಒಂದು ಸಬ್ ಕಮಿಟಿ ಮಾಡಿದ್ದಾರೆ. ಆ ಸಬ್ ಕಮಿಟಿಯಲ್ಲಿ ರಿಪೋರ್ಟನ್ನು ಬೇಗ ತೆಗೆದುಕೊಳ್ಳಬೇಕು. ಸಬ್ ಕಮಿಟಿ ರಿಪೋರ್ಟನ್ನು ತೆಗೆದುಕೊಳ್ಳದೇ ನೇಮಕಾತಿ ಪ್ರಕ್ರಿಯೆ ಆಗುವುದಿಲ್ಲ, reservation fix ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಇದಕ್ಕೆ ವಿಳಂಬ ಮಾಡಬಾರದು. ವಿಳಂಬ ಮಾಡಿದರೆ ನಿರುದ್ಯೋಗಿ ಪದವೀಧರರಿಗೆ ಅನ್ಯಾಯವಾಗುತ್ತದೆ. ಬಹಳ ಜನರ ವಯೋಮಿತಿ ಮೀರುತ್ತಿದೆ. ವಯೋಮಿತಿ ಮೀರಿದರೆ ಅರ್ಜಿ ಹಾಕುವುದಕ್ಕೆ ಬರುವುದಿಲ್ಲ. ಅವರ rank certificate ತೆಗೆದುಕೊಂಡು ಏನು ಮಾಡಬೇಕು? ವಯೋಮಿತಿ ಮೀರಿದರೆ ಏನೂ ಮಾಡುವುದಕ್ಕಾಗುವುದಿಲ್ಲ. ಹಾಗಾಗಿ ಒಳಮೀಸಲಾತಿ ಸಂಬಂಧ ಇವರೇನು ಸಮಿತಿ ಮಾಡಿದ್ದಾರೆ ಆದಷ್ಟು ಬೇಗ ಅದರ ರಿಪೋರ್ಟ್ ತೆಗೆದುಕೊಂಡು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ನಿವೃತ್ತಿಯಿಂದ ಖಾಲಿಯಾದ ಹುದ್ದೆಗಳೇನಿವೆ, ಅದನ್ನೆಲ್ಲಾ ತುಂಬುವಂತಹ ಕೆಲಸವನ್ನು ಶೀಘ್ರವಾಗಿ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಕೊನೆಯದಾಗಿ ಹೇಳಬೇಕಾದುದು ಇಷ್ಟೇ. ಇವರು 2023ರ ಚುನಾವಣೆಗೆ ಹೋಗುವ ಸಂದರ್ಭದಲ್ಲಿ ತಮ್ಮ ಪ್ರಣಾಳಿಕೆಯಲ್ಲಿ ಹಲವಾರು ಭರವಸೆಗಳನ್ನು ಕೊಟ್ಟಿದ್ದರು. ಆ ಎಲ್ಲಾ ಭರವಸೆಗಳಲ್ಲಿ ಒಂದನ್ನೂ ಈಡೇರಿಸಿಲ್ಲ. ಏಕೆಂದರೆ, ಸರ್ಕಾರ ಹೇಳಿದೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಸಾರ್ವಜನಿಕ ಸಭೆಯಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಎನ್.ಪಿ.ಎಸ್. ಇದ್ದುದನ್ನು ಓ.ಪಿ.ಎಸ್.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಒಂದು sentence ಕೂಡ ಇಲ್ಲ. ಹೊರಗಡೆ ಹೇಳಿದ್ದನ್ನು ರಾಜ್ಯಪಾಲರ ಭಾಷಣದಲ್ಲಿ ಸ್ವಲ್ಪವಾದರೂ ಪ್ರಸ್ತಾಪ ಮಾಡಬೇಕಲ್ಲವೇ? ಎನ್.ಪಿ.ಎಸ್. ಅನ್ನು ಓ.ಪಿ.ಎಸ್. ಮಾಡುವ ಬಗ್ಗೆ ಪ್ರಸ್ತಾಪ ಮಾಡಿಲ್ಲ.

ಎರಡನೆಯದಾಗಿ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ 2006ರ ನಂತರ ಯಾರ್ಯಾರು ನೇಮಕಾತಿಯಾಗಿದ್ದಾರೆ ಅವರಿಗೂ ಕೂಡ ಪಿಂಚಣಿ ಯೋಜನೆಯನ್ನು ಜಾರಿಗೆ ತರುತ್ತೇವೆಂದು ಹೇಳಿದ್ದರು. ಅದರ ಪ್ರಸ್ತಾಪ ಕೂಡ ಇಲ್ಲ. ಮೂರನೆಯದಾಗಿ, ಗುತ್ತಿಗೆ ಆಧಾರದಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ, ಅವರನ್ನೆಲ್ಲಾ ಖಾಯಮಾತಿ ಮಾಡುತ್ತೇವೆಂದು ಹೇಳಿದ್ದರು. ಒಂದು ಕೂಡ ಆಗಿಲ್ಲ. ಒಟ್ಟಾರೆ ಹೇಳುವುದೇನೆಂದರೆ, ರಾಜ್ಯಪಾಲರ ಮೂಲಕ ಬಹಳಷ್ಟು ಸುಳ್ಳುಗಳನ್ನು ಹೇಳಿಸಿದ್ದಾರೆಂದು ಹೇಳಬಯಸುತ್ತೇನೆ. ಧನ್ಯವಾದಗಳು.

ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. 'ಸ್ವಾಮಿ ವಿವೇಕಾನಂದ'ರ ಒಂದು ಹೇಳಿಕೆ ಈ ರೀತಿ ಇದೆ: ''ವಿಷವನ್ನು ಸಕ್ಕರೆ ಲೇಪನ ಮಾಡಿ ಯಾವುದೇ ಉನ್ನತ ಸ್ಥಾನದ ವ್ಯಕ್ತಿಯಿಂದ ಆ ವಿಷವನ್ನು ಪ್ರಸಾದದ ರೀತಿಯಲ್ಲಿ ಕೊಡುವಂತಹ ಕೆಲಸವಾದರೂ ಕೂಡ ವಿಷ ತನ್ನ ಮೂಲ ಸ್ವರೂಪವನ್ನು ಬದಲಾಯಿಸಿಕೊಳ್ಳುವುದಿಲ್ಲ. ಕೊನೆಯದಾಗಿ ಅದು ವಿಷ ಎಂದು ಗೊತ್ತಾಗಿಯೇ ಆಗುತ್ತದೆ. ಅಸತ್ಯವು ಕೂಡ ಅದೇ ರೀತಿ. ನೀವು ಅಸತ್ಯವನ್ನು ಯಾವುದೇ ಉನ್ನತ ಸ್ಥಾನದಲ್ಲಿರುವ ವ್ಯಕ್ತಿ ಹೇಳಿದ್ದಾರೆ ಅಥವಾ ಆ ಸ್ಥಾನದಲ್ಲಿ ಕುಳಿತವರು ಹೇಳಿದ್ದಾರೆ ಎನ್ನುವ ಕಾರಣಕ್ಕೋಸ್ಕರ ಆ ಅಸತ್ಯವು ಯಾವತ್ತು ಕೂಡ ಸತ್ಯವಾಗುವುದಕ್ಕೆ ಸಾಧ್ಯವಿಲ್ಲ''. ಇದು ಸ್ವಾಮಿ ವಿವೇಕಾನಂದರು ತಮ್ಮ ಅನಿಸಿಕೆಗಳನ್ನು ವ್ಯಕ್ತ ಮಾಡಿರುವುದು. ಏನು ಸರ್ಕಾರ ಘನತೆವೆತ್ತ ರಾಜ್ಯಪಾಲರ ಮೂಲಕ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಅವರು ಮಾತನಾಡುವಂತಹ ಸಂದರ್ಭದಲ್ಲಿ ಅನೇಕ ವಿಷಯಗಳನ್ನು ಹೇಳಿಸಿದ್ದಾರೆ.

ರಾಜ್ಯಪಾಲರ ಭಾಷಣ ಯಾವಾಗಲೂ ಕೂಡ ಸರ್ಕಾರದ ಒಂದು ರಿಪೋರ್ಟ್ ಕಾರ್ಡ್ ಇದ್ದ ಹಾಗೆ. ಸರ್ಕಾರ ತನ್ನ 11-12 ತಿಂಗಳುಗಳಲ್ಲಿ ಬಜೆಟ್‌ನ ನಂತರ ತಾನು ಅನುಷ್ಠಾನ ಮಾಡುವ ಕಾರ್ಯಕ್ರಮಗಳನ್ನು ರಾಜ್ಯದ ಜನತೆಗೆ ಕೊಡುವಂತಹ ಒಂದು ಚಾನಲ್. ಎರಡೂ ಮನೆಗಳ ಶಾಸಕರ ಮೂಲಕ ಈ ರಾಜ್ಯದ ಒಟ್ಟು ಏಳು ಕೋಟಿ ಜನರಿಗೆ ಸರ್ಕಾರದ ಸಾಧನೆಗಳೇನು ಎನ್ನುವಂತಹ ಒಂದು ರಿಪೋರ್ಟ್ ಕಾರ್ಡನ್ನು ಎರಡೂ ಮನೆಗಳ ಸದಸ್ಯರುಗಳನ್ನುದ್ದೇಶಿಸಿ ರಾಜ್ಯಪಾಲರ ಮೂಲಕ ಸರ್ಕಾರ ಹೇಳುವುದು. ರಾಜ್ಯಪಾಲರ ಸ್ವಂತ ಹೇಳಿಕೆಯಾಗಲೀ, ಪದವಾಗಲೀ ಒಂದು ಕೂಡ ಇರುವುದಿಲ್ಲ. ಅಷ್ಟು ಕೂಡ ಸರ್ಕಾರದ ಅಂಶಗಳನ್ನು ಒಳಗೊಂಡಿರುವುದು. ಇದರಲ್ಲಿ ಯಾವ ರೀತಿ Oxford University ಹೆಸರನ್ನು ಬಳಕೆ ಮಾಡಿದ್ದಾರೆ, ಯಾವ ರೀತಿ United Nations ಹೆಸರನ್ನು ಬಳಕೆ ಮಾಡಿಕೊಂಡಿದ್ದಾರೆ ಎಂಬ ಬಗ್ಗೆ ಏನು ಚರ್ಚೆಯಾಗಿದೆ ನಾನು ಅದಕ್ಕೆ ಹೋಗುವುದಿಲ್ಲ. ನಾನು 3-4 ವಿಷಯಗಳನ್ನು ಮಾತ್ರ ಸದನದ ಗಮನಕ್ಕೆ ಮತ್ತು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವ ಕೆಲಸವನ್ನು ಮಾಡುತ್ತೇನೆ. ಭಾಷಣದಲ್ಲಿ ಮಾನ್ಯ ರಾಜ್ಯಪಾಲರ ಮೂಲಕ ಕಳೆದ ಒಂದು ವರ್ಷದಿಂದ ಸರ್ಕಾರ ರೈತರ ಪರವಾಗಿ ಬಹಳ ಒಳ್ಳೆಯ ಕೆಲಸ ಮಾಡಿದೆ ಎಂದು ಹೇಳಿರುವಂತಹದ್ದು ಇದೆ. ಕಳೆದ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಷ ಹಿಂದೆಂದೂ ಕಾಣದ ಬರಗಾಲದ ಪರಿಸ್ಥಿತಿಯನ್ನು ನಮ್ಮ ರಾಜ್ಯದ ರೈತರು ಅನುಭವಿಸಿದರು. ಅಂತಹ ಕೆಟ್ಟ ಪರಿಸ್ಥಿತಿಯಲ್ಲಿ ಇವರು ಒಂದು ವರ್ಷ ಅನುಷ್ಠಾನ ಮಾಡಿರುವಂತಹ ಯೋಜನೆಗಳಲ್ಲಿ ಶಾಶ್ವತ ನೀರಾವರಿ ಯೋಜನೆಗಳ ಕಡೆ ಈ ಸರ್ಕಾರ ಗಮನ ಕೊಡಲಿಲ್ಲ. ಶಾಶ್ವತ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವಂತಹ ಅಥವಾ ತ್ವರಿತಗೊಳಿಸುವಂತಹ ಕೆಲಸವನ್ನು ಮಾಡಲಿಲ್ಲ. ರೈತ ಹಿಂದೆ ಹೇಗೆ ಮಳೆಯನ್ನು ಆಶ್ರಯಿಸಿ ಬೆಳೆಯನ್ನು ಬೆಳೆಯುತ್ತಿದ್ದ ಇವತ್ತು ಕೂಡ ನಾಡಿನ ಬಹುಭಾಗದ ರೈತರು ಮಳೆಯನ್ನು ಆಶ್ರಯ ಮಾಡುವಂತಹ ಒಂದು ಕೆಟ್ಟ ಪರಿಸ್ಥಿತಿಯಲ್ಲಿದ್ದಾರೆ. ಅದಕ್ಕೆ ಈ ಸರ್ಕಾರ ನೀರಾವರಿ ಯೋಜನೆಗಳಿಗೆ ಹಣಕಾಸನ್ನು ಬಿಡುಗಡೆ ಮಾಡಲಿಲ್ಲ. ಇದು ಮೊದಲನೆಯದು. ಎರಡನೆಯದಾಗಿ ಈ ರಾಜ್ಯದ ಯಾವುದೇ ಭಾಗಕ್ಕೆ ಹೋದರೂ ಕೂಡ ರೈತನಿಗೆ ಮೂಲವಾಗಿ ಬೇಕಾಗಿರುವುದು ಉತ್ತಮವಾಗಿರುವಂತಹ ಬೀಜ ಮತ್ತು ಸಮಯಕ್ಕೆ ಸರಿಯಾಗಿ ಗೊಬ್ಬರ. ಕಳಪೆ ಬೀಜದ ಹಾವಳಿಯನ್ನು ತಡೆಯುವುದಕ್ಕೆ, ಕಳಪೆ ಬೀಜ ವಿತರಣೆಯಾಗುವುದನ್ನು ನಿಲ್ಲಿಸುವುದಕ್ಕೆ ಈ ಸರ್ಕಾರದ ಕಡೆಯಿಂದ, ಸಂಬಂಧಪಟ್ಟ ಅಧಿಕಾರಿಗಳ ಕಡೆಯಿಂದ ಕ್ರಮ ತೆಗೆದುಕೊಂಡು ರಾಜ್ಯದ ರೈತನ ಮನೆ ಬಾಗಿಲಿಗೆ ಉತ್ಕೃಷ್ಟವಾದಂತಹ ಬೀಜ, ಗೊಬ್ಬರ ಸಿಗುವ ವ್ಯವಸ್ಥೆಗಳನ್ನು ಸರ್ಕಾರ ಸರಿಯಾಗಿ ಮಾಡಲಿಲ್ಲ.

ಮೂರನೆಯ ವಿಷಯವೇನೆಂದರೆ, ವಿದ್ಯುತ್. ಮೊನ್ನೆ ತಾನೇ ಈ ಮಾನ್ಯ ಸಚಿವರು ಉತ್ತರ ಕೊಡಬೇಕಾದರೆ 7 ಗಂಟೆ ವಿದ್ಯುತ್ ಕೊಡುತ್ತೇವೆ ಎಂದು ಹೇಳಿದರು. ಮಾನ್ಯ ಸಚಿವರು ನಮ್ಮ ಜಿಲ್ಲೆಗೆ ಬಂದಾಗ ರೈತರೆಲ್ಲರನ್ನೂ ಒಂದು ಗಂಟೆಗಳ ಕಾಲ ಹೊರಗೆ ನಿಲ್ಲಿಸಿದ್ದರು. ಅವರ್ಯಾರೂ ರಾಜಕೀಯಪ್ರೇರಿತವಾಗಿ ಬಂದಂತಹ ರೈತರಲ್ಲ. ಇವರು ಎಲ್ಲಾ ಕಡೆಯೂ ಭಾಷಣಗಳಲ್ಲಿ ನಾವು ನಿರಂತರವಾಗಿ ಏಳು ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ 2½ ಗಂಟೆ, 3 ಗಂಟೆ ಮಾತ್ರ ಕೊಡುತ್ತಾರೆ. ಇವರ ಇಲಾಖೆಯಲ್ಲಿಯೇ ಒಬ್ಬರಿಗೊಬ್ಬರು ದೋಷಾರೋಪಣೆ ಮಾಡುತ್ತಾರೆ.

(ಮುಂದು)

(203) 11.03.2025 (1.50) ಹೆಚ್‌ಪಿ.ವಿಕೆ **(ಉಪ ಸಭಾಪತಿಯವರ ಉಪಸ್ಥಿತಿ)**

ಶ್ರೀ ಕೆ.ಎಸ್.ನವೀನ್ (ಮುಂದು):-

ಸನ್ಮಾನ್ಯ ಸಭಾಪತಿಯವರೇ, ಕೆ.ಪಿ.ಟಿ.ಸಿ.ಎಲ್.ನವರು ಬೆಸ್ಕಾಂನವರ ಮೇಲೆ ಹೇಳುತ್ತಾರೆ. ಬೆಸ್ಕಾಂನವರು Electrical Inspectorate ಅವರ ಮೇಲೆ ಹೇಳುತ್ತಾರೆ. "ಇವರು ಅನುಮತಿಯನ್ನು ಕೊಟ್ಟಿಲ್ಲ; ಅವರು ಕೆಲಸ ಮಾಡಿಲ್ಲ" ಎಂದು ಒಬ್ಬರ ಮೇಲೆ ಒಬ್ಬರು ದೋಷಾರೋಪಣೆ ಮಾಡುತ್ತಿರುತ್ತಾರೆ. ಈ ಸರ್ಕಾರದ ಆಡಳಿತದಲ್ಲಿ ರೈತರು ಕಂಗಾಲಾಗಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ತೋಟಗಾರಿಕೆಯ ಬಗ್ಗೆ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ, "ನಮ್ಮ ರಾಜ್ಯ ತೋಟಗಾರಿಕಾ ಬೆಳೆಗಳಲ್ಲಿ ಈ ದೇಶಕ್ಕೆ ನಂಬರ್-1" ಎಂದು ತಮ್ಮನ್ನು ತಾವು ಮೆಚ್ಚಿಕೊಳ್ಳುವಂತಹ ಮಾತುಗಳನ್ನು ಆಡಿದ್ದಾರೆ. ದುರಾದೃಷ್ಟಕರವಾದ ಸಂಗತಿಯೆಂದರೆ, ಎಕರೆವಾರು ಪ್ರದೇಶದಲ್ಲಿ ನಾವು ಇಡೀ ದೇಶಕ್ಕೆ ನಂಬರ್-1 ಆಗಿದ್ದೇವೆ. ಆದರೆ, ಉತ್ಪನ್ನದಲ್ಲಿ ನಮ್ಮ ರಾಜ್ಯ 7ನೇ ಸ್ಥಾನದಲ್ಲಿದೆ. ನಮ್ಮ ರೈತರಿಗೆ ತೋಟಗಾರಿಕೆ ಬೆಳೆಯನ್ನು ಹೆಚ್ಚು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಳುವರಿ ಬರುವ ರೀತಿಯಲ್ಲಿ ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದರೆ, ಬೇರೆ ರಾಜ್ಯಗಳಲ್ಲಿ ಕಡಿಮೆ ಪ್ರದೇಶದಲ್ಲಿ ಹೆಚ್ಚು ಇಳುವರಿಯನ್ನು ಪಡೆಯುತ್ತಿದ್ದಾರೆ. ಈ ನ್ಯೂನತೆಗೆ ಕಾರಣವೇನೆಂದರೆ, ನಮ್ಮ ರಾಜ್ಯದಲ್ಲಿ cold storage ಇಲ್ಲ; logistics ಇಲ್ಲ; horticulture policy ಇಲ್ಲ. ಕಳೆದ ಎರಡು ವರ್ಷಗಳಿಂದ ಈ ಸರ್ಕಾರ ತೋಟಗಾರಿಕಾ ಬೆಳೆಗಳನ್ನು ಬೆಳೆಯುವ ರೈತರ ಕೈಹಿಡಿಯುವಂತಹ ಕೆಲಸವನ್ನು ಮಾಡಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಮಹಿಳೆಯರ ಬಗ್ಗೆ; ಗ್ಯಾರಂಟಿಗಳ ಬಗ್ಗೆ ಮತ್ತು ಗೃಹ ಲಕ್ಷ್ಮಿ ಯೋಜನೆಯ ಬಗ್ಗೆ ವಿಶೇಷವಾಗಿ ಉಲ್ಲೇಖ ಮಾಡಿದ್ದಾರೆ. ಗೃಹಲಕ್ಷ್ಮಿ ಹಣ ಎಷ್ಟು ತಿಂಗಳಿಗೊಮ್ಮೆ ಸಂಬಂಧಪಟ್ಟ ಫಲಾನುಭವಿಗಳ ಖಾತೆಗೆ ಹೋಗುತ್ತಿದೆ ಎನ್ನುವುದರ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಬಾಣಂತಿ ಮಹಿಳೆಯವರ ಸಾವಿಗೆ ಸಂಬಂಧಪಟ್ಟಂತೆ ಹೇಳಬೇಕಾದರೆ, ನಮ್ಮ ರಾಜ್ಯದಲ್ಲಿ ಮಹಿಳೆಯು ಗರ್ಭಿಣಿಯಾದ ಕೂಡಲೇ ಸಾವಿನ ಭಯ ಪ್ರಾರಂಭವಾಗುವಂತಹ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಕೆಟ್ಟ ಪರಿಸ್ಥಿತಿಯಲ್ಲಿ ರಾಜ್ಯದ ಮಹಿಳೆಯರು ಇದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳು ಸಾಕಷ್ಟು ಸಂಖ್ಯೆಯಲ್ಲಿ ನಡೆಯುತ್ತಿವೆ. ನಿನ್ನೆ ಗಂಗಾವತಿಯಲ್ಲಿ ಹೊರದೇಶದ ಮಹಿಳೆಯ ಮೇಲೆ ಅತ್ಯಾಚಾರ ಎಸಗಲಾಗಿದೆ. ಈ ರಾಜ್ಯದಲ್ಲಿ ಮಹಿಳೆಯರಿಗೆ ಯಾವುದೇ ರೀತಿಯ ಸುರಕ್ಷತೆ ಇಲ್ಲ. ಮಹಿಳೆಯರನ್ನು ಪೂಜಿಸುತ್ತೇವೆ; ಗೌರವಿಸುತ್ತೇವೆ; ಅವರನ್ನು ಲಕ್ಷ್ಮಿ ರೀತಿಯಲ್ಲಿ ಕಾಣುತ್ತೇವೆಂದು ಇವರು ಹೇಳುತ್ತಾರೆ. ಆದರೆ, ಈ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಮನೆಯಿಂದ ಹೊರಗಡೆ ಹೋಗಿರುವಂತಹ ಮಹಿಳೆಯರು ಸುರಕ್ಷಿತವಾಗಿ ಮನೆಗೆ ವಾಪಸ್ಸು ಬರುತ್ತಾರೆ ಎನ್ನುವ ಗ್ಯಾರಂಟಿ ಇಲ್ಲ. ಸರ್ಕಾರ ಮೊದಲು ಈ ಗ್ಯಾರಂಟಿಯನ್ನು ಕೊಟ್ಟು ನಂತರ ಉಳಿದ ಗ್ಯಾರಂಟಿಗಳನ್ನು ಕೊಡಬೇಕು.

ಸನ್ಮಾನ್ಯ ಸಭಾಪತಿಯವರೇ, ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳನ್ನು ಈಡೇರಿಸಲಾಗುತ್ತದೆಂದು ಈ ಸರ್ಕಾರ ಹೇಳಿತ್ತು. ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಅವರುಗಳು ಧರಣಿಯನ್ನು ನಡೆಸುತ್ತಿದ್ದಾರೆ, ಸರ್ಕಾರ ಅವರ ಬೇಡಿಕೆಗಳನ್ನು ಇವತ್ತಿಗೂ ಈಡೇರಿಸಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಮಧ್ಯಮ ವರ್ಗದವರನ್ನು ಕಾಣಬಹುದಾಗಿದೆ. ನಮ್ಮ ದೇಶದಲ್ಲಿನ ದೊಡ್ಡ ರಾಜ್ಯಗಳ ಪೈಕಿ, ಅತೀ ಹೆಚ್ಚು ಹಣದುಬ್ಬರ ಇರುವಂತಹ ಕುಖ್ಯಾತ ರಾಜ್ಯವೆಂದರೆ ನಮ್ಮ ಕರ್ನಾಟಕ ರಾಜ್ಯವಾಗಿದೆ. ಸುಮಾರು ಶೇಕಡಾ ೫.೦೭ನಷ್ಟು ಹಣದುಬ್ಬರವನ್ನು ನಮ್ಮ ರಾಜ್ಯದಲ್ಲಿ ಕಾಣಬಹುದಾಗಿದೆ. ಬೆಲೆ ಏರಿಕೆಯಿಂದಾಗಿ ಮಧ್ಯಮವರ್ಗದವರು ತತ್ತರಿಸಿ ಹೋಗಿದ್ದಾರೆ. ಅವರಿಗೆ ಬರುವಂತಹ ಸಂಬಳದ ಪ್ರಮಾಣ ಮತ್ತು ಅವರ ಆದಾಯ ಎರಡೂ ಹೆಚ್ಚಾಗಿಲ್ಲ. ಆದರೂ ದಿನನಿತ್ಯ ಬಳಕೆಯ ವಸ್ತುಗಳಿಂದ ಹಿಡಿದು ಸರ್ಕಾರಕ್ಕೆ ಅವರು ಕಟ್ಟಬೇಕಾಗಿರುವಂತಹ ಹಣದವರೆಗೆ ಎಲ್ಲವೂ ಕೂಡ ಏರಿಕೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಈ ರಾಜ್ಯದ ಮುಂದಿನ ಪ್ರಜೆಗಳು ಮತ್ತು ಈ ರಾಜ್ಯವನ್ನು ಬೆಳೆಸಬೇಕಾಗಿರುವವರು ವಿದ್ಯಾರ್ಥಿಗಳು, ಈ ರಾಜ್ಯದಲ್ಲಿ ಅವರ ಪರಿಸ್ಥಿತಿ ಏನಾಗಿದೆಯೆಂದರೆ, ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಹೊಸ ವಿಶ್ವವಿದ್ಯಾಲಯಗಳಷ್ಟೇ ಅಲ್ಲ; ಹಳೆ ವಿಶ್ವವಿದ್ಯಾಲಯಗಳಿಗೂ ಇವರು ಸರಿಯಾದ ರೀತಿಯಲ್ಲಿ ಮೂಲಭೂತ ಸೌಲಭ್ಯಗಳನ್ನು ಕೊಡುತ್ತಿಲ್ಲ. ಸರ್ಕಾರಿ ಶಾಲೆಗಳ ಪರಿಸ್ಥಿತಿಯನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಉತ್ತಮ ಸ್ಥಿತಿಯಲ್ಲಿರುವವರು ಯಾರೂ ಕೂಡ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸುವುದಿಲ್ಲ. ಪ್ರತಿ ವರ್ಷ ಸರ್ಕಾರಿ ಶಾಲೆಗೆ ಸೇರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಶೇಕಡಾ 12ರಷ್ಟು ಇಳಿಕೆ ಕಂಡುಬರುತ್ತಿದೆ. ಸರ್ಕಾರಿ ಕಾಲೇಜುಗಳಿಗೆ ಹಿಂದಿನ ವರ್ಷ 46 ಸಾವಿರ ವಿದ್ಯಾರ್ಥಿಗಳು ದಾಖಲಾಗಿದ್ದರೆ, ಈ ವರ್ಷ ಸುಮಾರು 40 ಸಾವಿರ ಜನ ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಮುಂದಿನ ವರ್ಷ ಇದರ ಪ್ರಮಾಣ 35 ಸಾವಿರಕ್ಕೆ ಇಳಯಬಹುದು. ಪ್ರತಿ ವರ್ಷ ಶೇಕಡಾ 15ರಷ್ಟು ಬಡ ಮಕ್ಕಳು ಸರ್ಕಾರಿ ಶಾಲೆಗೆ ಹೋಗುವುದನ್ನು ನಿಲ್ಲಿಸುತ್ತಿದ್ದಾರೆ. ಈ ರಾಜ್ಯದಲ್ಲಿ ಏಕೋಪಾಧ್ಯಾಯ ಶಾಲೆಗಳ ಸಂಖ್ಯೆ ಸುಮಾರು 7000 ಆಗಿದೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ಸುಮಾರು 70,000 ಶಿಕ್ಷಕರ ಹುದ್ದೆಗಳು ಖಾಲಿ ಇವೆಯೆಂದು ಹೇಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಯಾರು ತಾನೇ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸುತ್ತಾರೆ? ಪ್ರಾಥಮಿಕ ಶಿಕ್ಷಣ ಮತ್ತು ಕಾಲೇಜು ಶಿಕ್ಷಣ ವ್ಯವಸ್ಥೆ ಸರಿಯಿಲ್ಲ. ಇದರ ಜೊತೆಗೆ ಈ ಸರ್ಕಾರ ವಿಶ್ವವಿದ್ಯಾಲಯಗಳನ್ನು ಮುಚ್ಚುವಂತಹ ಕೆಲಸವನ್ನು ಮುನ್ನೆಲೆಗೆ ತರುವಂತಹ ಕೆಲಸವನ್ನು ಮಾಡುತ್ತಿದೆ, ಇದು ಈ ರಾಜ್ಯದ ವಿದ್ಯಾರ್ಥಿಗಳ ಪರಿಸ್ಥಿತಿಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಈ ಸರ್ಕಾರ, "ಜಿ.ಎಸ್.ಟಿ.,ಸಂಗ್ರಹದಲ್ಲಿ ಇಡೀ ದೇಶದಲ್ಲಿಯೇ ನಾವು ಎರಡನೆಯ ಸ್ಥಾನದಲ್ಲಿದ್ದೇವೆ" ಎಂದು ಬಹಳ ಹೆಮ್ಮೆಯಿಂದ ಬರೆದುಕೊಂಡಿದ್ದಾರೆ. ಹೌದು, ನಾವು ಎರಡನೆಯ ಸ್ಥಾನದಲ್ಲಿದ್ದೇವೆ. ಆದರೆ, GST breakup ಅನ್ನು ನೋಡಿದರೆ, ಶೇಕಡಾ 67ರಷ್ಟು ಜಿ.ಎಸ್.ಟಿ., ನಮಗೆ ಸೇವಾ ವಲಯಗಳಿಂದ ಸಂದಾಯವಾಗುತ್ತಿದೆ. ಸಾಫ್ಟ್‌ವೇರ್, ಐ,ಟಿ., ITES ಗಳು ಸೇವಾ ವಲಯಗಳಾಗಿವೆ. ಸಾಫ್ಟ್‌ವೇರ್ ಅನ್ನು ಹೊರದೇಶಗಳಿಗೆ ರಫ್ತು ಮಾಡುತ್ತಿದ್ದೇವೆ. ಇದು ಡಾಲರ್‌ಗಳಲ್ಲಿ bill ಆಗುತ್ತದೆ. ಆ ಹಿನ್ನೆಲೆಯಲ್ಲಿಯೇ ನಮಗೆ ಸೇವಾ ವಲಯದಿಂದ ಶೇಕಡಾ 67ರಷ್ಟು ಜಿ.ಎಸ್.ಟಿ. ಬರುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಯಾವುದೇ ಒಂದು ರಾಜ್ಯ ಕೈಗಾರಿಕೆ ಮತ್ತು ಕೃಷಿ ವಲಯಗಳಿಂದ ಗಟ್ಟಿಯಾಗುತ್ತದೆ. ನಮ್ಮ ರಾಜ್ಯ ಕೈಗಾರಿಕಾ ವಲಯದಲ್ಲಿ ಶೇಕಡಾ 19ರಷ್ಟು ಸಾಧನೆ ಮಾಡಿದೆ. ಇದರಿಂದ ನಾವು ಬೇರೆ ರಾಜ್ಯಗಳಿಗಿಂತ ಬಹಳ ಹಿಂದಿದ್ದೇವೆ ಎನ್ನುವುದು ಅರ್ಥವಾಗುತ್ತದೆ. ಇನ್ನೂ ಕೃಷಿ ವಲಯದಲ್ಲಿ ಶೇಕಡಾ 13ರಷ್ಟಿದ್ದೇವೆ. ಕೃಷಿ ಮತ್ತು ಕೈಗಾರಿಕಾ ವಲಯಗಳಿಗೆ ಹೆಚ್ಚು ಒತ್ತು ಕೊಡಬೇಕಾಗಿತ್ತು. ಆದರೆ, ಈ ಸರ್ಕಾರ ಆ ವಲಯಗಳಿಗೆ ಹೆಚ್ಚು ಒತ್ತು ಕೊಟ್ಟಿಲ್ಲ. ಜಿ.ಎಸ್.ಟಿ., ಪ್ರಮಾಣ ಹೆಚ್ಚಾಗಿದೆ ಎಂದರೆ, not because of Government, not because of Government Policy, not because of Government Intervention. It is because of Software Exports and that too it is coming in

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

dollars. Because it is coming in dollars they are claiming the benefit. ಸರ್ಕಾರದ ನಿಯಮಗಳಿಂದ ಐದು ಪೈಸೆಯಷ್ಟು ಜಿ.ಎಸ್.ಟಿ., ಸೇವಾ ವಲಯದಿಂದ ಬರುತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಾನು ಕೊನೆಯ ವಿಚಾರವನ್ನು ಪ್ರಸ್ತಾಪ ಮಾಡಿ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ಪ್ರತಿ ಬಾರಿ ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುವಂತಹ ಸಂದರ್ಭದಲ್ಲಿ, "ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ., ಹಣ diversion ಆಗಿದೆ; ಪ್ರತಿ ವರ್ಷದ ಆಯವ್ಯಯದಲ್ಲಿ ಈ ಹಣವನ್ನು ಬೇರೆ ಬಾಬ್ತುಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ" ಎಂದು ಹೇಳಿದ್ದಾರೆ. ಇದನ್ನು ಸರ್ಕಾರದಲ್ಲಿರುವ ಸಚಿವರು ಸಮರ್ಥನೆ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಮೊನ್ನೆ ದಿನ ಎಸ್.ಸಿ., ಎಸ್.ಟಿ., ವರ್ಗಕ್ಕೆ ಸೇರಿದ ಬಹಳಷ್ಟು ಜನ ಸಚಿವರು ಈ ಸದನದಲ್ಲಿ ಉಪಸ್ಥಿತರಿದ್ದರು. ಈ ದಿನ ಮಾನ್ಯ ಶಿವರಾಜ್ ಎಸ್. ತಂಗಡಗಿಯವರು ಒಬ್ಬರೇ ಇದ್ದಾರೆ. ನಾನು ಸರ್ಕಾರದಲ್ಲಿರುವ ಎಸ್.ಸಿ., ಎಸ್.ಟಿ., ವರ್ಗಕ್ಕೆ ಸೇರಿದ ಮಾನ್ಯ ಸಚಿವರುಗಳಲ್ಲಿ ಕೇಳಿಕೊಳ್ಳುವುದೇನೆಂದರೇ, ತಾವುಗಳು ಕ್ಯಾಬಿನೆಟ್‌ನಲ್ಲಿ ಭಾಗವಹಿಸುತ್ತೀರಿ, ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ನೀಡುವ ಯೋಜನೆಗಳಿಗಾಗಿ ಮೀಸಲಿಟ್ಟಿರುವ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ., ಹಣವನ್ನು, ಆ ವರ್ಗದವರಿಗೆ ಮೂಲಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕಾಗಿ ಬಳಕೆ ಮಾಡಿಕೊಳ್ಳಬೇಕಾಗಿತ್ತು. ಅವರಿಗಾಗಿ ಮನೆಗಳನ್ನು ಮತ್ತು ರಸ್ತೆಗಳನ್ನು ನಿರ್ಮಾಣ ಮಾಡಿಕೊಡಬೇಕಾಗಿತ್ತು. ಕುಡಿಯುವ ನೀರನ್ನು ಒದಗಿಸಿಕೊಡಬೇಕಾಗಿತ್ತು, ಶಾಲೆಗಳನ್ನು ಮತ್ತು ಅಂಗನವಾಡಿಗಳನ್ನು ನಿರ್ಮಾಣ ಮಾಡಬೇಕಾಗಿತ್ತು. ಅವರಿಗೆ ಜಮೀನನ್ನು ಕೊಡಬೇಕಾಗಿತ್ತು. ಇವುಗಳನ್ನು ಮಾಡಬೇಕಾಗಿರುವ ಸಂದರ್ಭದಲ್ಲಿ.....

(ಗೊಂದಲ)

ಶ್ರೀ ಎಂ.ನಾಗರಾಜು:– ಸನ್ಮಾನ್ಯ ಸಭಾಪತಿಯವರೇ,.....

(ಗೊಂದಲ)

ಶ್ರೀ ಐವನ್ ಡಿ'ಸೋಜಾ:– ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟವರು ಉತ್ತರವನ್ನು ಕೊಡುತ್ತಾರೆ.

(ಗೊಂದಲ)

ಉಪ ಸಭಾಪತಿಯವರು:– ಮಾನ್ಯ ಐವನ್ ಡಿ'ಸೋಜಾರವರೇ, ತಾವು ಮಾತನಾಡಿಯಾಗಿದೆ ಕುಳಿತುಕೊಳ್ಳಿ, ಮಾನ್ಯ ಸದಸ್ಯರು ಯೀಲ್ಡ್ ಆಗುತ್ತಿಲ್ಲ. ಮಾನ್ಯ ಕೆ.ಎಸ್.ನವೀನ್‌ರವರೇ, ತಾವು ತಮ್ಮ ಮಾತುಗಳನ್ನು ಮುಂದುವರಿಸಿ.

ಶ್ರೀ ಕೆ.ಎಸ್.ನವೀನ್:– ಸನ್ಮಾನ್ಯ ಸಭಾಪತಿಯವರೇ, ಅವರು 5 ನಿಮಿಷಗಳ ಕಾಲ ನನ್ನ ಮಾತುಗಳಿಗೆ ಅಡಚಣೆಯನ್ನುಂಟು ಮಾಡಿದರೆ, ನಾನು ಇನ್ನೂ 10 ನಿಮಿಷಗಳ ಕಾಲ ಮಾತನಾಡುತ್ತೇನೆ.

ಉಪ ಸಭಾಪತಿಯವರು:– ಬೇಡ, ತಮ್ಮ ಮಾತುಗಳನ್ನು ಬೇಗನೇ ಮುಗಿಸಿ.

ಶ್ರೀ ಕೆ.ಎಸ್.ನವೀನ್:– ಸನ್ಮಾನ್ಯ ಸಭಾಪತಿಯವರೇ, "ಗೃಹಲಕ್ಷ್ಮಿ ಯೋಜನೆಯಡಿಯಲ್ಲಿ ಸರ್ಕಾರ ಮಾಸಿಕ ಮಹಿಳೆಯರ ಖಾತೆಗೆ ಹಾಕುತ್ತಿರುವ ಹಣ ಕಳೆದ 5-6 ತಿಂಗಳುಗಳಿಂದ ನಿಂತು ಹೋಗಿದ್ದರೆ ನಾವು ರಾಜಿನಾಮೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತೇವೆ" ಎಂದು ಮಾನ್ಯ ಸಲೀಂ ಅಹಮದ್‌ನವರು ಒಂದು ಚಾಲೆಂಜ್ ಹಾಕಿದ್ದರು. ನಾನು ಸಹ ಚಾಲೆಂಜ್ ಮಾಡುತ್ತಿದ್ದೇನೆ. ಇವರು, ಸಮಾಜ ಕಲ್ಯಾಣ ಇಲಾಖೆಯಿಂದ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ., ಹಣವನ್ನು diversion ಮಾಡಿ, ಬೇರೆಬೇರೆ ಯೋಜನೆಗಳಿಗೆ ಬಳಕೆ ಮಾಡಿಕೊಂಡಿಲ್ಲವೆಂದು ವಿಧಾನಸೌಧದ ಮುಂದೆ ಇರುವಂತಹ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಪ್ರತಿಮೆ ಮುಂದೆ ಬಂದು ಪ್ರಮಾಣ ಮಾಡಲಿ; ನಾವು ಸಹ ಅವರು ಆ ಹಣವನ್ನು ಬೇರೆ ಉದ್ದೇಶಗಳಿಗೆ ಬಳಕೆ ಮಾಡಿಕೊಂಡಿದ್ದಾರೆಂದು ಪ್ರಮಾಣ ಮಾಡುತ್ತೇವೆ. ಅವರು ಈ ಚಾಲೆಂಜ್ ಅನ್ನು ಸ್ವೀಕಾರ ಮಾಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ.ನಾಗರಾಜು:- ಸನ್ಮಾನ್ಯ ಸಭಾಪತಿಯವರೇ, ಅವರು ಬೇರೆ ರೂಪದಲ್ಲಿ ಅದನ್ನು ಪ್ರಸ್ತಾಪ ಮಾಡಿದರೇ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಿದೆ.

(ಗೊಂದಲ)

ಶ್ರೀ ಕೆ.ಎಸ್.ನವೀನ್:- ಸನ್ಮಾನ್ಯ ಸಭಾಪತಿಯವರೇ, ಈ ರಾಜ್ಯದ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ., ಹಣವನ್ನು ಬೇರೆ ಯೋಜನೆಗಳಿಗೆ ಈ ಸರ್ಕಾರ ಬಳಕೆ ಮಾಡಿಕೊಂಡಿದೆ.

(ಗೊಂದಲ)

ಉಪ ಸಭಾಪತಿಯವರು:- ಮಾನ್ಯ ಕೆ.ಎಸ್.ನವೀನ್‌ರವರೇ, ತಾವು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ. ಮಾನ್ಯ ನಾಗರಾಜುರವರೇ, ಮಾನ್ಯ ನವೀನ್‌ರವರು ಯೀಲ್ಡ್ ಆಗಿಲ್ಲ. ಅವರು ತಮ್ಮ ಮಾತುಗಳನ್ನು ಮುಗಿಸಲಿ. ಸರ್ಕಾರ ಉತ್ತರ ಕೊಡುವ ಸಮಯದಲ್ಲಿ ಇದಕ್ಕೂ ಉತ್ತರವನ್ನು ಕೊಡಲಿ.

(ಗೊಂದಲ)

ಶ್ರೀ ಶಿವರಾಜ್ ಎಸ್.ತಂಗಡಗಿ(ಹಿಂದುಳಿದ ವರ್ಗ ಮತ್ತು ಎಸ್.ಸಿ., ಎಸ್.ಟಿ.ಕಲ್ಯಾಣ ಸಚಿವರು):- ಸನ್ಮಾನ್ಯ ಸಭಾಪತಿಯವರೇ, ತಪ್ಪು ಮಾಹಿತಿ ಕಡತಕ್ಕೆ ಹೋಗಬಾರದು.

(ಗೊಂದಲ)

ಶ್ರೀ ಕೆ.ಎಸ್.ನವೀನ್:- ಸನ್ಮಾನ್ಯ ಸಭಾಪತಿಯವರೇ ಅವರು ಆ ರೀತಿ ಹೇಳುವುದಾದರೇ, ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ., ಅನುದಾನದ ಬಗ್ಗೆಯೇ ವಿಶೇಷವಾಗಿ ಚರ್ಚೆಗೆ ತೆಗೆದುಕೊಳ್ಳಿ, ನಾವು ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ನಾನು ತಮ್ಮ ಮೂಲಕ ಈ ಸರ್ಕಾರಕ್ಕೆ ಹೇಳಬಯಸುವುದೇನೆಂದರೇ, ಕರುನಾಡಿನಲ್ಲಿ ನಾವು ಪುಣ್ಯಕೋಟಿಯ ಕಥೆಯನ್ನು ಕೇಳಿ ಬೆಳೆದವರು.

ಸತ್ಯವೇ ನಮ್ಮ ತಾಯಿ ತಂದೆ;

ಸತ್ಯವೇ ನಮ್ಮ ಬಂಧು ಬಳಗ;

ಸತ್ಯ ವಾಕ್ಯಕ್ಕೆ ತಪ್ಪಿ ನಡೆದರೇ;

ಮೆಚ್ಚನಾ ಪರಮಾತ್ಮನು;

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವಂತೆ ಸತ್ಯವನ್ನು ಹೇಳುವಂತಹ ಕೆಲಸವನ್ನು ಅವರು ಮಾಡಬೇಕಾಗುತ್ತದೆ. ಜನರು ಅವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ, ಉತ್ತಮ ರೀತಿಯಲ್ಲಿ ಅಧಿಕಾರವನ್ನು ನಡೆಸಬೇಕೆಂದು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

(ಗೊಂದಲ)

ಉಪ ಸಭಾಪತಿಯವರು:- ಈಗ ಸದನವನ್ನು ಮಧ್ಯಾಹ್ನ 3.15 ಗಂಟೆಯವರೆಗೆ ಮುಂದೂಡಲಾಗುತ್ತಿದೆ.

(ಭೋಜನ ವಿರಾಮಕ್ಕಾಗಿ ಸದನವನ್ನು ಮಧ್ಯಾಹ್ನ 1.59 ಗಂಟೆಗಳಿಗೆ ಮುಂದೂಡಿ ಪುನಃ ಮಧ್ಯಾಹ್ನ 3.15 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು.)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(204) 11/03/2025 3:40 ಎಸ್‌ಪಿಆರ್/ಕೆಎಸ್

(ಭೋಜನ ವಿರಾಮಕ್ಕಾಗಿ ಅಪರಾಹ್ನ 1:59 ಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಅಪರಾಹ್ನ 3 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.)

(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು)

7. ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ಮುಂದುವರೆದ ವಿಶೇಷ ಚರ್ಚೆ

ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಈಗಿನ ಹದಿಹರೆಯದ ಮಕ್ಕಳಿಗೆ ಒತ್ತಡ ಬಹಳ ಜಾಸ್ತಿ ಇದೆ. ಇದು ಯಾವ ಕಾರಣಕ್ಕಾಗಿ ಎಂದರೆ, ಎಲ್ಲಾ ತಂದೆ ತಾಯಿಗಳು ಅಂಕಗಳ ಹಿಂದೆ ಬಿದ್ದಿದ್ದಾರೆ. ಬಲಗೈಯಿಂದ ಬರೆಯುವ ಎಲ್ಲಾ ಮಕ್ಕಳಿಗೂ ಎಡಭಾಗದ ಮೆದುಳಿನ ಮೇಲೆ ಹೆಚ್ಚಿನ ಒತ್ತಡ ಬೀಳುತ್ತದೆ. ಎಡ ಭಾಗದ ಮೆದುಳಿನ ಮೇಲೆ ಏಕೆ ಹೆಚ್ಚಿನ ಒತ್ತಡ ಬೀಳುತ್ತದೆ ಎಂದರೆ, ದಿನದ 24 ಗಂಟೆಯಲ್ಲಿ 9 ಗಂಟೆಗಳ ಕಾಲ ಶಾಲೆಯಲ್ಲಿ ಕಳೆಯುತ್ತಾರೆ; 3 ಗಂಟೆಗಳ ಕಾಲ ಕಷ್ಟಪಟ್ಟಾದರೂ ಸಹ ಟ್ಯೂಷನ್‌ಗೆ ಕಳುಹಿಸುತ್ತಾರೆ. ಇಲ್ಲಿಗೆ 12 ಗಂಟೆಗಳು ಆದವು. 8 ಗಂಟೆಗಳ ಕಾಲ ನಿದ್ದೆ ಮಾಡಬೇಕು. ಹೀಗಾಗಿ ಕೇವಲ 4 ಗಂಟೆಗಳು ಮಾತ್ರವೇ ಉಳಿಯುತ್ತದೆ. ಈ 4 ಗಂಟೆಗಳ ಅವಧಿಯಲ್ಲಿ ಮಕ್ಕಳು ಊಟ-ತಿಂಡಿಗಳನ್ನು ಮಾಡಬೇಕು, ಇನ್ನಿತರೆ ಚಟುವಟಿಕೆಗಳನ್ನು ಮಾಡಬೇಕು. ಅದರಲ್ಲೂ ಬಹಳ ಪ್ರಮುಖವಾಗಿ ಟಿ.ವಿ. ಮತ್ತು ಮೊಬೈಲ್‌ಗಳನ್ನು ನೋಡಬೇಕು. ಈ ನಿಟ್ಟಿನಲ್ಲಿ ಬಹುತೇಕ ಸಮಯವು ಮಕ್ಕಳಿಗೆ ಓದಿನ ಮೇಲೆ ಒತ್ತಡ ಬೀಳುತ್ತದೆ. ಒಳ್ಳೆಯ ಸಂಸ್ಕಾರ ಮತ್ತು ಸಂಸ್ಕೃತಿಗಳನ್ನು ಕಲಿಸುವುದಕ್ಕೆ ಯಾರಿಗೂ ಸಹ ಸಮಯವಿಲ್ಲ. ತಮಗೆಲ್ಲಾ ಗೊತ್ತಿರುವಂತೆ ಸಂಸ್ಕಾರವು ಜೀವನದಲ್ಲಿ ಬಹಳ ಮುಖ್ಯವಾದುದು. ಮಣ್ಣಿಗೆ ಸಂಸ್ಕಾರ ಸಿಕ್ಕರೆ ಮಡಿಕೆಯಾಗುತ್ತದೆ; ಕಲ್ಲಿಗೆ ಸಂಸ್ಕಾರ ಸಿಕ್ಕರೆ ಶಿಲೆಯಾಗುತ್ತದೆ; ನೀರಿಗೆ ಸಂಸ್ಕಾರ ಸಿಕ್ಕರೆ ತೀರ್ಥವಾಗುತ್ತದೆ; ಅನ್ನಕ್ಕೆ ಸಂಸ್ಕಾರ ಸಿಕ್ಕರೆ ಪ್ರಸಾದವಾಗುತ್ತದೆ; ಮಣ್ಣಿಗೆ ಸಂಸ್ಕಾರ ಸಿಕ್ಕರೆ ವಿಭೂತಿಯಾಗುತ್ತದೆ ಕೊನೆಯಲ್ಲಿ ಮನುಷ್ಯನಿಗೆ ಸಂಸ್ಕಾರ ಸಿಕ್ಕರೆ ಅವನು ಮಹಾದೇವನಾಗುತ್ತಾನೆ. ಈ ನಿಟ್ಟಿನಲ್ಲಿ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಕಲಿಸುವ ಪ್ರಮೇಯವೂ ಸಹ ಇಲ್ಲ ಹಾಗೆಯೇ ಸಮಯವೂ ಸಹ ಇಲ್ಲ. ಸಮಯದ ಬಹುಪಾಲು ಮಕ್ಕಳ ಎಡಭಾಗದ ಮೆದುಳಿಗೆ ಮಾತ್ರವೇ ಕೆಲಸದ ಒತ್ತಡ ಹೆಚ್ಚಾಗುತ್ತದೆ. ಈ ಕೆಲಸದ ಒತ್ತಡವನ್ನು ಸುಲಭವಾಗಿ ಮಾಡುವುದಕ್ಕೆ ನಮ್ಮ ಶಿಕ್ಷಣದ ವ್ಯವಸ್ಥೆಯಲ್ಲಿ ಓದುವ ವಿಧಾನವನ್ನೂ ಸಹ ನಾವು ಮಕ್ಕಳಿಗೆ ಕಲಿಸಬೇಕಾಗುತ್ತದೆ. ಹೀಗಾಗಿ ನಾವು SQ3R study method ಎಂಬ ವಿಧಾನವನ್ನು ಎಲ್ಲಾ ಶಾಲಾ ಕಾಲೇಜುಗಳಲ್ಲಿ ಅಳವಡಿಸ ಬೇಕಾದುದು ಬಹಳ ಮುಖ್ಯವಾಗಿದೆ. SQ3R study method ಅನ್ನು 'S' ಎಂದರೆ 'Surveying' ಅಂದರೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಐದು ಪುಟಗಳ ಪಠ್ಯವಿದ್ದರೆ ಅದರಲ್ಲಿ ಕೇವಲ ಶೀರ್ಷಿಕೆ, ಕಾಲಂ, ಟೇಬಲ್ ಮತ್ತು ಚಿತ್ರಗಳನ್ನು ಮಾತ್ರವೇ ಓದಬೇಕಾಗುತ್ತದೆ. 'Q' ಎಂದರೆ 'Questioning' – ಇದರಲ್ಲಿ ಪಾಠವನ್ನು ಓದುವ ಮುಂಚೆ ಅದರಲ್ಲಿ ಬರುವ ಪ್ರಶ್ನೆಗಳನ್ನು ಓದಿಕೊಳ್ಳಬೇಕು. 3R's ಎಂದರೆ 'Read, Recite and Revise' ಎಂದು, ಈ ವಿಧಾನವನ್ನು ಬಳಸಿದರೆ, ಖಂಡಿತವಾಗಿಯೂ ಸಹ ಮಕ್ಕಳ ಜ್ಞಾಪಕ ಶಕ್ತಿಯನ್ನು ಚೆನ್ನಾಗಿ ಮಾಡಬಹುದು; ತನ್ಮೂಲಕ ಮಕ್ಕಳಲ್ಲಿ ಒತ್ತಡವನ್ನು ಕಡಿಮೆ ಮಾಡಬಹುದು. ಇದು ವೈಜ್ಞಾನಿಕವಾಗಿ ಸಾಬೀತುಪಡಿಸಿದ ವಿಧಾನವಾಗಿದೆ ಏಕೆಂದರೆ, ಸಾಮಾನ್ಯವಾಗಿ ಯಾರಾದರೂ ಒಬ್ಬರು ಒಂದು ಪದ್ಯ ಅಥವಾ ಒಂದು ವಿಷಯವನ್ನು ಓದಿದರೆ, ಅರ್ಧ ಗಂಟೆಯಿಂದ ಒಂದು ಗಂಟೆಗಳ ಸಮಯದಲ್ಲಿ ಶೇಕಡಾ 30 ರಷ್ಟು ಮರೆತು ಹೋಗುತ್ತದೆ. 24 ಗಂಟೆಗಳಾದರೆ ಶೇಕಡಾ 50 ರಷ್ಟು ಮರೆತು ಹೋಗುತ್ತದೆ. ಮೂರು ವಾರಗಳ ಅವಧಿಯಾದರೆ, ಅವರಿಗೆ ಶೇಕಡಾ 10 ರಿಂದ ಶೇಕಡಾ 30 ರಷ್ಟು ಮಾತ್ರವೇ ಜ್ಞಾಪಕದಲ್ಲಿರುತ್ತದೆ. ಈ ನಿಟ್ಟಿನಲ್ಲಿ ಪದೇ ಪದೇ ಓದಬೇಕಾಗುತ್ತದೆ. ಹಾಗಾಗಿ ಎಲ್ಲಾ ಶಾಲೆಗಳಲ್ಲಿ SQ3R study method ಅನ್ನು ಅಳವಡಿಸಿದರೆ, ಖಂಡಿತವಾಗಿಯೂ ಸಹ ಮಕ್ಕಳಿಗೆ ಹೆಚ್ಚಿನ ಅಂಕ ಪಡೆಯುವುದರಲ್ಲಿ ಸುಧಾರಣೆಯಾಗುವ ಅವಕಾಶಗಳು ಜಾಸ್ತಿ ಇವೆ.

ಅದೇ ರೀತಿಯಲ್ಲಿ ಕಲಿಕೆಯಲ್ಲಿಯೂ ಸಹ ಮೂರು ರೀತಿಯ ವಿಧಾನಗಳಿವೆ. ಇವುಗಳಲ್ಲಿ ಯಾವ ರೀತಿಯ ಮಕ್ಕಳಿಗೆ ಯಾವ ರೀತಿಯ ಕಲಿಕೆ ಉಪಯೋಗವಾಗುತ್ತದೆ ಎನ್ನುವುದನ್ನೂ ಸಹ ನಾವು ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಹೇಳಿಕೊಡಬೇಕಾಗುತ್ತದೆ. ಈ ಪೈಕಿ ಒಂದನೆಯದು ದೃಶ್ಯ ಸ್ಮರಣೆ (Visual Memory) ನೋಡಿ ಕಲಿಯುವುದು; ಎರಡನೆಯದು ಶ್ರವಣೇಂದ್ರಿಯ ಸ್ಮರಣೆ (Auditory Memory) ಕೇಳಿ ಕಲಿಯುವುದು ಹಾಗೂ ಚಲನಶಾಸ್ತ್ರೀಯ ಸ್ಮರಣೆ (Kinesthetic Memory) ಅಂದರೆ ಬರೆದು ಕಲಿಯುವುದು. ಹಲವಾರು ರೀತಿಯ ಮಕ್ಕಳನ್ನು ನಾವು ನೋಡುತ್ತೇವೆ. ಕೇಳಿ ಕಲಿ, ನೋಡಿ ಕಲಿ ಮತ್ತು ಬರೆದು ಕಲಿ – ಈ ಮೂರು ರೀತಿಯ ಕಲಿಕೆಯಲ್ಲಿ ಆ ಮಗು ಅಥವಾ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ಯಾವ ರೀತಿಯ ಕಲಿಕೆ ಇದ್ದರೆ, ಅವರಿಗೆ ಚೆನ್ನಾಗಿ ಅರ್ಥವಾಗುತ್ತದೆ ಎನ್ನುವುದನ್ನು ನಾವು ತಿಳಿದುಕೊಂಡು, ಆ ನಿಟ್ಟಿನಲ್ಲಿಯೇ ಅವರಿಗೆ ಕಲಿಕೆಗೆ ಪ್ರೋತ್ಸಾಹಿಸಬೇಕಾಗುತ್ತದೆ. ಈ ರೀತಿಯಾಗಿ ಮಾಡಿದಾಗ, ಮಕ್ಕಳ ಎಡ ಭಾಗದ ಮೆದುಳಿನಲ್ಲಿರುವ ಒತ್ತಡವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯತೆ ಇರುತ್ತದೆ. ಜೊತೆಗೆ, ಎಡ ಭಾಗದ ಮೆದುಳಿಗೆ ಸಮನಾಗಿ ಬಲ ಭಾಗದ ಮೆದುಳು ಕೆಲಸ ಮಾಡಿದರೆ ಮಾತ್ರ ಆ ಮಕ್ಕಳ output ಚೆನ್ನಾಗಿ ಬರುವುದಕ್ಕೆ ಸಾಧ್ಯತೆ ಇರುತ್ತದೆ. ಬಲ ಭಾಗದ ಮೆದುಳಿಗೆ ಕೆಲಸ ಕೊಡಬೇಕೆಂದರೆ "ಓದು ಒಕ್ಕಾಲು ಬುದ್ಧಿ ಮುಕ್ಕಾಲು" ಎನ್ನುವಂತೆ "ಓದು ಕೆಲಸ ಮಾಡಿತು; ಬುದ್ಧಿ ದೇಶ ಆಳಿತು". ಬಲ ಭಾಗದ ಮೆದುಳಿಗೆ ಕೆಲಸ ಕೊಡಬೇಕೆಂದರೆ, ಪಠ್ಯೇತರ ಚಟುವಟಿಕೆಗಳನ್ನು ಕಡ್ಡಾಯವಾಗಿ ಮಾಡಲೇಬೇಕು. ಇವುಗಳಲ್ಲಿ ಕೇವಲ ಆಯ್ಕೆಯನ್ನು ನೀಡಬಾರದು. ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ 45 ನಿಮಿಷಗಳ ಕಾಲದಷ್ಟು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲೇಬೇಕು. ಹೇಗೆ ನಾವು ಎಡ ಭಾಗದ ಮೆದುಳಿಗೆ SQ3R study method ಅನ್ನು ಹಾಗೂ ಜ್ಞಾಪಕ ಶಕ್ತಿಯನ್ನು ವೃದ್ಧಿಸುವ ವಿಧಾನವನ್ನು ಹೇಗೆ ಹೇಳಿಕೊಡುತ್ತೇವೆಯೋ, ಅದೇ ರೀತಿಯಾಗಿ 45 ನಿಮಿಷಗಳು ಕಡ್ಡಾಯವಾಗಿ ಮಕ್ಕಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೊಡಗಿಸಿದರೆ, ಸ್ವಯಂಚಾಲಿತವಾಗಿ ಬಲ ಭಾಗದ ಮೆದುಳು ತೀಕ್ಷ್ಣವಾಗುತ್ತದೆ. ಹೀಗೆ ಬಲ ಭಾಗದ ಮೆದುಳು ತೀಕ್ಷ್ಣವಾದರೆ, ಎಡ ಮತ್ತು ಬಲ ಭಾಗದ ಮೆದುಳು ಸಮವಾದ ಔಟ್‌ಪುಟ್‌ನ್ನು ನೀಡುವುದು ತುಂಬಾ ಚೆನ್ನಾಗಿ ಆಗುತ್ತದೆ. ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ತುಂಬಾ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ 45 ನಿಮಿಷಗಳಷ್ಟು ಕಡ್ಡಾಯವಾಗಿ ಮಕ್ಕಳನ್ನು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸುವುದು ಬಹಳ ಮುಖ್ಯವಾಗಿದೆ.

ಈಗಿನ ಕಾಲದ ಮಕ್ಕಳಿಗೆ ಚಿಂತೆ ಮತ್ತು ಒತ್ತಡಗಳು ಬಹಳ ಮುಖ್ಯವಾಗಿ ಕಾಡುತ್ತಿದೆ. ಚಿತೆ ಸತ್ತ ಮೇಲೆ ಸುಡುತ್ತದೆ; ಆದರೆ ಚಿಂತೆ ಬದುಕಿದ್ದಾಗಲೇ ಸುಡುತ್ತದೆ. ಈ ನಿಟ್ಟಿನಲ್ಲಿ ಚಿಂತೆಯಿಂದ ಮಕ್ಕಳು ಹೊರಗೆ ಬರಬೇಕು. ಇಂದಿನ ಕಾಲದ ಯಾವ ಮಕ್ಕಳಿಗೂ ಸಹ ತಾಳ್ಮೆ ಇಲ್ಲ. ಈ ಹಿಂದೆ ಸಿನೆಮಾ ಟಾಕೀಸುಗಳಲ್ಲಿ ಸರದಿಯ ಸಾಲಿನಲ್ಲಿ ನಿಂತುಕೊಂಡು ಗಾಂಧಿ ಸೀಟಿನಲ್ಲಿ ಕುಳಿತುಕೊಂಡು ಸಿನೆಮಾವನ್ನು ನೋಡುತ್ತಿದ್ದೆವು. ಬಿಂದಿಗೆಯ ಹಿಡಿದುಕೊಂಡು ನೀರಿಗಾಗಿ ಕಾಯುತ್ತಿದ್ದೆವು. ನಾವು ವ್ಯಾಸಂಗ ಮಾಡುತ್ತಿರುವ ಸಂದರ್ಭದಲ್ಲಿ ನಮ್ಮ ತಾಯಿಯವರು ಪತ್ರವನ್ನು ಬರೆದರೆ, ಅವರಿಗೆ ಉತ್ತರ ಬರೆಯಲು ನಾವು ಮತ್ತೊಂದು ವಾರ ಕಾಯುತ್ತಿದ್ದೆವು. ಈ ರೀತಿಯಾಗಿ ...

ಶ್ರೀ ಎಂ.ಸಿ. ಸುಧಾಕರ (ಉನ್ನತ ಶಿಕ್ಷಣ ಸಚಿವರು):- ಗಾಂಧಿ ಸೀಟು ಅಂದರೆ, ಕಮ್ಮಿ ಬೆಲೆ ಎಂದರ್ಥವೇ?

ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೆ, ಕಡಿಮೆ ಬೆಲೆ ಎಂದಲ್ಲ. ಆಗಿನ ಕಾಲದಲ್ಲಿ ನಮ್ಮಲ್ಲಿ ಎಷ್ಟರ ಮಟ್ಟಿಗೆ ಮುಗ್ಧತೆ ಇತ್ತು ಎಂದರೆ, ನಮ್ಮ ಕಾಲದಲ್ಲಿ ಒಳ್ಳೊಳ್ಳೆಯ ಸಿನೆಮಾಗಳು ಬಂದರೆ, ಶಾಲೆಯಿಂದಲೇ ಸಿನೆಮಾ ನೋಡಲು ಕರೆದುಕೊಂಡು ಹೋಗುತ್ತಿದ್ದರು. ಆಗ ನಾವುಗಳು ಹೋಗಿ ಮುಂದಿನ ಸಾಲಿನಲ್ಲಿ ಕುಳಿತುಕೊಳ್ಳುತ್ತಿದ್ದೆವು. ಏಕೆಂದರೆ ಆಗಿನ ಕಾಲದಲ್ಲಿ ನಾಟಕಗಳನ್ನೂ ಸಹ ಮುಂದೆ ನಿಂತು ಕೊಂಡು ನೋಡುತ್ತಿದ್ದೆವು; ಆಗ ಅದು ಚೆನ್ನಾಗಿ ಕಾಣುತ್ತಿತ್ತು. ಆ ರೀತಿಯಾಗಿ ನೆಲದಲ್ಲಿ ಅಥವಾ ಮುಂದಿನ ಸಾಲಿನಲ್ಲಿ ಕುಳಿತುಕೊಳ್ಳುವಷ್ಟು ಮುಗ್ಧತನ ನಮ್ಮಲ್ಲಿತ್ತು. ಆದರೆ, ಈಗಿನ ಮಕ್ಕಳು ಮುಂದೆ ಹೋಗುವುದಕ್ಕೆ ತಯಾರೇ ಇರುವುದಿಲ್ಲ.

ಶ್ರೀ ಕೆ.ವೆಂಕಟೇಶ್ (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು):- ಮಾನ್ಯ ಸಭಾಪತಿಯವರೆ, ಗಾಂಧಿ ಸೀಟು ಎಂದು ಹೇಳಿದರೆ ಅದು ಉಚಿತವಾದ ಸೀಟು ಆಗಿತ್ತು.

(ಗೊಂದಲ)

ಶ್ರೀಮತಿ ಭಾರತಿ ಶೆಟ್ಟಿ:- ಮಾನ್ಯ ಸಭಾಪತಿಯವರೆ, ಬಾಲ್ಕನಿಯಿಂದ ನೋಡುವುದು ಚೆನ್ನಾಗಿರುವುದಿಲ್ಲ ಎಂಬುದು ನಮ್ಮ ತಲೆಯಲ್ಲಿತ್ತು. ಮುಂದೆ ಕುಳಿತುಕೊಂಡು ನೋಡುವುದೇ ನಮ್ಮ ಕ್ಲಾಸ್ ಆಗಿತ್ತು. ಆದರೆ ಈಗಿನ ಕಾಲದ ಮಕ್ಕಳು ಅಂದರೆ ನಮ್ಮ ಮೊಮ್ಮಕ್ಕಳನ್ನು ಕೇಳಿದರೆ, "ಅಯ್ಯೋಯ್ಯೋ ಮುಂದೆ ಬೇಡ" ಎಂದು ಹೇಳುತ್ತಾರೆ. ಮಾಲ್‌ಗಳಲ್ಲಿ ಸಿನೆಮಾ ನೋಡಲು ಹೋದರೆ, "ಮುಂದಿನ ಸೀಟು ಏಕೆ ಬುಕ್ ಮಾಡಿದ್ದೀರಿ ಅಮ್ಮಮ್ಮಾ; ಹಿಂದಿನ ಸೀಟು ಮಾಡಿ" ಎಂಬುದಾಗಿ ಹೇಳುತ್ತಾರೆ. ಅಂದರೆ ಈಗಿನ ಕಾಲದ ಮಕ್ಕಳು ಅಷ್ಟು ಬುದ್ಧಿವಂತರಿದ್ದಾರೆ.

ಡಾ॥ ಧನಂಜಯ ಸರ್ಜಿ:- ಮಾನ್ಯ ಸಭಾಪತಿಯವರೆ, ಈಗಿನ ಕಾಲದ ಮಕ್ಕಳು ಓದುವಷ್ಟು ತಾಳ್ಮೆಯನ್ನು ಕಳೆದುಕೊಂಡಿದ್ದಾರೆ. "ತಾಳಿದವನು ಬಾಳಿಯಾನು" ಎಂಬ ನಾಣ್ನುಡಿ ಇದೆ. ಈ ನಿಟ್ಟಿನಲ್ಲಿ ಶಾಲಾ ಕಾಲೇಜುಗಳಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡ್ಡಾಯವಾಗಿ 20-30 ನಿಮಿಷಗಳ ಕಾಲ ಯೋಗವನ್ನು ಅಭ್ಯಾಸ ಮಾಡಿಸುವುದು ಬಹಳ ಅಗತ್ಯವಾಗಿದೆ. ಯೋಗವನ್ನು ಅಭ್ಯಾಸ ಮಾಡುವುದರಿಂದ ತಾಳ್ಮೆ ಜಾಸ್ತಿಯಾಗುತ್ತದೆ. ಈಗಿನ ಮಕ್ಕಳಲ್ಲಿ ಒತ್ತಡದ ಮಟ್ಟವನ್ನು ಕಡಿಮೆ ಮಾಡಬೇಕೆಂದರೆ, ಮೂರು ಚಟುವಟಿಕೆಗಳನ್ನು ಕಡ್ಡಾಯವಾಗಿ ಮಾಡಲೇಬೇಕು. ಒಂದು SQ3R study method ಮತ್ತು ಜ್ಞಾಪಕವನ್ನು ವೃದ್ಧಿಪಡಿಸುವ ವಿಧಾನಗಳನ್ನು ಹೇಳಿಕೊಡಬೇಕು. ಬಲ ಭಾಗದ ಮೆದುಳು ವೃದ್ಧಿಯಾಗುವಂತೆ ಪಠ್ಯೇತರ ಚಟುವಟಿಕೆಗಳನ್ನು ಕಡ್ಡಾಯವಾಗಿ 45 ನಿಮಿಷಗಳ ಕಾಲ ಮಾಡಬೇಕು. "ತಾಳಿದವನು ಬಾಳಿಯಾನು" ಎಂಬ ನಾಣ್ನುಡಿಯಂತೆ ಮಕ್ಕಳಿಗೆ ಯೋಗ ತರಗತಿಯನ್ನು ಕಡ್ಡಾಯವಾಗಿ ಮಾಡಿದರೆ ಖಂಡಿತವಾಗಿಯೂ ಸಹ ಮಕ್ಕಳಿಗೆ ಒತ್ತಡದ ಮಟ್ಟ ಕಡಿಮೆಯಾಗುತ್ತದೆ ಎಂದು ಹೇಳಲಿಚ್ಛಿಸುತ್ತೇನೆ.

ನಾವು ಬೆಳಿಗ್ಗೆ ಅವಧಿಯಲ್ಲಿ ಪ್ರಾರ್ಥನೆಯನ್ನು ಮಾಡುತ್ತೇವೆ. ಪ್ರಾರ್ಥನೆ ಮಾಡುವುದನ್ನು ತುಂಬಾ ಪ್ರೋತ್ಸಾಹಿಸಬೇಕು. ನಮ್ಮ ಧರ್ಮದಲ್ಲಿ ನಾವು ಏನೇನು ಆಚರಣೆ ಮಾಡುತ್ತಿದ್ದೆವೆಯೋ, ಅದೆಲ್ಲದಕ್ಕೂ ವೈಜ್ಞಾನಿಕ ಕಾರಣಗಳಿವೆ. ಮನೆಯ ಮುಂದೆ ಹಾಕುವ ಹಿಟ್ಟಿನ ರಂಗೋಲಿಗೂ ವೈಜ್ಞಾನಿಕ ಕಾರಣವಿದೆ. ಸಂಕ್ರಾಂತಿ ಹಬ್ಬದಂದು ತಿನ್ನುವ ಎಳ್ಳು ಬೆಲ್ಲಕ್ಕೂ ವೈಜ್ಞಾನಿಕ ಕಾರಣವಿದೆ. ಯುಗಾದಿ ಹಬ್ಬದಂದು ತಿನ್ನುವ ಬೇವು ಬೆಲ್ಲಕ್ಕೂ ಸಹ ವೈಜ್ಞಾನಿಕ ಕಾರಣವಿದೆ. ಗೌರಿ ಹಬ್ಬದಲ್ಲಿ ಕೊಡುವ ಬಾಗಿಣಕ್ಕೂ ಸಹ ವೈಜ್ಞಾನಿಕ ಕಾರಣವಿದೆ. ದೇವಸ್ಥಾನದ ಮೇಲೆ ಕಳಸವಿಡುವುದಕ್ಕೂ ಸಹ ವೈಜ್ಞಾನಿಕ ಕಾರಣವಿದೆ. ಅದೇ ರೀತಿಯಾಗಿ ಬೆಳಿಗ್ಗಿನ ಅವಧಿಯಲ್ಲಿ ದೇವರ ಮುಂದೆ ಮಾಡುವ ಪ್ರಾರ್ಥನೆಗೂ ಸಹ ವೈಜ್ಞಾನಿಕ ಕಾರಣವಿದೆ. ಮಕ್ಕಳಿಗೆ ಪ್ರಾರ್ಥನೆ ಮಾಡುವುದನ್ನು ಅಭ್ಯಾಸ ಮಾಡಿಸುವುದು ಬಹಳ ಮುಖ್ಯವಾಗಿದೆ. ಏಕೆಂದರೆ, ಯಾರೋ ಒಬ್ಬರು ಪ್ರಾರ್ಥನೆಯನ್ನು ಮಾಡಿದಾಗ, "ಒಳ್ಳೆಯದಾಗಲಿ ಭಗವಂತ" ಎಂಬುದಾಗಿ ಕೇಳುತ್ತೇವೆ. ಯಾರೂ ಸಹ ಕೆಟ್ಟದ್ದಾಗಲಿ ಎಂದು ಕೇಳುವುದಿಲ್ಲ. ವಿದ್ಯಾರ್ಥಿಗಳು ಒಳ್ಳೆಯ ಅಂಕಗಳು ಬರಲಿ ಎಂದು ಕೇಳುತ್ತಾರೆ. ಹಾಗಾಗಿ ನಾವು ಏನನ್ನು ಕೇಳುತ್ತೇವೆಯೋ, ಅದು ಆಗುತ್ತದೆ. ಇದಕ್ಕೆ ಇರುವ ವೈಜ್ಞಾನಿಕ ಕಾರಣವೇನೆಂದರೆ, ಭಗವಂತನು ನಮಗೆ ಎರಡು ಮೆದುಳನ್ನು ನೀಡಿದ್ದಾನೆ. ಒಂದು conscious mind ಹಾಗೂ ಮತ್ತೊಂದು subconscious mind ಆಗಿದೆ. The conscious mind is not the most powerful mind, but the subconscious mind is the most powerful mind. ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಶೇಕಡಾ 95 ರಷ್ಟು ಚಟುವಟಿಕೆಗಳನ್ನು ಮಾಡುವುದೇ subconscious mind. ಹೀಗಾಗಿ ನಾವು ಪ್ರಾರ್ಥನೆಯನ್ನು ಮಾಡಬೇಕಾದರೆ, subconscious mind ಗೆ conscious mind ಒಳ್ಳೆಯ ಅಂಕಗಳು ಬರಬೇಕು, ಒಳ್ಳೆಯದು ಆಗಬೇಕೆಂದು ಹೇಳುತ್ತದೆ. ನಮ್ಮ ದೈನಂದಿನ ಚಟುವಟಿಕೆಗಳ ಶೇಕಡಾ 95 ರಷ್ಟು ಚಟುವಟಿಕೆಗಳನ್ನು subconscious mind ನಿಯಂತ್ರಣ ಮಾಡುತ್ತದೆ. ಇದು ನಿರಂತರವಾಗಿ ಕ್ರಿಯಾಶೀಲವಾಗಿರುವುದರಿಂದ ನಾವು ಪರಮಾತ್ಮನಲ್ಲಿ ಬೇಡಿದ್ದನ್ನು ಖಂಡಿತವಾಗಿಯೂ ಸಹ ಆಗುತ್ತದೆ. ಹೀಗೆ ಇದಕ್ಕೆ ವೈಜ್ಞಾನಿಕ ಕಾರಣವಿದೆ. ಹೀಗಾಗಿ ಶಾಲಾ ಕಾಲೇಜುಗಳಲ್ಲಿ ಪ್ರಾರ್ಥನೆಯನ್ನು ಮಾಡುವುದನ್ನು ಅಭ್ಯಾಸ ಮಾಡಿಸಬೇಕು ಹಾಗೂ ಇದನ್ನು ಕಡ್ಡಾಯವಾಗಿ ಮಾಡಿಸಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ ಮುಖ್ಯವಾಗಿ ಹೇಳುವುದಾದರೆ, ಮಕ್ಕಳಲ್ಲಿ ಪರೀಕ್ಷಾ ಸಿದ್ಧತೆಯನ್ನು ಹೇಗೆ ಮಾಡಬೇಕು ಎನ್ನುವುದನ್ನು ಕಲಿಸಿಕೊಡಬೇಕು. ಅವರಿಗೆ ಆರು ಗಂಟೆಯ ನಿದ್ದೆಯ ಅವಶ್ಯಕತೆ ಬಹಳ ಮುಖ್ಯವಾಗಿದೆ. Because, sleep is the best master of Medicine. ಮಕ್ಕಳು ಎಷ್ಟು ಚೆನ್ನಾಗಿ ನಿದ್ರೆಯನ್ನು ಮಾಡುತ್ತಾರೆಯೋ, ಅಷ್ಟು ಚೆನ್ನಾಗಿ ಅವರ ದೇಹ ದುರಸ್ತಿಗೊಳ್ಳುತ್ತದೆ. ತನ್ಮೂಲಕ ಜ್ಞಾಪಕ ಶಕ್ತಿಯು ಚೆನ್ನಾಗಿ ಆಗುತ್ತದೆ. ಬಹಳ ಮುಖ್ಯವಾಗಿ ಹೇಳುವುದಾದರೆ, ಮಕ್ಕಳಲ್ಲಿ ದುಶ್ಚಟಗಳು ಜಾಸ್ತಿಯಾಗುತ್ತಿವೆ. ಇವುಗಳ ಬಗ್ಗೆ ವಿಶೇಷವಾಗಿ ಗಮನಿಸಿಬೇಕು. ನಮಗೆ ಕಾಫಿ ಟೀ ಎಂಬ ಚಟವಿದ್ದರೆ, ದುಶ್ಚಟಗಳಲ್ಲಿ ಸಿಗರೇಟು ಸೇದುವುದು, ಮದ್ಯಪಾನ ಮಾಡುವುದು.

(ಮುಂದು)

(205) 11-03-2025 (3-50) bkp- ks **(ಸಭಾಪತಿಯವರ ಉಪಸ್ಥಿತಿ)**

ಡಾ॥ ಧನಂಜಯ ಸರ್ಜಿ (ಮುಂದು):

ಅದಕ್ಕಿಂತ ಡೇಂಜರ್ ಗುಡ್ಕಾ, ಅದಕ್ಕಿಂತ ಡೇಂಜರ್ ಡ್ರಗ್ಸ್, ಅದಕ್ಕಿಂತ ಡೇಂಜರ್ ಯಾವುದು ಎಂದರೆ ಅದು ಟಿ.ವಿ.,ಅದಕ್ಕಿಂತ ಡೇಂಜರ್ ಅಂದರೆ ಮೊಬೈಲ್ ಎನ್ನುತ್ತಾರೆ. ಅದಕ್ಕಿಂತ ಡೇಂಜರ್ ಯಾವುದು ಇದೆ ಎಂದರೆ ಪ್ರತಿದಿನ ಸಂಜೆ ಹೆಣ್ಣು ಮಕ್ಕಳು ನೋಡುವಂತಹ ಧಾರವಾಹಿಗಳು.

ಸಭಾಪತಿಯವರು:- ಈ ಎಲ್ಲಾ ಕೆಲಸಗಳು ಏನಿವೆ, ಅವುಗಳನ್ನು ಕಡಿಮೆ ಮಾಡುವುದು ಹೇಗೆ?

ಡಾ॥ ಧನಂಜಯ ಸರ್ಜಿ:- ಮಾನ್ಯ ಸಭಾಪತಿಯವರೆ, ಅದನ್ನು ನಾನು ಹೇಳುತ್ತೇನೆ. ಮಧ್ಯಪಾನವ ಮಾಡಿ, ಇದ್ದುದೆಲ್ಲವ ನೀಡಿ, ಬಿದ್ದು ಬರುವವನ ಸದ್ದು ಅಡಗಿ, ಸಂತಾನವೆದ್ದು ಹೋಗುವುದು ಸರ್ವಜ್ಞ ಎಂದು ಹೇಳಿದ್ದಾರೆ. ಆ ನಿಟ್ಟಿನಲ್ಲಿ ಚಟ ಮತ್ತು ದುಶ್ಚಟಗಳಿಂದ ನಮಗೆ ಹೊರ ಬರುವುದಕ್ಕೆ ಬಹಳ ಮುಖ್ಯವಾದ ಮಾರ್ಗ ಇದೆ. ಚಟ ಎಂದರೆ ಅದು ನಮಗೆ ಏನು ಕಿಕ್ ಎಂದು ಹೇಳುತ್ತೇವೆ, ಅದು ದೇಹದಲ್ಲಿ adrenaline ನ ಅಂಶವನ್ನು ಉತ್ಪಾದನೆ ಮಾಡುತ್ತದೆ. Adrenaline ಅಂಶ ಬರಿ ಕ್ಷಣಿಕ ಮಾತ್ರ ಆಗಿರುತ್ತದೆ. ಸ್ವಲ್ಪ ಹೊತ್ತು ಮಾತ್ರ active ಆಗಿ ಇರುತ್ತದೆ. ನಮಗೆ ಅದರಿಂದ ಏನು ಕಿಕ್ ಬರುತ್ತದೋ ಅದು ಸ್ವಲ್ಪ ಹೊತ್ತು ಮಾತ್ರ ನಮಗೆ effect ಇರುತ್ತದೆ. ಇದರ ಬಗ್ಗೆ ನಾವು ಹಾಡನ್ನು ಸಹ ಕೇಳಿದ್ದೇವೆ. ಮೂರೇ ಮೂರು ಪೆಗ್‌ಗೆ ತಲೆ ಗಿರ ಗಿರ ಎಂದು ಕಣ್ಣುಗಳು ಮಂಜಾಗಿವೆ ಎಂದು ಹೇಳಲಾಗಿದೆ. ಅಂದರೆ, ಅದು ಕ್ಷಣಿಕ ಮಾತ್ರ. ಆದರೆ ಖಾಯಂ ಪರಿಹಾರ ಯಾವುದು ಎಂದರೆ ನಮ್ಮ ಆತ್ಮಕ್ಕೆ ತೃಪ್ತಿಯಾಗಬೇಕು. ಊಟ ಶರೀರಕ್ಕೆ ತೃಪ್ತಿ ಕೊಡುತ್ತದೆ, ಪಾಠ ಮೆದುಳಿಗೆ ತೃಪ್ತಿ ಕೊಡುತ್ತದೆ. ಆಟ ಮನಸ್ಸಿಗೆ ತೃಪ್ತಿ ಕೊಡುತ್ತದೆ. ಆತ್ಮಕ್ಕೆ ಯಾವುದು ತೃಪ್ತಿ ಕೊಡುತ್ತದೆ ಎಂದರೆ ಅದುವೇ ನಿಜವಾದ ನಿಸ್ವಾರ್ಥ ಸೇವೆ. ಸುದ್ದಿಗಾಗಿ ಸೇವೆ ಮಾಡಬೇಡ, ಸೇವೆ ಮಾಡಿ, ಸುದ್ದಿಯಾಗ ಬೇಡ, ಸದ್ದಿಲ್ಲದೆ, ಸೇವೆ ಮಾಡು ಎಂಬಂತೆ, ಮಕ್ಕಳಿಗೆ ಒಳ್ಳೆಯದನ್ನು ಮಾಡುವುದನ್ನು ಕಲಿಸಬೇಕು. ಯಾರಿಗಾದರೂ blood donation ಕೊಟ್ಟು ಬಂದರೆ ಅವರ ಆತ್ಮ ತೃಪ್ತಿಯೇ ಬೇರೆ. ಯಾವುದಾದರೂ ಒಂದು ಒಳ್ಳೆಯ ಕೆಲಸವನ್ನು ಮಾಡಿದರೆ, ಅದರ ಆತ್ಮ ತೃಪ್ತಿಯೇ ಬೇರೆ ಆಗಿರುತ್ತದೆ. ಆ ಆತ್ಮ ತೃಪ್ತಿ ಜಾಸ್ತಿಯಾದಾಗ serotonin ಅಂಶ ಶರೀರದಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚೆನ್ನಾಗಿ secretion ಜಾಸ್ತಿಯಾಗುವುದರಿಂದ ಆ ಸಮಯದಲ್ಲಿ ಆ ಮಕ್ಕಳಿಗೆ ಆತ್ಮ ತೃಪ್ತಿಯಾಗುತ್ತದೆ. ನಾನು ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ, ಒಂದು task ಇರುತ್ತಿತ್ತು. ನನಗೆ ಟೀಚರ್ ಏನು ಹೇಳುತ್ತಿದ್ದರು ಎಂದರೆ ಪ್ರತಿಯೊಂದು ದಿನ ಯಾವ ಒಳ್ಳೆಯ ಕೆಲಸವನ್ನು ಮಾಡಿದ್ದೀಯಾ, ಅದನ್ನು ಬರೆದುಕೊಂಡು ಬಾ ಎಂದು ಹೇಳುತ್ತಿದ್ದರು. ಇದನ್ನು ಈಗಲೂ ಅನುಸರಿಸಬೇಕು. ಒಂದು ದಿನಕ್ಕೆ ಒಂದು ಒಳ್ಳೆಯ ಕೆಲಸವನ್ನು ಯಾವುದನ್ನು ಮಾಡುತ್ತಿದ್ದೀಯಾ ಎಂದು ಬರೆದುಕೊಂಡು ಬಂದರೆ ದಿನ ಒಂದು ಒಳ್ಳೆಯ ಕೆಲಸವನ್ನು ಮಾಡು ಎನ್ನುವಂತಹ ಪ್ರವೃತ್ತಿ ಬರುತ್ತದೆ. ನಮ್ಮಲ್ಲಿ automatic ಆಗಿ ಸಾಕಷ್ಟು ಮನಸ್ಸು ಪರಿವರ್ತನೆಯಾಗುತ್ತದೆ. ಅದನ್ನೂ ಕೂಡ ಶಾಲಾ-ಕಾಲೇಜುಗಳಲ್ಲಿ ಅಳವಡಿಸಬೇಕು. ಹದಿಹರೆಯದ ಮಕ್ಕಳಲ್ಲಿ 4'A' ಗಳು ಬಹಳ prominent ಆಗಿ ಎಲ್ಲರಲ್ಲೂ ಕಾಡುತ್ತವೆ. ಮೊದಲನೆ, 'A – Aggression'. ಆ ಮಕ್ಕಳು ಬಹಳ aggressive ಇರುತ್ತಾರೆ. ಎರಡನೆ, 'A- Anger', ಅವರಿಗೆ ತುಂಬಾ ಸಿಟ್ಟು ಇರುತ್ತದೆ. ಮೂರನೆಯ, 'A- Argument ಅಂದರೆ ಅವರು ವಾದ ಮಾಡುವಂತಹದ್ದು ಜಾಸ್ತಿ ಇರುತ್ತದೆ. ವಾದ ಮಾಡುವುದು, ಪ್ರತಿವಾದ ಮಾಡುವುದು ಜಾಸ್ತಿ ಇರುತ್ತದೆ. ನಾಲ್ಕನೆಯ, 'A- Arrogance'. ಅವರು ಒಬ್ಬೊಬ್ಬರೇ ಇರುವುದಕ್ಕೆ ಇಷ್ಟ ಪಡುತ್ತಾರೆ. ಈ 4A ಗಳಿಗೆ, ಇನ್ನು 4A ಗಳ ಪರಿಹಾರ ಇದೆ. ಆ 4A ಗಳು ಯಾವುದು ಎಂದರೆ Aggression, Anger, Argument and Arrogance behaviours ಗಳನ್ನು ಮೊದಲನೆಯ 'A- Accept', ನಾವು ಅದನ್ನು ಒಪ್ಪಿಕೊಳ್ಳಬೇಕು. ಎರಡನೆಯ, 'A-Appreciate', ಅದನ್ನು appreciate ಮಾಡಬೇಕು. ಮಗು ಹುಟ್ಟಿದ ತಕ್ಷಣ ಸ್ವೀಟ್ ಎಂದು ಹೇಳುತ್ತೇವೆ, ೩ ತಿಂಗಳಿಗೆ ಖುಷಿ ಪಡುತ್ತೇವೆ. ೨ ತಿಂಗಳಿಗೆ ಟಾಟಾ ಮಾಡಿ ಬಾಯ್ ಎಂದು ಹೇಳಿ ಎಲ್ಲರಿಗೂ ಮಾಡಿಸುತ್ತೇವೆ. ಮಗು ಬಗ್ಗೆ ಹೇಳಬೇಕೆಂದರೆ ನನ್ನ ಮಗುವಿನ ಪುಟ್ಟ ಹೆಜ್ಜೆ ಎಂದು ಹೇಳಿ ಮನೆಯಲ್ಲಿಯೇ ಅದನ್ನು ಮಾರ್ಕ್ ಮಾಡಿ ಇಡುತ್ತೇವೆ. ಈ ರೀತಿಯಲ್ಲಿಯೇ ನಾವು appreciate ಮಾಡುತ್ತೇವೆ. ನಂತರದಲ್ಲಿ comparison ಪ್ರಾರಂಭವಾಗುತ್ತದೆ. ನಂತರದಲ್ಲಿ ಅವರಿಗೆ ಬಯ್ಯುವುದಕ್ಕೆ ಶುರು ಮಾಡುತ್ತೇವೆ. ಆ ನಿಟ್ಟಿನಲ್ಲಿ ಮಕ್ಕಳಿಗೆ ಯಾವಾಗ ನಾವು appreciate ಮಾಡುತ್ತೇವೆ, ಆಗ ಅವರಿಗೆ arrogance, anger ಹಾಗೂ aggression ಎಲ್ಲಾ ಕಡಿಮೆಯಾಗುತ್ತದೆ. ಮೂರನೆಯ, 'A-Adventure Activity', ನಾವು ಮಕ್ಕಳನ್ನು adventure activities ನಲ್ಲಿ ನಾವು ಎಷ್ಟು ಭಾಗಿಯಾಗುವಂತೆ ಮಕ್ಕಳನ್ನು ನಾವು ಮಾಡುತ್ತೇವೆಯೋ ಹದಿಹರಿಯದ ಮಕ್ಕಳಿಗೆ ಅಷ್ಟು ಸಿಟ್ಟು ಕಡಿಮೆಯಾಗುತ್ತದೆ. ಅಷ್ಟು ವಾದ ಮಾಡುವುದು ಕಡಿಮೆಯಾಗುತ್ತದೆ. ಅಷ್ಟರ ಮಟ್ಟಿಗೆ ನಾವು ಹೇಳುವಂತಹ ಮಾತನ್ನು ಅವರು ಕೇಳುವುದಕ್ಕೆ ಸಾಧ್ಯವಾಗುತ್ತದೆ. ಹಾಗಾಗಿ, adventure activities ಗಳಲ್ಲಿ ಅವರನ್ನು involve ಮಾಡಬೇಕು. ನಾಲ್ಕನೆಯದನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ನಾಲ್ಕನೆಯ, 'A- Advice from third party' ಎಂದು ಇದೆ. Advice from third party ಅಂದರೆ ಅದು ಯಾರದ್ದು ಇರಬಹುದು ಅಂದರೆ ಆ ಮಗುವಿಗೆ, ಆ ವಿದ್ಯಾರ್ಥಿಗೆ ಹತ್ತಿರದಲ್ಲಿ ಯಾರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದಾರೋ ಅವರ ಹತ್ತಿರ advice ಮಾಡಿಸಬೇಕು. ಬಹಳ ಮುಖ್ಯವಾಗಿ ಮಾನ್ಯ ಸಚಿವರಿಗೆ ನಾನು ಕೇಳುವುದಿಷ್ಟೆ. Psychological evaluation ತುಂಬಾ ಮುಖ್ಯವಾಗಿರುತ್ತದೆ. ಇದರಲ್ಲಿ ಬಹಳ ಮುಖ್ಯವಾಗಿ ಕೌನ್ಸಿಲಿಂಗ್ ಬೇಕಾಗುತ್ತದೆ. ಆ ಕೌನ್ಸಿಲಿಂಗ್ ಯಾವ ಯಾವುದು ಬೇಕಾಗುತ್ತದೆ ಎಂದರೆ ಈ ಮಕ್ಕಳಿಗೆ ನಮಗೆ ಈ ಖಿನ್ನತೆ ಜಾಸ್ತಿ ಇದೆ, aggression ಜಾಸ್ತಿ ಇರುತ್ತದೆ, drug addiction ಜಾಸ್ತಿ ಇರುತ್ತದೆ, exam tension ಜಾಸ್ತಿ ಇರುತ್ತದೆ, sleep deprivation ಜಾಸ್ತಿ ಇರುತ್ತದೆ, ಹಾಗಾಗಿ, psychological evaluation ಮತ್ತು counseling ಬಹಳ ಮುಖ್ಯವಾಗಿರುತ್ತದೆ. ಈ ರೀತಿಯಲ್ಲಿ ನಾವು ಹೇಗೆ ತಯಾರು ಮಾಡಿರುತ್ತೇವೆಯೋ ಪರೀಕ್ಷೆಯಿಂದ ಮತ್ತು ಹೆದರಿಕೆಯಿಂದ ನಾವು ಹೇಗೆ ಹಿಂದೆ ಹೋಗುವುದು, ಈ stress ಇಂದ ಹೇಗೆ ಹೊರಗಡೆ ಬರುವುದು ಹಾಗೂ 'Yoga Nidra' ಇಂದ ಹೇಗೆ ಪ್ರಾಕ್ಟೀಸ್ ಮಾಡುವುದು, ಈ ರೀತಿಯಲ್ಲಿ 'Yoga Nidra' ಎಂದು ಒಂದು ಪುಸ್ತಕವೇ ಇದೆ. ಅದನ್ನು ಹೇಗೆ ಪ್ರಾಕ್ಟಿಸ್ ಮಾಡುವುದು ಎನ್ನುವುದನ್ನು ಈಗಿನ ಮಕ್ಕಳಿಗೆ ಹೇಳಿಕೊಡಬೇಕಾಗಿದೆ. ಇದು ಬಹಳ ಅಗತ್ಯ ಇದೆ. ಜೊತೆಗೆ nutrition counseling ಸಹ ಬೇಕಾಗುತ್ತದೆ. ಒಬ್ಬ Paediatrician ಅಥವಾ Gynaecologist ಅಥವಾ Medicine doctor (Physician) ರವರ ಹತ್ತಿರ ಒಬ್ಬ nutritionist ರವರನ್ನು ಹಿಡಿದುಕೊಂಡು nutrition counseling ಕೂಡ ಇವತ್ತು ನಿಮ್ಮ ಮಕ್ಕಳಿಗೆ ಏನು ತಿನ್ನಬೇಕು, ಏನು ತಿನ್ನಬಾರದು, ಹೇಗೆ obesity ಯನ್ನು ಕಂಟ್ರೋಲ್ ಮಾಡಬೇಕು ಎನ್ನುವುದನ್ನು ಗಮನಿಸಬೇಕು.

ಮೂರನೆಯದಾಗಿ, gynaecologist ನಿಂದ adolescent girls ಗೆ ಕೌನ್ಸಿಲಿಂಗ್ ಬೇಕಾಗುತ್ತದೆ. ಹದಿಹರಿಯದ ಹೆಣ್ಣು ಮಕ್ಕಳಿಗೆ ಕೌನ್ಸಿಲಿಂಗ್ ಬೇಕಾಗುತ್ತದೆ. ಅವರ ದಿನನಿತ್ಯದ ಸಮಸ್ಯೆಗಳ ಬಗ್ಗೆ ಅವರಿಗೆ ಕೊನೆಯ ಪಕ್ಷ 6 ತಿಂಗಳಿಗೆ ಅಥವಾ ಒಂದು ವರ್ಷಕ್ಕೆ ಒಂದು ಸಲವಾದರೂ ಕೊನೆಯ ಪಕ್ಷ ಒಂದು ಗಂಟೆ ಸಮಯ ಅವರಿಗೆ ಕೌನ್ಸಿಲಿಂಗ್ ಮಾಡಬೇಕಾಗುತ್ತದೆ. ಆಗ ಅವರ ಎಷ್ಟೋ ಸಮಸ್ಯೆಗಳು ಬಗೆಹರಿಯುವುದಕ್ಕೆ ಸಾಧ್ಯವಾಗುತ್ತದೆ. ಇಷ್ಟನ್ನೂ ಸಹ ಶಾಲಾ-ಕಾಲೇಜುಗಳಲ್ಲಿ ಜಾರಿ ತರಬೇಕೆಂದು ಹೇಳಿ, ನಾನು ಎಲ್ಲಾ ಸಚಿವರಲ್ಲಿ ಮಾಡಬೇಕೆಂದು ವಿನಂತಿ ಮಾಡುತ್ತೇನೆ. Psychological counseling ನಲ್ಲಿ attention span ಜಾಸ್ತಿ ಇದ್ದು, ಮೊನ್ನೆ ಆರೋಗ್ಯ ಸಚಿವರ ಹತ್ತಿರ ಚರ್ಚೆ ಮಾಡಿದಾಗ Rashtriya Bal Swasthya Karyakram (RBSK) plus scheme ಅನ್ನು ಪರಿಚಯಿಸಬೇಕೆಂದು ಹೇಳಿದೆ. ಏತಕ್ಕೆಂದರೆ ಶಾಲಾ-ಕಾಲೇಜುಗಳಲ್ಲಿ RBSK scheme ನ analysis ಎನಿದೆ, ಅದರ ಜೊತೆಗೆ plus scheme ಎಂದು ಇದೆ. ಅದರೊಳಗೆ psychological counseling to children, paediatrician and gynaecologist counseling for the adolescent girls ಗೆ ಮಾಡಬೇಕೆಂದು ಹೇಳಿ ಅವರ ಜೊತೆ ಚರ್ಚೆ ಮಾಡಿದ್ದೇವೆ.

ಕೊನೆಯದಾಗಿ, ಮಾನ್ಯ ಸಭಾಪತಿಯವರು ಕೇಳಿದ ಹಾಗೆ ಟಿ.ವಿ. ಮತ್ತು ಮೊಬೈಲ್ ಅನ್ನು ನೋಡುವುದನ್ನು ಬಿಡಿಸಬೇಕೆಂದರೆ ಏನು ಮಾಡಬೇಕೆಂದು ತಾವು ಕೇಳಿದಿರಿ. ಬೆಳಗ್ಗೆ ಎದ್ದ ತಕ್ಷಣ ***"ಕರಾಗ್ರೇ***

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಸತೇ ಲಕ್ಷ್ಮೀ ಕರಮಧ್ಯೇ ಸರಸ್ವತಿ ಕರಮೂಲೇ ಸ್ಥಿತೇ ಗೌರಿ ಪ್ರಭಾತೇ ಕರ ದರ್ಶನಂ" ಎನ್ನುವುದರ ಬದಲು ನಮ್ಮ ಇವತ್ತಿನ analysis ಪ್ರಕಾರ ಕಣ್ಣು ಮುಚ್ಚಿ, ಕಣ್ಣು ತೆರೆಯುವುದರೊಳಗೆ ನಮ್ಮ ಕೈ ಎಲ್ಲಿ ಇರುತ್ತದೆ ಎಂದರೆ 87% ಮೊಬೈಲ್ ಅನ್ನು ಹುಡುಕುತ್ತಿರುತ್ತದೆ. ಅಧ್ಯಯನದವರು ಏನು ಹೇಳುತ್ತಾರೆಂದರೆ ಈಗ ಮಾತ್ರವಲ್ಲ, ಸುಮಾರು 10 ವರ್ಷಗಳ ಹಿಂದೆಯೇ ಅಮೇರಿಕಾದಲ್ಲಿ ಅಧ್ಯಯನ ಮಾಡಿದ್ದು, ಅದು ಏನು ಹೇಳುತ್ತದೆ ಎಂದರೆ ಒಬ್ಬ ಅವರೇಜ್ ವ್ಯಕ್ತಿ ಮೊಬೈಲ್ ಅನ್ನು 35 ರಿಂದ 40 ಬಾರಿ ಓಪನ್ ಮಾಡುತ್ತಾನೆಂದು ಹೇಳುತ್ತಾರೆ. ಆದರೆ, ಮಧ್ಯಮದಲ್ಲಿ ಉಪಯೋಗಿಸುವಂತಹ ಒಬ್ಬ ವ್ಯಕ್ತಿ ತನ್ನ ಸ್ಮಾರ್ಟ್ ಮೊಬೈಲ್ ಅನ್ನು 135 ರಿಂದ 150 ಸಲ ಓಪನ್ ಮಾಡಿ ನೋಡುತ್ತಾನೆ. ಅಂದರೆ, ಅದಕ್ಕೆ ಅಷ್ಟು addiction ಇವತ್ತು ಇದೆ. ಇನ್ನು western countries ನಲ್ಲಿ ಅಂದು ಮಾಡಿದ ಅಧ್ಯಯನದಂತೆ, 30% of their sexual lives are sacrificed only because of mobile phones, ಎಂದು ಅಧ್ಯಯನ ಹೇಳುತ್ತದೆ. ಅಂದರೆ ಇಷ್ಟರ ಮಟ್ಟಿಗೆ addiction ಇರುವಂತಹ ಈ ಮೊಬೈಲ್ ನಿಂದ ದೂರ ಬರಬೇಕೆಂದರೆ ನಾವು ಹೇಳಿದ್ದನ್ನು ಮಕ್ಕಳ ಮಾಡುವುದಿಲ್ಲ. ನಾವು ಮಾಡಿದ ಹಾಗೆ ಮಾಡಿದರೆ ಮಾತ್ರ ಮಕ್ಕಳು ಮಾಡುತ್ತಾರೆ. ಏಕೆಂದರೆ, ನನಗೆ ಒಂದು ಗಂಟೆ ಫ್ರೀ ಇದ್ದರೆ ನಾನು ಟಿ.ವಿ. ಮೊಬೈಲ್ ನೋಡುತ್ತೇನೆ. ನನ್ನ ಹೆಂಡತಿಗೆ 2 ಗಂಟೆ ಫ್ರೀ ಇದ್ದರೆ ಅವಳು ಟಿ.ವಿ. ಮೊಬೈಲ್ ನೋಡುತ್ತಾಳೆ, ಹಾಗಾಗಿ ನಮ್ಮ ಮಕ್ಕಳು ಎಷ್ಟು ಗಂಟೆ ಫ್ರೀ ಇರುತ್ತಾರೋ ಆ ಸಮಯದಲ್ಲಿ ಅವರು ಟಿ.ವಿ. ಮೊಬೈಲ್ ನೋಡುತ್ತಾರೆ. ಹಾಗಾಗಿ, ಮೊದಲು ಬದಲಾವಣೆಯಾಗ ಬೇಕಾಗಿರುವುದು ನಾನು ಬದಲಾವಣೆಯಾಗಬೇಕು, ಆ ರೀತಿ ಆದಾಗ ಮಾತ್ರ ಟಿ.ವಿ. ಮೊಬೈಲ್ ನಿಂದ ಹೊರಗಡೆ ಬರಲಿಕ್ಕೆ ಸಾಧ್ಯವಾಗುತ್ತದೆ. ಬಹಳ ಮುಖ್ಯವಾಗಿ ಇದರಿಂದ ಹೊರಗಡೆ ಬರಬೇಕೆಂದರೆ ಕೋವಿಡ್ ಸಮಯದಲ್ಲಿ ನನ್ನ ಹದಿಹರಿಯದ ಮಗಳು ಗೌರಿ ಎಂದು ಏನಿದ್ದಾಳೆ ಅವಳಿಗೆ ಇದರಿಂದ ಏನಪ್ಪಾ ಮಾಡುವುದು ಎಂದರೆ ಎಲ್ಲರೂ ಮೊಬೈಲ್, ಟಿ.ವಿ.ಗೆ addiction ಹೋದಾಗ ನಾನು ಅವಳಿಗೆ ಹೇಳುತ್ತಿದ್ದೆ. ನೀನು ಒಂದು novel ತೆಗೆದುಕೊಂಡು 50 ಪುಟಗಳಷ್ಟು ಓದಿದರೆ ನಿನಗೆ ಇಷ್ಟು ಪಾಯಿಂಟ್ಸ್ ಕೊಡುತ್ತೇನೆಂದು ಹೇಳಿದೆ. ಇಷ್ಟು ಪಾಯಿಂಟ್ಸ್‌ಗೆ ಇಷ್ಟು ಹಣ ಕೊಡುತ್ತೇನೆಂದು ಹೇಳಿದೆ. ಅದನ್ನು ಅವಳು ಸಂಪಾದನೆ ಮಾಡಬೇಕು. ಆಗ ಏನು ಮಾಡಿದೆ ಎಂದರೆ, ಅದನ್ನು ನೋಡುತ್ತಿದ್ದರೆ ಈಗ ಹೇಗೆ ಎಂದರೆ ಮುಂಚೆ ಅದನ್ನು ಪ್ರಾರಂಭ ಮಾಡಿ addiction ಹೇಗೆ ಆಗಿದೆ ಎಂದರೆ 300, 400, 500 ಪುಟಗಳ novel ಅನ್ನು ಎರಡು- ಮೂರು ದಿನದಲ್ಲಿ ಓದಿ ಮುಗಿಸುತ್ತಾರೆ. ಅಂದರೆ, ಅಷ್ಟು addiction ಆಗಿದೆ. ಈ ರೀತಿಯ ಒಂದು concept ಅನ್ನು ಮಕ್ಕಳಿಗೆ ಅಳವಡಿಸಿಕೊಂಡು ಮಾಡಬೇಕು. ಮತ್ತೆ ಅದನ್ನು ಸಂಪಾದಿಸಿರುವಂತಹ ದುಡ್ಡನ್ನಾಗಲಿ, ಪಾಯಿಂಟ್ಸ್ ಅನ್ನು ಯಾವುದೇ ಕಾರಣಕ್ಕೂ ಕಳೆಯುವುದಿಲ್ಲ. ಏಕೆಂದರೆ, ಅದನ್ನು deposit ಮಾಡಿಕೊಂಡು ಇಟ್ಟುಕೊಂಡಿರುತ್ತಾರೆ. ಏಕೆಂದರೆ, ಕಷ್ಟಪಟ್ಟು ಅದನ್ನು ದುಡಿದಿರುತ್ತಾರೆ. ಹಾಗಾಗಿ, ಆ ರೀತಿಯಲ್ಲಿ ಒಂದು ಕೆಲಸವನ್ನು ಮಾಡಬೇಕು. ಆ ಸಮಯದಲ್ಲಿ ನಾನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಡುಗೆ ಮಾಡಲಿಕ್ಕೂ ಪಾಯಿಂಟ್ಸ್ ಇಟ್ಟಿದ್ದೆ. ನೀನು ಏನಾದರೂ ಮಾಡಿ ಅಡುಗೆ ಮಾಡಿದರೆ ನಿನ್ನ ಅಡುಗೆಗೆ ಇಷ್ಟು ಪಾಯಿಂಟ್ಸ್‌ಗಳು ಎಂದು ಇಟ್ಟಿದ್ದೆ. ಇದರಿಂದಾಗಿಯೇ, ನನ್ನ ಮಗಳು ಸೊಗಸಾಗಿ ಅಡುಗೆ ಮಾಡುವಂತಹದ್ದನ್ನು ಕಲಿತಿರುವುದು. ಹಾಗಾಗಿ, points ಅನ್ನು reward ಮಾಡಿದಾಗ automatically ಈ ಮೊಬೈಲ್ ಮತ್ತು ಟಿ.ವಿ.ಯಿಂದ ದೂರ ಇರುತ್ತಾರೆ. ಮತ್ತೆ ಆ ಮಕ್ಕಳುಗಳಿಗೆ extracurricular activities ಆದ ಡ್ಯಾನ್ಸ್‌ಗೆ ಹಾಕಿದರೆ ಸುಸ್ತು ಆಗಿರುತ್ತದೆ. ಊಟ ಚೆನ್ನಾಗಿ ಮಾಡುತ್ತಾರೆ. ನಿದ್ದೆ ಚೆನ್ನಾಗಿ ಬರುತ್ತದೆ. ಹೋಂ ವರ್ಕ್ ಅಂತು ಮಾಡಿಯೇ ಮಾಡಬೇಕು, automatically ಅವರು ನಿದ್ದೆ ಮಾಡುತ್ತಾರೆ. ಈ ನಿಟ್ಟಿನಲ್ಲಿ ಟಿ.ವಿ. ಮತ್ತು ಮೊಬೈಲ್ ನಿಂದ ದೂರ ಇರಲಿಕ್ಕೆ ಇಷ್ಟು ಕೆಲಸಗಳನ್ನು ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ಸಭಾಪತಿಯವರೆ, ನಾನು ಮತ್ತೆ ಹೇಳುವುದೇನೆಂದರೆ ಮಕ್ಕಳಲ್ಲಿ ಬಹಳ ಮುಖ್ಯವಾಗಿ left brain ಗೆ SQ3R (Survey, Question, Read, Recite and Review) study method ನಲ್ಲಿ ಮೆಮೋರಿ ಪವರ್ ಅನ್ನು ಇಂಪ್ರೂವ್ ಮಾಡುವಂತಹ ಟೆಕ್ನಿಸ್ ಅನ್ನು ಶಾಲೆಯಲ್ಲಿ ಹೇಳಿಕೊಡಬೇಕು. ಏಕೆಂದರೆ, ಆಗ ನನಗೆ ಗೊತ್ತಿರಲಿಲ್ಲ. ಈಗ ಗೊತ್ತಾಗುತ್ತಿದೆ. ಮುಂಚೆ ಗೊತ್ತಾಗಿದ್ದರೆ ಇನ್ನು ಹೆಚ್ಚು ಅಂಕಗಳು ಸಿಗುತ್ತಿತ್ತೋ ಏನೋ ಎಂದು ಆಲೋಚನೆ ಮಾಡುತ್ತೇನೆ. ಇದು ಒಂದು ವಿಚಾರ. ಎರಡನೆಯದಾಗಿ ರೈಟ್ ಬ್ರೈನ್‌ಗೆ ಇಂಪ್ರೂಮೆಂಟ್ ಮಾಡಬೇಕೆಂದರೆ ನಮಗೆ extracurricular activities ಅನ್ನು ಮಕ್ಕಳಿಗೆ 45 ನಿಮಿಷಗಳು ಕಡ್ಡಾಯವಾಗಿ ಮಾಡಬೇಕು. ಈಗ ಮಾಡಿ ಎಂದರೆ ಯಾರು ಮಾಡುವುದಿಲ್ಲ. ಇದನ್ನು ಕಡ್ಡಾಯವಾಗಿ ಮಾಡಬೇಕು. ಮೂರನೆಯದಾಗಿ, ತಾಳಿದವನು ಬಾಳಿಯಾನು, ಆ ನಿಟ್ಟಿನಲ್ಲಿ ಮಕ್ಕಳಿಗೆ ಯೋಗವನ್ನು ಅಭ್ಯಾಸ ಮಾಡುವುದನ್ನು ಕಾಲೇಜುಗಳಲ್ಲಿ ಕಡ್ಡಾಯ ಮಾಡಿದರೆ ಕೊನೆಯ ಪಕ್ಷ, 25-30 ನಿಮಿಷಗಳನ್ನು ಕಡ್ಡಾಯ ಮಾಡಿದರೆ ಆಗ automatically ತಾಳ್ಮೆ ಚೆನ್ನಾಗಿ ಬರುತ್ತದೆ.

ನಾಲ್ಕನೆಯಯದಾಗಿ ಪ್ರಾರ್ಥನೆ ಮಾಡುವುದು. The Children irrespective of their caste and community ಭಗವಂತನಲ್ಲಿ ಪ್ರಾರ್ಥಿಸುವುದು ಬಹಳ ಮುಖ್ಯವಾಗಿರುತ್ತದೆ. ಅದನ್ನು ಅವರು ಅಭ್ಯಾಸ ಮಾಡಬೇಕು.

ಐದನೆಯದಾಗಿ, Psychological Counseling, Paediatrician and Gynaecologist Counseling, ಇದನ್ನು ಕಡ್ಡಾಯವಾಗಿ ಶಾಲಾ ಕಾಲೇಜುಗಳಲ್ಲಿ ಅಳವಡಿಸಿಕೊಳ್ಳಬೇಕು. ಪ್ರತಿಯೊಂದು ದಿವಸ ಒಂದು ಒಳ್ಳೆಯ ಆಕ್ಟೀವಿಟಿಯನ್ನು ಮಾಡುವಂತಹ ಕೆಲಸವನ್ನು ಅವರಿಗೆ ಪ್ರೇರಪಣೆ ಮಾಡಬೇಕು. ಅದನ್ನು ಡಾಕ್ಯೂಮೆಂಟ್ ಮಾಡುವ ಹಾಗೆ ಅದನ್ನು ಶಾಲಾ ಕಾಲೇಜುಗಳಲ್ಲಿ ಮಾಡಿದರೆ ಸಣ್ಣ ವಯಸ್ಸಿನಲ್ಲಿ ಒಳ್ಳೆಯ ಕೆಲಸವನ್ನು ಮಾಡಬೇಕೆನ್ನುವ ಒಂದು ಮನೋಭಾವನೆ ಬರುತ್ತದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(206) 11.03.2025 04.00 ಎಸ್‌ವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

ಡಾ: ಧನಂಜಯ ಸರ್ಜಿ (ಮುಂದು):-

ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗಲ್ಲ, ಪರಮಾತ್ಮನಿಗೆ. ಕೊಟ್ಟಿದ್ದು ಕೊಟ್ಟಿದ್ದೆನಬೇಡ. ಪ್ರತಿ ರಕ್ತದ ಗುಂಪು ಹೇಳುತ್ತದೆ. A, B, AB and O ರಕ್ತ ಗುಂಪುಗಳಿವೆ. O positive blood group ನವರು ಹೆಚ್ಚು ರಕ್ತವನ್ನು ಕೊಡಬಹುದು. AB blood group ಎಂದರೆ ಯಾರಿಂದ ಬೇಕಾದರೂ ರಕ್ತವನ್ನು ತೆಗೆದುಕೊಳ್ಳಬಹುದು. ಭಗವಂತನ ಸೃಷ್ಟಿಯೇ ಹೇಳುತ್ತದೆ. O positive blood group ನವರನ್ನು ಹೆಚ್ಚು ಸೃಷ್ಟಿಸಿದ್ದಾನೆ. ಏಕೆಂದರೆ ಕೊಡುವಂತವನಾಗು, ಕೊಡುವಂತವನಾಗು ಎಂದು ಹೇಳುತ್ತದೆ. ಎಬಿ ರಕ್ತ ಗುಂಪಿದ್ದವರು ದಯವಿಟ್ಟು ಬೇಜಾರಾಗಬೇಡಿ. AB blood group ಇದ್ದವರು ಕೊಡು ಕೊಡು ಎಂದು ತೆಗೆದುಕೊಳ್ಳುತ್ತಾರೆ. ಹಾಗಾಗಿ ಭಗವಂತ ತೆಗೆದುಕೊಳ್ಳುವವರನ್ನು ಶೇ.೩ ರಷ್ಟೇ ಹುಟ್ಟಿಸಿರುವುದು. ಕೊಡುವವರನ್ನು 40% ಹುಟ್ಟಿಸಿದ್ದಾರೆ. ರಕ್ತದ ಗುಂಪು ಕೊಡುವಂತವನಾಗು ಎಂದು ಹೇಳುತ್ತದೆ. ಪ್ರತಿ ಉಸಿರು ಹೇಳುತ್ತದೆ. ಸಮಾಜದಿಂದ ತೆಗೆದುಕೊಂಡ ಮೇಲೆ ಸಮಾಜಕ್ಕೆ ಕೊಡು ಎಂದು ಹೇಳುತ್ತದೆ. ಆ ನಿಟ್ಟಿನಲ್ಲಿ ಮಕ್ಕಳಿಗೆ ಕೊಡುವ ಮನೋಭಾವನೆಯನ್ನು, ಒಳ್ಳೆಯ ಸೇವಾ ಮನೋಭಾವನೆಯನ್ನು ಕೊಡುವುದರಿಂದ ಅವರ ದೇಹದಲ್ಲಿ serotonin level surge ಆಗುತ್ತದೆ. Automatically brain ನಲ್ಲಿ ಒಳ್ಳೆಯ ಮನೋಭಾವಗಳು ಬರುತ್ತವೆ. ಹಾಗಾಗಿ ಶಾಲಾ ಕಾಲೇಜುಗಳಲ್ಲಿ ಪ್ರತಿದಿನ ಒಂದು ಒಳ್ಳೆಯ activity ಯನ್ನು ಮಾಡಬೇಕೆಂದು ಹೇಳಬೇಕು, document ಮಾಡಬೇಕು.

ಒಮ್ಮೆ ಆಲ್ಬರ್ಟ್ ಐನ್‌ಸ್ಟೀನ್ ಅವರನ್ನು ಮಕ್ಕಳನ್ನು ಹೆಚ್ಚು famous ಮಾಡಬೇಕೆಂದರೆ ಏನು ಮಾಡಬೇಕು ಎಂದು ಕೇಳಿದಾಗ ಅವರು "ದಿನ ಒಂದು ನೀತಿ ಕಥೆಯನ್ನು ಹೇಳಬೇಕು" ಎಂದು ಹೇಳುತ್ತಾರೆ. ಅದು ಸಾಲುವುದಿಲ್ಲ, ಮಗುವನ್ನು ಇನ್ನೂ ಹೆಚ್ಚು famous ಮಾಡಬೇಕೆಂದು ಕೇಳಿದಾಗ "ಇನ್ನೂ ಜಾಸ್ತಿ ನೀತಿಕಥೆಯನ್ನು ಹೇಳಿ" ಎಂದು ಹೇಳುತ್ತಾರೆ. ನಾವು ಯಾವಾಗ ನೀತಿಕಥೆಗಳನ್ನು ಜಾಸ್ತಿ ಹೇಳುತ್ತೇವೆಯೋ ಆ ನಿಟ್ಟಿನಲ್ಲಿ ಮಕ್ಕಳಲ್ಲಿ ಭಾವನೆಗಳು ಪರಿವರ್ತನೆಯಾಗಿ ಸ್ವಾಭಾವಿಕ ಗುಣಗಳು ಬರುತ್ತವೆ.

ಒಂದು ಕಾಲ್ಪನಿಕ ಕಥೆಯನ್ನು ಹೇಳುವುದಕ್ಕೆ ಮಾನ್ಯ ಸಭಾಪತಿಯವರಿಂದ ಅನುಮತಿ ತೆಗೆದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ. ಒಮ್ಮೆ ಶಿವಾಜಿ ಎಲ್ಲವನ್ನೂ ಗೆದ್ದು ಬಂದ ನಂತರ ಅವರ ತಾಯಿಯವರ ಬಳ ಹೇಳುತ್ತಾನೆ. "ಎಲ್ಲಾ ಯುದ್ಧಗಳನ್ನು ಮಾಡಿ ಗೆಲ್ಲುವಂತಹ ಶಕ್ತಿಯನ್ನು ಭಗವಂತ ನನಗೆ ಕೊಟ್ಟಿದ್ದಾನೆ. ಆದರೆ ಧ್ವಜವನ್ನು ಹಾಕಬೇಕಾದರೆ ನನ್ನ ಕೈ ನಡುಗುತ್ತದೆ, ಏಕೆ" ಎಂದು ಕೇಳುತ್ತಾನೆ. ಜೀಜಾಬಾಯಿ "ಅದಕ್ಕೆ ನಾನೇ ಕಾರಣ" ಎಂದು ಹೇಳುತ್ತಾಳೆ. "ಅದು ಹೇಗಮ್ಮಾ ನೀನೇ ಕಾರಣ" ಎಂದು ಶಿವಾಜಿ ಕೇಳಿದಾಗ "ನೀನು ಸಣ್ಣ ಮಗುವಾಗಿದ್ದಾಗ ನಿನಗೆ ಹಾಲು ಕುಡಿಸುವಾಗ ವೀರಶೂರರ ಕಥೆಗಳನ್ನು ಹೇಳುತ್ತಿದ್ದೆನು. ಆ ಕಥೆಗಳನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳುತ್ತಿದ್ದುದರಿಂದ ನಿನ್ನ ಮನಸ್ಸಿನಲ್ಲಿ ಆ ವೀರಶೂರರ ಭಾವನೆ automatically ಬಂದಿದೆ. ಹಾಗಾಗಿ ಎಂತಹ ಯುದ್ಧವನ್ನಾದರೂ ಗೆಲ್ಲುವ ಶಕ್ತಿ ನಿನಗೆ ಇದೆ" ಎಂದು ಹೇಳುತ್ತಾಳೆ. "ಹಾಗಾದರೆ ಧ್ವಜವನ್ನು ಹಾಕಬೇಕಾದರೆ ಏಕೆ ನನ್ನ ಕೈ ನಡುಗುತ್ತದೆ" ಎಂದು ಹೇಳಿದಾಗ ತಾಯಿ ಜೀಜಾಬಾಯಿ "ಅದಕ್ಕೂ ನಾನೇ ಕಾರಣ" ಎಂದು ಹೇಳುತ್ತಾಳೆ. "ಏಕೆ ಕಾರಣ ಎಂದರೆ, ನಾನು ಸಾಮ್ರಾಜ್ಯವನ್ನು ನೋಡಲು ಹೊರಗೆ ಹೋದಾಗ ನಿನಗೆ ಹೊಟ್ಟೆ ಹಸಿದು ನೀನು ಅಳುತ್ತಿದ್ದೆ. ಆಗ ನಮ್ಮ ಸೇವಕಿ ಬಂದು ಹಾಲನ್ನು ಕುಡಿಸುತ್ತಿದ್ದಳು. ಅವಳು ಕುಡಿಸಬೇಕಾದರೆ ಯಾರು ಬಂದು ನೋಡಿ ಬಯ್ಯುತ್ತಾರೋ ಎಂದು ಹೆದರಿಕೊಂಡು ಕುಡಿಸುತ್ತಿದ್ದಳು. ಆ ನಿಟ್ಟಿನಲ್ಲಿ ನಿನಗೆ ಆಗ ಹೆದರಿಕೆ ಬಂದಿದೆ" ಎಂದು ಹೇಳುತ್ತಾಳೆ. ಅದಕ್ಕೆ ಶಿವಾಜಿ ಹೇಳುತ್ತಾನೆ. "ಅಮ್ಮಾ ನಿಮ್ಮ ಹಾಲು ಎದೆಹಾಲು, ಸೇವಕಿಯ ಹಾಲು ಎದೆಹಾಲು" ಎಂದು ಹೇಳಿದಾಗ ತಾಯಿ ಜೀಜಾಬಾಯಿ "ಎರಡೂ ಹಾಲೇ, ಆದರೆ ಭಾವನೆಗಳು ಬಹಳ ಮುಖ್ಯವಾಗುತ್ತದೆ. ನಿನಗೆ ಹಾಲು ಕುಡಿಸುವಾಗ ನಾನು ವೀರ ಶೂರರ ಕಥೆಗಳನ್ನು ಹೇಳುತ್ತಿದ್ದೆನು. ಹಾಗಾಗಿ ನಿನಗೆ ಧೈರ್ಯವಿದೆ. ಸೇವಕಿ ಹಾಲು ಕುಡಿಸುವಾಗ ಹೆದರಿಕೊಂಡು ಕುಡಿಸುತ್ತಿದ್ದಳು, ಹಾಗಾಗಿ ಸ್ವಲ್ಪಮಟ್ಟಿಗೆ ನಿನ್ನಲ್ಲಿ ಆ ಭಯ ಇದೆ" ಎಂದು ಹೇಳುತ್ತಾಳೆ.

ಇದು ಕಾಲ್ಪನಿಕ ಕಥೆಯಾಗಿದ್ದರೂ ಕೂಡ ಅದರಲ್ಲಿ ನೀತಿ ಇದೆ. ಮಕ್ಕಳನ್ನು ಎತ್ತರಕ್ಕೆ ಬೆಳೆಸಬೇಕು, ಒಳ್ಳೆಯ ಗುಣಗಳನ್ನು ತುಂಬಬೇಕು ಎಂದರೆ ಕಡ್ಡಾಯವಾಗಿ ಶಾಲಾ ಕಾಲೇಜುಗಳಲ್ಲಿ ದಿನಕ್ಕೊಂದು ಕಥೆ ಹೇಳುವ ಅಭ್ಯಾಸವನ್ನು ಮಾನ್ಯ ಸಚಿವರಾದ ಶ್ರೀ ಮಧು ಬಂಗಾರಪ್ಪನವರು introduce ಮಾಡಿದರೆ ಬಹಳಷ್ಟು ಮಕ್ಕಳಿಗೆ ಒಂದು ಒಳ್ಳೆಯ ಮೌಲ್ಯಗಳನ್ನು ಕೊಟ್ಟಂತಾಗುತ್ತದೆ. ಟಿ.ವಿ./ಮೊಬೈಲ್‌ನಿಂದ ದೂರ ಇಡಬೇಕು. ನಾವು ಸರಿಯಾದರೆ ಮಕ್ಕಳು ಸರಿಹೋಗಲು ಸಾಧ್ಯ ಎನ್ನುವಂಥ ಮಾತನ್ನು ಹೇಳುತ್ತಾ, ಅವಕಾಶಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

ಸಭಾಪತಿಯವರು:– ಮಾನ್ಯ ಸಭಾನಾಯಕರೆ, ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಸರ್ಕಾರದಿಂದ ಯಾವಾಗ ಉತ್ತರ ನೀಡುತ್ತಾರೆ?

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):– ಮಾನ್ಯ ಸಭಾಪತಿಯವರೆ, ನಾಳೆ ಕೆಳಮನೆಯಲ್ಲಿ ಉತ್ತರ ನೀಡುತ್ತಾರೆ. ನಾಳಿದ್ದು ಇಲ್ಲಿ ಉತ್ತರ ಕೊಡುತ್ತಾರೆ.

ಸಭಾಪತಿಯವರು:– ಆಯಿತು. ಮಾನ್ಯ ಯತೀಂದ್ರ ಅವರೆ, ನೀವು ಮಾತನಾಡಿ.

ಡಾ: ಯತೀಂದ್ರ ಎಸ್ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ಧನ್ಯವಾದಗಳು. ಹದಿಹರೆಯದ ಮಕ್ಕಳ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಬಹಳ ಸಂತೋಷವಾದಂಥ ವಿಚಾರ. ಈ ಒಂದು ವಿಚಾರವನ್ನು ಸದನದಲ್ಲಿ ಚರ್ಚೆ ಮಾಡಬೇಕೆಂದು ಒಂದು ಉತ್ತಮ initiative ತೆಗೆದುಕೊಂಡಂಥ ಮಾನ್ಯ ಸಭಾಪತಿಯವರಿಗೆ ಮತ್ತು ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲೇಬೇಕೆಂದು ಕಳೆದ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧಿವೇಶನದಲ್ಲಿಯೂ ಪ್ರಯತ್ನ ಪಟ್ಟಂಥ ನಮ್ಮ ಶಾಸಕ ಮಿತ್ರರಾದಂಥ ಮಾನ್ಯ ಐವನ್ ಡಿಸೋಜಾ ಅವರಿಗೆ ಧನ್ಯವಾದಗಳನ್ನು ಹೇಳಲು ನಾನು ಇಷ್ಟ ಪಡುತ್ತೇನೆ.

ಹದಿಹರೆಯದ ಮಕ್ಕಳ ಸಮಸ್ಯೆಗಳು ಎಂದರೆ ಇದು ಬಹಳ ವಿಸ್ತೃತವಾದಂಥ ವಿಚಾರವಾಗಿದೆ. ಗಂಟೆಗಟ್ಟಲೆ ಅದರ ಬಗ್ಗೆ ಚರ್ಚೆ ಮಾಡಬೇಕು. ಎಲ್ಲಾ ವಿಷಯಗಳನ್ನು ಕೆಲವೇ ನಿಮಿಷಗಳಲ್ಲಿ cover ಮಾಡುವುದಕ್ಕಾಗುವುದಿಲ್ಲ. ಹಾಗಾಗಿ ಕೆಲವು ವಿಚಾರಗಳನ್ನು ಮಾತ್ರ ನಾನು ಈ ಸದನದಲ್ಲಿ ಮಾತನಾಡಲಿಚ್ಛಿಸುತ್ತೇನೆ.

"ಹದಿಹರೆಯ" ಎನ್ನುವುದು ಮಕ್ಕಳು ಬಾಲ್ಯಾವಸ್ಥೆಯಿಂದ ಯೌವನಾವಸ್ಥೆಗೆ ಬದಲಾಗುವ ಕಾಲಘಟ್ಟ. ಅದನ್ನು ನಾವು ಇಂಗ್ಲಿಷ್‌ನಲ್ಲಿ teenage period or adolescent period ಎಂದು ಕರೆಯುತ್ತೇವೆ. 11ನೇ ವಯಸ್ಸಿನಿಂದ 18ನೇ ವಯಸ್ಸಿನ ತನಕ ಹದಿಹರೆಯ ಎಂದು ಕರೆಯುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ದೇಶದ ಜನಸಂಖ್ಯೆಯಲ್ಲಿ ಸುಮಾರು 34%ರಷ್ಟು 18 ವರ್ಷಕ್ಕಿಂತಲೂ ಕೆಳಗಿನ ಮಕ್ಕಳಿದ್ದಾರೆ. ಹಾಗಾಗಿ ನಮ್ಮ ದೇಶದ ಒಟ್ಟು 1/3ನೇ ಭಾಗದ ಜನಸಂಖ್ಯೆ ಮಕ್ಕಳಿದ್ದಾರೆ. ಹಾಗಾಗಿ ಇವರ ಬಗ್ಗೆ ನಾವು ಹೆಚ್ಚು ಕಾಳಜಿ ವಹಿಸಬೇಕಾಗುತ್ತದೆ. ಅಷ್ಟೇ ಅಲ್ಲ, ಹದಿಹರೆಯದ ಮಕ್ಕಳು ಪ್ರೌಢಶಾಲಾ ಶಿಕ್ಷಣ ಪಡೆಯುತ್ತಿರುತ್ತಾರೆ. ಕೆಲವೇ ವರ್ಷಗಳಲ್ಲಿ ಪ್ರೌಢಶಾಲಾ ಶಿಕ್ಷಣ ಮುಗಿಸಿ ಅವರು ವೃತ್ತಿ ಶಿಕ್ಷಣ ಕೋರ್ಸ್ ಅಥವಾ ಪದವಿ ಶಿಕ್ಷಣ ಅಥವಾ ಉದ್ಯಮ ಕ್ಷೇತ್ರಕ್ಕೆ ನೇರವಾಗಿ ಕಾಲಿಡುವಂಥವರು. ಹಾಗಾಗಿ ಇವರು ತತ್‌ಕ್ಷಣ ದೇಶವನ್ನು ಕಾಪಾಡುವಂಥವರು, ದೇಶವನ್ನು ಕಟ್ಟಬೇಕಾದಂಥವರು. ನಾವು ಒಬ್ಬ ವಿದ್ಯಾವಂತ, ಜ್ಞಾನವಂತ, ಪ್ರಜ್ಞಾವಂತ ಮಕ್ಕಳನ್ನು ತಯಾರು ಮಾಡಿದರೆ ನಮ್ಮ ದೇಶದ ಭವಿಷ್ಯ ಸುಭದ್ರವಾಗಿರುತ್ತದೆ, ಸುರಕ್ಷಿತವಾಗಿರಲು ಸಾಧ್ಯವಾಗುತ್ತದೆ. ಆದ್ದರಿಂದ ಹದಿಹರೆಯದ ಮಕ್ಕಳ ಸಮಸ್ಯೆಗಳ ಬಗ್ಗೆ ನಾವು ಮತ್ತು ನಮ್ಮ ಸರ್ಕಾರ ಹೆಚ್ಚಿನ ಕಾಳಜಿ ಮತ್ತು ಮುತುವರ್ಜಿಯನ್ನು ವಹಿಸಬೇಕಾದಂಥ ಅವಶ್ಯಕತೆ ಇದೆ.

ಹದಿಹರೆಯದ ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆಯ ವಿಚಾರ ಬಂದಾಗ ಯಾವಾಗ ಆರೋಗ್ಯವಾಗಿರುತ್ತಾರೆಂದರೆ ಅವರ ಬಾಲ್ಯಾವಸ್ಥೆಯಲ್ಲಿ ಉತ್ತಮವಾದ ಪೌಷ್ಟಿಕತೆ ಮತ್ತು ಆರೋಗ್ಯವನ್ನು ಕಾಪಾಡಿಕೊಂಡರೆ ಅವರ ಹದಿಹರೆಯದಲ್ಲಿಯೂ ಆರೋಗ್ಯಕರವಾಗಿರುವುದಕ್ಕೆ ಸಾಧ್ಯವಾಗುತ್ತದೆ. ಅದರಲ್ಲಿಯೂ ಪೌಷ್ಟಿಕತೆ ಎನ್ನುವುದು ತಾಯಿಯ ಗರ್ಭಾವಸ್ಥೆಯಲ್ಲಿರುವಾಗಲೇ ಅದು ಪ್ರಾರಂಭವಾಗುತ್ತದೆ. ಗರ್ಭಿಣಿ ಸ್ತ್ರೀಯರು ಒಳ್ಳೆಯ ಪೌಷ್ಟಿಕಾಂಶವುಳ್ಳ ಆಹಾರ ಸೇವಿಸಿ ಉತ್ತಮವಾದ ಆರೋಗ್ಯವನ್ನಿಟ್ಟುಕೊಂಡಿದ್ದರೆ ಅವರಿಗೆ ಹುಟ್ಟುವಂತಹ ಮಕ್ಕಳು ಕೂಡ ಆರೋಗ್ಯವಾಗಿರುತ್ತಾರೆ. ನಂತರ ಹದಿಹರೆಯದ ವಯಸ್ಸಿನಲ್ಲಿಯೂ ಸಹ ಅವರು ಆರೋಗ್ಯವಾಗಿರುವುದಕ್ಕೆ ಸಾಧ್ಯವಾಗುತ್ತದೆ. ಅದರಲ್ಲಿಯೂ ನಮ್ಮ ಮೆದುಳಿನ ಬೆಳವಣಿಗೆ 2 ವರ್ಷಗಳಲ್ಲಿ ಸಂಪೂರ್ಣವಾಗಿ ಮುಗಿದು ಹೋಗುತ್ತದೆ. Significant portion of the brain development

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

happens within first two years of the life. ಹದಿಹರೆಯದ ಮಕ್ಕಳ ಬೌದ್ಧಿಕ ಗುಣಮಟ್ಟ ಚೆನ್ನಾಗಿರಬೇಕೆಂದರೆ ಮಕ್ಕಳಿಗೆ ಪೌಷ್ಟಿಕತೆಯನ್ನು ಕಾಪಾಡುವ ಅನಿವಾರ್ಯತೆ ಇದೆ. ಗರ್ಭಿಣಿ ಸ್ತ್ರೀಯರು ಪೌಷ್ಟಿಕತೆಯನ್ನು ಕಾಪಾಡಿಕೊಳ್ಳಬೇಕು. ನಮ್ಮ ಸರ್ಕಾರ ಕೂಡ ಗರ್ಭಿಣಿ ಸ್ತ್ರೀಯರಿಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಮಾತೃಪೂರ್ಣ ಯೋಜನೆ ಇರಬಹುದು, ಮಾತೃವಂದನಾ ಯೋಜನೆ ಇರಬಹುದು; ಇವೆಲ್ಲಾ ಗರ್ಭಿಣಿ ಸ್ತ್ರೀಯರ ಮೇಲೆ ಕೇಂದ್ರಿತವಾಗಿರುವ ಕಾರ್ಯಕ್ರಮಗಳಾಗಿವೆ. ಇವತ್ತು ನಾವು ಮಾತೃಪೂರ್ಣ ಯೋಜನೆ ಕಾರ್ಯಕ್ರಮದಲ್ಲಿ ಮಧ್ಯಾಹ್ನದ ಬಿಸಿಯೂಟ ಕೊಡುತ್ತಿದ್ದೇವೆ. ಅದರಲ್ಲಿ ೬೦೦೦ ಕ್ಯಾಲೊರಿ ಇರಬೇಕು, 18 ರಿಂದ 20 ಗ್ರಾಂ ಪ್ರೋಟೀನ್ ಇರಬೇಕು, ಮೊಟ್ಟೆ, ಬೇಳೆ, ಕಾಳು, ಸೊಪ್ಪು ಇವೆಲ್ಲವನ್ನೂ ಒಳಗೊಂಡಂಥ ಊಟ ಕೊಡಬೇಕು ಎಂದು ನಾವು ಪ್ರಯತ್ನ ಪಡುತ್ತಿದ್ದೇವೆ. ಇದೊಂದು ಒಳ್ಳೆಯ ಕಾರ್ಯಕ್ರಮ. ಮಾತೃಪೂರ್ಣ ಯೋಜನೆ ಯಶಸ್ವಿಯಾಗಿರುವುದು ಕೇವಲ ೬೦% ಎಂದು ಒಂದು ಪತ್ರಿಕೆಯಲ್ಲಿ ವರದಿಯಾಗಿದೆ. ಅದಕ್ಕೆ ಹಲವಾರು ಕಾರಣಗಳಿರಬಹುದು. ಆ ಕಾರಣಗಳನ್ನು ಹುಡುಕಿ ಸರ್ಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ.

ಕೋವಿಡ್ ಸಮಯದಲ್ಲಿ ಗರ್ಭಿಣಿ ಸ್ತ್ರೀಯರು ಮನೆಯಿಂದ ಹೊರಗೆ ಬರುತ್ತಿರಲಿಲ್ಲ, ಅಂಗನವಾಡಿ ಕೇಂದ್ರಗಳಿಗೂ ಬರುತ್ತಿರಲಿಲ್ಲ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಗರ್ಭಿಣಿ ಸ್ತ್ರೀಯರು ತಾವು ಕೂಡ ಕೆಲಸಕ್ಕೆ ಹೋಗುವುದರಿಂದ, ಮನೆಕೆಲಸಗಳಲ್ಲಿ ವ್ಯಸ್ತರಾಗಿರುವುದರಿಂದ ಬರುವುದಕ್ಕಾಗಲಿಲ್ಲ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಕ್ರಮ ಕೈಗೊಂಡು ಅಂಗನವಾಡಿ ಕಾರ್ಯಕರ್ತೆಯರಾಗಲೀ ಅಥವಾ ಇನ್ಯಾರಾದರೂ ಕಾರ್ಯಕರ್ತರಾಗಲೀ ಗರ್ಭಿಣಿ ಸ್ತ್ರೀಯರ ಮನೆಗೆ ಹೋಗಿ ಮಾತೃಪೂರ್ಣ ಕಾರ್ಯಕ್ರಮದ ಬಿಸಿಯೂಟವನ್ನು ತಲುಪಿಸುವ ಕೆಲಸ ಆಯಿತೆಂದರೆ ಗರ್ಭಿಣಿ ಸ್ತ್ರೀಯರು ಒಳ್ಳೆಯ ಪೌಷ್ಟಿಕಾಂಶವನ್ನು ಪಡೆದುಕೊಳ್ಳುವಂತಾಗಿ ಒಳ್ಳೆಯ ಆರೋಗ್ಯಪೂರ್ಣ ಮಕ್ಕಳನ್ನು ಪಡೆದುಕೊಳ್ಳುವಂತಾಗುತ್ತದೆ.

ಹದಿಹರೆಯದ ಮಕ್ಕಳಲ್ಲಿ ಪೌಷ್ಟಿಕತೆಯನ್ನು ಹೆಚ್ಚು ಮಾಡಬೇಕೆಂದು ನಾವು ಎಲ್ಲಾ ಶಾಲಾ ಮಕ್ಕಳಿಗೂ mid-day meal ಅನ್ನು ಕೊಡುತ್ತಿದ್ದೇವೆ. ಮಧ್ಯಾಹ್ನದ ಹೊತ್ತು ಪೌಷ್ಟಿಕ ಆಹಾರವನ್ನು ಕೊಡಬೇಕು ಎಂದು ನಮ್ಮ ಸರ್ಕಾರ ವಾರದ ಆರು ದಿನಗಳು ಮೊಟ್ಟೆಯನ್ನು ಕೊಡುವ ಕಾರ್ಯಕ್ರಮ ರೂಪಿಸಿದೆ. ಕ್ಷೀರಭಾಗ್ಯ ಕಾರ್ಯಕ್ರಮ ಇದೆ. ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಪೌಷ್ಟಿಕತೆಯನ್ನು ಹೆಚ್ಚಿಸುವ ಬಗ್ಗೆ ನಮ್ಮ ಸರ್ಕಾರ ಎಲ್ಲಾ ಕಾರ್ಯಕ್ರಮಗಳ ಮೂಲಕ ಕ್ರಮ ಕೈಗೊಳ್ಳುತ್ತಿದೆ. ಮೊಟ್ಟೆ ಕೊಡುತ್ತಿರುವ ಕಾರ್ಯಕ್ರಮ ಬಹಳ ಮುಖ್ಯವಾದ ಕಾರ್ಯಕ್ರಮ. ಏಕೆಂದರೆ ಸಸ್ಯಾಹಾರದಲ್ಲಿ ಪೌಷ್ಟಿಕಾಂಶಗಳ ಕೊರತೆ ಬಹಳಷ್ಟಿರುತ್ತದೆ. ಬಹಳಷ್ಟು ಸಸ್ಯಾಹಾರಿಗಳಲ್ಲಿ ವಿಟಮಿನ್ ಬಿ-12 ಕೊರತೆ ಇರುತ್ತದೆ. ಇದನ್ನು ನೀಗಿಸಬೇಕು ಎಂದರೆ ಮಾಂಸಾಹಾರ ತಿನ್ನುವ ಮಕ್ಕಳಿಗೆ ಮೊಟ್ಟೆಯನ್ನಾದರೂ ಕೊಡಬೇಕು. ಮೊಟ್ಟೆಯನ್ನು ಕೊಡುವ ಕಾರ್ಯಕ್ರಮ ಮಾಡಿದ ಮೇಲೆ ೩೩.5% ಇದ್ದಂಥ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಲಾ ಹಾಜರಾತಿ ಇವತ್ತು 98% ಮೇಲೆ ಹೋಗಿದೆ ಎಂದು ಒಂದು ಅಧ್ಯಯನ ವರದಿ ಹೇಳುತ್ತಿದೆ. ಮೊಟ್ಟೆ ಕಾರ್ಯಕ್ರಮ ಮಾಡಿರುವುದರಿಂದ ಪೌಷ್ಟಿಕತೆ ಹೆಚ್ಚುವುದರ ಜೊತೆಗೆ ಶಾಲಾ ಹಾಜರಾತಿಯೂ ಉತ್ತಮವಾಗುತ್ತಿದೆ. ಶೈಕ್ಷಣಿಕವಾಗಿ ರಾಜ್ಯದ ಸಾಧನೆ ಜಾಸ್ತಿಯಾಗುತ್ತಿದೆ. ಇದು ಒಂದು ಒಳ್ಳೆಯ ಕಾರ್ಯಕ್ರಮ ಎಂದು ಈ ಸದನದಲ್ಲಿ ಹೇಳಬಯಸುತ್ತೇನೆ.

ಪೌಷ್ಟಿಕತೆಯ ವಿಚಾರ ಬಂದಾಗ ಹದಿಹರೆಯದ ಹೆಣ್ಣು ಮಕ್ಕಳ ಬಗ್ಗೆ ನಾವು ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ.

(ಮುಂದು)

(207) 11-03-2025/4.10/ಎಂವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

ಡಾ: ಯತೀಂದ್ರ. ಎಸ್ (ಮುಂದು):-

ಏಕೆಂದರೆ, ಹದಿಹರೆಯದ ಮಕ್ಕಳಲ್ಲಿ menstruation ಪ್ರಾರಂಭವಾಗುತ್ತದೆ. ಅವರ ಋತುಸ್ರಾವದ ಸಮಯದಲ್ಲಿ bleeding ಆಗುತ್ತದೆ. ಆ ರೀತಿ bleeding ಆದಾಗ ಅವರು ರಕ್ತವನ್ನು ಕಳೆದುಕೊಳ್ಳುವ ಕಾರಣದಿಂದಾಗಿ, ರಕ್ತಹಿನತೆ ಜಾಸ್ತಿಯಾಗುವುದರಿಂದ ಅವರಿಗೆ anemia ಆಗುತ್ತದೆ. ಒಂದು ಅಂಕಿ-ಅಂಶದ ಪ್ರಕಾರ ನಮ್ಮ ರಾಜ್ಯದಲ್ಲಿ ಶೇಕಡಾ 64.4ರಷ್ಟು anemia prevalence ಇದೆ ಎಂದು ಹೇಳುತ್ತಿದ್ದಾರೆ. ಇದು ನಿಜವಾಗಿಯೂ ಶೋಚನಿಯವಾದಂತಹ ಸಂಗತಿ. ಹಾಗಾಗಿ, ಹದಿಹರೆಯದ ಮಕ್ಕಳಲ್ಲಿ ಅನಿಮಿಯ ನಿವಾರಿಸುವುದಕ್ಕೆ ಯಾವುದಾದರೂ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಹಾಗಾಗಿ, ಪ್ರೌಢಶಾಲೆಗಳಿಗೆ ಹೋಗಿ ನಿಯಮಿತವಾಗಿ ಅವರ ರಕ್ತ ಪರೀಕ್ಷೆ ಮಾಡಿ, ಅವರಿಗೆ ಅನಿಮಿಯ ಇದೆಯೋ ಇಲ್ಲವೋ ಎಂದು ತಿಳಿದುಕೊಂಡು, ಅದಕ್ಕೆ ಬೇಕಾದಂತಹ ಪರಿಹಾರೋಪಾಯಗಳನ್ನು ಮಾಡಬೇಕಾಗಿದೆ. ಅವರಿಗೆ Iron and folic acid supplementation ಅನ್ನು ಕೊಡುವಂಥದ್ದು, Deworming ಮಾಡುವಂಥದ್ದು, atleast ವರ್ಷಕ್ಕೆ ಎರಡು-ಮೂರು ಬಾರಿಯಾದರೂ ಸರ್ಕಾರ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಮಾಡಿದರೆ, ಹದಿಹರೆಯದ ವಯಸ್ಸಿನ ಹೆಣ್ಣು ಮಕ್ಕಳಲ್ಲಿ anemia ತಡೆಯುವುದಕ್ಕೆ ಸಾಧ್ಯವಾಗುತ್ತದೆ.

ಹದಿಹರೆಯದ ಮಕ್ಕಳಲ್ಲಿ ಮತ್ತೊಂದು ಸಮಸ್ಯೆ ಎಂದರೆ, ಬಾಲ್ಯ ವಿವಾಹ ಮತ್ತು ಹದಿಹರೆಯದ ವಯಸ್ಸಿನಲ್ಲಿಯೇ ಗರ್ಭಧಾರಣೆ ಧರಿಸುವಂಥದ್ದು. ಈಗ ಒಂದು ಸರ್ವೆ ಪ್ರಕಾರ 11 ರಿಂದ 14 ವರ್ಷ ವಯಸ್ಸಿನ ಮಕ್ಕಳಲ್ಲಿ male to female ratio ಕರ್ನಾಟಕದಲ್ಲಿ 1000 ಗಂಡು ಮಕ್ಕಳಿಗೆ 940 ಹೆಣ್ಣು ಮಕ್ಕಳು ಇದ್ದಾರೆ ಎಂದು. ಅದೇ ರೀತಿ 15 ರಿಂದ 18 ವರ್ಷ ವಯಸ್ಸಿಗೆ ಬಂದರೆ, 1000 ಗಂಡು ಮಕ್ಕಳಿಗೆ 904 ಹೆಣ್ಣು ಮಕ್ಕಳು ಇದ್ದಾರೆ. ಅಂದರೆ, 11-14ನೇ ವಯಸ್ಸಿನಿಂದ ಅವರು 15-18ನೇ ವಯಸ್ಸಿಗೆ ಬರುವಷ್ಟರಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಹೇಳಿದ್ದಾರೆ. ಇದಕ್ಕೆ ಕಾರಣ ಏನು ಎಂಬುದನ್ನು ಹುಡುಕಬೇಕಾಗಿದೆ. ಬಹುಶಃ ಹೆಣ್ಣು ಮಕ್ಕಳ ಮೇಲೆ ನಡೆಯುವಂತಹ ದೌರ್ಜನ್ಯ, ಕ್ರೌರ್ಯ ಮತ್ತೆ ಅವರಿಗೆ ಸಣ್ಣ ವಯಸ್ಸಿನಲ್ಲಿಯೇ ಮದುವೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಂಥದ್ದು. ಹೆಣ್ಣು ಮಕ್ಕಳಿಗೆ ಆಗುವ ಅನಾರೋಗ್ಯ ಮತ್ತು ಆಗುವಂತಹ ಸಾವುಗಳು ಇದಕ್ಕೆಲ್ಲಾ ಕಾರಣ ಇರಬಹುದು. ನಾವು ಈ ಎಲ್ಲಾ ಸಮಸ್ಯೆಗಳನ್ನು ಕೂಡ tackle ಮಾಡಬೇಕಾಗಿದೆ. ಅದರಲ್ಲಿ ಮುಖ್ಯವಾದ ಸಮಸ್ಯೆ ಬಾಲ್ಯ ವಿವಾಹ. ಈಗ ಹೆಣ್ಣು ಮಕ್ಕಳು ಓದಿ ಅವರು ಕೂಡ ಉದ್ಯೋಗ ಪಡೆದುಕೊಂಡು, ಈ ದೇಶವನ್ನು ಕಟ್ಟಬೇಕು. ಅವರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು. ಅಂತಹ ವಯಸ್ಸಿನಲ್ಲಿ ಅವರಿಗೆ ಮದುವೆ ಮಾಡಿ, ಅವರು ಮಕ್ಕಳನ್ನು ಹೆರುವಂತೆ ಮಾಡಿದರೆ, ಅವರು ಓದಿ ಜೀವನದಲ್ಲಿ ಮುಂದೆ ಬಂದು ಸಾಧನೆ ಮಾಡಬೇಕಾದಂತಹವರು, ಕೇವಲ ಅವರು ಕುಟುಂಬಕ್ಕೆ ಸೀಮಿತವಾಗಿ ಹೋಗುತ್ತಿದ್ದಾರೆ. ಇದರಿಂದ ನಷ್ಟ ಕೇವಲ ಆ ಹೆಣ್ಣು ಮಕ್ಕಳಿಗೆ ಮತ್ತು ಕುಟುಂಬಕ್ಕೆ ಮಾತ್ರವಲ್ಲ, ಇದು ಇಡೀ ದೇಶಕ್ಕೂ ಕೂಡ ಆಗುತ್ತದೆ. ಏಕೆಂದರೆ, ಈಗ ಯಾವುದೇ ಒಂದು ಸಮಾಜ ಮುಂದುವರೆದಿದೆ ಎಂದು ಹೇಳಬೇಕಾದರೆ, ಎಷ್ಟು ಹೆಣ್ಣು ಮಕ್ಕಳು ಉದ್ಯೋಗ ಕ್ಷೇತ್ರದಲ್ಲಿದ್ದಾರೆ ಎಂಬುದನ್ನು ನೋಡಿ ಹೇಳುತ್ತಾರೆ. ಹಾಗಾಗಿ, ಉದ್ಯೋಗ ಕ್ಷೇತ್ರಕ್ಕೆ ಹೆಣ್ಣು ಮಕ್ಕಳು ಬಂದು ಕೆಲಸ ಮಾಡಿದರೆ, ನಮ್ಮ ದೇಶದ ಆರ್ಥಿಕತೆಯೂ ಸಹ ಹೆಚ್ಚಾಗುತ್ತದೆ. ನಮ್ಮ ರಾಜ್ಯವೂ ಸಹ ಅಭಿವೃದ್ಧಿಯಾಗುತ್ತದೆ. ಹಾಗಾಗಿ, ಬಾಲ್ಯ ವಿವಾಹ ತಡೆಯುವಂತಹ ಎಲ್ಲಾ ಕೆಲಸವನ್ನು ಮಾಡಬೇಕು. ಈಗ ಒಂದು ಅಂಕಿ-ಅಂಶದ ಪ್ರಕಾರ ನಮ್ಮ ರಾಜ್ಯದಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನಲ್ಲಿ ಹೆಣ್ಣು ಮಕ್ಕಳಿಗೆ ಬಾಲ್ಯ ವಿವಾಹವಾಗುತ್ತದೆ. ಮತ್ತೆ 20 ಮತ್ತು 23 ವರ್ಷದ ಹೆಣ್ಣು ಮಕ್ಕಳು ಎಂದರೆ, ಶೇಕಡಾ 24.5 ಇದೆ ಎಂದು ಹೇಳಿದ್ದಾರೆ. 'ಬೆಂಗಳೂರು ಮಿರರ್' ಎಂಬ ದಿನಪತ್ರಿಕೆಯು ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಸುಮಾರು 8348 ಬಾಲ್ಯ ವಿವಾಹದ ಪ್ರಕರಣಗಳು ದಾಖಲಾಗಿವೆ ಎಂದು ವರದಿ ಮಾಡಿದೆ. ಇಡೀ ದೇಶದಲ್ಲಿಯೇ ತಮಿಳು ನಾಡು ರಾಜ್ಯವನ್ನು ಬಿಟ್ಟರೆ, ಕರ್ನಾಟಕ ರಾಜ್ಯ ಎರಡನೇ ಸ್ಥಾನದಲ್ಲಿದೆ. ಹಾಗಾಗಿ, ನಮ್ಮ ರಾಜ್ಯ ಆರ್ಥಿಕವಾಗಿ ಮುಂದುವರೆದಿದ್ದರೆ, ಸದ್ಯಕ್ಕೆ ನಾವು ಸಾಮಾಜಿಕವಾಗಿಯೂ ಕೂಡ progress ಮಾಡಿದ್ದೇವೆಂದು ಹೇಳುತ್ತಿದ್ದೇವೆ. ಆದರೂ ಕೂಡ ಇಡೀ ದೇಶದಲ್ಲಿಯೇ ಕರ್ನಾಟಕ ರಾಜ್ಯ ಬಾಲ್ಯ ವಿವಾಹದಲ್ಲಿ ಎರಡನೇ ಸ್ಥಾನದಲ್ಲಿದೆ. ಇದಕ್ಕೆ ನಾವು ಖಂಡಿತ ಕ್ರಮ ಕೈಗೊಳ್ಳಲೇಬೇಕು. ಇದಕ್ಕೆ ಸರ್ಕಾರ ಕ್ರಮವಹಿಸಬೇಕು. ಮಕ್ಕಳಿಗೆ ಹೆಚ್ಚು ಹೆಚ್ಚು ಶಿಕ್ಷಣ ಕೊಡಿಸುವುದಕ್ಕೆ ಅವರ ತಂದೆ-ತಾಯಂದಿರನ್ನು ಓಲೈಸಬೇಕು. ಈಗ ಏನು ಶಕ್ತಿ ಯೋಜನೆ ಜಾರಿ ಮಾಡಿದ್ದಾರೆ, ಅದೂ ಕೂಡ ಇಲ್ಲಿ ಸ್ವಲ್ಪಮಟ್ಟಿಗೆ ಹೆಣ್ಣು ಮಕ್ಕಳ ಶಿಕ್ಷಣವನ್ನು ಜಾಸ್ತಿ ಮಾಡುವಂತಹ ಕೆಲಸ ಮಾಡುತ್ತಿದೆ. ಏಕೆಂದರೆ, ಬಡ ಹೆಣ್ಣು ಮಕ್ಕಳ ತಂದೆ-ತಾಯಂದಿರ ಸಂಪನ್ಮೂಲ ಕಡಿಮೆ ಇರುವುದರಿಂದ ಅದನ್ನು ಅವರು ತಮ್ಮ ಗಂಡು ಮಕ್ಕಳಿಗೆ ಕೊಟ್ಟು, ಹೆಣ್ಣು ಮಕ್ಕಳು ಪ್ರಯಾಣ ಮಾಡುವುದು ಬೇಡ, ನಮಗೆ ಸ್ವಲ್ಪ ಆರ್ಥಿಕ ಹೊರೆಯಾಗುತ್ತದೆಂದು ಹೆಣ್ಣು ಮಕ್ಕಳು ಹೆಚ್ಚಿನ ಉನ್ನತ ಶಿಕ್ಷಣ ಪಡೆಯುವುದಕ್ಕೆ ಅಡ್ಡಿಯಾಗುತ್ತಿತ್ತು. ಆದರೆ, ಈ ಶಕ್ತಿ ಯೋಜನೆಯಿಂದಾಗಿ, ಇವತ್ತು ಎಲ್ಲರೂ ಸಹ ಉಚಿತವಾಗಿ ಪ್ರಯಾಣ ಮಾಡುವುದಕ್ಕೆ ಸಾಧ್ಯವಾಗಿರುವುದರಿಂದ, ಹೆಣ್ಣು ಮಕ್ಕಳು ಕೂಡ ದೂರದ ಶಾಲೆಗಳಿಗೆ ಹೋಗಿ ಶಿಕ್ಷಣ ಪಡೆಯುವುದಕ್ಕೆ ಸಾಧ್ಯವಾಗುತ್ತಿದೆ. ಹದಿಹರೆಯದ ವಯಸ್ಸಿನ ಮಕ್ಕಳಲ್ಲಿ ಆರೋಗ್ಯ ಮತ್ತು ಪೌಷ್ಟಿಕ ವಿಚಾರದ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಡಾ: ಧನಂಜಯ ಸರ್ಜಿಯವರು ಹೇಳಿದ ಹಾಗೆ, ಹದಿಹರೆಯದ ವಯಸ್ಸಿನ ಮಕ್ಕಳನ್ನು ಬಹಳಷ್ಟು ಮಾನಸಿಕ ಸಮಸ್ಯೆಗಳು ಸಹ ಕಾಡುತ್ತವೆ. ಏಕೆಂದರೆ, ಬಾಲ್ಯಾವಸ್ಥೆಯಲ್ಲಿ ಮಕ್ಕಳು ತಂದೆ-

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾಯಿಗಳ ರಕ್ಷಣೆಯಲ್ಲಿರುತ್ತಾರೆ. ಆದರೆ, ಹದಿವಯಸ್ಸಿಗೆ ಬಂದತಕ್ಷಣ ಅವರು ನೇರವಾಗಿ ಸಮಾಜವನ್ನು ಎದುರಿಸಬೇಕಾಗುತ್ತದೆ. ಮತ್ತೆ ಅವರು ಸ್ವತಂತ್ರವಾಗಿ ಯೋಚನೆ ಮಾಡಬೇಕಾಗುತ್ತದೆ. ಅವರು ಜವಾಬ್ದಾರಿಗಳನ್ನು ವಹಿಸಿಕೊಂಡು, ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ.

ಈ ಎಲ್ಲಾ ಕಾರಣಗಳಿಂದಾಗಿ ಹದಿಹರೆಯದ ವಯಸ್ಸಿನ ಮಕ್ಕಳಲ್ಲಿ ಸ್ವಲ್ಪ ಮಾನಸಿಕ ಸಮಸ್ಯೆಗಳು ಮತ್ತು ಮಾನಸಿಕ ತುಮುಲಗಳು ಜಾಸ್ತಿಯಾಗುತ್ತವೆ. ಹಾಗಾಗಿ, ಈ ವಯಸ್ಸಿನಲ್ಲಿ ಸಾಮಾನ್ಯವಾಗಿ ಕಾಣುವಂತಹ ಪ್ರವೃತ್ತಿಗಳು ಏನೆಂದರೆ, ಮುಂಗೋಪ, ಹಠಮಾರಿತನ, ಬಂಡಾಯ ಪ್ರವೃತ್ತಿ, ವ್ಯಕ್ತಿಗಳಿಂದ ಬೇಗ ಪ್ರಭಾವಿತರಾಗುವಂಥದ್ದು. ಅವರಿಗೆ impressionable mind ಇರುತ್ತದೆ. ಹಾಗಾಗಿ, ವ್ಯಕ್ತಿಗಳಿಂದ ಬೇಗ ಪ್ರಭಾವಿತರಾಗಿ, ವ್ಯಕ್ತಿ ಪೂಜೆಯನ್ನು ಶುರು ಮಾಡುವಂಥದ್ದು. ಅದು Film Stars ಇರಬಹುದು, Political Leaders ಇರಬಹುದು, Religious Leaders ಇರಬಹುದು. ಅವರು rational ಆಗಿ ಯೋಚನೆ ಮಾಡದೆ, ಅವರನ್ನು blind ಆಗಿ follow ಮಾಡುವಂಥದ್ದು. ಮತ್ತೆ ದುಷ್ಟತನದ ವ್ಯಸನಗಳಿಗೆ ಸುಲಭವಾಗಿ ಬಲಿಯಾಗುವಂಥದ್ದು. ಮತ್ತೆ body dysmorphism ಎಂದರೆ, ನಮ್ಮ ದೇಹದಲ್ಲಿರತಕ್ಕಂತಹ ಸಣ್ಣಪುಟ್ಟ ಕುಂದುಕೊರತೆಗಳನ್ನು ದೊಡ್ಡದಾಗಿ ಮಾಡಿಕೊಂಡು ನಾವು ಸುಂದರವಾಗಿ ಇಲ್ಲವೆಂದು ಕೀಳರಿಮೆ ಬೆಳೆಸಿಕೊಳ್ಳುವಂಥದ್ದು. ಈ ರೀತಿ ಹದಿಹರೆಯದ ಮಕ್ಕಳಲ್ಲಿ ಸಾಮಾನ್ಯವಾಗಿ ಕಾಣುವಂತಹ ಸಮಸ್ಯೆಗಳು. ಹಾಗಾಗಿ, ಈ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆಂದರೆ, ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ counselling ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಈಗ ಶಾಶ್ವತವಾಗಿ counselling ವ್ಯವಸ್ಥೆಯನ್ನು ಮಾಡಿಕೊಡುವುದಕ್ಕೆ ಆಗದೇ ಇದ್ದರೂ, atleast ವರ್ಷಕ್ಕೆ ಎರಡು-ಮೂರು ಬಾರಿಯಾದರೂ ತಜ್ಞರು ಹೋಗಿ, ಹದಿಹರೆಯದ ಮಕ್ಕಳಿಗೆ counselling ಮಾಡಿದರೆ, ಮಾನಸಿಕ ಸಮಸ್ಯೆಗಳನ್ನು ತಕ್ಕಮಟ್ಟಿಗೆ ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಮತ್ತೊಂದು ಏನೆಂದರೆ, ಮಾನ್ಯ ಸದಸ್ಯರು ಹೇಳಿದ ಹಾಗೆ, ಈಗಿನ ಕಾಲದಲ್ಲಿ ಮೊಬೈಲ್‌ನಲ್ಲಿ ಹದಿಹರೆಯದ ಮಕ್ಕಳು ತಮ್ಮ ಸಮಯವನ್ನು ಹೆಚ್ಚಾಗಿ ಹಾಳು ಮಾಡಿಕೊಳ್ಳುತ್ತಿದ್ದಾರೆ. ತಾವು ನೋಡಿದಂತೆ, ಬೇಕಾದಷ್ಟು Social Media Platform ಗಳಿವೆ. Instagram, Facebook and Twitter ಎಂದು. ಈ ಎಲ್ಲಾ platform ಗಳಲ್ಲಿ ಗಂಟೆಗಟ್ಟಲೆ reel ಗಳನ್ನು ನೋಡುವುದು, You Tube ನಲ್ಲಿ ವಿಡಿಯೋ ನೋಡಿಕೊಂಡು ತಮ್ಮ ಸಮಯವನ್ನು ಹಾಳು ಮಾಡಿಕೊಳ್ಳುತ್ತಾರೆ. ಇದರಿಂದ ಅವರ ಶಿಕ್ಷಣಕ್ಕೆ ಮಾರಕವಾಗುತ್ತದೆ. ಅವರು ಓದುವುದಕ್ಕೆ ಕೊಡಬೇಕಾದಂತಹ ಸಮಯವನ್ನು ಕಡಿಮೆ ಮಾಡುವುದರಿಂದ ಅವರ ಶೈಕ್ಷಣಿಕ ಸಾಧನೆ ಕಡಿಮೆಯಾಗುತ್ತದೆ. ಕುಟಂಬದ ತಂದೆ-ತಾಯಿ, ಸಹೋದರ-ಸಹೋದರಿ ಇವರ ಜೊತೆಯಲ್ಲಿ ಹೆಚ್ಚು ಸಮಯ ಕಳೆಯುವುದಕ್ಕೆ ಆಗದೆ, ಮನುಷ್ಯ ಸಂಬಂಧಗಳನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿ ಉಂಟಾಗುತ್ತಿದೆ.

ಮೂರನೆಯದು ಏನೆಂದರೆ, ಸಮಯ ಇದ್ದಾಗ, ಅದನ್ನು productive ಆಗಿ ಉಪಯೋಗಿಸಿಕೊಳ್ಳುವುದಕ್ಕೆ ಮೊದಲು ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳುತ್ತಿದ್ದರು. ಅದರೆ, ಈಗ ಹೆಚ್ಚಾಗಿ ಮೊಬೈಲ್ ಮತ್ತು ಇಂಟರ್‌ನೆಟ್‌ನಲ್ಲಿ ಸಮಯ ಕಳೆಯುತ್ತಿರುವುದರಿಂದ, ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದಕ್ಕೆ ಆಗುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತಿನ ದಿವಸ ಇಂಟರ್‌ನೆಟ್ ಎಲ್ಲರಿಗೂ ಸಿಕ್ಕಿರುವುದರಿಂದ, ಅಶ್ಲೀಲ ವೆಬ್‌ಸೈಟ್‌ಗಳಿಗೆ ಹೋಗುವಂಥದ್ದು. ಮತ್ತೆ gambling ರೀತಿಯ ಆಟಗಳಲ್ಲಿ ತೊಡಗಿಸಿಕೊಳ್ಳುವಂಥದ್ದು. ಇದನ್ನೆಲ್ಲಾ ನೋಡಿ ಕೆಟ್ಟ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದಕ್ಕೆ ಶುರು ಮಾಡಿದ್ದಾರೆ. ಹಾಗಾಗಿ, ಮಕ್ಕಳು ಮೊಬೈಲ್‌ನಲ್ಲಿ ಏನು ಸಮಯ ಕಳೆಯುತ್ತಾರೆ, ಅದಕ್ಕೆ ಆದಷ್ಟು ನಿರ್ಬಂಧ ಹೇರುವಂತಹ ಕೆಲಸ ಮಾಡಬೇಕಾಗಿದೆ. ಆಸ್ಟ್ರೇಲಿಯಾ ದೇಶದಲ್ಲಿ ಇತ್ತೀಚೆಗೆ 16 ವರ್ಷ ಕಡಿಮೆ ವಯಸ್ಸಿನ ಮಕ್ಕಳಿಗೆ internet access ಅನ್ನು limit ಮಾಡಬೇಕೆಂದು, ಒಂದು ಕಾನೂನು ಜಾರಿಗೆ ತಂದಿದ್ದಾರೆಂದು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಆ ನಿಟ್ಟಿನಲ್ಲಿ ನಾವೂ ಕೂಡ ಯೋಚನೆ ಮಾಡಬೇಕಾಗಿದೆ. ಭಾರತದಲ್ಲೂ ಕೂಡ ಮಕ್ಕಳಿಗೆ internet access ಅನ್ನು limit ಮಾಡುವ ಸಂಬಂಧ ಏನಾದರೂ ಕಾನೂನು ಜಾರಿಗೆ ತರಬೇಕು. Social Media Platform ಗಳಲ್ಲಿ ಅವರಿಗೆ ಎಷ್ಟರಮಟ್ಟಿಗೆ access ಕೊಡಬೇಕು ಎಂಬುದನ್ನು ಯೋಚನೆ ಮಾಡಿ, ಅದಕ್ಕೆ ಒಂದು ಕಾನೂನು ತರಬೇಕಾದಂತಹ ಅವಶ್ಯಕತೆ ಇದೆ.

ಕೊನೆಯದಾಗಿ, ಹದಿಹರೆಯದ ಮಕ್ಕಳ ಮೇಲೆ academic pressure ಬಹಳ ಜಾಸ್ತಿ ಇರುತ್ತದೆ. ಈಗಾಗಲೇ ಹೇಳಿದ ಹಾಗೆ, ಪ್ರೌಢ ಶಾಲಾ ಶಿಕ್ಷಣದಿಂದ ಅವರು ವೃತ್ತಿಪರ ಕೋರ್ಸ್‌ಗಳಿಗೆ ಮತ್ತು ಪದವಿ ಶಿಕ್ಷಣಕ್ಕೆ ಹೋಗುತ್ತಿರುತ್ತಾರೆ. ಎಲ್ಲಾ ತಂದೆ-ತಾಯಂದಿರು ನೀವು ಹೆಚ್ಚು-ಹೆಚ್ಚು ಅಂಕಗಳನ್ನು ಪಡೆಯಲೇಬೇಕೆಂದು ಅವರ ಮೇಲೆ pressure ಹಾಕುತ್ತಿರುತ್ತಾರೆ. ಆದರೆ, ಅಂಕಗಳು ಒಂದೇ ಜ್ಞಾನದ indicator ಅಥವಾ ಸೂಚ್ಯಂಕವಾಗಿರುವುದಿಲ್ಲ. ಇವತ್ತು ಶೇಕಡಾ 98ರಷ್ಟು ಅಂಕ ತೆಗೆದುಕೊಂಡಿರುವಂತಹವರು top rank ಬಂದಿರಬಹುದು. ಆದರೆ, ಶೇಕಡಾ 3 ರಿಂದ 4 ಕಡಿಮೆ ಬಂದಿರುವಂತಹವರಿಗೆ top 10 rank ನಲ್ಲಿ ಅವರಿಗೆ ಸ್ಥಾನ ಸಿಗದೇ ಇರಬಹುದು. ಅವರು ಶೇಕಡಾ 3 ರಿಂದ 4ರಷ್ಟನ್ನು ಕಡಿಮೆ ತೆಗೆದುಕೊಂಡ ಮಾತ್ರಕ್ಕೆ ಅವರು top rank ನವರಿಗಿಂತ ಕಡಿಮೆ ಬುದ್ಧಿವಂತ ಎಂದು ಹೇಳುವುದಕ್ಕೆ ಬರುವುದಿಲ್ಲ. ಹಾಗಾಗಿ, ನಾವು ಅಂಕಗಳಿಗೆ ಹೆಚ್ಚು ಮೌಲ್ಯವನ್ನು ಕೊಡುವುದನ್ನು ಬಿಟ್ಟು, ಅವರಿಗೆ counselling ಮಾಡಬೇಕು. ಜೀವನದಲ್ಲಿ ಶಿಕ್ಷಣ ಮುಖ್ಯ. ಆದರೆ, ಶಿಕ್ಷಣ ಒಂದೇ ಅಲ್ಲ. ಜೀವನದಲ್ಲಿ ಬೇರೆ ಸಾಧನೆ ಮಾಡುವುದಕ್ಕೆ ಹಲವಾರು ದಾರಿಗಳಿವೆ ಎಂದು ಹೇಳುತ್ತೇನೆ. ಅವರಲ್ಲಿ ಹುದುಗಿರುವಂತಹ ಪ್ರತಿಭೆ ಅಥವಾ ಕೌಶಲ್ಯವನ್ನು ಅವರು explore ಮಾಡಿ, ಅದನ್ನು ಅವರು ವೃತ್ತಿಯಾಗಿ ತೆಗೆದುಕೊಳ್ಳುವುದಕ್ಕೆ ಅಥವಾ ಅದರ ಮೂಲಕ ಜೀವನೋಪಾಯ ಕಂಡುಕೊಳ್ಳುವುದಕ್ಕೆ ನಾವು ಅವರನ್ನು ಪ್ರೋತ್ಸಾಹಿಸಬೇಕು. ಹಾಗಾಗಿ, academic pressure ಅನ್ನು ಕಡಿಮೆ ಮಾಡುವುದಕ್ಕೋಸ್ಕರ ಅವುಗಳಿಗೂ ಕೂಡ ವೃತ್ತಿಪರ counselling ಅನ್ನು ಶಾಲಾ-ಕಾಲೇಜುಗಳಲ್ಲಿ ಕೊಡುವಂತಹ ಕೆಲಸ ಮಾಡಬೇಕು. ಇಷ್ಟೆಲ್ಲಾ ಮಾಡಿದರೆ, ಹದಿಹರೆಯದ ವಯಸ್ಸಿನ ಮಕ್ಕಳಲ್ಲಿ ಕಾಣಿಸುವಂತಹ ಬಹಳಷ್ಟು ಸಮಸ್ಯೆಗಳನ್ನು ನಾವು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಹೇಳಿದಂತೆ ಹದಿಹರೆಯದ ಮಕ್ಕಳ ಸಮಸ್ಯೆಗಳು ನೂರಾರು ಇರುತ್ತವೆ. ನಾನು ಅದೆಲ್ಲವನ್ನೂ ಕೂಡ ಇಲ್ಲಿ ಕವರ್ ಮಾಡುವುದಕ್ಕೆ ಆಗಿಲ್ಲ. ನನಗೆ ದೊರೆತೆ ಕಾಲಾವಧಿಯಲ್ಲಿ ಕೆಲವು ಸಮಸ್ಯೆಗಳ ಬಗ್ಗೆ ಮಾತನಾಡಿದ್ದೇನೆ. ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಹದಿಹರೆಯದ ಮಕ್ಕಳು ಎದುರಿಸುತ್ತಿರುವಂತಹ ಸಮಸ್ಯೆಗಳನ್ನು ಕುರಿತು ಕಳೆದ ಬೆಳಗಾವಿಯ ಅಧಿವೇಶನದಲ್ಲಿ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಚರ್ಚೆಗೆ ತೆಗೆದುಕೊಂಡು ಬಂದಿದ್ದರು. ಇದು ಬಹಳಷ್ಟು ಉತ್ತಮವಾದಂತಹ ಮತ್ತೆ ಅಷ್ಟೇ ಗಂಭೀರವಾಗಿರತಕ್ಕಂಥ ವಿಷಯವಾಗಿದೆ. ಈ ಅಧಿವೇಶನದಲ್ಲಿ ಮಾನ್ಯ ಸಭಾಪತಿಯವರು ಮತ್ತೊಮ್ಮೆ ಈ ವಿಷಯವನ್ನು ಚರ್ಚೆಗೆ ಕೈಗೆತ್ತಿಗೊಂಡಿದ್ದಾರೆ, ಅದಕ್ಕೆ ನಾನು ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಈ ಒಂದು ಸಮಾಜದಲ್ಲಿ ದಿನಬೆಳಗಾದರೆ, ಮಾಧ್ಯಮ ಮತ್ತು ಪತ್ರಿಕೆಗಳ ಮೂಲಕ ನೋಡುತ್ತೇವೆ. ತಂದೆ-ತಾಯಿಗಳಿಗೆ ಮಕ್ಕಳನ್ನು ಹೇಗೆ ಬೆಳಸಬೇಕು ಎಂಬುದೇ ದೊಡ್ಡ ಸಮಸ್ಯೆಯಾಗಿದೆ. ಏಕೆಂದರೆ, ಉನ್ನತ ಅಭ್ಯಾಸಗಳನ್ನು ಪಡೆದುಕೊಂಡಂತಹವರು ಉತ್ತಮವಾದಂತಹ ಮನೆಯಲ್ಲಿ ಒಂದು ಪಾಶ್ಚಾತ್ಯಶೈಲಿ ಇರುತ್ತದೆ.

(ಮುಂದು)

(208) 11.03.2025 04.20 LL-AK **(ಸಭಾಪತಿಯವರ ಉಪಸ್ಥಿತಿ)**

ಶ್ರೀ ಹೇಮಲತಾ ನಾಯಕ್ (ಮುಂದು):-

ಆ ಶೈಲಿಯನ್ನು ಮುಂದುವರೆಸಿಕೊಂಡು ಹೋಗತಕ್ಕಂತಹ ಮಕ್ಕಳು ನಿಜವಾಗಿ ದಾರಿ ತಪ್ಪಿರುವುದನ್ನು ಮಾಧ್ಯಮಗಳ ಮುಖಾಂತರ ನಾವು ಇವೊತ್ತಿನ ದಿವಸ ನೋಡುತ್ತಿರುತ್ತೇವೆ. ಸ್ವಾಭಿಮಾನ ಮತ್ತು ದೇಹದ ಚಿತ್ರಣದ ವಿಷಯಕ್ಕೆ ಬಂದಾಗ, ಮಕ್ಕಳು ಅಂದರೆ ಅದು ಗಂಡು ಮಗು ಇರಬಹುದು ಅಥವಾ ಹೆಣ್ಣು ಮಗು ಇರಬಹುದು ಅವರು ಆಗಲೇ ತಮ್ಮ ಜೀವನಶೈಲಿ ಬದಲಾವಣೆಯಾಗುತ್ತದೆ. ಅವರು ಪ್ರೈಮರಿ ಸ್ಕೂಲ್ ದಾಟಿದರೆಂದರೆ, ಆಗಲೇ ವಾತಾವರಣಗಳು ಬೇರೆಯಾಗಿ ಕಾಣುತ್ತವೆ. ಇವೊತ್ತಿನ ದಿವಸ ಅವರು ಪ್ರೈಮರಿ ಸ್ಕೂಲ್ ದಾಟಿ ಹೈಸ್ಕೂಲ್‌ಗೆ ಬಂದ ನಂತರ, ಅವರಲ್ಲಿ ಆಟಿಟ್ಯೂಡ್ ಚೇಂಜ್ ಆಗುತ್ತದೆ. ಅವರು ಯಾರಾದರೂ ಸಿನಿಮಾ ನಟರನ್ನು ಹೋಲಿಕೆ ಮಾಡಿಕೊಳ್ಳುತ್ತಾರೆ. ಆ ಸಿನಿಮಾ ನಟರನ್ನು ತಮಗೆ ಹೋಲಿಸಿಕೊಂಡು ತಮ್ಮ ಜೀವನಶೈಲಿಯನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ. ಇಂತಹಗಳು ಬಹಳಷ್ಟು ಸಮಸ್ಯೆಯಾಗಿ ಕಾಡುತ್ತಿವೆ. ಇವೊತ್ತಿನ ದಿವಸ ಒತ್ತಡ ಹೇಗಿದೆ ಎಂದರೆ, ದಿನ ಬೆಳಗಾದರೆ ನಮ್ಮ ಮಕ್ಕಳನ್ನು ನಾವು ಸಂಭಾಳಿಸುವುದಕ್ಕೆ ಕಷ್ಟವಾಗುತ್ತಿದೆ. ಇವೊತ್ತಿನ ದಿವಸ ಎಸ್‌ಎಸ್‌ಎಲ್‌ಸಿ ಓದುತ್ತಿರುವಂತಹ ಮಗ ಅಥವಾ ಮಗಳು ನನಗೆ ಮೊಬೈಲ್ ಬೇಕು ಎಂದು ಕೇಳುತ್ತಾರೆ. ಆದರೆ, ನಮ್ಮ ಮಕ್ಕಳು ಇಂಜಿನಿಯರಿಂಗ್ ಮೊದಲನೇ ವರ್ಷ ಓದುವಾಗ ಅವರಿಗೆ ಮೊಬೈಲ್ ಕೊಡಿಸಬೇಕಾದರೆ ನಾವು ಹಿಂದೆ ಮುಂದೆ ಯೋಚನೆ ಮಾಡತಕ್ಕಂತ ಸಂದರ್ಭ ಇತ್ತು. ಆದರೆ, ಇವೊತ್ತಿನ ದಿವಸ ನಮ್ಮ ಮಕ್ಕಳು ಹೈಸ್ಕೂಲ್ ಓದುವಾಗಲೇ ನಾವು ಅವರಿಗೆ ಮೊಬೈಲ್ ಕೊಡುತ್ತೇವೆ. ಶಾಲಾ-ಕಾಲೇಜುಗಳಲ್ಲಿಯೂ ಸಹ ಮೊಬೈಲ್ ಬಳಕೆಯ ಇತಿ ಮಿತಿಗಳನ್ನು ಜಾರಿಗೆ ತಂದಿದ್ದಾರೆ. ಆದರೆ, ಯಾವುದಾದರೂ ಒಂದು ಮಾರ್ಗದಲ್ಲಿ ಮೊಬೈಲ್ ಅನ್ನು ಶಾಲೆ-ಕಾಲೇಜುಗಳ ಒಳಗೆ ಒಯ್ದು ಅದನ್ನು ಬಳಕೆ ಮಾಡಿ, ಅಲ್ಲಿ ಒಂದು ಅಸಭ್ಯತನಕ್ಕೆ ಕಾರಣರಾಗುತ್ತಾರೆ. ಅದೆಲ್ಲಕ್ಕಿಂತಲೂ ಹೆಚ್ಚಾಗಿ ಎಲ್ಲಾ ಶಾಲೆ-ಕಾಲೇಜುಗಳವರು ಕ್ರಮ ಕೈಗೊಳ್ಳಬೇಕು. ಈಗ ಶಿಸ್ತುಬದ್ಧವಾದ ಜೀವನವನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿಕೊಡುವುದಕ್ಕೆ ಮನೆಯಲ್ಲಿ ತಂದೆ-ತಾಯಿ ಇಬ್ಬರು ಕೆಲಸ ಮಾಡುತ್ತಿರುವವರಿಗೆ ಸಮಸ್ಯೆ ಇದೆ ಎನ್ನುವುದನ್ನು ಸಹ ನಾನು ಹೇಳುತ್ತಿದ್ದೇನೆ. ಹಳ್ಳಿಗಾಡು ಪ್ರದೇಶದಲ್ಲಿ ಅಥವಾ ಅಷ್ಟೊಂದು ಜೀವನಶೈಲಿ ಇಲ್ಲದೇ ಇರುವಂತಹ ಪ್ರದೇಶಗಳು ಅಂದರೆ, ನಮ್ಮ ಹಿಂದುಳಿದಿರುವಂತಹ ಪ್ರದೇಶಗಳಲ್ಲಿ ನಾವು ಇವೊತ್ತಿನ ದಿವಸ ನೋಡುತ್ತಿರುವುದೇನೆಂದರೆ, ಕೊಪ್ಪಳ ಜಿಲ್ಲೆಯಂತಹ ಒಂದು ಸಣ್ಣ ಜಿಲ್ಲೆಯ ಒಬ್ಬ ಹಳ್ಳಿ ಹುಡುಗಿ ಕಾಲೇಜಿಗೆ ಬಂದಾಗ ಆಕೆಯ ಆಟಿಟ್ಯೂಡ್ ಚೇಂಜ್ ಆಗುತ್ತದೆ. ಏತಕ್ಕೆ ಹೀಗೆ ಎನ್ನುವುದನ್ನು ಆ ಮಕ್ಕಳಿಗೆ ಹೇಳಿಕೊಡಬೇಕಾದಂತಹವರು ಯಾರೂ ಇರುವುದಿಲ್ಲ. ಹಾಗಾಗಿ, ಶಾಲೆ-ಕಾಲೇಜುಗಳಲ್ಲಿ ಅವರನ್ನು ಹದ್ದುಬಸ್ತಿಗೆ ತರಬೇಕಾಗಿರುತ್ತದೆ. ಇವೊತ್ತಿನ ದಿವಸ ಶಾಲೆ-ಕಾಲೇಜುಗಳಲ್ಲಿ ಸಮವಸ್ತ್ರವನ್ನು ಹೇಗೆ ಕಟ್ಟುನಿಟ್ಟಾಗಿ ಜಾರಿಗೆ ತಂದಿದ್ದಾರೆಯೋ ಹಾಗೆಯೇ ಮೊಬೈಲ್ ಬಳಕೆ ಮಾಡಬಾರದು ಎನ್ನುವುದನ್ನು ಕಡ್ಡಾಯವಾಗಿ ಜಾರಿಗೆ ತರಬೇಕು. ಪ್ರಸ್ತುತ ಮೊಬೈಲ್ ಬಳಕೆಯನ್ನು ಶಾಲೆ-ಕಾಲೇಜುಗಳಲ್ಲಿ ನಿಷೇಧ ಮಾಡಿದ್ದರೂ ಸಹ, ಅದು ಶೇಕಡ 100 ರಷ್ಟು ಸಾಧ್ಯವಾಗಿರುವುದಿಲ್ಲ.

ಇವೊತ್ತಿನ ಒಂದು ಒತ್ತಡದ ಜೀವನದಲ್ಲಿ ಮಕ್ಕಳು ಯಾವ ರೀತಿ ಆಗಿದ್ದಾರೆಂದರೆ, ಒಂದು ಪರೀಕ್ಷೆಯಲ್ಲಿ ಮಾರ್ಕ್ಸ್ ತೆಗೆಯುವುದಕ್ಕೂ ಸಹ ತಂದೆ-ತಾಯಿಗಳ ಒತ್ತಡ ಇರುತ್ತದೆ. ತಂದೆ-ತಾಯಿಗಳಾದ ನಾವೆಲ್ಲರೂ ಸಹ ಇವೊತ್ತಿನ ದಿವಸ ಮಕ್ಕಳನ್ನು ಇಂಜಿನಿಯರಿಂಗ್ ಅಥವಾ ಮೆಡಿಕಲ್ ಓದಬೇಕೆಂದು ಒತ್ತಡ ಹಾಕುತ್ತಿದ್ದೇವೆ. ಅದನ್ನು ಬಿಟ್ಟು ಬೇರೆ ಯಾವುದನ್ನು ಸಹ ನಾವು ಮಕ್ಕಳ ತಲೆಯಲ್ಲಿ ಹಾಕುವುದಿಲ್ಲ. ಇವೊತ್ತಿನ ದಿವಸ ನಾವು ಒಂದು ಸಣ್ಣ ಮಗುವನ್ನು, "ನೀನು ಮುಂದೆ ದೊಡ್ಡವನಾದ ಮೇಲೆ ಏನಾಗುತ್ತೀಯಾ" ಎಂದು ಕೇಳಿದರೆ, ಆ ಮಗು, "ನಾನು ಪೊಲೀಸ್ ಆಗುತ್ತೇನೆ" ಎಂದು ಹೇಳುತ್ತದೆ. ತದನಂತರ, ಆ ಮಗು ಸ್ವಲ್ಪ ದೊಡ್ಡವನಾಗಿ ಬೆಳೆದ ನಂತರ ಕೇಳಿದರೆ, "ನಾನು ಇನ್ಸ್‌ಪೆಕ್ಟರ್ ಆಗುತ್ತೇನೆ" ಎಂದು ಹೇಳುತ್ತದೆ. ತದನಂತರ, ಆ ಮಗು ಒಂದು ವಯಸ್ಸಿಗೆ ಬಂದ ನಂತರ ಆ ಮಗುವಿಗೆ ಧೈರ್ಯ ಬಂದಿರುತ್ತದೆ. ಆಗ ನಾವು ಆ ಮಗುವನ್ನು ಏನಾಗುತ್ತೀಯಾ ಎಂದು ಕೇಳಿದರೆ, "ನಾನು ಶಾರುಖ್ ಖಾನ್ ಆಗುತ್ತೇನೆ" ಎಂದು ಹೇಳುತ್ತದೆ. ಅಂದರೆ, ಅವನ ಒತ್ತಡ ಯಾವ ಯಾವ ವಯಸ್ಸಿಗೆ ಬದಲಾವಣೆಯಾಗುತ್ತದೆ ಎನ್ನುವುದನ್ನು ನಾವು ಮೊದಲು ನೋಡಬೇಕಾಗಿದೆ. ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು. ಇವೊತ್ತಿನ ದಿವಸ ತಾಯಿಯಾದವಳು ತನ್ನ ಮಕ್ಕಳ ಮುಂದೆ ಸರಿಯಾಗಿರಬೇಕು. ಅಂದರೆ, ಮಕ್ಕಳು ಓದುವಂತಹ ಸಮಯದಲ್ಲಿ ತಾಯಿಯಾದವಳು ಟಿವಿ ನೋಡುತ್ತಾ ಕುಳಿತಿರುತ್ತಾಳೆ.

(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀಮತಿ ಭಾರತಿ ಶೆಟ್ಟಿಯವರು ಪೀಠವನ್ನು ಅಲಂಕರಿಸಿದರು)

ಅಂತಹ ಸಂದರ್ಭಗಳು ಇವೊತ್ತಿನ ದಿವಸ ಬಹಳ ಆಗಿವೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಳೆದ ಒಂದು ವಾರದ ಹಿಂದೆ ಮಂಗಳೂರಿನ ದಿಗಂತ್ ಎನ್ನುವ ದ್ವಿತೀಯ ಪಿಯು ಓದುತ್ತಿರುವಂತಹ ಒಬ್ಬ ಯುವಕ, ಅತಿಯಾದ ಒತ್ತಡದಿಂದ ತನ್ನ ಮನೆ ಬಿಟ್ಟು ಹೋಗಿರುತ್ತಾನೆ. ಇಂತಹ ಒತ್ತಡಗಳು ತಂದೆ-ತಾಯಿಗಳಾದ ನಾವು ಮಕ್ಕಳ ಮೇಲೆ ಹಾಕಲೇಬಾರದು. ಮಕ್ಕಳಿಗೂ ಸಹ ತನ್ನ ಸ್ವಂತಿಕೆ ಬಳಕೆ ಮಾಡಲು ನಾವು ಬಿಡಬೇಕು. ಅದನ್ನು ಬಿಟ್ಟು ನಾವು ಹೇಗೆ ಮಾಡುತ್ತೇವೆಂದರೆ, ಓದುವ ವಿಷಯ ಬಂದಾಗ ನಾವು ಮಕ್ಕಳಿಗೆ ಒತ್ತಡ ಹಾಕುತ್ತೇವೆ. ಬಾಕಿ ವಿಷಯಗಳಲ್ಲಿ ನಾವು ಲೂಸ್ ಬಿಡುತ್ತೇವೆ. ಅಂದರೆ, ಆ ಮಕ್ಕಳಿಗೆ ತಮ್ಮ ತಂದೆ ತಾಯಿಗಳು ಯಾವ ವಿಚಾರದಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾರತಮ್ಯ ಮಾಡುತ್ತಾರೆ ಎನ್ನುವುದು ಅವರಿಗೆ ಗೊತ್ತಾಗಿಬಿಟ್ಟಿರುತ್ತದೆ. ಅದರಿಂದಾಗಿ, ಆತ ಹೇಳುವುದಿಲ್ಲ, ಕೇಳುವುದಿಲ್ಲ ಒತ್ತಡವನ್ನು ಮೀರಿ ತನ್ನದೇ ಆದಂತಹ ದಾರಿಯಲ್ಲಿ ಹೋಗುವಂತಹ ಕೆಲಸ ಮಾಡುತ್ತಾನೆ.

ಇನ್ನು ಹುಡುಗಿಯರ ವಿಚಾರಕ್ಕೆ ಬಂದಾಗ, ಬಹಳ ಬೇಸರವೆನಿಸುತ್ತದೆ. ನಾನು ಒಂದು ಶಾಲೆ-ಕಾಲೇಜಿನ ಬಗ್ಗೆ ಮಾತನಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಕಳೆದ ತಿಂಗಳಿನಲ್ಲಿ ಒಂದು ಕಾಲೇಜಿನಲ್ಲಿ ಮೆಡಿಕಲ್ ಚೆಕ್‌ಅಪ್ ನಡೆಯುತ್ತದೆ. ಅದರಲ್ಲಿ ನಿಜವಾಗಿಯೂ ಎಂತಹ ಒಂದು ವಿಷಯ ಹೊರಬಿತ್ತು ಎಂದರೆ, ಸುಮಾರು 165 ಹುಡುಗಿಯರು ಅಂದರೆ ಪಿಯುಸಿ ಗಿಂತಲೂ ಒಳಗೆ ಇದ್ದಂತಹ ಹುಡುಗಿಯರು ಅಂದರೆ 15 ಜನ ಎಸ್‌ಎಸ್‌ಎಲ್‌ಸಿ ಹುಡುಗಿಯರು ಗರ್ಭಾವತಿಯಾಗಿರುತ್ತಾರೆ ಎನ್ನುವ ವಿಷಯ ಹೊರಬಿದ್ದಿರುತ್ತದೆ. ಇದು ಎಂತಹ ಒಂದು ವಿಷಯ ಎಂದರೆ, ಅದು ಕೂಡ ನಮ್ಮ ಭಾಗದಲ್ಲಿಯೇ ನಡೆದಿರುವಂಥದ್ದನ್ನು ನಾನು ಹೇಳುತ್ತಿದ್ದೇನೆ. ಇದು ಬಹಳ ಗಂಭೀರವಾದಂತಹ ವಿಷಯವಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ಪೋಷಕರನ್ನು ಕರೆಯಿಸಿ ಕೌನ್ಸಿಲಿಂಗ್ ಮಾಡಿದಾಗ, ಈ ವಿಚಾರ ಅವರಿಗೂ ಸಹ ಗೊತ್ತಿರುವುದಿಲ್ಲ. ತದನಂತರ, ಪೋಷಕರು ಈ ಬಗ್ಗೆ ತಮ್ಮ ಮಕ್ಕಳನ್ನು ಕೇಳಿದರೆ, "ಹೌದು, ನನಗೆ ಬಾಯ್‌ಫ್ರೆಂಡ್ ಇದ್ದಾನೆ. ನಾನು ಅವನ ಜೊತೆ ಹೋಗುತ್ತೇನೆ. ಅವನ ಜೊತೆ ಡೇಟಿಂಗ್ ಮಾಡುತ್ತೇನೆ" ಎಂದು ಹೇಳುತ್ತಾರೆ. ಅಂದರೆ, ಈ ವ್ಯವಸ್ಥೆಗಳು ಎಷ್ಟು ಬದಲಾವಣೆಯಾಗುತ್ತವೆ ಎಂಬುದನ್ನು ನಾವು ಗಮನಿಸಬೇಕು. ಇವೊತ್ತಿನ ದಿವಸ ಸರ್ಕಾರಿ ಶಾಲೆ-ಕಾಲೇಜುಗಳಲ್ಲಿ ಓದುತ್ತಿರುವಂತಹ ಮಕ್ಕಳು ಅಷ್ಟು ಫಾರ್ವರ್ಡ್ ಇರುವುದಿಲ್ಲ. ದಯಮಾಡಿ ಈ ವಿಷಯದಲ್ಲಿ ತಪ್ಪು ಸಂದೇಶ ಹೋಗಬಾರದೆಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇವೊತ್ತಿನ ದಿವಸ ಕಾನ್ವೆಂಟ್ ಶಾಲೆಯಲ್ಲಿ ಓದುತ್ತಿರುವಂತಹ ಹುಡುಗಿಯರಲ್ಲಿ ಸ್ವಲ್ಪ ಆಟಿಟ್ಯೂಡ್ ಚೇಂಜ್ ಇರುತ್ತದೆ. ಆದರೆ, ಸರ್ಕಾರಿ ಶಾಲೆಯಲ್ಲಿ ಅಥವಾ ಪೂರ್ ಕಂಡೀಷನ್‌ನಲ್ಲಿ ಓದುತ್ತಿರುವಂತಹ ಮಕ್ಕಳಲ್ಲಿ ಆ ಧೈರ್ಯ ಇರುವುದಿಲ್ಲ. ಅವರು ಕೂಡ ದಾರಿ ತಪ್ಪಿರುವಂತಹ ಘಟನೆಗಳು ಬಹಳ ಇವೆ. ಮುಳ್ಳಿನ ಮೇಲೆ ಬಟ್ಟೆ ಬಿದ್ದರೂ ಅಥವಾ ಬಟ್ಟೆ ಮೇಲೆ ಮುಳ್ಳು ಬಿದ್ದರೂ ಸಹ ಹಾಳಾಗುವುದು ನಮ್ಮ ಹುಡುಗಿಯ ಜೀವನ ಎನ್ನುವುದನ್ನು ನಾವು ತಿಳಿಯಬೇಕು. ಆಗ ನಮಗೆ ಆ ಬೋಧನೆಗಳು ಸಹ ಆಗುತ್ತಿದ್ದವು. ಒಂದು ವೇಳೆ ನಾವು ಶಾಲೆಯಿಂದ ತಡವಾಗಿ ಬಂದರೆ, "ಏತಕ್ಕೆ ತಡವಾಗಿ ಬಂದೆ, ಎಲ್ಲಿಗೆ ಹೋಗಿದ್ದೆ" ಎಂದು ನಮ್ಮನ್ನು ಕೇಳುತ್ತಿದ್ದರು. ಆದರೆ, ಇವೊತ್ತಿನ ದಿವಸ ಹುಡುಗರನ್ನು ಕೇಳುವುದಿಲ್ಲ ಹಾಗೂ ಹುಡುಗಿಯರನ್ನು ಸಹ ಕೇಳುವುದಿಲ್ಲ. ಅವರು ಫ್ರೀಯಾಗಿ ಇರಲಿ ಎಂದು ಹೇಳುತ್ತಾರೆ. ಒಂದು ವೇಳೆ ಪೋಷಕರು ತಮ್ಮ ಮಕ್ಕಳನ್ನು ಕೇಳಿದರೂ ಸಹ, ಅವರು ನಮಗೆ ಸ್ಪೆಷಲ್ ಕ್ಲಾಸ್ ಇತ್ತು ಎಂದು ಹೇಳುತ್ತಾರೆ. ಅಲ್ಲದೇ, ತಂದೆ-ತಾಯಿಗಳು ಸಹ ಅವರದ್ದೇ ಆದಂತಹ ಒತ್ತಡದಲ್ಲಿ ಅವರು ಇರುತ್ತಾರೆ. ಒಂದು ಬಿಗಿಯಾದಂತಹ ವಾತಾವರಣ ಎಲ್ಲಿಯವರೆಗೂ ಬರುವುದಿಲ್ಲವೋ, ಅಲ್ಲಿಯವರೆಗೂ ಈ ಒಂದು ಕಠಿಣ ಪರಿಸ್ಥಿತಿಗಳು ನಡೆಯುತ್ತಿರುತ್ತವೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಇವೊತ್ತಿನ ದಿವಸ ಮಕ್ಕಳು ಖಿನ್ನತೆಗೆ ಒಳಗಾಗುವಂತಹ ಪರಿಸ್ಥಿತಿ ಇರುತ್ತದೆ. ಇತ್ತೀಚೆಗೆ ಒಂದು ಹುಡುಗಿ ಮತ್ತು ಅವರ ತಂದೆ ತಾಯಿಗಳು ನನ್ನ ಬಳಿ ಬಂದಿದ್ದರು . ಆ ಹುಡುಗಿ, "ನಾನು ಸೈನ್ಸ್ ಮಾಡಿ ಮುಂದೆ ಡಾಕ್ಟರ್ ಆಗಬೇಕೆಂದು ಹೇಳುತ್ತಿದ್ದಳು. ಇವೊತ್ತಿನ ದಿವಸ ನಮ್ಮ ಸಮಾಜದಲ್ಲಿ ಇಂತಹವರು ಸಹ ಅಲ್ಲೊಬ್ಬ ಇಲ್ಲೊಬ್ಬ ಹುಡುಗಿಯರು ನಮಗೆ ಕಾಣಿಸುತ್ತಾರೆ. ಆ ಹುಡುಗಿಗೆ ನನ್ನಿಂದ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನಾಗಬೇಕಾಗಿತ್ತು ಎಂದು ಕೇಳಿದೆನು. ಅದಕ್ಕೆ ಆ ಹುಡುಗಿ, "ನಾನು ಸೈನ್ಸ್ ವಿಷಯ ತೆಗೆದುಕೊಳ್ಳಬೇಕಾಗಿತ್ತು. ಆದರೆ, ನಾನು ಆರ್ಟ್ಸ್ ವಿಷಯ ತೆಗೆದುಕೊಂಡಿರುತ್ತೇನೆ. ಏಕೆಂದರೆ, ಅಷ್ಟು ಶುಲ್ಕ ಕಟ್ಟುವುದಕ್ಕೆ ನಮ್ಮ ಬಳಿ ಹಣ ಇರಲಿಲ್ಲ. ನಮ್ಮ ಕುಟುಂಬಕ್ಕೆ ಹಣದ ತೊಂದರೆ ಇದೆ" ಎಂದು ಈ ಹುಡುಗಿ ನನ್ನ ಬಳಿ ಹೇಳಿರುತ್ತದೆ. ವಿಚಿತ್ರ ಏನೆಂದರೆ, ಆ ಹುಡುಗಿಯ ತಂದೆ-ತಾಯಿ ಇಬ್ಬರೂ ಸಹ ಬೆಂಗಳೂರಿಗೆ ಕೂಲಿ ಕೆಲಸ ಮಾಡುವುದಕ್ಕೆ ಬಂದಿರುತ್ತಾರೆ. ಅನಂತರ, ಆ ಹುಡುಗಿ ನನಗೆ, "ನಾನು ಈ ರೀತಿ ಬಂದಿದ್ದೇನೆ. ಈಗಾಗಲೇ ಕಾಲೇಜು ಪ್ರಾರಂಭವಾಗಿ ಮೂರು ತಿಂಗಳು ಕಳೆದಿದೆ. ಆದರೆ, ನಾನು ಸೈನ್ಸ್ ಓದಬೇಕು. ನನ್ನ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಿ" ಎಂದು ಕೇಳಿಕೊಂಡಿರುತ್ತಾರೆ. ಆ ನಂತರ ನಾನು ಬೆಂಗಳೂರಿಗೆ ಬಂದು ಆರ್ಟ್ಸ್‌ನಿಂದ ಸೈನ್ಸ್‌ಗೆ ಟ್ರಾನ್ಸ್‌ಫರ್ ಮಾಡಿಸಿ, ಆ ಹುಡುಗಿಗೆ ಒಂದು ವ್ಯವಸ್ಥೆ ಮಾಡಿರುತ್ತೇನೆ. ಇಂತಹ ಒಂದು ವ್ಯವಸ್ಥೆಯಲ್ಲಿ ಈ ರೀತಿಯ ಹುಡುಗಿಯರು ಸಹ ಇರುತ್ತಾರೆ. ಇವೊತ್ತಿನ ದಿವಸ ಕಾಲೇಜುಗಳಲ್ಲಿ ಓದುತ್ತಿರುವಂತಹ ವಿದ್ಯಾರ್ಥಿನಿಯರು ಒಬ್ಬರಿಗೊಬ್ಬರು ಪೈಪೋಟಿ ನೀಡಿ ಓದುವುದನ್ನು ಮರೆತುಬಿಟ್ಟಿದ್ದಾರೆ. ಅದರ ಬದಲಾಗಿ, ತಮಗೆ ಬೇಕಾದಂತಹ ದಾರಿಗಳನ್ನು ತಾವು ಆರಿಸಿಕೊಳ್ಳುವಂತಹ ಕೆಲಸ ಆಗುತ್ತಿದೆ.

ಇನ್ನು ಮದ್ಯಪಾನ ವಿಷಯ ಮಾತನಾಡುವುದಾದರೆ, ಮದ್ಯಪಾನ ಎನ್ನುವ ವಿಷಯ ಬಂದರೆ ಇದು ನಿಜವಾಗಿಯೂ ಎಷ್ಟು ದುಬಾರಿಯಾದರೂ ಸಹ ಇವೊತ್ತಿನ ದಿವಸ ಹುಡುಗರಿಗೆ ಸುಲಭವಾಗಿ ಸಿಗುವಂತಹ ವ್ಯವಸ್ಥೆ ಆಗಿದೆ. ನಮ್ಮ ಭಾಗದಲ್ಲಿ ಇವೊತ್ತಿನ ದಿವಸ ಕಿರಾಣಿ ಅಂಗಡಿಗಳಲ್ಲಿ ಸಿಗುತ್ತಿದೆ. ಇದು ಬಹಳ ದುಃಖಕರವಾದಂತಹ ವಿಷಯವಾಗಿದೆ. ನಮ್ಮ ಭಾಗದಲ್ಲಿ ಪಾನ್ ಶಾಪ್‌ಗಳು ಹಾಗೂ ಕಿರಾಣಿ ಅಂಗಡಿಗಳು ಇದ್ದು, ಅಲ್ಲಿ ಮದ್ಯಪಾನ ಸುಲಭವಾಗಿ ಸಿಗುತ್ತವೆ. ಅಂತಹ ಅಂಗಡಿಗಳಿಗೆ ಸಣ್ಣ ಮಕ್ಕಳು ಮದ್ಯಪಾನ ಬೇಕೆಂದು ಕೇಳಿದರೆ ಅವರಿಗೆ ಸುಲಭವಾಗಿ ಸಿಗುವಂತಹ ವ್ಯವಸ್ಥೆ ಇದೆ. ಮದ್ಯಪಾನ ಮಾಡುವುದು ಇವೊತ್ತಿನ ದಿವಸ ಒಂದು ಫ್ಯಾಶನ್ ಆಗಿಬಿಟ್ಟಿದೆ. ಅಂದರೆ, ಕುಡಿಯುವುದರಲ್ಲಿ ದೊಡ್ಡ ತಪ್ಪೇನು ಇಲ್ಲವೆಂದು ರೆಡ್‌ವೈನ್ ಅನ್ನು ಸೇವನೆ ಮಾಡುತ್ತಾರೆ. ಅದರಿಂದಾಗಿ, ನಶೆ ಏನೂ ಏರುವುದಿಲ್ಲ. ಲೈಫ್ ಎಂಜಾಯ್ ಮಾಡುವುದಕ್ಕಾಗಿ ನಾವು ಇದನ್ನು ಕುಡಿಯುತ್ತೇವೆ ಎಂದು ಹೇಳುತ್ತಾರೆ. ಇವೊತ್ತಿನ ದಿವಸ ಸಣ್ಣ ಸಣ್ಣ ಪಾರ್ಟಿಗಳನ್ನು ಮಾಡತಕ್ಕಂತಹ ವ್ಯವಸ್ಥೆ ಕೂಡ ನಡೆಯುತ್ತಿದೆ. ಈ ರೀತಿಯ ಸಾಮಾಜಿಕ ಬಾಹಿರವಾದಂತಹ ಕೆಲಸಗಳು ಪೋಷಕರಾದ ನಮ್ಮಗಳಿಗೆ ಎಲ್ಲಿಯವರೆಗೂ ತಿಳಿಯುವುದಿಲ್ಲವೋ ಅಲ್ಲಿಯವರೆಗೂ ಈ ಒಂದು ವ್ಯವಸ್ಥೆ ಇದ್ದೇ ಇರುತ್ತದೆ.

ಇನ್ನು ಶಾಲೆ-ಕಾಲೇಜುಗಳಲ್ಲಿ ರ್‍ಯಾಗಿಂಗ್ ಎನ್ನುವ ಒಂದು ಕೆಟ್ಟ ಸಂಪ್ರದಾಯ ಇರುತ್ತದೆ. ಈ ರ್‍ಯಾಗಿಂಗ್ ಎನ್ನುವ ನೆಪದಲ್ಲಿ ವಿದ್ಯಾರ್ಥಿಗಳು, "ನನ್ನನ್ನು ಇಷ್ಟಪಡು, ನನ್ನನ್ನು ಪ್ರೀತಿಸು" ಎಂದು ಬಲವಂತಪಡಿಸುತ್ತಾರೆ. ಇತ್ತೀಚೆಗೆ ಹುಬ್ಬಳ್ಳಿಯಲ್ಲಿ 'ನೇಹಾ' ಎನ್ನುವ ವಿದ್ಯಾರ್ಥಿ ಕೊಲೆಯಾಗಿದ್ದು, ಎಂತಹ ತೀವ್ರವಾದಂತಹ ಘಟನೆ? ತಾಯಿ ತನ್ನ ಮಗಳನ್ನು ಕಾಲೇಜಿಗೆ ಬಿಡುವುದಕ್ಕೆ ಬಂದಾಗ, ತಾಯಿಯ ಎದುರಿನಲ್ಲಿಯೇ ಮಗಳಿಗೆ ಚಾಕು ಹಾಕಿದಂತಹ ಘಟನೆ ಬಹಳ ಭಯಾನಕವಾಗಿರುತ್ತದೆ. ಇಂತಹ ಒಂದು ಘಟನೆಯನ್ನು ನೋಡಿದಾಗ ನಿಜವಾಗಿಯೂ ಬಹಳ ಬೇಸರವಾಗುತ್ತದೆ. ಅಂದರೆ, ನಮ್ಮ ಯುವಜನತೆ ಇವೊತ್ತಿನ ದಿವಸ ಎಲ್ಲಿಗೆ ಹೋಗಿ ಮುಟ್ಟಿದ್ದಾರೆಂದು ಎನ್ನುವ ಪ್ರಶ್ನೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಡುತ್ತದೆ. ಎಂತಹ ಒಂದು ವಾತಾವರಣದಲ್ಲಿ ನಾವು ಇದ್ದೇವೆ ಎಂದರೆ, ಒಂದು ಹುಡುಗಿ ತನ್ನನ್ನು ಪ್ರೀತಿಸಲಿಲ್ಲ ಎಂದರೆ, ಆ ಹುಡುಗಿಗೆ ಆಸಿಡ್ ಹಾಕುವುದು ಇಲ್ಲವೇ ಚಾಕು ಹಾಕುವುದು. ಇಂತಹ ವ್ಯವಸ್ಥೆ ಸಮಾಜದಲ್ಲಿ ನಡೆಯುತ್ತಿರುವಾಗ ಅದನ್ನು ಬದಲಾವಣೆ ಮಾಡಿ, ಉತ್ತಮ ವಾತಾವರಣ ಸೃಷ್ಟಿ ಮಾಡಬೇಕಾದರೆ ನಾವು ಶಾಲೆ-ಕಾಲೇಜುಗಳನ್ನು ಬಿಗಿ ತರತಕ್ಕಂತಹ ಕೆಲಸ ಮಾಡಬೇಕಾಗುತ್ತದೆ. ಇವೊತ್ತಿನ ದಿವಸ ಒಂದೆರಡು ಕಾಲೇಜುಗಳಲ್ಲಿ ಯಾವ ರೀತಿ ಇದೆಯೆಂದರೆ ಉದಾಹರಣೆಗೆ ನಮ್ಮ ಭಾಗದಲ್ಲಿ ಗವರ್ನಮೆಂಟ್ ಡಿಗ್ರಿ ಕಾಲೇಜು ಮತ್ತು ಪ್ರೈವೇಟ್ ಕಾಲೇಜು ಕೂಡ ಇದೆ. ಗವನರ್ಮೆಂಟ್ ಕಾಲೇಜಿನಲ್ಲಿ ಲೆಕ್ಚರರ್ಸ್ ಇದ್ದಾರೆ, ಪಾಠ ನಡೆಯುತ್ತಿದ್ದರೂ ಸಹ ವಿದ್ಯಾರ್ಥಿಗಳು ಲಕ್ಷ್ಯ ನೀಡದೇ ಮೊಬೈಲ್ ನೋಡಿಕೊಂಡು ಅವರ ಮುಂದೆಯೇ ಹೋಗುತ್ತಿರುತ್ತಾರೆ. ಆದರೆ, ಸಂಸ್ಥೆ ಕಾಲೇಜುಗಳಲ್ಲಿ ಆ ರೀತಿ ಇರುವುದಿಲ್ಲ. ಅದರ ಬಗ್ಗೆ ನನಗೆ ಸಂಪೂರ್ಣ ಅರಿವು ಇರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಲೆಕ್ಚರರ್ಸ್‌ಗಳಿಗೆ ಅಂಜಿಕೊಳ್ಳುತ್ತಾರೆ ಮತ್ತು ತಮ್ಮ ಮೊಬೈಲ್‌ಗಳನ್ನು ಬಚ್ಚಿಟ್ಟುಕೊಳ್ಳುತ್ತಾರೆ ಹಾಗೂ ಮೊಬೈಲ್ ಅನ್ನು ಸೈಲೆಂಟ್ ಮೋಡ್‌ಗೆ ಹಾಕುತ್ತಾರೆ. ವ್ಯತ್ಯಾಸ ಎಷ್ಟು ಇದೆ ಎಂಬುದನ್ನು ನಾವು ಗಮನಿಸಬೇಕು. ಇವೊತ್ತಿನ ದಿವಸ ಅಂತಹ ಪ್ರತಿಷ್ಠಿತ ಕಾಲೇಜುಗಳಲ್ಲಿಯೇ ಕೊಲೆ ನಡೆಯುತ್ತಿದೆ, ಆಸಿಡ್ ಹಾಕುತ್ತಿದ್ದಾರೆಂದರೆ ನಿಜವಾಗಿಯೂ ನಾವು ಇವೊತ್ತಿನ ದಿವಸ ಸಮಾಜದಲ್ಲಿ ಎಂತಹ ಘಟನೆಗಳು ನಡೆಯುತ್ತಿರುವುದನ್ನು ನಾವು ಇಲ್ಲಿ ಮಾತನಾಡಬೇಕಾದರೆ, ಇಂತಹ ವ್ಯವಸ್ಥೆಯನ್ನು ಹದ್ದುಬಸ್ತಿಗೆ ತರಬೇಕಾದರೆ, ಅದಕ್ಕೆ ಒಂದು ಸರಿಯಾದಂತಹ ಕಾನೂನನ್ನು ತರಬೇಕಾಗುತ್ತದೆ. ಇವೊತ್ತಿನ ದಿವಸ ಬಾಲಾಪರಾಧಗಳು ತಿಳಿಯಲಾರದೇ ಆಗುತ್ತವೆ. ಅವರಿಗೆ ಹೊಡೆದ ಮೇಲೆ ಏನು ಮಾಡುವುದಕ್ಕಾಗುವುದಿಲ್ಲ. ಅಂತಹ ಪರಿಸ್ಥಿತಿಗಳು ಇರುತ್ತವೆ. ಅದೆಲ್ಲಕ್ಕಿಂತಲೂ ಹೆಚ್ಚಾಗಿ ಮೊಬೈಲ್ ಬಳಕೆ ಬಂದಾಗ ಫೇಸ್‌ಬುಕ್ ಬಳಕೆದಾರರು 3.89 ಬಿಲಿಯನ್ ಇದ್ದಾರೆ. ಇವೊತ್ತಿನ ದಿವಸ ಮೊಬೈಲ್ ಅನ್ನು ಎಷ್ಟು ಜನ ಬಳಸುತ್ತಿದ್ದೇವೆಂದು ನಾವು ಗಮನಿಸಬೇಕು. ಈ ಹಿಂದೆ ಮೊಬೈಲ್ ಎನ್ನುವುದು ಒಂದು ಟೈಮಿಗೆ ಬಿಸಿನೆಸ್‌ಮ್ಯಾನ್‌ಗೆ ಅನುಕೂಲವಾಗುತ್ತದೆ. ಒಂದು ಟೈಮಿಗೆ ಡೇಟಾಗಳನ್ನು ತಯಾರು ಮಾಡುವುದಕ್ಕೆ ಉಪಯೋಗವಾಗುತ್ತದೆ ಎಂದು ಇತ್ತು. ಆದರೆ, ಇವೊತ್ತಿನ ದಿವಸ ಮೊಬೈಲ್ ಎನ್ನುವುದು ಒಂದು ಫ್ಯಾಶನ್ ಆಗಿಬಿಟ್ಟಿದೆ. ಹಾಗಾಗಿ, ಮೊಬೈಲ್ ಅನ್ನು ಇವೊತ್ತಿನ ದಿನ ಎಷ್ಟು ಜನ ಬಳಕೆ ಮಾಡುತ್ತಿದ್ದಾರೆಂದರೆ, 3.89 ಬಿಲಿಯನ್ ಫೇಸ್‌ಬುಕ್ ಬಳಕೆದಾರರು; ಯೂಟ್ಯೂಬ್ ಅನ್ನು 2.70 ಶತಕೋಟಿ ಬಳಕೆದಾರರು; ವಾಟ್ಸಾಪ್ ಅನ್ನು 2.7 ಬಿಲಿಯನ್ ಬಳಕೆದಾರರು ಉಪಯೋಗಿಸುತ್ತಿದ್ದಾರೆ; ಇನ್‌ಸ್ಟಾಗ್ರಾಮ್ 2.35 ಶತಕೋಟಿ ಬಳಕೆದಾರರು;

(ಮುಂದು)

(209) 11.03.2025 4.30 ವೈಎಲ್-ಎಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ಶ್ರೀಮತಿ ಹೇಮಲತಾ ನಾಯಕ್ (ಮುಂದು):-

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಮಾರು 12, 15 ವರ್ಷ ವಯಸ್ಸಿನ ಮಕ್ಕಳು ಸಾಮಾಜಿಕ ಮಾಧ್ಯಮದಲ್ಲಿ ಶೇಕಡ 87 ರಷ್ಟು ಮಂದಿ ಇದ್ದಾರೆ. ಈಗಿನ ಯುವಕರು ಟಿ.ವಿ. ಯಲ್ಲಿ ವರದಿಯಾಗುವಂಥ ವಿಚಾರವನ್ನು ನೋಡಿದಾಗ, 'ಹೇಳುವುದು ಒಂದು, ಉಪಯೋಗಿಸುವುದು ಒಂದು' ಎನ್ನುವ ರೀತಿ ಆಗುತ್ತಿದೆ. ಇಷ್ಟರ ಮಟ್ಟಿಗೆ ಮಾಧ್ಯಮ ಮುಂದುವರೆದಿದೆ. ಇತ್ತೀಚೆಗೆ ಕೆಲವೊಂದು ಮುಂದುವರೆದಂಥ ಕಾಲೇಜಿನಲ್ಲಿ ಡ್ರಗ್ಸ್ ಸಹ ಸಿಗುತ್ತಿದೆ. ಬೆಂಗಳೂರಿನ ಪ್ರತಿಯೊಂದು ಶಾಲಾ-ಕಾಲೇಜಿನ ಮುಂದೆ ಐಸ್ ಕ್ರೀಂ ಇರಬಹುದು ಅಥವಾ ಯಾವುದಾದರೂ ಫುಡ್‌ನೊಳಗೆ ಡ್ರಗ್ಸ್ ಮಿಶ್ರಣ ಮಾಡಿ, ಮಾರಾಟ ಮಾಡುತ್ತಿದ್ದು, ಅಲ್ಲಿರುವ ಮಕ್ಕಳು ಅದಕ್ಕೆ ಅವಲಂಬಿತರಾಗುವಂಥ ಕೆಲಸ ಬಹಳ ನಡೆಯುತ್ತಿದೆ. ಒಟ್ಟಾರೆಯಾಗಿ ಇದರ ಬಗ್ಗೆ ಹೇಳುವುದಾದರೆ, ನಾವು ಒಂದು ಸುಭದ್ರವಾದ ಕಾನೂನು ತರಬೇಕು. ಮಕ್ಕಳನ್ನು ಎಷ್ಟರ ಮಟ್ಟಿಗೆ ನೋಡಿಕೊಳ್ಳುತ್ತೇವೆ, ಕಾಳಜಿವಹಿಸುತ್ತೇವೆ, ದಾರಿ ತೋರಿಸಿಕೊಡುತ್ತೇವೆ ಎಂಬುದರ ಮೇಲೆ ಉತ್ತಮ ಭವಿಷ್ಯ ನಿರ್ಮಾಣ ಮಾಡಿಕೊಳ್ಳುತ್ತಾರೆ. ಕೆಲವು ಮನೆಗಳಲ್ಲಿ ಮದ್ಯಪಾನ ಮಾಡಿಕೊಂಡು ತಂದೆ ಮನೆಗೆ ಬಂದಾಗ ಆತನ ಮಗನಿಗೆ 'ನನ್ನ ಅಪ್ಪನೇ ಮದ್ಯಪಾನ ಮಾಡುವಾಗ ನಾನು ಏತಕ್ಕೆ ಮದ್ಯಪಾನ ಮಾಡಬಾರದೆಂದು' ಸಲುಗೆಯಾಗುತ್ತದೆ. ಜೊತೆಗೆ 'ನನ್ನ ಅಪ್ಪನೇ ಸಿಗರೇಟ್ ಸೇದುವಾಗ ನಾನು ಏತಕ್ಕೆ ಸೇದಬಾರದು' ಎನ್ನುವಂಥ ಭಾವನೆ ಬರುತ್ತದೆ.

ಮನೆಯ ವಾತಾವರಣ ಹೇಗೆ ಇರಬೇಕೆಂದರೆ, ಮನೆಯಲ್ಲಿರುವ ತಂದೆಯವರು ಮದ್ಯಪಾನ ದುಶ್ಚಟ್ಟಕ್ಕೆ ಒಳಗಾಗದೇ ಇದ್ದಾಗ ಮಕ್ಕಳಿಗೆ ಅದರ ಸಲುಗೆ ಸಿಗುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ, ಶೇಕಡ 100 ಕ್ಕೆ 100 ರಷ್ಟು ತಂದೆ-ಮಗ ಇಬ್ಬರೂ ಒಟ್ಟಿಗೆ ಕುಳಿತುಕೊಂಡು ಮದ್ಯಪಾನ ಮಾಡುವಂಥ ವಾತಾವರಣ ನಿರ್ಮಾಣವಾಗಿದೆ. ಒಂದು ದೃಶ್ಯ ಈಗಲೂ ನನ್ನ ಕಣ್ಣ ಮುಂದೆ ಬರುತ್ತದೆ. ನಾನೂ ನನ್ನ ಮಗ ಇಬ್ಬರೂ ಜೊತೆಯಲ್ಲಿಯೇ ಇದ್ದಾಗ ನನ್ನ ಮಗ 'ನೋಡಿ ಮಮ್ಮಿ ಅಲ್ಲಿ' ಎಂದು ಹೇಳಿದ. ನಾನು ಏನಿರಬಹುದೆಂದು ತಿರುಗಿ ನೋಡಿದಾಗ 'ತಂದೆ-ಮಗ ಇಬ್ಬರೂ ಜೊತೆಯಲ್ಲಿಯೇ ಕುಳಿತು ಮದ್ಯಪಾನ' ಮಾಡುತ್ತಿದ್ದರು. ಇಂತಹ ಒಂದು ವಾತಾವರಣ ಇದೆ. ಯಾವಾಗಲೂ ಒಂದು ಮನೆಯಲ್ಲಿ ಮಕ್ಕಳು ಹಿಡಿತಕ್ಕೆ ಸಿಗಬೇಕೆಂದರೆ ಪೋಷಕರು ಭದ್ರವಾಗಿರಬೇಕು. ನಾವು ನೇರವಾಗಿ ಇದ್ದಾಗ ಮಾತ್ರ ಕಠಿಣವಾದ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಸಾಧ್ಯ. ನಮ್ಮ ಮಕ್ಕಳನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುವಂಥ ವಾತಾವರಣವನ್ನು ನಾವು ನಿರ್ಮಾಣ ಮಾಡಿದರೆ, ಮುಂದೆ ಕೂಡ ಒಬ್ಬ ಸುಭದ್ರ ನಾಗರಿಕ ಹೊರಗೆ ಬರುತ್ತಾನೆ ಎನ್ನುವಂಥ ಮಾತನ್ನು ಹೇಳುತ್ತಾ, ಇಷ್ಟು ಮಾತನಾಡಲು ನನಗೆ ಅವಕಾಶ ಕಲ್ಪಿಸಿದ್ದಕ್ಕೆ ಧನ್ಯವಾದಗಳನ್ನರ್ಪಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ ಉಮಾಶ್ರೀ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೇ, ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಗೆ ಸಂಬಂಧಿಸಿದಂತೆ ನಮ್ಮ ಸದನದಲ್ಲಿ ಮಕ್ಕಳಿಗಾಗಿ ವಿಶೇಷವಾಗಿ ಸಮಯವನ್ನು ಕಾಯ್ದಿರಿಸಿ ಅವರ ಸಮಸ್ಯೆಗಳನ್ನು ಆಲಿಸುವುದರ ಜೊತೆಗೆ ಸಮಾಜದಲ್ಲಿರುವ ಲೋಪದೋಷಗಳನ್ನು ಚರ್ಚಿಸುವ ಮೂಲಕ ಒಳ್ಳೆಯ ನಿರ್ಧಾರಗಳು ಈ ಸದನದ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಹೋಗಿ, ಅದರ ಮೂಲಕ ಪೋಷಕರು ಮಕ್ಕಳುಗಳನ್ನು ಸಂರಕ್ಷಣೆ ಮಾಡುವಂಥ ಕೆಲಸವಾಗಲಿ ಎಂದು ಹಾರೈಸುತ್ತೇನೆ. ಮಾನವ ಹಕ್ಕುಗಳ ಉಪ ವಿಭಾಗದಲ್ಲಿ ಈ ಮಕ್ಕಳ ಹಕ್ಕು ಬರುತ್ತದೆ. ಇದು ಅಪ್ರಾಪ್ತ ವಯಸ್ಕರಿಗೆ ನೀಡಲಾಗಿರುವಂಥ ಸಾಮಾಜಿಕ ರಕ್ಷಣೆ ಮತ್ತು ಮಕ್ಕಳ ಬಗ್ಗೆ ಕಾಳಜಿಯನ್ನು ವಹಿಸಬೇಕಾಗಿರುವಂಥ ವಿಚಾರಗಳು ಇದರಲ್ಲಿ ಗಮನಿಸಬಹುದು. ಬಹಳ ಮುಖ್ಯವಾಗಿ ಮಕ್ಕಳಿಗೆ ಬೇಕಾಗಿರುವುದು ತಂದೆ-ತಾಯಿಯವರೊಂದಿಗಿನ ಒಡನಾಟ. ಯಾವುದೇ ಕುಟುಂಬದಲ್ಲಿ ತಂದೆ-ತಾಯಿಗಳ ಜೊತೆ ಆ ಮಗು ಹುಟ್ಟಿನಿಂದಲೂ ಸಂಪೂರ್ಣವಾಗಿ ತನ್ನನ್ನು ತಾನು ನಿಬಾಯಿಸಿಕೊಳ್ಳುವ ವಯಸ್ಸು ಬರುವವರೆಗೂ ತಂದೆ-ತಾಯಿಯವರ ಮಾರ್ಗದರ್ಶನ, ಒಡನಾಟ ಬಹಳ ಮುಖ್ಯವಾಗುತ್ತದೆ. ತಂದೆ-ತಾಯಿಯವರ ಮೂಲಕ ಶಿಕ್ಷಣ, ಆರೋಗ್ಯ ಇದೆಲ್ಲವನ್ನೂ ಸಾಮಾಜಿಕವಾಗಿ ರಕ್ಷಣೆ ಮಾಡುವುದು ಪೋಷಕರ ಕರ್ತವ್ಯವಾಗಿರುತ್ತದೆ.

ಮಾನವ ಹಕ್ಕುಗಳಲ್ಲಿ ಕೆಲವೊಂದು ವಿಚಾರಗಳನ್ನು ಉಲ್ಲೇಖ ಮಾಡಲಾಗಿರುತ್ತದೆ. ಅದೇನೆಂದರೆ, ಯಾವ ರೀತಿ ಮಕ್ಕಳನ್ನು ರಕ್ಷಣೆ ಮಾಡಬೇಕು, ಯಾವ ರೀತಿ ಮಾನಸಿಕವಾಗಿ/ದೈಹಿಕವಾಗಿ ತೊಂದರೆ ಕೊಡಬಾರದು, ಅವರ ಲಿಂಗ ಭೇದ ಮಾಡುವುದು, ಲೈಂಗಿಕ ದೃಷ್ಟಿಕೋನದಲ್ಲಿ ನೋಡುವುದು ಅಥವಾ ಬಣ್ಣ ನೋಡಿ ಅವರನ್ನು ಅವಹೇಳನ ಮಾಡುವುದು, ಧರ್ಮವನ್ನು ಹಿಯಾಳಿಸಿ ಮಾತನಾಡುವುದು, ಅವರ ಜನಾಂಗಿಯತೆ ಬಗ್ಗೆ ಕೇವಲವಾಗಿ ಮಾತನಾಡುವುದು, ಅವರ ದೇಹದ ಆಕಾರ, ಗುಣ, ಲಕ್ಷಣದ ಬಗ್ಗೆ ಕೇವಲವಾಗಿ ಮಾತನಾಡುವುದು, ತಾರತಮ್ಯ ಮಾಡುವುದು, ಸ್ವಾತಂತ್ರ್ಯದ ಬಗ್ಗೆ ಕೇವಲವಾಗಿ/ಕನಿಷ್ಠವಾಗಿ ಅಸಡ್ಡೆಯಾಗಿ ಮಾತನಾಡುವುದು, ಇವೆಲ್ಲವೂ ಆಗಬಾರದು. ಬೆಳೆಯುವ ವಯಸ್ಸಾಗಿದ್ದು, ಆ ಬೆಳೆಯುವ ವಯಸ್ಸಿನಲ್ಲಿ ನಾವೇ ಮಕ್ಕಳಿಗೆ ಮಾರ್ಗದರ್ಶಕರಾಗಿರಬೇಕು. ಏಕೆಂದರೆ, ಆ ಮಕ್ಕಳಿಗೆ ತೀರ್ಮಾನವನ್ನು ತೆಗೆದುಕೊಳ್ಳುವ ಶಕ್ತಿ ಇರುವುದಿಲ್ಲ ಎಂಬ ಕಾರಣಕ್ಕಾಗಿ ಆ ಮಕ್ಕಳನ್ನು ಹಾರೈಕೆ ಮಾಡುವವರಾಗಲಿ, ಪೋಷಣೆ ಮಾಡುವವರಾಗಲಿ, ಶಿಕ್ಷಕರಾಗಲಿ ಅಥವಾ ಸಾಮಾಜಿಕ ಕಾರ್ಯಕರ್ತರಾಗಲಿ ಎಲ್ಲರಿಗೂ ಸಿಕ್ಕಿರುವ ಹಕ್ಕಾಗಿದೆ. ಮಕ್ಕಳನ್ನು ರಕ್ಷಣೆ ಮಾಡುವಂಥ ಹಕ್ಕು ಯಾರಿಗೆ ಇದೆ ಎಂದರೆ, ನಮ್ಮಂಥವರಿಗೆ, ನಿಮ್ಮಂಥವರಿಗೆಲ್ಲಾ ಇರುವಂಥ ಹಕ್ಕಾಗಿದೆ. ಇಂತಹ ಸಂದರ್ಭದಲ್ಲಿ ಸುಮಾರು 13 ರಿಂದ 18 ವರ್ಷಗಳ ಹರಿಹರೆಯದ ವಯಸ್ಸಿನ ಮಕ್ಕಳುಗಳಲ್ಲಿ ಕಾಪಾಡಿಕೊಳ್ಳುವುದು ಕೂಡ ಒಂದು ಸವಾಲು. It's a

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

challenge for the society. ಅದು ಶಿಕ್ಷಕರಿಗಾಗಲಿ ಅಥವಾ ಪೋಷಕರಿಗಾಗಲಿ ಒಂದು ರೀತಿಯ ಚಾಲೆಂಜ್ ಆಗಿದೆ. ಆ ಒಂದು ಚಾಲೆಂಜ್ ಅವರಿಗೂ ಇದ್ದು, ಆ ಮಕ್ಕಳನ್ನು ನೋಡಿಕೊಳ್ಳುವವರಿಗೆ ಇದೆ.

ಬಹಳ ವಿಸ್ತೃತವಾದ ಸಮಸ್ಯೆಗಳನ್ನು ಪ್ರತಿನಿತ್ಯ ನೋಡುತ್ತಿದ್ದೇವೆ. ಮಕ್ಕಳು ಬೆಳೆಯುತ್ತಾ, ಬೆಳೆಯುತ್ತಾ ವಿಚಿತ್ರವಾದ ಆಸೆಗಳು, ಆಕಾಂಕ್ಷೆಗಳು ಮತ್ತು ಕುತೂಹಲಗಳು ಮೂಡುತ್ತವೆ. ಸಾಮಾಜಿಕ ಮಾಧ್ಯಮಗಳ ಜಾಲತಾಣದ ಮೂಲಕ, ಮೊಬೈಲ್ ಮೂಲಕ ಅಥವಾ ಸಮಾಜದಲ್ಲಿಯೇ ಬೇರೆಯವರನ್ನು ನೋಡಿ, ಇತ್ಯಾದಿಗಳಿಂದ ಮಾನಸಿಕವಾಗಿ ದಿವಸದಿಂದ ದಿವಸಕ್ಕೆ ಬಹಳಷ್ಟು ಬದಲಾವಣೆ ಆಗುತ್ತಾರೆ. ಬಹುಶಃ hormone ಗಳ ಬದಲಾವಣೆಯಿಂದ ಕೂಡ ಅವರ ದೇಹದಲ್ಲಿ ಬಹುತೇಕ ಬದಲಾವಣೆ ಆಗುತ್ತದೆ. ಇದನ್ನೆಲ್ಲಾ ನಾವು, ನೀವು ಎಲ್ಲರೂ ಅನುಭವಿಸಿ ಬಂದಿದ್ದೇವೆ. ಇವತ್ತು ವಯಸ್ಕರಾಗಿ ಈ ಸದನದಲ್ಲಿ ಕುಳಿತಿರಬಹುದು. ಆದರೆ, ಎಲ್ಲರೂ ಕೂಡ ಆ ವಯಸ್ಸನ್ನು ದಾಟಿ ಬಂದಿರುತ್ತೇವೆ. ನಮ್ಮ ಕಾಲದಲ್ಲಿ ನಮಗೆ ಆಗುತ್ತಿದ್ದ ಭ್ರಮೆ, ಕನಸು ಅಥವಾ ಆಸೆಗಳ ಸ್ಥಿತಿಗತಿಯ ಕಾಲಘಟ್ಟವೇ ಬೇರೆಯಾಗಿದೆ. ಆದರೆ, ಈಗಿನ ಕಾಲಘಟ್ಟವನ್ನು ನೋಡಿದರೆ, 'ಅಯೋ! ದೇವರೆ ನಮ್ಮ ಮಕ್ಕಳನ್ನು ಯಾವ ರೀತಿ ರಕ್ಷಣೆ ಮಾಡಿಕೊಳ್ಳುವುದು' ಎನ್ನುವಷ್ಟು ಭಯವಾಗುತ್ತದೆ. ಅವರಿಗೆ ಬಾಹ್ಯವಾಗಿ ಕೂಡ ಬಹಳಷ್ಟು ಒತ್ತಡಗಳಿದ್ದು, ಆಂತರಿಕವಾಗಿಯೂ ಒತ್ತಡಗಳಿವೆ. ನಮ್ಮ ಕಾಲದಲ್ಲಿ ನಮ್ಮ ತಂದೆ-ತಾಯಿಯವರು ಬೈದರೆ ನಮಗೆ ಏನು ಅನಿಸುತ್ತಿರಲಿಲ್ಲ. ನಾವು ಕೂಡ ತಂದೆ-ತಾಯಿಯವರೊಂದಿಗೆ ಜಗಳ ಮಾಡಿ, ಸುಮ್ಮನೆ ಆಗಿಬಿಡುತ್ತಿದ್ದೆವು. ಹಾಗೆಂದು ಬಹಳ ತಲೆಗೆ ಅಂಟಿಸಿಕೊಳ್ಳುತ್ತಿರಲಿಲ್ಲ. ಆದರೆ, ಈಗಿನ ಕಾಲ ಮಕ್ಕಳು ಎಷ್ಟರ ಮಟ್ಟಿಗೆ ಸೂಕ್ಷ್ಮವೆಂದರೆ, 'ಅ' ಎಂದರು ತಪ್ಪು, 'ತಾ' ಎಂದರು ತಪ್ಪು ಎನ್ನುವ ರೀತಿ ಇದೆ. ಮಕ್ಕಳ ಹತ್ತಿರ ಏನಾದರೂ ಮಾತನಾಡಬೇಕೆಂದರೆ ನಾವು ಭಯಪಡುವಂಥ ಕಾಲ ಬಂದಿದೆ. ಆದ್ದರಿಂದ ಇಂತಹ ಮಕ್ಕಳ ಬಗ್ಗೆ ಸುಮಾರು ವಿಚಾರಗಳನ್ನು ತಾವು ಸಹ ನಮ್ಮ ಮುಂದೆ ಇಟ್ಟಿದ್ದು, ಆ ವಿಚಾರಗಳನ್ನು ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಈ ವಿಚಾರಗಳಿಗೆ ಸಂಬಂಧಪಟ್ಟಂತೆ ಮಾನಸಿಕವಾಗಿ ಅವರು ಯೋಚನೆ ಮಾಡುವಂಥ ರೀತಿ, ನೀತಿಗಳು ಯಾವಾಗ ಬದಲಾಗುತ್ತದೆಯೋ, ಆಗ ಹೆಣ್ಣು ಮಕ್ಕಳಲ್ಲಿ ದೈಹಿಕವಾಗಿ,... ತಾವು ಕೂಡ ಮಾತನಾಡುವ ಸಂದರ್ಭದಲ್ಲಿ ಮಕ್ಕಳಲ್ಲಿ ದೈಹಿಕ ಬದಲಾವಣೆಗಳು ಯಾವ್ಯಾವ ರೀತಿ ಆಗುತ್ತದೆ ಎಂಬುದನ್ನು ಪ್ರಸ್ತಾಪ ಮಾಡಿದ್ದು, ಎಲ್ಲರೂ ಅದನ್ನು ಕೇಳಿಸಿಕೊಂಡಿರುವುದರಿಂದ ಮತ್ತೆ ನಾನು ಅದರ ಬಗ್ಗೆ ಉಲ್ಲೇಖ ಮಾಡಲು ಹೋಗುವುದಿಲ್ಲ. ಮಕ್ಕಳು ಸ್ವತಂತ್ರವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂಬ ಹಪಹಪಿಯಲ್ಲಿರುತ್ತಾರೆ. ಆದರೆ, ಅವರಿಗೆ ಸ್ವತಂತ್ರವಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೂ ಕೂಡ ಆ ಮಕ್ಕಳು ನಾನು ಹೇಳುವಂಥದು ಆಗಬೇಕು, ನಾನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಂಥ ಕೆಲಸಕ್ಕೆ ಅವಕಾಶ ಕೊಡಬೇಕು ಎನ್ನುವಂತಹ adamancy ಎಂಬುದು ಈಗಿನ ಕಾಲದ ಮಕ್ಕಳಲ್ಲಿ ಬಹಳಷ್ಟು ಇದೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ.

ಜೊತೆಗೆ ಸ್ನೇಹಿತರು, ಬಂಧು-ಬಳಗದವರು ಅವರ ಮೇಲೆ ಬೀರುವಂಥ ಪ್ರಭಾವ ಇರಬಹುದು. ಈ ರೀತಿಯ ಬಹಳಷ್ಟು ಒತ್ತಡಕ್ಕೆ ಅವರು ಒಳಗಾಗಿರುತ್ತಾರೆ. ಅದರಿಂದ ಅವರ ನಡವಳಿಕೆಯಲ್ಲಿ ಕೂಡ ಬಹಳ ಬದಲಾವಣೆಗಳಾಗುವುದರಿಂದ ಮುಕ್ತವಾಗಿರಬೇಕು, ಸ್ವತಂತ್ರವಾಗಿ ಕಲಿಯಬೇಕು, ಎಲ್ಲವೂ ತನ್ನದಾಗಿಸಿಕೊಳ್ಳಬೇಕೆಂದು ಆಸೆಪಡುತ್ತಾರೆ. ನಮ್ಮ ಮಕ್ಕಳು ಯಾರು? ನಮ್ಮ ಮಕ್ಕಳು ಈ ದೇಶದ ಪ್ರಜೆಗಳಾಗಿದ್ದಾರೆ. ನಮ್ಮ ದೇಶದ ಶೇಕಡ ೫೦ ರಷ್ಟು ಜನಸಂಖ್ಯೆಯಲ್ಲಿ ಅತೀ ಹೆಚ್ಚು ಯುವಕರು ಇದ್ದಾರೆ. ಮೊನ್ನೆ ದಿವಸ ದಿನಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ನೋಡಿದ್ದೇವೆ. ನಮ್ಮ ದೇಶದ ೫೦% of youth population ನೋಡಿಕೊಂಡು ನಮ್ಮ ಪಕ್ಕದ ಚೀನಾ ದೇಶದವರು 'ಒಂದು ಮಕ್ಕಳು ಸಾಕು' ಎಂದು ಹೇಳುತ್ತಿದ್ದವರು, ಇವತ್ತು ಹೆಚ್ಚು ಮಕ್ಕಳನ್ನು ಪಡೆಯುವಂಥ ಪ್ರಯತ್ನ ಮಾಡುತ್ತಿದ್ದಾರೆ. ಭಾರತ ದೇಶದ ಜನಸಂಖ್ಯೆಯನ್ನು ನೋಡಿದರೆ ಅದರಲ್ಲಿಯೂ ಯುವಕರು ಜಾಸ್ತಿ ಇದ್ದು, ಇವರು ದೇಶವನ್ನು ಕಟ್ಟುವಂಥ ಯುವಶಕ್ತಿಗಳಾಗಿದ್ದು, ಅವರನ್ನು ನೋಡಿದರೆ ಫಾಸಿಯಾಗುತ್ತದೆ, ಆಘಾತವಾಗುವುದರೊಂದಿಗೆ ಮುಂದೆ ಏನಾಗುತ್ತದೆಯೋ ಎಂಬ ಭಯ ನಮ್ಮಲ್ಲಿ ಆವರಿಸಿಕೊಳ್ಳುತ್ತದೆ.

(ಮುಂದು)

(210) 11.03.2025/4.40/ಎಸ್‌ಕೆ-ಆರ್‌ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ಡಾ॥ ಉಮಾಶ್ರೀ (ಮುಂದು):-

ಈಗ ಅವರು ಕೂಡ ಕುಟುಂಬ ಯೋಜನೆಗೆ ಮೊರೆ ಹೋಗುವಂತಹದ್ದನ್ನು ನಾವು ನೋಡಬಹುದು. ಯುವಕರು ಮುಂದೆ ದೇಶವನ್ನು ಕಟ್ಟುತ್ತಾರೆ ಎಂಬ ಅಪಾರವಾದ ನಂಬಿಕೆಯನ್ನಿಟ್ಟುಕೊಂಡಿರುವಂತಹ ನಮಗೆ ಮತ್ತು ಸದೃಢ ದೇಶಕ್ಕೆ ಸದೃಢವಾದ ಯುವಕರನ್ನು ನಾವು ತಯಾರಿ ಮಾಡಬೇಕೆಂದು ಭಾಷಣದಲ್ಲಿ ಹೇಳುತ್ತೇವೆ. ಸರ್ಕಾರ, ಕುಟುಂಬಗಳು ಮತ್ತು ಸಮಾಜದ್ದು ಕೂಡ ಇದರ ಜವಾಬ್ದಾರಿಯಾಗಿರುತ್ತದೆ. ಇವತ್ತು ಏನಾಗುತ್ತಿದೆ ಎಂದರೆ, ಯಾವ ಯುವ ಶಕ್ತಿ ಮುಂದೆ ದೇಶವನ್ನು ಕಟ್ಟಬೇಕು, ಆ ಯುವಕರ ಮೇಲೆ ಮಾದಕ ದ್ರವ್ಯಗಳ ದಾಳಿ ನಡೆಯುತ್ತಿದೆ. ನಮ್ಮ ದೇಶದ ಮಾನವ ಸಂಪನ್ಮೂಲ ಎಂದರೆ ಯುವ ಶಕ್ತಿ. ಅದರ ಮೇಲೆ ಈ ಒಂದು ದಾಳಿ ನಡೆಯುತ್ತಿರುವುದರಿಂದ ನಮ್ಮ ಈ ಯುವ ಶಕ್ತಿ ಕುಂದುವುದಕ್ಕೆ ಕಾರಣವಾಗಿದೆ. We are losing the strength of our Country ಎಂದು ನಾನು ಭಾವಿಸುತ್ತೇನೆ. ಈ ಮಾದಕ ವಸ್ತುಗಳನ್ನು ಸೇವನೆ ಮಾಡುವಂತಹ ಸರ್ವೆಯ ಪ್ರಕಾರ fifty percent of the population ಹದಿಹರೆಯದ ಮಕ್ಕಳು ಬಹಳ ಇದ್ದಾರೆ ಎಂದು ಕೇಳಿದಾಗ, ತಾಯಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೃದಯವಿರುವಂತಹ ನಮ್ಮಗಳಿಗೆ ಈಗಲೂ ನಿಂತು ಮಾತನಾಡುತ್ತಿರಬೇಕಾದರೆ, ಒಂದು ರೀತಿಯ ಕೈ ಕಾಲು ನಡುಗುತ್ತದೆ, ಹಾಗೆಂದ ಮಾತ್ರಕ್ಕೆ ಬರೀ ಹೆಣ್ಣು ಮಕ್ಕಳಿಗೆ ಆಗುತ್ತದೆ ಈ ರೀತಿ ಎನ್ನುವುದಲ್ಲ. ತಂದೆ ಸ್ಥಾನದಲ್ಲಿರುವ ನಿಮಗೂ ಕೂಡ ಆ ಒಂದು ಮಾತುಗಳು ಕೇಳಿದಾಗ ಅಘಾತವಾಗುತ್ತದೆ. ಇವುಗಳನ್ನೆಲ್ಲಾ ಕೇಳುವುದಕ್ಕೆ ನಮಗೆಲ್ಲಾ ಕಷ್ಟವಾಗುತ್ತದೆ. ಇದೆಲ್ಲಾ ಪ್ರಭಾವಗಳು ಎಲ್ಲಿಂದ ಬಂದರೂ ಕೂಡ ಶಾಲಾ ಮಕ್ಕಳು ಅಥವಾ "ಪಡ್ಡೆ ಹುಡುಗರು" ಎಂದು ಕರೆಯುತ್ತೇವೆಯೆಲ್ಲಾ, ಅಂದರೆ ಶಾಲೆ ಬಿಟ್ಟು, ಹಳ್ಳಿಗಳು, ತಾಲ್ಲುಕುಗಳು, ನಗರಗಳು ಬಡಾವಣೆಗಳಲ್ಲಿ ರಾತ್ರಿ ಹೊತ್ತು ಕುಳಿತುಕೊಂಡು ಒಬ್ಬರಿಗೊಬ್ಬರು chat ಮಾಡುತ್ತಿರುವಂತಹ ಮಕ್ಕಳು. ಇವರೆಲ್ಲರೂ ಕೂಡ ಸುಮ್ಮನೆ ಒಂದು ಮೋಜಿಗೋಸ್ಕರ ಒಂದಿಷ್ಟು ಚಟಗಳನ್ನು ಕಲಿಯುತ್ತಾ ಹೋಗುತ್ತಾರೆ. ಹುಡುಗರ ಜೊತೆ ಸೇರಿಕೊಂಡು ಮೋಜು ಮಸ್ತಿಗೋಸ್ಕರ ಸಿಗರೇಟು, ಮೆಲ್ಲಗೆ ಡ್ರಿಂಕ್ಸ್‌ಗಳನ್ನು ಮಾಡುವಂತಹದ್ದು. ಕೊನೆ ಕೊನೆಗೆ ಚಟಗಳನ್ನು ಹೆಚ್ಚು ಮಾಡಿಕೊಳ್ಳುತ್ತಾ ಎಲ್ಲಿಗೆ ಹೋಗುತ್ತಾರೆಂದರೆ, ಚಟಕ್ಕೆ ಅವಲಂಬಿತರಾಗುತ್ತಾರೆ. ಆ ಚಟ ಎಲ್ಲಿಯವರೆವಿಗೂ ಹೋಗುತ್ತದೆ ಎಂದರೆ, ಚಟ, ಚಟ್ಟಕ್ಕೆ ಕರೆದುಕೊಂಡು ಹೋಗುವವರೆಗೂ ಕೂಡ ಚಟವನ್ನು ಬಿಡುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಸ್ಥಿತಿ ನಿರ್ಮಾಣವಾಗಿ ಬಿಡುತ್ತದೆ. ಇದು ಬಹಳ ಮನಸ್ಸಿಗೆ ನೋವಾಗುವಂತಹ ವಿಚಾರ. ಈ ಮಾದಕ ವಸ್ತುಗಳು ಉಳ್ಳವರ ಮಕ್ಕಳಿಗೆ ಬೇಕಾದಷ್ಟು ದುಡ್ಡು ಸಿಗುತ್ತದೆ. ಬಡವರ ಮಕ್ಕಳು, ಮಾಧ್ಯಮ ವರ್ಗದ ಮಕ್ಕಳು, ದೀನದಲಿತರ ಮಕ್ಕಳು ಹಾಗೂ ಎಲ್ಲಾ ಸಮುದಾಯದ ಮಕ್ಕಳನ್ನು ಹಾಸ್ಟೆಲ್‌ಗೆ ಹಾಕಿರುತ್ತೇವೆ. ಅವರಿಗೆ pocket money ಅನ್ನು ಕೊಟ್ಟು ಕಳುಹಿಸುತ್ತೇವೆ. ಆ pocket money ಗಳನ್ನು ಕೂಡ ಅದಕ್ಕೆ ಖರ್ಚು ಮಾಡಿಕೊಳ್ಳುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಕೇಳಿರಬಹುದು. ಆ ಮಕ್ಕಳಿಗೆ ದುಡ್ಡು ಖಾಲಿಯಾದ ಮೇಲೆ, ಅಲ್ಲಿ ಬಡ್ಡಿಗೆ ದುಡ್ಡನ್ನು ಕೊಡುತ್ತಾರಂತೆ. ನೀವು ಎಲ್ಲಿಯಾದರೂ ಕೇಳಿದ್ದೀರಾ? ಈ ಮಾದಕ ದ್ರವ್ಯಗಳಿಗೆ ವ್ಯಸನಿಯಾಗಿರುವಂತಹ ಮಕ್ಕಳಿಗೆ ದುಡ್ಡು ಖಾಲಿಯಾದರೆ, ಅಲ್ಲಿಯೇ ಬಡ್ಡಿಗೆ ದುಡ್ಡು ಕೊಡುವಂತಹ ವ್ಯವಸ್ಥೆಯ ಜಾಲವನ್ನು ಭೇದಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ದುಡ್ಡು ಕೊಟ್ಟು, ದುಡ್ಡು ಕೊಟ್ಟು ಬಡ್ಡಿ ಹೆಚ್ಚಾದಂತೆ, ಅವನು ಇನ್ನೂ ಹೆಚ್ಚು ಹೆದರಿ-ಹೆದರಿ ವ್ಯಸನವನ್ನು ಜಾಸ್ತಿ ಮಾಡಿಕೊಂಡು, ಆತ್ಮಹತ್ಯೆ ಮಾಡಿಕೊಂಡಿರುವಂತಹ ಪ್ರಕರಣಗಳು ಕೂಡ ನಡೆದಿದೆ ಎನ್ನುವುದು ನನ್ನ ಗಮನಕ್ಕೆ ಬಂದಿರುವಂತಹದ್ದು. ಅದನ್ನು ನೋಡಿದರೆ, ನಮಗೆ ಸಂಕಟವಾಗುತ್ತದೆಯಲ್ಲವೇ? ನಮ್ಮ ದೇಶ ಎಲ್ಲಿಗೆ ಹೋಗುತ್ತಿದೆ? ನಮ್ಮ ಮಕ್ಕಳ ಭವಿಷ್ಯದ ಬದುಕು ಎಲ್ಲಿ ಹೋಗುತ್ತಿದೆ? ಇದರಿಂದ ಬಿಡಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದೇ ಇರುವಂತಹ ಪರಿಸ್ಥಿತಿಗೆ ಹೋಗುತ್ತಿದ್ದೇವೆ. ಇದರ ಬಗ್ಗೆ ಯಾರು ಹೆಚ್ಚು ಗಮನಕೊಡಬೇಕು? ಖನ್ನತೆಗೆ ಒಳಗಾಗುತ್ತಿದ್ದಾರೆ ಎಂಬ ಬಗ್ಗೆ ನನಗೆ ಬಹಳ ಕಷ್ಟವಾಗುತ್ತಿದೆ. ಇವತ್ತು ನಾನು YouTube ನಲ್ಲಿ ಮಾದಕ ವ್ಯಸನಗಳ ಬಗ್ಗೆ ನೋಡುತ್ತಿರಬೇಕಾದರೆ, ನಾನು ಒಬ್ಬ ಡಾಕ್ಟರ್‌ನ್ನು ಕೇಳಿದೆ. ಸರ್, ಈ ತರಹದ್ದೆಲ್ಲಾ ಏತಕ್ಕೆ ಆಗುತ್ತಿದೆ ಎಂದು ನಾನು ಅವರಿಗೆ ಕೇಳಿದೆ. ಈ ಮಾದಕ ವಸ್ತುಗಳು ಬೇಕಾದಷ್ಟು ಹೆಸರುಗಳಿವೆ. ಅದರ ಹೆಸರುಗಳನ್ನು ಹೇಳುತ್ತಾ ಹೋಗುವುದಕ್ಕಾಗುವುದಿಲ್ಲ. ಅದರ ಹೆಸರುಗಳು ಹೇಳುವುದು ಕಷ್ಟ. Synthetic ಮಾದಕ ದ್ರವ್ಯಗಳೇ ಬೇರೆಯಂತೆ. ಈ ಗಾಂಜಾ ಎನ್ನುವುದು natural ಮಾದಕ ದ್ರವ್ಯ. ಒಬ್ಬ ಡಾಕ್ಟರ್ ಹೇಳುತ್ತಿದ್ದರು. ಮೇಡಂ ನಾನು ಕೆಲವೊಂದು ವಿಚಾರಗಳನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತೇನೆ. ಈ ಗಾಂಜಾಗಳನ್ನು ಸೇದುವಂತಹ ಮಕ್ಕಳು ಇವತ್ತಿನ ದಿವಸ ಏನಾಗುತ್ತಿದ್ದಾರೆ ಎಂದು ಹೇಳಿದರೆ, ಅದನ್ನು ತೆಗೆದುಕೊಳ್ಳಬೇಕಾದರೆ ಮೊದ ಮೊದಲು ಒಂದು ತರಹ ಖುಷಿ ಮತ್ತು ಉತ್ಸಾಹ ಮತ್ತು ಒಂದು ತರಹ ಮಜಾ ಸಿಗುತ್ತದೆ ಮೇಡಂ. ಅವರು ಅದನ್ನು ತೆಗೆದುಕೊಳ್ಳುತ್ತಾರೆ. ಆದರೆ ಇದರಿಂದ ತೊಂದರೆ ಅನುಭವಿಸುತ್ತಾರೆ. ಇದರಿಂದಾಗಿ ಶೈಕ್ಷಣಿಕ ಪ್ರಗತಿ ಕುಂಠಿತವಾಗಿ ಹೋಗುತ್ತಿದೆ. ದೈಹಿಕವಾಗಿ ತುಂಬಾ ಕಷ್ಟ ಪಡುತ್ತಿದ್ದಾರೆ. ಕೊನೆ ಕೊನೆಗೆ ಅವರ ದೇಹ ಕಾಯಿಲೆಗಳ ಗೂಡಾಗುತ್ತಿದೆ. ಕಾಯಿಲೆಗಳ ಗುಡಾಗಿರುವಂತಹದ್ದನ್ನು ಬಿಡುವುದಕ್ಕೆ ಸಾಧ್ಯವೇ ಇಲ್ಲ. ಅದರಿಂದ ಹೊರಗಡೆ ಬರುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಸ್ಥಿತಿ ಇವತ್ತು ನಿರ್ಮಾಣವಾಗುತ್ತಿದೆ. ಅದನ್ನು cure ಮಾಡಬಹುದು. Seventy percent ಜನರನ್ನು cure ಮಾಡುವುದು ಕಷ್ಟ. Thirty percent ಮೊದಲನೇ ಹಂತದಲ್ಲಿ ಬಂದರೆ ಮಾತ್ರ ನಾವು ಕೌನ್ಸಿಲಿಂಗ್ ಮಾಡಿ, ಮಾತ್ರೆಗಳನ್ನು ಕೊಡುವುದರ ಮೂಲಕ ಅವರನ್ನು ಜೋಪಾನ ಮಾಡಿಕೊಳ್ಳಬಹುದು ಎಂದು ಹೇಳಿದರು. ನಾನು ಕೇಳಿದ ಪ್ರಕಾರ KIMS (Kempe Gowda Institute of Medical Science) ನಲ್ಲಿ ಈ ತರಹ ಒಂದು ಪ್ರಯೋಗಗಳನ್ನು ಮಾಡಿದ್ದಾರೆ. ಯಾರು ಆ ದುಶ್ಚಟಗಳಿಂದ ಹೊರಗೆ ಬಂದಿದ್ದಾರಲ್ಲ, ಅವರದೇ ಒಂದು ಗ್ರೂಪ್ ಮಾಡಿಕೊಂಡು, ಆ ಗ್ರೂಪ್‌ನಲ್ಲಿ ವಾಸಿಯಾಗಿರುವಂತಹವರು ಯಾರು ಇವತ್ತು ಸೇವನೆ ಮಾಡುತ್ತಿದ್ದಾರೋ, ಅವರಿಗೆ ಇವರು ಜಾಗೃತಿಗೊಳಿಸುವುದು, awareness ಕೊಡುವುದು, ಪ್ರೇರಣೆ ಮಾಡುವುದು. ಅವರನ್ನು ತಂದು ಇಲ್ಲಿ admit ಮಾಡುವುದು. ಅವರನ್ನು ಇದರಿಂದ ಹೊರಗೆ ಬರುವುದಕ್ಕೆ ಪ್ರಯತ್ನಗಳನ್ನು ಮಾಡುವಂತಹ ಕೆಲಸವನ್ನು ಅಲ್ಲಿ ಮಾಡುತ್ತಿದ್ದಾರೆ. ನಾನು YouTube ಅನ್ನು ನೋಡಿ, ನಾನು ಬಂದು ಮಾನ್ಯ ಐವನ್ ಡಿ'ಸೋಜಾರವರಿಗೆ ಹೇಳಿದೆ. ಮಾದಕ ದ್ರವ್ಯಗಳನ್ನು ಸೇವನೆ ಮಾಡುವುದು ತಪ್ಪು ಎಂದು ಹೇಳುತ್ತಿದ್ದೇವೆ. ಇದು ಸಿಗಲಾರದಂತೆ ನೋಡಿಕೊಳ್ಳಬೇಕು ಎಂದು ಸಹ ಹೇಳುತ್ತಿದ್ದೇವೆ. ಗಾಂಜಾ ಇರಲಿ, ಮತ್ತೊಂದು ಇರಲಿ, ಯಾವುದು ಕೂಡ ಅಲ್ಲದ್ದು. ಈ ಗಾಂಜಾ ಕೂಡ ಕಾನೂನು ರೀತಿಯಲ್ಲಿ restricted. ಅವೆಲ್ಲಾವನ್ನು ಉಪಯೋಗ ಮಾಡುವ ಹಾಗಿಲ್ಲ. ಯಾವುದೇ ಅಫೀಮು-ಗಿಫೀಮು ಇರುವ ಬಗ್ಗೆ ನಾವು ಏನು ಹೇಳುತ್ತೇವೆಯೋ, ಕೆಲವರು ಅದರ ಪರವಾಗಿ ಮಾತನಾಡುತ್ತಿದ್ದಾರೆ. ಮೊನ್ನೆ ತಾನೇ ನನ್ನ ಮೊಮ್ಮಗನ ಜೊತೆ ಇದರ ಬಗ್ಗೆ ಚರ್ಚೆ ಮಾಡುತ್ತಾ, ಮಾತನಾಡುತ್ತಿರಬೇಕಾದರೆ, ಏನೋ ಮಗ ನೀನು ಬೆಳಗ್ಗೆ ಬಂದು ಮೊದಲೆಲ್ಲಾ ಕಾಲೇಜಿನಿಂದ ಬಂದು ಆರು ತಿಂಗಳು ಇದ್ದಾಗ, ಅವನು ಬರೀ ಮೊಬೈಲ್ ನೋಡುವುದನ್ನು ಅವರ ತಂದೆ-ತಾಯಿಯವರು ಗಾಬರಿಯಾಗುತ್ತಿದ್ದರು. ಅವರು ನನ್ನ ಹತ್ತಿರ ಬಂದು ನೀನು ಅಜ್ಜಿಯಾದವಳು ಸ್ವಲ್ಪ ಮೊಮ್ಮಗನಿಗೆ ಹೇಳಬಾರದಾ? ಅವನನ್ನು ಊಟಕ್ಕೆ ಕರೆದುಕೊಂಡು ಹೋಗಿ, ಅವನಿಗೆ ಊಟ ಮಾಡಿಸಿ "ಏನೋ ಕಂದ ಏನು ಆಟವಾಡುತ್ತಿದ್ದೀಯಾ" ಮಗ, ಅಪ್ಪ ಅಮ್ಮ ನಿನ್ನ ಬಗ್ಗೆ ಈ ತರಹ ಮಾತನಾಡುತ್ತಿದ್ದಾರಲ್ಲ, ಅವರಿಗೆ ಮಾಡುವುದಕ್ಕೆ ಕೆಲಸವಿಲ್ಲ ಬಿಡು. ಹೇ! ಮಾಡುವುದಕ್ಕೆ ಕೆಲಸವಿಲ್ಲ ಎಂದರೆ, ಅಪ್ಪ-ಅಮ್ಮನಿಗೆ ಮಾಡುವುದಕ್ಕೆ ಕೆಲಸವಿಲ್ಲವೇ? ರಾತ್ರಿ ಒಂದು ಗಂಟೆಯಾಗಲೀ ಎರಡು ಗಂಟೆಯಾದರೂ ಮೊಬೈಲ್‌ನಲ್ಲಿ ಆಟ ಆಡುತ್ತಲೇ ಇರುತ್ತಾನೆ. ಈಗ ಅವನು ಪಾಸಾದ. ಈಗ ಅವನಿಗೆ ಕೆಲಸ ಸಿಕ್ಕಿದೆ. ಬೆಳಗ್ಗೆಯಿಂದ ಸಂಜೆಯವರೆಗೂ busy ಆಗಿರುತ್ತಾನೆ. ಈಗಲೂ ಅದೇ ಒಂದು ದೂರು. ಏನಪ್ಪ, ನೀನು ಈ ರೀತಿ ಮೊಬೈಲ್ ನೋಡುತ್ತಿದ್ದರೆ, ನನಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಯ ಆಗುತ್ತದೆ ಕಂದ. ಆಗ ನೀನು free ಇದ್ದು ಮೊಬೈಲ್ ನೋಡುತ್ತಿದ್ದೆ. ಈಗಲೂ ಹಾಗೇ ಮಾಡುತ್ತೀಯಲ್ಲ ಎಂದಾಗ ಆತ "ಅಮ್ಮಮ್ಮ ಅವರ ಮಾತು ಕೇಳುವುದಕ್ಕೆ ಏತಕ್ಕೆ ಹೋಗುತ್ತೀಯಾ ನೀನು? ನಾನು ಆಫೀಸ್‌ನಿಂದ ಬರುವಷ್ಟರೊಳಗೆ ರಾತ್ರಿ ಒಂಭತ್ತುವರೆ-ಹತ್ತು ಗಂಟೆ ಆಗಿರುತ್ತದೆ. ನಾನು ಊಟ ಮಾಡಿ ನಿದ್ದೆ ಬರುವವರಿಗೂ ಮೊಬೈಲ್‌ನಲ್ಲಿ ಏನಾದರೊಂದು ನೋಡಿ ಮಲಗುತ್ತೇನೆ. ಈಗಲೂ ಅಂದರೂ ನನಗೆ ಬುದ್ಧಿ ಬಂದಿಲ್ಲವೇ? ನನಗೂ 24 ವರ್ಷವಾಯಿತು" ಎಂದು ಇದೇ ಮಾತು ಅಂದಿದ್ದು. ಈಗ ಅವನನ್ನು ನಂಬುತ್ತೀರಾ; ಬಿಡುತ್ತೀರಾ? ಈಗ ಅವನ ಮೇಲೆ ಕಣ್ಣು ಇಡಬೇಕೆಂದರೆ, ಅವನ ಪಕ್ಕದಲ್ಲಿ ಅಮ್ಮನೋ, ಅಪ್ಪನೋ ಹೋಗಿ ಮಲಗಬೇಕು. ಅದು ಕೂಡ ಹಿಂಸೆ ಕೊಟ್ಟಂತಾಗುತ್ತದೆ. ಈ ರೀತಿಯಾದ ಮಕ್ಕಳನ್ನು ತುಂಬಾ ಸೂಕ್ಷ್ಮವಾಗಿ ಕಾಪಾಡಿಕೊಳ್ಳುವಂತಹದ್ದು. ಈ ಗಾಂಜಾ ಎನ್ನುವಂತಹದ್ದು, 0.25 ರಿಂದ 0.3 ಇಷ್ಟರ ಮಟ್ಟಿಗೆ ವ್ಯಸನಿಗಳಾಗಿದ್ದಾರೆ ಮೇಡಂ ಎಂದು ಅವರು ಹೇಳಿದರು. ಯಾರು ಆ ರೀತಿ vulnerable community ಇದೆಯೋ, ಅವರನ್ನೇ peddlers ಹುಡುಕಿಕೊಂಡು ಬರುತ್ತಾರೆ. ಅದೆಲ್ಲವೂ ನಿಮಗೆ ಗೊತ್ತಿರುವಂತಹದ್ದು. ಮೊದ ಮೊದಲು stress free ಆಗುತ್ತೀರಿ ಅಂತಾ ಹೇಳಿಬಿಟ್ಟು, ಅವರಿಗೆ ಒಂದಿಷ್ಟು ಉಚಿತವಾಗಿ ಮೊದ ಮೊದಲು ಕೊಡುತ್ತಾರೆ. ಅದಕ್ಕೆ ದುಡ್ಡು ಇಲ್ಲ. ಅದನ್ನು ಉಚಿತವಾಗಿ ಕೊಡುವುದು. ಅದನ್ನು ಉಚಿತವಾಗಿ ಕೊಟ್ಟ ಮೇಲೆ ಸ್ವಲ್ಪ addict ಆಗುತ್ತಾ ಹೋದಂತೆ ಮಕ್ಕಳು addiction ಆದ ನಂತರದಲ್ಲಿ ಹಣ ಅವರಿಗೆ ಹೊಂದಿಸುವುದಕ್ಕೆ ಆಗದೇ ಇದ್ದಂತಹ ಸಂದರ್ಭದಲ್ಲಿ, ನಾನು ಈಗಾಗಲೇ ಹಣ ಕೊಡುವುದರ ಬಗ್ಗೆ ಹೇಳಿದ್ದೇನೆ. ಕೊನೆ ಕೊನೆಗೆ ಅದೇ ತಪ್ಪುಗಳು ಗಾಂಜಾ, ಮಾದಕ ದ್ರವ್ಯಗಳನ್ನು suppliers ಆಗಿ ಇಟ್ಟುಕೊಳ್ಳುತ್ತಾರಂತೆ. ಇದು ಎಲ್ಲಿಗೆ ಹೋಯಿತಪ್ಪ. ಮಾನ್ಯ ರವಿಕುಮಾರ್‌ರವರೇ, suppliers ರನ್ನಾಗಿ ಇಟ್ಟುಕೊಳ್ಳುತ್ತಾರಂತೆ. ನನಗೆ ಎದೆ ಢವ-ಢವ ಎನ್ನುತ್ತದೆ. ಇದು ಹೀಗಿರಬೇಕಾದರೆ, ಗಾಂಜಾ ಎನ್ನುವಂತಹದ್ದು ಬಹಳ ಕೆಟ್ಟದ್ದು. ಅದನ್ನು ಸ್ವಲ್ಪ ಸ್ವಲ್ಪ ಸೇವನೆ ಮಾಡುತ್ತಾ ಹೋಗುತ್ತಿದ್ದಂತೆಯೇ ಅವರಲ್ಲಿ ಒಂದು ರೀತಿಯ ವಿಚಿತ್ರವಾದ ಕಲ್ಪನೆಗಳು ಬರುತ್ತವಂತೆ.

(ಮುಂದು)

(211) 11.03.2025/4.50/ಬಿಸಿಹೆಚ್-ಆರ್‌ಎನ್ (ಪೈಸ್ ಫೇರ್ಮನ್‌ರವರ ಉಪಸ್ಥಿತಿ)

ಡಾ. ಉಮಾಶ್ರೀ (ಮುಂದು)

ನಾವು ಸಂಗೀತವನ್ನು ಕಿವಿಯಲ್ಲಿ ಕೇಳಿದರೆ, ಅವರು ಗಾಂಜಾ ಕುಡಿದ ಮೇಲೆ brain ನಲ್ಲೇ ಒಂದು ರೀತಿಯ ಸಂಗೀತದ ಖುಷಿ ಸಿಗುತ್ತದಂತೆ. ಹಾಗೆಯೇ ಅದು ಒಂದು ಕಲ್ಪನೆ. ಸಂಗೀತದ ಖುಷಿ ಸಿಕ್ಕಹಾಗೆ. ಏನೋ ಒಂದು ಚಿತ್ರಗಳನ್ನು ನೋಡಿದಹಾಗೆ ಒಂದು ಭ್ರಮೆಯ ಲೋಕದಲ್ಲಿ ಅವರು ವಿಹರಿಸುತ್ತಿರುತ್ತಾರೆ. Normal ಮನುಷ್ಯನ ಮೆದುಳಿನ ಕ್ರಿಯೆ ಆ ಮಕ್ಕಳಲ್ಲಿ ಇರುವುದಿಲ್ಲ. ಅವರ ಮೆದುಳು ನಮಗೆ, ನಿಮಗೆ ಮತ್ತು ನಮ್ಮ Normal ಮಕ್ಕಳಿಗೆ ಇದ್ದಹಾಗೆ ಇರುವುದಿಲ್ಲ. ಹಾಗಾಗಿ, ಆ ಸೇವನೆಯಿಂದ ಜೀವನವನ್ನು ಸಂಪೂರ್ಣವಾಗಿ ಹಾಳು ಮಾಡಿಕೊಳ್ಳುತ್ತಿರುತ್ತಾರೆ. ಅದಕ್ಕಾಗಿ ಪ್ರಾರಂಭದಲ್ಲೇ ಅವರನ್ನು ಅದರಿಂದ ಹೊರಗೆ ತರಬಹುದು. ಅದು ತುಂಬಾ ಕಷ್ಟವಾಗುತ್ತದೆ. ಅವರು ಬಹಳ ಬೇಸರ ಮಾಡಿಕೊಂಡಹಾಗೆ ಇರುತ್ತಾರೆ. ಬಹಳ ಖಿನ್ನತೆಯಿಂದ ಇರುತ್ತಾರೆ. ಅವರಿಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

education ಕಡೆ ಗಮನ ಇರುವುದಿಲ್ಲ. ತುಂಬಾ lose ಆಗಿ ಇರುತ್ತಾರೆ. ಅದು very first stage. ಆ first stage ಅನ್ನು ತಂದೆ-ತಾಯಿಗಳಾದ ನಾವು ಗಮನಿಸಬೇಕು. ಅದಕ್ಕೆ Amotivational Syndrome ಎಂದು ಕರೆಯುತ್ತಾರೆ. ಅದನ್ನು ಹಾಗೆಯೇ ಬಿಡದೇ ಹೆಚ್ಚೆಚ್ಚು ತೆಗೆದುಕೊಳ್ಳುತ್ತಾ ಹೋದಲ್ಲಿ Schizophrenia ಎಂದು ಬರುತ್ತದಂತೆ. ಅದಾದನಂತರ Psychosis ಬರುತ್ತದೆ. ಅಂದರೆ ಅವನೊಬ್ಬ ಮತಿಭ್ರಮಣನಾಗುತ್ತಾನೆ. Completely loose. ಆ ಒಂದು status ಅನ್ನು ಕಳೆದುಕೊಂಡುಬಿಡುತ್ತಾನಂತೆ. ಆ ಗಾಢವಾದಂತಹ ಭ್ರಮೆಗಳಿಂದ ಬಂದಾಗ...ಮಾನ್ಯ ಸಭಾಪತಿಯವರೇ, ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ನನಗೆ ಸಂಬಂಧಪಟ್ಟ ಒಂದು ಕುಟುಂಬದಲ್ಲೇ ಒಂದು ಹುಡುಗ ಈ ರೀತಿಯ ಮಾಧಕ ದ್ರವ್ಯಗಳ ವ್ಯಸನಿ ಆಗಿದ್ದನು. ಆತ ಒಂದು ರೀತಿ ಆಡುತ್ತಿದ್ದನು. ಅವನು ಮಧ್ಯರಾತ್ರಿ ಎದ್ದು ಸ್ನಾನ ಮಾಡುತ್ತಿದ್ದನು. ಆ ಸಮಯದಲ್ಲಿ ಓಹ್! ಎಂದು music ಹಾಕುತ್ತಿದ್ದನು. ಅದು ಏನೋ ದೇವರ ನಾಮಗಳನ್ನು ಹಾಕುತ್ತಿದ್ದನು. ಜಾಗಟೆ ಹೊಡೆಯುವುದಕ್ಕೆ ಶುರು ಮಾಡುತ್ತಿದ್ದನು. ಓಹ್! ಎಂದು ಕರ್ಪೂರ ಹಾಕಿ ಬೆಳಗುತ್ತಿದ್ದನು. ಅವರ ಅಮ್ಮ ಅಕ್ಕ ನನ್ನ ಮಗ ಈ ರೀತಿ ಎಲ್ಲಾ ಮಾಡುತ್ತಾನೆಂದು ಹೇಳಿದರು. ಯಾಕೋ ಆ ರೀತಿ ಮಾಡುತ್ತಿದ್ದೀಯ ಎಂದು ಕೇಳಿದರೆ, ನಾನು ಎಲ್ಲಿ ಮಾಡಿದ್ದೇನೆ, ಯಾವಾಗ ಮಾಡಿದ್ದೇನೆ, ಏತಕ್ಕೆ ನೀನು ಈ ರೀತಿ ಹೇಳುತ್ತೀಯ. ನೀವು ಬಂದು ಇಲ್ಲಿ ಹೇಳಬೇಕೆ? ಅವರ ಅಮ್ಮನ ಮೇಲೆ ಜೋರು ಮಾಡುತ್ತಿದ್ದನು. ಇದರದೇ effect ಇದು ಎಂದು ನನಗೆ ಒಬ್ಬರು ಡಾಕ್ಟರ್ ಹೇಳಿದ ಮೇಲೆ ಗೊತ್ತಾಯಿತು. ಅವನು ಅದನ್ನು ತೆಗೆದುಕೊಳ್ಳುತ್ತಿದ್ದ. Drinks , ಮತ್ತೊಂದು ಅದೇನೋ ಪೌಡರ್ ಎಲ್ಲಾ ಹಾಕಿಕೊಳ್ಳುವುದು ಮಾಡುತ್ತಿದ್ದ. ಅದನ್ನು ಮಾಡುತ್ತಿದ್ದ ಎಂದು ಎಲ್ಲರೂ ಹೇಳುತ್ತಿದ್ದರು. ನೋಡಿದರೆ, ಅವರು ಹಾಗೆಯೇ ನನಗೆ ಹೇಳಿದರು. ಇವಳು ನನ್ನನ್ನು ಕೊಲೆ ಮಾಡುತ್ತಾಳೆ. ಈಗ ತಾನೆ ಊಟವನ್ನು ಮಾಡಿರುತ್ತಾನೆ. ನೀನೆಲ್ಲೇ ನನಗೆ ಊಟ ಹಾಕಿದ್ದೀಯ ಎಂದು ಜಗಳ ಮಾಡುವುದು. ಅವನಿಗೆ ಅವನ ಮೆದುಳು ಸಾಕಷ್ಟು ಕಷ್ಟ ಕೊಡುತ್ತಿರುತ್ತದೆ. ನಾವು ಇತ್ತೀಚೆಗೆ ಟಿ.ವಿ.ಗಳಲ್ಲಿ ನೋಡಿದ್ದೇವೆ. ಅದರಲ್ಲಿ ಒಬ್ಬ ತಾಯಿ 'ಅವನನ್ನು ನಾನು ಕೊಲ್ಲಬೇಕು' ಅಂದುಕೊಂಡಿದ್ದೇನೆ. ನನಗೆ ಸರ್ಕಾರ permission ಕೊಡಿ ಎಂದು ಹೇಳುತ್ತಿದ್ದರು. ಒಬ್ಬ ತಾಯಿ ಮಗುವಿಗೆ ತನ್ನ ಜೀವನವನ್ನು ಕೊಡುತ್ತಾಳೆ, ತನ್ನ ಜೀವನವನ್ನು ಕೊಡುತ್ತಾಳೆ, ತನ್ನ ಪ್ರಾಣವನ್ನೇ ಕೊಡುತ್ತಾಳೆ. ಆದರೆ ಒಬ್ಬ ತಾಯಿ, 'ನಾನು ನನ್ನ ಮಗನನ್ನು ಕೊಲ್ಲಬೇಕು ಸರ್ಕಾರ ಅದಕ್ಕೆ permission ಕೊಡಿ' ಎಂದು ಕೇಳುತ್ತಾರಲ್ಲ, ಆ ಸ್ಥಿತಿ ಎಲ್ಲಿಗೆ ಹೋಗುತ್ತಿದೆ? Where we are? ಇದು ಸುಳ್ಳಲ್ಲ. ಇದು ಒಂದು ಟಿ.ವಿಯಲ್ಲಿ News ನಲ್ಲಿ ಬಂದಿರುವುದನ್ನು ನಾನು ನೋಡಿರತಕ್ಕಂಥದ್ದು. ಹಾಗಾಗಿ, ನಾನು ಹೆಚ್ಚಿಗೆ ಹೇಳುವುದಕ್ಕಿಂತ ಬಹಳ ಮುಖ್ಯವಾಗಿ ಪೋಷಕರಾದ ನಾವು ಬಹಳ alert ಆಗಬೇಕಾಗುತ್ತದೆ. ಸರ್ಕಾರಗಳು ಏನು ಮಾಡಬೇಕು? ಸನ್ಮಾನ್ಯ ಮುಖ್ಯಮಂತ್ರಿಗಳು, ನಮ್ಮ ಸರ್ಕಾರ ಬಹಳಷ್ಟು ಪ್ರಯತ್ನ ಮಾಡಿದ್ದೇವೆಂದು ಹೇಳುತ್ತಾರೆ. ಡ್ರಗ್ಸ್ ಎಗ್ಗಿಲ್ಲದೇ ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅಂತಹ ೩೦೨ ವಿದೇಶಿ ಪ್ರಜೆಗಳನ್ನು ಗಡಿಪಾರು ಮಾಡಿದ್ದೇವೆ. 127 ಜನ ಡ್ರಗ್ಸ್ ಪೆಡ್ಲರ್‌ಗಳನ್ನು ಅರೆಸ್ಟ್ ಮಾಡಿದ್ದೇವೆ. ಪೊಲೀಸ್ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ನಿರಂತರವಾಗಿ ೩,೪೦೦ ಮಕ್ಕಳಿಗೆ ಜಾಗೃತಿ ಮೂಡಿಸಿದ್ದೇವೆ. ನಾನು ಸರ್ಕಾರವನ್ನು ಕೇಳುವುದೇನೆಂದರೆ, ಇಡೀ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದಲ್ಲಿ 3,800 ಮಕ್ಕಳು ಮಾತ್ರ ಇಲ್ಲ, ಲಕ್ಷಾಂತರ ಮಕ್ಕಳಿದ್ದಾರೆ. ಆ ಲಕ್ಷಾಂತರ ಮಕ್ಕಳಿಗೆ ನೀವು ಜಾಗೃತಿ ಮೂಡಿಸಬೇಕು. You should reach them. ಬರೀ ಒಂದಷ್ಟು ಶಾಲೆಗಳಲ್ಲಿ ಮತ್ತು ಜಾತ್ರೆಗಳಲ್ಲಿ ಜಾಗೃತಿ ಮೂಡಿಸಿದರೆ ಸಾಲುವುದಿಲ್ಲ. 1908 ಕೊಟ್ಟಿದ್ದೇವೆ, ಅದರಲ್ಲಿ ದೂರು ಕೊಡಬಹುದು. ಅದು ಸಾಲುವುದಿಲ್ಲ. ಆದ್ದರಿಂದ ಆರೋಗ್ಯವಂತ ದೇಶ ನಿರ್ಮಾಣವಾಗಬೇಕು. ಡ್ರಗ್ಸ್ ವಿರುದ್ಧ ನಾವುಗಳೇ, ಸರ್ಕಾರಗಳೇ ಒಂದು ರೀತಿಯಲ್ಲಿ ಸಮರ ಸಾರಬೇಕಾಗುತ್ತದೆ. ಮೂಲಭೂತವಾಗಿ ಪ್ರತಿನಿತ್ಯವು ಕೂಡ ಸರ್ಕಾರ, ಸಮಾಜ ಮತ್ತು ಕುಟುಂಬ ನಿರಂತರವಾಗಿ ಇದರ ಹಿಂದೆ ಬಿದ್ದು ಕೆಲಸ ಮಾಡಬೇಕಾಗುತ್ತದೆ. ಹಾಗಾಗಿ, ಆ ಮಕ್ಕಳಿಗೆ ಕೌನ್ಸಿಲಿಂಗ್ ಮಾಡತಕ್ಕಂಥದ್ದಾಗಲೀ, ಮಾನ್ಯ ಸದಸ್ಯರುಗಳು ಮಾತನಾಡತಕ್ಕಂಥ ಸಂದರ್ಭದಲ್ಲಿ ಮಕ್ಕಳಿಗೆ ಶಾಲಾ ಮತ್ತು ಕಲಿಕೆಗಳ ಒತ್ತಡಗಳು ಹೇಗೆ ಇರಬೇಕೆಂದು ಹೇಳಿದರೆಲ್ಲಾ ಅವೆಲ್ಲವೂ ಕೂಡ ಆಗಬೇಕಾಗುತ್ತದೆ. ನಾವು ಇದಕ್ಕೆ ಒಂದು ಹೊಸ ತಿದ್ದುಪಡಿಯನ್ನು ತರುತ್ತಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಕೂಡ ಹೇಳಿದ್ದಾರೆ. ಆ ಕೆಲಸ ಆದಷ್ಟು ಬೇಗನೆ ಆಗಬೇಕು. ಈಗ ಇದಕ್ಕೆ ಒಂದು ಆಕ್ಟ್ ಇದೆಯಲ್ಲಾ, ಅದಕ್ಕೆ ತಿದ್ದುಪಡಿಯನ್ನು ತರತಕ್ಕಂಥ ಕೆಲಸ ನಾವು ಮಾಡುತ್ತೇವೆ ಎಂಬುದನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಅದು ಆದಷ್ಟು ಬೇಗನೆ ಆಗಬೇಕು. ಇದಕ್ಕೆ ಪರಿಹಾರ there is no solution. ಡ್ರಗ್ಸ್ ತೆಗೆದುಕೊಳ್ಳುವುದು, Consuming alcohol is not a solution for your problems. It will add one more problem to your life ಎಂದು ಮಹಾತ್ಮ ಗಾಂಧೀಜಿಯವರು ಹೇಳಿರುವುದನ್ನು ನಾನು ಇಲ್ಲಿ ಹೇಳಿದ್ದೇನೆ. ಬಹಳ ಮುಖ್ಯವಾಗಿ ವಿಶೇಷವಾಗಿ ಮಕ್ಕಳಿಗೆ ಸಂಬಂಧಪಟ್ಟಂತಹ ತಿದ್ದುಪಡಿಗಳನ್ನು ಕಾನೂನಿನಲ್ಲಿ ಅವರನ್ನು ರಕ್ಷಣೆ ಮಾಡುವುದಕ್ಕೆ ತರಬೇಕು. ಈ ಡ್ರಗ್ಸ್‌ಗಳ ಬಗ್ಗೆ ಮತ್ತು ಈ Cyber Crimes ನಲ್ಲಿ ಮಕ್ಕಳನ್ನು ಏನು ಸೆಳೆದುಕೊಳ್ಳುತ್ತಿದ್ದಾರೆ ಅದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಪೋಷಕರು ತನ್ನ ಮಕ್ಕಳು ಜೊತೆಗೆ ಹೇಗೆ ಇರಬೇಕು, ಆ ಉತ್ತಮವಾದ ಕುಟುಂಬವನ್ನು ಕಟ್ಟುವುದಕ್ಕೆ ಅವರು ಅಲ್ಲಿ ಯಾವ ರೀತಿಯ ಕೌಶಲ್ಯವನ್ನು 'Life is an Art' ಬದುಕು ಎನ್ನತಕ್ಕಂಥದ್ದು ಅದು ಒಂದು ಕಲೆ. ಬರೀ ನಾವು ಬಣ್ಣ ಹಚ್ಚಿಕೊಂಡು part ಮಾಡುವುದೊಂದೇ ಕಲೆ ಅಲ್ಲ. Life is an Art. ಆ ಕಲೆಯನ್ನು ಪ್ರತಿಯೊಬ್ಬ ಪುರುಷನಾಗಲೀ ಅಥವಾ ಮಹಿಳೆಯಾಗಲೀ ಅಥವಾ ತಂದೆ-ತಾಯಿಯಾಗಲೀ ಅಥವಾ ದೊಡ್ಡಪ್ಪ-ಚಿಕ್ಕಪ್ಪ ಆಗಲೀ ಅಥವಾ ಅಜ್ಜ-ಅಜ್ಜಿಯಾಗಲೀ ಅಥವಾ ಕುಟುಂಬದಲ್ಲಿ, ಸಮಾಜದಲ್ಲಿ ಯಾರೇ ಆಗಲೀ ಆ ಕೌಶಲ್ಯವನ್ನು ಕಲಿಯಬೇಕಾದರೆ ಯಾವ ರೀತಿಯಲ್ಲಿ ಪೋಷಕರಿಗೆ ನಾವು prepare ಮಾಡಬೇಕು? Private School ನಲ್ಲಿ ತಂದೆ-ತಾಯಿ parents' meeting ಕರೆಯುತ್ತಾರೆ. ಅವರುಗಳಿಗೆ ಏನೇನು ಆಗುತ್ತದೆಂದು ಹೇಳುತ್ತಾರೆ. ಇತ್ತೀಚೆಗೆ ನನ್ನ ಮೊಮ್ಮಗಳ ಶಾಲೆಗೆ ನನ್ನ ಮಗ ಹೋಗಿದ್ದನು. ಸರ್ಕಾರಿ ಶಾಲೆಯಲ್ಲಿ ಏನು ಆಗುತ್ತಿದೆ? ಅದೇ ರೀತಿಯಲ್ಲಿ ಇಲ್ಲೂ ಆಗಬೇಕಲ್ಲವೇ? ಆದ್ದರಿಂದ ಪೋಷಕ ಕುಟುಂಬ ನಿರ್ವಹಣೆ ವಿಧಾನಗಳನ್ನು ಕಲಿಸುವ ಜೊತೆಗೆ ಒಂದು ಶಿಸ್ತುಬದ್ಧ ಜೀವನವನ್ನು ಅಳವಡಿಸಿಕೊಳ್ಳುವುದಕ್ಕೆ ಮಕ್ಕಳನ್ನು friends ರೀತಿ ನಾವು treat ಮಾಡಬೇಕು. ಅವರಿಗೆ ಒಂದು ರೀತಿಯಲ್ಲಿ ಮಾದಕ ವಸ್ತುಗಳ ದುರುಪಯೋಗ ಮಾಡಿಕೊಳ್ಳದೇ ಅಪಾಯವನ್ನು ಕಡಿಮೆ ಮಾಡಬೇಕೆಂದರೆ, ಆ ಅಪಾಯ ಕಡಿಮೆಯಾಗಿ ನಮ್ಮ ಮಕ್ಕಳು ಉಳಿಯಬೇಕೆಂದರೆ ಕುಟುಂಬ ಮತ್ತು ಪೋಷಕರು ಬಹಳ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

important ಆಗುತ್ತಾರೆ. ಆದಕಾರಣ ನಾವು ಇಷ್ಟೊತ್ತು ಸದನದಲ್ಲಿ ಚರ್ಚೆ ಮಾಡಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಈ ವಿಧೇಯಕವನ್ನು ತೆಗೆದುಕೊಂಡು ಬಂದಿದ್ದಾರೆ. What next? ಸರ್ಕಾರ ಇದಕ್ಕೆ ಒಂದು ಉತ್ತರವನ್ನು ಕೊಡುತ್ತದೆ. ಅದು ನಮಗೆ ಮುಖ್ಯ ಅಲ್ಲ. ಸರ್ಕಾರದಿಂದ ಏನಾದರೂ ಒಳ್ಳೆಯದಾಗಬೇಕು. ಮಕ್ಕಳ ಬದುಕಿಗೆ ಅನುಕೂಲ ಆಗಬೇಕು. ಸರ್ಕಾರ ಏನು ತಿದ್ದುಪಡಿಗಳನ್ನು ಮಾಡುತ್ತೀರೋ ಅಥವಾ ಹೊಸ ಕಾನೂನುಗಳನ್ನು ಜಾರಿಗೆ ತರುತ್ತೀರೋ ಆ ರೀತಿಯ ಉತ್ತರಗಳು ಬೇಕು ಅಥವಾ ನಮ್ಮಲ್ಲಿಯೇ experts ಅನ್ನು ತೆಗೆದುಕೊಂಡು ಬಂದು ಅಥವಾ ವಿರೋಧ ಪಕ್ಷದಲ್ಲಿರಬಹುದು ಅಥವಾ ಆಡಳಿತ ಪಕ್ಷದಲ್ಲಿರಬಹುದು ಅಥವಾ ಯಾರು ನಮ್ಮ ಒಳ್ಳೆಯ ಸ್ನೇಹಿತರು ಇದ್ದಾರೋ ಅವರನ್ನೂ ಸೇರಿಕೊಂಡು ಒಂದು ವಿಸ್ತೃತವಾದ ಚರ್ಚೆ ಮಾಡಿ, ಆ ಚರ್ಚೆಯ report ಮೇಲೆ ಏನೆಲ್ಲಾ ಮಾಡಬಹುದು ಅದನ್ನೆಲ್ಲಾ ಸಲಹೆಗಳನ್ನು ತೆಗೆದುಕೊಂಡು ನಾವು ಮುಂದುವರೆದರೆ ಇದನ್ನು ಖಂಡಿತವಾಗಿಯು ಕೂಡ ತಡೆಯಬಹುದು ಎಂದು ನನ್ನ ಅಭಿಪ್ರಾಯವನ್ನು ಹೇಳಿ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಿಮಗೆಲ್ಲರಿಗೂ ವಂದಿಸಿ ನನ್ನ ಮಾತಿಗೆ ವಿರಾಮ ಹೇಳುತ್ತೇನೆ. ನಮಸ್ಕಾರ.

ಶ್ರೀ ಎಸ್.ವಿ. ಸಂಕನೂರ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಅರಿಯದ ಮಕ್ಕಳು ಯಾವ ರೀತಿ ಸಮಸ್ಯೆಗಳನ್ನು . . .

ಶ್ರೀ ಎಸ್.ಎಲ್.ಭೋಜೇಗೌಡ:- ಅದು ಹದಿಹರೆಯದ ಮಕ್ಕಳು. ಅರಿಯದ ಮಕ್ಕಳು ಎಂದರೆ ಏನೂ ತಿಳಿಯದ ಮಕ್ಕಳು.

ಶ್ರೀ ಎಸ್.ವಿ. ಸಂಕನೂರ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಹದಿಹರೆಯದ ಮಕ್ಕಳು ಯಾವ ರೀತಿಯ ಸಮಸ್ಯೆಗಳನ್ನು . . .

ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಇದರಲ್ಲಿ ಪಾಪ ಆ ಮಕ್ಕಳಿಗೆ ಗೊತ್ತಿಲ್ಲ. ಏನೂ ಅರಿಯದ ಮಕ್ಕಳು ಎಂದು use ಮಾಡಬಹುದು. ಆದರೆ ಹದಿಹರೆಯದ. . .

ಶ್ರೀ ಎಸ್.ಎಲ್.ಭೋಜೇಗೌಡ:- ಅಸುಗೂಸಿಗೆ ಅರಿಯದ ಮಕ್ಕಳು ಎನ್ನುತ್ತಾರೆ. ಆದರೆ ಇದರಲ್ಲಿ ಹದಿಹರೆಯದ ಮಕ್ಕಳು.

ಶ್ರೀ ಪುಟ್ಟಣ್ಣ:- ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು expert ಇದ್ದಾರೆ.

ವೈಸ್ ಛೇರ್ಮನ್:- ಮಾನ್ಯ ಎಸ್.ವಿ.ಸಂಕನೂರ ರವರೇ, ಅದು ಹದಿಹರೆಯದ ಮಕ್ಕಳು. ಅರಿಯದ ಮಕ್ಕಳು ಎಂದರೆ ಸಣ್ಣ ಕೂಸು.

(ಮುಂದು)

(212)11.3.2025/5.00/ಎಂ.ಎಂ-ವಿ.ಕೆ (ವೈಸ್ ಛೇರ್ಮನ್ ಉಪಸ್ಥಿತಿ)

ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):- ಅರಿಯದ ಎಂದರೆ, ''ಅತ್ತಿತ್ತ ನೋಡದಿರು, ಅತ್ತು ಹೊರಳಾಡದಿರು; ನಿದ್ದೆ ಬರುವಳು; ಹೊದ್ದು ಮಲಗು ಮಗುವೇ ಜೋ . . . ಜೋ . . .''

(ಸದನದಲ್ಲಿ ನಗು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಪಿ. ಸಂಕನೂರ:- ಮಾನ್ಯ ಭೋಜೇಗೌಡರೇ, ನಾನು ಮಾತನಾಡುವುದಕ್ಕೆ ಬಿಡಿ.

ವೈಸ್ ಛೇರ್ಮನ್:- ನಿಮ್ಮ ಹಾಡಿಗೆ ಈ ಮಕ್ಕಳು ಮಲಗದಿದ್ದರೆ ಸಾಕು. ಮಾನ್ಯ ಸಂಕನೂರ್‌ರವರೇ, ಪ್ರಾರಂಭ ಮಾಡಿ.

ಶ್ರೀ ಎಸ್.ಪಿ. ಸಂಕನೂರ:- ಮಾನ್ಯ ಸಭಾಪತಿಯವರೇ, ವಿಷಯ ಏನು ಪ್ರಸ್ತಾಪವಾಗಿದೆ ನಾನು ಅದೇ ಶಬ್ಧವನ್ನು ಬಳಸಿದ್ದೇನೆ. ಇಲ್ಲಿರುವುದೇನೆಂದರೆ, ಹದಿಹರೆಯದ ಮಕ್ಕಳು ಏನಿವತ್ತು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಮತ್ತು ಅದಕ್ಕೆ ಪರಿಹಾರಗಳೇನು ಎನ್ನುವುದರ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಇವತ್ತು ಹಲವಾರು ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನು ಸಾಧ್ಯವಾದಷ್ಟು ಏನು ವಿಷಯ ಪ್ರಸ್ತಾಪವಾಗಿದೆ ಅದು repeat ಆಗದಂತೆ ನಾನು ಕೆಲವೊಂದು ವಿಷಯಗಳನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಮೊದಲನೆಯದಾಗಿ, ಪಾಲಕರು ಮಕ್ಕಳ ಮೇಲೆ ಯಾವ ರೀತಿ ಒತ್ತಡವನ್ನು ತರುತ್ತಿದ್ದಾರೆ ಅದರಿಂದ ಮಕ್ಕಳ ಮೇಲೆ ಏನೇನು ಪರಿಣಾಮವಾಗುತ್ತಿದೆ ಎಂಬ ಬಗ್ಗೆ ಎರಡು ಉದಾಹರಣೆಗಳನ್ನು ಕೊಡಬಯಸುತ್ತೇನೆ. ಈಗಾಗಲೇ ಕೆಲವು ವಿಷಯಗಳು ಪ್ರಸ್ತಾಪವಾಗಿವೆ. ಇವತ್ತು ಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸ್ ಆಗುತ್ತಾರೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸ್ ಆದಾಗ ಮೊದಲ ಬಾರಿಗೆ ಅವರ ಜೀವನದಲ್ಲಿ ಒಂದು ಅವಕಾಶ ಸಿಗುತ್ತದೆ. ಅದೇನೆಂದರೆ ತಾನು ಆರ್ಟ್ಸ್ ತೆಗೆದುಕೊಳ್ಳಬೇಕೋ, ಸೈನ್ಸ್ ತೆಗೆದುಕೊಳ್ಳಬೇಕೋ ಅಥವಾ ಕಾಮರ್ಸ್ ತೆಗೆದುಕೊಳ್ಳಬೇಕೋ ಎಂದು ವಿಷಯದ ಆಯ್ಕೆ ಬಗ್ಗೆ ಹಕ್ಕು ಸಿಗುತ್ತದೆ. ಪಾಲಕರು ಏನು ಮಾಡುತ್ತಾರೆಂದರೆ ಮಕ್ಕಳ ಹಕ್ಕನ್ನು ಕಸಿದುಕೊಳ್ಳುತ್ತಾರೆ. ''ನನ್ನ ಮಗ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.೮೦ರಷ್ಟು ಅಂಕಗಳನ್ನು ತೆಗೆದುಕೊಂಡಿದ್ದಾನೆ. ನೀನು ಏನಿದ್ದರೂ ಸೈನ್ಸ್ ಅನ್ನೇ ಓದಬೇಕು. ಕಾಮರ್ಸ್‌ಗೆ, ಆರ್ಟ್ಸ್‌ಗೆ ಹೋಗಬೇಡ ಸೈನ್ಸ್ ಅನ್ನೇ ಓದಬೇಕು'' ಎಂದು ಈ ರೀತಿಯ ಒತ್ತಡಗಳನ್ನು ಪಾಲಕರು ಮಕ್ಕಳ ಮೇಲೆ ಹೇರುತ್ತಾರೆ. ಆದರೆ ಆ ಮಗುವಿನ ಆಸಕ್ತಿ ಬೇರೆಯೇ ಇರುತ್ತದೆ. ನಾನು ಆರ್ಟ್ಸ್ ತೆಗೆದುಕೊಳ್ಳಬೇಕು, ಇಂಗ್ಲಿಷ್ ತೆಗೆದುಕೊಳ್ಳಬೇಕು ತಾನು ಪ್ರಾಧ್ಯಾಪಕನಾಗಬೇಕು ಎಂದು, ಕಾಮರ್ಸ್ ತೆಗೆದುಕೊಂಡು ಚಾರ್ಟರ್ಡ್ ಅಕೌಂಟೆಂಟ್ ಆಗಬೇಕೆಂದು ಕೆಲವು ಮಕ್ಕಳಿಗೆ ಆಸೆ ಇರುತ್ತದೆ. ಮಕ್ಕಳ ಆಸಕ್ತಿ ಬಗ್ಗೆ ಪಾಲಕರು ಏನೂ ವಿಚಾರ ಮಾಡುವುದಿಲ್ಲ. ತಮ್ಮ ಇಚ್ಛೆಯ ಪ್ರಕಾರ ಮಕ್ಕಳ ಮೇಲೆ ಒತ್ತಡ ಹೇರುತ್ತಾರೆ. ಹೀಗಾಗಿ ಮಕ್ಕಳು ಯಾವ ವಿಷಯದಲ್ಲಿ excellence ಪಡೆಯಬೇಕಾಗುತ್ತದೆ ಅದನ್ನು ಪಡೆಯುವುದಕ್ಕಾಗುವುದಿಲ್ಲ. ಪಾಲಕರಿಗೆ ನನ್ನ ಮಗನಿಗೆ ಸೈನ್ಸ್ ಓದಿದರೆ ಮಾತ್ರ ಭವಿಷ್ಯವಿದೆ, ಆರ್ಟ್ಸ್ ತೆಗೆದುಕೊಂಡರೆ ಭವಿಷ್ಯ ಇಲ್ಲ ಎಂಬ ತಪ್ಪು ಕಲ್ಪನೆ ಇದೆ. ಇದನ್ನು ಹೋಗಲಾಡಿಸಬೇಕು. ಇದು ಮೊದಲನೆಯದು. ಎರಡನೆಯದಾಗಿ, ಈಗಾಗಲೇ ಇದನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಪಾಲಕರು ಯಾವ ರೀತಿ ಮಕ್ಕಳು ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಡ ಹೇರುತ್ತಿದ್ದಾರೆ. ಇದು ನಿಮ್ಮ ಮತ್ತು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಪರೀಕ್ಷೆಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಅಂಕ ಬರಲಿಲ್ಲವೆಂದರೆ ಅನುತ್ತೀರ್ಣರಾದ ಕೂಡಲೇ ವಿಷ ತೆಗೆದುಕೊಳ್ಳುವುದು, ಆತ್ಮಹತ್ಯೆ ಮಾಡಿಕೊಳ್ಳುವುದು, ರೈಲ್ವೆ ಹಳಿಗೆ ಬೀಳುವುದು ಇಂತಹ ಕೆಲವು ಉದಾಹರಣೆಗಳನ್ನು ಕೇಳಿದ್ದೇವೆ. ಆದರೆ ಕೆಲವು ಮಕ್ಕಳು ನಿರೀಕ್ಷಿತ ಮಟ್ಟದಲ್ಲಿ ಅಂಕ ಬರಲಿಲ್ಲವೆಂದರೆ ವಿಷ ತೆಗೆದುಕೊಂಡ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದಾಹರಣೆಗಳಿವೆ. ಏಕೆಂದರೆ ಪಾಲಕರು ನೀನು 80% ಮಾಡಬೇಕೆಂದು ಹೇಳಿರುತ್ತಾರೆ ಆದರೆ ಆ ಮಗು 75% ತೆಗೆದುಕೊಂಡಿರುತ್ತಾನೆ. ಪಾಲಕರು ಹಿಂಸೆ ಕೊಡುತ್ತಾರಂದು ತಿಳಿದುಕೊಂಡು ನಿರೀಕ್ಷಿತ ಮಟ್ಟದಲ್ಲಿ ಅಂಕ ಬರಲಿಲ್ಲವೆಂದರೂ ಕೂಡ ಆತ್ಮಹತ್ಯೆ ಮಾಡಿಕೊಂಡಂತಹ ಸಾಕಷ್ಟು ಉದಾಹರಣೆಗಳಿವೆ. ಪಾಲಕರು ಏನು ಮಾಡುತ್ತಾರೆಂದರೆ, ತಮ್ಮ ಮನೆಯ ಪಕ್ಕದಲ್ಲಿ ಒಂದು ಹುಡುಗ ಇರುತ್ತಾನೆ. ಆ ಹುಡುಗ ಪಿ.ಯು.ಸಿ.ಯಲ್ಲಿ ಹೆಚ್ಚು ಅಂಕಗಳನ್ನು ತೆಗೆದುಕೊಂಡು ಇಂಜಿನಿಯರ್ ಆಗುತ್ತಾನೆ, ಫಾರಿನ್‌ಗೆ ಹೋಗುತ್ತಾನೆ. ಫಾರಿನ್‌ಗೆ ಹೋದ ಒಂದು ವರ್ಷಕ್ಕೆ ಸುಮಾರು ರೂ. 12 ಲಕ್ಷಗಳ ಪ್ಯಾಕೇಜ್ ಸಿಗುತ್ತದೆ. ಹಾಗಾಗಿ ಅವರಂತೆ ನನ್ನ ಮಗ ಆಗಬೇಕು ಎಂದು ಬಯಸುತ್ತಾರೆ. ಆದರೆ ಯಾವ ಪಾಲಕರು ಕೂಡ ತನ್ನ ಮಗನನ್ನು ಸೈಂಟಿಸ್ಟ್ ಮಾಡುತ್ತೇನೆ, ದೊಡ್ಡ ಪ್ರೊಫೆಸರ್ ಮಾಡುತ್ತೇನೆ, ಸಾಹಿತಿ ಮಾಡುತ್ತೇನೆ, ದೊಡ್ಡ ಕ್ರೀಡಾಪಟುವನ್ನಾಗಿ ಮಾಡುತ್ತೇನೆ ಅಥವಾ ನನ್ನ ಮಗನನ್ನು ಐ.ಎ.ಎಸ್. ಅಧಿಕಾರಿ ಮಾಡುತ್ತೇನೆ, ಐ.ಪಿ.ಎಸ್. ಅಧಿಕಾರಿಯನ್ನಾಗಿ ಮಾಡುತ್ತೇನೆ ಎಂಬ ಬಗ್ಗೆ ಯಾರಿಗೂ ಕಲ್ಪನೆ ಇಲ್ಲ. ಬರೀ ಡಾಕ್ಟರ್ ಆಗಬೇಕು, ಇಂಜಿನಿಯರ್ ಆಗಬೇಕು ದುಡ್ಡು ಗಳಿಸಬೇಕು. ಹಾಗಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ಶಿಕ್ಷಣ ಇಲಾಖೆ ಇರಬಹುದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇರಬಹುದು ಪಾಲಕರ ಸಭೆ ಕರೆದು ಇದರ ಬಗ್ಗೆ ಸರ್ಕಾರದವರು ಸರಿಯಾದ ತಿಳುವಳಿಕೆ ನೀಡಲು ಸಭೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಎರಡನೆಯದಾಗಿ, ಇದನ್ನು ಬಹಳ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇವತ್ತು ವಿಶೇಷವಾಗಿ professional courses ನಲ್ಲಿ ಲೈಂಗಿಕ ಕಿರುಕುಳ ಎಷ್ಟಾಗುತ್ತಿದೆ ಎಂಬುದರ ಬಗ್ಗೆ ವಿವರಣೆ ಹೇಳುವುದಕ್ಕೆ ಹೋಗುವುದಿಲ್ಲ. ಮಕ್ಕಳ ಮೇಲೆ, ವಿದ್ಯಾರ್ಥಿಗಳ ಮೇಲೆ ಲೈಂಗಿಕ ಕಿರುಕುಳ ಎಷ್ಟಾಗುತ್ತದೆ ಎಂದರೆ, ರೂಲ್ಸ್ ಮಾಡಿದ್ದೀರಿ. ರೂಲ್ಸ್ ಮಾಡಿದರೂ ಕೂಡ ಅದು ನಿಂತಿಲ್ಲ, ನಿಯಂತ್ರಣವಾಗಿಲ್ಲ. Professional courses ಗೆ ಹೋದ ಎಷ್ಟೋ ಮಕ್ಕಳು ಹಿಂಸೆಯನ್ನು ತಾಳಕೊಳ್ಳಲಾಗದೇ ವಾಪಸ್ ಬಂದಿದ್ದಾರೆ. ಇದು ಇಂಜಿನಿಯರಿಂಗ್, ಮೆಡಿಕಲ್ ಕೋರ್ಸ್ ಅಲ್ಲದೇ ಬಹಳಷ್ಟು professional courses ನಲ್ಲಿ ನಡೆಯುತ್ತದೆ. ರೂಲ್ಸ್ ಮಾಡಿದರೂ ಕೂಡ ಏತಕ್ಕೆ ಇದು ಇನ್ನೂ ನಿಯಂತ್ರಣವಾಗಿಲ್ಲ? ಸರ್ಕಾರ ಇದರ ಬಗ್ಗೆ ಇನ್ನೂ ಹೆಚ್ಚಿನ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಬಹಳ ಜನ ವಿದ್ಯಾರ್ಥಿಗಳು ಬರೀ ಕೋರ್ಸ್ ಬಿಟ್ಟು ಬಂದಿಲ್ಲ ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳಿವೆ. ಹೀಗಾಗಿ ಇವತ್ತು ಒಂದು ಅಧ್ಯಯನದ ಪ್ರಕಾರ ಶೇ.47ರಷ್ಟು ವಿದ್ಯಾರ್ಥಿಗಳು ಇನ್ನೂ ಕೂಡ ಈ ರೀತಿಯ ಲೈಂಗಿಕ ಹಗರಣಕ್ಕೆ ಬಲಿಯಾಗುತ್ತಿದ್ದಾರೆ ಎಂಬ ವರದಿ ಇದೆ. ಇದನ್ನು ನಿಯಂತ್ರಣ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಎರಡನೆಯದಾಗಿ, ಮಾನ್ಯ ಸದಸ್ಯರುಗಳು ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಆದರೂ ಅನಿವಾರ್ಯವಾಗಿ ನಾನಿಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ.

ಇವತ್ತು ಎಷ್ಟೊಂದು ಯುವಕರು ಮದ್ಯಪಾನದ ವ್ಯಸನಕ್ಕೆ ಒಳಗಾಗುತ್ತಿದ್ದಾರೆ. ಆರೋಗ್ಯ ಕೆಟ್ಟಿತೆಂದರೆ, ನಮ್ಮಲ್ಲಿ ಒಂದು ಗಾದೆ ಮಾತಿದೆ. 'ಆರೋಗ್ಯ ಸಂಪತ್ತಿಗಿಂತ ಮಿಗಿಲಾದ ಸಂಪತ್ತು ಯಾವುದೂ ಇಲ್ಲ'. ಮನುಷ್ಯ ಒಂದು ಸಲ ಆರೋಗ್ಯ ಕಳೆದುಕೊಂಡರೆ ಜೀವನದಲ್ಲಿ ಏನನ್ನೂ ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನಿವತ್ತು ಮದ್ಯಪಾನದ ವ್ಯಸನವನ್ನು ನಿಯಂತ್ರಣ ಮಾಡುವುದಕ್ಕೆ ಕೂಡ ಸಾಕಷ್ಟು ನಿಯಮಗಳನ್ನು ಮಾಡಿದ್ದಾರೆ. ಶಾಲಾ ಕಾಲೇಜುಗಳ ಪಕ್ಕದಲ್ಲಿ, ಮಠ ಮಾನ್ಯಗಳ ಪಕ್ಕದಲ್ಲಿ ಮದ್ಯಪಾನ ಅಂಗಡಿ ಇರಬಾರದು ಎಂದಿದೆ. ಬೀಡಿ ಅಂಗಡಿಯಲ್ಲಿ ಏನು ಗುಟ್ಕಾ ಅನ್ನು ನಿಷೇಧ ಮಾಡಿದ್ದರೂ ಕೂಡ ಅನಧಿಕೃತವಾಗಿ ಕಿರಾಣಿ ಅಂಗಡಿಯಲ್ಲಿ ಮದ್ಯಪಾನ ಇರಬಹುದು, ಗುಟ್ಕಾ ಇರಬಹುದು ಅದು ಇವತ್ತು ಕೂಡ ಮಾರಾಟವಾಗುತ್ತಿದೆ. ಪೋಲೀಸ್ ಇಲಾಖೆ ಏನು ಕೆಲಸ ಮಾಡುತ್ತಿದೆ? ನಾನು ಸಾಕಷ್ಟು ಉದಾಹರಣೆಗಳನ್ನು ಕೊಡುತ್ತೇನೆ. ನಮ್ಮ ಏರಿಯಾದಲ್ಲಿಯೇ ಶಾಲಾ ಕಾಲೇಜುಗಳ ಬಳಿ ಎಷ್ಟು ಬೀಡಿ ಅಂಗಡಿಗಳಿವೆ ಅಲ್ಲಿ ಅನಧಿಕೃತವಾಗಿ ಮಾರಾಟ ನಡೆಯುತ್ತಿದೆ. ಪೋಲೀಸ್ ಇಲಾಖೆ strict ಆಗಬೇಕು. ಅಲ್ಲಿ ಕೆಲಸ ಆಗುತ್ತಿಲ್ಲ, ಆ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ವಿನಂತಿ ಮಾಡುತ್ತೇನೆ.

ಬಹಳ ಮುಖ್ಯವಾಗಿ ಶಿಕ್ಷಣ ಇಲಾಖೆ ಬಗ್ಗೆ ವಿನಂತಿ ಮಾಡುವುದೇನೆಂದರೆ, ದಯವಿಟ್ಟು ಮದ್ಯಪಾನ ಮಾಡುವುದರಿಂದ ಏನೇನು ಕೆಟ್ಟ ಪರಿಣಾಮಗಳಾಗುತ್ತವೆ ಎಂಬ ಬಗ್ಗೆ ಯುವಕರಿಗೆ ದಯವಿಟ್ಟು ಶಿಕ್ಷಣ ಇಲಾಖೆ ಮೂಲಕ ವಿಚಾರ ಸಂಕಿರಣ, ಸಭೆಗಳನ್ನು ಮಾಡಿ ಮಕ್ಕಳಿಗೆ ಮಾಹಿತಿ ಕೊಡಬೇಕಾದಂತಹ ಕೆಲಸ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ, ದೇಶದ ನಿಜವಾದ ಸಂಪತ್ತು ಯಾವುದೆಂದು ಪ್ರಶ್ನೆ ಮಾಡಿದರೆ ಅರಣ್ಯ ಸಂಪತ್ತು, ಖನಿಜ ಸಂಪತ್ತು ಎಂದು ಹೇಳಬಹುದು. ಆದರೆ ನಿಜವಾದ ಸಂಪತ್ತು ಯಾವುದೆಂದರೆ, ಯುವಕರು, ಮಕ್ಕಳು. ಹಾಗಾಗಿ ಅವರ ಆರೋಗ್ಯದ ಬಗ್ಗೆ, ಅವರೇನು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೋ ಅದರ ಬಗ್ಗೆ ಸರ್ಕಾರ ಕಾಳಜಿ ವಹಿಸಿ ಸಮಸ್ಯೆಗಳಿಗೆ ಸ್ಪಂದನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅತ್ಯಂತ ಹೆಚ್ಚು ಯುವಕರನ್ನು ಹೊಂದಿದಂತಹ ದೇಶವೆಂದರೆ, ಅದು ಭಾರತ ದೇಶ. ಇದು ಬಹಳ ಸಂತೋಷದ ಸಂಗತಿ. ಸ್ವಾಮಿ ವಿವೇಕಾನಂದರು ಒಂದು ಮಾತು ಹೇಳಿದ್ದಾರೆ. "The youth is the hope of our future". ಈ ದೇಶದ ಆಶಾಕಿರಣವೆಂದರೆ ಯುವಕರು. ಈ ದೇಶದ ಭವಿಷ್ಯ ಯಾರ ಕಡೆಗಿದೆ ಎಂದರೆ ಅದು ಯುವಕರ ಕಡೆಗಿದೆ. ಹಾಗಾಗಿ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುವುದು, ಒತ್ತಾಯ ಮಾಡುವುದೇನೆಂದರೆ, ಯುವಕರ ಏನು ಸಮಸ್ಯೆಗಳಿವೆ ಅವರಿಗೆ ಆದ್ಯತೆ ಕೊಟ್ಟು ಅವಕ್ಕೆಲ್ಲಾ ಪರಿಹಾರ ಮಾಡುವಂತಹ ಕೆಲಸ ಮಾಡಬೇಕು ಅವರನ್ನು ಈ ದೇಶ ಕಟ್ಟುವ ಕೆಲಸಕ್ಕೆ ತೊಡಗಿಸಿಕೊಳ್ಳಬೇಕೆಂಬ ಕಳಕಳಿಯ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಐವನ್ ಡಿ'ಸೋಜಾ ಅವರು ತಂದಿರುವಂತಹ ವಿಷಯದ ಬಗ್ಗೆ ನನಗೂ ಕೂಡ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಬಹಳಷ್ಟು ಸದಸ್ಯರುಗಳು ಮಾತನಾಡಿದ್ದಾರೆ. ಜಾಸ್ತಿ ಮಾತನಾಡುವುದಕ್ಕೆ ಹೋಗಬೇಡಿ ಎಂದು ಬಹಳಷ್ಟು ಸದಸ್ಯರ ಸಲಹೆ ಕೂಡ ಇದೆ. ಇವತ್ತು ಈ ಗಂಭೀರವಾದ ವಿಷಯವನ್ನು ಎಲ್ಲರೂ ಪ್ರಸ್ತಾಪಿಸಿದ್ದಾರೆ. ನನಗೆ ಒತ್ತಡದ ಬಗ್ಗೆ ಮಾತ್ರ ಮಾತನಾಡಬೇಕು ಎಂಬ ತೀರ್ಮಾನ ಕೂಡ ಆಗಿತ್ತು. "The pressure will start in the womb of a pregnant lady". ಹೊಟ್ಟೆಯಲ್ಲಿರುವಂತಹ fetus ನಿಂದಲೇ ಮಗು ಮೇಲೆ ಒತ್ತಡ ಪ್ರಾರಂಭವಾಗುತ್ತದೆ. ಇದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಕ್ಕಳ ಮೇಲೆ ಇರುವ ಮಾನಸಿಕವಾದ ಒತ್ತಡ. ಇವತ್ತು ಎಷ್ಟೇ ನಾವು all are equal ಎಂದು ಹೇಳಿದರೂ ಕೂಡ, we have two categories of people.

(ಮುಂದು)

(213) 11.03.2025 (5.10) ಹೆಚ್‌ಪಿ.ವಿಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ಶ್ರೀಮತಿ ಬಲ್ಕೀಸ್ ಬಾನು(ಮುಂದು):-

ಸನ್ಮಾನ್ಯ ಸಭಾಪತಿಯವರೇ, ಅಕ್ಷರಸ್ಥರು ಮತ್ತು ಅನಕ್ಷರಸ್ಥರು; ಉಳ್ಳವರು ಮತ್ತು ಇಲ್ಲದವರು ಎನ್ನುವ ಎರಡು ವರ್ಗಗಳನ್ನು ನಾವು ಕಾಣಬಹುದಾಗಿದೆ. ಉಳ್ಳವರು ಮತ್ತು ಇಲ್ಲದವರ ಮಕ್ಕಳು ಯಾವ ರೀತಿಯಲ್ಲಿ ಜೀವನ ಸಾಗಿಸುತಿರುತ್ತಾರೆ ಅದರ ಮೇಲೆ ಮಕ್ಕಳ ಬೆಳವಣಿಗೆ ಎನ್ನುವುದು ಅವಲಂಬಿತವಾಗಿರುತ್ತದೆ. ನಾನು "The pressure will start in the womb of a mother fetus" ಎಂದು ಹೇಳುತ್ತಾ, ನನ್ನ ಮಾತುಗಳನ್ನು ಪ್ರಾರಂಭ ಮಾಡಿದ್ದೆ. ಸಮಾಜ ಮತ್ತು ತಂದೆತಾಯಂದಿರು ಮಕ್ಕಳ ಮೇಲೆ ಒತ್ತಡವನ್ನು ಹಾಕುತ್ತಾರೆ. ಮದುವೆಯಾದ ಹೆಣ್ಣುಮಗಳ ಮೇಲೆ ಅತ್ತೆ ಮತ್ತು ಮಾವಂದಿರು ಗಂಡು ಮಗು ಆಗಲೇಬೇಕು ಎನ್ನುವ ಒತ್ತಡವನ್ನು ಹಾಕುತ್ತಾರೆ. ಎಷ್ಟೇ highly qualified ಆಗಿದ್ದರೂ ಸಹ, ಗಂಡು ಮಗುವಾದರೇ ಮಾತ್ರ ನಮ್ಮ ಮನೆಗೆ ಒಂದು ದೀಪವಾಗುತ್ತದೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಮಾವ ಮುಕ್ತವಾಗಿ ಈ ವಿಚಾರವನ್ನು ಹೇಳದೇ ಹೋದರೂ ಸಹ ಅತ್ತೆ, ನಾದಿನಿಯರು "ಒಂದು ಗಂಡು ಮಗು ಆದರೆ ಸಾಕು" ಎನ್ನುವ ಮಾತನ್ನು ಹೇಳುತ್ತಿರುತ್ತಾರೆ. ಆ ಹೆಣ್ಣುಮಗಳ ತಾಯಿಯೂ ಸಹ "ಮೊದಲು ಒಂದು ಗಂಡು ಮಗುವಾಗಲೀ, ಅನಂತರ ಹೆಣ್ಣು ಮಗುವಾಗಲೀ" ಎನ್ನುವ ಮಾತನ್ನು ಹೇಳುತ್ತಾಳೆ. ಈ ಎಲ್ಲ ಮಾತುಗಳು ಗರ್ಭಿಣಿ ಸ್ತ್ರೀಯ ಮೇಲೆ ಮಾತ್ರ ಪ್ರಭಾವ ಬೀರುವುದಿಲ್ಲ; ಹೊಟ್ಟೆಯಲ್ಲಿರುವ ಮಗುವಿನ ಮೇಲೂ ಆ ಪ್ರಭಾವ ಇರುತ್ತದೆ. ವೈದ್ಯರು ಗರ್ಭಿಣಿ ಸ್ತ್ರೀಯರು ಹೆಚ್ಚು ಸಂಗೀತವನ್ನು ಕೇಳಬೇಕು; ಒಳ್ಳೆಯ ಚಿತ್ರಗಳನ್ನು ಮತ್ತು ಫೋಟೋಗಳನ್ನು ನೋಡಬೇಕೆಂದು ಹೇಳುತ್ತಾರೆ. ಇದನ್ನು ಏತಕ್ಕೋಸ್ಕರ ಹೇಳುತ್ತಾರೆಂದರೇ, the fetus will grow as per our mindset. ಗರ್ಭಿಣಿ ಸ್ತ್ರೀ ಧನಾತ್ಮಕವಾಗಿ ಆಲೋಚನೆ ಮಾಡಿದರೆ, ಮಗು ಸಹ ಧನಾತ್ಮಕವಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. "The pressure will start in the womb of a mother fetus".

ಸನ್ಮಾನ್ಯ ಸಭಾಪತಿಯವರೇ, ಗಂಡ-ಹೆಂಡತಿ ಕುಳಿತುಕೊಂಡು ಹೊಟ್ಟೆಯಲ್ಲಿರುವ ಮಗು ಹೆಣ್ಣಾದರೆ ಏನು ಮಾಡಬೇಕು, ಗಂಡಾದರೇ ಏನು ಮಾಡಬೇಕೆನ್ನುವ ಬಗ್ಗೆ ಪ್ಲಾನ್ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಗಂಡು ಮಗುವಾದರೆ ಯಾವ ರೀತಿಯಲ್ಲಿ ವಿದ್ಯಾಭ್ಯಾಸವನ್ನು ಕೊಡಿಸಬೇಕು; ನನ್ನ ಮಗು ಯಾವ ರೀತಿಯಲ್ಲಿ ಇರಬೇಕು ಎನ್ನುವುದರ ಬಗ್ಗೆಯೂ ಚಿಂತನೆ ಮಾಡುವುದಕ್ಕೆ ಪ್ರಾರಂಭಿಸುತ್ತಾರೆ. ಈ ಎಲ್ಲ ಅಂಶಗಳು ಗರ್ಭದಲ್ಲಿರುವ ಶಿಶುವಿನ ಮೇಲೆ ಒತ್ತಡವಾಗಿ, ಅದರ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೆ ಅಡಚಣೆಯನ್ನುಂಟು ಮಾಡುತ್ತದೆ. ಇದನ್ನು ತಡೆಗಟ್ಟುವುದಕ್ಕೆ ಸಮಾಜ ಮತ್ತು ಪೋಷಕರ ಪಾತ್ರವೇನು ಎನ್ನುವುದನ್ನು ಹೇಳಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಇದು ಇಲ್ಲಿಗೆ ನಿಲ್ಲುವುದಿಲ್ಲ, ಒಂಭತ್ತು ತಿಂಗಳುಗಳಾದ ಮೇಲೆ ಮಗುವಿನ ಜನನವಾಗುತ್ತದೆ. ಮಗುವಿಗೆ 2-3 ವರ್ಷಗಳಾದ ನಂತರ ಮಗುವನ್ನು ಶಾಲೆಗೆ ಸೇರಿಸುವ ಸಮಯದಲ್ಲಿ ಮೆಟ್ರೋಪಾಲಿಟನ್ ಸಿಟಿಯನ್ನು ಹೊರತುಪಡಿಸಿ ಬೇರೆ ಕಡೆಯ ವಾತಾವರಣವನ್ನು ಈ ಸದನದ ಮುಂದೆ ಹೇಳುವುದಕ್ಕೆ ಬಯಸುತ್ತಿದ್ದೇನೆ. ಗಂಡು ಮಗು ಹುಟ್ಟಿದ ಕೂಡಲೇ ಖಾಸಗಿ ಶಾಲೆಗಳಿಗೆ ಸೇರಿಸುವುದಕ್ಕೆ ಚಿಂತನೆ ಮಾಡುತ್ತೇವೆಯೇ ಹೊರತು; ಸರ್ಕಾರಿ ಶಾಲೆಗಳಿಗೆ ಸೇರಿಸುವುದಕ್ಕೆ ಬಯಸುವುದಿಲ್ಲ. ಹೆಣ್ಣು ಮಗುವನ್ನು ಪಕ್ಕದ ಬೀದಿಯಲ್ಲಿರುವ ಅಂಗನವಾಡಿಗೆ ಸೇರಿಸಬೇಕೆನ್ನುವ ಚಿಂತನೆ ಮಾಡುತ್ತೇವೆ. ಈ ರೀತಿಯ ಮಾನಸಿಕ ಒತ್ತಡವನ್ನು ಆ ಮಗುವಿನ ಮೇಲೆ ಹಾಕುತ್ತೇವೆ.

ಒಂದನೇ ತರಗತಿಗೆ ಸೇರಿಸಿದ ನಂತರ ಶಾಲೆಯ ಪಠ್ಯಕ್ರಮ ಮಕ್ಕಳ ಮೇಲೆ ಯಾವ ರೀತಿಯಲ್ಲಿ ಒತ್ತಡವನ್ನು ಹೇರುತ್ತಿವೆ ಎಂದರೆ, ಮಕ್ಕಳು free and fair ಆಗಿ ಚಿಂತನೆ ಮಾಡುವುದಕ್ಕೆ ಅವಕಾಶವನ್ನು ನೀಡುವುದಿಲ್ಲ. ಶಾಲೆಯಲ್ಲಿ ಶಿಕ್ಷಕರ ಒತ್ತಡದ ಜೊತೆಗೆ ಪೋಷಕರ ಒತ್ತಡ ಇರುತ್ತದೆ. ಇದು ಮಕ್ಕಳ ಬೆಳವಣಿಗೆಗೆ ಬಹಳಷ್ಟು ಅಡಚಣೆಯನ್ನುಂಟು ಮಾಡುತ್ತದೆ. ಇಂತಹ ಸ್ಥಿತಿಯಲ್ಲಿ ಮಗುವಿನಿಂದ ನಾವು ಏನನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿದೆ?

ಸನ್ಮಾನ್ಯ ಸಭಾಪತಿಯವರೇ, ನನಗೆ ಎರಡು ಹೆಣ್ಣುಮಕ್ಕಳಿದ್ದಾರೆ; ಗಂಡು ಮಗು ಇಲ್ಲ. ನಾನು ರಾಜಕೀಯಕ್ಕೆ ಬರುವಂತಹ ಸಂದರ್ಭದಲ್ಲಿ ನನ್ನ ಅತ್ತೆ ಗಂಡು ಮಗು ಆಗುವವರೆವಿಗೂ ರಾಜಕೀಯ ಸೇರುವುದು ಬೇಡ ಎನ್ನುವ ಒತ್ತಡವನ್ನು ತಂದಿದ್ದರು.

ಸನ್ಮಾನ್ಯ ಸಭಾಪತಿಯವರೇ, ಸಮಾಜ ಮತ್ತು ಪೋಷಕರು ಮಗುವಿನ ಬೆಳವಣಿಗೆಯ ಬಗ್ಗೆ ಬಹಳ ಶಿಸ್ತಿನಿಂದ ವರ್ತಿಸಬೇಕಾಗುತ್ತದೆ. ಸಣ್ಣ ಮಗು ತನ್ನ ತಂದೆ-ತಾಯಿಯನ್ನು ಬಹಳ ಹತ್ತಿರದಿಂದ ನೋಡುತ್ತದೆ. ಶಾಲೆಗೆ ಸೇರಿದ ನಂತರ ಶಾಲೆಯ ಶಿಕ್ಷಕರನ್ನು ಬಹಳ ಹತ್ತಿರದಿಂದ ನೋಡುತ್ತದೆ. ಉದಾಹರಣೆಗೆ ಹೇಳಬೇಕಾದರೆ, ನನ್ನ ಮೊಮ್ಮಗನಿಗೆ ನಾನು ಪಾಠ ಹೇಳಿಕೊಡಬೇಕಾದರೇ, " ಅದು ಆ ರೀತಿಯಲ್ಲ; ನೀವು ಟೀಚರ್ ಆಗಿರಬಹುದು, ಆದರೆ ನಮ್ಮ ಟೀಚರ್ ಹೇಳಿರುವುದೇ ಸರಿ" ಎಂದು ಹೇಳುತ್ತಾನೆ. When the child is admitted to the school, from that time only the child will be significantly influenced by their teachers. ಮಕ್ಕಳು ಶಿಕ್ಷಕರಿಂದ ಬಹಳಷ್ಟು ಪ್ರಭಾವಕ್ಕೆ ಒಳಗಾಗುತ್ತಾರೆ. ಆದ್ದರಿಂದ ಮಕ್ಕಳಿಗೆ ಉತ್ತಮವಾಗಿರುವ ವಾತಾವರಣ ಸಿಗಬೇಕಾಗಿದೆ. ಇಲ್ಲದಿದ್ದರೇ ಮಕ್ಕಳ ಮನಸ್ಸಿನಲ್ಲಿ ಬೇರೆಬೇರೆ ರೀತಿಯಾಗಿರುವ ಆಲೋಚನೆಗಳು ಪ್ರಾರಂಭವಾಗುತ್ತವೆ. ಶಿಕ್ಷಕರ ಮತ್ತು ಪೋಷಕರ ನಡುವಿನ ಸಂಬಂಧವು ಕೆಲವು ಮಕ್ಕಳಿಗೆ key role play ಮಾಡುತ್ತದೆ. ಖಾಸಗಿ ಶಾಲೆಗಳಲ್ಲಿ ಮಾಸಿಕವಾಗಿ ಪೋಷಕರ ಸಭೆಯನ್ನು ನಡೆಸುತ್ತಾರೆ. ನಾನು ಖಾಸಗಿ ಶಾಲೆ ಮತ್ತು ಸರ್ಕಾರಿ ಶಾಲೆಗಳ ನಡುವಿನ ವ್ಯತ್ಯಾಸವನ್ನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೇ, it also plays a very key role in the development of a child. ಮಕ್ಕಳ ವರ್ತನೆ ಪೋಷಕರ ಜೊತೆಗೆ ಹೇಗಿದೆ; ಅವರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೋಷಕರು ಇತರೆ ಪೋಷಕರ ಜೊತೆಗೆ ಹೇಗೆ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದಾರೆ ಎನ್ನುವುದು ಸಹ ಮುಖ್ಯವಾಗಿರುವ ಅಂಶವಾಗುತ್ತದೆ.

ಅಂಕಪಟ್ಟಿ ಬಂದ ಕೂಡಲೇ ನಿಮ್ಮ ಮಗುವಿಗೆ ಎಷ್ಟು ಮಾರ್ಕ್ಸ್ ಬಂದಿದೆ; ನಮ್ಮ ಮಗುವಿಗೆ ಎಷ್ಟು ಮಾರ್ಕ್ಸ್ ಬಂದಿದೆ; ನನ್ನ ಮಗು first rank ಬಂದಿದೆ, ನಿಮ್ಮ ಮಗು ಯಾವ rank ಬಂದಿದೆ ಎನ್ನುವುದರ ಬಗ್ಗೆ ಚರ್ಚೆ ಪ್ರಾರಂಭವಾಗುತ್ತದೆ. ಮಾರ್ಕ್ಸ್ ತೆಗೆದುಕೊಳ್ಳುವುದರ ಬಗ್ಗೆಯೂ ಮಗುವಿನ ಮೇಲೆ ಒತ್ತಡವನ್ನು ಹಾಕಿ, ಮಗು ಮಾರ್ಕ್ಸ್ ಬಗ್ಗೆ negative aspects ಗಳನ್ನು ಯೋಚನೆ ಮಾಡುವುದಕ್ಕೆ ಪ್ರಾರಂಭ ಮಾಡುತ್ತದೆ. ಇದು ಮಗುವಿನ ಶಿಕ್ಷಣದ ಮೇಲೂ ಪ್ರಭಾವವನ್ನು ಬೀರುತ್ತದೆ.

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)

ಸನ್ಮಾನ್ಯ ಸಭಾಪತಿಯವರೇ, ಹೈಸ್ಕೂಲ್‌ನಲ್ಲಿ ಓದುವ ಮಕ್ಕಳ ಮೇಲೆ ಅವರ ಸ್ನೇಹಿತರು ಸಹ ಹೆಚ್ಚಿನ ಪ್ರಭಾವವನ್ನು ಬೀರುತ್ತಾರೆ. ನಾವು ಈ ದಿನ ಬಹಳಷ್ಟು ಋಣಾತ್ಮಕವಾಗಿ ಮಾತನಾಡಿದ್ದೇವೆ. ನಾನು ಒಬ್ಬ ಶಿಕ್ಷಕಿಯಾಗಿ, let us think positive, speak positive and let the people will also feel positive. ಎಂದು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ದೇಶದ ಮತ್ತು ನಮ್ಮ ಸಮಾಜದ ಮಕ್ಕಳು ಅಷ್ಟು ಹದಗೆಟ್ಟು ಹೋಗಿಲ್ಲ. ಆದರೂ ಕೂಡ ಮುಂಜಾಗ್ರತೆಯಾಗಿ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ ಎನ್ನುವುದರ ಬಗ್ಗೆ ವಿಷಯವನ್ನು ಮಂಡನೆ ಮಾಡಿರುವುದರಿಂದ ಇದು ಸೂಕ್ಷ್ಮವಾಗಿರುವ ವಿಚಾರವಾಗಿದೆ. ಪೋಷಕರು ಆದಷ್ಟು ಹೆಚ್ಚಿನ ಸಮಯವನ್ನು ತಮ್ಮ ಮಕ್ಕಳ ಜೊತೆಗೆ ಕಳೆಯಬೇಕಾಗಿದೆ. ಬಹಳ ವೇಗವಾಗಿ ಬೆಳೆಯುತ್ತಿರುವ scientific society ಯಲ್ಲಿ ಪೋಷಕರಿಗೆ ಮಕ್ಕಳೊಂದಿಗೆ ಕಳೆಯುವುದಕ್ಕೆ ಸಮಯವೇ ಇರುವುದಿಲ್ಲ. ಮನೆಗೆ ಹೋದ ಕೂಡಲೇ ನಾವು ನಮ್ಮದೇ ಆಗಿರುವ ಚಟುವಟಿಕೆಯಲ್ಲಿ ತೊಡಗಿರುತ್ತೇವೆ. ಮಕ್ಕಳು ಬಹಳ ಪ್ರೀತಿಯಿಂದ ತಬ್ಬಿಕೊಳ್ಳುವುದಕ್ಕೆ ಬಂದಾಗ, ಕುಳಿತುಕೊಂಡು ಮಾತನಾಡುವುದಕ್ಕೂ ನಮಗೆ ಸಮಯ ಇರುವುದಿಲ್ಲ. Even that will also lead to pressure on the minds of the children. ಮನೆಯಲ್ಲಿ ಲಿಂಗ ತಾರತಮ್ಯ ಮಾಡುವುದು ಹೆಣ್ಣು ಮಗುವನ್ನು ಒಂದು ರೀತಿಯಲ್ಲಿ ನೋಡುವುದು; ಗಂಡು ಮಗುವನ್ನು ಮತ್ತೊಂದು ರೀತಿಯಲ್ಲಿ ನೋಡುವುದು ಸಹ that will also build pressure on the mindset development of a child.

ಸನ್ಮಾನ್ಯ ಸಭಾಪತಿಯವರೇ, ಶಿಕ್ಷಣ ಸಚಿವರು ಈ ಸದನದಲ್ಲಿದ್ದಾರೆ, ಹಿಂದೆ ನಾವುಗಳು ಓದುವಂತಹ ಸಂದರ್ಭದಲ್ಲಿ ನಮ್ಮ ಶಾಲೆಗಳಲ್ಲಿ ನೈತಿಕ ಶಿಕ್ಷಣ ಎಂದು ಒಂದು ವಿಷಯವನ್ನು ಇಟ್ಟಿದ್ದರು. ಸುಮಾರು 45 ನಿಮಿಷಗಳ ಕಾಲ ನೀಡುವಂತಹ ಮೌಲ್ಯಾಧಾರಿತ ನೈತಿಕ ಶಿಕ್ಷಣದಲ್ಲಿ ಐತಿಹಾಸಿಕ ಮತ್ತು ಧಾರ್ಮಿಕತೆಗೆ ಸಂಬಂಧಪಟ್ಟಂತೆ ಕಥೆಗಳನ್ನು ಹೇಳುತ್ತಾ, ನಮ್ಮ ಮಕ್ಕಳಲ್ಲಿ ನೈತಿಕತೆ ಮತ್ತು ದೇಶಪ್ರೇಮವನ್ನು ಬೆಳೆಸುವಂತಹ ಕೆಲಸವಾಗುತ್ತಿತ್ತು. ಆದರೆ, ಇತ್ತಿಚಿನ ದಿನಗಳಲ್ಲಿ ಇದು ಕಡಿಮೆಯಾಗಿದೆ. ಮತ್ತೊಮ್ಮೆ ಶಾಲೆಗಳಲ್ಲಿ ನೈತಿಕ ಶಿಕ್ಷಣವನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾರಂಭಿಸಬೇಕೆಂದು ಮಾನ್ಯ ಶಿಕ್ಷಣ ಸಚಿವರಲ್ಲಿ ಮನವಿ ಮಾಡುತ್ತಿದ್ದೇನೆ. ನೈತಿಕ ಕಥೆಗಳನ್ನು ಕೇಳುತ್ತಾ, ಮಕ್ಕಳಲ್ಲಿ ಇರುವಂತಹ ಒತ್ತಡ ಕಡಿಮೆಯಾಗುವುದಕ್ಕೆ ಸಾಧ್ಯವಾಗುತ್ತದೆ.

ಮಾನ್ಯ ಎಸ್.ವ್ಹಿ.ಸಂಕನೂರ್‌ರವರು ಹೇಳಿದಂತೆ ಮಕ್ಕಳು ಪದವಿ ಪೂರ್ವ ಹಂತಕ್ಕೆ ಹೋದಾಗ, ಆ ಮಗುವಿನ ಅಭಿರುಚಿಯನ್ನು ನೋಡದೇ ನಮಗೆ ಏನು ಬೇಕು; ನನ್ನ ಮಗುವನ್ನು ಡಾಕ್ಟರ್ ಮಾಡಿಸಬೇಕೇ, ಇಂಜಿನಿಯರ್ ಮಾಡಿಸಬೇಕೇ, ನಾನು ಏನು ಆಗಿಲ್ಲ ಅದನ್ನು ನನ್ನ ಮಕ್ಕಳಿಗೆ ಕೊಡಿಸಬೇಕೆಂದು ಒತ್ತಡವನ್ನು ಹಾಕಿ ಸೈನ್ಸ್ ವಿಷಯವನ್ನೇ ತೆಗೆದುಕೊಂಡು ಓದಬೇಕೆಂದು ಒತ್ತಡವನ್ನು ಹಾಕಿ, ಕಡಿಮೆ ಅಂಕಗಳು ಬಂದರೇ ಆ ಮಗುವಿನ ಮೇಲೆ ಒತ್ತಡವನ್ನು ಹಾಕುತ್ತೇವೆ.

(ಮುಂದು)

(214) 11.03.2025 / 5.20 / ಪಿಕೆ:ಬಿಎನ್‌ಎಸ್ (ಸಭಾಪತಿಗಳ ಉಪಸ್ಥಿತಿ)

ಶ್ರೀಮತಿ ಬಲ್ಕೀಸ್ ಬಾನು (ಮುಂದುವರೆದಿದೆ)

ಅವನು ತೆಗೆದುಕೊಂಡ ವಿಷಯಗಳಲ್ಲಿ ಕಡಿಮೆ ಅಂಕಗಳು ಬಂದರೆ, ಪಕ್ಕದ ಮನೆಯ ಹುಡುಗರು ಎಷ್ಟು ಚೆನ್ನಾಗಿ ಅಂಕಗಳನ್ನು ತೆಗೆದುಕೊಂಡಿದ್ದಾರೆ, ನೀನೇಕೆ ಓದುವುದಿಲ್ಲ; ನಿನಗೆ ಏಕೆ ಅಷ್ಟು ಅಂಕಗಳು ಬರಲಿಲ್ಲ ಎಂದು ಒತ್ತಡ ಹಾಕುತ್ತಾರೆ. ಆದರೆ ಆತನಿಗೆ ಇಷ್ಟವಿಲ್ಲದ ವಿಷಯಗಳನ್ನು ಕೊಡಿಸಿ ಒತ್ತಡಪೂರ್ವಕವಾಗಿ ಓದುವಂತೆ ಮಾಡುತ್ತಾರೆ.

ಶ್ರೀ ಎಸ್.ಎಲ್.ಭೋಜೇಗೌಡ:- ಮಾನ್ಯ ಸಭಾಪತಿಗಳೆ, ಹಾಸ್ಯಗಾರರಾದ ಮಾನ್ಯ ಪ್ರಾಣೇಶ್‌ರವರು ಒಂದು ಮಾತನ್ನು ಯಾವಾಗಲೂ ಹೇಳುತ್ತಿರುತ್ತಾರೆ. ೩೦ ಅಂಕಗಳನ್ನು ತೆಗೆದುಕೊಂಡು ಫೇಲ್ ಆಗಿದ್ದೀಯಾ, ಪಕ್ಕದ ಮನೆಯ ಸೌಮ್ಯಳನ್ನು ನೋಡು ಎಂದು ದೊಡ್ಡವರು ಬೈಯುತ್ತಾರೆ. ಆತ, ಒಂದು ವರ್ಷದಿಂದ ಆಕೆಯನ್ನು ನೋಡಿಯೇ ನನಗೆ ೩೦ ಅಂಕಗಳು ಬಂದಿದ್ದು ಎಂದು ಹೇಳುತ್ತಾನಂತೆ.

(ಸದನದಲ್ಲಿ ನಗು)

ಶ್ರೀಮತಿ ಬಲ್ಕೀಸ್ ಬಾನು:- ಮಾನ್ಯ ಸಭಾಪತಿಗಳೆ, ಮಾನ್ಯ ಭೋಜೇಗೌಡರು ಮಧ್ಯದಲ್ಲಿ ಎದ್ದುನಿಂತು ಈ ರೀತಿ ಚುಟುಕುಗಳನ್ನು ಹೇಳಿದರೆ ಸದನದಲ್ಲಿ ಒಂದು ರೀತಿಯ ಸಂತೋಷದ ವಾತಾವರಣ ನಿರ್ಮಾಣವಾಗುತ್ತದೆ. ಅವರಿಗೆ ಧನ್ಯವಾದಗಳು.

ಮಾನ್ಯ ಸಭಾಪತಿಗಳೆ, ತನ್ನ ಸ್ನೇಹಿತನಿಗಿಂತ ಅಂಕಗಳನ್ನು ಕಡಿಮೆ ತೆಗೆದುಕೊಂಡ ಮೇಲೆ ಆತನಿಗೆ disparity ಆಗುತ್ತಿರುತ್ತದೆ. ಸ್ನೇಹಿತರಿಂದ ದೂರ ಹೋಗುತ್ತಿರುತ್ತಾನೆ, ಪೋಷಕರ ಬಳಿ ಮಾತನಾಡುವುದನ್ನು ಕಡಿಮೆ ಮಾಡುತ್ತಾನೆ. ಆ ಒಂದು ಒತ್ತಡದಿಂದ ದುಶ್ಚಟಗಳಿಗೆ ಬಲಿಯಾಗುತ್ತಾನೆ. ಕಾಲೇಜಿಗೆ ಹೋಗಿ ೩೦% – ೪೦% ಅಂಕಗಳನ್ನು ಪಡೆದುಕೊಂಡ ತಕ್ಷಣ we should not decide about the children on the basis of marks. ಎಲ್ಲವೂ ನಮ್ಮ ಸಿಲಬಸ್ ಅಂಕಗಳ ಆಧಾರಿತ ಆಗಬಾರದು, ನಮ್ಮ ಸಿಲಬಸ್ ವ್ಯಕ್ತಿತ್ವ ವಿಕಾಸಕ್ಕೆ ಕಾರಣವಾಗಬೇಕು. ಇದು ಆಗದೇ ಇದ್ದರೆ ದುಶ್ಚಟಗಳಿಗೆ ಬಲಿಯಾಗುತ್ತಾರೆ. ಅಂತಹ ಸಂದರ್ಭದಲ್ಲಿ ಪಕ್ಕದ ಮನೆಯಲ್ಲಿ ಯಾರು ಓದುತ್ತಿರುವುದಿಲ್ಲವೋ ಅಂಥವರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳುತ್ತಾನೆ. ಮದ್ಯಪಾನ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡ್ರಗ್ಸ್ ಇಂತಹ ಚಟಗಳಿಗೆ ಬಿದ್ದು, ಕಾಯಿಲೆ ಬಂದು ಸಾಯುವ ಸ್ಥಿತಿಗೆ ಹೋಗುವಂಥದ್ದೂ ಆಗುತ್ತದೆ. Subject oriented education ಆಗಬೇಕೇ ವಿನಃ marks oriented education ಆಗಬಾರದು ಎನ್ನುವುದು ನನ್ನ ಸಲಹೆಯಾಗಿದೆ. ಸರ್ಕಾರ ಇದರ ಕಡೆ ಗಮನಕೊಡಬೇಕು. ಬೇರೆ ದೇಶಗಳಲ್ಲಿ ಯಾವ ರೀತಿ earn while learning ಆಗುತ್ತದೆ, ಆ ರೀತಿಯ ವಿಷಯಗಳು ಇರಬೇಕು. 1992ರಲ್ಲಿ ಸರ್ಕಾರ, ಅಮೆರಿಕಾದಲ್ಲಿ ಪ್ರಾಥಮಿಕ ಶಿಕ್ಷಣ ಹೇಗಿದೆ ಎಂದು ಅಧ್ಯಯನ ಮಾಡಲು ನನ್ನನ್ನು ಕಳುಹಿಸಿ ಕೊಟ್ಟಿತ್ತು. ಅಲ್ಲಿ ಹೋಗಿ ನಾನು ಕಂಡುಕೊಂಡಿದ್ದು ಎಂದರೆ, ಪ್ರೌಢ ಶಿಕ್ಷಣದ ಮಕ್ಕಳಿಗೂ ಕೂಡ they will start earning while learning. ಆ ರೀತಿಯ ಒಂದು ಪದ್ಧತಿ, we should focus on changing the syllabus. Syllabus ಮಕ್ಕಳಿಗೆ ತಕ್ಕಂತೆ ಇರಬೇಕು. ಮಕ್ಕಳಿಗೆ ಚಟುವಟಿಕೆ ಆಧಾರಿತ ಸಿಲಬಸ್ ಇರಬೇಕು. ಆ ಕುರಿತು ನಾನು ಸರ್ಕಾರಕ್ಕೆ ವರದಿ ಕೊಟ್ಟೆ. ಆಗ ಮಾನ್ಯ ಗೋವಿಂದೇ ಗೌಡರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿದ್ದರು. ಸರ್ಕಾರ ನಮ್ಮ ಸಲಹೆಯನ್ನು ಗಣನೆಗೆ ತೆಗೆದುಕೊಂಡಿತ್ತು. ಇಂಥದ್ದು ಇದ್ದರೆ ಮಕ್ಕಳ ಮೇಲಿನ ಒತ್ತಡ ಕಡಿಮೆಯಾಗುತ್ತದೆ, ಅವರ ವ್ಯಕ್ತಿತ್ವ ವಿಕಾಸವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಮ್ಮಲ್ಲಿ Karnataka State Commission for Protection of Child Rights ಇದೆ. ಈ ಮಕ್ಕಳ ಆಯೋಗ ಏನಿದೆ, ಇದರ ಪಾತ್ರ ಮಕ್ಕಳ ಬೆಳವಣಿಗೆಗೆ ಮಹತ್ವದ್ದಾಗಿದೆ. ಪ್ರತಿನಿತ್ಯ ಈ ರೀತಿಯ ಚಟುವಟಿಕೆಗಳನ್ನು ಗಮನಿಸಿ, ಯಾವರೀತಿಯ social activities ಇರಬೇಕು, educational activities ಯಾವರೀತಿ ಇರಬೇಕು, ಮಕ್ಕಳ ಮೇಲೆ ಯಾವರೀತಿ ಒತ್ತಡ ಬರುತ್ತದೆ, ಯಾವರೀತಿ bad elements ಪ್ರಭಾವ ಬೀರುತ್ತದೆ ಎಂಬುದನ್ನು ಗಮನಿಸಿ, ಸರ್ಕಾರಕ್ಕೆ ಸಲಹೆ ಕೊಡಬೇಕು. ಪೋಷಕರ ಜೊತೆ awareness camps ನಡೆಸಿ, ಮಕ್ಕಳಿಗೆ ಸಂಬಂಧಪಟ್ಟಂತೆ ಸೂಕ್ಷ್ಮ ವಿಷಯಗಳ ಬಗ್ಗೆ ಗಮನಿಸುವಂತೆ ಸಲಹೆ ಕೊಡಬೇಕು.

ಮಾನ್ಯ ಸಭಾಪತಿಗಳೆ, ಇವತ್ತಿನ ಸಮಾಜ money minded ಆಗಿದೆ. ಅದಕ್ಕಿಂತ ಒಳ್ಳೆಯ ಪ್ರಜೆಯಾಗಿ, ತಂದೆ-ತಾಯಿಗಳಿಗೆ ಒಳ್ಳೆಯ ಮಕ್ಕಳಾಗಿ, ಸಮಾಜದಲ್ಲಿ ಜವಾಬ್ದಾರಿಯುತವಾಗಿ ನಡೆದುಕೊಳ್ಳುವಂಥದ್ದು ಆಗಬೇಕು. ಮನೆಯಲ್ಲಿ ಮಕ್ಕಳ ಎದುರಿಗೆ earning ಬಗ್ಗೆ ಮಾತನಾಡುತ್ತಿರುತ್ತಾರೆ. ನಾನು ಈ ಸದನದಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. Dropout rate ಅಲ್ಪಸಂಖ್ಯಾತರಲ್ಲಿ ಬಹಳಷ್ಟು ಇರುತ್ತದೆ ಎಂದು ಹೇಳುತ್ತೇವೆ. Yes, it is. ಏಕೆಂದರೆ, poor and middle class ಮನೆಗಳಲ್ಲಿ ಬೆಳಗ್ಗೆಯಿಂದ ಸಂಜೆಯ ತನಕ ಕೇವಲ ದುಡ್ಡಿನ ಬಗ್ಗೆ ಮಾತನಾಡುತ್ತಾರೆ. ಆ ಪ್ರಭಾವ ಮಕ್ಕಳ ಮೇಲೆ ಆಗಿ, ನಾನೂ ಕೂಡ ಸಣ್ಣ ವಯಸ್ಸಿನಲ್ಲೇ ದುಡಿಮೆ ಮಾಡುವುದಕ್ಕೆ ಹೋಗಬೇಕೆಂದು ಸಣ್ಣಪುಟ್ಟ ವ್ಯಾಪಾರ ಮಾಡುವುದು, ಎಲ್ಲಿ ಅವನಿಗೆ ಕೆಲಸ ಸಿಗುತ್ತದೆಯೋ ಅಲ್ಲಿಗೆ ಹೋಗುವ ಬಗ್ಗೆ ಯೋಚನೆ ಮಾಡುತ್ತಾನೆ. ಈ ರೀತಿ ವಿದ್ಯಾಭ್ಯಾಸವನ್ನು ಕಡಿತಗೊಳಿಸುವುದರಿಂದ dropouts ಜಾಸ್ತಿಯಾಗುತ್ತವೆ. ಬೇರೆ ಸ್ನೇಹಿತರ ಜೊತೆ ಸೇರಿ ಸಣ್ಣ ವಯಸ್ಸಿನಲ್ಲಿಯೇ ಹಲವಾರು ರೀತಿಯ ಡ್ರಗ್ಸ್ ಚಟಕ್ಕೆ ಬಲಿಯಾಗುತ್ತಾನೆ. ಅದು ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದಕ್ಕೆ ದಾರಿಯಾಗುತ್ತದೆ. ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಾನು ಕೊಟ್ಟಿರುವ ಸಲಹೆಗಳನ್ನು ಸರ್ಕಾರ ಗಮನಿಸುತ್ತದೆ ಎಂದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾವಿಸುತ್ತೇನೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಮಕ್ಕಳ ಶಿಕ್ಷಣವನ್ನು ಯಾವರೀತಿ ರೂಪಿಸಬೇಕು ಎಂಬ ಬಗ್ಗೆ ಶಿಕ್ಷಣ ತಜ್ಞರ ಜೊತೆಗೆ, Psychiatrists ಜೊತೆಗೆ ಸಮಾಲೋಚನೆ ಮಾಡಬೇಕು, ಅದಕ್ಕೆ ತಕ್ಕಂತೆ ಸಿಲಬಸ್ ತಯಾರು ಮಾಡಬೇಕೆಂದು ಹೇಳಬಯಸುತ್ತೇನೆ.

ಸಭಾಪತಿಯವರು:– ಮಾನ್ಯ ಸದಸ್ಯರು ಇಂತಹ ವಿಷಯಗಳ ಜೊತೆಗೆ ಅಸಹಾಯಕರಾಗಿ ಕಣ್ಣೀರು ಹಾಕುವ ತಂದೆ–ತಾಯಿಗಳ ಬಗ್ಗೆ ಮಾತನಾಡುತ್ತಿಲ್ಲ. ಇಂತಹ ಪರಿಸ್ಥಿತಿಗೆ ಪರಿಹಾರವೇನು ಎನ್ನುವುದರ ಬಗ್ಗೆಯೂ ಸಹ ಮುಂದೆ ಮಾತನಾಡುವ ಸದಸ್ಯರು ಹೇಳಬೇಕು.

ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಗಳೆ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ವಂದನೆಗಳನ್ನು ಸಲ್ಲಿಸುತ್ತೇನೆ. ಇವತ್ತು ನಾವು ಮಕ್ಕಳ ಭವಿಷ್ಯದ ಬಗ್ಗೆ ವಿಸ್ತೃತವಾಗಿ ಚರ್ಚೆ ಮಾಡುತ್ತಿದ್ದೇವೆ. ನಾನು, ಮಕ್ಕಳ ಖಿನ್ನತೆ ಬಗ್ಗೆ ಮಾತನಾಡಿ, ಅದರ ಪರಿಹಾರಕ್ಕೆ ಯಾವ ದಾರಿಯನ್ನು ಹುಡುಕಬಹುದು ಎಂಬ ವಿಚಾರವನ್ನು ಮುಂದಿಡಬಯಸುತ್ತೇನೆ. ಪೋಷಕರ ಮನಸ್ಸಿನಲ್ಲಿ ತಮ್ಮ ಮಕ್ಕಳು ಅಥವಾ ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ತೆಗೆಯಬೇಕು, ವೈದ್ಯರಾಗಬೇಕು, ಇಂಜಿನಿಯರ್ ಆಗಬೇಕು ಎಂದು ಬಯಸಿ ಅವರ ಮೇಲೆ ಒತ್ತಡ ಹೇರುತ್ತಾರೆ. ಸಮಾಜದಲ್ಲಿ ತಂದೆ–ತಾಯಿಯರ ಆರ್ಥಿಕ ಸ್ಥಿತಿ ಕುಸಿದಾಗ ಅಥವಾ ಸಮಾಜ ಅಂಥವರನ್ನು ನಿಕೃಷ್ಟ ರೀತಿಯಲ್ಲಿ ನೋಡಿದಾಗ ಅದು ಮಕ್ಕಳ ಮೇಲೆ ಪರಿಣಾಮ ಬೀರುತ್ತದೆಯಲ್ಲದೇ ಅವರು ಮಾನಸಿಕ ಖಿನ್ನತೆಗೆ ಒಳಗಾಗುತ್ತಾರೆ. ಇದರ ಜೊತೆ, ಶಿಕ್ಷಣ ಪದ್ಧತಿಯಲ್ಲಿ ಕೆಲವು ಅನಗತ್ಯ ವಿಚಾರಗಳನ್ನು ತೂರಿಸುವುದರ ಮೂಲಕ ನಾವು ಮಕ್ಕಳ ಬಾಲ್ಯವನ್ನು ಕಸಿದುಕೊಳ್ಳುತ್ತೇವೆ. ನಾವೆಲ್ಲರೂ ಶಾಲೆಗೆ ಹೋಗುತ್ತಿದ್ದಾಗ, ಸಂಜೆಯ ಹೊತ್ತು ಆಟದ ಅವಧಿ ಇರುತ್ತಿತ್ತು. ಶಾಲೆಗಳಲ್ಲಿ ಮೈದಾನ ಇರುತ್ತಿತ್ತು. ನಾವು ಆಟಗಳನ್ನು ಆಡುತ್ತಾ ನಮ್ಮ ಖಿನ್ನತೆಯನ್ನು ಕಳೆದುಕೊಳ್ಳಲು ಸಾಧ್ಯವಾಗುತ್ತಿತ್ತು. ಒಂದು ಮಗು ಆಟ ಆಡಿದಾಗ ತನ್ನ ಮನಸ್ಸಿನಲ್ಲಿರುವ ದುಗುಡವನ್ನು ಹೊರ ಹಾಕುತ್ತದೆ. ಕ್ರೀಡೆಯನ್ನು ಆಡುತ್ತಾ ಮಗು ರಾಷ್ಟ್ರದ ಆಸ್ತಿಯಾಗುವ ಸಾಧ್ಯತೆ ಇರುತ್ತದೆ. ಯಾವ ಶಾಲೆಗಳಲ್ಲಿ ಆಟದ ಮೈದಾನಗಳಿಲ್ಲವೋ ಅಂತಹ ಶಾಲೆಗಳಿಗೆ ಆಟದ ಮೈದಾನ ಒದಗಿಸಿ ಕೊಡಬೇಕು ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಆಟಕ್ಕೋಸ್ಕರ ಒಂದೆರಡು ಗಂಟೆಗಳ ಸಮಯವನ್ನು ನೀಡಬೇಕಾಗುತ್ತದೆ. **"ಕ್ರೀಡಾವೃತ್ಯಾ ಸದಾಚಾರೋ ರಾಷ್ಟ್ರದೇವೋ ಕೃತೀವ"** ಎಂದು ಹೇಳುತ್ತಾರೆ. ಕ್ರೀಡೆಗಳನ್ನು ಆಡುತ್ತಾ ಸದಾಚಾರವನ್ನು ಮೈಗೂಡಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆ ರಾಷ್ಟ್ರದ ಕೆಲಸವನ್ನು ಮಾಡುವುದಕ್ಕೆ ಹುಡುಗ ತಯಾರಾಗುತ್ತಾನೆ. ಇವತ್ತಿನ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ 'Tiger Parenting' ಎಂಬುದು ಬಂದಿದೆ. ಪೋಷಕರು ತಮ್ಮ ಮಕ್ಕಳ ಮಾನಸಿಕ ಒತ್ತಡಕ್ಕೆ ಕಾರಣರಾಗಿದ್ದಾರೆ ಎಂಬ ವಿಚಾರ ಬಂದಿದೆ. ಅಪ್ಪ ಸಾಫ್ಟ್‌ವೇರ್ ಇಂಜಿನಿಯರ್, ಅಮ್ಮ ಟೀಚರ್ ಆಗಿದ್ದು ತನ್ನ ಮಗನನ್ನು ವೈದ್ಯನನ್ನಾಗಿ ಮಾಡುವಂತಹ ಹಠ, ಅವರ ಆಹಾರ ಪದ್ಧತಿ, ಓದು ಈ ಎಲ್ಲದರ ಮೇಲೆ ನಿಗಾ ಇಟ್ಟಿದ್ದರು. ನೀಟ್ ಪರೀಕ್ಷೆಯಲ್ಲಿ ಅವನಿಗೆ ಸೀಟ್ ಸಿಗಲಿಲ್ಲ, long term course ಗೆ ಸೇರಿಸಿ ಆ ಬಾರಿಯೂ ಸಿಗಲಿಲ್ಲ, ಪೋಷಕರು ಅವನ ದುಸ್ಥಿತಿಯನ್ನು ಅರಿಯಲಿಲ್ಲ. ಆತ ಒಳಗೊಳಗೆ ಕುಗ್ಗಿ ಹೋಗುತ್ತಿದ್ದ, ಕಿರಿಚುತ್ತಿದ್ದ, ವಸ್ತುಗಳನ್ನು ಒಡೆದು ಹಾಕುತ್ತಿದ್ದ, ಬಟ್ಟೆಗಳನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹರಿದು ಹಾಕುತ್ತಿದ್ದ. ಪೋಷಕರು ಈ ವರ್ತನೆಯನ್ನು ನಿರ್ಲಕ್ಷಿಸಿದರು. ವೈದ್ಯರಾಗಬೇಕಾದ ಆತ ಮಾನಸಿಕ ಅಸ್ವಸ್ಥನಾದ ಎಂದು ಪತ್ರಿಕೆಯಲ್ಲಿ ಬಂದಿದೆ. ಪೋಷಕರ ದುರಾಸೆಯ ಕಾರಣಕ್ಕೋಸ್ಕರ ಮಗುವನ್ನು ಬೇರೆಯವರೊಂದಿಗೆ ಹೋಲಿಕೆ ಮಾಡುತ್ತೇವೆ. ಪಕ್ಕದ ಮನೆಯ ಹುಡುಗನಿಗೆ ಇಷ್ಟು ಅಂಕಗಳು ಬಂತು, ನಮ್ಮ ಸಂಬಂಧಿಕರ ಮಗ ಉತ್ತಮ ಅಂಕಗಳನ್ನು ತೆಗೆದ ಎಂದು ಹೇಳುತ್ತಾರೆ.

ಮಾನ್ಯ ಸಭಾಪತಿಗಳೆ, ನಿಮ್ಹಾನ್ಸ್‌ನವರು ಒಂದು ವರದಿ ಕೊಟ್ಟಿದ್ದಾರೆ. ಸುಮಾರು 70% ವಿದ್ಯಾರ್ಥಿಗಳು ತಂದೆತಾಯಿಯರ ಒತ್ತಡದಿಂದಾಗಿ ಖಿನ್ನತೆಗೆ ಒಳಗಾಗುತ್ತಿದ್ದಾರೆ, ಪರೀಕ್ಷೆಯ ಭಯದಲ್ಲಿ ಮುಳುಗಿದ್ದಾರೆ ಎಂದು ಹೇಳಲಾಗಿದೆ. NCRB (National Crime Records Bureau) ವರದಿಯಲ್ಲಿ, 2019ರಲ್ಲಿ ಕರ್ನಾಟಕದಲ್ಲಿ 120 ಜನ ವಿದ್ಯಾರ್ಥಿಗಳು ಪರೀಕ್ಷೆಯ ಒತ್ತಡದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಬಂದಿದೆ. ತಂದೆತಾಯಿಯರು ತಮ್ಮ ಮಕ್ಕಳ ಮೇಲೆ ಒತ್ತಡ ಹೇರಬಾರದು. ಹೀಗೆ ಮಾಡಿದರೆ ಮಕ್ಕಳಿಗೆ ಕಟ್ಟಿ ಹಾಕಿದ ಹಾಗೆ ಆಗುತ್ತದೆ. ತಮ್ಮ ಜೀವನ ನಡೆಸುವುದಕ್ಕೆ ಯಾವುದೇ ರೀತಿಯ ಶಕ್ತಿ ಇರುವುದಿಲ್ಲ. ಅಷ್ಟಕ್ಕೆ ಸೀಮಿತವಾಗಿರುತ್ತಾರೆ. 2ನೇ ವಿಶ್ವಯುದ್ಧದ ಸಂದರ್ಭದಲ್ಲಿ ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿ ಪ್ರದೇಶಗಳ ಮೇಲೆ ಬಾಂಬ್ ಹಾಕಿದ ವಿಚಾರ ನಮಗೆಲ್ಲರಿಗೂ ಗೊತ್ತಿದೆ. 20 ವರ್ಷಗಳ ನಂತರ ಜಪಾನ್ ಫೀನಿಕ್ಸ್ ಪಕ್ಷಿಯಂತೆ ಎದ್ದು ಬಂತು.

(ಮುಂದು)

(215) 11-3-2025 5.30 ಡಿಎಸ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಕಿಶೋರ್ ಕುಮಾರ್ ಪುತ್ತೂರು(ಮುಂದು):-

ಡಾ. ಎಸ್.ಎಲ್. ಭೈರಪ್ಪನವರು ಜಪಾನ್‌ಗೆ ಭೇಟಿ ಕೊಡುತ್ತಾರೆ. ಅಲ್ಲಿರುವಂತಹ ಸಾಮಾಜಿಕ ಕಾರ್ಯಕರ್ತರ ಜೊತೆ ಮಾತನಾಡುತ್ತಾರೆ. ಆಗ ಅವರಿಗೆ ಗೊತ್ತಾಗುತ್ತದೆ. 20 ವರ್ಷಗಳಲ್ಲಿ ಸಂಪೂರ್ಣವಾಗಿ ನುಚ್ಚುನೂರಾದ ಜಪಾನ್ ದೇಶದ ಹಿರೋಶಿಮಾ ಹಾಗೂ ನಾಗಸಾಕಿ, ಇನ್ನೊಮ್ಮೆ ಎದ್ದು ನಿಲ್ಲುವುದಕ್ಕೆ ಕಾರಣವೇನೆಂದರೆ ಅಲ್ಲಿರುವಂತಹ ಪಠ್ಯದಲ್ಲಿ ರಾಷ್ಟ್ರ ಭಕ್ತಿಯನ್ನು ಕೊಟ್ಟಿದ್ದರಂತೆ. ರಾಷ್ಟ್ರದ ಬಗ್ಗೆ ಮಕ್ಕಳು ಯೋಚನೆ ಮಾಡಿದರಂತೆ. ಆ ಕಾರಣಕ್ಕಾಗಿ ಎದ್ದು ನಿಲ್ಲುವುದಕ್ಕೆ ಸಾಧ್ಯವಾಯಿತು ಎಂದು ಶ್ರೀ ಎಸ್.ಎಲ್.ಭೈರಪ್ಪನವರು ಲೇಖನದಲ್ಲಿ ಬರೆಯುತ್ತಾರೆ. ನಿನ್ನೆ ಶ್ರೀಮತಿ ಭಾರತಿ ಶೆಟ್ಟಿಯವರು ಶಾಲೆಗಳಲ್ಲಿ ನೀತಿ ಬೋಧನೆಯ ಪಠ್ಯದಲ್ಲಿ ಇಡಬೇಕೆಂದು ಹೇಳಿದರು. ನಮ್ಮ ಪಠ್ಯದಲ್ಲಿ ಖಂಡಿತವಾಗಿಯೂ ನೀತಿ ಬೋಧನೆಯನ್ನು ಹಾಕಲೇಬೇಕು. ಶ್ರೀರಾಮಚಂದ್ರನಿಗೆ ಇನ್ನೇನು ಪಟ್ಟಾಭಿಷೇಕ ಆಗಬೇಕು, ಆ ಸಂದರ್ಭದಲ್ಲಿ ಕಾಡಿಗೆ ಹೋಗಬೇಕು ಎಂದಾಯಿತು, ನಿರ್ಲಿಪ್ತ ಭಾವದಿಂದ ಶ್ರೀರಾಮಚಂದ್ರ ಪಟ್ಟಾಭಿಷೇಕಕ್ಕೆ ಬರುವಾಗ ಯಾವ ರೀತಿ ಇದ್ದಾರೋ ಅದೇ ರೀತಿ ಕಾಡಿಗೆ ಹೋದರಂತೆ. ಅಂದರೆ, ಈ ನಿರ್ಲಿಪ್ತ ಭಾವ ಇದ್ದಾಗ ಮಕ್ಕಳಲ್ಲಿ ನೀತಿ ಪಾಠವನ್ನು ಕೊಟ್ಟಾಗ ನಮಗೆ ಕಷ್ಟ ಬಂದಾಗ ಯಾವ ರೀತಿ ನಾವು ಬದುಕಬಹುದು ಎಂದು ತೋರಿಸಿಕೊಡುವುದಕ್ಕೆ ಸಾಧ್ಯತೆ ಇದೆ. ಅಷ್ಟೇ ಅಲ್ಲದೆ, ಮತ್ತೊಂದು ಕಡೆ ದುರಾಸೆ ಬಗ್ಗೆ ಹೇಳಿದ್ದಾರೆ. ರಾವಣನನ್ನು ಸಂಹಾರ ಮಾಡಿದ ನಂತರ ಲಕ್ಷ್ಮಣ, ಸ್ವರ್ಣಮಯವಾದ ಲಂಕೆಯಲ್ಲೇ ಇರೋಣ, ಅಯೋಧ್ಯೆಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುವುದು ಬೇಡ ಎಂದು ಹೇಳಿದರಂತೆ. ಶ್ರೀರಾಮಚಂದ್ರ 'ಅಪಿ ಸ್ವರ್ಣಮಯಿ ಲಂಕಾ, ನ ಮೇ ರೋಚತೆ ಲಕ್ಷ್ಮಣ, ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರಿಯಸಿ' ಎಂದು ಹೇಳಿದರಂತೆ. ಲಂಕೆ ಸ್ವರ್ಣಮಯವಾದರೂ ಕೂಡ ನಮ್ಮ ಜನ್ಮಭೂಮಿ ನಮಗೆ ಶಾಶ್ವತ ಎಂದು ಹೇಳಿದರಂತೆ. ಮಕ್ಕಳಿಗೆ ಆ ರೀತಿಯ ಶಿಕ್ಷಣ ಸಿಗಬೇಕು. ಮಹಾಭಾರತದಲ್ಲಿ ಶ್ರೀ ಕೃಷ್ಣ ಅರ್ಜುನನಿಗೆ ಭಗವದ್ಗೀತೆಯನ್ನು ಬೋಧಿಸಿದರೆ, ಉದ್ಧವನಿಗೆ ಉದ್ಧವ ಗೀತೆಯನ್ನು ಅವರ ಕೊನೆಯ ಕಾಲದಲ್ಲಿ ಬೋಧಿಸುತ್ತಾರೆ. ಅವರ ಅವತಾರ ಮುಗಿಯುವ ಸಂದರ್ಭದಲ್ಲಿ ಬೋಧಿಸುತ್ತಾರೆ. ಆ ಸಂದರ್ಭದಲ್ಲಿ ಯದುರಾಜ ತನ್ನ ರಥವನ್ನೇರಿಕೊಂಡು ಹೋಗುವಾಗ ಅಲ್ಲಿ ಒಬ್ಬ ಅವಧೂತರು ನಗುನಗುತ್ತಾ ಇದ್ದರಂತೆ. ಯದುರಾಜನಿಗೆ ತುಂಬಾ ಆಶ್ಚರ್ಯವಾಗುತ್ತದೆ. ನನಗೆಲ್ಲಾ ಸಾಮ್ರಾಜ್ಯವಿದ್ದರೂ ಇವರಷ್ಟು ಖುಷಿ ನನಗಿಲ್ಲವಲ್ಲಾ ಎಂದು ರಥ ಇಳಿದು ಯದುರಾಜರು ಅವಧೂತರಿಗೆ ನಿಮ್ಮ ಖುಷಿಗೆ ಕಾರಣವೇನು ಎಂದು ಕೇಳಿದರಂತೆ, ನನಗೆ ಪ್ರಕೃತಿಯಲ್ಲಿ 24 ಗುರುಗಳು ಸಿಕ್ಕಿದ್ದಾರೆ ಅದಕ್ಕೆ ನಾನು ಖುಷಿಯಾಗಿದ್ದೇನೆ ಎಂದು ಹೇಳಿದರಂತೆ. ಅದರಲ್ಲಿ 2-3 ಘಟನೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಭೂಮಿ ತಾಯಿಯ ಗರ್ಭಕ್ಕೆ ಕೈ ಹಾಕಿ ಚಿನ್ನ, ವಜ್ರ, ವೈಡೂರ್ಯ, ಎಲ್ಲವನ್ನು ತೆಗೆಯುತ್ತೇವೆ. ಈ ಜಾಗ ನಮ್ಮದು, ಆ ಜಾಗ ನಮ್ಮದು ಎಂದು ಹೇಳುತ್ತೇವೆ. ಆದರೆ ಭೂಮಿ ತಾಯಿ ಯಾವುತ್ತೂ ಕೂಡ ಬೇಸರ ಮಾಡಿಕೊಳ್ಳುವುದಿಲ್ಲ. ನಾವು ಕೂಡ ಆ ಭೂಮಿ ತಾಯಿಯ ರೀತಿ ಬದುಕಿದಾಗ, ಇನ್ನೊಬ್ಬರಿಗೋಸ್ಕರ ಬದುಕಿದಾಗ ನಮ್ಮ ಜೀವನ ಸುಖಕರವಾಗುತ್ತದೆ. ಆಕಾಶದಲ್ಲಿ ಸಿಡಿಲು, ಗುಡುಗು, ಮಳೆ ಎಲ್ಲಾ ಆಗುತ್ತದೆ. ಆದರೆ ಆಕಾಶ ನಿರ್ಲಿಪ್ತ ಭಾವದಿಂದಿರುತ್ತದೆ. ಯಾವುದೂ ಆಗುವುದಿಲ್ಲ. ಆದರೆ, ನಮ್ಮ ಮಕ್ಕಳಿಗೆ ಮುಖದಲ್ಲಿ ಒಂದು ಸಣ್ಣ ಮೊಡವೆ ಬಂದರೆ, ಎಸ್.ಎಸ್.ಎಲ್.ಸಿ.ಯಲ್ಲಿ ಫೇಲ್ ಆದರೆ, ಅಂಕಗಳು ಕಡಿಮೆಯಾದರೆ ಮಾರನೆ ದಿವಸ...., ಇವತ್ತು ನಾವು ನೋಡುತ್ತಿರುವಂತೆ ಪರೀಕ್ಷಾ ಫಲಿತಾಂಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಇಡೀ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದೆ ಬಂದಿದೆ. ಆದರೆ, ಮಾರನೆಯ ದಿವಸ ದುರಾದೃಷ್ಟಕರವಾದ ಸುದ್ದಿ ಕೂಡ ಬರುತ್ತದೆ. ಅಂಕಗಳು ಕಡಿಮೆ ಬಂದಿದೆ ಎಂದು ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಈ ರೀತಿಯ ನೀತಿ ಪಾಠಗಳನ್ನು ಕೊಟ್ಟಾಗ, ನಾವು ಕೂಡ ನಿರ್ಲಿಪ್ತ ಭಾವದಿಂದ ಬುದಕಿದಾಗ ಆ ರೀತಿ ಆಗುವುದಕ್ಕೆ ಸಾಧ್ಯವಿದೆ. ನೀರು ಸ್ಫಟಿಕದ ರೀತಿ ಶುಭ್ರ. ಈ ಚಿಂತಕರ ಚಾವಡಿಯಲ್ಲಿ ನಾನು ಎಲ್ಲರಿಗಿಂತ ಚಿಕ್ಕವನಿದ್ದೇನೆ. ನಾವು ಸಹ ಆ ಸ್ಫಟಿಕದ ರೀತಿಯಲ್ಲಿ ಶುಭ್ರವಿದ್ದಾಗ ನಾವು ಇಲ್ಲಿ ಹೇಗೆ ಇರುತ್ತೇವೆಯೋ ಒಬ್ಬರಿಗೊಬ್ಬರು ಅದೇ ರೀತಿ ಬದುಕಿದಾಗ ಜೀವನ ಶುಭ್ರವಾಗುತ್ತದೆ. ರಾಷ್ಟ್ರಕ್ಕೋಸ್ಕರ ಬದುಕುವ ಸಾಧ್ಯತೆ ಉಂಟು. ಬೆಂಕಿ ಎಲ್ಲವನ್ನೂ ಸ್ವೀಕಾರ ಮಾಡುತ್ತದೆ. ನಮ್ಮ ಜೀವನ ಕೂಡ ಹಾಗೆ ಇರಬೇಕು. ಕೆಟ್ಟವರು, ಒಳ್ಳೆಯವರು ಇದ್ದಾಗ ಒಂದೇ ರೀತಿ ಸ್ವೀಕಾರ ಮಾಡಬೇಕು. ಗಾಳಿಯೂ ಕೂಡ ಅದೇ ರೀತಿ. ಗಾಳಿ ಹೂದೋಟದಲ್ಲಿ ಹೋಗುತ್ತಿದ್ದರೆ ಸುಗಂಧ ಬರುತ್ತದೆ. ಅದೇ ರೀತಿ ಕೊಚ್ಚೆಯಲ್ಲಿ ಹಾದು ಹೋಗುವಾಗ ದುರ್ಗಂಧ ಬರುತ್ತದೆ. ಆದರೆ ತನ್ನತನವನ್ನು ಬಿಡುವುದಿಲ್ಲ. ಮಕ್ಕಳಿಗೆ ಈ ರೀತಿಯ ನೀತಿ ಪಾಠವನ್ನು ಕೊಟ್ಟಾಗ ಅವರು ಕೂಡ ದೇಶಕ್ಕೋಸ್ಕರ ಬದುಕುವುದಕ್ಕೆ ಸಾಧ್ಯತೆ ಉಂಟು. ನಾನು ಒಂದು ಕವಿತೆಯನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಅಜಾತಶತ್ರು. ಅವರು ಎಲ್ಲರಿಗೂ ಬೇಕಾದವರು. ಈ ವರ್ಷ ಅವರದ್ದು ನೂರನೆಯ ಜನ್ಮಶತಾಬ್ದಿ. ಅವರು ಒಂದು ಕವಿತೆಯನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಾರೆ. "ಯೇ ವಂದನ್ ಕೀ ಭೂಮಿ ಹೈ, ಅಭಿನಂದನ್ ಕೀ ಭೂಮಿ ಹೈ, ಯೇ ಅರ್ಪಣ್ ಕೀ ಭೂಮಿ ಹೈ, ಯೇ ತರ್ಪಣ್ ಕೀ ಭೂಮಿ ಹೈ, ಬಿಂದು ಬಿಂದು ಮೇ ಸಿಂಧು ಹೈ, ಕಂಕರ್ ಕಂಕರ್ ಮೇ ಶಂಕರ್ ಹೈ, ಜೀಯೇಂಗೇ ತೋ ಇಸ್‌ಕೇಲಿಯೇ, ಮರೆಂಗೇ ತೋ ಇಸ್‌ಕೇಲಿಯೇ", ಈ ರೀತಿಯ ಕವಿತೆಯನ್ನು ಪುಸ್ತಕದಲ್ಲಿ ಇಡಬೇಕು. ಬದುಕಿದ್ದರೂ ಭಾರತಕ್ಕೋಸ್ಕರ, ಸತ್ತರೂ ಭಾರತಕ್ಕೋಸ್ಕರ ಎಂದು ಹೇಳಿದ್ದಾರೆ. ನಾನು ಇನ್ನಷ್ಟು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವೆಲ್ಲರೂ ಸಮಾನತೆ ಬೇಕು ಎಂದು ಹೇಳುತ್ತೇವೆ. ಯಾವ ರೀತಿ ಸಮಾನತೆ ಸಿಗುತ್ತದೆಂದರೆ ಆಟ ಆಡುವಾಗ ಸಮಾನತೆ ಸಿಗುತ್ತದೆ. ನಾವು ಆಟ ಆಡುವಾಗ ಜಾತಿ, ಮತ, ಯಾವುದನ್ನು ನೋಡುವುದಿಲ್ಲ. ಸಂಘದಲ್ಲಿ ಒಂದು ಆಟ ಇದೆ, ಹತ್ತು ಜನ ಆ ಕಡೆ, ಈ ಕಡೆ ನಿಂತಿರುತ್ತಾರೆ, ಒಬ್ಬನ ಹೆಗಲ ಮೇಲೆ ಹಾರಬೇಕು, ಇನ್ನೊಬ್ಬರ ಕಾಲಿನ ಕೆಳಗೆ ಹೋಗಬೇಕು, ಆಗ ಆಟದಲ್ಲಿ ಸಮಾನತೆ ಬರುತ್ತದೆ. ಕಬ್ಬಡಿ ಆಟದಲ್ಲಿ ಎದುರಿಗೆ ಏಳು ಜನ ಇದ್ದರೆ ಈ ಕಡೆ ಒಬ್ಬನು ಇದ್ದರೂ ಸಹ ಅಲ್ಲಿಗೆ ಹೋಗಿ ಅಷ್ಟು ಜನರನ್ನು ಔಟ್ ಮಾಡಿ ಬಂದಾಗ ಆತ್ಮವಿಶ್ವಾಸ ಜಾಸ್ತಿಯಾಗುತ್ತದೆ. ಆಗ ಜೀವನದಲ್ಲಿ ಉತ್ತಮ ಪ್ರಜೆಯಾಗಿ ಬದುಕುವುದಕ್ಕೆ ಸಾಧ್ಯವಾಗುತ್ತದೆ. "ಪರಂ ವೈಭವಂ ನೇತುಮೇತತ್ ಸ್ವರಾಷ್ಟ್ರಮ್" ಎಂಬಂತೆ, ನಾವು ತಾಯಿ ಭಾರತಿಯನ್ನು ಇನ್ನೊಮ್ಮೆ ಪರಮವೈಭವದ ಸ್ಥಿತಿಗೆ ಕೊಂಡೊಯ್ಯುವುದಕ್ಕೆ ಕಾರಣ ನಾವೆಲ್ಲರೂ ರಾಷ್ಟ್ರಕ್ಕಾಗಿ ಬದುಕಿದಾಗ ಮಾತ್ರ ಈ ರೀತಿ ಸಾಧ್ಯವಾಗುತ್ತದೆ. ಈ ಎಲ್ಲಾ ಕಾರಣಗಳನ್ನು ಮುಂದಿಟ್ಟುಕೊಂಡು ಮಕ್ಕಳ ಖಿನ್ನತೆಯನ್ನು ಹೋಗಲಾಡಿಸುವಲ್ಲಿ ನಾವು ಕೂಡ ಶ್ರಮ ವಹಿಸಬೇಕು. ನಾನು ಈಗಾಗಲೇ ಹೇಳಿದ ಹಾಗೆ ಆಟವನ್ನು ಮತ್ತು ನೀತಿ ಪಾಠವನ್ನು ಶಾಲೆಯ ಪುಸ್ತಕದಲ್ಲಿ ತರುವುದರ ಮುಖಾಂತರ ನಮ್ಮ ರಾಜ್ಯದಲ್ಲಿರುವಂತಹ ಮಕ್ಕಳು ಖಿನ್ನತೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಅದು ಕಡಿಮೆಯಾಗಬೇಕು. ನಾವೆಲ್ಲರೂ ಇದಕ್ಕೆ ಶ್ರಮ ವಹಿಸೋಣ. ಎಲ್ಲರಿಗೂ ಆ ಭಗವಂತ ಶಕ್ತಿಯನ್ನು ಕೊಡಲಿ. ಮಾನ್ಯ ಸಚಿವರು ಇನ್ನಷ್ಟು ಮುತುವರ್ಜಿ ವಹಿಸಬೇಕು. ನಾವೆಲ್ಲರೂ ಮಾನ್ಯ ಸಚಿವರ ಜೊತೆ ಇದ್ದೇವೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.)(ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಖಂಡಿತವಾಗಿಯೂ ಇವತ್ತು ಒಳ್ಳೆಯ ವಿಚಾರವನ್ನು ತಂದಿದ್ದಾರೆ. ಏಕೆಂದರೆ, ಎರಡು ದಿವಸಗಳಿಂದ ಸತತವಾಗಿ ನಾವೆಲ್ಲರೂ ಇದರ ಬಗ್ಗೆ ಮಾತನಾಡುತ್ತಿದ್ದೇವೆ. ಡಾ॥ ಧನಂಜಯ ಸರ್ಜಿಯವರು ಮತ್ತು ಡಾ॥ ಯತೀಂದ್ರರವರು, technically updated version ಅನ್ನು ಹೇಳಿದ್ದಾರೆ. ಹೇಗೆ ಖಿನ್ನತೆ ಬರುತ್ತದೆ ಮತ್ತು ಖಿನ್ನತೆಯನ್ನು ನಿವಾರಣೆ ಮಾಡುವ ಬಗ್ಗೆ ತುಂಬಾ updated version ಅನ್ನು ಹೇಳಿದ್ದಾರೆ. ಏಕೆಂದರೆ ಲೆಫ್ಟ್ ಬ್ರೈನ್, ರೈಟ್ ಬ್ರೈನ್‌ನಿಂದ ಯಾವ ರೀತಿ ಖಿನ್ನತೆ ಆಗುತ್ತದೆ ಎನ್ನುವುದನ್ನು ವಿಸ್ತಾರವಾಗಿ ಹೇಳಿದರು. ಡಾ॥ ಧನಂಜಯ ಸರ್ಜಿಯವರು ಹೇಳಿರುವುದನ್ನು ಇನ್ನೊಂದು ರೀತಿಯಲ್ಲಿ ಪ್ರತಿಪಾದನೆ ಮಾಡಿದಾಗ ಖಂಡಿತವಾಗಿಯೂ ನನಗನಿಸುತ್ತಿತ್ತು, ಇದು ಯಾವ್ಯಾವುದರಿಂದ ಉದ್ಭವಾಗುತ್ತದೆ ಎನ್ನುವಂಥದ್ದು. ಮಕ್ಕಳಲ್ಲಿ ಖಿನ್ನತೆ ಹೇಗೆ ಬರುತ್ತದೆ ಎಂದರೆ ಅವರ ಸ್ಥಿತಿ, ಬಡತನದಿಂದಲೂ ಖಿನ್ನತೆ ಬರುತ್ತದೆ. ಅಂದರೆ, ಮೂರು ಕ್ಲಾಸ್ ಮಾಡಿದಾಗ ಮೆಟ್ರೋಪಾಲಿಟಿನ್ ಸಿಟಿಯಲ್ಲಿರುವಂಥವರು, ಸ್ಲಮ್‌ನಲ್ಲಿರುವಂಥವರು, ಗ್ರಾಮಾಂತರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರದೇಶದಲ್ಲಿರುವಂಥವರು. ಈ ಮೂರು ಕ್ಲಾಸ್‌ಗಳನ್ನು ಮಾಡಿದಾಗಲೂ ಕೂಡ ಅವರವರ ಸ್ಥಿತಿಗಳಿಗೆ ಅನುಗುಣವಾಗಿ ಮಕ್ಕಳಲ್ಲಿ ಒತ್ತಡ ಬರುತ್ತದೆ. ಈ ಒತ್ತಡ ಮತ್ತು ಖಿನ್ನತೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒತ್ತಡ ಎಲ್ಲಿಯವರೆಗೆ ಹೆಚ್ಚಾಗುತ್ತದೆ ಖಿನ್ನತೆ ಅದರ ಜೊತೆಯಲ್ಲೇ ತೆಗೆದುಕೊಂಡು ಹೋಗುತ್ತದೆ. ಕೊನೆಗೆ ಸಾವಿಗೂ ತೆಗೆದುಕೊಂಡು ಹೋಗುತ್ತದೆ. ಹಾಗಾಗಿ ಒತ್ತಡವನ್ನು ಕಡಿಮೆ ಮಾಡಿದರೆ ಖಂಡಿತವಾಗಿಯೂ ಖಿನ್ನತೆ ಹತ್ತಿರ ಬರುವುದಿಲ್ಲ. ಆ ನಿಟ್ಟಿನಲ್ಲಿ ನಾನು ಐಡೆಂಟಿಫೈ ಮಾಡಿರುವಂಥದ್ದು ಬಡತನ. ಬಡತನದಲ್ಲಿ ಮೂರು ಕ್ಲಾಸ್‌ಗಳನ್ನು ಮಾಡಿದಾಗ ಮೆಟ್ರೋಪಾಲಿಟನ್ ಸಿಟಿಯಲ್ಲಿ ಉನ್ನತ ಸ್ಥಾನದಲ್ಲಿರುವಂತಹ ಅಥವಾ ಒಳ್ಳೆಯ ಸ್ಥಿತಿವಂತ ಕುಟುಂಬಗಳಲ್ಲಿ ಇರುವಂತಹ ಮಕ್ಕಳಲ್ಲಿ ಬರುವ ಒತ್ತಡ. ಅದೇನೆಂದರೆ, ತುಂಬಾ ಶೀಘ್ರವಾಗಿ ಸಾವಿನತ್ತ ಕೊಂಡೊಯ್ಯುತ್ತದೆ. ಸ್ಲಮ್‌ನಲ್ಲಿರುವಂಥವರು ದಿನ ನಿತ್ಯದ ಜೀವನಕ್ಕೋಸ್ಕರ ಪೋಷಕರು ದುಡಿದು ಹಣ ತರಬೇಕು. ಎಷ್ಟೇ ಆಸೆ-ಆಕಾಂಕ್ಷೆಗಳಿದ್ದರೂ ಅದರ ಹತ್ತಿರ ಹೋಗುವುದಕ್ಕೆ ಆಗದೆ ಸ್ಲಮ್ ಪಕ್ಕದಲ್ಲಿರುವ ದೊಡ್ಡ ಮನೆಯ ಮಕ್ಕಳಿಗೆ ಹೋಲಿಕೆ ಮಾಡಿಕೊಂಡು ಬರುವಂತಹ ಖಿನ್ನತೆ. ಗ್ರಾಮಾಂತರ ಭಾಗದಲ್ಲಿ ಬರುವಂತಹ ಖಿನ್ನತೆ. ಈಗ ಉದಾಹರಣೆಗೆ ನನ್ನದೇ ತೆಗೆದುಕೊಳ್ಳಿ. ದೊಡ್ಡ ದೊಡ್ಡ ಜಂಟಿ ಕುಟುಂಬಗಳು, ರೈತ ಕುಟುಂಬಗಳು ಜೊತೆ ಬೆಳೆಯುವಂತಹ ಪರಿಸ್ಥಿತಿಗೆ ನಮ್ಮದೇ ಆಗಿರುವಂತಹ ಖಿನ್ನತೆ ಇರುತ್ತದೆ. ನಾವೆಲ್ಲರೂ ಓದುವಂತಹ ಸಂದರ್ಭದಲ್ಲಿ, ನಮಗೆಲ್ಲರಿಗೂ ಅನುಭವ ಆಗಿರುತ್ತದೆ ಎಂದು ನಾನು ಭಾವಿಸುತ್ತೇನೆ. ನಮ್ಮ ಪೋಷಕರಿಗೆ ನಾವು ಮನೆಯಲ್ಲಿ ಜೋರಾಗಿ ಓದಬೇಕು. ನಾವೆಲ್ಲಾ ಜೋರಾಗಿ ಓದಿರುತ್ತೇವೆ. ಪಾಠವನ್ನು ಜೋರಾಗಿ ಓದುವುದನ್ನು ನಿಲ್ಲಿಸಿದರೆ ಹೇ ಎಂದು ಹೇಳುತ್ತಿದ್ದರು. ಆಗ ನಾವು ಮತ್ತೆ ಜೋರಾಗಿ ಓದಬೇಕು. ಇದು ನಮಗೆ ಆಗಿರುವಂತಹ ಅನುಭವ. ನಮ್ಮ ಮನೆ ಪಕ್ಕದಲ್ಲಿರುವ ಮಕ್ಕಳು 1975-76 ರಲ್ಲಿ ಜಟಕಾ ಗಾಡಿಯಲ್ಲಿ ಸಮವಸ್ತ್ರ, ಶೂ ಅನ್ನು ಹಾಕಿಕೊಂಡು ಹೋಗುತ್ತಿದ್ದರು. ಅವತ್ತು ನಮಗೆ ಕನ್ನಡ ಶಾಲೆಯಲ್ಲಿ ಸಮವಸ್ತ್ರ ಇರಲಿಲ್ಲ, ಖಾಕಿ ನಿಕ್ಕರ್ ಇರಲಿಲ್ಲ ಎಂದು ಅನಿಸುತ್ತದೆ. ನಾವು ಕಿಟಕಿ ಹತ್ತಿರ ಬಂದು ಅವರು ಹೋಗುವವರೆಗೂ ನೋಡುತ್ತಿದ್ದೆವು. ಅವರು ಎಷ್ಟು ಹೊತ್ತಿಗೆ ಹೋಗುತ್ತಾರೋ ಅಷ್ಟು ಹೊತ್ತಿಗೆ ಬಂದು ನೋಡುತ್ತಿದ್ದೆವು. ಅದನ್ನು ನೋಡಿದಾಗ ಆಸೆ ಪಡುತ್ತಿದ್ದೆವು. ಆದರೂ ಓದುತ್ತಿದ್ದೆವು. Ultimately, achieve ಮಾಡುವುದರಲ್ಲಿ ಸಕ್ಸಸ್ ರೇಟ್ ನಮ್ಮದೇ ಜಾಸ್ತಿ ಇರುತ್ತಿತ್ತು ಎಂದು ನಾನು ಭಾವಿಸುತ್ತೇನೆ. ಅವರಿಗೆ ಅಷ್ಟು ಸೌಲಭ್ಯಗಳಿದ್ದರೂ ಅವರು ಏಕೆ ಅಚೀವ್ ಮಾಡಲಿಲ್ಲ? ಪೋಷಕರು, ಗಾರ್ಡಿಯನ್ಸ್ ಇದರಲ್ಲಿ ತುಂಬಾ ಪಾತ್ರ ವಹಿಸುತ್ತಾರೆ. ಸಿಂಗಲ್ ಪೋಷಕರು ಇರುವ ಕಡೆ ಮಕ್ಕಳನ್ನು ಒಂಟಿ ಮಾಡಿ ಹೋಗುವುದು. ಈಗ ನಮ್ಮ ಶಾಲೆಯಲ್ಲೇ ತೆಗೆದುಕೊಳ್ಳಿ, ನಮ್ಮ ಇನ್‌ಸ್ಟಿಟ್ಯೂಷನ್‌ನಲ್ಲಿ ರೆಗ್ಯುಲರ್ ಆಗಿ ಮನಶಾಸ್ತ್ರಜ್ಞರು ಬರುತ್ತಿರುತ್ತಾರೆ. ಪೇರೆಂಟ್ಸ್ ಮೀಟಿಂಗ್ ನಡೆಯುತ್ತಿರುತ್ತದೆ. 6-7 ಕ್ಲಾಸ್‌ಗೆ ಲೌವ್ ಪ್ರಾರಂಭವಾಗುತ್ತದೆ. ಅದರ ಜೊತೆಗೆ ಸೋಷಿಯಲ್ ಮೀಡಿಯಾದಲ್ಲಿ ಎಷ್ಟರ ಮಟ್ಟಿಗೆ ಆಕರ್ಷಿತರಾಗಿರುತ್ತಾರೆ ಎಂದರೆ ಪತ್ರ ಬರೆಯುತ್ತಾರೆ, ಮೆಸೇಜ್ ಕಳುಹಿಸುತ್ತಾರೆ. Highest rank student ದಿಢೀರ್ ಎಂದು ಡಲ್ ಆದಾಗ ಪೋಷಕರನ್ನು ಕರೆಸುತ್ತೇವೆ. ಆಗ ನಾನು ಕೌನ್ಸಿಲಿಂಗ್‌ಗೆ ಕುಳಿತಾಗ ನಮಗೆ ಗೊತ್ತಾಗುವುದೇನೆಂದರೆ, ಪೋಷಕರು ಇಬ್ಬರು ಮನೆಯಲ್ಲಿ ದಿನಾ ಜಗಳ ಆಡುತ್ತಿರುತ್ತಾರೆ. ಅವರು ಜಗಳ ಆಡುತ್ತಾ ಏನಾಗಿದೆ ಎಂದರೆ, ಈ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

rank student ಮಗು ಓದುವುದನ್ನು ನಿಲ್ಲಿಸಿ ಬೇರೆ ಕಡೆಗೆ ಆಕರ್ಷಿತರಾಗುವಂಥದ್ದು. ಅವರ ಸುತ್ತಮುತ್ತ ಇರುವಂತಹ ವಾತಾವರಣಕ್ಕೆ ಹೊಂದಿಕೊಳ್ಳುವಂಥದ್ದು. ಜೊತೆಗೆ, ನನಗೆ ಕ್ರೀಡೆಯಲ್ಲಿ ಆಸಕ್ತಿ ಇರುತ್ತದೆ. ನಾನು ದೊಡ್ಡ sports player ಆಗಬೇಕು ಅಂದುಕೊಂಡಿರುತ್ತೇನೆ. ಆದರೆ ಪೋಷಕರು ಅದರ ಅವಕಾಶವನ್ನೇ ಕಲ್ಪಿಸಿಕೊಡುವುದಿಲ್ಲ. ನೀನು ಓದಬೇಕು ಅಷ್ಟೆ ಎಂದು ಪೋಷಕರು ಹೇಳುತ್ತಾರೆ ಮಕ್ಕಳಲ್ಲಿ ಇರುವಂತಹ ಪ್ರತಿಭೆಯನ್ನು ಗುರುತು ಮಾಡುವುದರಲ್ಲೂ ಪೋಷಕರು ಸಂಪೂರ್ಣವಾಗಿ ವಿಫಲರಾಗುತ್ತಾರೆ.

(ಮುಂದು)

(216) 11/03/2025 5:40 ಎಸ್‌ಪಿಆರ್/ಕೆಎಸ್ **(ಸಭಾಪತಿಯವರ ಉಪಸ್ಥಿತಿ)**

ಶ್ರೀ ಡಿ.ಟಿ.ಶ್ರೀನಿವಾಸ (ಡಿ.ಟಿ.ಎಸ್.)(ಮುಂದು):-

ಹೀಗೆ ವಿಫಲರಾದ ಮಕ್ಕಳು ಒತ್ತಡಕ್ಕೊಳಗಾಗಿ ಖಿನ್ನತೆಯತ್ತ ಜಾರುತ್ತಾರೆ. ಇದರ ಜೊತೆಗೆ ಅವರ ಸುತ್ತಮುತ್ತಲಿನ ವಾತಾವರಣವೂ ಸಹ ಪ್ರಭಾವ ಬೀರುತ್ತದೆ. ಮೊದಲನೆ ಹಾಗೂ ಎರಡನೆ ಮಗುವಿನ ನಡುವೆ ಇರುವ ಅಂತರವನ್ನೂ ಸಹ ಗಮನಿಸಬೇಕಾಗಿತ್ತದೆ. ಇವರುಗಳ ನಡುವೆ ಹತ್ತು ವರ್ಷಗಳ ಅಂತರವಿರುತ್ತದೆ. ಬೆಳೆದ ಮೊದಲನೆ ಮಗುವಿಗೆ ಎರಡನೇ ಮಗುವನ್ನು ನೋಡಿದಾಗ ಅಸೂಯೆ ಮನೋಭಾವನೆಯುಂಟಾಗುತ್ತದೆ. ಇದರ ಜೊತೆಗೆ, ಪೋಷಕರಿಬ್ಬರೂ ಸಹ ದುಡಿಯುವವರಾದಾಗ, ಮಕ್ಕಳನ್ನು ಒಂಟಿಯಾಗಿ ಮನೆಯಲ್ಲಿ ಬಿಟ್ಟಿರುತ್ತಾರೆ. ಹೀಗೆ ಒಂಟಿಯಾಗಿ ಮನೆಯಲ್ಲಿ ಬಿಟ್ಟಿರುವ ಸಂದರ್ಭದಲ್ಲಿ ಹಾಗೂ ಅವರ ಬಗ್ಗೆ ಗಮನವನ್ನು ಹರಿಸದೇ ಇರುವ ಸಂದರ್ಭದಲ್ಲಿ ಮಕ್ಕಳು ಯಾವ ಕಡೆ ಹೋಗಿದ್ದಾರೆ ಎಂದು ಗುರ್ತಿಸುವಲ್ಲಿ ವಿಫಲರಾಗುತ್ತಾರೆ. ಮಕ್ಕಳ ಐಚ್ಛಿಕ ವಿಷಯದ ಕಡೆಗೆ ಪ್ರೋತ್ಸಾಹ ನೀಡುವಲ್ಲಿ ಪೋಷಕರು ವಿಫಲರಾಗಿದ್ದಾರೆ. ಮಕ್ಕಳ ನಡುವೆ ಪ್ರೇಮ ವೈಫಲ್ಯಗಳಾಗಿರುವ ಸಂದರ್ಭದಲ್ಲಿ, ದುಡಿಯುವ ತಂದೆ ತಾಯಿಗಳು ಇದರ ಜೊತೆಗೆ ಒಂಟಿತನ, ಸುತ್ತಮುತ್ತಲಿನ ಸ್ನೇಹಿತರು ಆಧುನಿಕ ಜೀವನದ ಬಗ್ಗೆ ಆಕರ್ಷಣೆಗೊಳಗಾಗುವ ಸಂದರ್ಭದಲ್ಲಿ ಅಂದುಕೊಂಡಿದ್ದನ್ನು ಸಾಧಿಸುವುದಕ್ಕೆ ಆಗಿಲ್ಲ ಎನ್ನುವುದರಿಂದ ಬರುವ ಒತ್ತಡ. ಸಿನೆಮಾ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲ ತಾಣಗಳಲ್ಲಿ ಬರುವ. ಈಗಿನ ಇಂಟರ್‌ನೆಟ್ ಯುಗದಲ್ಲಿ ಆಂಡ್ರಾಯ್ಡ್ ಮೊಬೈಲ್‌ಗಳನ್ನು ಮಕ್ಕಳು ಬಳಸುವ ಸಂದರ್ಭದಲ್ಲಿ ಅವುಗಳ ನಡುವೆ ಬರುವ ಜಾಹಿರಾತುಗಳಿಗೆ ಆಕರ್ಷಿತರಾಗುತ್ತಾರೆ. ಜೊತೆಗೆ ಇರುವ ಚೆನ್ನಾಗಿರುವ ಮಕ್ಕಳ ಸಹವಾಸವನ್ನು ಮಾಡಿದಾಗ ಅವರು ಈ ಮಕ್ಕಳನ್ನು ಅಂತಹ ಇಂತಹವುಗಳಿಗೆ ಕರೆದುಕೊಂಡು ಹೋಗುವ ಸಂದರ್ಭದಲ್ಲಿ. ಲಿಂಗ ತಾರತಮ್ಯ ಮಾಡುವುದು. ಪೋಷಕರು ಹೆಣ್ಣು ಮಕ್ಕಳಿಗೆ ಹೆಚ್ಚಿನ ಆದ್ಯತೆಯನ್ನು ನೀಡದಿರುವುದು ಮತ್ತು ಗಂಡು ಮಕ್ಕಳಿಗೆ ಹೆಚ್ಚಿನ ಉತ್ತೇಜನವನ್ನು ನೀಡುವುದು. ಇದನ್ನು ನೋಡಿದ ಹೆಣ್ಣು ಮಕ್ಕಳಿಗೆ ಖಿನ್ನತೆಯಾಗುತ್ತದೆ. ಜಾತಿ ವ್ಯವಸ್ಥೆಯಲ್ಲಿಯೂ ಸಹ ಸಣ್ಣ ಜಾತಿಗಳಿಂದ ಬಂದ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಕುಟುಂಬದ ವೃತ್ತಿಯ ಬಗ್ಗೆ ಶಾಲೆಗಳಲ್ಲಿ ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಇವರುಗಳು ಎಷ್ಟೋ ಬಾರಿ ತಾವು ಯಾವ ಸಮಾಜ ಎಂದು ಕೇಳಿದಾಗ, ಅವರ ಸಮಾಜವನ್ನೂ ಸಹ ಧೈರ್ಯವಾಗಿ ಹೇಳಿಕೊಳ್ಳುವುದಿಲ್ಲ. ಇದರಿಂದಾಗಿಯೂ ಸಹ ಮಕ್ಕಳಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒತ್ತಡವುಂಟಾಗುತ್ತದೆ. ಕನಿಷ್ಠ ಜೀವನ ಮಾಡುತ್ತಿದ್ದಾಗ, ಒಳ್ಳೆಯ ವಿದ್ಯಾರ್ಥಿಯಾಗಿದ್ದರೂ ಸಹ ಅವನು ಒತ್ತಡಕ್ಕೊಳಗಾಗುತ್ತಾನೆ.

ಈ ರೀತಿಯ ಖಿನ್ನತೆ/ಒತ್ತಡಗಳನ್ನು ನಾವು ನೋಡಿದಾಗ ಒತ್ತಡವನ್ನು 18 ವಿಷಯವಾಗಿ ತೆಗೆದುಕೊಂಡಾಗ, ಇದರ ಜೊತೆಗೆ ಖಿನ್ನತೆಯೂ ಸಹ ಜೊತೆಗೆ ಇರುತ್ತದೆ ಎನ್ನುವುದನ್ನು ಇವತ್ತಿನ ದಿವಸ ನಾವು ಮರೆಯುವಂತಿಲ್ಲ. ಬಣ್ಣವೂ ಸಹ ಒಂದು ರೀತಿಯ ಒತ್ತಡಕ್ಕೆ ಎಡೆ ಮಾಡಿಕೊಡುತ್ತದೆ. ಏಕೆಂದರೆ ವಯಸ್ಸಿಗೆ ಬಂದಾಗ ಮಕ್ಕಳ ಬಣ್ಣ ಮತ್ತು ಅವರು ಆಕರ್ಷಣೀಯವಾಗಿ ಕಾಣಬೇಕು ಎನ್ನುವ ವಿಚಾರವಾಗಿ ಹೆಚ್ಚಿನ ಒತ್ತು ಕೊಡುತ್ತಾರೆ. ದೇಹ ದಾರ್ಢ್ಯತೆಯೂ ಸಹ ಒತ್ತಡಕ್ಕೆ ಕಾರಣವಾಗುತ್ತದೆ. ದಪ್ಪ ದೇಹವನ್ನು ಹೊಂದಿರುವವರು ತಾವು ಸಣ್ಣಗಾಗಿ ಆಗಬೇಕೆಂದು ಅವರು ತೆಗೆದುಕೊಳ್ಳುವ ಆಹಾರ ಪದಾರ್ಥಗಳಲ್ಲಿ ಆಗುವ ಬದಲಾವಣೆಗಳು ಹಾಗೂ ಇದಕ್ಕೆ ಹೆಚ್ಚು ಒತ್ತನ್ನು ನೀಡುವುದು ಆಗಿದೆ. ನಿಜವಾಗಿಯೂ ಸಹ ಅವರುಗಳು ಜೀವನದಲ್ಲಿ ಯಾವುದರ ಕಡೆ ಸಾಗಬೇಕು ಎನ್ನುವುದನ್ನು ಮರೆತು ಹೋದ ಮಕ್ಕಳು ಹಾಗೂ ಅದನ್ನು ಗುರ್ತಿಸದ ಪೋಷಕರು. ಇದರಲ್ಲಿ ನಾನು ಪೋಷಕರ ಪಾತ್ರವನ್ನು ಹೇಳುತ್ತಿದ್ದೇನೆ. ಇದರಲ್ಲಿ ಪೋಷಕರ ಪಾತ್ರ ಮುಖ್ಯವಾಗಿದೆ. ಅಂತಿಮವಾಗಿ ನಾವುಗಳು. ನಾವುಗಳು ಅಂದರೆ ಈಗಿನ ಕಾಲಘಟ್ಟಕ್ಕೆ ಯಾವುದೇ ಮಗುವಿನ ಜನನವಾಗುತ್ತಿದೆ ಎಂದರೆ, ಆ ಹೆಣ್ಣುಮಗಳ ವಯಸ್ಸು ಸರಿ ಸುಮಾರು 30 ವರ್ಷವಿದ್ದರೆ, ತಮ್ಮ 30 ನೇ ವಯಸ್ಸಿನಿಂದ ಆ ಮಗುವಿನ ವಯಸ್ಸು 21 ಆಗುವವರೆಗೆ ಅಂದರೆ ಒಟ್ಟು 51 ವರ್ಷಗಳವರೆಗೆ ಪೋಷಕರ ಪಾತ್ರ ಬರುವಂತಹದ್ದು. ಪೋಷಕರಿಗೆ ಯಾವ ರೀತಿಯ ಒತ್ತಡವಾಗುತ್ತದೆ ಎನ್ನುವುದರ ಬಗ್ಗೆ ನಾನು ಹೇಳುತ್ತೇನೆ. ಒಂದು ಮಗು ಜನನವಾದಾಗ, ತಾಯಿಗೆ 30 ವರ್ಷ ವಯಸ್ಸಾದಾಗ ಖಂಡಿತವಾಗಿಯೂ ಸಹ ಆ ಮಗುವಿನ ಬಗ್ಗೆ ಅದ್ಭುತವಾದ ಕನಸು ಇರುತ್ತದೆ. ಏಕೆಂದರೆ ಅವರಿಗೆ ದುಡಿಯುವ ಶಕ್ತಿ ಇರುವ, ಬಿಸಿ ರಕ್ತ ಇರುವ ವಯಸ್ಸು ಅದು ಆಗಿರುತ್ತದೆ. ನನ್ನ ಮಗು ಇಂತಹ ನಿರ್ದಿಷ್ಟ ಕಾನ್ವೆಂಟ್‌ನಲ್ಲಿಯೇ ಓದಬೇಕು, ಅದು ಆ ರೀತಿಯಾಗಿ, ಈ ರೀತಿಯಾಗಿ ಆಗಬೇಕು ಎಂಬ ಕನಸ್ಸುಗಳನ್ನು ಇಟ್ಟುಕೊಂಡಿರುತ್ತಾರೆ. ಆ ಮಗುವಿಗೆ 21 ವರ್ಷ ತುಂಬಿ, ಮಗು ಪದವಿಯನ್ನು ಪಡೆದ ತಕ್ಷಣವೇ ಅವನಿಗೆ ಉದ್ಯೋಗ ದೊರೆಯದೇ, ಮನೆಯಲ್ಲಿಯೇ ಕುಳಿತುಕೊಂಡಾಗ ಪೋಷಕರಿಗೆ ಆಗ ಒತ್ತಡವು ಪ್ರಾರಂಭವಾಗುತ್ತದೆ. ತನ್ನ ಮಗ ಇನ್ನೂ ಜೀವನದಲ್ಲಿ ಸೆಟಲ್ ಆಗಿಲ್ಲವೆಂದು ಪೋಷಕರು ಆ ಬಗ್ಗೆ ಯೋಚನೆಯನ್ನು ಮಾಡುತ್ತಾರೆ. ತನ್ನ ಮಗನಿಗೆ 21 ವರ್ಷವಾಗುವವರೆಗೆ, ಮಗುವಿಗಾಗಿಯೇ ಸರ್ವಸ್ವವನ್ನು ತ್ಯಾಗ ಮಾಡಿ, ಮಗುವನ್ನು ಓದಿಸಿ, ಆ ಮಗು ತನ್ನ 21 ಅಥವಾ 22 ನೇ ವಯಸ್ಸಿನಲ್ಲಿ ಪದವಿಯನ್ನು ಪಡೆದು ಜೀವನದಲ್ಲಿ ಸೆಟಲ್ ಆಗದೇ, ಮನೆಯಲ್ಲಿಯೇ ಕುಳಿತುಕೊಂಡರೆ, ಇಷ್ಟು ವರ್ಷಗಳವರೆಗೆ ಸಾಕುತ್ತಿದ್ದೆನು ಇನ್ನೂ ಇವನನ್ನು ಸಾಕಬೇಕಲ್ಲ ಎಂದು ಒತ್ತಡಕ್ಕೊಳಗಾಗುತ್ತಾರೆ. ಸಮಾಜದಲ್ಲಿ ಅಕ್ಕ ಪಕ್ಕದ ಮನೆಯವರು ಬಂದು ತಮ್ಮ ಮಕ್ಕಳು ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು, ಜೀವನದಲ್ಲಿ ಸೆಟಲ್ ಆಗಿದ್ದಾನೆ; ಮತ್ತೊಬ್ಬರ ಮಗನಿಗೆ ಸರ್ಕಾರಿ ಉದ್ಯೋಗ ದೊರೆಯಿತು, ತಮ್ಮ ಮಗ ಯು.ಪಿ.ಎಸ್.ಸಿ. ಮತ್ತು ಕೆ.ಪಿ.ಎಸ್.ಸಿ. ಮುಖಾಂತರ ಸಿವಿಲ್ ಸೇವೆಗೆ ಸೇರಿರುವುದು, ತಮ್ಮ ಇಂಜಿನಿಯರ್ ಆದ ಎಂಬುದಾಗಿ ಹೇಳಿದಾಗ ಪೋಷಕರು ತಮಗೆ ಆದ ಒತ್ತಡವನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೋರಿಸಿಕೊಳ್ಳುವುದಕ್ಕಾಗುವುದಿಲ್ಲ. ಆದರೆ ಒಳಗೆ ಅವರು ಒತ್ತಡದಿಂದಿರುತ್ತಾರೆ. ಹೀಗಾಗಿ 70 ವರ್ಷಗಳವರೆಗೆ ಬದುಕುವವರು 60 ವರ್ಷಗಳಿಗೆ ಮರಣ ಹೊಂದುತ್ತಾರೆ. ಇದು ಪೋಷಕರಿಗೆ ಆಗುವ ಒತ್ತಡ ಮತ್ತು ಅದರಿಂದಾಗಿ ಅವರ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ನಾನು ಕೆಲವು ಅಂಶಗಳನ್ನು ಹೇಳಲಿಚ್ಛಿಸುತ್ತೇನೆ. ಆತ್ಮಹತ್ಯೆ, ವಿದ್ಯಾಭ್ಯಾಸದಿಂದ ವಿಮುಕ್ತಿ, ಸತತವಾಗಿ ಅನುತ್ತೀರ್ಣವಾಗುವುದು, ಮಾದಕ ವ್ಯಸನಗಳಿಗೆ ಮಾರು ಹೋಗುವುದು, ಕಳ್ಳತನ ಮಾಡುವುದು, ಕ್ರಿಮಿನಲ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು, ದೇಹದಲ್ಲಾಗುವ ಬದಲಾವಣೆಗಳು, ದಪ್ಪಗಾಗುವುದು, ತೆಳ್ಳಗಾಗುವುದು, ಸತತವಾಗಿ ಆರೋಗ್ಯ ಸಮಸ್ಯೆಗಳು, ಹೊಟ್ಟೆ ನೋವು ಎಂಬುದಾಗಿ ಹೇಳುವುದು, ಮಕ್ಕಳು ವಿದ್ಯಭ್ಯಾಸದಲ್ಲಿ ಆಸಕ್ತಿ ತೋರದಿರುವುದು, ಪರೀಕ್ಷೆ ಬಂದರೆ ಮಕ್ಕಳಲ್ಲಿ ಒತ್ತಡ ಹೆಚ್ಚಾಗಿ ಜ್ವರ ಬರುವುದು, ಸತತವಾಗಿ ಸುಳ್ಳು ಹೇಳುವುದು, ಚರ್ಮ ರೋಗದಿಂದ ನರಳುವುದು, ಕೆಟ್ಟ ವಿಚಾರಗಳಿಗೆ ಪ್ರೇರಿತರಾಗುವುದು, ಬಾಲಾಪರಾಧಿಗಳಾಗಿ ಮಾರ್ಪಾಡಾಗುವುದು. ಇದರ ಬಗ್ಗೆ ಸರ್ಕಾರ ವಿಶೇಷ ಗಮನ ಹರಿಸುವುದು ಅತೀ ಮುಖ್ಯವಾಗಿದೆ. ಶಿಕ್ಷಕರು ವಿದ್ಯಾರ್ಥಿಗಳ ಬಗ್ಗೆ ಅಸಡ್ಡೆ ತೋರುವುದು ಹಾಗೂ ಅವರ ವೃತ್ತಿಯಲ್ಲಿ ನೈಪುಣ್ಯತೆ ಇಲ್ಲದಿರುವ ಸಂದರ್ಭಗಳಲ್ಲಿಯೂ ಸಹ ಮಕ್ಕಳ ಮೇಲೆ ದುಷ್ಪರಿಣಾಮಗಳುಂಟಾಗುತ್ತದೆ.

ಈ ವಿಚಾರದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಾನು ಪ್ರಸ್ತಾಪಿಸಬಯಸುತ್ತೇನೆ. ಪ್ರತಿ ಶಾಲೆಗಳಲ್ಲಿ ಆಪ್ತ ಸಮಾಲೋಚರನ್ನು ನೇಮಿಸುವುದು, ಪ್ರತಿ ಶಾಲೆಗಳಲ್ಲಿ ಮನೋವೈದ್ಯರನ್ನು ನೇಮಿಸುವುದು, ಆಗಿಂದಾಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು, ವಿದ್ಯಾರ್ಥಿಗಳ ದಿನನಿತ್ಯದ ಚಲನವಲನಗಳ ಬಗ್ಗೆ ಗಮನಹರಿಸಿವುದು, ಒಂದು ವೇಳೆ ವ್ಯತ್ಯಾಸ ಕಂಡು ಬಂದಲ್ಲಿ, ಅವರ ಪೋಷಕರೊಂದಿಗೆ ಆಗಿಂದಾಗ್ಗೆ ಸಮಾಲೋಚನೆಗಳನ್ನು ಮಾಡಿ, ಚರ್ಚಿಸುವುದು, ಕರಿಯರ್ ಕೌನ್ಸಲಿಂಗ್‌ಗಳ ಬಗ್ಗೆ ಹೇಳುವುದು, ಇದರ ಜೊತೆಗೆ ಮಕ್ಕಳಿಗೆ ಭವಿಷ್ಯದ ಬಗ್ಗೆ ತಿಳಿ ಹೇಳುವುದು, ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಮಾಡುವುದು, ಆಧುನಿಕ ಜೀವನದ ಸವಾಲುಗಳನ್ನು ಎದುರಿಸಲು ಮಕ್ಕಳನ್ನು ಸಿದ್ಧಪಡಿಸುವುದು, ಪಠ್ಯಕ್ರಮದಲ್ಲಿ ಈ ವಿಚಾರವಾಗಿ ಅಳವಡಿಸಿ, ದಿನ ನಿತ್ಯದಲ್ಲಿ ಹಂತ ಹಂತವಾಗಿ ಒತ್ತಡವನ್ನು ಕಡಿಮೆ ಮಾಡಲು ಪ್ರಯತ್ನಿಸುವುದು. "Indian Journal of Psychiatry" ಯವರು ಅಧ್ಯಯನ ಮಾಡಿ, 7 ರಿಂದ 9 ನೇ ತರಗತಿಯ ಸುಮಾರು ಶೇಕಡಾ 47 ರಷ್ಟು ಹದಿಹರೆಯವರು ತಮ್ಮಗಳನ್ನು ಪೀಡಿಸುವುದು, ಹೆದರಿಸುವುದು ಇಂತಹವುಗಳನ್ನು ಅನುಭವಿಸುತ್ತಾರೆ. ಮೌಖಿಕ, ದೈಹಿಕ, ಲೈಂಗಿಕ, ಆರ್ಥಿಕ ಇವುಗಳು ಸರ್ವೆ ಸಾಮಾನ್ಯವಾಗಿವೆ. ಈ ಎಲ್ಲಾ ಅಂಶಗಳ ಬಗ್ಗೆ ಗಮನ ಹರಿಸುವುದರ ಜೊತೆಗೆ, ಖಂಡಿತವಾಗಿಯೂ ಸಹ ಇದು ಕೇವಲ ಒಂದು ಇಲಾಖೆಯಿಂದ ಮಾಡುವ ಕೆಲಸವಲ್ಲ. ಇದಕ್ಕೆ ಗೃಹ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಐ.ಟಿ. ಹಾಗೂ ಬಿ.ಟಿ. ಇಲಾಖೆ, ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಇಲಾಖೆ, ಇಷ್ಟೂ ಇಲಾಖೆಗಳು ಒಟ್ಟುಗೂಡಿ ಈ ವಿಚಾರದಲ್ಲಿ ಏನಾದರೂ ಬದಲಾವಣೆಗಳನ್ನು ತಂದಾಗ ಮಾತ್ರವೇ ಒತ್ತಡವನ್ನು ಕಡಿಮೆ ಮಾಡಿ, ಖಿನ್ನತೆಯಿಂದ ಬಳಲುತ್ತಿರುವ ಮಕ್ಕಳನ್ನು ಖಿನ್ನತೆಯಿಂದ ದೂರ ಮಾಡಿ, ಅವರುಗಳು ಆತ್ಮಹತ್ಯೆಗೆ ಜಾರದಂತೆ ನೋಡಿಕೊಳ್ಳುವಂತಹ ಕ್ರಮಗಳನ್ನು ಸರ್ಕಾರವು ತೆಗೆದುಕೊಳ್ಳಬೇಕು. ಮೇಲೆ ಉಲ್ಲೇಖಿಸಿದ ಅಷ್ಟೂ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಗಳು ಒಟ್ಟುಗೂಡಿ, ಈ ವಿಚಾರದಲ್ಲಿ ಕಾರ್ಯೋನ್ಮುಖರಾದರೆ ಮಾತ್ರವೇ ನಾವು ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವನ್ನು ಸಾಧಿಸಬಹುದು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತಾ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಹಾಲಿ ಹದಿಹರೆಯದ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳಾದ ಸ್ವಾಭಿಮಾನ ಮತ್ತು ದೇಹದ ಚಿತ್ರಣ, ಒತ್ತಡ, ಬೆದರಿಸುವಿಕೆ, ಖಿನ್ನತೆ, ಸೈಬರ್ ವ್ಯಸನ, ಮದ್ಯಪಾನ ಮತ್ತು ಧೂಮಪಾನ, ಹದಿಹರೆಯದ ವಯಸ್ಸಿನಲ್ಲಿ ಗರ್ಭಧಾರಣೆ ಇತ್ಯಾದಿ ಹತ್ತು ವಿಚಾರಗಳನ್ನು ಇಲ್ಲಿ ಪಟ್ಟಿ ಮಾಡಿರುವುದನ್ನು ನೋಡಿದಾಗ ಸಮಾಜದ ಬಗ್ಗೆ ಕಳಕಳಿಯನ್ನಿಟ್ಟುಕೊಂಡಿರುವ ಪೀಠದಲ್ಲಿರುವ ಸಭಾಪತಿಯವರಿಗೆ ಅತ್ಯಂತ ಗೌರವದಿಂದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ, ಇದು ಸಮಾಜದಲ್ಲಿ ಬಹುದೊಡ್ಡ ಪಿಡುಗು ಆಗಿದೆ. ಮಕ್ಕಳು ಅನುಭವಿಸುತ್ತಿರುವ ದೊಡ್ಡ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದಕ್ಕಾಗಿ ಈ ವಿಷಯವನ್ನು ಮೇಲ್ಮನೆಯಲ್ಲಿ ಚರ್ಚಿಸಲು ತಾವು ಅನು ವು ಮಾಡಿಕೊಟ್ಟಿರುವುದಕ್ಕೆ ಸಭಾಪತಿಗಳನ್ನು ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿಶೇಷವಾದ ಈ ವಿಷಯದ ಬಗ್ಗೆ ಇರುವ ಹತ್ತು ವಿಚಾರಗಳ ಬಗ್ಗೆ ಮಾತನಾಡಲು ತಾವು ಕೇವಲ 5-10 ನಿಮಿಷಗಳ ಕಾಲಾವಕಾಶವನ್ನು ನೀಡಿದ್ದೀರಿ. ಹೀಗಾಗಿ ನಾನು ಕೇವಲ ಕೆಲವು ವಿಚಾರಗಳ ಬಗ್ಗೆ ಮಾತ್ರವೇ ಮಾತನಾಡಲಿಚ್ಛಿಸುತ್ತೇನೆ.

ನಾನು ಇಲ್ಲಿ ಮೊದಲನೆಯದಾಗಿ ಮದ್ಯಪಾನ ಮತ್ತು ಧೂಮಪಾನದ ಬಗ್ಗೆ ಮಾತನಾಡಬಯಸುತ್ತೇನೆ. ನಮ್ಮ ಭಾರತ ದೇಶವು ಬಹಳ ದೊಡ್ಡ ಇತಿಹಾಸವನ್ನು ಹೊಂದಿರುವ ದೇಶವಾಗಿದೆ. ಇದು ಸಾಂಸ್ಕೃತಿಕವಾಗಿ ಪ್ರಬಲವಾದ ದೇಶವಾಗಿದೆ. ಇಂತಹ ದೇಶದಲ್ಲಿ ಇವತ್ತಿನ ದಿವಸ ಆಗುತ್ತಿರುವ ವಿಚಾರಗಳನ್ನು ನೋಡಿದಾಗ, ಎಲ್ಲಿಯೋ ಒಂದು ಕಡೆ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ನಾವು ಅಳವಡಿಸಿಕೊಂಡಿದ್ದೇವೆ ಎಂದು ಅನ್ನಿಸುತ್ತದೆ. ಇಂತಹ ಸಂದರ್ಭದಲ್ಲಿ ಯುವಪೀಳಿಗೆಯವರು ಮಾರು ಹೋಗಿರುವ ಸಂದರ್ಭದಲ್ಲಿ, ನಮ್ಮ ಸನಾತನದ ಆಚಾರ ವಿಚಾರಗಳು ಹಾಗೂ ನಡೆನುಡಿಗಳಲ್ಲಿ ಬದಲಾವಣೆಯಾಗುತ್ತಿರುವ ಸಂದರ್ಭಗಳಲ್ಲಿ, ತಂದೆ ತಾಯಿಗಳಿಗೆ ಗೌರವವನ್ನು ನೀಡದಿರುವ ರೀತಿಯಲ್ಲಿ ಇಂದಿನ ಯುವ ಪೀಳಿಗೆಯು ನಡೆದುಕೊಳ್ಳುತ್ತಿರುವ ಕಾರಣವೇನೆಂದರೆ, ನಾವು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅಳವಡಿಸಿಕೊಂಡಿರುವುದು ಬಹಳ ದೊಡ್ಡ ತಪ್ಪು ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಿಂದಿನ ಕಾಲದಲ್ಲಿ ನಮ್ಮ ಕುಟುಂಬಗಳು ಬಹಳ ಸಾಂಪ್ರದಾಯಿಕವಾಗಿ ಇರುತ್ತಿದ್ದವು. ಆಗಿನ ಕಾಲದ ಆಚಾರ ವಿಚಾರಗಳು, ಭಾಷೆ, ಧರ್ಮ, ತಂದೆ ತಾಯಿ ಇತ್ಯಾದಿಗಳಿರಬಹುದು, ಇವುಗಳ ಬಗ್ಗೆ ಇಡೀ ವಿಶ್ವಕ್ಕೆ ಮಾದರಿಯಾಗಿರುವ ಯಾವುದೇ ಸಮಾಜವಿದ್ದರೆ, ಅದು ನಮ್ಮ ಭಾರತ ದೇಶದ ಸಮಾಜವಾಗಿತ್ತು ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದರೆ ಇವತ್ತಿನ ದಿವಸ ನಮ್ಮ ಸಮಾಜದಲ್ಲಿ ಬಹಳಷ್ಟು ಪರಿವರ್ತನೆಗಳಾಗುತ್ತಿವೆ. ಇದಕ್ಕೆ ಕಾರಣ ಪಾಶ್ಚಿಮಾತ್ಯ ಸಂಸ್ಕೃತಿಗಳನ್ನು ಅಳವಡಿಸಿಕೊಂಡಿರುವುದು. ಇದನ್ನು ನಾನು ನೋಡಿದ್ದೇವೆ. Nowadays, we are talking about socializing, which is a very common

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

issue. ಇವತ್ತಿನ ದಿವಸ ಸಣ್ಣ ಸಣ್ಣ ಮಕ್ಕಳೂ ಸಹ ಧೂಮಪಾನದ ಜೊತೆಗೆ ಮದ್ಯಪಾನವನ್ನೂ ಸಹ ಮಾಡುತ್ತಾರೆ. It has become a common phenomenon when you go anywhere in the metro city ಎಂಬ ಮಾತನ್ನು ನಾನು ಹೇಳುತ್ತಿದ್ದೇನೆ. ಬೆಂಗಳೂರು ನಗರದ ಬ್ರಿಗೇಡ್ ರಸ್ತೆ, ಕೋರಮಂಗಲ ಅಥವಾ ಇನ್ಯಾವುದೇ ಪ್ರದೇಶಗಳಿಗೆ ವಾರಾಂತ್ಯದ ದಿನಗಳಲ್ಲಿ ಹೋಗಿ ನೋಡಿದಾಗ ಅರ್ಥವಾಗುತ್ತದೆ. ಯಾವ ರೀತಿಯಾಗಿ ಇಂದಿನ ಯುವ ಪೀಳಿಗೆ ಕೆಟ್ಟುಹೋಗಿದೆ ಎಂಬ ವಿಚಾರವು ನಮಗೆ ಅರಿವಾಗುತ್ತದೆ.

(ಮುಂದು)

(217)11-03-2025(5-50) bkp-ks (ಸಭಾಪತಿಯವರ ಉಪಸ್ಥಿತಿ)

ಶ್ರೀ ಎಂ. ನಾಗರಾಜು (ಮುಂದು):

ಹಾಗಾಗಿ, ನಾನು ಹೇಳುವುದೇನೆಂದರೆ, ಧೂಮಪಾನ ಅಥವಾ ಮದ್ಯಪಾನ ವ್ಯಸನವಾಗಿರುವವರಿಗೆ ಬಹಳ ದೊಡ್ಡ ಸಮಸ್ಯೆಗಳಿರುತ್ತವೆ. ನಮ್ಮ ಸಮಾಜದಲ್ಲಿರುವಂತಹ ನಾವು ತಂದೆ-ತಾಯಿಗಳಾಗಿರುವಂತಹವರು, ನಾವು ಶಿಕ್ಷಕರಾಗಿರುವಂತಹವರು, ನಾವು ಸಮಾಜದಲ್ಲಿ ನಾಯಕರೆನಿಸಿಕೊಂಡವರು, ಕೆಲವು ವಿಚಾರಗಳನ್ನು ಗಂಭೀರವಾಗಿ ತೆಗೆದುಕೊಂಡು ಚರ್ಚೆ ಮಾಡಬೇಕಾಗುತ್ತದೆ. ಅದಕ್ಕೆ ಪರಿಹಾರಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಎಲ್ಲವನ್ನೂ ಕಾನೂನಿನಿಂದ ಮಾಡಲಿಕ್ಕೆ ಸಾಧ್ಯವಿಲ್ಲ. ಕೇವಲ ಅವರುಗಳ ಮನ ಪರಿವರ್ತನೆಯಿಂದ ಮಾತ್ರ ಮಾಡಲಿಕ್ಕೆ ಸಾಧ್ಯವಿದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಕುಟುಂಬದ ಮನೆಗಳಲ್ಲಿ ಕೂಡ ಇವತ್ತಿನ ದಿವಸ socializing has become a regular order of the day. Weekends ನಲ್ಲಿ, ಅವರ ಮನೆಗಳಲ್ಲಿ socialize ಮಾಡುತ್ತಾರೆ. ತಂದೆ-ತಾಯಂದಿರು ಮಕ್ಕಳ ಎದುರುಗಡೆ ಮಧ್ಯಪಾನ ಮಾಡುವುದನ್ನು ನಾವು ನೋಡಿದ್ದೇವೆ. ಶಾಲಾ-ಕಾಲೇಜುಗಳಲ್ಲಿ picnic ಗಳಿಗೆ ಹೋದಾಗ ಕುಡಿಯುವುದೇ ಒಂದು ದೊಡ್ಡ ಸಂಗತಿಯನ್ನು ಮಾಡಿಕೊಂಡು ಇವತ್ತಿನದಿವಸ ಮಧ್ಯಪಾನ ಮಾಡುವಂತಹದ್ದು ಒಂದು ಫ್ಯಾಷನ್ ಆಗಿರುವಂತಹದ್ದು ಬಹಳ ಶೋಚನೀಯ ಸಂಗತಿ ಎಂದು ಹೇಳಲಿಕ್ಕೆ ಬಯಸುತ್ತೇನೆ. ಇದಕ್ಕೆ ಹದಿಹರೆಯದ ಮಕ್ಕಳು ಬಲಿಯಾಗುತ್ತಿರುವುದನ್ನು ನಾವು ನೋಡಿದಾಗ ಭವ್ಯವಾದ ಭಾರತವನ್ನು ಕಟ್ಟಬೇಕಾದರೆ, ನಾವು ಇರುವ ಭಾರತವನ್ನು ಒಳ್ಳೆಯ ಸ್ಥಾನದಲ್ಲಿ ಇಡಬೇಕೆನ್ನುವುದಾದರೆ ನಾವು ಇದರ ಬಗ್ಗೆ ಕಾಳಜಿ ವಹಿಸಬೇಕಾಗುತ್ತದೆ. ಆ ಕಾರಣಕ್ಕಾಗಿ ನಾವು ಇದರ ಬಗ್ಗೆ ಚರ್ಚೆ ಮಾಡುತ್ತಿರುವುದು ಸೂಕ್ತವಾಗಿರುತ್ತದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಟ್ಟರೆ ಮಾತ್ರ ಸಾಲದು. ಕೇವಲ ಮಕ್ಕಳನ್ನು ಐ.ಎ.ಎಸ್., ಐ.ಪಿ.ಎಸ್., ಡಾಕ್ಟರ್, ಇಂಜಿನೀಯರ್ ಮಾಡಿದರೆ ಮಾತ್ರ ಸಾಲುವುದಿಲ್ಲ. ಅವರನ್ನು ಒಳ್ಳೆಯ ಪ್ರಜೆಯನ್ನಾಗಿ ಮಾಡಬೇಕಾದರೆ, ಒಳ್ಳೆಯ ಭಾರತೀಯನನ್ನಾಗಿ ಮಾಡಬೇಕಾದರೆ ವಿಶ್ವಕ್ಕೆ ಮಾದರಿಯಾಗಿರುವಂತಹ ಭಾರತೀಯನನ್ನಾಗಿ ಮಾಡಬೇಕೆನ್ನುವುದಾದರೆ, ಮಕ್ಕಳನ್ನು ಇಂತ್ ದುಶ್ಚಟಗಳಿಂದ ದೂರ ಇಡುವಂತಹ ಕೆಲಸವನ್ನು ತಂದೆ-ತಾಯಿಗಳು ಮಾಡಬೇಕಾಗುತ್ತದೆ ಮತ್ತು ಸರ್ಕಾರವೂ ಕೂಡ ಇದರ ಬಗ್ಗೆ ಕಾಳಜಿ ವಹಿಸಬೇಕಾಗುತ್ತದೆ. ಇದರ ವಿಚಾರದಲ್ಲಿ ನಾವೆಲ್ಲರೂ ಕೂಡ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಜ್ಜಿರಾಗಿ ಅದರ ಬಗ್ಗೆ ಪರಿಹಾರವನ್ನು ಕಂಡುಕೊಳ್ಳಲಿಕ್ಕೆ ಆಲೋಚನೆ ಮಾಡತಕ್ಕಂತಹ ಕೆಲಸವನ್ನು ಬಹಳ ಪ್ರಮುಖವಾಗಿ ಮಾಡಬೇಕಾಗುತ್ತದೆ.

By punishing a child, you will not allow them to come out of their addiction ಎನ್ನುವ ಮಾತನ್ನು ಹೇಳುತ್ತೇನೆ. ಕೇವಲ ಅವರನ್ನು ಹೊಡೆಯುವಂತಹದ್ದು, ಅವರನ್ನು ಬೆದರಿಸುವಂತಹದ್ದು, ಅಥವಾ ಅವರನ್ನು ಜೈಲಿಗೆ ಹಾಕುವಂತಹದ್ದು ಈ ಎಲ್ಲಾ ಕಾರ್ಯಗಳನ್ನು ಮಾಡುವುದರಿಂದ ಅವರುಗಳನ್ನು ಬದಲಾವಣೆ ಮಾಡಲಿಕ್ಕೆ ಸಾಧ್ಯವಿಲ್ಲ. ಇನ್ನೂ ಜಾಸ್ತಿ ಮಾಡಲಿಕ್ಕೆ ಅವರು ಪ್ರಯತ್ನ ಮಾಡುತ್ತಾರೆ. ಹಾಗಾಗಿ, ಅವರಿಗೆ ಕೌನ್ಸಿಲಿಂಗ್ ಮಾಡುವ ವಿಚಾರದಲ್ಲಿ ಅವರೊಂದಿಗೆ ಬೆರೆತು ಅವರ ಮನಸ್ಸನ್ನು ಪರಿವರ್ತನೆ ಮಾಡತಕ್ಕಂತಹ ವಿಚಾರಧಾರೆಗಳನ್ನು ಹರಿಸತಕ್ಕಂತಹ ಕೆಲಸವನ್ನು ಮಾಡಬೇಕಾಗುತ್ತದೆ. ನಮ್ಮ ದೇಶದ ಇತಿಹಾಸದಲ್ಲಿ ಇರತಕ್ಕಂತಹ ದೊಡ್ಡ ದೊಡ್ಡ ಪರಂಪರೆ ಮತ್ತು ಇತಿಹಾಸ ಮತ್ತು ನಮ್ಮ ಸಂಸ್ಕೃತಿಯ ಬಗ್ಗೆ ಮಕ್ಕಳಿಗೆ ಆಗಾಗ ಹೇಳಿಕೊಡಲಿಕ್ಕೆ ನಾವು ಯೋಚನೆ ಮಾಡಬೇಕಾಗುತ್ತದೆ. ಈಗ ಇರತಕ್ಕಂತಹ ವಿಚಾರದಲ್ಲಿ ನೋಡಿದಾಗ ಸಣ್ಣ ಸಣ್ಣ ಮಕ್ಕಳು ಮಾತ್ರವಲ್ಲ, ಹದಿಹರಿಯದ ಮಕ್ಕಳೊಂದಿಗೆ ಹೆಣ್ಣು ಮಕ್ಕಳು ಸಹ ಕುಡಿಯುವುದನ್ನು ನೋಡಿದಾಗ ಅದು ಬಹಳ ಶೋಚನೀಯ ಸಂಗತಿ ಎನ್ನುವ ವಿಚಾರವನ್ನು ಹೇಳುತ್ತೇನೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ಕಾನೂನು ಜಾರಿಯಲ್ಲಿದ್ದರೂ ಕೂಡ ಇವತ್ತು ಎಲ್ಲಿಗೆ ಹೋದರೂ ಕೂಡ, ಅದರಲ್ಲೂ ಒಂದು ಟೀ ಸ್ಟಾಲ್ ಹತ್ತಿರ ಹೋದರೆ ಹೆಣ್ಣು ಮಕ್ಕಳು, ಗಂಡುಮಕ್ಕಳು ಅದರಲ್ಲೂ ಸಣ್ಣ ಸಣ್ಣ ಮಕ್ಕಳು ಸಿಗರೇಟ್ ಸೇದುವುದನ್ನು ನೋಡಿದಾಗ ಎಲ್ಲಿಯೋ ಒಂದು ಕಡೆ ಸಮಾಜದ ಸ್ವಾಸ್ಥ್ಯ ಕೆಟ್ಟು ಹೋಗಿರುವಂತಹ ಸಂದರ್ಭದಲ್ಲಿ ನಾವು ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳುವುದರ ಜೊತೆಗೆ ತಂದೆ-ತಾಯಿಗಳಾಗಿರುವಂತಹವರು, ಹಿರಿಯರಾದ ನಮಗೆ ಈ ವಿಚಾರಗಳು ನಮ್ಮ ಗಮನಕ್ಕೆ ಬಂದಾಗ ಅವರ ಹತ್ತಿರ ಮಾತನಾಡಿ, ಅವರ ಮನ ಪರಿವರ್ತನೆ ಮಾಡುವಂತಹ ಕೆಲಸಗಳಲ್ಲಿ ನಾವೆಲ್ಲರೂ ಸ್ವಯಂ ಪಾತ್ರ ವಹಿಸಬೇಕೆಂದು ಹೇಳುತ್ತೇನೆ. ಮತ್ತೆ ಈ ಧೂಮಪಾನ ಮತ್ತು ಮಧ್ಯಪಾನ ಮಾಡುವುದರಿಂದ ಆರೋಗ್ಯದ ಹಾಗೂ ಅವರ ಭವಿಷ್ಯದ ಮೇಲೆ ಆಗುವಂತಹ ಪರಿಣಾಮಗಳನ್ನು ನೋಡಿದರೆ, they will be completely unsuccessful in their academics and studies ಎಂದು ಹೇಳಲಿಕ್ಕೆ ಬಯಸುತ್ತೇನೆ. ಕೇವಲ ಮಧ್ಯಪಾನ ಮಾಡಿ, ಅವರು ಮೋಜು-ಮಸ್ತಿ ಮಾಡುವುದರಿಂದ ಅವರುಗಳು ಏನೂ ಸಾಧನೆ ಮಾಡಲಿಕ್ಕೆ ಆಗುವುದಿಲ್ಲ. It will have a very bad effect on economic performance ಎಂದು ಮತ್ತೆ ಹೇಳುತ್ತೇನೆ. There is a chance that children may experience depression, anxiety and low self-esteem ಎನ್ನುವ ಮಾತನ್ನು ಹೇಳುತ್ತೇನೆ. ಅವರು anxiety ಗೆ ಒಳಗಾಗುವಂತಹ ವಿಚಾರಗಳನ್ನು, ಆಗಾಗ ಅವರಿಗೆ ಕೋಪ ಬರುವಂತಹ ಪ್ರವೃತ್ತಿಯನ್ನು ಬಳಸಿಕೊಳ್ಳುವಂತಹ ವಿಚಾರಗಳಾಗಿರಬಹುದು ಮತ್ತು depression ಗೆ ಒಳಗಾಗುವಂತಹ ವಿಚಾರಗಳಾಗಿರಬಹುದು, ಮತ್ತೆ emotionally ಅವರು ಅವರದ್ದೇ ಆದಂತಹ ರೀತಿಯಲ್ಲಿ ಬೇರೆ ವಿಚಾರಧಾರೆಗಳನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೈಗೂಡಿಸಿಕೊಳ್ಳುವಂತಹದ್ದನ್ನು ನಾವು ಒಪ್ಪಲಿಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಹಾಗಾಗಿ, ಈ ವಿಚಾರದಲ್ಲಿ ಮಧ್ಯಪಾನ, ಧೂಮಪಾನ ಮಾಡುವುದನ್ನು ನಾವು ಏನಾದರೂ ಮಾಡಿ, ಆ ವಿಚಾರಧಾರೆಗಳಲ್ಲಿ ನಾವೆಲ್ಲರೂ ಮಜ್ಜುರಾಗಿ ಯುವ ಪೀಳಿಗೆಯನ್ನು ಸರಿಯಾದ ದಾರಿಯಲ್ಲಿ ತೆಗೆದುಕೊಂಡು ಹೋಗುವಂತಹದ್ದು, ಹದಿಹರೆಯದ ಮಕ್ಕಳಿಗೆ ಬುದ್ಧಿವಾದದ ಮಾತನ್ನು ಹೇಳುವಂತಹ ಕೆಲಸವನ್ನು ನಾವೆಲ್ಲರೂ ಮಾಡಬೇಕೆಂದು ಹೇಳುತ್ತಿದ್ದೇನೆ. ಅದರ ಜೊತೆಗೆ ಇನ್ನೂ ಹೇಳಬೇಕೆಂದರೆ, ನಾವು ಅವರುಗಳನ್ನು ಹೆಚ್ಚು-ಹೆಚ್ಚು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವಲ್ಲಿ ಅವಕಾಶವನ್ನು ಕಲ್ಪಿಸಬೇಕು. ಅದು ಶಾಲಾ-ಕಾಲೇಜುಗಳಲ್ಲಿ ಇರಬಹುದು. ಸಮಾಜದಲ್ಲಿ ಇರತಕ್ಕಂತಹದ್ದು ಇರಬಹುದು. Community services ನಲ್ಲಿ ಇರಬಹುದು ಅಥವಾ ಇನ್ನೂ ಯಾವುದೇ non-governmental organizations (NGO) ನಲ್ಲಿ ಇರಬಹುದು. ಅವರೆಲ್ಲರೂ ಕೂಡ ಇದರ ಬಗ್ಗೆ ಗಮನಹರಿಸಬೇಕಾಗುತ್ತದೆ ಮತ್ತು ಮಕ್ಕಳನ್ನು ಹೆಚ್ಚಾಗಿ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ತಂದೆ-ತಾಯಿಯವರು ಸಹ ಆಗಾಗ ಕೇವಲ ಶಾಲೆಯ fees ಕಟ್ಟಿ ಶಾಲೆಗೆ ಕಳುಹಿಸಿದರೆ ಸಾಕಾಗುವುದಿಲ್ಲ. ಕೇವಲ ಅವರಿಗೆ ಬಟ್ಟೆ ಕೊಡಿಸಿ, ಮನೆ ಕೊಡಿಸಿ, ಗಾಡಿ ಕೊಡಿಸಿದರೆ ಸಾಲದು. ತಂದೆ-ತಾಯಿಯವರು ಕೂಡ ಆ ಮಕ್ಕಳ ಜೊತೆಯಲ್ಲಿ ಕುಳಿತುಕೊಂಡು ಮಾತನಾಡುವಂತಹದ್ದು ಮತ್ತು ಯಾವುದು ಸರಿ, ಯಾವುದು ತಪ್ಪು ಎಂದು ಹೇಳಿಕೊಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಮಕ್ಕಳಿಗೆ ಆದರ್ಶವಾಗಿರುವಂತಹ ವ್ಯಕ್ತಿಗಳ ವಿಚಾರಧಾರೆಯ ಬಗ್ಗೆ ಆಗಾಗ ಮಾತನಾಡತಕ್ಕಂತಹ ಕೆಲಸಗಳನ್ನು ಮಾಡಬೇಕಾಗುತ್ತದೆ. ಭಾರತ ದೇಶದ ಇತಿಹಾಸವನ್ನು ಮೆಲಕು ಹಾಕುವಂತಹ ಕೆಲಸವನ್ನು ಅವರು ಮಾಡಿ ಅವರನ್ನು ಧೂಮಪಾನ ಮತ್ತು ಮಧ್ಯಪಾನದಿಂದ ದೂರ ಇರಿಸುವಂತಹ ಕೆಲಸ ಆಗಬೇಕಾಗಿದೆ. ಇದಕ್ಕೆಲ್ಲವೂ ಕೂಡ western culture ಕಾರಣ ಎನ್ನುವ ಮಾತನ್ನು ಹೇಳುತ್ತೇನೆ. ಆದಾದನಂತರ, ಎರಡನೆಯ ವಿಚಾರಕ್ಕೆ ಬಂದಾಗ ಖಿನ್ನತೆ (Depression) ಕುರಿತು ಹೇಳುವುದಾದರೆ, depression is a very big disease in the Society, ಎನ್ನುವ ಮಾತನ್ನು ಹೇಳುತ್ತೇನೆ. Depression can affect people of any age, whether it be younger, older or a teenager ಎಂದು ಹೇಳುತ್ತೇನೆ. Depression may also lead to suicidal thoughts, ಎನ್ನುವ ಮಾತನ್ನು ಹೇಳುತ್ತೇನೆ. ಯಾವುದೇ ಒಂದು ವಿಚಾರಧಾರೆಗಳಲ್ಲಿ depression ಗೆ ಒಳಗಾದಾಗ,,,,,,

ಸಭಾಪತಿಯವರು:- ಕೊನೆಯದಾಗಿ 2 ನಿಮಿಷಗಳಲ್ಲಿ ಮುಗಿಸಿ.

ಶ್ರೀ ಎಂ. ನಾಗರಾಜು: ಮಾನ್ಯ ಸಭಾಪತಿಯವರೆ, ಅರ್ಥವಾಗಿದೆ. ನಾನು ಈ ಬಗ್ಗೆ ಮನವಿಯನ್ನು ಮಾಡುತ್ತೇನೆ. I will try to finish it. ಹಾಗಾಗಿ, ಖಿನ್ನತೆಗೆ ಒಳಗಾಗುತ್ತಿರುವ ವಿಚಾರವನ್ನು ಬಹಳಷ್ಟು ಸುಲಭವಾಗಿ ತೆಗೆದುಕೊಳ್ಳುವಂತಹ ವಿಚಾರವಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಖಿನ್ನತೆ ಎನ್ನುವಂತಹದ್ದು ಬಹಳ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೊಡ್ಡ ಮಾರಕವಾಗಿರುವಂತಹ ವಿಚಾರವಾಗಿದೆ. ಮಕ್ಕಳು ಇವತ್ತಿನ ದಿವಸ ಬಹಳ ಬೇಗ ಖಿನ್ನತೆಗೆ ಒಳಗಾಗುವಂತಹದ್ದು ಇದೆ. ಹಲವಾರು ವಿಚಾರಗಳಲ್ಲಿ ತಂದೆ-ತಾಯಿಯವರು ಕೂಡ ಹೆಚ್ಚು ಸಮಯವನ್ನು ಕೊಡದೇ ಇದ್ದ ಪಕ್ಷದಲ್ಲಿ ಅಥವಾ ಅವರ ಬಗ್ಗೆ ಹೆಚ್ಚು ಗಮನ ಕೊಡದೇ ಇದ್ದ ಸಂದರ್ಭದಲ್ಲಿ ಅಥವಾ ಅವರು ಮಾಡತಕ್ಕಂತಹ ಕೆಲಸಗಳಲ್ಲಿ ನಿಗಾ ವಹಿಸದೇ ಇರುವಂತಹ ಸಂದರ್ಭದಲ್ಲಿ ಅಥವಾ ಅವರ ಸ್ನೇಹಿತರ ವಿಚಾರದಲ್ಲಿ ಕೆಟ್ಟ ಸ್ನೇಹಿತರ ಸಹವಾಸ ಮಾಡಿದಾಗ ಹಲವಾರು ವಿಚಾರಗಳಲ್ಲಿ ಅವರು ಬೇರೆಯವರ ಅಂದರೆ ಪಕ್ಕದ ಮನೆಯವರನ್ನು, ಇನ್ನೊಬ್ಬರನ್ನು ನೋಡಿ, ಅವರ ಬೆಳವಣಿಗೆಯನ್ನು ನೋಡಿ, ಅಸೂಯೆ ಪಡುವಂತಹ ವಿಚಾರ ಅದರಲ್ಲಿ ಇರಬಹುದು, ಯಾವುದೇ ವಿಚಾರ ಇರಬಹುದು. ಯಾವುದೇ ವಿಚಾರ ಇದ್ದರೂ ಕೂಡ ಖಿನ್ನತೆಗೆ ಒಳಗಾಗುವಂತಹದ್ದು ಬಹಳ ಸೂಕ್ಷ್ಮವಾಗಿ ಗಮನಿಸಬೇಕಾದಂತಹ ವಿಚಾರ ಎನ್ನುವ ಮಾತನ್ನು ಹೇಳುತ್ತೇನೆ.

ತದನಂತರ ಹೇಳುವುದಾದರೆ ಅಪ್ರಾಪ್ತ ವಯಸ್ಸಿನಲ್ಲಿ ಗರ್ಭಧಾರಣೆಯಾಗುವಂತಹದ್ದು, it is a very serious matter ಎಂದು ಹೇಳುತ್ತೇನೆ. POCSO (The Protection of Children from Sexual Offences) Act ಅನ್ನು ತಂದಿರುವಂತಹದ್ದು ನಮ್ಮ ದೇಶದಲ್ಲಿ ಇರಬಹುದು. ಆದರೆ, the conviction rate in POCSO cases is only 3 percent ಎಂದು ಹೇಳುತ್ತೇನೆ. But, it is not right ಎನ್ನುವ ಮಾತನ್ನು ಹೇಳುತ್ತೇನೆ. ಈ POCSO cases ಗಳನ್ನು Fast Track Courts ಬೇಗ clear ಮಾಡಬೇಕಾಗಿದೆ. ಬಾಲ್ಯ ವಿವಾಹಗಳನ್ನು ರದ್ದು ಮಾಡುವಂತಹ ಕಾನೂನುಗಳಿದ್ದರೂ ಕೂಡ ಈಗಲೂ ಕೂಡ 14-15ನೇ ವಯಸ್ಸಿನ ಮಕ್ಕಳಿಗೆ ಮದುವೆ ಮಾಡುತ್ತಾರೆ. ಈ ರೀತಿ ಇರುವಾಗ ಸಣ್ಣ ಮಕ್ಕಳು ಸಹಿತ ಗರ್ಭಧಾರಣೆ ಮಾಡುವುದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲವೆನ್ನುವ ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಹಾಗೆಯೇ ಹಲವಾರು ವಿಚಾರಗಳನ್ನು ನೋಡಿದಾಗ ನಮ್ಮಲ್ಲಿ ಈಗ ಏನಾಗಿದೆ ಎಂದರೆ, live-in relationship ಎನ್ನುವುದು ಬೇರೆ ಬಂದಿರುವುದಾಗಿದೆ. ಇದೆಲ್ಲವನ್ನು ನೋಡಿದಾಗ ಎಲ್ಲೋ ಒಂದು ಕಡೆ ನಮ್ಮ ಸಮಾಜದಲ್ಲಿ ಸ್ವಾಸ್ಥ್ಯವನ್ನು ಹಾಳು ಮಾಡುವಂತಹದ್ದರಲ್ಲಿ, we should not encourage such kind of culture. Because, we respect women in our Country. ಭಾರತ ದೇಶದಲ್ಲಿ ಮಹಿಳೆಗೆ ಅತ್ಯಂತ ಪವಿತ್ರವಾದ ಸ್ಥಾನವನ್ನು ಕೊಟ್ಟಿರುವಂತಹ ಈ ದೇಶದಲ್ಲಿ live-in relationship culture ಎನ್ನುವುದು ನಮ್ಮದಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಅದನ್ನು ಕೊನೆ ಮಾಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಕೋರ್ಟ್‌ಗಳು ತೀರ್ಮಾನ ಮಾಡಬೇಕಾಗುತ್ತದೆ. ಮಾನ್ಯ ಸಭಾಪತಿಯವರೆ, ನಾನು ಇನ್ನು ಒಂದೇ ಒಂದು ನಿಮಿಷವನ್ನು ತೆಗೆದುಕೊಳ್ಳುತ್ತೇನೆ.

ಸಭಾಪತಿಯವರು:- ನಾನು ಕೊನೆಯದಾಗಿ ಹೇಳುತ್ತೇನೆ. ನಾನು ಬೆಲ್ ಮಾಡಿದ ತಕ್ಷಣ ನಿಲ್ಲಿಸಬೇಕು.

ಶ್ರೀ ಎಂ. ನಾಗರಾಜು:- ನಾವು ಹಾಗಾಗಿಯೇ ಹೇಳುತ್ತಿದ್ದೇವೆ. Live-in relationship ವಿಷಯವನ್ನು ನಾವು ಮಾತನಾಡುವಾಗ ಬಹಳ ಜನ ಹೇಳುತ್ತಾರೆ. ನಮಗೆ 18 ವಯಸ್ಸು ಆಗಿದೆ, ಏನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಕಾದರೂ ಮಾಡಬಹುದು ಎಂದು ಕೋರ್ಟ್‌ಗಳು ಕೂಡ ಹಲವಾರು ತೀರ್ಮಾನಗಳನ್ನು ಕೊಟ್ಟಿರಬಹುದು. ಇಲ್ಲಿ ಕೋರ್ಟ್ ಮತ್ತು ಕಾನೂನು ತೀರ್ಮಾನಗಳಿಗಿಂತ ಹೆಚ್ಚಾಗಿ ನಮ್ಮ ಮಾನವೀಯತೆಯನ್ನು ನಮ್ಮ ಸಂಸ್ಕೃತಿಯನ್ನು ನಮ್ಮ ಹೆಣ್ಣು ಮಕ್ಕಳ ಬಗ್ಗೆ, ನಮ್ಮ ತಾಯಿಂದಿರ ಬಗ್ಗೆ ಇರತಕ್ಕಂತಹ ಗೌರವವನ್ನು ನಾವು ಹೆಚ್ಚಿಸಿಕೊಳ್ಳಬೇಕು ಎನ್ನುವುದಾದರೆ live-in relationship ವಿಚಾರಗಳನ್ನು ಬಿಡಬೇಕಾಗುತ್ತದೆ. ಧೂಮಪಾನ, ಮಧ್ಯಪಾನ ವಿಚಾರಗಳನ್ನು ದೂರ ಇಡಲಿಕ್ಕೆ ಯೋಚನೆ ಮಾಡಬೇಕಾಗುತ್ತದೆ. ಮತ್ತು ವಿಶೇಷವಾಗಿ ಹೇಳಬೇಕೆಂದರೆ ಖಿನ್ನತೆ ಬಗ್ಗೆ ನಾವೆಲ್ಲರೂ ಕೂಡ ಆಗಾಗ ಕೌನ್ಸಿಲಿಂಗ್ ಮಾಡತಕ್ಕಂತಹ ಕೆಲಸಗಳು ಇರಬಹುದು ಮತ್ತು ಈ ಡ್ರಗ್ಸ್ ವಿಚಾರದಲ್ಲಿ ಬಹಳ ಬೇಗ ಅಡಿಕ್ಟ್ ಆಗುವಂತಹದ್ದು, ಇಂಟರ್‌ನೆಟ್ ಸೈಬರ್ ಕ್ರೈಮ್... Cyber addiction is too bad ಎಂದು ಹೇಳುತ್ತೇನೆ. ಈ ಸಣ್ಣ ವಯಸ್ಸಿನಲ್ಲಿ ಈ ಆನ್‌ಲೈನ್ ಕ್ಲಾಸಸ್ ಮಾಡುತ್ತಿದ್ದೇವೆ. ಇದನ್ನು ಕೋವಿಡ್ ಬಂದಂತಹ ಸಮಯದಲ್ಲಿ ಎಲ್ಲಾ ಮಕ್ಕಳಿಗೂ ಈ ಆನ್‌ಲೈನ್ ಕ್ಲಾಸಸ್ ಅನ್ನು ಹೆಚ್ಚಿನದಾಗಿ ಮಾಡಲಾಯಿತು. ಈ ವ್ಯವಸ್ಥೆಯನ್ನು ನಾವು ಕೊಟ್ಟ ನಂತರ, they are not only using it for good purposes, but they are also using it for the wrong purposes. ಅದಕ್ಕೆ ತಂದೆ-ತಾಯಿಯವರು ಇದರ ಬಗ್ಗೆ ಆಲೋಚನೆ ಮಾಡಬೇಕು. ಮಕ್ಕಳಿಗೆ ದೊಡ್ಡ ಐಫೋನ್ ತಂದು ಕೊಟ್ಟ ತಕ್ಷಣ ದೊಡ್ಡ ಪೆರೆಂಟ್ ಆಗಲಿಕ್ಕೆ ಸಾಧ್ಯವೇ ಇಲ್ಲ. ದೊಡ್ಡ ಐಫೋನ್ ಕೊಡಿಸುವುದಕ್ಕಿಂತ ಮೊದಲು ಅವನಿಗೆ ಒಳ್ಳೆಯ ಸಭ್ಯತೆಯನ್ನು ಕಲಿಸಿಕೊಡುವಂತಹದ್ದನ್ನು ಮಾಡುವುದು ಪೋಷಕರ ಜವಾಬ್ದಾರಿ ಆಗಿದೆ. ಪೋಷಕರ ಜೊತೆಗೆ ಇದು ಸಮಾಜದಲ್ಲಿರುವಂತಹ ಹಿರಿಯರ ಜವಾಬ್ದಾರಿಯಾಗುತ್ತದೆ. ಸರ್ಕಾರಗಳ ಜವಾಬ್ದಾರಿಯಾಗುತ್ತದೆ. ಒಟ್ಟಾರೆ ಹೇಳಬೇಕೆಂದರೆ ಮಕ್ಕಳು ಯಾವ ಒಂದು ವಿಚಾರಧಾರೆಯಲ್ಲಿ ಶಾಮೀಲು ಆಗುತ್ತಿದ್ದಾರೋ, ಯಾವ ವಿಚಾರಗಳನ್ನು ಮೈಗೂಡಿಸಿಕೊಳ್ಳುತ್ತಿದ್ದಾರೋ, ಅದು ಸಮಾಜಘಾತುಕ ಆಗುವಂತಹ ಸಂದರ್ಭ ಇದ್ದಾಗ ಅದನ್ನು ದೂರ ಇಡಲಿಕ್ಕೆ ನಾವು ಪ್ರಯತ್ನವನ್ನು ಮಾಡಬೇಕು. Character is the best way to bring our children back on track, and we should ensure that their character is not compromised. We should ensure that they don't develop depression. We should ensure that women are respected in this Country. ಏಕೆಂದರೆ, ಇಡಿ ವಿಶ್ವಕ್ಕೆ ಮಾದರಿಯಾಗಿರುವಂತಹ ದೇಶ, ದೊಡ್ಡ ಸಂಸ್ಕೃತಿ ಇರತಕ್ಕಂತಹ ದೇಶ, ನಮ್ಮ ತಾಯಿಂದಿರಿಗೆ ಗೌರವ ಕೊಡುವಂತಹ ದೇಶ. ಮುಂದೆ ಒಂದು ದಿವಸ ಅದೇ ಹೆಣ್ಣು ಮಗಳು ನಮ್ಮ ಸಮಾಜದಲ್ಲಿ ತಾಯಂದಿರಾಗತಕ್ಕಂತಹ ಸಂದರ್ಭದಲ್ಲಿ ನಾವು ಅವರಿಗೆ ಒಳ್ಳೆಯ ಸಂಸ್ಕೃತಿಯನ್ನು ಕೊಡಬೇಕೆನ್ನುವ ಮಾತನ್ನು ಹೇಳುತ್ತಾ, ಸಭಾಪತಿಯವರಿಗೆ ವಿಶೇಷವಾಗಿ ನಾನು ಧನ್ಯವಾದಗಳನ್ನು ಹೇಳಬೇಕೆಂದರೆ ಇಂತಹ ಸಮಾಜಿಕ ಪಿಡುಗನ್ನು ತೊಲಗಿಸುವುದಕ್ಕೋಸ್ಕರ ಇಂತಹ ಚರ್ಚೆಯನ್ನು ತೆಗೆದುಕೊಂಡಿರುವುದಕ್ಕೆ ತಮಗೆ ಅನಂತ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಧನ್ಯವಾದಗಳು. ನನಗೆ ಮಾತನಾಡಲಿಕ್ಕೆ ಕಡಿಮೆ ಅವಕಾಶವನ್ನು ಕೊಟ್ಟಿದ್ದು, ಮುಂದಿನ ಸಲ ಹೆಚ್ಚು ಸಮಯ ಕೊಡಿ ಎಂದು ಮನವಿಯನ್ನು ಮಾಡುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

ಸಭಾಪತಿಯವರು:- ಶ್ರೀಯುತ ನವೀನ್‌ರವರೆ, ನಾನು ಈಗ ಗಮನಸೆಳೆಯುವ ಸೂಚನೆಗಳನ್ನು ಮತ್ತು ನಿಯಮ ೩೩೦ ರಡಿಯಲ್ಲಿನ ವಿಷಯಗಳನ್ನು ಚರ್ಚೆಗೆ ವಿಷಯಗಳನ್ನು ತೆಗೆದುಕೊಳ್ಳುತ್ತೇನೆ. ಆದ್ದರಿಂದ, ತಾವು 10 ನಿಮಿಷಗಳಿಗಿಂತ ಜಾಸ್ತಿ ಮಾತನಾಡುವಂತಿಲ್ಲ.

ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೆ, with the permission of Chair, ಹೆಣ್ಣಿನ ಬಗ್ಗೆ ಬಹಳಷ್ಟು ಜನ ಮಾನ್ಯ ಸದಸ್ಯರು ಬಹಳ ಗೌರವದಿಂದ ಮಾತನಾಡಿದರು. ಉತ್ತರ ಕರ್ನಾಟಕದಲ್ಲಿ ಹೆಣ್ಣು ಮಗಳ ವಿಚಾರದಲ್ಲಿ ಒಂದು ಜಾನಪದದ ಒಂದು ಹಾಡು ಇದೆ.

ಸಭಾಪತಿಯವರು:- ಇದು ಮುಗಿದ ಮೇಲೆ ಹಾಡಿ.

ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ತಂದೆ-ತಾಯಿಯವರು ಹೆಣ್ಣು ಮಕ್ಕಳಿಗೆ ಯಾವರೀತಿ ಬುದ್ಧಿ ಹೇಳುತ್ತಾರೆನ್ನುವ ವಿಚಾರದಲ್ಲಿ ...

ಸಭಾಪತಿಯವರು:- ಆಮೇಲೆ ಹೇಳಿ.

ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):- ಹಾಗಾದರೆ ಅನುಮತಿಯನ್ನು ಕೊಡುವುದಿಲ್ಲವೆಂದರೆ ನಾನು ಇನ್ನು ಯಾವತ್ತೂ ಅನುಮತಿಯನ್ನು ಕೇಳುವುದಿಲ್ಲ.

(ಮುಂದು.)

(218) 11.03.2025 06.00 ಎಸ್‌ವಿ-ಎಂಡಿ (ವಿಕೆ) (ಸಭಾಪತಿಯವರ ಉಪಸ್ಥಿತಿ)

ಶ್ರೀ ಪ್ರತಾಪ ಸಿಂಹ ನಾಯಕ್.ಕೆ:- ಮಾನ್ಯ ಸಭಾಪತಿಯವರೆ, ಮಾನ್ಯ ಭೋಜೇಗೌಡರು ಹೇಗೆ ಎಂದರೆ ಒತ್ತಡ ಮತ್ತು ಖಿನ್ನತೆಯ ಬಗ್ಗೆ ಮಾತನಾಡುವಾಗ ಮಧ್ಯೆ ಮಧ್ಯೆ ಕುಕ್ಕರ್‌ನ ಒಂದು whistle ರೀತಿಯಲ್ಲಿ ಆ ಒತ್ತಡವನ್ನು release ಮಾಡುತ್ತಾರೆ.

ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಎಲ್ಲರೂ ತುಂಬಾ ಒತ್ತಡದಲ್ಲಿದ್ದಾರೆ. ಇಲ್ಲಿ ಅನೇಕ ಜನ ಉತ್ತರ ಕರ್ನಾಟಕದವರಿದ್ದಾರೆ. ತಾಯಿಯಾದವಳು ತನ್ನ ಮಗಳಿಗೆ ಮದುವೆ ಮಾಡಿ ಕಳುಹಿಸುವಾಗ ಕೆಲವು ಬುದ್ಧಿ ಮಾತನ್ನು ಹೇಳುತ್ತಾಳೆ. ಅದು ಉತ್ತರ ಕರ್ನಾಟಕ ಶೈಲಿಯಲ್ಲಿರುವಂತಹ ಹಾಡು.

ನನ್ನ ಕರುಳಿನ ಕುಡಿ ನೀನು ಹಿಂಗ ಅಳುಕುತ ಕುಂತ್ಯಾಕ
ನಿನ್ನ ಕೈಯ ಹಿಡಿದವನ ಮನೆಯನ್ನು ಸೇರಲಾಕ ॥ನನ್ನ॥

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಡಿಯಾಗ ಹುಟ್ಟಿದ ಬಳ್ಳಿ ಮಡಿಯಾಗ ಉಳಿವುದೇನ?
ಕುಡಿ ಬಿಟ್ಟು ಹೊರಗೆ ಬಂದು ಹೂ ಹಣ್ಣು ಕೊಡದೇನ..
ಇಡಿ ಮರದಾಗ ನನ್ನವ್ವ ನಗುನಗುತ ನೀ ಹೋಗವ್ವ
ನಾ ಎಷ್ಟು ದಿನ ಸಾಕಲೆವ್ವ ಕಡಿ ತನಕ ನಿನ ಗಂಡವ್ವ.. ॥ನನ್ನ॥

ಹೆಣ್ಣು ಸಣ್ಣಾಕಿ ಇರುವಾಗ ತಂದೆ ತಾಯ ಮಡಿಲಾಗ
ನಿನ್ನ ಯೌವನೆಂಬ ಕಾಲ ನಿನ್ನ ಗಂಡನ ಪಾಲಾಗ..
ಮುಂದ ಮುಪ್ಪಿನ ಬಾಳಗೆ ನಿಂತ ಮಕ್ಕಳ ನೆರಳಗೆ
ಈ ಪರತಂತ್ರ ಜನುಮವ ಶಿವ ಕೊಟ್ಟಾನ ಹೆಣ್ಣಿಗೆ... ॥ನನ್ನ॥

ನಿನ್ನ ಗಂಡಾಗ ಇರತಾರ ಚಂದ ಸಿರಿವಂತ ಗೆಳೆಯರ..
ನಿನ್ನ ಚೆಲುವ ರೂಪ ನೋಡಿ ಮೋಹಿಸಿ ಬಿಟ್ಟಾರ..
ಗಟ್ಟಿ ಇರಲವ್ವ ನಿನ್ನ ಶೀಲ ನಿನ್ನ ಗಂಡಗೊಬ್ಬಗ ಮೀಸಲ..
ಇಟ್ಟ ಬಾಳವ್ವ ನನ್ನ ಮಗಳ ಹೆಚ್ಚು ಹೇಳಾಕ ಏನಿಲ್ಲ.. ॥ನನ್ನ॥
ಹೋಗಿ ಬಾ.... ಮಗಳೇ....

ಧನ್ಯವಾದಗಳು.

(ಈ ಹಂತದಲ್ಲಿ ಇಡೀ ಸದನವು ಮೇಜು ತಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿತು)

ಶ್ರೀಮತಿ ಭಾರತಿ ಶೆಟ್ಟಿ:– ಮಾನ್ಯ ಸಭಾಪತಿಯವರೆ, ಮಗಳನ್ನು ಕಳುಹಿಸುವುದಕ್ಕೆ ಹಾಡನ್ನು ಹೇಳಿದರು. ಅದೇ ರೀತಿ ಮಗನನ್ನು ಕಳುಹಿಸುವುದಕ್ಕೆ ಹಾಡು..

ಡಾ: ಉಮಾಶ್ರೀ:– ಮಹಿಳೆ ಅತಂತ್ರ, ಪರತಂತ್ರ... ನಾವೀಗ ಸ್ವತಂತ್ರರು, ಪರತಂತ್ರರಲ್ಲ.

ಶ್ರೀಮತಿ ಭಾರತಿ ಶೆಟ್ಟಿ:– ಹೆಣ್ಣುಮಕ್ಕಳು ಹೇಗೆ ಇರಬೇಕು ಎಂದು ಹೇಳುವಂತೆ ಗಂಡುಮಕ್ಕಳು ಸಹ ಹೇಗೆ ಇರಬೇಕು ಎಂದು ತಾಯಿ ಹೇಳಬೇಕಲ್ಲವೆ? ಅದರ ಕೊರತೆಯೇ ಈ ಹದಿಹರೆಯದ ವಯಸ್ಸಿನಲ್ಲಿ ನಡೆಯುವುದು.

ಸಭಾಪತಿಯವರು:– ಮೊನ್ನೆ ಒಬ್ಬ ಸ್ವಾಮಿಗಳ ಕಾರ್ಯಕ್ರಮಕ್ಕೆ ಹೋಗಿದ್ದೆನು. ಮಗಳನ್ನು ಗಂಡನ ಮನೆಗೆ ಕಳುಹಿಸುವಾಗ ತಾಯಿ ಬಹಳ ಅಳುತ್ತಿರುತ್ತಾಳೆ. ಈಗಿನ ಕಾಲದ ಹೆಣ್ಣುಮಗಳು ತಾಯಿಗೆ ಹೇಳುತ್ತಾಳಂತೆ. "ಅವ್ವ, ಅಳಬೇಡ. ನಾನು ಹೋಗಿ ಎರಡು–ಮೂರು ತಿಂಗಳಿನಲ್ಲಿ ಬೇರೆ ಮನೆ ಮಾಡುತ್ತೇನೆ. ಅಲ್ಲಿ ಬಂದು ಇರು" ಎಂದು ಹೇಳುತ್ತಾಳಂತೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಡಿ.ಟಿ.ಶ್ರೀನಿವಾಸ್:- ಇದಕ್ಕೆ ಪೂರಕವಾಗಿ ಮೊನ್ನೆ ಟಿ.ವಿ.ಯಲ್ಲಿ ತೋರಿಸುತ್ತಿದ್ದರು. ಮದುವೆಯಾಗಿ ಗಂಡು ಸೈಲೆಂಟಾಗಿ ನಡೆದುಕೊಂಡು ಹೋದರೆ ಹೆಣ್ಣು ಬ್ಯಾಂಡ್‌ಸೆಟ್‌ನೊಂದಿಗೆ ಕುಣಿದುಕೊಂಡು ಹೋಗುತ್ತಿದ್ದಳು. ಎಲ್ಲಾ ಸೋಷಿಯಲ್ ಮೀಡಿಯಾದಲ್ಲಿದೆ, ನೋಡಿ. ಈಗಿನ ಪರಿಸ್ಥಿತಿ ಹಾಗಿದೆ.

ಸಭಾಪತಿಯವರು:- ಮಾನ್ಯ ಶ್ರೀನಿವಾಸ್ ಅವರೆ, ನಾನು ಪೂರ್ಣಿಮಾ ಅವರಿಗೆ ಹೇಳುತ್ತೇನೆ.

(ಸದನವು ನಗೆಗಡಲಿನಲ್ಲಿ ತೇಲಿತು)

ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಅತ್ಯಂತ ಪ್ರಮುಖವಾದ ವಿಷಯದ ಬಗ್ಗೆ ಮೇಲ್ಮನೆಯ ಎಲ್ಲಾ ಸದಸ್ಯರು ಇವತ್ತು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಅಭಿವೃದ್ಧಿ ಹೊಂದುವಂತಹ, ಅಭಿವೃದ್ಧಿ ಹೊಂದುತ್ತಿರುವಂತಹ ರಾಷ್ಟ್ರಗಳಿಗೆ ಬರುವಂತಹ ಏನಾದರೂ ಒಂದು baggage ಇದೆ ಎಂದರೆ ಇಲ್ಲಿ ಪಟ್ಟಿ ಮಾಡಿರುವಂತಹ ಸಮಸ್ಯೆಗಳು. ನಮ್ಮ ಮಧ್ಯೆ ಈ ರೀತಿ ಹದಿಹರೆಯದ ಮಕ್ಕಳ ಸಮಸ್ಯೆಗಳು ನಮ್ಮ ಕಣ್ಣ ಮುಂದಿದೆ. ಆರ್ಥಿಕವಾಗಿ ಸದೃಢವಾಗಿರುವಂತಹ ದೇಶಗಳು ಯೂರೋಪ್‌ನಲ್ಲಿರುವಂತಹ ದೇಶಗಳಾಗಿರಬಹುದು, ಅಮೆರಿಕಾ ಇತ್ಯಾದಿ ದೇಶಗಳಿರಬಹುದು ಕಳೆದ ಹಲವಾರು ದಶಕಗಳ ಹಿಂದೆಯೇ ಈ ಸಮಸ್ಯೆಯನ್ನು ಎದುರಿಸುವಂತಾಯಿತು. ಅದಕ್ಕೆ ಬೇರೆ ಬೇರೆ ಸಂಸ್ಕೃತಿ ಎಂದು ಕರೆದರೂ ಕೂಡ ಆ ಸಂದರ್ಭದಲ್ಲಿ ಅಲ್ಲಿನ ಮಕ್ಕಳಿಗೆ ಕೊಟ್ಟಂತಹ ಅತಿಯಾದ freedom ಇರಬಹುದು ಅಥವಾ ತಾವು ಮಾಡುತ್ತಿರುವಂಥದ್ದು ಎಲ್ಲವೂ ಸರಿಯಿದೆ ಎನ್ನುವ ರೀತಿಯಲ್ಲಿ ಶಕ್ತಿ ಕೊಡುವ ಕಾನೂನಿರಬಹುದು ಮುಂದೆ ಅದು ಎಷ್ಟು ಮಾರಕವಾಗುತ್ತದೆ ಎಂದು ಆ ದೇಶಗಳು ಬಹಳ ಸಮಯವಾದ ನಂತರ ಅರ್ಥ ಮಾಡಿಕೊಂಡಿವೆ. ಬಹುಶಃ ಈ ರೀತಿಯಾದಂಥ ಚರ್ಚೆಯಿಂದ ಸರ್ಕಾರವಾಗಿ ಯಾವ ರೀತಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎನ್ನುವುದಕ್ಕೆ ನಾಂದಿ ಹಾಡುವ ಕೆಲಸ ಇಲ್ಲಿ ಆಗಿದೆ.

ಮಾನ್ಯ ಸಭಾಪತಿಯವರೆ, ಇಲ್ಲಿ 10 ವಿಷಯಗಳ ಬಗ್ಗೆ ಪಟ್ಟಿ ಮಾಡಲಾಗಿದೆ. ನಾನು ಆ ಹತ್ತನ್ನೂ ಓದುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಎಲ್ಲಾ ಕಣ್ಣಮುಂದೆ ಇದೆ. ಈ ಹತ್ತರಲ್ಲಿ ಐದು ಸಮಸ್ಯೆಗಳು ಮನೆಯಿಂದಲೇ ಪ್ರಾರಂಭವಾಗುವುದು. ಮನೆಯಲ್ಲಿ ಈ ಐದು ವಿಷಯಗಳನ್ನು ಬಿತ್ತುವಂಥ ಕೆಲಸವಾಗುತ್ತದೆ. ಅದು ವಿಶೇಷವಾಗಿ ಈ ಸಂದರ್ಭದಲ್ಲಿ ಏನು nuclear families ಎನ್ನುವ concept ಬಂದಿದೆ, ತಂದೆ ತಾಯಿ ಮತ್ತು ಒಂದು ಮಗು ಆ ಮೂರೇ ಜನರು ಆ nuclear family ಯ ಸದಸ್ಯರು. ಆ nuclear family ಯಲ್ಲಿರುವಂಥವರು ಆ ಮೂರು ಜನರು ತಮ್ಮೊಳಗೆ ಒಂದು ಅಂತರ್ಯುದ್ಧ ನಡೆಸುತ್ತಿರುತ್ತಾರೆ. ತಂದೆ ತನ್ನದೇ ಆದ ಜಗತ್ತಿನಲ್ಲಿ, ತಾಯಿ ತನ್ನದೇ ಆದ ರೀತಿಯಲ್ಲಿ ಅವರಿಬ್ಬರನ್ನು ನೋಡಿ ಬೆಳೆಯುವ ಮಗು ಕೂಡ ದ್ವಂದ್ವ ರೀತಿಯ ಮಾನಸಿಕ ತುಮುಲತೆ ಹಾಗೂ ಹೋರಾಟದ ನಡುವೆ ಬೆಳೆಯುತ್ತಾ ಬರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿಂದೆಲ್ಲಾ ನಮ್ಮಲ್ಲಿ ಹೇಳುತ್ತಿದ್ದರು. "ಆಸ್ತಿ ಮಾಡಬೇಡಿ, ಮಕ್ಕಳನ್ನೇ ಆಸ್ತಿಯಾಗಿ ಮಾಡಿ" ಎಂದು ಹೇಳುತ್ತಿದ್ದರು. ಯಥಾವತ್ತಾಗಿ ಅದರ ವಿರುದ್ಧವಾಗಿ ನಡೆಯುತ್ತಿರುವುದನ್ನು ನಾವು ನೋಡಿದ್ದೇವೆ. ಮಕ್ಕಳು ಬೀದಿಗೆ ಬಂದರೂ ಪರವಾಗಿಲ್ಲ, ನಾವು material comfort ಎಷ್ಟು ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಹೆಚ್ಚಿನ ಒಲವು ಕೊಡುವಂಥದ್ದಾಗಿದೆ. ಹಿಂದೆ ಭಾರತೀಯ ಪರಂಪರೆ ಮತ್ತು ಸಂಸ್ಕೃತಿ ಹೇಗಿತ್ತೆಂದರೆ ಒಟ್ಟು ಕುಟುಂಬದಲ್ಲಿ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಏನೂ ಹೇಳಕೊಡಲಾಗಲಿಲ್ಲ ಎಂದರೆ ಯಾರಾದರೂ ಒಬ್ಬರು ದೊಡ್ಡವರು ಚಿಕ್ಕಪ್ಪನೋ, ದೊಡ್ಡಪ್ಪನೋ ಅವರಿಗೆ ಸರಿದಾರಿಗೆ ಬರುವಂಥ ಬುದ್ಧಿಮಾತನ್ನು ಹೇಳುತ್ತಿದ್ದರು. ಇವತ್ತಿನ ಪರಿಸ್ಥಿತಿ ಹೇಗಾಗಿದೆಯೆಂದರೆ ಮಕ್ಕಳಿಗೆ ಶಾಲೆಯಲ್ಲಿ ಕೂಡ ಏನೂ ಶಿಕ್ಷೆ ಕೊಡುವಂತಿಲ್ಲ. ನಾನು ಮೊನ್ನೆ ಯಾವಾಗಲೋ ಟಿ.ವಿ.ಯಲ್ಲಿ ನೋಡುತ್ತಿದ್ದೆನು. ನಮ್ಮ ಮಗುವಿಗೆ ಶಾಲೆಯಲ್ಲಿ ಶಿಕ್ಷೆ ನೀಡುತ್ತಿದ್ದೀರೆಂದು ಶಾಲೆಯ ಮುಂದೆ ಪ್ರತಿಭಟನೆ ಮಾಡುತ್ತಿದ್ದರು. ಅಂದರೆ, ಸಮಾಜ ಈ ರೀತಿಯಾದಂತಹ ಒಂದು ಪರಿಸ್ಥಿತಿಗೆ ಹೋಗುತ್ತಿದೆ.

(ಮುಂದು)

(219) 11-03-2025/6.10/ಎಂವಿ-ಎಂಡಿ (ವಿಕೆ) (ಸಭಾಪತಿಯವರ ಉಪಸ್ಥಿತಿ)

ಸಭಾಪತಿಯವರು:- ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸುಪ್ರೀಂ ಕೋರ್ಟ್‌ನ ರೂಲಿಂಗ್ ಇದೆ. ಅಂದರೆ, ಮಕ್ಕಳಿಗೆ ಶಿಕ್ಷೆ ಕೊಡಬಾರದು ಎಂದು.

ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)- ಮಾನ್ಯ ಸಭಾಪತಿಯವರೇ, ಹಿಂದೆ ಶಿಕ್ಷಣಕ್ಕೆ ಕಡಿಮೆ ಒತ್ತು ಕೊಡುತ್ತಿದ್ದರು, ಸಂಸ್ಕಾರಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದರು. ಆದರೆ, ಇವತ್ತು ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದಾರೆ. ಮಕ್ಕಳು ಶಿಕ್ಷಣದಲ್ಲಿ highest ಆಗಿ ಎಲ್ಲರಿಗಿಂತ ಬುದ್ಧಿವಂತರಾಗಬೇಕು. ಅವರು ಎಲ್ಲರಿಗಿಂತ ಜಾಸ್ತಿ ತಿಳಿದುಕೊಂಡಿರಬೇಕು. ಅವರು ಯಾರೂ ಸಾಧನೆ ಮಾಡದೇ ಇರುವಂಥದ್ದನ್ನು ಸಾಧಿಸಬೇಕು ಎನ್ನುವ rat race ಗೆ ಮಕ್ಕಳನ್ನು ದೂಡುವಂತಹ ಕೆಲಸವನ್ನು ತಂದೆ-ತಾಯಿಗಳು ಮಾಡುತ್ತಿದ್ದಾರೆ. ಆದರೆ, ಅದನ್ನು ಮಾಡುತ್ತಾ, ಸಂಸ್ಕಾರವನ್ನು ಕಡಿಮೆ ಮಾಡುವಂತಹ ಕೆಲಸವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಸಣ್ಣ ಕಥೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಬ್ಬ ಬಹಳ ದೊಡ್ಡ ಕ್ರಿಮಿನಲ್, ಅವನು ಜೈಲಿಗೆ ಹೋಗುತ್ತಾನೆ, ಆತನಿಗೆ ಶಿಕ್ಷೆಯಾಗುತ್ತದೆ. ತದನಂತರ ಅವನಿಗೆ ಕೋರ್ಟ್‌ನಿಂದ ಮರಣದಂಡನೆಯಾಗುವಂತಹ ಆದೇಶ ಬರುತ್ತದೆ. ಮರಣದಂಡನೆಯ ಗಲ್ಲಿಗೇರಿಸುವಂತಹ ದಿನವೂ ಕೂಡ ನಿಶ್ಚಯವಾಗುತ್ತದೆ. ಅವನ ಕೊನೆ ಆಸೆ ಏನು ಎಂದು ಕೇಳಿದಾಗ, ಅವನು ತನ್ನ ತಾಯಿಯ ಬಳಿ ಮಾತನಾಡಬೇಕು ಎಂದು ತನ್ನ ಕೊನೆ ಆಸೆಯನ್ನು ವ್ಯಕ್ತಪಡಿಸುತ್ತಾನೆ. ಪೊಲೀಸ್‌ನವರು ಅವನ ತಾಯಿಯನ್ನು ಕರೆದುಕೊಂಡು ಬಂದು ಮಗನ ಎದುರಿಗೆ ಕೂರಿಸಿದಾಗ, ಮಗ ತನ್ನ ತಾಯಿಗೆ ಏನು ಹೇಳುತ್ತಾನೆಂದರೆ, ನಾನು ಇವತ್ತು ಏನಾದರೂ ಈ ಸ್ಥಿತಿಯಲ್ಲಿ ನೇಣುಗಂಬದಲ್ಲಿ ನನ್ನ ಪ್ರಾಣ ಹೋಗುತ್ತಿದೆ ಎಂದರೆ, ಅದಕ್ಕೆ ನೀನೇ ಕಾರಣವೆಂದು ತನ್ನ ತಾಯಿಗೆ ಹೇಳುತ್ತಾನೆ. ಅದಕ್ಕೆ ಅವನ ತಾಯಿ ನಾನೇನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದೆ ಎಂದು ಕೇಳುತ್ತಾಳೆ. ನಾನು ಚಿಕ್ಕವನಿದ್ದಾಗ ಒಂದು ರಬ್ಬರ್ ಮತ್ತು ಪೆನ್ಸಿಲ್ ಅನ್ನು ಕದ್ದುಕೊಂಡು ಮನೆಗೆ ತಂದಿದ್ದೆ. ಅದು ನಿನಗೆ ಗೊತ್ತಾಗಿ, ನಿನ್ನ ಗಮನಕ್ಕೂ ಬಂದಿತ್ತು. ಅಂದರೆ, ಅದು ನನ್ನದಲ್ಲ ಬೇರೆಯವರದು ನನ್ನ ಕೈಗೆ ಬಂದಿದೆ ಎಂದು. ಆ ಸಂದರ್ಭದಲ್ಲಿ ನೀನು ನನ್ನ ಕಿವಿ ಹಿಂಡಿ, ನನ್ನನ್ನು ಸರಿದಾರಿಗೆ ತರುವಂತಹ ಕೆಲಸವನ್ನು ಮಾಡಿದ್ದರೆ, ನಾನು ಬಹುಶಃ ಇವತ್ತು ಸಮಾಜದಲ್ಲಿ ಬಹಳ ಗೌರವಯುತವಾಗಿ ಬದುಕುವಂತಹ ದಾರಿಗೆ ಬರುತ್ತಿದ್ದೆ ಎಂದು ಹೇಳುತ್ತಾನೆ. ಆದರೆ, ದುರಾದೃಷ್ಟವಶಾತ್ ಇವತ್ತು ಏನಾಗಿದೆ ಎಂದರೆ, ತಂದೆ-ತಾಯಿಗಳಿಗೆ ತಮ್ಮ ಸ್ವಂತ ಮಕ್ಕಳು ಯಾವ ದಾರಿಯಲ್ಲಿ ಹೋಗುತ್ತಿದ್ದಾರೆಂದು ನೋಡುವಷ್ಟು ಸಮಯ ಇಲ್ಲದೇ ಇರುವಂತೆ ಆಗಿದೆ. ಅವರು ತಾವು ಮತ್ತು ತಮ್ಮ ಜೀವನವನ್ನು ನೋಡುತ್ತಿರುವುದನ್ನು ಬಿಟ್ಟರೆ, ಮಕ್ಕಳನ್ನು ಯಾವ ರೀತಿ ಬೆಳಸಬೇಕು ಮತ್ತೆ ಮಕ್ಕಳಲ್ಲಿ ಏನೇನು ಕೊರತೆಗಳಿವೆ, ಅವುಗಳನ್ನು ಸರಿದೂಗಿಸುವಂಥದ್ದಕ್ಕೆ ಅವರ ಜೊತೆಯಲ್ಲಿ ಎಷ್ಟು ಸಮಯವನ್ನು ಕೊಡಬೇಕು ಎನ್ನುವಂಥದ್ದು ಇವತ್ತು ಹೊರಟು ಹೋಗಿದೆ. "The family that eats together stays together" ಎನ್ನುವಂತಹ ಮಾತು ಇತ್ತು. ಯಾವ ಕುಟುಂಬ ಪ್ರತಿದಿನ ರಾತ್ರಿ ಒಟ್ಟಿಗೆ ಕುಳಿತು ಊಟ ಅಥವಾ ಬೆಳಗ್ಗೆ ಜೊತೆಯಲ್ಲಿ ಉಪಹಾರ ಮಾಡುತ್ತಾರೆ, ಅಂತಹ ಕುಟುಂಬ ಬಹಳ ವರ್ಷಗಳ ಕಾಲ ಜೊತೆಯಲ್ಲಿರುತ್ತದೆ ಎಂಬುದು ಅದರ ಅರ್ಥ. ಅದರೆ, ಇವತ್ತು ಎಲ್ಲಾ ಊಟ ಮತ್ತು ತಿಂಡಿಯನ್ನು ಒಬ್ಬೊಬ್ಬರೆ ತಮಗೆ ಬೇಕಾದ ಸಮಯಕ್ಕೆ ಬಂದು ಟಿ.ವಿ. ಮುಂದೆ ಕುಳಿತು ತಾವೇ ಊಟ ಮಾಡಿಕೊಂಡು ತಮ್ಮ ರೂಮಿಗೆ ಹೋಗುವಂತಹ ವ್ಯವಸ್ಥೆಗಳು ಇವೆ. ನಾನು ಭಾವಿಸುವುದು ಏನೆಂದರೆ, ಸರ್ಕಾರಗಳು ಇದಕ್ಕೆ ಕಾನೂನು ತರುವ ಮೂಲಕ ಇದರಿಂದ ಏನೂ ದೊಡ್ಡ ಪರಿವರ್ತನೆ ಆಗುವುದಿಲ್ಲ. ಇದಕ್ಕೆ ಸಮಾಜ ತನ್ನ ಹೊಣೆಗಾರಿಕೆಯನ್ನು ನಿರ್ಣಯ ಮಾಡಬೇಕು. ಈಗ ಕಾನೂನು ಮಾಡುವುದು ಶಿಕ್ಷೆ ಕೊಡುವುದಕ್ಕೆ. ಕಾನೂನು ಮಾಡುವಂಥದ್ದು ತಪ್ಪು ಮಾಡಿರುವಂತಹವನ್ನು ಗುರುತಿಸಿ, ಅವರ ಮೇಲೆ ಏನು ಕ್ರಮ ಮಾಡಬೇಕು ಎನ್ನುವಂಥದ್ದಕ್ಕೆ. ಆದರೆ, ಇದರ ಬಹುಪಾಲು ಜವಾಬ್ದಾರಿ ಇರುವಂಥದ್ದು ಯಾರಿಗೆ ಎಂದರೆ, ಮೊದಲನೆಯದಾಗಿ ಪೋಷಕರಿಗೆ, ತದನಂತರ ಸಮಾಜಕ್ಕೆ, ತದನಂತರ ತಾನು ತನ್ನ ಸುತ್ತಲೂ ಇರುವಂತಹ ಸ್ನೇಹಿತರನ್ನು ಗುರುತಿಸುವಂತಹ ಜವಾಬ್ದಾರಿಗಳು ಏನಿರುತ್ತವೆ, ಇದೆಲ್ಲವೂ ಕೂಡ ಒಂದು chain reaction ಇದ್ದಂತಹ ರೀತಿಯಲ್ಲಿ. ಈಗ ಒಬ್ಬ ಹುಡುಗ ಮತ್ತು ಹುಡುಗಿ ಏಕಾಏಕಿ ಒಂದು ದಿವಸದಲ್ಲಿ ದಾರಿ ತಪ್ಪುವುದಿಲ್ಲ. ದಾರಿ ತಪ್ಪಬೇಕು ಅಥವಾ ಈ ರೀತಿಯಾದಂತಹ ಮದ್ಯ ವ್ಯಸನ, cyber ವ್ಯಸನ ಈ ರೀತಿಯಾದಂತಹ ಅನೇಕ ನಾವು ಇಲ್ಲಿ ಏನು ಸಾಮಾಜಿಕ ಪಿಡುಗುಗಳ ಪಟ್ಟಿ ಮಾಡಿದ್ದೇವೆ, ಇದು ಒಂದು ರಾತ್ರಿಯಲ್ಲಿ ಅಥವಾ ಒಂದು ದಿವಸದಲ್ಲಿ ಈ ರೀತಿಯಾದಂತಹ ದಾರಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ನಾನು ಒಂದು ಒಳ್ಳೆಯ ಉದಾಹರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ವಿಶ್ವಕ್ಕೆ ಚೆಸ್ ಚಾಂಪಿಯನ್ ಆಗಿರುವಂತಹ ಶ್ರೀ ಪ್ರಜ್ಞಾನಂದನ ತಾಯಿ, ಇವತ್ತಿಗೂ ಕೂಡ ಪ್ರಾರಂಭದ ದಿನದಿಂದ ಅವನನ್ನು ಚೆಸ್‌ಗೆ ಕರೆದುಕೊಂಡು ಹೋದಾಗ ಹೇಗೆ ಜೊತೆಯಲ್ಲಿ ಹೋಗುತ್ತಿದ್ದರೋ ಇವತ್ತು ಅಂತರಾಷ್ಟ್ರೀಯ ಟೂರ್ನಮೆಂಟ್‌ಗಳಲ್ಲೂ ಕೂಡ ಆಕೆ ಅವನ ಜೊತೆಯಲ್ಲಿ ಹೋಗಿ, ಆತನ ಹಿಂದೆ ನಿಂತುಕೊಂಡಿರುತ್ತಾರೆ. ಆಕೆ ಎಲ್ಲೂ ಕೂಡ ಮುಂದೆ ಬರುವುದಿಲ್ಲ. ಅವರು ಒಂದು ರೀತಿ shadow ರೀತಿಯಲ್ಲಿ ನಿಂತುಕೊಂಡು ಕೆಲಸ ಮಾಡುತ್ತಾರೆ. ಆದರೆ, ಇವತ್ತು ಏನಾಗಿದೆ ಎಂದರೆ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಾಜದಲ್ಲಿ ನನ್ನ ಮಕ್ಕಳು ಎಲ್ಲರಿಗಿಂತ ಚೆನ್ನಾಗಿರುವಂತಹ ಮೊಬೈಲ್ ತೆಗೆದುಕೊಳ್ಳಬೇಕು. ನನ್ನ ಮಕ್ಕಳು ಎಲ್ಲರಿಗಿಂತ ಚೆನ್ನಾಗಿರುವಂತಹ ಬಟ್ಟೆಯನ್ನು ಹಾಕಿಕೊಳ್ಳಬೇಕು. ಈಗ ಎಲ್ಲವೂ ಕೂಡ competition. ಎಲ್ಲವೂ ಕೂಡ materialistic competition ಗೆ ತಂದೆ ತಾಯಿಗಳು ತಮ್ಮ ಮಕ್ಕಳನ್ನು ನೂಕುತ್ತಿದ್ದಾರೆ. ಈಗ ಸಿಟಿಯಲ್ಲಿ ಆಗುವಂಥದ್ದನ್ನು ಹಳ್ಳಿಗಳಲ್ಲಿ ಪಾಲನೆ ಮಾಡುತ್ತಿದ್ದಾರೆ. ನಾನು ಬಹಳ ಬೇಸರದಿಂದ ಈ ಮಾತನ್ನು ಹೇಳಬೇಕಾಗಿದೆ. ಈಗ ಸಾಮಾಜಿಕ ಜಾಲತಾಣಗಳಲ್ಲಿ ಆಗಬಹುದು, ಮಾಧ್ಯಮದ ಚಿತ್ರಗಳಲ್ಲಿ ಏನಾಗಿದೆ ಎಂದರೆ, ಇವತ್ತು ಸಮಾಜದಲ್ಲಿ negativity ಇದೆ. ಅದನ್ನು glorify ಮಾಡುವಂತಹ ಕೆಲಸ ಮಾಡಲಿ. ಉದಾಹರಣೆಗೆ; ನಾವು ಇಷ್ಟೊಂದು ಜನರು ಕುಳಿತುಕೊಂಡು, ಈ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಆದರೆ, ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಮೂವಿಗಳಲ್ಲಿ ಒಬ್ಬ ರಾಜಕಾರಣಿಯನ್ನು ಹೇಗೆ ತೋರಿಸುತ್ತಾರೆ? ಒಬ್ಬ ಶಾಸಕರನ್ನು ಹೇಗೆ ತೋರಿಸುತ್ತಾರೆ? ಇದೆಲ್ಲವೂ ಕೂಡ ಎಲ್ಲೋ ಒಂದು ಕಡೆ ಸಮಾಜದ ಚಿಂತನೆಗಳು ಈ ಎಲ್ಲದಕ್ಕೂ ಕೂಡ ಕಾರಣವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರೆ ಇದಕ್ಕೆ ಉತ್ತರ ಕೊಡುತ್ತಾರೆ ಎಂಬ ನಿರೀಕ್ಷೆ ಇದೆ. ನಾವು ಒಂದು ಪ್ರಯತ್ನವನ್ನು ಮಾಡಬಹುದು. ಈ ಹಿಂದೆ Moral Science ಎಂಬ period ಇರುತ್ತಿತ್ತು. ನಾವು ಮತ್ತು ನೀವು ಎಲ್ಲಾ ಓದುತ್ತಿರುವಂತಹ ಸಂದರ್ಭದಲ್ಲಿ ಮಧ್ಯಾಹ್ನ Moral Science and Work Experience ಎಂಬ ಎರಡು ತರಗತಿಗಳು ಇರುತ್ತಿದ್ದವು. ಸರ್ಕಾರಿ ಶಾಲೆಗಳಲ್ಲೂ ಕೂಡ ಆ ರೀತಿ ಇತ್ತು. ಅಂದರೆ, ಶಿಕ್ಷಣದ ಜೊತೆಗೆ ಬೇರೆ ಬೇರೆ ನೀತಿ ಕಥೆಗಳು ಮತ್ತು ಗುಂಪು ಆಟಗಳನ್ನು ಅಡುವಂಥದ್ದು. ಒಂದು ರೀತಿ ಸಹಬಾಳ್ವೆಯನ್ನು ಮಾಡುವಂಥದ್ದು ಯಾವ ರೀತಿ ಎನ್ನುವುದನ್ನು ಕಲಿಸುವಂತಹ ಕೆಲಸ ಅದಾಗಿತ್ತು. ಇವತ್ತು ನಮ್ಮಲ್ಲಿ ಏನಾಗಿದೆ ಎಂದರೆ, psychology ಒಂದು ಕಡೆ, physiology ಒಂದು ಕಡೆ. ಇವತ್ತು ನಾವು ಹೆಚ್ಚು ಗಮನ ಕೊಡಬೇಕಾಗಿರುವುದು child psychology ಬಗ್ಗೆ. ಆ psychology ಯನ್ನು ಸರಿ ಮಾಡುವುದಕ್ಕೆ ಏನಾದರೂ counsellors ಗಳನ್ನು, ಶಾಲೆಯ ಮಟ್ಟದಲ್ಲಿ ಅಲ್ಲಿನ ಶಿಕ್ಷಕರಿಗೆ ಸ್ವಲ್ಪ ತರಬೇತಿಯನ್ನು ಕೊಟ್ಟು, ಈಗ ಮಕ್ಕಳು ದಾರಿ ತಪ್ಪುತ್ತಿದ್ದಾರೆ ಎಂಬುದು ಗೊತ್ತಾದ ತಕ್ಷಣ ತಂದೆ-ತಾಯಿ ಮತ್ತು ಮಗು ಇವರ ಜೊತೆಯಲ್ಲಿ ಕುಳಿತುಕೊಂಡು ಅವರನ್ನು ಸರಿದಾರಿಗೆ ತರುವಂಥದ್ದಕ್ಕೆ ಏನು ಮಾಡಬೇಕೆಂದು ಇದರ ಬಗ್ಗೆ ಸರ್ಕಾರ ಸ್ವಲ್ಪ ಗಮನ ಕೊಡುವಂಥದ್ದರ ಬಗ್ಗೆ ನೋಡಬೇಕು. ಮತ್ತೊಂದು ಏನೆಂದರೆ, as a government ಹೊಣೆಗಾರಿಕೆಯಲ್ಲಿ ಇಡೀ ಸಮಾಜವನ್ನು ಒಗ್ಗೂಡಿಸಿಕೊಂಡು ಮಾಡುವಂಥದ್ದು ಏನಾದರೂ ಕಾರ್ಯಕ್ರಮಗಳನ್ನು ತರಬಹುದೇ? ಈಗ ಎಷ್ಟೋ ಜನ Academic Counsellors ಆಗಿ, Social Counsellors ಆಗಿ ಸಾಕಷ್ಟು ಸಹಕಾರ ಮಾಡುತ್ತಾರೆ. ನಾನು ತಮ್ಮ ಮೂಲಕ ಈ ಸದನದ ಗಮನಕ್ಕೆ ತರುವುದು ಏನೆಂದರೆ, ನಾನು ಸುಮಾರು ಹತ್ತು ವರ್ಷಗಳ ಕಾಲ Health Counsellor ಆಗಿ ಕೆಲಸ ಮಾಡಿದ್ದೇನೆ. ಏಕೆಂದರೆ, ನಾನು ಒಬ್ಬ GMI (Glucose Management Indicator) Diabetic. ನಾನು ಹದಿಮೂರು ವರ್ಷದವನಿದ್ದಾಗಲೇ ನನಗೆ ಡಯಾಬಿಟಿಸ್ ಬಂತು. ಬೇರೆಯವರ ಚಿಕ್ಕ ಮಕ್ಕಳಿಗೆ ಬಂದಾಗ, ಆಸ್ಪತ್ರೆಯವರು ನನಗೆ ಫೋನ್ ಮಾಡುತ್ತಿದ್ದರು, ಆಗ ಆ ಮಕ್ಕಳ ತಂದೆ ತಾಯಿಗಳ ಜೊತೆ ಕುಳಿತುಕೊಂಡು, ನಾನು counsellor ಆಗಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾರಂಭದಲ್ಲಿ ಅವರಿಗೆ ಏನು ಬಹಳಷ್ಟು ಸಂಕಷ್ಟಗಳಿರುತ್ತವೆ, ಅವುಗಳನ್ನು ಸರಿಪಡಿಸುವಂಥದ್ದಕ್ಕೆ counsellor ಆಗಿ ಕೆಲಸ ಮಾಡಿದ್ದೇನೆ. ಈ ರೀತಿ ಸಮಾಜದಲ್ಲಿ ಇರುವಂತಹವರನ್ನು ಕರೆದು ಕೂರಿಸಿ, ಚರ್ಚೆ ಮಾಡಿ, counsellor position ಅದು paid position ಆಗುವಂತಹ ಅವಶ್ಯಕತೆ ಇಲ್ಲ. Voluntary position ಕೊಡುವಂಥದ್ದಕ್ಕೆ ಸರ್ಕಾರ ಏನಾದರೂ ಕ್ರಮಗಳನ್ನು ರೂಪಿಸಿ, ಅದರ ಮೂಲಕ ಈ ನ್ಯೂನತೆಗಳನ್ನು, ಸಮಸ್ಯೆಗಳನ್ನು ಪರಿಹರಿಸುವಂತಹ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನ ಮಾಡಬಹುದೆ ಎಂಬ ಆಲೋಚನೆಯನ್ನು ಮಾಡಿ, ಅದಕ್ಕೆ ಒಂದು ನೀತಿಯನ್ನು ರೂಪಿಸುವಂತಹ ಕೆಲಸವನ್ನು ಮಾಡಿದರೆ, ಈ ಚರ್ಚೆಗೆ ಮುಂದಿನ ದಿನಗಳಲ್ಲಿ ಒಂದು ಉತ್ತಮವಾದಂತಹ ಫಲಿತಾಂಶ ದೊರಕಬಹುದು. ಮುಂದಿನ ಪೀಳಿಗೆಯನ್ನು ಗಟ್ಟಿಯಾದಂತಹ ರೀತಿಯಲ್ಲಿ ಮುಂದೆ ತೆಗೆದುಕೊಂಡು ಹೋಗುವಂತಹ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ. ಇದನ್ನು ಈ ಸದನದ ಮೂಲಕ ಸರ್ಕಾರ ಪ್ರಯತ್ನ ಮಾಡಲಿ ಎಂಬ ವಿನಂತಿಯೊಡನೆ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)– ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಎಲ್ಲಾ ಮಾನ್ಯ ಸದಸ್ಯರು ತುಂಬಾ ಚೆನ್ನಾಗಿ ಮಾತನಾಡಿದ್ದಾರೆ. ನಾನು ಹೆಚ್ಚಿನದಾಗಿ ಏನನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಒಂದೆರಡು ಸಲಹೆಗಳನ್ನು ಹೇಳಬೇಕೆಂದುಕೊಳ್ಳುತ್ತೇನೆ. ಇವತ್ತಿನ ಮಕ್ಕಳು ತಂದೆ-ತಾಯಿಗಳಿಗೆ ಮಕ್ಕಳಾಗಿ ಉಳಿಯುತ್ತಿಲ್ಲ. ಅವರು ಈಗ ಮೊಬೈಲ್ ಮಕ್ಕಳಾಗಿಬಿಟ್ಟಿದ್ದಾರೆ. ಅವರಿಗೆ ಸ್ನೇಹಿತರು ಇಲ್ಲ. ಅವರಿಗೆ ಮೊಬೈಲ್‌ನ ಸ್ನೇಹಿತ. ಈಗ ಏನಾಗುತ್ತಿದೆಂದರೆ, ಆ ಮಗು ಅನ್ನ ತಿನ್ನುವುದಕ್ಕೆ ಶುರು ಮಾಡಿದಾಗ ತಾಯಿಯಾದಂತಹವರು ಅವರಿಗೆ ಮೊಬೈಲ್ ಕೊಟ್ಟುಬಿಡುತ್ತಾರೆ. ಅವರು ಮಕ್ಕಳಿಗೆ ಮೊಬೈಲ್ ಕೊಟ್ಟ ನಂತರ ಅವರಿಗೆ ಅನ್ನ ತಿನ್ನಿಸುವುದು. ನಂತರ ಅವರು ಅಡುಗೆ ಮನೆಗೆ ಹೋದರೆ ಮೊಬೈಲ್ ಕೊಟ್ಟುಬಿಡುವುದು. ಬಟ್ಟೆ ಒಗೆಯುವುದಕ್ಕೆ ಹೋದರೆ ಮೊಬೈಲ್ ಕೊಟ್ಟುಬಿಡುವುದು. ಅಂದರೆ, ತಂದೆ-ತಾಯಿಗಳೇ ಮೊಬೈಲ್‌ಗಳನ್ನು ತನ್ನ ಆಪ್ತ ಸ್ನೇಹಿತರು ಮತ್ತು ಪೋಷಕರು ಎನ್ನುವ ರೀತಿಯಲ್ಲಿ ಮಕ್ಕಳಿಗೆ ಕೊಟ್ಟುಬಿಟ್ಟಿದ್ದಾರೆ. ಈಗ ಮಕ್ಕಳು ಅದರಿಂದ ಹೊರಗೆ ಬರುತ್ತಿಲ್ಲ ಮತ್ತು ಬರುವುದಕ್ಕೆ ಆಗುತ್ತಿಲ್ಲ. ಆದರೆ, ಇದು ಮಕ್ಕಳ ತಪ್ಪು ಎಂದು ಅಲ್ಲ. ಅದು addiction. ಈಗ ನಾವೇ ಕಾರಿನಲ್ಲಿ ಕುಳಿತುಕೊಂಡರೆ YouTube ನೋಡುವ ಗೀಳು. ಇದು ಸರಿಯೋ ಇಲ್ಲವೋ ನಾವು ಅದನ್ನು ನೋಡುತ್ತಿರುತ್ತೇವೆ. ನಾವು ಮೊದಲು ಪೇಪರ್‌ಗಳನ್ನು ಓದುತ್ತಿದ್ದೆವು.

(ಮುಂದು)

(220) 11.03.2025 06.20 LL-AK **(ಸಭಾಪತಿಯವರ ಉಪಸ್ಥಿತಿ)**

ಶ್ರೀ ಪುಟ್ಟಣ್ಣ (ಮುಂದು):-

ಇನ್ನು ಮಕ್ಕಳ ಪರಿಸ್ಥಿತಿ ಏನಾಗಬೇಕು? ಕನಿಷ್ಠ ಪಕ್ಷ ನಮಗೆ ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂದು ತೀರ್ಮಾನ ತೆಗೆದುಕೊಳ್ಳುವಂತಹ ಅಥವಾ ನಿರ್ಧಾರ ಮಾಡತಕ್ಕಂತಹ ಬುದ್ಧಿವಂತಿಕೆ ಅಥವಾ ಜ್ಞಾನ ಇದೆ. ಆದರೆ, ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂದು ಗೊತ್ತಿದೆ ಎಂದು ಆ ಮಕ್ಕಳಿಗೆ ಏನು ಗೊತ್ತಿದೆ? ಆದರೆ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೋಷಕರು ಏನು ತಿಳಿದುಕೊಳ್ಳುತ್ತಾರೆಂದು ನನ್ನ ಮಗು ಏನೂ ನೋಡುತ್ತಿಲ್ಲ. ನನ್ನ ಮಗಳು ಏನೂ ನೋಡುತ್ತಿಲ್ಲ. ನನ್ನ ಮಗಳಿಗೆ ಅಥವಾ ನನ್ನ ಮಗನಿಗೆ ಏನು ಗೊತ್ತಿಲ್ಲ ಎಂದು ಅಂದುಕೊಳ್ಳುತ್ತಾರೆ. ಆದರೆ, ಆ ಮಕ್ಕಳಿಗೆ ತನ್ನ ತಂದೆ-ತಾಯಂದಿರಿಗಿಂತಲೂ ಹೆಚ್ಚು ಅಂದರೆ, ಆ ಮೊಬೈಲ್ ಅನ್ನು ಬಿಚ್ಚಾಕಿ ಪುನಃ ಅದನ್ನು ಜೋಡಿಸುವಷ್ಟು ಬುದ್ಧಿವಂತಿಕೆಯನ್ನು ಆ ಮಕ್ಕಳು ತಿಳಿದುಕೊಂಡು ಬಿಟ್ಟಿರುತ್ತಾರೆ. ಆದರೆ, ಪೋಷಕರಿಗೆ ಆ ಮೊಬೈಲ್ ಅನ್ನು ಹೇಗೆ ಬಳಕೆ ಮಾಡಬೇಕೆಂಬುದು ಗೊತ್ತಿರುವುದಿಲ್ಲ. ಇನ್ನು ಶಾಲೆಯ ವಿಚಾರಕ್ಕೆ ಬರುವುದಾದರೆ, ಶಾಲೆಯಲ್ಲಿ ಮಾತ್ರ ಮಕ್ಕಳನ್ನು ಅಕ್ಕ-ಪಕ್ಕದಲ್ಲಿ ಮಾತನಾಡುವುದಕ್ಕೆ ಬಿಡುವುದು. ಅಂದರೆ, ಶಾಲೆಯಲ್ಲಿ ಶಿಕ್ಷಕರು ಮಕ್ಕಳನ್ನು ಬೇರೆ ಮಕ್ಕಳ ಜೊತೆ ಬೆರೆಯುವುದಕ್ಕೆ ಬಿಡುತ್ತಾರೆ. ಅದು ಕೂಡ ಆ ಮಕ್ಕಳು ಬೇರೆ ಮಕ್ಕಳ ಜೊತೆ ಬೆರೆತರೆ ಮಾತ್ರ ಬಿಡುತ್ತಾರೆ. ಆ ಮಕ್ಕಳು ಶಾಲೆಯಿಂದ ಮನೆಗೆ ಬಂದರೆ, ಆ ಮಕ್ಕಳನ್ನು ಮನೆಯಲ್ಲಿ ಕೂಡಿ ಹಾಕುತ್ತಾರೆ. ಅಲ್ಲಿ ಅವರಿಗೆ ಫ್ರೆಂಡ್ ಯಾರು ಎಂದು ಹೇಳಿದರೆ, ಈ ಮೊಬೈಲ್‌ಗಳೇ ಅವರ ಫ್ರೆಂಡ್‌ಗಳು. ಇದನ್ನು ತಪ್ಪಿಸುವುದಕ್ಕೆ ಮಕ್ಕಳ ಪೋಷಕರಿಗೆ ಸಮಾಲೋಚನೆ ಮಾಡಿ ತಿಳುವಳಿಕೆ ನೀಡಬೇಕು. ಇದಕ್ಕೆಲ್ಲಾ ಪೋಷಕರೇ ಕಾರಣರಾಗಿರುತ್ತಾರೆ. ಅಲ್ಲದೇ, ಇವೊತ್ತಿನ ದಿವಸ ನಾವೇ ಕಾನೂನು ಮಾಡಿಬಿಟ್ಟಿರುತ್ತೇವೆ. ಅದೇನೆಂದರೆ, ಶಾಲೆಯಲ್ಲಿ ಮಕ್ಕಳಿಗೆ ಒಂದು ಏಟು ಹೊಡೆಯುವ ಆಗಿಲ್ಲ ಮತ್ತು ಒಂದು ಬೈಗುಳ ಬಯ್ಯುವ ಆಗಿಲ್ಲ. ಆದರೆ, Artificial Intelligence ಬಳಸಿ ತನ್ನ ಮಕ್ಕಳಿಗೆ ನೂರಕ್ಕೆ ನೂರು ಅಂಕಗಳು ಬರುವ ರೀತಿಯಲ್ಲಿ ವಿದ್ಯಾಭ್ಯಾಸ ನೀಡಬೇಕು. ಇದು ಹೇಗೆ ಆಗುತ್ತದೆ? ಇತ್ತೀಚೆಗೆ ನಾನು ಒಂದು ಪ್ರತಿಷ್ಠಿತ ಶಾಲೆಗೆ ಭೇಟಿ ನೀಡಿದ್ದೆನು. ಅಲ್ಲಿ ಸುಮಾರು 6 ವರ್ಷದ ಮಗು ಅಂದರೆ 1ನೆ ತರಗತಿ ಇರಬಹುದು, ಅಂದರೆ ಒಂದು ಗಂಡು ಮಗು ಮತ್ತು ಒಂದು ಹೆಣ್ಣು ಮಗು ಒಬ್ಬರಿಗೊಬ್ಬರು ತಬ್ಬಿಕೊಂಡಿದ್ದರಂತೆ. ಅದಕ್ಕೆ ಆ ಹೆಣ್ಣು ಮಗುವಿನ ತಂದೆ ಅಥವಾ ತಾಯಿ ನನಗೆ ಸರಿಯಾಗಿ ನೆನಪಿಲ್ಲ. ಅವರು ಶಾಲೆಗೆ ಹೋಗಿ, "ಆ ಮಗು ನಮ್ಮ ಮಗುವಿಗೆ ಈ ರೀತಿ ಮಾಡಿದೆ. ಹಾಗಾಗಿ, ಆ ಮಗುವಿನ ಪೋಷಕರನ್ನು ಕರೆದು ನಾವು ಪೋಲೀಸ್ ದೂರು ನೀಡುತ್ತೇವೆ" ಎಂದು ಹೇಳಿದರಂತೆ. ಅದಕ್ಕೆ ಶಾಲಾ ಆಡಳಿತ ಮಂಡಳಿಯವರು, "ತಾವು ಈ ರೀತಿ ಮಾಡುವುದಾದರೆ ತಮ್ಮ ಮಗುವಿನ ಟಿ.ಸಿ. ತೆಗೆದುಕೊಂಡು ಹೋಗಿ. ಮಕ್ಕಳಲ್ಲಿ ಏತಕ್ಕೆ ಇಂತಹ ವಿಚಾರಗಳನ್ನು ತೆಗೆದುಕೊಂಡು ಬರುತ್ತೀರಿ" ಎಂದು ಹೇಳಿ ಆ ಪೋಷಕರಿಗೆ ಒಂದು ಆಪ್ತ ಸಮಾಲೋಚನೆ ಮಾಡಿ, ಅವರಿಗೆ ತಿಳಿ ಹೇಳಿ ಕಳುಹಿಸಿರುತ್ತಾರೆ. ಅಂದರೆ, ಇವೊತ್ತಿನ ದಿನ ಯಾರಿಗೆ ಆಪ್ತ ಸಮಾಲೋಚನೆ ಮಾಡಬೇಕೆಂದರೆ ಮಕ್ಕಳಿಗಿಂತಲೂ ಅವರ ತಂದೆ-ತಾಯಿಗಳಿಗೆ ಹೇಳಬೇಕು. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದ್ದು ಸವಾಲಿನ ಕೆಲಸವಾಗಿರುತ್ತದೆ. ಶಿಕ್ಷಕರ ಕೆಲಸವಂತೂ ಅದಕ್ಕಿಂತಲೂ ಸವಾಲಿನ ಕೆಲಸವಾಗಿರುತ್ತದೆ.

ಶಾಲೆಯಲ್ಲಿ ಒಂದನೆ ತರಗತಿಯಲ್ಲಿ ನಾವು ಮಗುವಿಗೆ ಏನು ಕಲಿಸಿದ್ದೇವೆಂದು ಎರಡನೆ ತರಗತಿಯಲ್ಲಿ ಕೇಳುವುದಿಲ್ಲ. ಎರಡನೆ ತರಗತಿಯಲ್ಲಿ ಏನು ಕಲಿಸಿದ್ದೇವೆಂದು ಮೂರನೆ ತರಗತಿಯಲ್ಲಿ ಕೇಳುವುದಿಲ್ಲ. ಆದರೆ, ಅದನ್ನು ಯಾವಾಗ ಕೇಳುತ್ತೇವೆಂದರೆ, ಆ ಮಗು ಎಸ್‌ಎಸ್‌ಎಲ್‌ಸಿ ಬಂದಾಗ ನಾವು ಕುತ್ತಿಗೆಗೆ ಹಾಕುತ್ತೇವೆ. ಮಾನ್ಯ ಸಚಿವರಾದ ಶ್ರೀ ಮಧು ಬಂಗಾರಪ್ಪನವರು ಮೂರು ಪರೀಕ್ಷೆಗಳನ್ನು ಮಾಡಿಸಿ, ಜಾಸ್ತಿ ಪರ್ಸಂಟೇಜ್‌ನಲ್ಲಿ ಮಕ್ಕಳು ಪಾಸ್ ಆಗಬೇಕೆಂದು ಡ್ರಾಪ್‌ಔಟ್ ಆಗಬಾರದೆಂದು ತೀರ್ಮಾನ ತೆಗೆದುಕೊಂಡಿರುತ್ತಾರೆ. ಅದಕ್ಕಾಗಿ ನಾನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರನ್ನು ಅಭಿನಂದಿಸುತ್ತೇನೆ. ಅದರ ಜೊತೆಗೆ, ಈಗ ನಾನು ಹೇಳುವುದೇನೆಂದರೆ, ಒಂದನೆ ತರಗತಿಯಲ್ಲಿ ಮಗು ಕಲಿಯಬೇಕಾಗಿರುವುದನ್ನು ಕಲಿತಿದೆಯೇ ಅಥವಾ ಆರನೆ ತರಗತಿಯಲ್ಲಿ ಕಲಿಯಬೇಕಾಗಿರುವುದನ್ನು ಕಲಿತಿದೆಯೇ ಎನ್ನುವುದನ್ನು ನಂತರದ ತರಗತಿಯಲ್ಲಿ ಅದನ್ನು ಚೆಕ್ ಮಾಡಬೇಕು, ಅಲ್ಲವೇ? ಮೊದಲು ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಪಾಸ್ ಆದವರಿಗೆ 'ಡಿ' ಗ್ರೂಪ್ ನೌಕರಿ ಕೊಡುತ್ತಿದ್ದರು. ಈಗ ಎಸ್ಎಸ್ಎಲ್ಸಿಗೆ ಡಿ ಗ್ರೂಪ್ ನೌಕರಿ ಕೊಡುತ್ತಿಲ್ಲ. ಈಗ ಅದು ಒಂದೇ ಒಂದು ಉಪಯೋಗಕ್ಕೆ ಬರುತ್ತಿದೆ. ಅದೇನೆಂದರೆ, ಜನ್ಮ ದಿನಾಂಕ ನೋಡುವುದಕ್ಕೆ ಉಪಯೋಗವಾಗುತ್ತದೆ. ಅದನ್ನು ಬಿಟ್ಟರೆ, ಬೇರೆ ಯಾವುದಕ್ಕೂ ಅದು ಉಪಯೋಗವಾಗುತ್ತಿಲ್ಲ. ನಮ್ಮ ಹಳ್ಳಿಯ ಭಾಷೆಯಲ್ಲಿ ಹೇಳುವುದಾದರೆ, ಖಾರಾ ಸೇವ್ ಕಟ್ಟಿಕೊಡುವುದಕ್ಕೆ ಉಪಯೋಗವಾಗುತ್ತದೆ. ಅಂದರೆ, ಜಾತ್ರೆಗಳಲ್ಲಿ ಅಥವಾ ಸಂತೆಗಳಿಗೆ ಹೋದರೆ, ಖಾರಾ ಸೇವ್ ಕಟ್ಟಿಕೊಡುವುದಕ್ಕೆ ಉಪಯೋಗವಾಗುತ್ತದೆ. ಈ ರೀತಿ ಮಕ್ಕಳ ಪರಿಸ್ಥಿತಿ ಆಗುತ್ತಿದೆ. ಅದಕ್ಕಾಗಿ, ನಾನು ಸರ್ಕಾರಕ್ಕೆ ಒಂದು ಸಲಹೆ ನೀಡುವುದಕ್ಕೆ ಬಯಸುತ್ತೇನೆ. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಸಹ ಒಂದು ಆಲೋಚನೆ ಮಾಡಿದ್ದಾರೆ. ಅದೇನೆಂದರೆ, ಗ್ರಾಮ ಪಂಚಾಯತಿ ಮಟ್ಟದಲ್ಲಿರುವ ಎಲ್ಲಾ ಶಾಲೆಗಳನ್ನು ಸೇರಿಸಿ, ಗ್ರಾಮ ಪಂಚಾಯತಿ ಮಟ್ಟದಲ್ಲಿ ಒಂದು ಶಾಲೆಯಾಗಿ ಮರ್ಜ್ ಮಾಡಿ, ವಾಹನ ಸೌಲಭ್ಯ ನೀಡಬೇಕೆಂದು ಆಲೋಚನೆ ಮಾಡಿದ್ದಾರೆ. ನನ್ನ ಅನಿಸಿಕೆಯಲ್ಲಿ ಇದು ಸಕ್ಸಸ್ ಆಗುತ್ತದೆ. ಮಾನ್ಯ ಸಚಿವರ ಆಲೋಚನೆಯಂತೆ ಏನು ಕೆಪಿಎಸ್ ಶಾಲೆಗಳನ್ನು ಮಾಡಿದ್ದಾರೆ, ಅದಕ್ಕೆ ಫ್ರೀಯಾಗಿ ವಾಹನ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಅದನ್ನು ಮಾಡಿದರೆ, ಈ ಸಮಸ್ಯೆ ಪರಿಹಾರವಾಗುತ್ತದೆ. ಈ ವಿಷಯವನ್ನು ಮಾನ್ಯ ಸಚಿವರು ಈ ಹಿಂದೆಯೂ ಸಹ ಹೇಳಿದ್ದರು. ಈ ರೀತಿ ಎಲ್ಲಾ ಶಾಲೆಗಳನ್ನು ಮರ್ಜ್ ಮಾಡಿದರೆ, ಎಲ್ಲಾ ವಿಷಯಗಳ ಶಿಕ್ಷಕರು ಸಿಗುತ್ತಾರೆ. ಎಲ್ಲಾ ಕ್ಲಾಸ್‌ನಲ್ಲಿ ಮಕ್ಕಳು ಏನು ಕಲಿಯಬೇಕು ಅದನ್ನು ಕಲಿಯುತ್ತಾರೆ. ಇವೊತ್ತಿನ ದಿವಸ ಏನಾಗಿದೆಯೆಂದರೆ, ಬಹುತೇಕ ಎಲ್ಲಾ ಊರುಗಳಲ್ಲಿಯೂ ಸಹ ಶಾಲೆಗಳು ಇವೆ. ಆದರೆ, ಅಲ್ಲಿ ಪ್ರತಿ ವಿಷಯದ ಶಿಕ್ಷಕರು ಇರುವುದಿಲ್ಲ. ಯಾವ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ ಅದನ್ನು ಕೊಡುವುದಕ್ಕೆ ಆಗುತ್ತಿಲ್ಲ. ಹಾಗಾಗಿ, ಎಲ್ಲಾ ಶಾಲೆಗಳನ್ನು ಮರ್ಜ್ ಮಾಡಬೇಕು. ಆ ರೀತಿ ಮರ್ಜ್ ಮಾಡುವಂತಹ ಕೆಲಸ ಮಾಡಿದರೆ, ಶಿಕ್ಷಣದಲ್ಲಿಯೂ ಸಹ ಒಳ್ಳೆಯ ಗುಣಮಟ್ಟದ ಶಿಕ್ಷಣ ಸಿಗುತ್ತದೆ ಎಂದು ನಾನಂತೂ ಭಾವಿಸುತ್ತೇನೆ.

ಇನ್ನೊಂದು ವಿಚಾರ ಏನೆಂದರೆ, ಎಸ್ಎಸ್ಎಲ್ಸಿ ಡ್ರಾಪ್‌ಔಟ್ ಆಗದ ರೀತಿಯಲ್ಲಿ ಎರಡು, ಮೂರು ಪರೀಕ್ಷೆಗಳನ್ನು ಮಾಡಿದ್ದಾರೆ? ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ... ಕಳೆದ ಬಾರಿ ಏನು ಆಗಿತ್ತೆಂದರೆ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಪೋಲೀಸ್ ಹಾಕಿಸುತ್ತೇವೆ, ಡ್ರೋನ್ ಕ್ಯಾಮೆರಾಗಳನ್ನು ಬಿಡುತ್ತೇವೆಂದು ಸಾಕಷ್ಟು ಪ್ರಚಾರ ಆಗಿರುತ್ತದೆ. ಇದರಿಂದಾಗಿ, ಒಂದು ರೀತಿಯ ಭಯದ ವಾತಾವರಣ ಸೃಷ್ಟಿ ಮಾಡುವ ರೀತಿಯಲ್ಲಿ ಬೇರೆ ಬೇರೆಯವರು ಮಾಡಿದರು. ಈ ಬಗ್ಗೆ ದಿನಪತ್ರಿಕೆಯಲ್ಲಿ ಹಾಗೂ ಮಾಧ್ಯಮಗಳಲ್ಲಿಯೂ ಸಹ ವರದಿಯಾಗಿರುತ್ತದೆ. ಆದರೆ, ಅದನ್ನು ಹೋಗಲಾಡಿಸುವಂತಹ ರೀತಿಯಲ್ಲಿ ಮಾನ್ಯ ಸಚಿವರು, "ಆ ರೀತಿ ನಾವು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ" ಎಂದು ಹೇಳಿದರು ಸಹ ಎಲ್ಲಿಯೋ ಒಂದು ಕಡೆ ಭಯದ ವಾತಾವರಣವನ್ನು ಸುಮ್ಮ ಸುಮ್ಮನೆ ಸೃಷ್ಟಿ ಮಾಡಿದ್ದರು. ಹಾಗಾಗಿ, ನಾನು ಹೇಳುವುದೇನೆಂದರೆ, ಅದಕ್ಕಿಂತಲೂ ಮಿಗಿಲಾಗಿ ಎಸ್ಎಸ್ಎಲ್ಸಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರೀಕ್ಷೆಯಲ್ಲಿ ಪಾಸ್ ಮಾಡುವುದಕ್ಕೆ ಐಸಿಎಸ್ಇ ಮತ್ತು ಸಿಬಿಎಸ್ಇ ನಲ್ಲಿ ಏನು ಮಾನದಂಡ ಇದೆ, ಅದನ್ನು ಸ್ಟೇಟ್ ನಲ್ಲಿ ಅಳವಡಿಸಬೇಕು. ಅದನ್ನು ಮಾಡಿದರೆ ಮಾತ್ರ ಸ್ವಲ್ಪಮಟ್ಟಿಗೆ ಎಲ್ಲರಿಗೂ ಅನುಕೂಲವಾಗುತ್ತದೆ ಮತ್ತು ಡ್ರಾಪ್ಔಟ್ ತಪ್ಪುತ್ತದೆ. ಯಾವ ಶಾಲೆಯಲ್ಲಿ ಒಬ್ಬ ಹುಡುಗ ಡ್ರಾಪ್ಔಟ್ ಆಗುತ್ತಾನೆ, ಅವನು ಯಾವುದೋ ಒಂದು ವ್ಯಸನಕ್ಕೆ ಒಳಗಾಗುತ್ತಾನೆ. ಉದಾಹರಣೆಗೆ, ಡ್ರಗ್ ಇರಬಹುದು ಅಥವಾ ಗಾಂಜಾ ಇರಬಹುದು. ಅಲ್ಲದೇ, ಆ ಶಾಲೆಯಲ್ಲಿ ಇತರೆ ವಿದ್ಯಾರ್ಥಿಗಳ ಬ್ಲಾಕ್ಮೇಲರ್ ಯಾರು ಎಂದರೆ, ಆ ಡ್ರಾಪ್ಔಟ್ ಆಗಿರುವಂತಹ ವಿದ್ಯಾರ್ಥಿಯೇ ಆಗಿರುತ್ತಾನೆ. ಆತನನ್ನು ಡ್ರಗ್ ಕೊಡುವಂಥವರು ಅಥವಾ ಇತರ ಗ್ಯಾಂಗ್ನವರು ಟಾರ್ಗೆಟ್ ಮಾಡಿರುತ್ತಾರೆ. ಅವರು ಏನು ಮಾಡುತ್ತಾರೆಂದರೆ, ಒಂದೊಂದು ಸ್ಕೂಲ್ ಅಥವಾ ಕಾಲೇಜು ಎಂದು ಪ್ರತಿದಿನ ಒಂದೊಂದು ಶಾಲೆ-ಕಾಲೇಜು ಎಂದು ಟಾರ್ಗೆಟ್ ಮಾಡುತ್ತಿರುತ್ತಾರೆ. ಅಂದರೆ, ನಾವು ಇವೊತ್ತಿನ ದಿನ ಇಂತಹ ಶಾಲೆ-ಕಾಲೇಜನ್ನು ರೀಚ್ ಮಾಡಿದ್ದೇವೆಂದು ಟಾರ್ಗೆಟ್ ಮಾಡುತ್ತಿರುತ್ತಾರೆ. ಅಂತಹವರು ಈ ರೀತಿ ಡ್ರಾಪ್ಔಟ್ ಆದಂತಹ ವಿದ್ಯಾರ್ಥಿಗಳು ಏನು ಇರುತ್ತಾರೆ, ಅವರನ್ನು ಹೊರಗಿನ ಗ್ಯಾಂಗ್ನವರು ಟಾರ್ಗೆಟ್ ಮಾಡಿ ಬ್ಲಾಕ್ಮೇಲ್ ಮಾಡುತ್ತಿರುತ್ತಾರೆ. ಈ ವಿಷಯ ಆ ಶಾಲೆಯಲ್ಲಿ ಓದುತ್ತಿರುವಂತಹ ವಿದ್ಯಾರ್ಥಿಗಳ ಪೋಷಕರಿಗೆ ಗೊತ್ತಿರುವುದಿಲ್ಲ. ಅವರು ಮಕ್ಕಳು ಬ್ಲಾಕ್ಮೇಲ್ಗೆ ಒಳಗಾಗಿ ಪ್ರತಿದಿನ 10, 20, 30 ಅಥವಾ 50 ರೂಪಾಯಿ ಹಣವನ್ನು ತೆಗೆದುಕೊಂಡು ಹೋಗಿ ಗ್ಯಾಂಗ್ನವರಿಗೆ ಕೊಡಬೇಕು. ಆ ಹಣವನ್ನು ತೆಗೆದುಕೊಳ್ಳುವಂತಹವರು ಮನೆ ಕಟ್ಟುವುದಕ್ಕೆ ಅಥವಾ ಇತರೆ ಕೆಲಸಕ್ಕೆ ಇಟ್ಟುಕೊಳ್ಳುವುದಿಲ್ಲ. ಅವರು ಸಹ ಗಾಂಜಾ ಹೊಡೆಯುವುದಕ್ಕೆ ಅಥವಾ ಡ್ರಗ್ ತೆಗೆದುಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಿ ಬಳಕೆ ಮಾಡುತ್ತಿರುತ್ತಾರೆ. ಏಕೆಂದರೆ, ಅವರು ಮದ್ಯವ್ಯಸನಿಗಳು ಅಥವಾ ಇನ್ನಿತರ ವ್ಯಸನಿಗಳು ಆಗಿರುತ್ತಾರೆ. ಅದನ್ನು ಪಡೆಯುವುದಕ್ಕಾಗಿ ಈ ರೀತಿ ಡ್ರಾಪ್ಔಟ್ ಆದಂತಹ ವಿದ್ಯಾರ್ಥಿಗಳನ್ನು ಬಳಕೆ ಮಾಡಿಕೊಳ್ಳುತ್ತಿರುತ್ತಾರೆ. ಇಲ್ಲಿರುವ ಸಮಸ್ಯೆ ಏನೆಂದರೆ, ಈ ವಿಷಯವನ್ನು ವಿದ್ಯಾರ್ಥಿಗಳು ತಮ್ಮ ಪೋಷಕರಿಗೆ ಹೇಳುವುದೇ ಇಲ್ಲ. ಏತಕ್ಕೆ ಅವರು ಹೇಳುವುದಿಲ್ಲ ಎನ್ನುವುದನ್ನು ನಾನು ಹೇಳುತ್ತೇನೆ. ತಾವು ಅದನ್ನು ಅನ್ಯಥಾ ಭಾವಿಸಬಾರದು. ಅದೇನೆಂದರೆ, ಇವೊತ್ತಿನ ದಿವಸ ನಮ್ಮ ಜನರು ಚೆನ್ನಾಗಿ ಓದಿ ಐಎಎಸ್ ಆಗಿಬಿಟ್ಟರೆ ಆತ ತನ್ನ ಮಗುವನ್ನು ಎತ್ತಿಕೊಳ್ಳಬಾರದೆಂದು ಭಾವಿಸುತ್ತಾನೆ. ಒಬ್ಬ ಕೆಎಎಸ್ ಅಧಿಕಾರಿಯಾದರೆ ಆತ ತನ್ನ ಮಗುವನ್ನು ತೊಡೆ ಮೇಲೆ ಕುಳತುಕೊಳ್ಳಬಾರದೆಂದು ಭಾವಿಸುತ್ತಾರೆ. ತಮ್ಮ ಮಕ್ಕಳನ್ನು ದೂರದಲ್ಲಿಟ್ಟುಕೊಂಡು ಬೆಳೆಸುತ್ತಾರೆ. ಅಂದರೆ, ಏನೋ ಒಂಥರಾ ಗತ್ತು ತೋರಿಸುತ್ತಾರೆ. ಇವರು ಹೊರಗಡೆ ಆ ರೀತಿ ಮಾಡುತ್ತಾರೆಂದು ಅಲ್ಲ. ತಮ್ಮ ಮನೆಯಲ್ಲಿಯೂ ಸಹ ಅದೇ ರೀತಿ ಮಾಡುತ್ತಾರೆ. ಅವರಷ್ಟೇ ಅಲ್ಲದೇ, ಜನರು ಸ್ವಲ್ಪ ವಿದ್ಯಾವಂತರಾದರೆ ಅಂದರೆ, ಇಂಜಿನಿಯರ್ ಅಥವಾ ಯಾವುದಾದರೂ ಕಂಪನಿಗೆ ಹೋಗುವಂತಹ ನೌಕರರು ತಮ್ಮ ಮಕ್ಕಳನ್ನು ಹೇಗೆ ಸಾಕುತ್ತಾರೆಂದರೆ, ಏನೋ ಒಂಥರಾ ಗತ್ತಿನಲ್ಲಿ ಸಾಕುತ್ತಾರೆ. ಅದು ಒಂಥರಾ ಬಿಡಿ. ಅದನ್ನು ಹೇಳುವುದಕ್ಕೆ ಅಸಾಧ್ಯ. ಆ ರೀತಿ ಮಕ್ಕಳನ್ನು ಬೆಳೆಸಿದರೆ, ಮಕ್ಕಳು ತಮ್ಮ ಸಮಸ್ಯೆಗಳನ್ನು ಯಾರ ಹತ್ತಿರವೂ ಹೇಳಿಕೊಳ್ಳುವುದಿಲ್ಲ. ಒಂದು ವೇಳೆ ಹೇಳಿಕೊಳ್ಳಬೇಕೆಂದರೆ, ಮೊಬೈಲ್ಗೆ ಹೇಳಿಕೊಳ್ಳಬೇಕು. ಇದು ನಿಜವೇ ಅಥವಾ ಸುಳ್ಳೇ ಎಂಬುದನ್ನು ತಾವೇ ಹೇಳಬೇಕು. ಮಕ್ಕಳು ತನ್ನ ತಂದೆ-ತಾಯಿಯ ಹತ್ತಿರ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವಂತಹ ಒಂದು ಮನಸ್ಥಿತಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲವೆಂದರೆ, ಆ ಮಗು ಮುಂದೆ ಏನಾಗಬಹುದು? ಅದಕ್ಕೆ ಆ ಮಗುವನ್ನು ಏನು ಮಾಡುತ್ತಾರೆಂದರೆ, ಬೇರೆಯವರ ಜೊತೆ ಬೆರೆಯುವುದಕ್ಕೆ ಬಿಡುವುದಿಲ್ಲ. ತಾವು ಕೂಡ ತನ್ನ ಮಗುವಿನ ಮನಸ್ಸನ್ನು ಅರ್ಥ ಮಾಡಿಕೊಳ್ಳುವಂತಹ ಶಕ್ತಿ ಇರುವುದಿಲ್ಲ. ಇವೆರಡೂ ಇಲ್ಲದೇ ಇದ್ದಾಗ, ಆಟೋಮ್ಯಾಟಿಕ್ ಆಗಿ ಈ ರೀತಿ ಆಗುತ್ತದೆ. ಅದಕ್ಕಾಗಿ, ದಯಮಾಡಿ ಏನು ಮಾಡಬೇಕೆಂದರೆ ಶಾಲೆಯಲ್ಲಿ ಮಕ್ಕಳಿಗೆ ಏನು ಆಪ್ತ ಸಮಾಲೋಚನೆ ಮಾಡುತ್ತಾರೆ, ಅದನ್ನು ಪೋಷಕರಿಗೆ ಮಾಡಬೇಕು. ನಿಮ್ಮ ಮಕ್ಕಳನ್ನು ಈ ರೀತಿ ನೋಡಿಕೊಳ್ಳಬೇಕೆಂದು ಪೋಷಕರಿಗೆ ಆಪ್ತ ಸಮಾಲೋಚನೆ ಮಾಡಬೇಕು. **(ಗೊಂದಲ)** ಸರ್ಕಾರಿ ಶಾಲೆ ಆಗಿರಬಹುದು ಅಥವಾ ಇನ್ನೊಂದು ಶಾಲೆ ಆಗಿರಬಹುದು. ಎಲ್ಲರೂ ಸಹ ನಮ್ಮ ಮಕ್ಕಳುಗಳೇ. ನಾನು ಅವರು ಇವರು ಎಂದು ಹೇಳುವುದಿಲ್ಲ. ಎಲ್ಲರೂ ಸಹ ನಮ್ಮ ಮಕ್ಕಳುಗಳೇ. ಎಲ್ಲ ಮಕ್ಕಳುಗಳು ಸಹ ನಮ್ಮ ಭಾರತದ ಭವಿಷ್ಯಗಳು. ಹಾಗಾಗಿ, ಪೋಷಕರನ್ನು ತಿದ್ದುವಂತಹ ಕೆಲಸವನ್ನು ಮಾಡಬೇಕು. ಅದನ್ನು ಮಾಡಿದಾಗ ಮಕ್ಕಳ ಒತ್ತಡ ಕಡಿಮೆಯಾಗುತ್ತದೆ. ಆದರೆ, ಇವೊತ್ತಿನ ದಿವಸ ಏನಾಗಿದೆಯೆಂದರೆ, ಪೋಷಕರು ಕೇವಲ ಮಾರ್ಕ್ಸ್‌ಗಳ ಹಿಂದೆ ಬಿದ್ದಿರುತ್ತಾರೆ. ಅದು ಏತಕ್ಕೆ ಎಂದು ನನಗೆ ಗೊತ್ತಾಗುತ್ತಿಲ್ಲ. ಅವನು 100 ಮಾರ್ಕ್ಸ್ ತೆಗೆದುಕೊಂಡಿದ್ದಾನೆ, ಇವನು 80 ಮಾರ್ಕ್ಸ್ ತೆಗೆದುಕೊಂಡಿದ್ದಾನೆ. ಆದರೆ, ನೀನು ಏತಕ್ಕೆ ಇಷ್ಟು ಮಾರ್ಕ್ಸ್ ತೆಗೆದುಕೊಂಡಿದ್ದೀಯಾ ಈ ರೀತಿಯ ಒತ್ತಡ ಹಾಕುತ್ತಿದ್ದಾರೆ. ಮಕ್ಕಳು ಸಂತೋಷವಾಗಿ ತಮ್ಮ ಬಾಲ್ಯವನ್ನು ಕಳೆಯುವಂತಹ, ಬೆಳೆಯುವಂತಹ ವಾತಾವರಣವೇ ಇರುವುದಿಲ್ಲ. ಒಂದು ವೇಳೆ ಪೋಷಕರು ಸಿನಿಮಾಗೆ ಹೋಗಬೇಕೆಂದರೆ ಮಕ್ಕಳನ್ನು ತಮ್ಮ ಮನೆಯ ಒಳಗಡೆ ಕೂಡಿ ಹಾಕಿ ಬೀಗ ಹಾಕಿಕೊಂಡು ಹೋಗುತ್ತಾರೆ.

(ಮುಂದು)

(221) 11.03.2025 6.30 ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಪುಟ್ಟಣ್ಣ (ಮುಂದು):-

ಸಿನಿಮಾಗೆ ಹೋಗಲಿ, ತರಕಾರಿ ತರಲು ಹೋಗಲಿ ಆ ಮಗುವನ್ನು ಮನೆಯೊಳಗೆ ಕೂಡಿ ಹಾಕಿ ಬೀಗ ಹಾಕಿಕೊಂಡು ಹೋಗುತ್ತಾರೆ. ಯಾರ ಜೊತೆಯೂ ಸೇರಲು ಬಿಡುವುದಿಲ್ಲ. ಅವರ ಅಕ್ಕ-ತಂಗಿ ಮಕ್ಕಳ ಜೊತೆ ಅಥವಾ ಅಣ್ಣ-ತಮ್ಮನವರ ಮಕ್ಕಳ ಜೊತೆ ಸೇರಲು ಬಿಡುವುದಿಲ್ಲ. ಇವೆಲ್ಲವೂ ಏನಾಗುತ್ತದೆ ಎಂದರೆ, ಮಗು ದೊಡ್ಡದಾಗಿ ಬೆಳೆದ ಮೇಲೆ sadist nature ಗೆ ಒಳಗಾಗುತ್ತದೆ. ಅಂಥವರು ನಮ್ಮ ನಡುವೆಯೇ ಸುಮಾರು ಮಂದಿ ಇದ್ದು, ಇವತ್ತು ಯಾವ ರೀತಿ ಇದ್ದಾರೆ ಎಂಬುದನ್ನು ನೋಡುತ್ತಿದ್ದೇವೆ. ಐ.ಎ.ಎಸ್. ಅಧಿಕಾರಿಯಾದ ಮೇಲೆ ಆತನನ್ನು ಹೆತ್ತ ತಂದೆ-ತಾಯಿಯವರನ್ನೇ ನೋಡಬಾರದು, ಅಕ್ಕ-ತಂಗಿ ನೋಡಬಾರದು, ಅಣ್ಣ-ತಮ್ಮನನ್ನು ನೋಡಬಾರದು ಎನ್ನುವಂಥ ಲೆಕ್ಕವಾಗಿದೆ. ಒಬ್ಬ ವ್ಯಕ್ತಿ ಶ್ರೀಮಂತನಾಗಿ ಬೆಳೆದ ಮೇಲೆ ಆತನ ಮನೆಗೆ ನಾಯಿ ಬಿಟ್ಟರೆ ಬೇರೆ ಯಾರು ಹೋಗುವುದಿಲ್ಲ. ಆತ ದೊಡ್ಡ ವ್ಯಕ್ತಿ ಬಿಡು ಎಂದು ಆತನ ನೆಂಟರಿಷ್ಟರು ಆತನ ಮನೆಗೆ ಹೋಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧಿಕಾರಿವಲಯ ಇರಬಹುದು ಅಥವಾ ಶ್ರೀಮಂತಿಕೆ ಇರಬಹುದು. ಈ ಒಂದು ವ್ಯವಸ್ಥೆಯಲ್ಲಿ ಬಾಂಧವ್ಯವನ್ನು, ಮನುಷ್ಯತ್ವವನ್ನು ಕಳೆದುಕೊಳ್ಳುತ್ತಿದ್ದೇವೆ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಮನುಷ್ಯ ಸಂಘ ಜೀವಿಯಾಗಿ ಬದುಕುವುದರ ಮೂಲಕ ಸಮಾಜದಲ್ಲಿ ಒಂದಾಗಬೇಕು. ಅಂತಹ ಒಂದು ನೇಚರ್ ಬರುವ ಹಾಗೆ ಮಗುವನ್ನು ಬೆಳೆಸಬೇಕು. ಅದಕ್ಕಾಗಿ ನಾವು ಏನು ಮಾಡಬೇಕು? ಮೊದಲು ಪೋಷಕರನ್ನು ತಿದ್ದಬೇಕು. ಆ ಕೆಲಸವಾದರೆ ಮಾತ್ರ ಇದು ಯಶಸ್ವಿಯಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಇತ್ತೀಚೆಗೆ ಸರ್ಕಾರವು ಒಳ್ಳೆಯ ತೀರ್ಮಾನವನ್ನು ಕೈಗೊಂಡಿದ್ದು, ಡ್ರಗ್ಸ್ ಸರಬರಾಜು ಮಾಡುವಂಥ drug peddlers ನ್ನು ಬಲಿ ಹಾಕುವಂಥ ಕೆಲಸವನ್ನು ಮಾಡಿದ್ದು, ಚಾಕೊಲೇಟ್, ಪೆಟ್ಟಿ ಅಂಗಡಿಗಳ ಮೇಲೆ ಕ್ರಮ ಜರುಗಿಸಲಾಗುತ್ತಿದೆ.

ಒಂದು ಮಗುವಿಗೆ ಶಿಕ್ಷಕರು ಒಂದು ಏಟು ಹೊಡೆದರೆ ಸಾಕು ಮಕ್ಕಳ ಹಕ್ಕುಗಳ ಆಯೋಗದವರನ್ನು ಶಾಲೆಗೆ ಹೋಗಿ ಚಿತ್ರ, ವಿಚಿತ್ರವಾಗಿ ಬಿಂಬಿಸುತ್ತಾರೆ. ಹಾಗೆಯೇ ಮಾನವ ಹಕ್ಕುಗಳ ಆಯೋಗ ಒಳಗೊಂಡಂತೆ ಯಾವ್ಯಾವ ಆಯೋಗ ಇದೆಯೋ ಅವೆಲ್ಲವೂ ಮುತ್ತಿಕೊಂಡು ಬಿಡುತ್ತಾರೆ. ಅವರು ಸಹ ಸುಮ್ಮನೆ ಇರುತ್ತಾರೆ ಅಲ್ಲವೇ, ಹಾಗಾಗಿ, ಮಾಹಿತಿ ಮುಟ್ಟಿದ ತಕ್ಷಣ ಬಂದು ಬಿಡುತ್ತಾರೆ. ಇವತ್ತಿನ ದಿವಸ ಆ ಮಗುವಿಗೆ ಶಿಕ್ಷಕರು ಏನು ಹೇಳುವ ಹಾಗಿಲ್ಲ.

ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾವು ಓದುತ್ತಿದ್ದಾಗ ಶಿಕ್ಷಕರು ಬಾಸುಂಡೆ ಬರುವ ಹಾಗೆ ಹೊಡೆಯುತ್ತಿದ್ದರು.

ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಹೌದು ನಮಗೆ ಆ ರೀತಿ ಎಲ್ಲಾ ಹೊಡೆಯುತ್ತಿದ್ದರು. ಅದರ ಜೊತೆಗೆ ಪೋಷಕರು ತಮ್ಮ ಮಕ್ಕಳು ಶೇಕಡ 100 ಕ್ಕೆ 100 ರಷ್ಟು ಪರೀಕ್ಷೆಯಲ್ಲಿ ಅಂಕಗಳಿಸಬೇಕು ಎನ್ನುವ ಹಾಗೆ ಭಾವಿಸುತ್ತಾರೆ. ಹಾಗಾಗಿ, ನಾನು ಹೇಳುವುದೇನೆಂದರೆ, ಮಕ್ಕಳಲ್ಲಿ ಮನುಷ್ಯತ್ವ ಬೆಳೆಸಬೇಕು. ಮೊದಲು ಮಕ್ಕಳನ್ನು ಮನುಷ್ಯರಾಗಿ ಮಾಡಬೇಕು, ವಿದ್ಯಾವಂಥರಾಗಿ ಮಾಡಬೇಕು. ಆದರೆ, ಇವತ್ತಿನ ದಿವಸ ಆ ಮಗುವಿಗೆ "ನೋಡಪ್ಪಾ! ನನ್ನ ಹಾಗೆ ನೀನು ಆಗಬೇಡ, ಶಿಕ್ಷಣ ಮುಗಿಯುತ್ತಿದ್ದ ಹಾಗೆ ಕೆಲಸಕ್ಕೆ ಸೇರಿಕೊಂಡು ವರ್ಷಕ್ಕೆ ಇಷ್ಟು ಕೋಟಿ ಹಣ ಸಂಪಾದಿಸುವಂಥ ಕೆಲಸ ಪಡೆಯಬೇಕು. ನೀನು ಡಾಕ್ಟರ್ ಆಗುತ್ತೀಯಾ ಅದೇ ರೀತಿ ಆಗು, ಇಂಜಿನಿಯರ್ ಆಗುತ್ತೀಯಾ ಅದೇ ರೀತಿ ಆಗು" ಎಂದು ಹೇಳುತ್ತಾರೆ. ವೈದ್ಯನಾದರೆ 'ಎಷ್ಟು ಜೀವ ಉಳಿಸುತ್ತೀಯಾ' ಎಂದು ಹೇಳುವುದಿಲ್ಲ, ಎಷ್ಟು ಹಣ ಸಂಪಾದನೆ ಮಾಡಿದೆ ಎನ್ನುವಂಥದ್ದಾಗಿದೆ. ಹಾಗೆಯೇ ಇಂಜಿನಿಯರ್ ಆದರೆ 'ಎಷ್ಟು ಮನೆ ನಿರ್ಮಾಣ ಮಾಡಿದೆ' ಎಂದು ಹೇಳುವುದಿಲ್ಲ, ಎಷ್ಟು ಮನೆ ಕೆಡವಿದೆ ಎನ್ನುವಂಥ ಲೆಕ್ಕವಾಗಿದೆ. ಆ ಮಕ್ಕಳಿಗೆ ಅಂತಹ ಮನಸ್ಥಿತಿ ಮೂಡುವಂತೆ ಪೋಷಕರೇ ಮಾಡುತ್ತಿರುವುದು. ಇದರಿಂದ ಯಾವ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಏನು ಮಾಡಲು ಆಗುತ್ತದೆ? ತಂದೆ-ತಾಯಿಯವರ ಮನಸ್ಥಿತಿ ಏನಿದೆ, ಅದು ಬದಲಾವಣೆ ಆಗಬೇಕು. ತಮ್ಮ ಮಕ್ಕಳ ಭವಿಷ್ಯ ಇರುವುದು, ಈ ಸಮಾಜದ ಸಂಘಜೀವಿಯಾಗಿ ಬದುಕುವುದರ ಮೂಲಕ ಸಮಾಜದ ಅವಕಾಶವನ್ನು ಉಪಯೋಗ ಮಾಡಿಕೊಂಡು, ಆ ಮಕ್ಕಳು ಅದನ್ನು ಸಮಾಜಕ್ಕೆ ವಾಪಸ್ಸು ಕೊಡುವಂಥ ವಾತಾವರಣವನ್ನು ತಂದೆ-ತಾಯಿಯವರು ಇಟ್ಟುಕೊಂಡು ಮಕ್ಕಳನ್ನು ಬೆಳೆಸಬೇಕು. ಜೊತೆಗೆ ಕೆಟ್ಟದಾಗಲೀ ಅಥವಾ ಒಳ್ಳೆಯದಾಗಲೀ ಆ ಮಗುವಿಗೆ ಏನೇ ಅನಿಸಿದರೂ ತಂದೆ-ತಾಯಿಯವರ ಜೊತೆ ಹೇಳುವಂಥ ವಾತಾವರಣ ಇರಬೇಕು. ಆದರೆ, ಅಂತಹ ವಾತಾವರಣ ಇಲ್ಲದೇ ಇರುವುದೇ ದೊಡ್ಡ ಸಮಸ್ಯೆಯಾಗಿದೆ. ಅದೊಂದು ದೊಡ್ಡ ಸಮಸ್ಯೆಯಾಗಿ ಆ ಮಗು sadist nature ಹೊಂದಿ ಬೆಳೆಯಲು ಕಾರಣವಾಗಿದೆ.

ಹಾಗೆಯೇ ಪರೀಕ್ಷೆಯಲ್ಲಿ ಶೇಕಡ 35 ರಷ್ಟು ಅಂಕಗಳಿಸಿದ ಮಕ್ಕಳು ಕೆಟ್ಟವರೇ? ಅನುತೀರ್ಣರಾದವರೆಲ್ಲಾ ಕೆಟ್ಟವರೇ? ಶೇಕಡ 100 ರಷ್ಟು ಅಂಕಗಳಿಸಿದ ತಕ್ಷಣ ಏನೋ ಆಗಿ ಬಿಡುತ್ತಾರೆಯೇ? ಶೇಕಡ 100 ರಷ್ಟು ಪಡೆದವರು ಏನಾಗಿದ್ದಾರೆ ಎಂಬುದನ್ನು ನೀವು ನೋಡಿದ್ದೀರಿ, ನಾವು ನೋಡಿದ್ದೇವೆ.

ಸಭಾಪತಿಯವರು:- ಮಾನ್ಯ ಪುಟ್ಟಣ್ಣನವರೇ, ತಾವು ಹೇಳುತ್ತಿರುವುದು ಸರಿ.

ಶ್ರೀ ಪುಟ್ಟಣ್ಣ:- ಮಾನ್ಯ ಸಭಾಪತಿಯವರೇ, ನಾನು ಸತ್ಯವಾದ ವಿಚಾರವನ್ನು ಹೇಳುತ್ತಿದ್ದೇನೆ. ನಾವು ಮನುಷ್ಯತ್ವ ಕಳುಹಿಸುವುದರ ಬದಲು, ಶಿಕ್ಷಣ ಕೊಡುವುದರ ಬದಲು, ಈ ನಿಕೃಷ್ಟ ಮನೋಭಾವನೆಯನ್ನು ಹೊಂದಿರುವಂಥ sadist ಗಳಾಗಿ ಬರೀ ಹಣ ಸಂಪಾದನೆ ಮಾಡಬೇಕೆಂಬ ದೃಷ್ಟಿಯ ಮೇಲೆ ಮಕ್ಕಳನ್ನು ಬೆಳೆಸುತ್ತಿದ್ದೇವೆ ಅಲ್ಲವೇ? ಅದು ಎಷ್ಟರ ಮಟ್ಟಿಗೆ ಸರಿ?

ಸಭಾಪತಿಯವರು:- ತಾವು ಹೇಳುತ್ತಿರುವುದು ಸರಿಯಾಗಿದೆ.

ಶ್ರೀ ಪುಟ್ಟಣ್ಣ:- ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು ಸರಿಯಾಗಿದೆ ಎಂದುಕೊಂಡಿದ್ದೇನೆ.

ಶ್ರೀ ಎಸ್.ಎಲ್.ಭೋಜೇಗೌಡ:- ಮಾನ್ಯ ಪುಟ್ಟಣ್ಣನವರೇ, ತಾವು ಸರಿಯಾಗಿ ಹೇಳಿದ್ದೀರಿ.

ಶ್ರೀ ಪುಟ್ಟಣ್ಣ:- ಮಾನ್ಯ ಸಭಾಪತಿಯವರೇ, ಯಾವುದೇ ಮಕ್ಕಳು ಇರಲಿ, ಎಲ್ಲರೂ ನಮ್ಮ ಮಕ್ಕಳ ಇದ್ದ ಹಾಗೆ. ಮೊನ್ನೆ ದಿವಸ ಒಂದು ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಹೋಗಿದ್ದೆನು. Motivational Speech ಮಾಡಿ ಮಕ್ಕಳೊಂದಿಗೆ ತುಂಬಾ ಚೆನ್ನಾಗಿ ಮಾತನಾಡಿದರು. ಅವರು ನನಗೆ ಸಿಕ್ಕಿ ಸಾರ್, 'ಹೇಗೆ ಇದ್ದೀರಾ' ಎಂದು ಕೇಳಿದರು. ನಾನು ಕೂಡ 'ಚೆನ್ನಾಗಿ ಇದ್ದೇನೆ' ಎಂದು ಹೇಳಿದೆ. ತಮಗೆ ಎಷ್ಟು ಜನ ಮಕ್ಕಳು ಎಂದು ಕೇಳಿದ್ದೆನು,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನಗೂ 'ಇಷ್ಟು ಮಕ್ಕಳು ಇದ್ದಾರೆ ಎಂದು ಹೇಳಿ, ತಮಗೆ ಎಷ್ಟು ಮಕ್ಕಳು' ಎಂದು ಕೇಳಿದ್ದೆನು. ಅದಕ್ಕೆ ಅವರು 'ಇಬ್ಬರು ಮಕ್ಕಳಿದ್ದಾರೆ' ಎಂದು ಹೇಳಿದರು. ನಾನು ಅದಕ್ಕೆ 'ಇಬ್ಬರು ಮಕ್ಕಳು ಎಲ್ಲಿದ್ದಾರೆ' ಎಂದು ಕೇಳಿದ್ದೆನು. ಅದಕ್ಕೆ ಅವರು 'ಅಮೇರಿಕಾದಲ್ಲಿದ್ದಾರೆ' ಎಂದು ರಾಗವಾಗಿ ಹೇಳಿದರು. ನಾನು ಅದಕ್ಕೆ 'ಏತಕ್ಕೆ ಸಾರ್, ಈ ರೀತಿ ರಾಗವಾಗಿ ಹೇಳುತ್ತಿದ್ದೀರಿ' ಎಂದು ಹೇಳಿದ್ದೆನು. ಅದಕ್ಕೆ ಅವರು 'ಇಬ್ಬರು ಅಮೇರಿಕಾಗೆ ಹೋಗಿ ಬಹಳಷ್ಟು ವರ್ಷಗಳೇ ಆಗಿದ್ದು, ಭಾರತಕ್ಕೆ ಬರುವ ಹಾಗೆ ಕಾಣುತ್ತಿಲ್ಲ' ಎಂದು ಹೇಳಿದರು. ಹಾಗಾದರೆ, 'ಇಲ್ಲಿ ಯಾರಿದ್ದಾರೆ' ಎಂದು ಕೇಳಿದ್ದೆನು. ಅದಕ್ಕೆ ಅವರು 'ನಾನು, ನನ್ನ ಹೆಂಡ್ತಿ ಇಬ್ಬರೇ ಇದ್ದೇವೆ. ನನಗೆ ಅವಳು, ಅವಳಿಗೆ ನಾನು' ಎಂದು ಹೇಳಿದರು. ಅವರ ಮಕ್ಕಳು ಜಾಸ್ತಿ percentage ಅಂಕಗಳಿಸಿದ ಪ್ರಯುಕ್ತ ಅವರಿಗೆ ಸಿಕ್ಕಿರುವ ಶಿಕ್ಷೆ ಇದು. ನಾನು ಹೇಳಿದ ಮಾತು ನಿಜವೇ, ಸುಳ್ಳೇ? ಮಕ್ಕಳು ಹೆತ್ತ ತಂದೆ-ತಾಯಿಯವರಿಗೆ ಆಶ್ರಯವಾಗಬೇಕಲ್ಲವೇ? ನಮ್ಮ ಮಕ್ಕಳು ನಮಗೆ ವಯಸ್ಸಾದ ಕಾಲಕ್ಕೆ ಆಶ್ರಯವಾಗಬೇಕಲ್ಲವೇ? ನಮಗೆ ಛತ್ರಿ ಹಿಡಿದುಕೊಳ್ಳಬೇಕಲ್ಲವೇ? ಆದರೆ, ಇವತ್ತಿನ ದಿವಸ ಏನಾಗುತ್ತಿದೆ? ಎಲ್ಲಿಗೆ ಹೋಗುತ್ತಿದ್ದೇವೆ? ಇವತ್ತಿನ ದಿವಸ ವೃದ್ಧಾಶ್ರಮಗಳು ಏತಕ್ಕೆ ಬರುತ್ತಿವೆ? ಯಾವ ಮಕ್ಕಳು ಹೆತ್ತ ತಂದೆ-ತಾಯಿಯನ್ನು ವೃದ್ಧಾಶ್ರಮಕ್ಕೆ ಬಿಡುತ್ತಿದ್ದಾರೆ? ಅವಿದ್ಯಾವಂತರು ಬಿಡುತ್ತಿದ್ದಾರೆಯೇ? ಇವತ್ತಿನ ದಿವಸ ಹೆತ್ತವರನ್ನು ವೃದ್ಧಾಶ್ರಮಕ್ಕೆ ಶ್ರೀಮಂತರು, highly educated class ನವರು ಬಿಡುತ್ತಿದ್ದಾರೆ.

ನಾನು ಹೇಳುತ್ತಿರುವುದು highly educated class ಮಕ್ಕಳ ವಿಚಾರವಾಗಿದ್ದು, ಇವರಿಗಾಗಿ ಸರ್ಕಾರವು ವೃದ್ಧಾಶ್ರಮವನ್ನು ನಿರ್ಮಾಣ ಮಾಡಬೇಕಾದ ಪರಿಸ್ಥಿತಿ ಉದ್ಭವಿಸಿದೆ. ಹಾಗೆಯೇ, ಕೆಲವರು 'ನಿವೃತ್ತಿಯಾದ ಮೇಲೆ ಮಕ್ಕಳು ಏನು ಮಾಡುತ್ತಾರೆಯೋ, ಯಾರಿಗೆ ಗೊತ್ತು ಸಾರ್. ನಾಳೆ ದಿವಸ ನಾನು ನಿವೃತ್ತಿಯಾದ ಮೇಲೆ ಯಾವುದಾದರೂ ವೃದ್ಧಾಶ್ರಮಕ್ಕೆ ಹೋಗಿ ಸೇರಿಕೊಳ್ಳಬಹುದು, ಅದಕ್ಕಾಗಿ ಹಣವನ್ನು ನನ್ನ ಬ್ಯಾಂಕ್ ಖಾತೆಯಲ್ಲಿ ಕೂಡಿಟ್ಟುಕೊಳ್ಳುತ್ತಿದ್ದೇನೆ' ಎನ್ನುವಂಥ ಮಾತನ್ನು ಹೇಳಿದರು. ಎಂತಹ ಮನಸ್ಥಿತಿ ಇದೆ ನೋಡಿ? ನಾವು ಎಲ್ಲಿಗೆ ಹೋಗಿ ತಲುಪುತ್ತಿದ್ದೇವೆ? ನಾವು ಯಾವ ರೀತಿಯ ಶಿಕ್ಷಣ ಕೊಡುತ್ತಿದ್ದೇವೆ? ಯಾವ ರೀತಿಯ ಶಿಕ್ಷಣ ಮಕ್ಕಳಿಗೆ ಸಿಗುತ್ತಿದೆ? ಇದರ ಬಗ್ಗೆ ನಾವು ಯೋಚನೆ ಮಾಡುತ್ತಿಲ್ಲ.

ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಸಹ ಈ ಸಾಲಿನ ಬಜೆಟ್‌ನಲ್ಲಿ ನೈತಿಕ ಶಿಕ್ಷಣದ ಬಗ್ಗೆ ಹೇಳಿದ್ದು, ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪನವರು ಕೂಡ ಬಹಳ ಉತ್ಸುಕರಾಗಿದ್ದಾರೆ. ದಯವಿಟ್ಟು ಮಕ್ಕಳಿಗೆ ಸೀಮಿತವಾಗಿ ಹೇಳುತ್ತಿಲ್ಲ. ಪೋಷಕರು ಸಹ ಜೊತೆಯಲ್ಲಿ ಸೇರಿಕೊಂಡು ಒಳ್ಳೆಯ ಪರಿಸರವನ್ನು ನಿರ್ಮಾಣ ಮಾಡಬೇಕಾಗಿದೆ. ದುಡ್ಡಿನಲ್ಲಿ ಬೆಳೆಸುವುದರ ಬದಲು ವಿದ್ಯೆ ನೀಡಿ ಮನುಷ್ಯರಾಗಿ, ಮಾನವನಾಗಿ ಮಾಡಬೇಕು. ಡಾ॥ ಬಿ.ಆರ್.ಅಂಬೇಡ್ಕರ್‌ರವರು ನೀಡಿರುವಂಥ ಸಂವಿಧಾನದಲ್ಲಿ ಬದುಕುವಂತೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕು. ನಮ್ಮ ಭಾರತ ದೇಶದಲ್ಲಿರುವಂಥ ಅವಕಾಶ ಎಲ್ಲಿಯೂ ಇಲ್ಲ. ಪ್ರತಿಯೊಬ್ಬ ಮಗು ಕೂಡ ಅಂತಹ ಅವಕಾಶ ಬೆಳೆಸಿಕೊಂಡು, ಒಳ್ಳೆಯ ವ್ಯಕ್ತಿಗಳಾಗಿ ಈ ಸಮಾಜಕ್ಕೆ ಬರಬೇಕು. ಆ ದೃಷ್ಟಿಯಿಂದ ಸರ್ಕಾರ ಮತ್ತು ಸಮಾಜ ಸೇರಿ ಮಕ್ಕಳಿಗೆ ಯಾವ ರೀತಿ ಶಿಕ್ಷಣ ಕೊಡಬೇಕು ಎಂಬುದರ ಬಗ್ಗೆ ಮತ್ತು ತಂದೆ-ತಾಯಿಯವರು ಸಹ ಯಾವ ರೀತಿ ತಿಳುವಳಿಕೆ ಕೊಡಬೇಕು ಎಂಬುದರ ಬಗ್ಗೆ ನೈತಿಕ ಶಿಕ್ಷಣ ಜಾರಿಗೆ ತರಬೇಕು ಎಂಬುದರ ಬಗ್ಗೆ ಮನವಿ ಮಾಡಿಕೊಳ್ಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೇ, ಹದಿಹರೆಯದ ಮಕ್ಕಳ ಸಮಸ್ಯೆ ಬಗ್ಗೆ ಮಾನ್ಯ ಐವನ್ ಡಿ'ಸೋಜಾರವರು ಮಾತನ್ನು ಪ್ರಾರಂಭ ಮಾಡಿ, ಮಾನ್ಯ ಪುಟ್ಟಣ್ಣನವರು ಭಾವನಾತ್ಮಕವಾಗಿ ನೋವಿನಿಂದ, ಕ್ರೋಧದಿಂದ ಅನೇಕ ವಿಷಯಗಳನ್ನು ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಬಹುಶಃ ಚರ್ಚೆ ಚರ್ಚೆಯಾಗಿಯೇ ಉಳಿಯಬಾರದು. ಅದಕ್ಕಾಗಿ ನಾವು ಚರ್ಚೆ ಮಾಡಿದ ಹಾಗೆ ಅನೇಕರು ಅನೇಕ ವಿಷಯಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಹಾಗೆಂದ ಮಾತ್ರಕ್ಕೆ ಹದಿಹರೆಯದ ಮಕ್ಕಳ ಎಲ್ಲಾ ಸಮಸ್ಯೆಯನ್ನು ತೆರೆದಿಡಲು ಸಮಯದ ಅಭಾವದಿಂದಾಗಿ ಮಾತನಾಡಲು ಸಾಧ್ಯವಾಗಲಿಲ್ಲ. ಇವತ್ತು Moral Science ಬಗ್ಗೆ ಹೇಳಿದ್ದು, ಅದನ್ನು ಕಡ್ಡಾಯವಾಗಿ ಮಾಡಬೇಕಾಗಿದ್ದು, ಮಾಡುತ್ತೇವೆ ಎಂದು ಹೇಳಿದ್ದಾರೆ. ಹಾಗೆಯೇ ಪಠ್ಯೇತ್ತರ ಚಟುವಟಿಕೆ ಬಗ್ಗೆ,...

ಸಭಾಪತಿಯವರು:- ಮಾನ್ಯ ಭಾರತಿ ಶೆಟ್ಟಿರವರೇ, ತಾವೇನು ಭಾಷಣ ಮಾಡಲು ಹೋಗುತ್ತಿದ್ದ ಹಾಗೆ ಕಾಣಿಸುತ್ತಿದೆ.

ಶ್ರೀಮತಿ ಭಾರತಿ ಶೆಟ್ಟಿ:- ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ. ನಾನು ವಾಟ್ಸಾಪ್ ಸಂದೇಶವನ್ನು ನೋಡುತ್ತಿರುವಾಗ '೮ ತಿಂಗಳ ಮಗು ಮೊಬೈಲ್ ಕೈಯಲ್ಲಿಟ್ಟುಕೊಂಡು ಫ್ರೈ ಮಾಡಿರುವಂಥ ಅಂಜಲ್ ಮೀನನ್ನು ತಟ್ಟೆಯಲ್ಲಿಟ್ಟರೆ, ಆ ಮಗು ಅದನ್ನು ಬಾಯಿಗೆ ಹಾಕಿಕೊಳ್ಳುವುದರ ಬದಲು ಕಿವಿಯಲ್ಲಿ ಇಟ್ಟುಕೊಳ್ಳುತ್ತದೆ".

(ಮುಂದು)

(222) 11.03.2025/6.40/ಎಸ್‌ಕೆ-ಆರ್‌ಎನ್ **(ಸಭಾಪತಿಯವರ ಉಪಸ್ಥಿತಿ)**

ಶ್ರೀಮತಿ ಭಾರತಿ ಶೆಟ್ಟಿ (ಮುಂದು):-

ಅಂದರೆ ಯಾವ ಮಟ್ಟಿಗೆ ಬೆಳೆಯುತ್ತಿದೆ ಎಂದರೆ, Online classes ಅದು ಕರೋನಾದಲ್ಲಿ ಪ್ರಾರಂಭವಾಗಿದ್ದು. ಸರ್ಕಾರಿ ಶಾಲೆಯಲ್ಲಿಯೋ ಅಥವಾ ಖಾಸಗೀ ಶಾಲೆಯಲ್ಲಿಯೋ ಪ್ರಾರಂಭವಾಗಿದ್ದು ಎಂಬುದು ನನಗೆ ಗೊತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಾಸಗೀ ಶಾಲೆಯಲ್ಲಿ ಇವತ್ತಿನವರೆಗೂ ತನೇ ತರಗತಿಯವರೆಗೂ ಸಮೇತ online class. ಎಲ್ಲಾ messages ಮೊಬೈಲ್‌ನಲ್ಲಿ ಬರುತ್ತಿರುವುದನ್ನು ವಿಚಾರಿಸಿ ನೋಡಿ. ಖಾಸಗೀ ಶಾಲೆಯಲ್ಲಿ ಮೊಬೈಲ್‌ನ್ನು ಕಡ್ಡಾಯವಾಗಿ ban ಮಾಡಬೇಕು. ಒಂದು counselling ಬಗ್ಗೆ ಮಾನ್ಯ ಪುಟ್ಟಣ್ಣನವರು ಹೇಳಿರುವಂತೆ, counselling ಕೇವಲ ಮಕ್ಕಳಿಗೆ ಮಾತ್ರವಲ್ಲ. Parents ಗೂ ಕೂಡ counselling ಇದೆ. Parents-Teachers' Meeting ಇದೆ. ಆ Parents-Teahcers Meeting ನಲ್ಲಿ ಏನು ಹೇಳುತ್ತಾರೆಂದರೆ, ಪಾಠದ ಬಗ್ಗೆ ಹೇಳುತ್ತಾರೆ. ಹದೆಹರಿಯದ ಮಕ್ಕಳನ್ನು ಹೇಗೆ ಬೆಳೆಸಬೇಕು ಎಂಬ ಬಗ್ಗೆ ಮಾತುಕಥೆ ಇಲ್ಲ. ಇನ್ನೊಂದು meditation. ಆ meditation ಎಲ್ಲಿಯೂ ಇಲ್ಲ.

ಸಭಾಪತಿಯವರು:- ಮಾನ್ಯ ಭಾರತಿ ಶೆಟ್ಟಿಯವರೇ, ತಮಗೆ ಮಾತನಾಡುವುದಕ್ಕೆ ಸಾಕಷ್ಟು ಸಮಯವನ್ನು ಕೊಟ್ಟಿದ್ದೇನೆ. ತಮ್ಮ ಮಾತನ್ನು ಸಾಕು ಮಾಡಿ.

ಶ್ರೀಮತಿ ಭಾರತಿ ಶೆಟ್ಟಿ:- ಮಾನ್ಯ ಸಭಾಪತಿಯವರೇ, Meditation ಬಗ್ಗೆ ಯಾರೂ ಹೇಳಲಿಲ್ಲ. ಇವರು ಶಿವಾಜಿ ಕಥೆ ಸೇರಿದಂತೆ ಕಥೆಗಳನ್ನು ಹೇಳಿದರು. ಮಕ್ಕಳಿಗೆ ಈಗಿನ ಕಥೆಯೇ ಬೇರೆ. ಎರಡು ಗ್ಲಾಸ್ ಇದೆ. ಒಂದು ಗ್ಲಾಸ್‌ನಲ್ಲಿ ನೀರು, ಒಂದರಲ್ಲಿ ವಿಸ್ಕಿ ಇದೆ. ಮಗು ಏನು ಹೇಳುತ್ತದೆ ಎಂದರೆ ಒಂದು ಹುಳವನ್ನು ತೆಗೆದು ನೀರಿಗೆ ಹಾಕುತ್ತದೆ ಮತ್ತು ಇನ್ನೊಂದು ಹುಳವನ್ನು ತೆಗೆದು ವಿಸ್ಕಿಗೆ ಹಾಕುತ್ತದೆ. ಎರೆಹುಳ ನೀರಿನಲ್ಲಿ ತೇಲುತ್ತದೆ. ಅದು ಸಾಯುವುದಿಲ್ಲ. ಆದರೆ ವಿಸ್ಕಿಯಲ್ಲಿ ಸತ್ತು ಹೋಗುತ್ತದೆ. ಅಂದರೆ ವಿಸ್ಕಿಯನ್ನು ಕುಡಿದರೆ ನನ್ನ ಹೊಟ್ಟೆಯಲ್ಲಿದ್ದ ಹುಳ ಸತ್ತು ಹೋಗುತ್ತದೆ ಎಂದು ಆ ಮಗು ಹೇಳುತ್ತದೆ. ಈ ಕಥೆಯನ್ನು ಕೇಳಿಕೊಂಡು ಮಕ್ಕಳು ಬೆಳೆದಿದ್ದಾರೆ. ಮಾನ್ಯ ಸದಸ್ಯರು ಯಾರು ಈ ಬಗ್ಗೆ ಹೇಳಲಿಲ್ಲ. Form ಗಳಲ್ಲಿ ತಂದೆ-ತಾಯಿ ಹೆಸರಿರುವ ನಮೂದು ಮಾಡುವ ಒಂದು column ಇರುತ್ತದೆ. ಅದರಲ್ಲಿ ತಂದೆ-ತಾಯಿಯ ಹೆಸರು ಕೇಳುತ್ತಾರೆ. ಅನೇಕರಿಗೆ ತಂದೆ ಹೆಸರು ಹೇಳುವುದಕ್ಕೆ ಆಗುವುದಿಲ್ಲ. ಅನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ತಾಯಿಯ ಹೆಸರು ಹೇಳಬೇಕು. ತಂದೆ ಹೆಸರನ್ನು ಅದರಲ್ಲಿ ಸೇರಿಸುವುದಕ್ಕೆ ಕಡ್ಡಾಯ ಮಾಡಿದರೆ, ಇದು ಹದಿಹರೆಯದ ಮಕ್ಕಳಿಗೆ ಬಹಳ ನೋವನ್ನು ಅನುಭವಿಸುವಂತೆ ಮಾಡಿದೆ. ನಮಗೆ ಅನೇಕ ಮಕ್ಕಳು ಹೇಳಿದ್ದಾರೆ, form ನಲ್ಲಿ ತಂದೆಯ ಹೆಸರನ್ನು ಕಡ್ಡಾಯ ಮಾಡಬಾರದು. ತಾಯಿಯ ಹೆಸರು ಕಡ್ಡಾಯವಾಗಿರಬೇಕು ಎಂದು. ಆದರೆ ಇನ್ನೊಂದು ಸ್ಕೂಲ್‌ನಲ್ಲಿ; ಚಲಾಯಿಸಬೇಕೆಂದರೆ ಹದಿನೆಂಟು ವರ್ಷ ಆಗಬೇಕು. ಮದುವೆಗೆ ಇಪ್ಪತ್ತೊಂದು ವರ್ಷ ಕಡ್ಡಾಯವಿರಬೇಕು. ಆದರೆ ಮಾಡಲು ಇಷ್ಟು ವರ್ಷ ಎನ್ನುವ ಕಡ್ಡಾಯವಿಲ್ಲವೇ? ಹಳ್ಳಿಗಳಿಗೆ ಹೋದರೆ, ಹದಿಹರೆಯದವರು ಅಂದರೆ ಹದಿನೇಳು, ಹದಿನೆಂಟು ವರ್ಷ ಮಕ್ಕಳು ಕುಡಿದಿರುತ್ತಾರೆ. ಇಲ್ಲಿ ಮಾನ್ಯ ಕಾನೂನು ಸಚಿವರು ಸದನದಲ್ಲಿ ಇಲ್ಲ. ಅದಕ್ಕೂ ಕೂಡ ಕಾನೂನನ್ನು ಕಡ್ಡಾಯವಾಗಿ ತರಬೇಕೆಂಬ ಬಗ್ಗೆ ನಾನು ವಿನಂತಿಯನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಈ ವಿಚಾರವಾಗಿ ಹದಿಮೂರು ಜನ ಸದಸ್ಯರು ಮೂರುವರೆ ಗಂಟೆ ಸಮಯ ಮಾತನಾಡಿದ್ದಾರೆ. ಈ ವಿಚಾರ ಕೇವಲ ಶಿಕ್ಷಣ ಇಲಾಖೆಗೆ ಅಷ್ಟೇ ಸಂಬಂಧಪಡುವುದಿಲ್ಲ. ಆರೋಗ್ಯ, ಶಿಕ್ಷಣ, ಗೃಹ ಇಲಾಖೆ ಎಲ್ಲವೂ ಬರುತ್ತದೆ. ಮುಖ್ಯವಾದ ವಿಷಯವನ್ನು ಸದನವು ಚರ್ಚೆಗೆ ತೆಗೆದುಕೊಂಡಿದೆ. ಸರ್ಕಾರದಿಂದ ಒಳ್ಳೆಯ message ಹೋಗಬೇಕು. ಮಾನ್ಯ ಸಚಿವರೇ, ಇದನ್ನು ಪರಾಮರ್ಶಿಸಿ, ತಾವು ಉತ್ತರ ಕೊಡಿ. ತಾವು ಸ್ವಲ್ಪ ಸಮಯ ತೆಗೆದುಕೊಂಡು, ಉತ್ತರ ಕೊಡಿ. ಈಗ ನಿಯಮ ೩೩೦ ಅನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಮಾನ್ಯ ಸಚಿವರೇ, ಈ ವಿಚಾರದ ಕುರಿತಾಗಿ, ಇಲಾಖಾಧಿಕಾರಿಗಳೊಂದಿಗೆ ಚರ್ಚೆ ಮಾಡದೇ ಉತ್ತರವನ್ನು ನೀಡಬೇಡಿ. ಅವರೊಟ್ಟಿಗೆ ಚರ್ಚೆ ಮಾಡಿದ ನಂತರ ಉತ್ತರ ಕೊಡಿ.

ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):– ಮಾನ್ಯ ಸಭಾಪತಿಯವರೇ, ನಮ್ಮ ಸಭಾನಾಯಕರು ಕೂಡ ಅದೇ ಹೇಳಿದರು. ಹಿರಿಯ ಸಚಿವರಿದ್ದರೂ ಯಾರೇ ಆಗಿದ್ದರೂ ಕೂಡ ಅವರು ಸಮಯವನ್ನು ತೆಗೆದುಕೊಂಡು ನಾಳೆ ಉತ್ತರ ಕೊಡುತ್ತೇವೆ ಎಂದು ಹೇಳುತ್ತಾರೆ. ಏಕೆಂದರೆ, ಇವತ್ತು ನಾನು ಉತ್ತರವನ್ನು ಕೊಟ್ಟಬಿಡಬಹುದು. ಆದರೆ ಇವತ್ತು ಚರ್ಚೆಯ ಜೊತೆಗೆ ಉತ್ತರ ನೀಡುವುದು ಕೂಡ ಇತ್ತು. ಇದಕ್ಕೆ ಸಂಬಂಧಪಟ್ಟ ರೀತಿಯಲ್ಲಿ ನಾವು Moral Science ತರಬೇಕೆಂದು ಹೇಳಿ, ಕಳೆದ ಬಾರಿ ಸಾಮಾನ್ಯವಾಗಿ ಮಾತನಾಡಬೇಕಾದರೆ, ನಮ್ಮ ಇಲಾಖೆ ಅದನ್ನು pickup ಮಾಡಿ, ಅದರ ಬಗ್ಗೆ ನಮ್ಮ ಇಲಾಖೆಗೆ ನಿರ್ದೇಶನವನ್ನು ಕೊಟ್ಟಿದ್ದೇವೆ. Next Academic Year, 2025 ರಲ್ಲಿ ಯಾವ ಹಂತದಲ್ಲಿ ಕೊಡಬೇಕೆಂಬ ಬಗ್ಗೆ ನಾವು ತೀರ್ಮಾನ ಮಾಡುತ್ತೇವೆ. ಅದಕ್ಕೆ ಅಂಶವನ್ನು ಶಿಕ್ಷಣ ಇಲಾಖೆಯಿಂದ ಕೊಡುತ್ತೇವೆ. ಇದು ಸಂಪೂರ್ಣವಾದ ಜವಾಬ್ದಾರಿ ನನ್ನದಲ್ಲ. ನನಗೆ ಅನಿಸುವುದೇನೆಂದರೆ, ಈ ವಿಚಾರ ಎಲ್ಲಾ ಇಲಾಖೆಗಳಿಗೂ ಸಂಬಂಧಪಡುತ್ತದೆ.

ಸಭಾಪತಿಯವರು:– ಮಾನ್ಯ ಸದಸ್ಯರುಗಳಾದ ಶ್ರೀ ಡಿ.ಟಿ. ಶ್ರೀನಿವಾಸ್, ಶ್ರೀ ಪುಟ್ಟಣ್ಣ, ಶ್ರೀ ಕೆ.ಎಸ್. ನವೀನ್ ಇನ್ನು ಅನೇಕ ಸದಸ್ಯರುಗಳು ಇದರ ಬಗ್ಗೆ ಮಾತನಾಡಿದ್ದಾರೆ. ಇದರ ಬಗ್ಗೆ ಇಷ್ಟೊಂದು ಚರ್ಚೆಯಾಗಿದೆ. ಎಲ್ಲಾ ವಿಷಯಗಳಿಗಿಂತ ಇದು ಬಹಳ ಮಹತ್ವವಾದ ವಿಷಯವಾಗಿದೆ. ಮಾನ್ಯ ಸಚಿವರೇ, ತಾವು ಎಲ್ಲರ ಜೊತೆ ಚರ್ಚೆ ಮಾಡಿ. ತಾವು ಸವಿಸ್ತಾರವಾದ ಮಾಹಿತಿ ಕೊಡಿ. ಸರ್ಕಾರದಿಂದ ಒಳ್ಳೆಯ message ಹೋಗಬೇಕೆಂಬುದು ನನ್ನ ಉದ್ದೇಶವಾಗಿದೆ. ಈ ವಿಷಯದ ಕುರಿತಾಗಿ, ಹದಿಮೂರು ಜನ ಸದಸ್ಯರು ಮೂರುವರೆ ಗಂಟೆ ಸಮಯವನ್ನು ತೆಗೆದುಕೊಂಡು ಮಾತನಾಡಿದ್ದಾರೆ. ಮಾನ್ಯ ಸಚಿವರೇ, ತಾವು ನಾಳೆ ಉತ್ತರ ಕೊಡಿ. ಇದಕ್ಕೆ ಸಂಪೂರ್ಣವಾಗಿ ಮಾಹಿತಿ ನೀಡಬೇಕಾದರೆ, ಇದಕ್ಕೆ ತಾವು ನಡಾವಳಿಯನ್ನು ತೆಗೆದುಕೊಂಡು, ಎಲ್ಲರ ಜೊತೆ ಚರ್ಚೆ ಮಾಡಿ. ಈ ವಿಷಯದ ಕುರಿತಾಗಿ, ತಾವು ಒಂದು ಉತ್ತಮವಾದಂತಹ ಉತ್ತರ ಕೊಟ್ಟರೆ ನಾಡಿಗೆ ಒಂದು ಒಳ್ಳೆಯ message ಹೋಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಮಧು ಬಂಗಾರಪ್ಪ:– ಮಾನ್ಯ ಸಭಾಪತಿಯವರೇ ನಾಳೆ ಅಥವಾ ನಾಳಿದ್ದು ಎಷ್ಟು ಬೇಗ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ, ಆದಷ್ಟು ಬೇಗ ಉತ್ತರವನ್ನು ಕೊಡಿಸುತ್ತೇನೆ.

ಸಭಾಪತಿಯವರು:– ಮಾನ್ಯ ಸಚಿವರೇ, ತಾವು ಸಮಯವನ್ನು ತೆಗೆದುಕೊಂಡು ನಾಳೆ ಉತ್ತರ ಕೊಡಿ.

ಶ್ರೀ ಮಧು ಬಂಗಾರಪ್ಪ:– ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಚರ್ಚೆ ಮಾಡಿ, ಉತ್ತರ ಕೊಡುತ್ತೇನೆ.

ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಈ ವಿಷಯದ ಕುರಿತು ಚರ್ಚೆ ಮಾಡುವಾಗ, ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಕರೆಯುವುದಕ್ಕೆ ಹೇಳಿ.

ಸಭಾಪತಿಯವರು:– ಮಾನ್ಯ ಸದಸ್ಯರೇ, ಈ ವಿಷಯದ ಕುರಿತಾಗಿ ಇಬ್ಬರು ಸಚಿವರು ಕೂಡ ಚರ್ಚೆ ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

೮. ಗಮನ ಸೆಳೆಯುವ ಸೂಚನೆಗಳು

ಅ) ವಿಷಯ:– ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಕೊಡಗು ವಿಶ್ವವಿದ್ಯಾಲಯ ಸೇರಿದಂತೆ ಹಿಂದಿನ ಸರ್ಕಾರದಲ್ಲಿ ಸ್ಥಾಪಿಸಲಾಗಿದ್ದ ವಿಶ್ವವಿದ್ಯಾಲಯಗಳನ್ನು ಮುಚ್ಚಲು ತೀರ್ಮಾನಿಸಿರುವುದನ್ನು ಕೈಬಿಡಬೇಕೆಂದು ಹಾಗೂ ವಿದ್ಯಾರ್ಥಿಗಳ ಮತ್ತು ನಿರುದ್ಯೋಗಿಗಳ ಹಿತದೃಷ್ಟಿಯಿಂದ ಸದರಿ ವಿಶ್ವವಿದ್ಯಾಲಯಗಳನ್ನು ಅಭಿವೃದ್ಧಿಪಡಿಸಲು ಅನುದಾನವನ್ನು ಒದಗಿಸುವ ಕುರಿತು.

– – – – –

ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಕೊಡಗು ವಿಶ್ವವಿದ್ಯಾಲಯ ಸೇರಿದಂತೆ ಹಿಂದಿನ ಸರ್ಕಾರದಲ್ಲಿ ಸ್ಥಾಪಿಸಲಾಗಿದ್ದ ವಿಶ್ವವಿದ್ಯಾಲಯಗಳನ್ನು ಮುಚ್ಚಲು ತೀರ್ಮಾನಿಸಿರುವುದನ್ನು ಕೈಬಿಡಬೇಕೆಂದು ಹಾಗೂ ವಿದ್ಯಾರ್ಥಿಗಳ ಮತ್ತು ನಿರುದ್ಯೋಗಿಗಳ ಹಿತದೃಷ್ಟಿಯಿಂದ ಸದರಿ ವಿಶ್ವವಿದ್ಯಾಲಯಗಳನ್ನು ಅಭಿವೃದ್ಧಿಪಡಿಸಲು ಅನುದಾನವನ್ನು ಒದಗಿಸುವ ಕುರಿತು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

ಡಾ॥ ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):– ಮಾನ್ಯ ಸಭಾಪತಿಯವರೇ,

2022-23ನೇ ಆರ್ಥಿಕ ಸಾಲಿನ ಆಯವ್ಯಯದ ಭಾಷಣದ ಕಂಡಿಕೆ-103ರಲ್ಲಿನ ಘೋಷಣೆಯಂತೆ ಕಾಲೇಜುಗಳ ಮೇಲ್ದರ್ಜೆಗೇರಿಸಲು ರಾಜ್ಯದ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ವಿನೂತನ ಮಾದರಿಯ 07 ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

1. ಈ ವಿಶ್ವವಿದ್ಯಾಲಯಗಳ ಸ್ಥಾಪನೆಗಾಗಿ ಯಾವುದೇ ಜಮೀನನ್ನಾಗಲೀ ವಾಹನವನ್ನಾಗಲೀ ಖರೀಸುವಂತಿಲ್ಲ, ಹಾಗೂ ಹೊಸ ಕಟ್ಟಡಗಳನ್ನು ನಿರ್ಮಿಸುವಂತಿಲ್ಲ.
2. ಈಗಾಗಲೇ ಮಾತೃ ವಿಶ್ವವಿದ್ಯಾಲಯಗಳಿಗೆ ಮಂಜೂರಾಗಿರುವ ಹುದ್ದೆಗಳಲ್ಲಿ ಅವಶ್ಯ ಹುದ್ದೆಗಳನ್ನು ಬಳಸಿಕೊಂಡು ಸ್ಥಾಪಿಸುವುದು ಯಾವುದೇ ಹೊಸ ಹುದ್ದೆಗಳನ್ನು ಸೃಜಿಸುವಂತಿಲ್ಲ;
3. ಈ ಹಿಂದುಳಿದ ಜಿಲ್ಲೆಗಳಲ್ಲಿ ಸಂಪೂರ್ಣವಾಗಿ Digital ಹಾಗೂ Enterpreneurial (ಕೌಶಲ್ಯಾಧಾರಿತ) "Earn while you learn" ಮಾದರಿಯಂತೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಕ್ರಮವಹಿಸುವುದು;

ವಿನೂತನ ಮಾದರಿಯ ಕೊಡಗು ವಿಶ್ವವಿದ್ಯಾಲಯದ ವೇತನಗಳಿಗೆ ಹೊರತುಪಡಿಸಿ ಮೂಲಭೂತ ಸೌಕರ್ಯಗಳಿಗಾಗಿ ಅವಶ್ಯವಿರುವ ಯಾವುದೇ ಹೆಚ್ಚುವರಿ ಅನುದಾನ ಒದಗಿಸಲು ಸಾಧ್ಯವಿಲ್ಲವೆಂದು ಆರ್ಥಿಕ ಇಲಾಖೆಯು ತಿಳಿಸಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾಲಯಗಳನ್ನು ಒಳಗೊಂಡಂತೆ ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸನ್ಮಾನ್ಯ ಉಪಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಈ ಬಗ್ಗೆ ಸಭೆ ನಡೆಸಿದ್ದು, ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳೊಂದಿಗೆ ರಾಜ್ಯದಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿ ಹಾಗೂ ಅವರ ಮುಂಬರುವ ಭವಿಷ್ಯದ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ವಿದ್ಯಾರ್ಥಿಗಳಿಗೆ ಗುಣಾತ್ಮಕ ಶೈಕ್ಷಣಿಕ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಕೆಲವು ವಿಶ್ವವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿ, ವಿದ್ಯಾರ್ಥಿಗಳ ಪ್ರವೇಶಾತಿ, ಮೂಲಸೌಲಭ್ಯದ ಕೊರತೆ ಮುಂತಾದ ಪ್ರಮುಖ ಅಂಶಗಳ ಕುರಿತು ಮೊದಲ ಸಭೆಯಲ್ಲಿ ಚರ್ಚಿಸಲಾಗಿದ್ದು, ಸಭೆಯಲ್ಲಿ ಸ್ಪೀಕೃತವಾದ ಸಲಹೆಗಳನ್ನು ಪರಾಮರ್ಶಿಸಿ ಕೆಲವು ವಿಶ್ವವಿದ್ಯಾಲಯಗಳ ವಿಲೀನ, ಹೆಚ್ಚಿನ ಅನುದಾನದ ಅಗತ್ಯತೆ ಮತ್ತು ಹಂತ-ಹಂತವಾಗಿ ಖಾಲಿ ಹುದ್ದೆಗಳ ಭರ್ತಿ ಸೇರಿದಂತೆ ವಿಶ್ವವಿದ್ಯಾಲಯಗಳ ಬಲವರ್ಧನೆಗಾಗಿ ಉನ್ನತ ಶಿಕ್ಷಣ ಇಲಾಖೆ ಮತ್ತು ಆರ್ಥಿಕ ಇಲಾಖೆಯು ಒಟ್ಟಾರೆ ಸೇರಿ ವಿಸ್ತೃತವಾದ ವರದಿ/ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಮಂಡಿಸಿ ಸೂಕ್ತ ತೀರ್ಮಾನ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಸಭಾಪತಿಯವರು:– ಮಾನ್ಯ ಸಚಿವರೇ, ತಾವು ಉತ್ತರ ಕೊಟ್ಟಿದ್ದೀರಿ. ಈಗ ತಾವು ಇನ್ನೂ ಹೇಳುವುದೇನಾದರೂ ಇದ್ದರೆ ಹೇಳಿ.

ಡಾ॥ ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):– ಮಾನ್ಯ ಸಭಾಪತಿಯವರೇ, ಈ ವಿಷಯದ ಕುರಿತಾಗಿ, ಮಾನ್ಯ ಸದಸ್ಯರುಗಳಾದ ಶ್ರೀ ಕುಶಾಲಪ್ಪ, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಶಶೀಲ್ ಜಿ. ನಮೋಶಿ, ಶ್ರೀ ಎಸ್.ವಿ ಸಂಕನೂರ, ಶ್ರೀ ಡಿ.ಎಸ್. ಅರುಣ್ ಮತ್ತು ಡಾ॥ ಧನಂಜಯ ಸರ್ಜಿಯವರು ಇದಕ್ಕೆ ಸಹಿ ಮಾಡಿದ್ದಾರೆ. ಇದನ್ನು ಇನ್ನೂ ಬೇರೆ ಬೇರೆ ರೂಪದಲ್ಲಿ ಈಗಾಗಲೇ ಬಹಳಷ್ಟು ಜನ ಸದಸ್ಯರು ಕೇಳಿದ್ದಾರೆ. ಮಾನ್ಯ ಸದಸ್ಯರೆಲ್ಲರೂ ಮಾತನಾಡಿದ ನಂತರ ನಾನು ಸವಿಸ್ತಾರವಾಗಿ ಉತ್ತರ ಕೊಟ್ಟರೆ ಅದಕ್ಕೆ ಅರ್ಥವಿರುತ್ತದೆ. ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ಅವರು ಏನೇನು ಕೇಳಬೇಕು ಎಂದುಕೊಂಡಿದ್ದಾರೋ, ಅದಕ್ಕೆ ನಾನು ಅಂತಿಮವಾಗಿ ಸದನಕ್ಕೆ ಉತ್ತರ ಕೊಡುತ್ತೇನೆ.

ಸಭಾಪತಿಯವರು:– ಆಗಬಹುದು. ಮಾನ್ಯ ಎಸ್.ವಿ. ಸಂಕನೂರರವರೇ, ತಾವು ಮಾತನಾಡಿ.

ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ,..

ಸಭಾಪತಿಯವರು:– ನಾನು ಮಾನ್ಯ ಸಂಕನೂರ ಅವರಿಗೆ ಮಾತನಾಡುವುದಕ್ಕೆ ಹೇಳಿದ್ದೇನೆ. ಅನಂತರ ತಾವು ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಆಯಿತು. ಪೀಠ ಏನು ಹೇಳುತ್ತದೆಯೋ, ಅದನ್ನು ನಾನು ಕೇಳುತ್ತೇನೆ.

ಸಭಾಪತಿಯವರು:- ಮಾನ್ಯ ಭೋಜೇಗೌಡರೇ, ತಾವು ಮಾನ್ಯ ಸದಸ್ಯರೆಲ್ಲರೂ ಮಾತನಾಡಿದ ನಂತರ ಕೊನೆಗೆ ಮಾತನಾಡಿ.

ಶ್ರೀ ಎಸ್.ಎಲ್ ಭೋಜೇಗೌಡ:- ಮಾನ್ಯ ಸಭಾಪತಿಯವರೇ, ತಾವು ಇವತ್ತು ರಾತ್ರಿ ಎಂಟು ಗಂಟೆಯವರೆವಿಗೂ ಸದನವನ್ನು ನಡೆಸುವಂತಿದೆ.

ಶ್ರೀ ಎಸ್.ವಿ. ಸಂಕನೂರ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಸಭಾಪತಿಯವರು:- ತಾವು ಚುಟಕಾಗಿ ಮಾತನಾಡಿ.

ಶ್ರೀ ಎಸ್.ವಿ. ಸಂಕನೂರ:- ಮಾನ್ಯ ಸಭಾಪತಿಯವರೇ, ಆಯಿತು. ಕೆಲವು ಪ್ರಮುಖವಾದ ಅಂಶಗಳಿವೆ.

ಸಭಾಪತಿಯವರು:- ಮಾನ್ಯ ಸದಸ್ಯರೇ, ತಾವು ಹೆಚ್ಚು ಸಮಯವನ್ನು ತೆಗೆದುಕೊಳ್ಳಬೇಡಿ. ತಾವು ಮಾತನಾಡುವಾಗ ಸಾಮಾನ್ಯವಾಗಿ ಹೆಚ್ಚು ಸಮಯ ತೆಗೆದುಕೊಳ್ಳುತ್ತೀರಿ.

ಶ್ರೀ ಎಸ್.ವಿ. ಸಂಕನೂರ:- ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಈ ಹಿಂದೆ ಬಿ.ಜೆ.ಪಿ., ಸರ್ಕಾರವಿದ್ದಾಗ, ಏನು ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಿದೆ. ಅದರಲ್ಲಿ ೨ ವಿಶ್ವವಿದ್ಯಾಲಯಗಳನ್ನು ಮುಚ್ಚುವುದಕ್ಕೆ Cabinet Sub-Committee ನಲ್ಲಿ ಶಿಫಾರಸ್ಸನ್ನು ಮಾಡಿದೆ. ನಾನು ಹೇಳುವುದೇನೆಂದರೆ, ಇದು ಆತುರದಲ್ಲಿ ತೆಗೆದುಕೊಂಡಿರುವ ನಿರ್ಣಯ. ಶೈಕ್ಷಣಿಕ ತಜ್ಞರಿಂದ ವರದಿಯನ್ನು ಪಡೆದುಕೊಳ್ಳಲಾರದೇ, ಇದು ತೆಗೆದುಕೊಂಡಿರುವಂತಹ ನಿರ್ಣಯ. ಅದನ್ನು ಕೈಬಿಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಈ ಹಿಂದೆ ಭಾರತೀಯ ಜನತಾ ಪಕ್ಷ ಸರ್ಕಾರವಿದ್ದಾಗ, ಯಾವ ಕಾರಣಕ್ಕಾಗಿ ಮತ್ತು ಯಾವ ಆಧಾರದ ಮೇಲೆ ಈ ಹೊಸ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿದೆ ಎನ್ನುವುದನ್ನು ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ, ಎರಡು ಸಮಿತಿಗಳಾಗಿವೆ. ಮೊದಲನೆಯದಾಗಿ, National Knowledge Commission ನ Sam Pitroda ರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದರು. ಆದಾದ ನಂತರ ಯಶ್‌ಪಾಲ್ ಕಮಿಟಿ ಆಗಿದೆ. ಅವರು ಯು.ಜಿ.ಸಿ.ಯಲ್ಲಿ ಅಧ್ಯಕ್ಷರು ಕೂಡ ಆಗಿದ್ದರು. ಅವೆರಡು ಸಮಿತಿಯ ವರದಿಗಳಲ್ಲಿ ಈ National Knowledge Commission report ಏನು ಹೇಳುತ್ತದೆ ಎಂದರೆ, ಆಗಿನ ಕಾಲಕ್ಕೆ ೨೦೦೦ ವಿಶ್ವವಿದ್ಯಾಲಯಗಳು ೨೦೧೫ರೊಳಗೆ ಒಟ್ಟು ೧೫೦೦ ವಿಶ್ವವಿದ್ಯಾಲಯಗಳಾಗಬೇಕು. Cluster University, Unitary University, Affiliated University ಕೂಡ ಸ್ಥಾಪನೆ ಮಾಡಬೇಕೆಂದು ವರದಿಯಲ್ಲಿ ಶಿಫಾರಸ್ಸು ಮಾಡಿದೆ. ಅದೇ ರೀತಿ ಯಶ್‌ಪಾಲ್ ವರದಿಯಲ್ಲಿ ಏನು ಹೇಳಿದೆ ಎಂದರೆ, ದೇಶದೊಳಗೆ ೨೦,೦೦೦ ಕಾಲೇಜುಗಳಿವೆ. ಅದರಲ್ಲಿ ೧೫೦೦

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲೇಜುಗಳು ಬಹಳ ಒಳ್ಳೆಯ ಕಾಲೇಜುಗಳಿವೆ. ಅದರಲ್ಲಿ strength ಕೂಡ ಚೆನ್ನಾಗಿದೆ. ಮೂಲಭೂತ ಸೌಕರ್ಯವಿದೆ. ಅದಕ್ಕೆ rich heritage ಇದೆ. ಕನಿಷ್ಟ 1500 ವಿಶ್ವವಿದ್ಯಾಲಯಗಳನ್ನು ಮಾಡಬೇಕೆಂದು ವರದಿಯನ್ನು ಕೊಟ್ಟಿದೆ. ಈ ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗ, ಎರಡು ಕಮಿಟಿ ಮಾಡಿ, ಅದರಲ್ಲಿ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಆ ಶಿಫಾರಸ್ಸಿನ ಪ್ರಕಾರವೇ ನಮ್ಮ ಬಿ.ಜೆ.ಪಿ. ಸರ್ಕಾರವಿದ್ದಾಗ, ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಿದೆ. ನನ್ನ ಪ್ರಶ್ನೆ ಏನೆಂದರೆ, ಕಾಂಗ್ರೆಸ್ ಸರ್ಕಾರವಿದ್ದಾಗ, ಕಮಿಟಿ ನೇಮಿಸಿದ್ದೀರಿ. ಆ ಕಮಿಟಿ ಕೊಟ್ಟಿರುವ ವರದಿಯ ಶಿಫಾರಸ್ಸಿನ ಆಧಾರದ ಮೇಲೆ ನಮ್ಮ ಸರ್ಕಾರ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಿದೆ. ಹಾಗಾದರೆ ಈ ಹಿಂದೆ ಕೊಟ್ಟಿರುವಂತಹ ವರದಿಗೆ ಗೌರವವಿಲ್ಲವೇ? ಅವರು ಮಾಡಿದ್ದು ತಪ್ಪಾ? ದಯವಿಟ್ಟು, ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಎರಡನೇ ವಿಷಯದ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರವಿದ್ದಾಗ, ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಿರುವುದು ಅದು ವೈಜ್ಞಾನಿಕ ತಳಹದಿಯ ಮೇಲೆ ಮಾಡಿರುವಂತಹದ್ದು. ಶ್ರೀ ಹೇಮಂತ್ ಕುಮಾರ್, ಕುಲಪತಿಗಳ ನೇತೃತ್ವದಲ್ಲಿ ಒಂದು ಕಮಿಟಿ ಮಾಡಿದೆ. ಇದರ ಅವಶ್ಯಕತೆಯಿದೆಯೋ ಇಲ್ಲವೋ, ಇದನ್ನು ಎಲ್ಲೆಲ್ಲಿ ಮಾಡಬೇಕೆಂಬುದರ ಬಗ್ಗೆ ವರದಿಯನ್ನು ತೆಗೆದುಕೊಂಡಿದ್ದಾರೆ.

(ಮುಂದು)

(223) 11.03.2025/6.50/ಬಿಸಿಹೆಚ್-ಆರ್ಎನ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಎಸ್.ವಿ.ಸಂಕನೂರ (ಮುಂದು)

ಅದಾದನಂತರ Karnataka Higher Education Council ಅವರಿಂದ ಕೂಡ ನಾವು ವರದಿಯನ್ನು ತೆಗೆದುಕೊಂಡಿದ್ದೇವೆ. ಅವರ ವರದಿಯ ಆಧಾರದ ಮೇಲೆ ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಿದ್ದೇವೆ. ಅಂದರೆ ಇದು ಸರ್ಕಾರದ ರಾಜಕೀಯ ನಿರ್ಣಯ ಅಲ್ಲ. ಶಿಕ್ಷಣ ತಜ್ಞರ ಎರಡು ಸಮಿತಿಗಳು ವರದಿಯನ್ನು ಕೊಟ್ಟಿದ್ದಾರೆ. ಅದರ ಆಧಾರದ ಮೇಲೆ ಈ ವಿಶ್ವವಿದ್ಯಾಲಯಗಳು ಸ್ಥಾಪನೆಯಾಗಿರುವುದು. ಮಾನ್ಯ ಸಭಾಪತಿಯವರೇ, ನಾನು ಸರ್ಕಾರದ ಗಮನಕ್ಕೆ ಇನ್ನೊಂದು ವಿಷಯವನ್ನು ತರುವುದೇನೆಂದರೆ, ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡುವುದಕ್ಕೆ ಗುರಿ ಏನೆಂದರೆ, ಇವತ್ತಿನ ದಿವಸ National GER (Gross Enrolment Ratio) ಇದು ಹೆಚ್ಚಾಗಬೇಕು ಎನ್ನುವುದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಗುರಿ ಇದೆ. ಇವತ್ತಿನ ದಿವಸ State average 33% ಇದೆ. ಮತ್ತೆ ಹೊಸ ಶಿಕ್ಷಣ ನೀತಿಯೊಳಗೆ ಟಾರ್ಗೆಟ್ GER 50% ಆಗಬೇಕೆಂದು ಇದೆ. ಈಗ ಏನು ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಿದ್ದೇವೆ. ಆ ಜಿಲ್ಲೆಯೊಳಗೆ ಆ ವಿಶ್ವವಿದ್ಯಾಲಯದ Gross Enrolment Ratio ಎಷ್ಟಿದೆ ಎಂದು ಹೇಳುತ್ತೇನೆ. ಚಾಮರಾಜ ನಗರದಲ್ಲಿ ಶೇ.10 ಇದೆ, ಹಾಸನದಲ್ಲಿ ಶೇ.15 ಇದೆ, ಕೊಡಗಿನಲ್ಲಿ ಶೇ.16 ಇದೆ, ಕೊಪ್ಪಳದಲ್ಲಿ ಶೇ.16 ಇದೆ, ಮಂಡ್ಯದಲ್ಲಿ ಶೇ.20 ಇದೆ. ಅಂದರೆ ಬಾಗಲಕೋಟೆ ಮತ್ತು ಬೀದರ್ ನಲ್ಲಿ ಮಾತ್ರ ಕ್ರಮವಾಗಿ ಶೇ.25, ಶೇ.23ರಷ್ಟು ಇದೆ. ಒಟ್ಟಾರೆಯಾಗಿ state average ಶೇ.33ರಷ್ಟಿದೆ. State average ಗೆ ಕಡಿಮೆ ಇದ್ದಂತಹ ಜಿಲ್ಲೆಯೊಳಗೆ ಇವತ್ತಿನ ದಿವಸ ಹೊಸ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಿದ್ದೇವೆ. ಇನ್ನೊಂದು ಬಹಳ ಮುಖ್ಯ ಕಾರಣವೇನೆಂದರೆ, ಹೊಸ ವಿಶ್ವವಿದ್ಯಾಲಯಗಳು. . .

ಸಭಾಪತಿಯವರು:– ಮಾನ್ಯ ಎಸ್.ವ್ಹಿ.ಸಂಕನೂರ ರವರೇ, ಮಾತನಾಡಿದ್ದು ಸಾಕು. ಇದು ಗಮನ ಸೆಳೆಯುವ ಸೂಚನೆ.

ಶ್ರೀ ಎಸ್.ವ್ಹಿ.ಸಂಕನೂರ:– ಮಾನ್ಯ ಸಭಾಪತಿಯವರೇ, ಇದು ಜ್ವಲಂತ ವಿಷಯವಾಗಿದೆ. ಇದು ಬಹಳ ಮುಖ್ಯವಾದ ವಿಷಯವಾಗಿದೆ. ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ.

ಸಭಾಪತಿಯವರು:– ಮಾನ್ಯ ಎಸ್.ವ್ಹಿ.ಸಂಕನೂರ ರವರೇ, ಬೇರೆಯವರಿಗೂ ಸಮಯ ಕೊಡಬೇಕಲ್ಲವೇ?

ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ನಿಮ್ಮ ಅವಧಿಯಲ್ಲಿ ನೀವು ಮಾಡಿದ್ದೀರಿ. ನಾವು ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಈ ರೀತಿ ಮಾಡುವುದೇ?

ಶ್ರೀ ಎಸ್.ವ್ಹಿ.ಸಂಕನೂರ:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು ಏಕೆ ಮಾತನಾಡುತ್ತಿದ್ದಾರೆ? ನಾನು ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಕೇಳುತ್ತಿದ್ದೇನೆ. ಆದರೆ ತಾವೇಕೆ objection ಮಾಡುತ್ತೀರಿ. ಇದು ಸರಿಯೆ?

ಸಭಾಪತಿಯವರು:– ಮಾನ್ಯ ಎಸ್.ವ್ಹಿ.ಸಂಕನೂರ ರವರೇ, ಈಗ ಏನು ಮಾಡಬೇಕು ಹೇಳಿ.

ಶ್ರೀ ಪುಟ್ಟಣ್ಣ:– ಮಾನ್ಯ ಎಸ್.ವ್ಹಿ.ಸಂಕನೂರ ರವರೇ, ನಾನು ಉತ್ತರ ಹೇಳಲಿಲ್ಲ, ನಾನು ನಿಮಗೆ support ಮಾಡುತ್ತಿದ್ದೇನೆ.

ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡುವುದಕ್ಕೆ ಮುಖ್ಯವಾದ ಕಾರಣಗಳೇನೆಂದರೆ, ಪ್ರಾದೇಶಿಕ ಅಸಮಾನತೆಯನ್ನು ಸರಿಪಡಿಸುವುದಕ್ಕೆ ಇದನ್ನು ಮಾಡಿರುವುದು. ಡಾ.ಡಿ.ನಂಜುಂಡಪ್ಪ ವರದಿ ಪ್ರಕಾರ ಯಾವ್ಯಾವ ಜಿಲ್ಲೆಗಳು Socially and Economically backward ಇವೆಯೋ ಆ backward ಇರುವಂತಹ ಜಿಲ್ಲೆಗಳಲ್ಲಿ ಮಾತ್ರ ನಾವು ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಿದ್ದೇವೆ. ಡಾ.ಡಿ.ನಂಜುಂಡಪ್ಪ ವರದಿ ಪ್ರಕಾರ ಚಾಮರಾಜನಗರ, ಹಾಸನ, ಕೊಪ್ಪಳ ಮತ್ತು ಬೀದರ್ ಇವೆಲ್ಲವೂ ಕೂಡ ಡಾ.ಡಿ.ನಂಜುಂಡಪ್ಪ ವರದಿಯಲ್ಲಿ Socially and Economically backward districts ಆಗಿವೆ. ಅಂತಹ ಸ್ಥಳಗಳಲ್ಲಿ ಹೊಸ ವಿಶ್ವವಿದ್ಯಾಲಯಗಳನ್ನು ನಾವು ಮಾಡಿದ್ದೇವೆ. ನನ್ನ ಪ್ರಶ್ನೆ ಏನೆಂದರೆ, ಶಿಕ್ಷಣದ ಅಸಮಾನತೆ ಇರುವುದನ್ನು ಸರಿಪಡಿಸಬೇಕೋ, ಬೇಡವೋ? ಸರ್ಕಾರದ ಇಚ್ಛೇ ಏನಿದೆಯೆಂದು ದಯವಿಟ್ಟು ತಿಳಿಸಬೇಕು. ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡುವುದರಿಂದ ಏನೇನು ಲಾಭವಾಗಿದೆ, ಏನೇನು ಒಳ್ಳೆಯದಾಗಿದೆ . . .

ಸಭಾಪತಿಯವರು:– ಮಾನ್ಯ ಎಸ್.ವ್ಹಿ.ಸಂಕನೂರ ರವರೇ, ಈಗ ಏನು ಆಗಬೇಕು ಹೇಳಿ.

ಶ್ರೀ ಎಸ್.ವ್ಹಿ.ಸಂಕನೂರ:– ಮಾನ್ಯ ಸಭಾಪತಿಯವರೇ, ಹೊಸ ವಿಶ್ವವಿದ್ಯಾಲಯಗಳಲ್ಲಿ ಆ ಜಿಲ್ಲೆಗೆ ಬೇಕಾಗಿರತಕ್ಕಂಥ ಹೊಸ ಹೊಸ ಕೋರ್ಸ್‌ಗಳನ್ನು ಪ್ರಾರಂಭ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಗು ಜಿಲ್ಲೆಯಲ್ಲಿ ಎಂ.ಸಿ.ಎ, ಕೋರ್ಸ್ ಇರಲಿಲ್ಲ, ಎಂ.ಬಿ.ಎ., ಕೋರ್ಸ್ ಇರಲಿಲ್ಲ. ಆ ಇಡೀ ಜಿಲ್ಲೆಯಲ್ಲಿ ಯಾವ ಕಾಲೇಜ್‌ಗಳಲ್ಲೂ ಕೂಡ ಆ ಕೋರ್ಸ್‌ಗಳು ಇರಲಿಲ್ಲ. ಆ ಜಿಲ್ಲೆಗೆ ಏನೇನು ಅವಶ್ಯಕತೆ ಇದೆಯೋ ಅದಕ್ಕೆ ತಕ್ಕಂತೆ ಹೊಸ ಹೊಸ ಕೋರ್ಸ್‌ಗಳನ್ನು ಅವರು ಮಾಡಿದ್ದಾರೆ. ಅಷ್ಟೇ ಅಲ್ಲದೇ ಅವರು ಹೊಸ Syllabus frame ಮಾಡಿದ್ದಾರೆ. ಬೇರೆ ಬೇರೆ ಕಂಪನಿಗಳನ್ನು ಕರೆಸಿ, ಆ ಕಂಪನಿಗಳಿಗೆ ಯಾವ ಉದ್ಯೋಗ ಬೇಕೋ ಅದಕ್ಕೆ ಏನೇನು ಶಿಕ್ಷಣ ಬೇಕು, ಏನೇನು skill ಬೇಕು ಅವೆಲ್ಲಾ ಮಾಹಿತಿಗಳನ್ನು ತೆಗೆದುಕೊಂಡು ಅದರ ಪ್ರಕಾರ ಹೊಸ syllabus ಮಾಡಿದ್ದಾರೆ. ಅಷ್ಟೇ ಅಲ್ಲದೇ ಒಂದು ಹೆಜ್ಜೆ ಮುಂದೆ ಹೋಗಿ ಅವರು ಅಲ್ಲಿ ಪಾಸ್ ಆದಕೂಡಲೇ ಅವರಿಗೆ job ಕೊಡಬೇಕೆಂದು ಆ ಕಂಪನಿಗಳ ಜೊತೆಗೆ MoU (Memorandum of Understanding) ಕೂಡ ಮಾಡಿಕೊಂಡಿದ್ದಾರೆ. ಇವೆಲ್ಲಾ ವೈಜ್ಞಾನಿಕವಾಗಿ ಮಾಡಿರತಕ್ಕಂಥ ಆಧಾರದ ಮೇಲೆ ನಮ್ಮ ಸರ್ಕಾರ ಮಾಡಿದೆ.

(ಈ ಹಂತದಲ್ಲಿ ವೈಸ್ ಚೇರ್ಮನ್ ರವರಾದ ಶ್ರೀ ಎಸ್.ಎಲ್.ಭೋಜೇಗೌಡರವರು ಸಭಾಪೀಠವನ್ನು ಅಲಂಕರಿಸಿದರು)

ಬಹಳ ಮುಖ್ಯವಾಗಿ ಹೇಳುವುದಾದರೆ, ಮಹಿಳೆಯರು Higher Education ಗೆ admission ತೆಗೆದುಕೊಳ್ಳುವುದು percentage ಕಡಿಮೆ ಇತ್ತು. ಉದಾಹರಣೆಗೆ ನಮ್ಮ ಹಾವೇರಿ ಜಿಲ್ಲೆಯಲ್ಲಿ ಹೊಸ ವಿಶ್ವವಿದ್ಯಾಲಯ ಮಾಡಿದನಂತರ maximum eighty percent of ladies ಅಲ್ಲಿ Post Graduation ಕೋರ್ಸ್‌ಗಳಲ್ಲಿ ಓದುತ್ತಿದ್ದಾರೆ. ಹಾಗಾಗಿ, ಕೊಡಗು ಜಿಲ್ಲೆಯಲ್ಲಿ ಇನ್ನೊಂದು ಹೊಸ ವಿಶ್ವವಿದ್ಯಾಲಯ ಪ್ರಾರಂಭವಾಗಿದೆ. ಅದರಲ್ಲಿ ಶೇ.೬೦ ಎಸ್.ಸಿ. ಎಸ್.ಟಿ ಮತ್ತು ಓ.ಬಿ.ಸಿ ವಿದ್ಯಾರ್ಥಿಗಳಿದ್ದಾರೆ. ನೀವು ಅದನ್ನು close ಮಾಡುವುದರಿಂದ ಅವರಿಗೆ ಸಿಕ್ಕಿರುವ ಅವಕಾಶಗಳಿಂದ ವಂಚಿತರಾಗುತ್ತಾರೆ. ಕೊನೆಯದಾಗಿ ನಾನು ಏನು ಹೇಳುವುದೇನೆಂದರೆ, ಇವತ್ತಿನ ದಿವಸ ಸರ್ಕಾರ ಇವುಗಳನ್ನು close ಮಾಡಲು ಕಾರಣ ಏನು ಕೊಟ್ಟಿದ್ದೀರಿ?

ವೈಸ್‌ಛೇರ್ಮನ್:– ಮಾನ್ಯ ಎಸ್.ವ್ಹಿ.ಸಂಕನೂರ ರವರೇ, ನೀವು ಸಭಾಪತಿಗಳೇ ಎಂದು ಮಾನ್ಯ ಸಚಿವರ ಕಡೆ ನೋಡುತ್ತಿದ್ದೀರಿ.

ಶ್ರೀ ಎಸ್.ವ್ಹಿ.ಸಂಕನೂರ:– ಮಾನ್ಯ ಸಭಾಪತಿಯವರೇ, ನೀವು ಪೀಠದಲ್ಲಿ ಕುಳಿತುಕೊಂಡಿದ್ದನ್ನು ನೋಡಿಲ್ಲ.

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೇ, ಆ ಸ್ಥಳದಲ್ಲಿ ಅವರು ಒಬ್ಬರೇ ನೋಡುತ್ತಿರುವುದು.

ಶ್ರೀ ಎಸ್.ವ್ಹಿ.ಸಂಕನೂರ:– ಮಾನ್ಯ ಸಭಾಪತಿಯವರೇ, ಇವರು ಆ ವಿಶ್ವವಿದ್ಯಾಲಯಗಳನ್ನು close ಮಾಡುವುದಕ್ಕೆ Sub-Committee Recommendations ಮಾಡಿದ್ದಾರೆ.

ವೈಸ್‌ಛೇರ್ಮನ್:– ಮಾನ್ಯ ಎಸ್.ವ್ಹಿ.ಸಂಕನೂರ ರವರೇ, ಛೇರ್ ಆ ಕಡೆ ಏನಾದರೂ ಇದೆಯೇ ಎಂದು ನನಗೆ ಅನುಮಾನ ಇದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ವ್ಹಿ.ಸಂಕನೂರ:– ಮಾನ್ಯ ಸಭಾಪತಿಯವರೇ, ಸರ್ಕಾರ ಆರ್ಥಿಕ ಸ್ಥಿತಿ ಬಗ್ಗೆ ಹೇಳಿದ್ದಾರೆ. ಅದಕ್ಕೆ ನಾನು ಹೇಳುವುದೇನೆಂದರೆ, ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಮತ್ತೆ ಬಜೆಟ್‌ನೊಳಗೆ ಶಿಕ್ಷಣಕ್ಕೆ ಹೆಚ್ಚು ಅನುದಾನವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಆರ್ಥಿಕ ಸ್ಥಿತಿಗಳ ಹಿನ್ನೆಲೆಯಲ್ಲಿ ಇದನ್ನು close ಮಾಡುತ್ತಿದ್ದೆಂದು ಹೇಳಿದ್ದಾರೆ. ಶಿಕ್ಷಣಕ್ಕೆ ಎಷ್ಟು ಮಹತ್ವ ಇದೆಯೆಂದರೆ, ಒಬ್ಬ ವ್ಯಕ್ತಿಯ ಸುಧಾರಣೆಗೆ, ಸಮಾಜದ ಸುಧಾರಣೆಗೆ ಮತ್ತು ದೇಶದ ಅಭಿವೃದ್ಧಿಗೆ ಶಿಕ್ಷಣ ಬಹಳ ಪ್ರಮುಖವಾದಂತಹ ಪಾತ್ರವನ್ನು ವಹಿಸುತ್ತದೆ. ಇದನ್ನು ಸರ್ಕಾರ ಗಮನಿಸಬೇಕು. ಶ್ರೀ ಕೊಠಾರಿ ಕಮಿಷನ್ "the future of the nation is shaped in the four walls of classroom" ಎಂದು ಹೇಳಿದ್ದಾರೆ. ಹೀಗೆಲ್ಲಾ ಇರುವಾಗ ನೀವು ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡಬೇಕಾಗುತ್ತದೆ. ಒಂದು ವೇಳೆ ಸರ್ಕಾರಕ್ಕೆ ಹಣಕಾಸಿನ ಕೊರತೆ ಇದ್ದಲ್ಲಿ, ಅದನ್ನು ಯಾವ ರೀತಿ ಸಂಗ್ರಹ ಮಾಡಬೇಕೆಂದು ಸರ್ಕಾರ ಚಿಂತನೆ ಮಾಡಬೇಕೇ ವಿನಃ ಅದನ್ನು ಬಂದ್ ಮಾಡತಕ್ಕಂಥ ಕೆಲಸ ಮಾಡಬಾರದು ಎಂಬ ವಿಚಾರವನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಸರ್ಕಾರ ಅಸಿವು ಯಾರಿಗೆ ಇದೆಯೋ ಅವರಿಗೆ ಅನ್ನಭಾಗ್ಯವನ್ನು ಕೊಟ್ಟಿದ್ದಾರೆ. ಸಂತೋಷ, ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಅದೇ ರೀತಿ ಜ್ಞಾನದ ಅಸಿವು ಯಾರಿಗೆ ಇದೆಯೋ ಅದನ್ನು ಕೂಡ ನೀಗಿಸತಕ್ಕಂಥ ಕೆಲಸ ಮಾಡಬೇಕು. ಇವತ್ತಿನ ದಿವಸ ಅದನ್ನು ಸರ್ಕಾರ ಮಾಡುತ್ತಿಲ್ಲ. ಅದು ಕೂಡ ಸರ್ಕಾರದ ಜವಾಬ್ದಾರಿ ಇದೆ. ಹಾಗಾಗಿ, ಒಟ್ಟಾರೆಯಾಗಿ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಸರ್ಕಾರ ಇದ್ದಾಗ ಅದನ್ನು ಮಾಡಿದ್ದೇವೆ, ನಾವು ರಾಜಕೀಯವಾಗಿ ಮಾಡಿಲ್ಲ. ಹಿಂದುಳಿದ ಜಿಲ್ಲೆಗಳಲ್ಲರತಕ್ಕಂಥ ಮಕ್ಕಳಿಗೆ ಉನ್ನತ ಶಿಕ್ಷಣ ಸಿಗಬೇಕು ಎನ್ನುವ ವಿಚಾರದೊಳಗೆ ನಾವು ಮಾಡಿದ್ದೇವೆ. Sub-Committee Report ಏನಿದೆ, ಅದನ್ನು ದಯವಿಟ್ಟು ವಾಪಸ್ಸು ಪಡೆದುಕೊಳ್ಳಬೇಕು. ಅದನ್ನು ಅಲ್ಲಿಂದ ಕೈಬಿಡಬೇಕೆಂದು ನಾನು ಮತ್ತೊಮ್ಮೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆಯನ್ನು ತಾವು ಕೂಡ ಕೇಳಿದ್ದೀರಿ. ನಿಮ್ಮ ಭಾಷಣವನ್ನು ಆ ಪೀಠದಿಂದದಲೇ ಮಾಡುತ್ತೀರೋ, ಇಲ್ಲವೇ ನಾನು ಈಗ ಪ್ರಾರಂಭ ಮಾಡಬಹುದೇ?

ವೈಸ್‌ಛೇರ್ಮನ್:– ಶ್ರೀ ಶಶೀಲ್ ಜಿ.ನಮೋಶಿಯವರೇ, ತಾವು ಮಾತನಾಡಿ. ನಾನು ಈ ಪೀಠದಲ್ಲಿ ಕುಳಿತಿದ್ದೇನೆ.

(ಗೊಂದಲ)

ಶ್ರೀ ಶಶೀಲ್ ಜಿ.ನಮೋಶಿ:– ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ೨ ವಿಶ್ವವಿದ್ಯಾಲಯಗಳನ್ನು ಮುಚ್ಚುತ್ತಿದ್ದಾರೆ ಎಂಬ ಸುದ್ದಿ ಮಾಡಿದೆ.

ವೈಸ್‌ಛೇರ್ಮನ್:– ಶ್ರೀ ಶಶೀಲ್ ಜಿ.ನಮೋಶಿಯವರೇ, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರವನ್ನು ಸ್ವಲ್ಪ ಓದಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಓದಿದ್ದೇನೆ. ಉತ್ತರದ ಬಗ್ಗೆ ಆಮೇಲೆ ಹೇಳುತ್ತೇನೆ. ನಡೆದಿರುವಂತಹ ವಿಷಯ ಎಲ್ಲರ ಗಮನಕ್ಕೂ ಬರಲಿ ಎಂದು ನಾವು ನೀವೆಲ್ಲಾ ಪ್ರಯತ್ನ ಮಾಡುತ್ತಿದ್ದೇವೆ. ಒಟ್ಟಾರೆಯಾಗಿ ಈ ವಿಶ್ವವಿದ್ಯಾಲಯಗಳನ್ನು ಮುಚ್ಚಬಾರದು ಎಂದು ನಮ್ಮೆಲ್ಲರ ಉದ್ದೇಶವಾಗಿದೆ. ಬಹಳ ಪ್ರಮುಖವಾಗಿ ನಮ್ಮ ಸರ್ಕಾರ ಮಾಡಿದೆ ಎನ್ನುವುದಲ್ಲ. It is all continuous process. ಈಗ ಅವರು ಹೇಳಿದಂತೆ ಡಾ.ಮನಮೋಹನ್ ಸಿಂಗ್ ರವರು National Knowledge Commission ಪ್ರಾರಂಭ ಮಾಡಿದರು. ಅವರು Higher Education ಗೆ ಜಗತ್ತಿನಲ್ಲಿ Gross Enrolment Ratio ಏನಿದೆಯೋ ಆ ಪ್ರಮಾಣದಲ್ಲಿ ಇಲ್ಲಿಯು ಕೂಡ ಹೆಚ್ಚಿಗೆ ಆಗಬೇಕು ಒತ್ತುಕೊಡಬೇಕೆಂದು ಮತ್ತು ಈಗಿನ ಯು.ಜಿ.ಸಿ. ಅಥವಾ Higher Education Council ಇತ್ಯಾದಿ ಎಲ್ಲಾ recommend ಮಾಡುತ್ತಿರುವುದು ಏನೆಂದರೆ, ಕನಿಷ್ಠ fifty percent Gross Enrollment Ratio ಇರಬೇಕೆಂದು ಎಲ್ಲರೂ ಪ್ರಯತ್ನ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ಈಗ ಏನು 9 ವಿಶ್ವವಿದ್ಯಾಲಯಗಳನ್ನು ಮುಚ್ಚಲು ಹೊರಟಿದ್ದಾರೆ. ಅಥವಾ ಕಳೆದ ಅವಧಿಯಲ್ಲಿ 7 ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಿದ್ದರು. ಇವೆಲ್ಲವನ್ನೂ ಎಲ್ಲಿ ಮಾಡಿದ್ದಾರೆಂದು ನಾನು ಒಂದೊಂದಾಗಿ ಹೇಳುತ್ತೇನೆ. ಅದು ಬೀದರ್‌ನಲ್ಲಾಗಲೀ, ಚಾಮರಾಜನಗರದಲ್ಲಾಗಲೀ, ಬಾಗಲಕೋಟೆಯಲ್ಲಾಗಲೀ, ಕೊಪ್ಪಳದಲ್ಲಾಗಲೀ ಮತ್ತು ಹಾವೇರಿಯಾಗಿರಲಿ. ಮಾನ್ಯ ಸಭಾಪತಿಯವರೇ, ಅಗತ್ಯವಿದ್ದಲ್ಲಿ ಇದನ್ನು ಮಾಡಬೇಕಲ್ಲವೇ? ಈಗ ಇಲ್ಲಿ ಶ್ರೀ ಎಂ.ಬಿ.ಪಾಟೀಲ್‌ರವರು ಇದ್ದಾರೆ. ಇತ್ತೀಚೆಗೆ ಅವರು ಬಹಳ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿಕೆದಾರರ ಸಮಾವೇಶ ಇತ್ಯಾದಿ ಎಲ್ಲಾ ಮಾಡಿದ್ದಾರೆ. ಅವರ thrust ಏನಿತ್ತು? Let the industry come, not in Bengaluru. ನೀವು ಬೇರೆ ಕಡೆ Two Tier Cities ಹಿಂದುಳಿದ ಭಾಗಕ್ಕೆ ಹೋಗಿ ಮಾಡಿ ಅಥವಾ ಕಲ್ಯಾಣ ಕರ್ನಾಟಕಕ್ಕೆ ಹೋಗಿ ಮಾಡಿ ಅಥವಾ ಕಿತ್ತೂರು ಕರ್ನಾಟಕದ ಭಾಗದಲ್ಲಿ ಮಾಡಿ. ಆದರೆ ಬೆಂಗಳೂರಿನಲ್ಲಿ ಅಲ್ಲ. ಇವೆಲ್ಲಾ ಗಮನದಲ್ಲಿಟ್ಟುಕೊಂಡು ಬೇರೆ ಬೇರೆ ಭಾಗದಲ್ಲಿ ಈ ವಿಶ್ವವಿದ್ಯಾಲಯಗಳನ್ನು ತೆಗೆಯಲು ಪ್ರಾರಂಭ ಮಾಡಿದ್ದಾರೆ. ನಾನು ಬಹಳ ಒತ್ತುಕೊಟ್ಟು ಹೇಳುವುದೇನೆಂದರೆ, it has been very minutely thought over.

(ಮುಂದು)

(224)11.3.2025/7.00/ಎಂ.ಎಂ-ವಿ.ಕೆ (ವೈಸ್ ಛೇರ್ಮನ್ ಉಪಸ್ಥಿತಿ)

ಶ್ರೀ ಶಶೀಲ್ ಜಿ. ನಮೋಶಿ (ಮುಂದು):-

ನಾನು ಕೊಪ್ಪಳದ ಒಂದು ಉದಾಹರಣೆ ಹೇಳುತ್ತೇನೆ. Aspirational Districts ಎಂದು ಹೇಳುತ್ತೇವೆ, it is nothing but Raichur and Yadgir. ಅಂದರೆ Raichur ಅಂಕಿ-ಅಂಶಗಳನ್ನು ತೆಗೆದುಕೊಂಡರೆ it is undivided Raichur. Undivided Raichur District means Kopal is also a part of it. ಕೊಪ್ಪಳ ಹೇಗೆ bifurcate ಆಯಿತು ಎಂದರೆ ರಾಯಚೂರು ವಿಭಜನೆಯಾದ ಮೇಲೆ ಕೊಪ್ಪಳ ಕೂಡ ಬಂತು. ಆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಕಾರಣದಿಂದ ಕೊಪ್ಪಳವು ಶಿಕ್ಷಣದಲ್ಲಿ ನಿಜವಾಗಿ ಹೇಳಬೇಕೆಂದರೆ, ಅಲ್ಲಿ ಕಡಿಮೆ GER (Gross Enrollment Ratio) ಇದೆ ಎಂದು ಅಲ್ಲಿ ಪ್ರಾರಂಭ ಮಾಡಿದ್ದಾರೆ. ನಾವು ಮಹಿಳೆಯರ ಶಿಕ್ಷಣಕ್ಕೆ ಒತ್ತು ಕೊಡಬೇಕಾಗಿದೆ. ಇನ್ನೊಂದು, ಎಸ್.ಸಿ., ಎಸ್.ಟಿ., ಮಹಿಳೆಯರಿಗೆ ಶಿಕ್ಷಣ ಕೊಡಬೇಕು. ಮುಂದುವರೆದಂತಹ communities ಆಗಲೀ, ಜನಾಂಗವಾಗಲೀ ಅಥವಾ ಹಣವಿದ್ದವರಿಗಲ್ಲ. ಇದು ಸಾಕಷ್ಟು ಚರ್ಚೆಯಾಯಿತು. ಮಾನ್ಯ ಪುಟ್ಟಣ್ಣನವರು ಹೇಳಿದರು, ಇವತ್ತು ಮಕ್ಕಳೆಲ್ಲಿದ್ದಾರೆ ಎಂದರೆ ಯು.ಎಸ್.ಎ ನಲ್ಲಿದ್ದಾರೋ, ಯೂರೋಪ್ ದೇಶದಲ್ಲಿ, ಅಲ್ಲಿ ಇಲ್ಲಿ ಎಂದು ಹೇಳುತ್ತಾರೆ. ಮನೆಯಲ್ಲಿ ಯಾರೂ ಇಲ್ಲ. ಆದರೆ ಎಸ್.ಸಿ., ಎಸ್.ಟಿ., ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಕೊಡುವಂತಹ ಪ್ರಯತ್ನ ಮಾಡಬೇಕಾಗಿದೆ. ಇವೆಲ್ಲಾ ವಿಶ್ವವಿದ್ಯಾಲಯಗಳು ಏನು ಸಂತೋಷ ತಂದುಕೊಡುತ್ತದೆ ಎಂದರೆ, ಇನ್ನಾದರೂ ಕೂಡ though there are facilities in bigger cities, ಬಡಜನರಿಗೆ ಮಗನಾದನೆ ಅವನು ಮೆರಿಟ್‌ನಲ್ಲಿ ಬಂದರೆ ಎಲ್ಲಿಯಾದರೂ ಕಳುಹಿಸಿಕೊಡುತ್ತೇನೆ, ಮಗಳನ್ನು ಎಲ್ಲಿಗೆ ಕಳುಹಿಸೋಣ? ೫೦-೬೦ ಕಿ.ಮೀ. ಒಳಗೆ ಬಸ್‌ನಲ್ಲಿ ಹೋಗಿ ಬಂದರೆ ಸರಿ ಆದರೆ ದೂರವಿದ್ದರೆ ಎಲ್ಲ ಕಳುಹಿಸೋಣ ಎನ್ನುತ್ತಾರೆ. ಆ ಒಂದು ಕಾರಣದಿಂದ ಈ ಎಲ್ಲಾ ಕಡೆ ನೀವು ಗಮನ ಹರಿಸಬಹುದು women enrollment is more. ಹೆಣ್ಣುಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಸೇರಬೇಕು. ನಾನು ಕೊಪ್ಪಳ ಜಿಲ್ಲೆಯ ಉದಾಹರಣೆ ಹೇಳುತ್ತೇನೆ. ಶೇ. ೬೦-೬೫ರಷ್ಟು girl students have enrolled. ಏಕೆಂದರೆ ಅವರು ಹೊರಗೆ ಹೋಗುವುದಿಲ್ಲ. ಅವರು ದೂರ ಹೋಗುವುದಕ್ಕಾಗುವುದಿಲ್ಲ. ಈ ತರಹದ ವಾತಾವರಣ ಇಟ್ಟುಕೊಂಡು ಬಹಳ ಗಮನಹರಿಸಿ ನಾವು ಈ ಎಲ್ಲಾ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡಿದ್ದೇವೆ ಎಂದಾಗ ನನಗನ್ನಿಸುತ್ತದೆ this is the most essential…

ಶ್ರೀ ಎಂ.ಬಿ. ಪಾಟೀಲ (ಭಾರಿ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಸಚಿವರು):- ಮಾನ್ಯ ನಮೋಶಿಯವರೇ, ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಹೇಳುತ್ತಿದ್ದೀರಿ. Women's University ಇದ್ದುದ್ದನ್ನ ನಿಮ್ಮ ಸರ್ಕಾರ ಇದ್ದಾಗ General University ಮಾಡುವುದಕ್ಕೆ ಹೋಗಿದ್ದಿರಲ್ಲಾ? ರಾಜ್ಯದ ಏಕೈಕ ಮಹಿಳಾ ವಿಶ್ವವಿದ್ಯಾನಿಲಯವಾದ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವನ್ನು General University ಮಾಡಬೇಕೆಂದು ಹೋಗಿದ್ದರು. ಅದರ campaign ಬಹಳ ಜೋರಿತ್ತು.

ಶ್ರೀ ಶಶೀಲ್ ಜಿ. ನಮೋಶಿ:- ಮಾನ್ಯ ಸಚಿವರೇ, ಅಲ್ಲಿ ಏನು ಮಾಡಬೇಕಾಗಿತ್ತು ಎಂದರೆ ಮಹಿಳೆಯರಿಗೆ ಯಾವ ರೀತಿ ಶಿಕ್ಷಣ ಕೊಡಬೇಕು ಎಂದು ಮುಂಬೈನಲ್ಲಿ ಇದೇ ತರಹದ ಒಂದು ಸಂಸ್ಥೆಯಲ್ಲಿ ವಿಶೇಷವಾಗಿ ಏನೇನು ಮಾಡಬೇಕೆಂದು ಅದನ್ನು ಅಧ್ಯಯನ ಮಾಡಿಕೊಂಡು ಬಂದು ಮಾಡಿ ಎಂದು ಸಲಹೆಗಳಿತ್ತು. But it has become a…..

ಶ್ರೀ ಎಂ.ಬಿ. ಪಾಟೀಲ:- ಶ್ರೀ ಅರುಣ್ ಶಹಾಪುರ್ ಮತ್ತು ಇನ್ನಿತರ ಸದಸ್ಯರು ಈಗ ಇಲ್ಲಿಲ್ಲ. ಎಲ್ಲರೂ ಈಗ ಅದನ್ನು ಚೇಂಜ್ ಮಾಡಿ General University.

ಶ್ರೀ ಎನ್. ರವಿಕುಮಾರ್:- ನಾವು General University ಮಾಡುವುದಕ್ಕೆ ಹೋಗಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಶಶೀಲ್ ಜಿ. ನಮೋಶಿ:- ಮಾನ್ಯ ಸಭಾಪತಿಯವರೇ, ಮಹಿಳಾ ವಿಶ್ವವಿದ್ಯಾನಿಲಯ ಎಂದರೆ ಮಹಿಳೆಯರಿಗಾಗಿ ಅಷ್ಟೇ ಅಲ್ಲ ಮಹಿಳೆಯರು ಏನು ವಿಷಯಗಳನ್ನು ತೆಗೆದುಕೊಳ್ಳಬೇಕು, ಏನನ್ನು ಅಧ್ಯಯನ ಮಾಡಬೇಕೆಂದು ಕೆಲವು ಸಂಸ್ಥೆಗಳಿವೆ. ಮುಂಬೈನಲ್ಲಿ ಕೆಲವು ಸಂಸ್ಥೆಗಳಿವೆ ನನಗೆ ಅದರ ಹೆಸರು ಜ್ಞಾಪಕಕ್ಕೆ ಬರುತ್ತಿಲ್ಲ. ಅವರು ನಿರ್ದಿಷ್ಟವಾಗಿ ಅದೇ ಕೆಲಸವನ್ನು ಮಾಡುತ್ತಾರೆ. ಆ ಕೆಲಸವನ್ನು ಇಲ್ಲಿ ಮಾಡಲಿಲ್ಲ, it has become one of the Conventional Universities. Affiliated Universities ತರಹ ಆಯಿತು. ಅದಕ್ಕೆ ಒತ್ತು ಕೊಟ್ಟು ಎಲ್ಲರಿಗೂ ಮಾಡುವಂತಹ gender based ಬೇಡ ಎಂದು ಪ್ರಯತ್ನ ಮಾಡಿರಬಹುದು. ನಾನಿಲ್ಲಿ ಹೆಳುವುದೇನೆಂದರೆ, we have to concentrate the GER more on ಮಹಿಳೆಯರಿಗೆ, ಹೆಣ್ಣುಮಕ್ಕಳಿಗೆ ಎಸ್.ಸಿ., ಎಸ್.ಟಿ., ಮಕ್ಕಳಿಗೆ ಅದರಲ್ಲಿಯೂ ಅಲ್ಪಸಂಖ್ಯಾತ ಹೆಣ್ಣುಮಕ್ಕಳ ಶಿಕ್ಷಣ ಬಹಳ ಕಡಿಮೆ ಇದೆ. We must give more thrust to them. ಆ ಕೆಲಸ ಮಾಡದೇ ಇರುವಂತಹ ಸಂದರ್ಭದಲ್ಲಿ ನಾವು ಇದನ್ನು ಮಾಡಬಾರದು. ಉಪ ಮುಖ್ಯಮಂತ್ರಿಗಳಾದ ಮಾನ್ಯ ಡಿ.ಕೆ. ಶಿವಕುಮಾರ್‌ರವರು ಅವರಿಗೆ sufficient land ಕೊಟ್ಟಿಲ್ಲ ಎಂದು ಹೇಳಿದರು. That was not the intention. ಹಿಂದೆ ಒಂದು ಕಾಲವಿತ್ತು. ವಿಶ್ವವಿದ್ಯಾನಿಲಯ ಮಾಡಬೇಕೆಂದರೆ, ೪೦೦ ಎಕರೆ ಜಾಗ ಕೊಡಿ ಎಂದು ಕೇಳುತ್ತಿದ್ದರು. ಎಲ್ಲಾ ಕಡೆಯೂ ಪಿ.ಜಿ. ಸೆಂಟರ್‌ಗಳನ್ನು ಏನು ಪ್ರಾರಂಭ ಮಾಡಿದರು, ಗುಲ್ಬರ್ಗ ವಿಶ್ವವಿದ್ಯಾನಿಲಯ 1972ರಲ್ಲಿ it was a Post Graduation Centre under the Karnataka University. 1972ರಲ್ಲಿ ಪಿ.ಜಿ. ಸೆಂಟರ್ ಆಗಿತ್ತು, 1982ರಲ್ಲಿ ವಿಶ್ವವಿದ್ಯಾನಿಲಯ ಆಯಿತು. ಅದೇ ರೀತಿ ಅನೇಕ ವಿಶ್ವವಿದ್ಯಾನಿಲಯಗಳು ಬೀದರ್ ಇರಬಹುದು, ರಾಯಚೂರು ಅಥವಾ ಗುಲ್ಬರ್ಗ ವಿಶ್ವವಿದ್ಯಾನಿಲಯ ತೆಗೆದುಕೊಂಡರೆ ಅದನ್ನು ಪಿ.ಜಿ. ಸೆಂಟರ್ ಮಾಡಿದ್ದರು and further they have been made as a university. Aspirational Districts ನಲ್ಲಿ ಎಲ್ಲಿ ಅಗತ್ಯವಿದೆಯೋ ಅಲ್ಲಿಯೂ ರದ್ದು ಮಾಡಿದರು ಅದು ನನಗೆ ಸರಿ ಅನಿಸಲಿಲ್ಲ. ಎಲ್ಲಿ ಒತ್ತು ಕೊಡಬೇಕೆನ್ನುತ್ತೇವೆ ಅದನ್ನು ಬಿಟ್ಟು ನೀವು ಬೇರೆ ಕಡೆ ಮಾಡಿದರೆ ಹೇಗೆ ಎಂಬುದು ನನ್ನ ಪ್ರಶ್ನೆ. ಅವರು ಕೇಳುತ್ತಿರುವುದೇನು, ನಮಗೆ ನೂರಾರು ಎಕರೆ ಜಮೀನು ಕೊಡಿ, ಕಟ್ಟಡ ಕೊಡಿ ಎಂದು ಏನೂ ಕೇಳಿಲ್ಲ. ಕೊಡಗು ವಿಶ್ವವಿದ್ಯಾನಿಲಯ ಏನೇನು ಕೆಲಸ ಮಾಡಿದೆ ಎಂದು ಮಾನ್ಯ ಸುಜಾ ಕುಶಾಲಪ್ಪನವರು ಮಾತನಾಡುತ್ತಾರೆಂದು ನನಗನ್ನಿಸುತ್ತದೆ. ಆದರೆ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ, out of the affiliation fees only, ಅಲ್ಲಿ 14,೬೦೦ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಾರೆ. ಆಶ್ಚರ್ಯವೇನೆಂದರೆ, ಅಲ್ಲಿ ಹೆಚ್ಚಾಗಿ ಎಸ್.ಸಿ., ಎಸ್.ಟಿ., ಹೆಣ್ಣುಮಕ್ಕಳೇ ಓದುತ್ತಿದ್ದಾರೆ. ಇದು ಸಂತೋಷ ಕೊಡುತ್ತದೆ ಜೊತೆಗೆ ಆಶ್ಚರ್ಯವಾಗುತ್ತದೆ. ನಾವು ಕೂರ್ಗ್ ಇತ್ಯಾದಿ ಕಡೆಗಳಲ್ಲಿ ಸಾಕಷ್ಟು ಮುಂದುವರೆದ ಜನ ಇರಬಹುದು ಎಂದು ತಿಳಿದುಕೊಳ್ಳುತ್ತೇವೆ. ಆದರೆ ಅಲ್ಲಿ ಒಂದು ಕಡೆ ಬೇಕಾದಷ್ಟು ಶ್ರೀಮಂತರಿದ್ದಾರೆ ಇನ್ನೊಂದು ಕಡೆ ಅಷ್ಟಾಗಿ ಶ್ರೀಮಂತರಲ್ಲ. Common people are there. ನನಗೆ ಆಶ್ಚರ್ಯ ತಂದುಕೊಟ್ಟ ವಿಚಾರವೆಂದರೆ, ಇಡೀ ಜಿಲ್ಲೆಯಲ್ಲಿ ಇವತ್ತು ಕೂಡ ಬೆಂಗಳೂರಿನಲ್ಲಿ ಲೆಕ್ಕ ಮಾಡಿ ನೋಡಿದರೆ ಕನಿಷ್ಟವೆಂದರೂ ೫೦೦ ಕಡೆಗಳಲ್ಲಿ ಎಂ.ಸಿ.ಎ., ಬಿ.ಸಿ.ಎ., ಎಂ.ಬಿ.ಎ. ಕಾಲೇಜುಗಳಿವೆ. ಅಲ್ಲಿ ಒಂದು ಕಾಲೇಜೂ ಇಲ್ಲ. There is not a single MCA or

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

BCA college in Kodagu. ಈಗ ಹೊಸದಾಗಿ ವಿಶ್ವವಿದ್ಯಾನಿಲಯ ಮಾಡಿದಾಗ ಅವೆಲ್ಲವನ್ನೂ ಪ್ರಾರಂಭ ಮಾಡಿದ್ದಾರೆ. What is necessary, ಅದನ್ನು ವಿಶ್ವವಿದ್ಯಾನಿಲಯಗಳಲ್ಲಿ ಮಾಡುವುದಕ್ಕೆ ಹೊರಟಿದ್ದಾರೆ, ಅದಕ್ಕೆ ಅವಕಾಶ ಕೊಡಬೇಕು, ಮುಚ್ಚಬಾರದು ಎಂದು ಒತ್ತು ಕೊಟ್ಟು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. National Knowledge Commission ಅನ್ನು backward talukas ಎಂದೇನು ನಾವು ಹೇಳುತ್ತೇವೆ ಹಿಂದುಳಿದ ಜಿಲ್ಲೆಗಳ ಬಗ್ಗೆ ಡಾ॥ ಡಿ.ಎಂ. ನಂಜುಂಡಪ್ಪ ವರದಿಯನ್ನು ನಾವು ಯಾವಾಗಲೂ refer ಮಾಡುತ್ತೇವೆ. ಆದರೆ ನಾವು ಇಲ್ಲಿ ಮುಂದೆ ಹೋಗಿ; 'ಮುಂಗೈ ಜೋರಿದ್ದವರು ಜಾಸ್ತಿ ಮಾಡಿಕೊಂಡರು' ಎಂಬ ಹಾಗೆ ನಮ್ಮಲ್ಲಿ ಬಜೆಟ್‌ನಲ್ಲಿ ಮಾತನಾಡಲು ಅವಕಾಶ ಇದ್ದಾಗ ನಾನು ಇದನ್ನು ತೆಗೆದುಕೊಂಡು ಬರುತ್ತೇನೆ. ಕೆಲವು ತಾಲ್ಲೂಕುಗಳಲ್ಲಿ 10-12 ವಸತಿ ಶಾಲೆಗಳಿವೆ. ಕೆಲವು ತಾಲ್ಲೂಕುಗಳಲ್ಲಿ ಕೇವಲ ಮೂರಿದೆ. Imbalances ಅನ್ನು ನಾವೇ ಸೃಷ್ಟಿಸುತ್ತಿದ್ದೇವೆ. To rectify those imbalances, we are starting these Universities, and this was considered by those committees. For the establishment of these Universities, ಪ್ರೊ. ಜಿ. ಹೇಮಂತ್ ಕುಮಾರ್‌ರವರ ನೇತೃತ್ವದಲ್ಲಿ ಎರಡು ಸಮಿತಿಗಳನ್ನು ರಚನೆ ಮಾಡಿದ್ದಾರೆ ಎಂದು ಮಾನ್ಯ ಬಸವರಾಜ ಬೊಮ್ಮಾಯಿಯವರ ಬಜೆಟ್‌ನಲ್ಲಿ ಕೂಡ ಘೋಷಣೆ ಮಾಡಿದ್ದರು. ಇನ್ನೊಂದು ಕಮಿಟಿಯನ್ನು for assets and liabilities ಗೆ ರಚನೆ ಮಾಡಿರುವುದಕ್ಕೆ ನಾವು ಬಹಳ ಪ್ರಶಂಸೆ ಮಾಡಬೇಕು. Liabilities ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ. Assets were bifurcated, ಅಲ್ಲಿಗೆ ಎಷ್ಟು ಹುದ್ದೆಗಳು ಹೋಗಬೇಕೋ ಅಷ್ಟು ಹುದ್ದೆಗಳು ಹೋಗಲಿ. Human Resources bifurcate ಮಾಡಿದ್ದಾರೆ. ರಾಯಚೂರು ಜಿಲ್ಲೆಯವರು ರಾಯಚೂರಿಗೆ ಹೋಗಿ. ನಾನು ಉದಾಹರಣೆಗೆ ಹೇಳುತ್ತಿದ್ದೇನೆ. ಅದೇ ರೀತಿ ಕೊಪ್ಪಳದಲ್ಲಿ ಬಳ್ಳಾರಿ ಜಿಲ್ಲೆಯಿಂದ bifurcate ಆಯಿತು. ಕೊಪ್ಪಳ ಜಿಲ್ಲೆಯ ಭಾಗದವರು ಅಲ್ಲಿಯೇ ಇದ್ದು ಕಲಿಸಿರಿ. ಆ ಪಿ.ಜಿ. ಸೆಂಟರ್‌ನಲ್ಲಿ ಯಾರು ತರಗತಿಗಳನ್ನು ನಡೆಸುತ್ತಿದ್ದರು ಅವರು ವಾಪಸ್ ಬರುವುದಕ್ಕೆ ಬಿಡಲಿಲ್ಲ, you continue there ಎಂದು ಹೇಳಿದ್ದಾರೆ. ಇವೆಲ್ಲಾ ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡು ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡಿದ್ದಾರೆ. ಎಲ್ಲಿಯೂ ಜಾಗವನ್ನು ಹೆಚ್ಚಾಗಿ ಕೇಳಿಲ್ಲ. There was a time, ವಿಶ್ವವಿದ್ಯಾನಿಲಯಗಳಿಗೆ ಕನಿಷ್ಟ 100 ಎಕರೆ, 200 ಎಕರೆ ಕೊಡಿ ಇದು ಏತಕ್ಕೆ ಬೇಕು? ಇವತ್ತು ಅದು ಬೇಕಾಗಿಲ್ಲ. ಇವತ್ತು technology ಎಷ್ಟು ದೊಡ್ಡದಾಗಿ ಬೆಳೆದಿದೆ ಎಂದರೆ, I don't have that exact unified... ಬಹುಶಃ ಸಚಿವರು ಅದನ್ನು ಹೇಳಬೇಕು. UUCMS (Unified University and College Management System), ಅದನ್ನು ನಾನು ನನ್ನ ಸಂಸ್ಥೆಯಲ್ಲಿ ಪ್ರಾರಂಭದಲ್ಲಿ 10 ಕಾಲೇಜಿನಲ್ಲಿ ಮಾಡಲು ತೆಗೆದುಕೊಂಡಿದ್ದೇನೆ. ಅದರಿಂದ advantages ಏನೆಂದರೆ, Human Resource Management, Salary, Bills etc., ನಮಗೆ ಬಹಳ ದೊಡ್ಡದಾದಂತಹ establishment ಬೇಕಾಗಿತ್ತು. ಅಲ್ಲಿ clerical ಸಿಬ್ಬಂದಿಗಳು 40ಜನ ಇದ್ದವರು ಈಗ ಬರೀ 6 ಜನರಿಂದ ಕೆಲಸ ಮಾಡಿಕೊಳ್ಳುತ್ತಿದ್ದಾರೆ. It is not necessary.

ವೈಸ್ ಛೇರ್ಮನ್:- ಸರ್ಕಾರಕ್ಕೆ ಏನನ್ನು ಹೇಳುತ್ತೀರಿ ಎಂಬುದನ್ನು ತಿಳಿಸಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಶಶೀಲ್ ಜಿ. ನಮೋಶಿ:- ಮಾನ್ಯ ಸಭಾಪತಿಯವರೇ, ನನ್ನ ಪಾಯಿಂಟ್ ಇಷ್ಟೇ, ಅಗತ್ಯವಾಗಿದ್ದಂತಹ ಭಾಗಗಳಲ್ಲಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಿದ್ದಾರೆ. ದಯಮಾಡಿ the government should give a serious act. ಏಕೆಂದರೆ, ಈಗಾಗಲೇ ಹೇಳಿಕೆ ಕೊಟ್ಟಿದ್ದಾರೆ. ನಾವು ಬಂದ್ ಮಾಡುತ್ತೇವೆಂದು ಹೇಳಿಲ್ಲ. ಮಾನ್ಯ ಡಿ.ಕೆ. ಶಿವಕುಮಾರ್‌ರವರು ಸಹ let the report come ಎಂದು ಹೇಳಿದ್ದಾರೆ.

ವೈಸ್ ಛೇರ್ಮನ್:- ಅಂದರೆ ಸರ್ಕಾರದ ಉತ್ತರ ಇಲ್ಲ.

ಶ್ರೀ ಶಶೀಲ್ ಜಿ. ನಮೋಶಿ:- ವರದಿಯನ್ನು ತರಿಸಿಕೊಳ್ಳಿ. ಅಗತ್ಯವಾದ ವಿಷಯಕ್ಕೆ ಏನು ಮಾಡಬೇಕು ಎಲ್ಲಿ ಗಮನಹರಿಸಬೇಕೋ ಅದನ್ನು ಮಾಡಿ ಆದರೆ ದಯವಿಟ್ಟು ಅದನ್ನು ಮುಚ್ಚುವುದಕ್ಕೆ ಹೋಗಬೇಡಿ, ನಮಗೆ ಅದರ ಸಹಮತವಿಲ್ಲ. ಹೆಣ್ಣುಮಕ್ಕಳಿಗೆ ಮತ್ತು ದಲಿತರಿಗೆ ಶಿಕ್ಷಣ ಕೊಡಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

(ಮುಂದು)

(225) 11.03.2025 (7.10) ಹೆಚ್‌ವಿ.ವಿಕೆ (ವೈಸ್ ಛೇರ್ಮನ್ ಉಪಸ್ಥಿತಿ)

ಶ್ರೀ ಡಿ.ಎಸ್. ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಸನ್ಮಾನ್ಯ ಸಭಾಪತಿಯವರೇ, ಕಳೆದ ಒಂದು ತಿಂಗಳಿನಿಂದ ರಾಜ್ಯದಲ್ಲಿ ವಿಶ್ವವಿದ್ಯಾಲಯಗಳನ್ನು ಮುಚ್ಚುವ ಅಥವಾ ಮರ್ಜ್ ಮಾಡುವ ಬಗ್ಗೆ ನಿರಂತರವಾಗಿ ಚರ್ಚೆಗಳು ನಡೆಯುತ್ತಿವೆ. ಹಿಂದೆ ಮಾನ್ಯ ಮನಮೋಹನ್ ಸಿಂಗ್‌ರವರ ನೇತೃತ್ವದಲ್ಲಿ National Knowledge Commission ಅನ್ನು ಸ್ಥಾಪನೆ ಮಾಡಲಾಯಿತು. ಜನಸಾಮಾನ್ಯರಿಗೆ, ಮಕ್ಕಳಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗದವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ National Knowledge Commission ಅಸಮಾನತೆಯನ್ನು ಹೋಗಲಾಡಿಸಬೇಕೆಂದು ಆಲೋಚನೆ ಮಾಡಿ, ಹೆಚ್ಚು ವಿಶ್ವವಿದ್ಯಾಲಯಗಳು ಮತ್ತು ಸ್ವಾಯತ್ತ ಕಾಲೇಜುಗಳನ್ನು ಸ್ಥಾಪನೆ ಮಾಡುವ ಸಲಹೆಯನ್ನು ನೀಡಿತ್ತು. ನಮ್ಮ ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರ ಅಸ್ತಿತ್ವದಲ್ಲಿ ಇದ್ದಂತಹ ಸಂದರ್ಭದಲ್ಲಿ, ಇಲ್ಲಿ ಸುಮಾರು 10 ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಲಾಯಿತು. ಆಗ ಏಕಾಏಕಿ ಸುಮ್ಮನೆ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಲಿಲ್ಲ. ಅಧ್ಯಯನ ಮಾಡಿ, ಎಲ್ಲಿ ಹಿಂದುಳಿದ ಜಿಲ್ಲೆಗಳಿವೆ ಮತ್ತು Gross Enrollment Ratio ಎಲ್ಲಿ ಕಡಿಮೆ ಇದೆ, ಅಂತಹ ಕಡೆಗಳಲ್ಲಿ ಜಿಲ್ಲೆಗೊಂದು ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಬೇಕೆನ್ನುವ ಉದ್ದೇಶದಿಂದ ಅವುಗಳನ್ನು ಪ್ರಾರಂಭ ಮಾಡಲಾಯಿತು. ಇವುಗಳನ್ನು ಪ್ರಾರಂಭ ಮಾಡುವಾಗ, ಆರ್ಥಿಕ ಹೊರೆ ಎಷ್ಟು ಬರುತ್ತದೆ ಎನ್ನುವುದರ ಬಗ್ಗೆ ಅಧ್ಯಯನ ಮಾಡಿ, ಆರ್ಥಿಕ ಇಲಾಖೆಯವರೊಂದಿಗೆ ಚರ್ಚೆ ಮಾಡಿ ನಿರ್ಧಾರ ಕೈಗೊಳ್ಳಲಾಯಿತು. ಕೇವಲ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟರೇ ಒಂದು ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಬಹುದು, ಆ ಮೂಲಕ ಉನ್ನತ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬಹುದು ಎನ್ನುವ ಕಾರಣಕ್ಕಾಗಿ ಹಿಂದೆ ಕೇವಲ ಎರಡು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಎಲ್ಲೆಲ್ಲಿ ಪಿ.ಜಿ., ಕೇಂದ್ರಗಳಿದ್ದವು, ಅಲ್ಲಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಲಾಯಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯ ವಿಶ್ವವಿದ್ಯಾಲಯದಲ್ಲಿ ಸುಮಾರು 64 ಜನ ಬೋಧಕೇತರ ಸಿಬ್ಬಂದಿಗಳು ಇದ್ದರು. ಹೊಸ ವಿಶ್ವವಿದ್ಯಾಲಯ ಪ್ರಾರಂಭವಾದ ಮೇಲೆ ಯು.ಯು.ಸಿ.ಎಂ.ಎಸ್., ಹಾಗೂ ಇತರೆ ಡಿಜಿಟಲೀಕರಣವಾದ ಮೇಲೆ ಕೇವಲ 16 ಬೋಧಕೇತರ ಸಿಬ್ಬಂದಿಗಳು ಅಲ್ಲಿದ್ದಾರೆ. ನಾವು ಆ ಭಾಗದಲ್ಲಿದ್ದಾಗಲೂ ಮತ್ತು ಈ ಭಾಗಕ್ಕೆ ಬಂದ ಮೇಲೂ ಹುದ್ದೆಗಳನ್ನು ಭರ್ತಿ ಮಾಡಬೇಕು ಎನ್ನುವ ನಿಟ್ಟಿನಲ್ಲಿ ಬಹಳಷ್ಟು ವರ್ಷಗಳಿಂದ ಹೋರಾಟಗಳನ್ನು ನಡೆಸಿದ್ದೇವೆ. ಹುದ್ದೆಗಳನ್ನು ಭರ್ತಿ ಮಾಡುವುದಿಲ್ಲ; ಆದರೆ, ಅಲ್ಲಿನ ಸಮಸ್ಯೆಗಳನ್ನು ಬಗೆಹರಿಸಿ ಎಂದು ನಾವು ಹೇಳುತ್ತಿದ್ದೇವೆ. ಮೊದಲಿಗೆ ಖಾಲಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡಬೇಕಾಗುತ್ತದೆ. ಅಲ್ಲಿಗೆ ನಾವು ಹೆಚ್ಚುವರಿ ಅನುದಾನವನ್ನು ಕೇಳುತ್ತಿಲ್ಲ. ಆದರೂ ಸಹ ಇವರು ಖಾಲಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ. ಖಾಲಿ ಹುದ್ದೆಗಳು ಭರ್ತಿಯಾಗದೇ, ಯಾವುದೇ ವಿಶ್ವವಿದ್ಯಾಲಯ ಅಥವಾ ಕಾಲೇಜುಗಳು ನಡೆಯುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಾನು ಕೊಡಗಿನ ಕುಶಾಲನಗರದಿಂದ ಬಂದವನು, ಅದು ನಮ್ಮ ಅಜ್ಜಿಯ ಊರಾಗಿದೆ. ದೂರದಿಂದ ನೋಡಿದರೆ ಎಲ್ಲವೂ ಚೆನ್ನಾಗಿ ಕಾಣುತ್ತದೆ. ಅದೊಂದು ಪ್ರವಾಸಿ ತಾಣವಾಗಿದೆ. ಅಲ್ಲಿರುವವರೆಲ್ಲರೂ ಸುಸಂಸ್ಕೃತರು ಮತ್ತು ತುಂಬಾ ತಿಳುವಳಿಕೆ ಇರುವವರೆಂದು ಮತ್ತು ಉನ್ನತ ಶಿಕ್ಷಣಕ್ಕೆ ಬೇಕಾದಂತಹ ಎಲ್ಲ ಅನುಕೂಲಗಳು ಇವೆ ಎಂದು ನಾವು ತಿಳಿದುಕೊಂಡಿದ್ದೆವು.

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)

ಸನ್ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಕೊಡಗು ಜಿಲ್ಲೆಯಲ್ಲಿ ಏತಕ್ಕೋಸ್ಕರ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಬೇಕು ಎನ್ನುವುದರ ಬಗ್ಗೆ ಅಧ್ಯಯನ ಮಾಡಲಾಯಿತು. ಆಗ ತಿಳಿದು ಬಂದಿರುವ ವಿಚಾರವೇನೆಂದರೇ, ಅಲ್ಲಿ ಉನ್ನತ ಶಿಕ್ಷಣವನ್ನು ಪಡೆಯುತ್ತಿರುವ first generation ರವರ ಪ್ರಮಾಣ ಸುಮಾರು ಶೇಕಡಾ 72ರಷ್ಟಿತ್ತು. ಅವರ ಅಜ್ಜ-ಅಜ್ಜಿ, ತಂದೆ-ತಾಯಿ ಇವರು ಯಾರೂ ಕಾಲೇಜಿಗೆ ಹೋಗಿರಲಿಲ್ಲ. 72 percent of the students are first into it.

ಸನ್ಮಾನ್ಯ ಸಭಾಪತಿಯವರೇ, 64ರಷ್ಟಿದ್ದ ಬೋಧಕೇತರ ಸಿಬ್ಬಂದಿಯ ಸಂಖ್ಯೆ ಈಗ 16ಕ್ಕೆ ಇಳಿದಿದೆ. ಈ ವಿಶ್ವವಿದ್ಯಾಲಯದವರು ಯಾರ ಮೇಲೂ ಅವಲಂಬಿತವಾಗಿಲ್ಲ. ತಮ್ಮಲ್ಲಿಯೇ ಇರುವಂತಹ ಸಂಪನ್ಮೂಲಗಳನ್ನು ಬಳಸಿಕೊಂಡು ಈ ವಿಶ್ವವಿದ್ಯಾಲಯವನ್ನು ನಡೆಸುತ್ತಿದ್ದಾರೆ. ಇವತ್ತಿನ ದಿನಮಾನಕ್ಕೆ ಅವಶ್ಯಕತೆ ಇರುವಂತಹ ಎಂ.ಬಿ.ಎ., ಎಂ.ಸಿ.ಎ., ಗಳಂತಹ ವಿಷಯಗಳನ್ನು ವಿಶ್ವವಿದ್ಯಾಲಯದಲ್ಲಿ ಪ್ರಾರಂಭ ಮಾಡುವಂತಹ ಶಕ್ತಿ ಆ ವಿಶ್ವವಿದ್ಯಾಲಯಗಳಿಗೆ ಇದೆ. ಯು.ಯು.ಸಿ.ಎಂ.ಎಸ್., ಸಾಫ್ಟ್‌ವೇರ್ ಹಾಗೂ ಡಿಜಿಟಲೀಕರಣದಂತಹ ಒಳ್ಳೆಯ ವ್ಯವಸ್ಥೆಗಳು ಇರುವಾಗ, ಈ ಸರ್ಕಾರ ದಯಮಾಡಿ ವಿಶ್ವವಿದ್ಯಾಲಯಗಳನ್ನು ಮುಚ್ಚುವುದು ಅಥವಾ ಮರ್ಜ್ ಮಾಡುವಂತಹ ಕೆಲಸವನ್ನು ಮಾಡಬಾರದೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾಲಯಗಳನ್ನು ಮುಚ್ಚುವುದಾದರೇ ಮುಚ್ಚಲಿ, ವಿಶ್ವವಿದ್ಯಾಲಯಗಳನ್ನು ಮುಚ್ಚುವುದಕ್ಕೆ ಅನುದಾನದ ಕೊರತೆಯೇ ಕಾರಣವೆಂದು ಹೇಳುತ್ತಿದ್ದಾರೆ. ಈ ಸರ್ಕಾರದಲ್ಲಿ 34 ಜನ ಮಂತ್ರಿಗಳು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏತಕ್ಕೋಸ್ಕರ ಇರಬೇಕು? ಹತ್ತು ವಿಶ್ವವಿದ್ಯಾಲಯಗಳಿಗೆ ಸುಮಾರು 200-250 ಕೋಟಿ ರೂಪಾಯಿಗಳಷ್ಟು ಅನುದಾನದ ಅವಶ್ಯಕತೆ ಇದೆ. ಆದರೆ, ಅಷ್ಟು ಹಣವನ್ನು ಕೊಡುವುದಕ್ಕೆ ಈ ಸರ್ಕಾರದಿಂದ ಸಾಧ್ಯವಾಗುತ್ತಿಲ್ಲ. ಉನ್ನತ ಶಿಕ್ಷಣದ ಬಾಬ್ತಿಗೆ ಮೊದಲು ಆಯವ್ಯಯದಲ್ಲಿ ಶೇಕಡಾ 12ರಷ್ಟು ಅನುದಾನವನ್ನು ನೀಡಲಾಗುತ್ತಿತ್ತು. ಈಗ ಕೇವಲ ಶೇಕಡಾ 1.6ರಷ್ಟು ನೀಡಲಾಗುತ್ತಿದೆ. ಈ ಪ್ರಮಾಣದ ಅನುದಾನದಲ್ಲಿ ವಿಶ್ವವಿದ್ಯಾಲಯಗಳನ್ನು ನಿರ್ವಹಣೆ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ಮಾನ್ಯ ಉನ್ನತ ಶಿಕ್ಷಣ ಸಚಿವರು ಹೆಚ್ಚಿನ ಅನುದಾನವನ್ನು ಕೇಳಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಒಂದು ಆಶ್ಚರ್ಯದ ಸಂಗತಿ ಎಂದರೆ, ಈ ಸರ್ಕಾರದ ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸುವಂತಹ ಇವರ ಕಾರ್ಯಕರ್ತರಿಗೆ ಮಾಸಿಕ 40,000 ರೂಪಾಯಿಗಳನ್ನು ನೀಡಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಈ ಸರ್ಕಾರದ ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸುವ ಅಧ್ಯಕ್ಷರಿಗೆ 40,000 ರೂಪಾಯಿಗಳನ್ನು ನೀಡಲಾಗುತ್ತಿದೆ. ತಾಲ್ಲೂಕು ಮಟ್ಟದಲ್ಲಿ ಈ ಕಾರ್ಯ ನಿರ್ವಹಿಸುತ್ತಿರುವವರಿಗೆ 10,000 ರೂಪಾಯಿಗಳನ್ನು ನೀಡಲಾಗುತ್ತಿದೆ. ಏತಕ್ಕೋಸ್ಕರ ಇವರುಗಳಿಗೆ ಇಷ್ಟೊಂದು ಮೊತ್ತವನ್ನು ವೆಚ್ಚ ಮಾಡುತ್ತಿರುವುದು? ಇದರ ಬದಲಿಗೆ ವಿಶ್ವವಿದ್ಯಾಲಯಗಳಿಗೆ ಅನುದಾನವನ್ನು ನೀಡಲಿ. ಕೆಲವು ವಿಶ್ವವಿದ್ಯಾಲಯಗಳಿಗೆ ಸರ್ಕಾರ ಕೆಲವೊಂದು ಸಹಕಾರವನ್ನು ನೀಡಿದರೆ, ಆ ವಿಶ್ವವಿದ್ಯಾಲಯಗಳು ಸ್ವತಂತ್ರ್ಯವಾಗಿ ನಡೆದುಕೊಂಡು ಹೋಗುತ್ತವೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಇದರ ಬದಲಿಗೆ ವಿಶ್ವವಿದ್ಯಾಲಯಗಳನ್ನು ಮುಚ್ಚುವಂತಹ ಅಥವಾ ಮರ್ಜ್ ಮಾಡುವಂತಹ ಪ್ರಯತ್ನಗಳನ್ನು ಮಾಡಬಾರದೆನ್ನುವುದು ನನ್ನ ಸಲಹೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕುವೆಂಪು ವಿಶ್ವವಿದ್ಯಾಲಯದ ಬಗ್ಗೆ ನಾನು ಸಾಕಷ್ಟು ಬಾರಿ ಮಾತನಾಡಿದ್ದೇನೆ. ಅಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಸರ್ಕಾರ ಈಗಾಗಲೇ ಅಸ್ತಿತ್ವದಲ್ಲಿರುವ ವಿಶ್ವವಿದ್ಯಾಲಯಗಳನ್ನು ಉಳಿಸಿಕೊಂಡು, ಅವುಗಳ ಬಗ್ಗೆ ಸ್ವಲ್ಪ ಕಾಳಜಿ ವಹಿಸಿದರೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನಮ್ಮ ಮಕ್ಕಳಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಯಾವುದೇ ವಿಶ್ವವಿದ್ಯಾಲಯಗಳನ್ನು ಮುಚ್ಚದೇ, ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡುವಂತಾಗಬೇಕು, ಇವತ್ತು ನಾವು ಡೀಮ್ಡ್ ವಿಶ್ವವಿದ್ಯಾಲಯ ಮತ್ತು ಸ್ವಾಯತ್ತ ಕಾಲೇಜುಗಳ ಯುಗದಲ್ಲಿದ್ದೇವೆ. ಆದ್ದರಿಂದ ಹೆಚ್ಚಿನ ಮಟ್ಟದಲ್ಲಿ ಉನ್ನತ ಶಿಕ್ಷಣವನ್ನು ನೀಡುವ ಮೂಲಕ ನಮ್ಮ ದೇಶದ ಸರಾಸರಿ ಮತ್ತು ರಾಜ್ಯದ ಸರಾಸರಿ ಏನಿದೆ, ಅದನ್ನು ಬೇರೆ ಜಿಲ್ಲೆಗಳಲ್ಲಿಯೂ ತರುವಂತಹ ಕೆಲಸವನ್ನು ಮಾಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):- ಸನ್ಮಾನ್ಯ ಸಭಾಪತಿಯವರೇ, ಮಾಜಿ ರಾಷ್ಟ್ರಪತಿಗಳಾದ ಡಾ॥ಎ.ಪಿ.ಜೆ. ಅಬ್ದುಲ್ ಕಲಂರವರು, "ಊಟ ಹಾಳಾದರೆ ಒಂದು ದಿನದ ನಷ್ಟ; ಬೆಳೆ ಹಾಳಾದರೆ ಒಂದು ವರ್ಷದ ನಷ್ಟ; ವಿದ್ಯೆ ಹಾಳಾದರೆ ಜೀವನವೇ ನಷ್ಟ" ಎಂದು ಹೇಳಿದ್ದಾರೆ. ಅನ್ನ ದಾನ ಶ್ರೇಷ್ಠ ದಾನ; ಅದಕ್ಕಿಂತ ಉತ್ತಮವಾದ ದಾನ ವಿದ್ಯಾದಾನವಾಗಿದೆ. ಶಿಕ್ಷಣ ಪಡೆಯುವುದು ಸಂವಿಧಾನದಲ್ಲಿ ಮೂಲಭೂತ ಹಕ್ಕಾಗಿದೆ. ಈ ರಾಷ್ಟ್ರದ ಪ್ರತಿಯೊಬ್ಬ ಮಗುವಿಗೂ ವಿದ್ಯೆಯನ್ನು ಪಡೆಯುವಂತಹ ಹಕ್ಕಿದೆ; ಅದೇ ರೀತಿಯಲ್ಲಿ ಶಿಕ್ಷಣವನ್ನು ಕೊಡುವಂತಹ ಜವಾಬ್ದಾರಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದ ಮೇಲಿದೆ. ನಮ್ಮ ಕೊಡಗು ಜಿಲ್ಲೆಯಲ್ಲಿ ಸುಮಾರು 5,50,000 ಜನರಿದ್ದರೆ, ಅಲ್ಲಿನ ಜನಸಾಂದ್ರತೆ ಪ್ರಮಾಣ 135 ಆಗಿದೆ. ಇಡೀ ಕರ್ನಾಟಕ ರಾಜ್ಯದಲ್ಲಿನ ಜನಸಾಂದ್ರತೆಯ ಪ್ರಮಾಣ 319 ಆಗಿದೆ. ಆ ಜನಸಾಂದ್ರತೆಗೆ ಅನುಗುಣವಾಗಿ The Gross Enrollment Ratio ಸರಿಯಾಗಿದೆ. ಇಡೀ ರಾಜ್ಯದ Gross Enrollment Ratio 30ರಷ್ಟಿದ್ದರೆ, ಕೊಡಗು ಜಿಲ್ಲೆಯ Gross Enrollment Ratio 15ರಷ್ಟಿದೆ. ಕೊಡಗು ಜಿಲ್ಲೆಯಲ್ಲಿ ಅತೀ ಹೆಚ್ಚು ಮಳೆ ಬೀಳುವ ಗುಡ್ಡಗಾಡು ಪ್ರದೇಶವಿದೆ. ಇಲ್ಲಿ ಎಸ್.ಸಿ., ಎಸ್.ಟಿ. ಮತ್ತು ಗಿರಿಜನರು ಶೇಕಡಾ 50ರಷ್ಟಿದ್ದಾರೆ. ಮೊದಲನೆಯ ಬಾರಿಗೆ ಪದವೀಧರರಾಗಿರುವ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಇದರಿಂದಾಗಿ ಬಹು ಬೇಗ ಮದುವೆಯಾಗುವುದನ್ನು ತಡೆಯುವುದಕ್ಕೆ ಸಾಧ್ಯವಾಗಿದೆ. ಒಂದು ಕುಟುಂಬದಲ್ಲಿ ಮೊದಲನೆಯ ಬಾರಿಗೆ ಪದವೀಧರರಾಗುತ್ತಿದ್ದಾರೆ. ಇವರ ಪ್ರಮಾಣ ಶೇಕಡಾ 72ರಷ್ಟಿದೆ. ಕೊಡಗಿನಲ್ಲಿ ಎಂ.ಬಿ.ಎ., ಎಂ.ಸಿ.ಎ., ಮತ್ತು ಕಾನೂನು ಕಾಲೇಜುಗಳು ಇಲ್ಲ. ರಾಜ್ಯದಲ್ಲಿ 245 ಇಂಜಿನಿಯರಿಂಗ್ ಕಾಲೇಜುಗಳು ಇವೆ. ಸುಮಾರು 1,06,280 ವಿದ್ಯಾರ್ಥಿಗಳ ಪೈಕಿ 32,379 ಸೀಟುಗಳು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಖಾಲಿ ಇವೆ.

(ಮುಂದು)

(226) 11.3.2025/7.20/ ಪಿಕೆ:ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

ಡಾ: ಧನಂಜಯ ಸರ್ಜಿ (ಮುಂದುವರೆದಿದೆ)

ನಿಮ್ಮ ಕ್ಷೇತ್ರವಾದ ಚಿಂತಾಮಣಿಯಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಸ್ಯಾಂಕ್ಷನ್ ಮಾಡುವ ಅವಶ್ಯಕತೆ ಏನಿದೆ? ಕೊಡಗಿನಿಂದ 150-200 ಕಿ.ಮೀ. ದೂರದಿಂದ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೋಸ್ಕರ ಮಂಗಳೂರಿಗೆ ಅಥವಾ ಮೈಸೂರಿಗೆ ಬರಬೇಕಾದರೆ, ಮೈಸೂರಿನಿಂದ 50 ಕಿ.ಮೀ.ನಷ್ಟು ದೂರ ಇರುವ ಚಿಂತಾಮಣಿಗೆ, empty seats ಇರುವಂತಹ ಸಂದರ್ಭದಲ್ಲಿ, ಇಂಜಿನಿಯರಿಂಗ್ ಕಾಲೇಜಿನ ಅವಶ್ಯಕತೆ ಏನಿದೆ? 25 ಮಹಾ ವಿದ್ಯಾಲಯಗಳಿಗೆ ನಿಜವಾಗಲೂ ಒಂದು G.R. ಅನ್ನು improvement ಮಾಡುವ ಜವಾಬ್ದಾರಿ ಇರುತ್ತದೆ. ಕೊಡಗು ಜಿಲ್ಲೆಯ ವಿದ್ಯಾರ್ಥಿಗಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡುವಂಥದ್ದು ನಮ್ಮ ಜವಾಬ್ದಾರಿ ಆಗಿರುತ್ತದೆ. ನಮ್ಮ ರಾಜ್ಯದಲ್ಲಿ ಒಬ್ಬ ಶಿಕ್ಷಕರಿರುವಂತಹ 7,000 ಶಾಲೆಗಳಿವೆ. 50 ಮಕ್ಕಳಿಗಿಂತ ಕಡಿಮೆ ಇರುವ ಶಾಲೆಗಳು ಶೇಕಡ 50 ರಷ್ಟಿದೆ. ಆ ನಿಟ್ಟಿನಲ್ಲಿ ನಿಜವಾಗಲೂ ಈ ವಿಶ್ವವಿದ್ಯಾಲಯಗಳನ್ನು ಬಂದ್ ಮಾಡಬೇಕೆಂದರೆ ಆ ಶಾಲೆಗಳನ್ನು ನಡೆಸುವುದು ಬೇಡ ಎಂದೆನಿಸುತ್ತದೆ. ಏಕೆಂದರೆ, ಅಲ್ಲೂ ಕೂಡ ಏನೂ ಉಪಯೋಗವಾಗುತ್ತಿಲ್ಲ, ಆ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದೆ, ಶಿಕ್ಷಕರ ಕೊರತೆ ಇದೆ. ಆ ಶಾಲೆಗಳನ್ನು ಮುಚ್ಚುವುದಿದ್ದರೆ ವಿಶ್ವವಿದ್ಯಾಲಯಗಳನ್ನೂ ಮುಚ್ಚಿ ಎಂದು ಹೇಳಬಯಸುತ್ತೇನೆ. ವಿದ್ಯಾಭ್ಯಾಸ ಕೊಡುವ ಜವಾಬ್ದಾರಿ ಸರ್ಕಾರದ್ದಾಗಿರುತ್ತದೆ. ಆ ನಿಟ್ಟಿನಲ್ಲಿ ಯಾವುದೇ ಕಾರಣಕ್ಕೂ ಮಹಾ ವಿದ್ಯಾಲಯಗಳನ್ನು, ವಿಶ್ವವಿದ್ಯಾಲಯಗಳನ್ನು ನಿಲ್ಲಿಸಬಾರದು. ನೀವೇನು ರೂ. 150 ಕೋಟಿ ಹಣವನ್ನು ಇಂಜಿನಿಯರಿಂಗ್ ಕಾಲೇಜುಗಳಿಗೆ ಸ್ಯಾಂಕ್ಷನ್ ಮಾಡಿದ್ದೀರೋ ಅದನ್ನು 9 ವಿಶ್ವವಿದ್ಯಾಲಯಗಳಿಗೆ ಹಂಚಿದರೆ 2-3 ವರ್ಷಗಳ ಕಾಲ ಅವುಗಳನ್ನು ಸರಾಗವಾಗಿ ನಡೆಸಬಹುದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಇನ್ನೂ ಮೂರು ಜನ ಮಾತನಾಡುವವರಿದ್ದಾರೆ. ಅವರ ಹೆಸರು ಲಿಸ್ಟ್‌ನಲ್ಲಿ ಇಲ್ಲ. ಅವರಿಗೆ ಕ್ಲ್ಯಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಗಳೆ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಗಮನ ಸೆಳೆಯುವ ಸೂಚನೆಯ ನೋಟಿಸಿಗೆ ಮಾನ್ಯ ಭೋಜೇಗೌಡರು ಸಹಿ ಹಾಕಿದ್ದರು. ಆದರೆ ತಾವು ಮಾನ್ಯ ಭೋಜೇಗೌಡರನ್ನು ಪೀಠದಲ್ಲಿ ಕೂರಿಸಿ ಹೊರಟು ಹೋದಿರಿ. ಆ ಸಂದರ್ಭದಲ್ಲಿ, ಪ್ರಶ್ನೆಯನ್ನು ಕೇಳಬೇಕಾದ ಮಾನ್ಯ ಭೋಜೇಗೌಡರೆ ಪೀಠದಲ್ಲಿ ಕುಳಿತುಕೊಂಡಿದ್ದರು. ಸದರಿ ವಿಷಯ ಕುರಿತು ಮಾತನಾಡಲು ನನಗೂ ಅವಕಾಶ ಕೊಡಿ ಎಂದು ನಾನು ಅವರನ್ನು ಕೇಳಿದಾಗ, ಅವರು, ಅವಕಾಶ ಕೊಡುತ್ತೇನೆ ಎಂದು ಹೇಳಿದ್ದರು.

ಸಭಾಪತಿಯವರು:– ಮುಖ್ಯಮಂತ್ರಿಗಳು ಕರೆದಿದ್ದರಿಂದ ನಾನು ಹೋಗಿದ್ದೆ. ನಿಮಗೂ ಮಾತನಾಡಲು ಅವಕಾಶ ಕೊಡುತ್ತೇನೆ.

ಡಾ: ಎಂ.ಸಿ.ಸುಧಾಕರ್:– ಮಾನ್ಯ ಸಭಾಪತಿಗಳೆ, ಈ ವಿಚಾರವಾಗಿ ಹಲವಾರು ಜನ ಸದಸ್ಯರು ಮಾತನಾಡಿದ್ದಾರೆ. ಇನ್ನೂ ಕೆಲವರು ಮಾತನಾಡುವುದಿದ್ದರೆ ಅವರಿಗೂ ಅವಕಾಶ ಕೊಡಿ. ನಾನು ಒಟ್ಟಿಗೆ ಉತ್ತರ ಕೊಡುತ್ತೇನೆ.

ಶ್ರೀಮತಿ ಹೇಮಲತಾ ನಾಯಕ್(ವಿಧಾನಸಭಾ ಕ್ಷೇತ್ರ)– ಮಾನ್ಯ ಸಭಾಪತಿಗಳೆ, ಮಾನ್ಯ ನಮೋಶಿಯವರು, ಮಾನ್ಯ ಸಂಕನೂರ, ಮಾನ್ಯ ಅರುಣ್‌ರವರೂ ಸೇರಿದಂತೆ ಅನೇಕ ಜನ ಸದಸ್ಯರು ಮಾತನಾಡಿದ್ದಾರೆ. ಕೊಪ್ಪಳ ವಿಶ್ವವಿದ್ಯಾಲಯವನ್ನು ಮುಚ್ಚುವಂತಹ ವಿಷಯವನ್ನು ಕೇಳಿದೆವು. "ಎಲ್ಲಾ ಅನಿಷ್ಟಕ್ಕೂ ಶನೀಶ್ವರನೇ ಕಾರಣ" ಎಂದು ಹೇಳಿದ ಹಾಗೆ, ಕೊಪ್ಪಳ ಜಿಲ್ಲೆ ಶಾಪಗ್ರಸ್ತ ಜಿಲ್ಲೆಯಾಗಿದೆ. ಹೈದರಾಬಾದ್–ಕರ್ನಾಟಕ ಭಾಗದಲ್ಲಿ ಸುಮಾರು 20% ಮಕ್ಕಳು ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. 80% ಮಕ್ಕಳು ವಂಚಿತರಾಗಿದ್ದಾರೆ. ಅವರು ಬಿ.ಎ. ಆದನಂತರ ಮುಂದೆ ಎಲ್ಲಿಗೆ ಹೋಗಬೇಕು ಎಂದು ಹೊಳೆಯದೇ ಪದವಿ ಶಿಕ್ಷಣವನ್ನು ಪಡೆಯದೇ ಹಾಗೆಯೇ ಉಳಿದುಬಿಡುತ್ತಾರೆ. ಒಂದು ವೇಳೆ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದೊಂದಿಗೆ ವಿಲೀನ ಮಾಡುವ ಬಗ್ಗೆ ಮಾತುಗಳನ್ನು ಹೇಳಿದರೆ ಆ ಕುರಿತು ನನ್ನದು ಒಂದು ಸ್ಪಷ್ಟನೆ ಇದೆ. ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಇದೆ, ಕನ್ನಡ ಅಧ್ಯಯನ ಸಂಸ್ಥೆ ಇದೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಇದೆ. ಇಲ್ಲಿರುವ ವಿದ್ಯಾರ್ಥಿನಿಯವರು ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯಕ್ಕೆ ಹೋಗುವುದಕ್ಕೆ ಆಗುತ್ತದೆಯೇ? ಈಗ ಕೊಪ್ಪಳದಲ್ಲೇ ವಿಶ್ವವಿದ್ಯಾಲಯ ಇರುವುದರಿಂದ, ಬಹಳಷ್ಟು ಪೋಷಕರು, ನಮ್ಮ ಮಕ್ಕಳಿಗೆ ಒಂದು ಉತ್ತಮ ಅವಕಾಶ ಸಿಕ್ಕಿದೆ ಎಂದು ಇಲ್ಲಿಗೆ ಕಳುಹಿಸಿ ಕೊಡುತ್ತಾರೆ. ಬೇರೆ ಕಡೆ ಶಿಫ್ಟ್ ಮಾಡುವಂಥದ್ದಾದರೆ ಅದು "ಎಲ್ಲಿಗೆ ಬಂತು ಸಂಗಯ್ಯ ಅಂದರೆ ಅಲ್ಲಿಗೆ ಬಂತು ಸಂಗಯ್ಯ" ಎಂದು ಹೇಳಿದ ಹಾಗೆ ಆಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗಳು ತಮ್ಮ ಮನಸ್ಸಿನ ಭಾವನೆಗಳನ್ನು ಹೇಳುತ್ತಿದ್ದಾರೆ. ಕೊಪ್ಪಳ ವಿಶ್ವವಿದ್ಯಾಲಯವು ಸರಿಯಾದ ಸಮಯದಲ್ಲಿ ಪರೀಕ್ಷೆಯ ಫಲಿತಾಂಶ ಪ್ರಕಟಿಸುತ್ತಾ ಬಂದಿದೆ, ವೇಳಾಪಟ್ಟಿಯಂತೆ ಪರೀಕ್ಷೆಗಳನ್ನು ನಡೆಸುತ್ತಾ ಬಂದಿದೆ. ಇದರಿಂದ ವಿದ್ಯಾರ್ಥಿಗಳಿಗೆ ತುಂಬಾ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಕೂಲವಾಗಿದೆ. ಒಂದುವೇಳೆ ವಿಶ್ವವಿದ್ಯಾಲಯ ಮುಚ್ಚಿದರೆ ವಿದ್ಯಾರ್ಥಿಗಳಿಗೆ ಕಷ್ಟವಾಗುತ್ತದೆ. ಪತ್ರಿಕೋದ್ಯಮದಲ್ಲಿ ಓದುವ ವಿದ್ಯಾರ್ಥಿಗಳು, ಪದವಿ ಪಡೆಯಲು ಬೇರೆ ಕಡೆ ಹೋಗದೇ ಕೊಪ್ಪಳದಲ್ಲಿಯೇ ಅದನ್ನು ಮುಂದುವರೆಸುವ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಾನು ಈ ಸರ್ಕಾರದಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ, ಅರಿಕೆ ಮಾಡಿಕೊಳ್ಳುತ್ತೇನೆ, ವಿನಂತಿ ಮಾಡಿಕೊಳ್ಳುತ್ತೇನೆ. ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯರು ಬಹಳ ಕಡಿಮೆ ಇದ್ದಾರೆ. ನಮ್ಮ ಜನಾಂಗದಲ್ಲಿ ಮನೆಗಳನ್ನು ಬಿಟ್ಟು ಬೇರೆ ಕಡೆ ವ್ಯಾಸಂಗಕ್ಕೆ ಹೋಗುವುದು ಬಹಳ ಕಡಿಮೆ. ಅಂಥದ್ದರಲ್ಲಿ ಉನ್ನತ ಪದವಿಯ ವ್ಯಾಸಂಗ ಮಾಡುತ್ತಾರೆ ಎನ್ನುವುದು ಬಹಳ ಸಂತೋಷಕರವಾದುದು. ಕೊಪ್ಪಳ ಒಂದು ಹಿಂದುಳಿದ ಜಿಲ್ಲೆ ಎಂದು ಹಣೆಪಟ್ಟಿ ಕಟ್ಟಿಕೊಂಡು, ಅಭಿವೃದ್ಧಿಗೋಸ್ಕರ ಹೊರಾಡುತ್ತಿರುವ ಸಮಯದಲ್ಲಿ ನೀವು ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾಲಯವನ್ನು ಮುಚ್ಚುತ್ತೇವೆ ಎನ್ನುವುದರಲ್ಲಿ ಅರ್ಥವಿಲ್ಲ. ಈಗಾಗಲೇ 3 ಸ್ನಾತಕೋತ್ತರ ಕೇಂದ್ರಗಳಿವೆ. ಸುಮಾರು 40 ಕಾಲೇಜುಗಳು ಒಳಪಟ್ಟಿವೆ, 1,500 ವಿದ್ಯಾರ್ಥಿಗಳಿದ್ದಾರೆ. ಇದರಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಜಾಸ್ತಿ ಇದೆ. ಅಲ್ಲಿ ಓದುವುದಕ್ಕೆ ಅನುಕೂಲತೆ ಇದ್ದರೂ ನೀವು ಯಾವುದೋ ಒಂದು ದಿಕ್ಕೂಚಿಯನ್ನಿಟ್ಟುಕೊಂಡು ವಿಶ್ವವಿದ್ಯಾಲಯವನ್ನು ಮುಚ್ಚುತ್ತೇವೆ ಎಂದು ಹೇಳಿದರೆ ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಕೊಪ್ಪಳ ಜಿಲ್ಲೆಯಲ್ಲಿರುವ ಈ ವಿಶ್ವವಿದ್ಯಾಲಯಕ್ಕೆ ಪ್ರತ್ಯೇಕವಾಗಿ ಭವನ ಕೊಡಿ, ಜಾಗ ಕೊಡಿ ಎಂದು ಕೇಳುತ್ತಿಲ್ಲ. ಹಳೆಯ ಕಾಲದಲ್ಲಿ ಏನು 15-20 ಎಕರೆ ಪ್ರದೇಶದಲ್ಲಿ ವಿಶ್ವವಿದ್ಯಾಲಯ ಕಟ್ಟುತ್ತಿದ್ದರೋ ಅದೇರೀತಿ ಇಂದು ಮಾಡುವುದಕ್ಕೆ ಆಗುವುದಿಲ್ಲ. ತಳಕಲ್‌ನ ಇಂಜಿನಿಯರಿಂಗ್ ಕಾಲೇಜಿನ ಒಂದು ಭಾಗದಲ್ಲಿ ಈ ವಿಶ್ವವಿದ್ಯಾಲಯ ಸುಸೂತ್ರವಾಗಿ ನಡೆಯುತ್ತಿದೆ. ಈಗ ನೀವು ಅದನ್ನು ರದ್ದು ಮಾಡುತ್ತೇವೆ ಎಂದು ಹೇಳುತ್ತಿರುವುದು ಯಾವ ನ್ಯಾಯ ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ. ಈ ನಿಟ್ಟಿನಲ್ಲಿ ಹೆಜ್ಜೆಯನ್ನು ಹಿಂದೆ ಇಟ್ಟು ವಿಶ್ವವಿದ್ಯಾಲಯವನ್ನು ಉಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ತಳವಾರ ಸಾಬಣ್ಣ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಗಳೆ, 9 ವಿಶ್ವವಿದ್ಯಾಲಯಗಳನ್ನು ಮುಚ್ಚುವುದಕ್ಕೆ ಸಂಬಂಧಪಟ್ಟಂತೆ ಇಲ್ಲಿ ಚರ್ಚೆ ನಡೆಯುತ್ತಿದೆ. ನಾನು ರಾಣಿಚೆನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದಾಗ, 7 ಸಾರಿ ಇಡೀ ವಿಶ್ವವಿದ್ಯಾಲಯದ counselling conduct ಮಾಡಿದ್ದೆ. ಸುಮಾರು 4,000 ವಿದ್ಯಾರ್ಥಿಗಳ ಅಡ್ಮಿಷನ್ ಇತ್ತು. ವಿಜ್ಞಾನ ವಿಭಾಗದಲ್ಲಿ ಅಡ್ಮಿಷನ್ ಕೊಡಬೇಕಾದರೆ ಅದರಲ್ಲಿ 90% ರಷ್ಟು ವಿದ್ಯಾರ್ಥಿನಿಯರಿರುತ್ತಿದ್ದರು. ಕಾಮರ್ಸ್ ವಿಭಾಗದಲ್ಲಿ 70%-80% ನಷ್ಟು ವಿದ್ಯಾರ್ಥಿನಿಯರಿದ್ದರು. ಕಲಾ ವಿಭಾಗದಲ್ಲಿ 60% ವಿದ್ಯಾರ್ಥಿನಿಯರು ಇದ್ದರು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರು ಓದುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಾವು ಇಲ್ಲಿ ಬಾಗಲಕೋಟೆ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಂತೆ ಹೆಚ್ಚು ಒತ್ತು ಕೊಡುತ್ತಿದ್ದೇವೆ. ಈ ವಿಶ್ವವಿದ್ಯಾಲಯ ಜಮಖಂಡಿಯಲ್ಲಿದೆ. ಅಂದರೆ, ಬಾಗಲಕೋಟೆ ಜಿಲ್ಲೆಗೆ ಅನ್ವಯಿಸಿ ಈ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿದ್ದಾರೆ. ರಾಣಿಚೆನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಸುಮಾರು 400 ಕಾಲೇಜುಗಳು ಬರುತ್ತವೆ. ಈ 400 ಕಾಲೇಜುಗಳಲ್ಲಿ 73 ಕಾಲೇಜುಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಈ ವಿಶ್ವವಿದ್ಯಾಲಯದ ಅಡಿ ಸುಮಾರು 30,000 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಇಲ್ಲಿ ವಿಚಿತ್ರ ಏನೆಂದರೆ, ಬಾಗಲಕೋಟೆಯನ್ನು ದಾಟಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಜಾಪುರ ಜಿಲ್ಲೆಯನ್ನು ಕಾಣುತ್ತೇವೆ. ಅಂದರೆ ಬಿಜಾಪುರ ಜಿಲ್ಲೆಯ ವಿದ್ಯಾರ್ಥಿಗಳು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯಕ್ಕೆ affiliation ಇದೆ. ಅವರು ಬಾಗಲಕೋಟೆಯನ್ನು ದಾಟಿ ಬರಬೇಕು. ಇದು ಯಾವ ನ್ಯಾಯ? ಬಿಜಾಪುರ, ಬಾಗಲಕೋಟೆಗಳ ಕಾಲೇಜುಗಳನ್ನು ಜಮಖಂಡಿ ವಿಶ್ವವಿದ್ಯಾಲಯಕ್ಕೆ ಸೇರಿಸಿದರೆ 200 ಕಾಲೇಜುಗಳಾಗುತ್ತವೆ. ಇಲ್ಲಿ ಸುಮಾರು 60,000-70,000 ವಿದ್ಯಾರ್ಥಿಗಳಾಗುತ್ತಾರೆ. ಈ ನಿಟ್ಟಿನಲ್ಲಿ ಮಾನ್ಯ ಸಚಿವರು ಗಮನಹರಿಸಬೇಕು. ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿರುವ ಈ ವಿಶ್ವವಿದ್ಯಾಲಯವನ್ನು ಮುಚ್ಚುವ ಪ್ರಮೇಯವೇ ಬರುವುದಿಲ್ಲ ಎನ್ನುವುದು ನನ್ನ ಒತ್ತಾಸೆ.

ಮಾನ್ಯ ಸಭಾಪತಿಗಳೆ, ಈಗಾಗಲೇ ಕಮಿಟಿ ಕೊಟ್ಟಿರುವ ಶಿಫಾರಸ್ಸಿನಲ್ಲಿ, 9 ವಿಶ್ವವಿದ್ಯಾಲಯಗಳನ್ನು ಅಭಿವೃದ್ಧಿ ಪಡಿಸಬೇಕಾದರೆ ಅದಕ್ಕೆ ಕೇವಲ ರೂ. 342 ಕೋಟಿಗಳು ಮಾತ್ರ ಎಂದು ಹೇಳಿದೆ. ರೂ. 4 ಲಕ್ಷ ಕೋಟಿ ಬಜೆಟ್ ಮಂಡಿಸಿರುವಂತಹ ಈ ಸರ್ಕಾರ, ಹೆಣ್ಣು ಮಕ್ಕಳು, ಬಡವರು, ಎಸ್‌ಸಿ/ಎಸ್‌ಟಿ ಜನಾಂಗದವರು ಓದುತ್ತಿರುವ ಉನ್ನತ ಶಿಕ್ಷಣಕ್ಕೆ ರೂ. 342 ಕೋಟಿ ಕೊಡುವುದು ಯಾವ ಜುಜುಬಿ, ಇದೇನು ದೊಡ್ಡ ಮೊತ್ತವೇ?

(ಮುಂದು)

(227) 11-3-2025 7.30 ಡಿಎಸ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

ಡಾ॥ ತಳವಾರ್ ಸಾಬಣ್ಣ (ಮುಂದು):-

ಈ ಮೊತ್ತವನ್ನು ಕೊಡುವುದಾಗುವುದಿಲ್ಲವೆಂದರೆ ಹೇಗೆ? ನಾಲ್ಕು ಲಕ್ಷ ಕೋಟಿ ರೂಪಾಯಿಗಳನ್ನು ಕೊಡತಕ್ಕಂಥ ಈ ಸರ್ಕಾರಕ್ಕೆ ಇದು ದೊಡ್ಡ ಮೊತ್ತವೇ? (ಗೊಂದಲ) they are already well established. ಇವೆಲ್ಲಾ ಪಿ.ಜಿ. ಸೆಂಟರ್ ಇರುವಂಥದ್ದು. ಹೀಗಾಗಿ ಈ ವಿಶ್ವವಿದ್ಯಾಲಯಗಳನ್ನು ಮುಚ್ಚುವಂತಹ ನಿರ್ಧಾರ ಇದೆಯಲ್ಲಾ ಅದರಲ್ಲಿ ರಾಜಕಾರಣ ತರಬೇಡಿ. ಹಿಂದಿನ ಸರ್ಕಾರ ಮಾಡಿದ್ದಾರೆ, ಅದನ್ನು ನಾವು ಮುಚ್ಚುತ್ತೇವೆಂದು ಹೇಳುವುದು ಸರಿಯಲ್ಲ. ಇವರು ಆ ಕಡೆ ಹೋದ ಮೇಲೆ ನಾವು ಬಂದ ಮೇಲೆ ಮತ್ತೆ ತೆರೆಯುತ್ತೇವೆ ಎಂದು ಹೇಳುತ್ತೇವೆ. ಇದು ಯಾವ ಸರ್ಕಸ್ ಸರ್? ನಾವು ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಬೇಕೋ, ಇವರು ವಿಶ್ವವಿದ್ಯಾಲಯಗಳನ್ನು ಮುಚ್ಚಬೇಕೋ? ಈಗಿರುವಂತಹ ಸರ್ಕಾರ ವಿಶ್ವವಿದ್ಯಾಲಯಗಳನ್ನು ಮುಚ್ಚುವಂತಹ ಆಭಿಯಾನ ಪ್ರಾರಂಭ ಮಾಡಿರುವಂತಹ ತಪ್ಪು ಸಂದೇಶ ಈಗಾಗಲೇ ಉತ್ತರ ಕರ್ನಾಟಕಕ್ಕೆ ಹೋಗಿದೆ. ಸರ್ಕಾರ ಈ ಕಪ್ಪುಚುಕ್ಕೆಯನ್ನು ತೆಗೆದುಕೊಳ್ಳುವುದು ಸರಿಯಲ್ಲ, ಈ ನಿರ್ಧಾರದಿಂದ ಸರ್ಕಾರ ಹಿಂದಕ್ಕೆ ಸರಿಯಬೇಕು ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ವಿಶ್ವವಿದ್ಯಾಲಯಗಳಲ್ಲಿ ನಾನು ಸಹ ಸೆನೆಟ್, ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್‌ಗಳಲ್ಲಿ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ನಾನು ಬಹಳಷ್ಟು ವರ್ಷ ವಿದ್ಯಾರ್ಥಿ ನಾಯಕನಾಗಿದ್ದಾಗ ಸೆನೆಟ್, ಸಿಂಡಿಕೇಟ್‌ಗಳಲ್ಲಿ ಕೆಲಸ ಮಾಡಿರುವುದರಿಂದ ವಿಶ್ವವಿದ್ಯಾಲಯಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದು ನನಗೆ ಗೊತ್ತಿದೆ. ಒಂದು ವಿಶ್ವವಿದ್ಯಾಲಯ ಎಂದರೆ ನಾವು ಏನು ನಿರೀಕ್ಷೆ ಮಾಡುತ್ತೇವೆಂದರೆ ಅಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಶೋಧನೆಗಳು ನಡೆಯಬೇಕು, ಅದು ಬೇರೆ ಕಾಲೇಜುಗಳಿಗೆ ಮಾದರಿಯಾಗಿರಬೇಕು, ಅಲ್ಲಿ ಆಗುವಂತಹ ಎಲ್ಲಾ ಚಟುವಟಿಕೆಗಳು ಸಮಾಜದ ಮೇಲೆ ದೊಡ್ಡ ಸಂದೇಶ ಕೊಡುವಂತಿರಬೇಕೆಂದು ತೀರ್ಮಾನ ಮಾಡುತ್ತೇವೆ. ಆದರೆ, ಇವತ್ತು ವಿಶ್ವವಿದ್ಯಾಲಯಗಳ sanctity ಕಳೆದುಹೋಗಿದೆ. ಮಂಗಳೂರು ವಿಶ್ವವಿದ್ಯಾಲಯದಲ್ಲಿ ನಾನು ಸಿಂಡಿಕೇಟ್ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಆ ವಿಶ್ವವಿದ್ಯಾಲಯ ಇವತ್ತು ಎಲ್ಲಿಯವರೆಗೆ ಬಂದಿದೆ ಎಂದರೆ ಅಲ್ಲಿ ಶಿಕ್ಷಕರುಗಳಿಗೆ ಸಂಬಳ ಕೊಡುವುದಕ್ಕೂ ಹಣವಿಲ್ಲ, ಅವರಿಗೆ ಪಿಂಚಣಿ ಕೊಡುವುದಕ್ಕೂ ಹಣವಿಲ್ಲ. ಅವರಿಗೆ ನಿವೃತ್ತಿ ಬೆನಿಫಿಟ್ಸ್ ಕೊಡುವುದಕ್ಕೂ ಹಣವಿಲ್ಲ, ಕಟ್ಟಡ ನಿರ್ಮಾಣವಾಗುತ್ತಿಲ್ಲ, ಮಕ್ಕಳು ಬರುತ್ತಿಲ್ಲ, ಹಾಸ್ಟಲ್‌ಗಳಲ್ಲಿ ವ್ಯವಸ್ಥೆಗಳಿಲ್ಲ, ಹೊಸ ಕಟ್ಟಡಗಳು ರಚನೆಯಾಗುತ್ತಿಲ್ಲ. ನಾನು ಇರಬೇಕಾದರೆ ಮಂಗಳೂರಿನಲ್ಲಿ ಮೂರು ಜಿಲ್ಲೆಗಳಿದ್ದವು. ಮಂಗಳೂರು, ಉಡುಪಿ ಮತ್ತು ಕೊಡಗು. ಈಗ ಕೊಡಗಿಗೆ ಒಂದು ವಿಶ್ವವಿದ್ಯಾಲಯವನ್ನು ಕೊಟ್ಟಿದ್ದಾರೆ. ಅಲ್ಲಿರುವಂತಹ ಒಟ್ಟಾರೆ ಕಾಲೇಜುಗಳು ಒಂದು ವಿಶ್ವವಿದ್ಯಾಲಯಕ್ಕೆ ಎಷ್ಟು? ನಾವು ಇರಬೇಕಾದರೆ ಮಂಗಳೂರು ವಿಶ್ವವಿದ್ಯಾಲಯದ ಒಳಗಡೆ 283 ಕಾಲೇಜುಗಳಿದ್ದವು. ಅದನ್ನು bifurcate ಮಾಡಿ 13-14 ಕಾಲೇಜುಗಳಿಗೆ ಒಂದು ವಿಶ್ವವಿದ್ಯಾಲಯ ಮಾಡಿ ಅದಕ್ಕೆ ವೈಸ್ ಛಾನ್ಸಲರ್, ರಿಜಿಸ್ಟ್ರಾರ್, ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಎಂದು ಹೇಳಿದರೆ ಎಷ್ಟು viable ಆಗಿದೆ ಎಂಬುದನ್ನು ನಾವು ಇವತ್ತು ಆಲೋಚನೆ ಮಾಡಬೇಕಾಗಿದೆ. ನಾವು ಮೊದಲು ವಿಶ್ವವಿದ್ಯಾಲಯಗಳಲ್ಲಿ ಇರಬೇಕಾದರೆ ತಾಂತ್ರಿಕ ವಿಶ್ವವಿದ್ಯಾಲಯ ಅದರೊಳಗಡೆಯೇ ಇತ್ತು. ಮೆಡಿಕಲ್ ಎಜುಕೇಷನ್ ಅದರೊಳಗಡೆ ಇತ್ತು. ಯಾವುದೆಲ್ಲಾ ಪ್ರೊಫೆಷನಲ್ ಕಾಲೇಜುಗಳನ್ನು ಇವತ್ತು bifurcate ಮಾಡಿಕೊಟ್ಟಿದ್ದೇವೆ, ಅವೆಲ್ಲಾ ವಿಶ್ವವಿದ್ಯಾಲಯದ ಒಳಗಡೆ ಇತ್ತು. ಮಹಿಳಾ ವಿಶ್ವವಿದ್ಯಾಲಯ ಬೇರೆ ಆಗಿದೆ, ಕಾನೂನು ವಿಶ್ವವಿದ್ಯಾಲಯ ಬೇರೆ ಆಗಿದೆ, ಪ್ರತಿ ವಿಶ್ವವಿದ್ಯಾಲಯಗಳನ್ನು ಬೇರೆ ಬೇರೆ ಮಾಡಿ, ಅದರ ಮಧ್ಯೆ ಇವತ್ತು ಮತ್ತೆ Autonomous ಕಾಲೇಜುಗಳು ಬಂದಿವೆ. ಆ ವಿಶ್ವವಿದ್ಯಾಲಯಕ್ಕೂ ಏನು ಆದಾಯವಿಲ್ಲ. Autonomous ಕಾಲೇಜುಗಳು ಮುಂಚೆ ಇತ್ತು, ಕೊನೆ ಪಕ್ಷ ವಿದ್ಯಾರ್ಥಿಗಳಿಂದ ಶುಲ್ಕವಾದರೂ ಅದಕ್ಕೆ ಬರುತ್ತಿತ್ತು. ಇವತ್ತು ಯಾವುದೇ ಸವಲತ್ತುಗಳು ಇಲ್ಲದೆ ಆರ್ಥಿಕವಾಗಿ ಸಂಕಷ್ಟದಲ್ಲಿವೆ. ಇವತ್ತು ಪತ್ರಿಕೆಯಲ್ಲಿ ದೊಡ್ಡ ಸುದ್ದಿ ಬಂದಿದೆ. 'ರಾಜ್ಯದ ಹಳೆಯ 32 ವಿಶ್ವವಿದ್ಯಾಲಯಗಳು ಮುಚ್ಚುವ ಸ್ಥಿತಿಯಲ್ಲಿವೆ' ಎಂದು ಉದಯವಾಣಿ ಪತ್ರಿಕೆಯಲ್ಲಿ ದೊಡ್ಡ ಹೆಡ್ಡಿಂಗ್ ಬಂದಿದೆ. ಆ ಪತ್ರಿಕೆಯಲ್ಲಿ ಏನು ಬಂದಿದೆ ಎಂದರೆ, "ಹಳೆಯ ವಿಶ್ವವಿದ್ಯಾಲಯಗಳು ಆರ್ಥಿಕ ಆಡಳಿತಾತ್ಮಕವಾಗಿ ಶೋಚನೀಯ ಪರಿಸ್ಥಿತಿಯಲ್ಲಿವೆ. ಮಂಗಳೂರು ವಿಶ್ವವಿದ್ಯಾಲಯದಿಂದ ಪಂಚಾಯಿತಿಗೆ 40 ಲಕ್ಷ ರೂಪಾಯಿಗಳ ತೆರಿಗೆಯನ್ನು ಕಟ್ಟಿಲ್ಲ. ಧಾರವಾಡ ವಿಶ್ವವಿದ್ಯಾಲಯ ಸೇರಿ ಹಲವಾರು ವಿಶ್ವವಿದ್ಯಾಲಯಗಳ ದೈನಂದಿನ ನಿರ್ವಹಣೆಗೂ ಹಣದ ಕೊರತೆ ಇದೆ. ಹೊಸ ವಿಶ್ವವಿದ್ಯಾಲಯಗಳಲ್ಲಿ ಖಾಯಂ ಬೋಧಕರು, ಬೋಧಕೇತರರು ಇಲ್ಲ. ಹಳೆ ವಿಶ್ವವಿದ್ಯಾಲಯಗಳ ಅಭಿವೃದ್ಧಿ ಚಟುವಟಿಕೆಗಳಿಗೆ 33.5 ಅನುದಾನ ಬರುತ್ತದೆ. ಆ ವಿಶ್ವವಿದ್ಯಾಲಯಗಳ ಅಭಿವೃದ್ಧಿ ಕೆಲಸಗಳಿಗೆ ಆರ್ಥಿಕ ವರ್ಷಗಳಲ್ಲಿ ಅನುದಾನವೇ ಇಲ್ಲ. ಬೋಧಕರು, ಬೋಧಕೇತರರ ಸಿಬ್ಬಂದಿಗಳ ಬಗ್ಗೆ ತಮ್ಮ ಮುಖಾಂತರ ಸದನದ ಗಮನಕ್ಕೆ ತರುತ್ತಿದ್ದೇನೆ. 4,780 ಬೋಧಕರ ಹುದ್ದೆಗಳು ಮಂಜೂರಾಗಿವೆ. ಅದರಲ್ಲಿ 2,732 ಹುದ್ದೆಗಳು ಖಾಲಿ ಇವೆ. ಬೋಧಕೇತರರ ಹುದ್ದೆಗಳು ಮಂಜೂರಾಗಿರುವುದು 9,217 ಹುದ್ದೆಗಳು. 6,328

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹುದ್ದೆಗಳು ಖಾಲಿ ಇವೆ. ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಎಲ್ಲಿ ಒಳ್ಳೆಯ ಶಿಕ್ಷಣ ಸಿಗುತ್ತದೆ, ಅಲ್ಲಿ ಒಳ್ಳೆಯ ಪ್ರೊಫೆಸರ್‌ಗಳು ಬುದ್ಧಿವಂತರಿರುತ್ತಾರೆ, ನನ್ನ ಮಗ, ಮಗಳು ವಿಶ್ವವಿದ್ಯಾಲಯಕ್ಕೆ ಹೋಗಬೇಕು, ರಿಸರ್ಚ್ ಮಾಡಬೇಕೆಂದು ವಿಶ್ವವಿದ್ಯಾಲಯಕ್ಕೆ ಹೋಗುತ್ತಾರೆ. ಬೋಧಕರೇ ಇಲ್ಲದಿದ್ದರೆ ಆ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆಯುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಶಿಕ್ಷಣದ ದೇಗುಲದಲ್ಲಿ ಬೋಧಕರು, ಪ್ರೊಫೆಸರ್‌ಗಳು, ಲೆಕ್ಚರರ್‌ಗಳು, ಅಸಿಸ್ಟೆಂಟ್ ಪ್ರೊಫೆಸರ್‌ಗಳು, ಅಸೋಸಿಯೇಟ್ ಪ್ರೊಫೆಸರ್‌ಗಳು ಇಲ್ಲ, ರಿಸರ್ಚ್‌ಗೆ ಗೈಡ್ ಇಲ್ಲ ಎಂದಾದರೆ ವಿಶ್ವವಿದ್ಯಾಲಯ ಏಕೆ ಇರಬೇಕು? ವಿಶ್ವವಿದ್ಯಾಲಯಗಳೇ ಬೇಡ ಎಂದು ನಾನು ಹೇಳುವುದಿಲ್ಲ. ಆದರೆ ಯಾವಾಗ ವಿಶ್ವವಿದ್ಯಾಲಯ ಮಾಡಬೇಕು ಎನ್ನುವ ಚಿಂತನೆ ಬಂತು ಆಗ ಅದಕ್ಕೆ proper planning ಬೇಕಾಗಿತ್ತು ಎಂದು ನಾನು ಹೇಳುತ್ತಿದ್ದೇನೆ. ಹಣಕಾಸಿನ ವ್ಯವಸ್ಥೆ ಎಲ್ಲಿಂದ ತರುತ್ತಾರೆ? ಅದಕ್ಕೆ ಬಹಳಷ್ಟು ಖರ್ಚು ಬರುತ್ತದೆ. ಅದಕ್ಕೆ ತಗಲುವ ವೆಚ್ಚ ಎಷ್ಟು, ಇದು ಯಾವುದನ್ನು ಆಲೋಚನೆ ಮಾಡದೆ ಒಂದು ಜಿಲ್ಲೆಗೆ ಒಂದು ವಿಶ್ವವಿದ್ಯಾಲಯವೆಂದರೆ, 31 ಜಿಲ್ಲೆಗಳಿಗೆ 31 ವೈಸ್ ಛಾನ್ಸಲರ್‌ಗಳು, ರಿಜಿಸ್ಟ್ರಾರ್‌ಗಳು, ಪ್ರಿನ್ಸಿಪಾಲ್‌ಗಳು, ಬೋಧಕ, ಬೋಧಕೇತರರು ಬೇಕಾಗುತ್ತಾರೆ. ನಮ್ಮ ಮಂಗಳೂರು ವಿಶ್ವವಿದ್ಯಾಲಯವನ್ನು ಹಾಳು ಮಾಡಿರುವುದು ಹೇಗೆಂದರೆ, ಅದಕ್ಕೆ 5-6 ಸರ್ಕಾರಿ ಕಾಲೇಜುಗಳನ್ನು constituent colleges ಎಂದು ಮಾಡಿ ಹಾಕಿದರು. ಅದು ವಿಶ್ವವಿದ್ಯಾಲಯದ ಕೆಳಗಡೆ ಕೆಲಸ ಮಾಡಬೇಕೆಂದು ತೆಗೆದು ಹಾಕಿದರು. ಈಗ ಅದು ಹಾಳಾಯಿತು, ಇದು ಹಾಳಾಯಿತು. ಅಲ್ಲಿ ಸರ್ಕಾರಿ ಕಾಲೇಜು ಇಲ್ಲ, ಇಲ್ಲಿ ವಿಶ್ವವಿದ್ಯಾಲಯದ ಕಾಲೇಜು ಇಲ್ಲ. ಯಾವುದು ಉಳಸಬೇಕು, ಯಾವುದು ಮುಚ್ಚಬೇಕು ಎನ್ನುವುದು ಮಾನ್ಯ ಸಚಿವರು ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ. ಯಾವ ವಿಶ್ವವಿದ್ಯಾಲಯಕ್ಕೆ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕಾಗುವುದಿಲ್ಲ, ಮಕ್ಕಳಿಗೆ ಸರಿಯಾದ ಶಿಕ್ಷಣ ಕೊಡುವುದಕ್ಕೆ ಸಾಧ್ಯವಿಲ್ಲ, ಪ್ರೊಫೆಸರ್‌ಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ಆರ್ಥಿಕ ಸಂಪನ್ಮೂಲಗಳಿಲ್ಲ, ಅಂತಹ ವಿಶ್ವವಿದ್ಯಾಲಯಗಳನ್ನು ದಯವಿಟ್ಟು ಮುಚ್ಚುವುದು ಒಳ್ಳೆಯದು ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎರಡು ರೀತಿಯಲ್ಲೂ ಮಾತನಾಡುತ್ತಿದ್ದಾರೆ.

ಸಭಾಪತಿಯವರು:- ಅವರು ಹೇಗಾದರೂ ಮಾತನಾಡಲಿ, ಅವರಿಗೆ ಮಾತನಾಡುವುದಕ್ಕೆ ಸ್ವತಂತ್ರವಿದೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾಲಯವನ್ನು ಮುಚ್ಚಬೇಕೆಂದು ತೀರ್ಮಾನವಾಗಿದೆಯೇ?

ಸಭಾಪತಿಯವರು:- ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ಸದನದಲ್ಲಿ ಯಾವುದೇ ಸದಸ್ಯರು ಮಾತನಾಡಬೇಕಾದರೆ ಅವರು ತಿಳಿದುಕೊಂಡು ಮಾತನಾಡುತ್ತಾರೆ. ಅದಕ್ಕೆ ನೀವು, ನಾವು ಉತ್ತರ ಹೇಳುವುದಕ್ಕಾಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನಾನು ಉತ್ತರ ಕೊಡುವುದಿಲ್ಲ. ನಾನು ಹೇಳುವುದೇನೆಂದರೆ, ಮಾನ್ಯ ಸದಸ್ಯರು ಹೇಳಿದಂತೆ ವಿಶ್ವವಿದ್ಯಾಲಯವನ್ನು ಮುಚ್ಚುವುದು ಬೇಡ. ಏಕೆಂದರೆ ವಿದ್ಯಾಸಂಸ್ಥೆಗಳು ಅಥವಾ ವಿಶ್ವವಿದ್ಯಾಲಯಗಳು ನಮಗೆ ಆದಾಯದ ಮೂಲವಲ್ಲ. ಆಸ್ಪತ್ರೆಗಳು, ಆರೋಗ್ಯ, ಆದಾಯದ ಮೂಲವಲ್ಲ. ಸರ್ಕಾರ ವಿದ್ಯೆಗೆ ಒತ್ತು ಕೊಡಬೇಕೆಂದರೆ ಖರ್ಚು ಮಾಡಬೇಕಾಗುತ್ತದೆ. ವಿಶ್ವವಿದ್ಯಾಲಯಕ್ಕೆ ಹಣ ಕೊಟ್ಟು ಮತ್ತಷ್ಟು ಸದೃಢಗೊಳಿಸಿ ಜನರಿಗೆ ವಿದ್ಯೆ ಸಿಗಲಿ ಎಂದು ಹೇಳಬೇಕೇ ಅಥವಾ ಬೇಡ, ಮುಚ್ಚಿ ಎಂದು ಹೇಳಬೇಕೇ? ಮುಚ್ಚಬೇಕೆಂದರೆ ಭಾಷಣ ಬೇಕಾಗಿಲ್ಲ.

(ಗೊಂದಲ)

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ವಿರೋಧ ಪಕ್ಷದ ನಾಯಕರು ಅವರ ಅಭಿಪ್ರಾಯವನ್ನು ಹೇಳಲಿ, ಅವರು ಸ್ವತಂತ್ರರಿದ್ದಾರೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಈಗ ಸರ್ಕಾರದ ಕಡೆಯಿಂದ ಮಾತನಾಡುವವರು....

ಸಭಾಪತಿಯವರು:– ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ತಮ್ಮ ಅಭಿಪ್ರಾಯವನ್ನು ಮಂತ್ರಿಗಳಿಗೆ ಹೇಳಿ.

ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ತಳವಾರ್ ಸಾಬಣ್ಣರವರು ಹೇಳಿದ ಹಾಗೆ ಬಾಗಲಕೋಟೆ ವಿಶ್ವವಿದ್ಯಾಲಯದ ಬಗ್ಗೆ 4-5 ವಿಚಾರಗಳನ್ನು ಹೇಳಬಯಸುತ್ತಿದ್ದೇನೆ. 2023-24ನೇ ಸಾಲಿನಲ್ಲಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದಿಂದ ಬೇರ್ಪಡಿಸಲಾಗಿರುವಂತಹ ಬಾಗಲಕೋಟೆ ವಿಶ್ವವಿದ್ಯಾಲಯಕ್ಕೆ Affiliation ಮಾಡಿ ಕಾಲೇಜನ್ನು ಕೊಟ್ಟಿದ್ದಾರೆ. 73 ಮಹಾವಿದ್ಯಾಲಯಗಳನ್ನು ಅದಕ್ಕೆ ಸೇರಿಸುವಂತಹ ಕೆಲಸವಾಯಿತು. 2023-24ನೇ ಸಾಲಿನಲ್ಲಿ 14,768 ವಿದ್ಯಾರ್ಥಿಗಳು ಅಧ್ಯಯನ ಮಾಡಿದ್ದಾರೆ. 2024-25ನೇ ಸಾಲಿನಲ್ಲಿ 15,000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ಮಾಡಿದ್ದಾರೆ. ಜಮಖಂಡಿ ವಿಶ್ವವಿದ್ಯಾಲಯದಲ್ಲಿ ಒಟ್ಟಾರೆ ಈಗ 30,000 ವಿದ್ಯಾರ್ಥಿಗಳು ಅಧ್ಯಯನ ಮಾಡಿದ್ದಾರೆ. 2025-26ನೇ ಸಾಲಿನಲ್ಲಿ total compare ಮಾಡಿದರೆ 45,000 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಅಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ಜನರು ಶೇಕಡ 95 ರಷ್ಟು ಇದ್ದಾರೆ. ಶೇಕಡ 55 ಕ್ಕಿಂತಲೂ ಹೆಚ್ಚಿಗೆ ಬಾಲಕಿಯರು ಪ್ರವೇಶಾತಿ ಪಡೆದುಕೊಂಡಿರುವಂಥದ್ದು ಇದೆ.

(ಮುಂದು)

(228) 11/03/2025 7:40 ಎಸ್‌ಪಿಆರ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಪಿ.ಹೆಚ್.ಪೂಜಾರ್ (ಮುಂದು):–

ಕರ್ನಾಟಕ ರಾಜ್ಯದ ಪರೀಕ್ಷೆಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ QPDS (Question Paper Delivery System) ತಂತ್ರಾಂಶದ ಮೂಲಕ ಪರೀಕ್ಷೆಗಳನ್ನು ಅತ್ಯಂತ ಯಶ್ವಸಿಯಾಗಿ ನಡೆಸಿದ ವಿಶ್ವವಿದ್ಯಾಲಯವಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾಲಯದ ಧನ ಸಹಾಯ ಆಯೋಗದ UGC (University Grants Commission) Act ನ Section 2(f) ನ ಅಡಿ ಮಾನ್ಯತೆಯನ್ನೂ ಸಹ ಪಡೆದುಕೊಂಡಿದೆ. "Earn-While-Learn" scheme ನ ಪರಿಕಲ್ಪನೆಯನ್ನು ಮೊದಲನೆ ಬಾರಿಗೆ ಜಾರಿಗೆ ತಂದ ಹೆಗ್ಗಳಿಕೆ ಅದಕ್ಕೆ ಇದೆ. ಹೊಸದಾಗಿ ಸ್ಥಾಪಿತವಾಗಿರುವ ಈ ಏಳು ವಿಶ್ವವಿದ್ಯಾಲಯಗಳಲ್ಲಿ ವಿಶೇಷವಾಗಿ ಬಾಗಲಕೋಟೆ ವಿಶ್ವವಿದ್ಯಾಲಯದ ಬಗ್ಗೆ ನಾನು ಮಾತನಾಡಬೇಕಾಗಿದೆ. ಅತಿ ಹೆಚ್ಚಿನ ಸಂಖ್ಯೆಯ ಗುಣತ್ಮಾಕವಾದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಅಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಬಾಗಲಕೋಟೆ ವಿಶ್ವವಿದ್ಯಾಲಯವು ಎರಡು ವರ್ಷಗಳಲ್ಲಿಯೇ ಅಂತರಾಷ್ಟ್ರೀಯ ಮಟ್ಟದ ವಿಶ್ವವಿದ್ಯಾಲಯಗಳು ಹಾಗೂ ಕಾರ್ಪೋರೇಟ್ ವಲಯಗಳೊಂದಿಗೆ ಹಲವಾರು ಯಶಸ್ವಿ ಪರಸ್ಪರ ಒಡಂಬಡಿಕೆಗಳನ್ನು ಸಕ್ರಿಯವಾಗಿ ಜಾರಿಗೊಳಿಸಿದ್ದು, ಇದರಿಂದ ಅನುಕೂಲವಾಗಿದೆ. ವಿದ್ಯಾರ್ಥಿಗಳಿಗೆ, ಬೋಧಕ ಬೋಧಕೇತರ ಸಿಬ್ಬಂದಿಗಳಿಗೆ ಹಾಗೂ ಈ ಭಾಗದ ರೈತರಿಗೆ ಅಗತ್ಯವಾದ ಜ್ಞಾನ, ತರಬೇತಿ ಮತ್ತು ಮಾರ್ಗದರ್ಶನಗಳು ಇವತ್ತಿನ ದಿವಸ ದೊರೆಯುತ್ತಿದೆ. ಪ್ರಸ್ತುತ ವಿಜಯಪುರ ಜಿಲ್ಲೆಗಳ ಮಹಾವಿದ್ಯಾಲಯಗಳಿಗೆ ಬೆಳಗಾವಿಯ ರಾಣಿಚೆನ್ನಮ್ಮ ವಿಶ್ವವಿದ್ಯಾಲಯವು 200-300 ಕಿಲೋಮೀಟರ್‌ಗಳಿಗಿಂತಲೂ ಹೊರಗೆ ಇದೆ. ಪ್ರಸ್ತುತ ಸದನದಲ್ಲಿ ಸಚಿವರಾದ ಶ್ರೀ ಎಂ.ಬಿ.ಪಾಟೀಲ್‌ರವರು ಉಪಸ್ಥಿತರಿದ್ದಾರೆ. ವಿಜಯಪುರದಲ್ಲಿ ಸುಮಾರು 130 ಹಾಗೂ ಬಾಗಲಕೋಟೆಯಲ್ಲಿ 73 ಕಾಲೇಜುಗಳಿವೆ. ಹೀಗಾಗಿ ಅಲ್ಲಿ ಸ್ಥಳಾವಕಾಶವಿದೆ. ಜಮಖಂಡಿಯಲ್ಲಿ ಮಾಡಿ ಅಥವಾ ಅದನ್ನು ವಿಜಯಪುರದಲ್ಲಿ ಸೇರಿಸಿ. ಇದರಲ್ಲಿ ನಮಗೆ ಯಾವುದೇ ತೊಂದರೆಗಳಿಲ್ಲ. ವಿಜಯಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನವರೆಲ್ಲರೂ ಸೇರಿಕೊಂಡು ರಾಣಿಚೆನ್ನಮ್ಮ ವಿಶ್ವವಿದ್ಯಾಲಯಕ್ಕೆ ಹೋಗಬೇಕು. ಅಲ್ಲಿ 200 ಕಾಲೇಜುಗಳಾಗುತ್ತಿವೆ. ಒಟ್ಟಾರೆಯಾಗಿ 1.50 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳ ಸಂಖ್ಯೆ ಇದೆ. ಇವತ್ತಿನ ದಿವಸ ಬಾಗಲಕೋಟೆ ವಿಶ್ವವಿದ್ಯಾಲಯವು 1.50 ಲಕ್ಷ ವಿದ್ಯಾರ್ಥಿಗಳಿಗೆ ಆಶ್ರಯ ನೀಡುವ ವ್ಯವಸ್ಥೆಯನ್ನು ಮಾಡಿದೆ. ಈ ವಿಚಾರದಲ್ಲಿ ಕ್ರಮ ಕೈಗೊಳ್ಳುವ ಬಗ್ಗೆ ಯೋಚನೆ ಮಾಡಿದೆ, ಇದನ್ನು ಬಂದ್ ಮಾಡಿ ಎಂದು ಸರ್ಕಾರವು ಹೇಳುತ್ತಿದೆ. ಈಗಾಗಲೇ ಆ ವಿಶ್ವವಿದ್ಯಾಲಯವು ಸ್ವಾವಲಂಬಿಯಾಗಿ ಬೆಳೆಯುತ್ತಿದೆ. ವಿದ್ಯಾರ್ಥಿಗಳು ಪಾವತಿಸುವ ಶುಲ್ಕದಿಂದಲೇ 7-8 ಕೋಟಿ ರೂಪಾಯಿಗಳಷ್ಟು ಸಂಗ್ರಹವಾಗಿದೆ. ಸರ್ಕಾರದ ಬಳ ಕೈಯೊಡ್ಡುವ ಪರಿಸ್ಥಿತಿ ಬರುವುದೇ ಇಲ್ಲ. ಈಗಿನ ಸರ್ಕಾರವು ಗ್ಯಾರಂಟಿ ಯೋಜನೆಗಳಿಗಾಗಿ ಹಾಗೂ ಮತ್ತಿತರೆಗಳಿಗಾಗಿ ಹಣ ಬೇಕೇನ್ನುವ ಉದ್ದೇಶವಿಟ್ಟುಕೊಂಡು ಸರ್ಕಾರವು ವಿಶ್ವವಿದ್ಯಾಲಯವನ್ನು ಮುಚ್ಚುವ ಹುನ್ನಾರವನ್ನು ಮಾಡುತ್ತಿದೆ. ಮಕ್ಕಳ ಭವಿಷ್ಯದ ದೃಷ್ಟಿಯಿಂದ ಸರ್ಕಾರವು ದಯಮಾಡಿ ಇದಕ್ಕೆ ಕೈಹಾಕಬಾರದೆಂದು ನಾನು ವಿನಂತಿಸುತ್ತೇನೆ. ಸ್ವಾಯತ್ತ ಕಾಲೇಜುಗಳು ಮತ್ತು ಪರಿಗಣಿಸಲ್ಪಟ್ಟ ವಿಶ್ವವಿದ್ಯಾಲಯಗಳನ್ನು ಮಾಡಿರುವ ಪರಿಕಲ್ಪನೆಯಲ್ಲಿ ಎಲ್ಲವನ್ನೂ ಹೊರತುಪಡಿಸಿ affiliated colleges ಗಳ ಸಂಖ್ಯೆ ಹೆಚ್ಚಿದಲ್ಲಿ.., ಅಲ್ಲಿ ಜಮೀನು ಲಭ್ಯವಿದೆ, ವಿದ್ಯಾರ್ಥಿಗಳ ಸಂಖ್ಯೆ 1.50 ಲಕ್ಷಗಳಿಗೂ ಹೆಚ್ಚಾಗಿದೆ. ಹಣದ ಬೇಕು ಎನ್ನುವಂಥದ್ದು, ಕೇವಲ ನಾಲ್ಕೈದು ವರ್ಷಗಳಲ್ಲಿಯೇ ಅಲ್ಲಿ ಸ್ವಂತ ಕಟ್ಟಡ ಕೂಡ ಅಲ್ಲಿ ಆಗಿದೆ. ಪ್ರಸ್ತುತ ಸದನದಲ್ಲಿ ಶ್ರೀ ಎಂ.ಬಿ.ಪಾಟೀಲ್ ಸಚಿವರು ಉಪಸ್ಥಿತರಿದ್ದಾರೆ. ವಿಜಯಪುರ ಜಿಲ್ಲೆಯಲ್ಲಿ ಮತ್ತು ಜಮಖಂಡಿ ತಾಲ್ಲೂಕಿನಲ್ಲಿಯೂ ಸಹ ಜಾಗ ಇದೆ. ಇಲ್ಲಿ ಜಾಗದ ಕೊರತೆ ಹಾಗೂ ಹಣಕಾಸಿನ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆ ಇಲ್ಲ. ದಯಮಾಡಿ ಸರ್ಕಾರವು ಈ ವಿಶ್ವವಿದ್ಯಾಲಯಗಳನ್ನು ಮುಚ್ಚುವಂತಹ ಹುನ್ನಾರಕ್ಕೆ ಕೈ ಹಾಕಬಾರದು ಎಂದು ನಾನು ವಿನಂತಿಸುತ್ತೇನೆ.

ಸಭಾಪತಿಯವರು:– ಮುಧೋಳದ ಲೋಕಾಪುರದಲ್ಲಿಯೂ ಸಹ ವಿಶ್ವವಿದ್ಯಾಲಯವನ್ನು ಮಾಡುವಂತೆ ಕೇಳಿದ್ದಾರೆ.

ಶ್ರೀ ಪಿ.ಹೆಚ್.ಪೂಜಾರ್:– ಮಾನ್ಯ ಸಭಾಪತಿಯವರೆ, ಸಭಾಪತಿಯವರ ಒತ್ತಾಯದ ಮೇರೆಗೆ ಅದನ್ನು ಮಾಡಿದರೆ ಅದರಿಂದ ಇನ್ನಷ್ಟು ಅನುಕೂಲವಾಗುತ್ತದೆ. ದಯಮಾಡಿ ಸರ್ಕಾರವು ರದ್ಧತಿಯ ಕೆಲಸಕ್ಕೆ ಕೈ ಹಾಕಬಾರದೆಂದು ನಾನು ವಿನಂತಿಸುತ್ತೇನೆ.

ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಸದಸ್ಯರು ತುಂಬಾ ಒಳ್ಳೆಯ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಹೀಗಾಗಿ ಸದಸ್ಯರನ್ನು ನಾನು ಅಭಿನಂದಿಸುತ್ತೇನೆ. 7+2 ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದವು. ವಿಶ್ವವಿದ್ಯಾಲಯಗಳು ಪ್ರಾರಂಭವಾಗಿರುವ ಬಗ್ಗೆ ಸರ್ಕಾರವು ದಿನಾಂಕ 18/03/2022 ಮತ್ತು ದಿನಾಂಕ 18/04/2022 ರಂದು ಆದೇಶಗಳನ್ನು ಹೊರಡಿಸಿದೆ. ಅದರಲ್ಲಿ ಈ ಮುಂದಿನ ಅಂಶಗಳಿವೆ. ನೂತನ ಏಳು ವಿಶ್ವವಿದ್ಯಾಲಯಗಳು ಪ್ರಸ್ತುತ ಸ್ನಾತಕೋತ್ತರ ಕೇಂದ್ರಗಳಲ್ಲಿಯೇ ಕಾರ್ಯನಿರ್ವಹಿಸತಕ್ಕದ್ದು. ನೂತನ ಏಳು ವಿಶ್ವವಿದ್ಯಾಲಯಗಳ ಸ್ಥಾಪನೆಗಾಗಿ ಯಾವುದೇ ಜಮೀನನ್ನು ಖರೀದಿಸುವಂತಿಲ್ಲ ಹಾಗೂ ಹೊಸ ಕಟ್ಟಡಗಳನ್ನು ನಿರ್ಮಿಸುವಂತಿಲ್ಲ. ಈಗಾಗಲೇ ಮಾತೃ ವಿಶ್ವವಿದ್ಯಾಲಯಗಳಿಗೆ ಮಂಜೂರಾಗಿರುವ ಹುದ್ದೆಗಳಲ್ಲಿ ಅವಶ್ಯ ಹುದ್ದೆಗಳನ್ನು ಈ ಏಳು ನೂತನ ವಿಶ್ವವಿದ್ಯಾಲಯಗಳಿಗೆ ಬಳಸಿಕೊಳ್ಳುವುದು ಹಾಗೂ ಯಾವುದೇ ಹೊಸ ಹುದ್ದೆಗಳನ್ನು ಸೃಜಿಸುವಂತಿಲ್ಲ. ಈ ಉದ್ದೇಶಕ್ಕಾಗಿ ಯಾವುದೇ ಹೊಸ ಹುದ್ದೆಗಳನ್ನು ಸೃಜಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸುವಂತಿಲ್ಲ. ಈ ಹಿಂದೆ 2022 ನೇ ಇಸವಿಯಲ್ಲಿ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದರೇ? ಶ್ರೀ ಡಿ.ಕೆ.ಶಿವಕುಮಾರ್‌ರವರು ಉಪ ಮುಖ್ಯಮಂತ್ರಿಗಳಾಗಿದ್ದರೇ ಮತ್ತು ಡಾ॥ ಸುಧಾರಕ್‌ರವರು ಉನ್ನತ ಶಿಕ್ಷಣ ಮಂತ್ರಿಗಳಾಗಿದ್ದರೇ? 2022 ನೇ ಇಸವಿಯಲ್ಲಿ ಈ ಸರ್ಕಾರಿ ಆದೇಶಗಳನ್ನು ಮಾಡಲಾಗಿದೆ. ಗರ್ಭಿಣಿ ಸ್ತ್ರೀಗೆ ಪೌಷ್ಟಿಕಾಂಶದ ಹಾರವನ್ನು ನೀಡಿ, ಹೆರಿಗೆಯಾದ ಮೇಲೆ, ಮಗುವನ್ನು ಹೊರಗಡೆ ಕೊಡುವ ಮುನ್ನವೇ ತಾಯಿಯ ಕೈ ಕಾಲುಗಳನ್ನು ಕಟ್ಟಿ ಹಾಕಿ, ಬಾಯಿಗೆ ಟೇಪ್ ಅನ್ನು ಹಾಕಿ ಆಕೆಯನ್ನು ಹೊರಗಡೆ ಕಳುಹಿಸಿ ಎಂದು ವೈದ್ಯರಿಗೆ ಹೇಳಿದಂತೆ ಆಗಿದೆ ಇದರ ಪರಿಸ್ಥಿತಿ. ಇದರ ಉದಾಹರಣೆಯಂತೆ ಈ ಹಿಂದಿನ ಸರ್ಕಾರವು ನೂತನ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಿದ ನಂತರ ಏನು ಮಾಡಿದೆ ಎಂದು ನಾನು ಕೇಳಬಯಸುತ್ತೇನೆ. ಸರ್ಕಾರಿ ಆದೇಶದಲ್ಲಿ ಏಕೆ ಈ ರೀತಿಯ ಷರತ್ತುಗಳನ್ನು ಹಾಕಲಾಯಿತು? ಹಾಲಿ ಇರುವ ಕೇಂದ್ರಗಳಲ್ಲಿಯೇ ವಿಶ್ವವಿದ್ಯಾಲಯಗಳನ್ನು ಮಾಡುವುದಕ್ಕೋಸ್ಕರ ನೂತನ ವಿಶ್ವವಿದ್ಯಾಲಯಗಳು ಬೇಕಿತ್ತೇ? ಆಗಿನ ಸರ್ಕಾರವು ಏಕೆ ಆ ರೀತಿಯ ಷರತ್ತುಗಳನ್ನು ಆದೇಶದಲ್ಲಿ ಹಾಕಿತು? ನಮ್ಮಂತಹವರು ಹೋರಾಟ ಮಾಡದ ಹಾಗೆ ಮಾಡಿದರು. ನಮ್ಮನ್ನು ಕೇಳದೆಯೇ ಇದನ್ನು ಅಂದಿನ ಸರ್ಕಾರವು ಮಾಡಿತ್ತು. ನಮ್ಮಂತಹವರ ಬಾಯಿಯನ್ನು ಮುಚ್ಚಿಸಿದರು. ಅಂದಿನ ಸರ್ಕಾರವು ಇವುಗಳನ್ನು ಪ್ರಾರಂಭ ಮಾಡಬೇಕಾಗಿತ್ತೇ? ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಿದ ನಂತರ ಹುದ್ದೆಗಳಿಲ್ಲದೇ ಅವುಗಳನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಸುವುದಕ್ಕಾಗುತ್ತದೆಯೇ? ಇದನ್ನು ಯಾರು ಮಾಡಿದರು? ಒಂದು ನೂತನ ವಿಶ್ವವಿದ್ಯಾಲಯ ಪ್ರಾರಂಭವಾಗುತ್ತದೆ ಎನ್ನುವುದಾದರೆ, ಅಲ್ಲಿನ ವಿದ್ಯಾರ್ಥಿಗಳಿಗಾಗಿ, ಅವರ ಭವಿಷ್ಯಕ್ಕೋಸ್ಕರ ಮತ್ತು ಅವರ ಅವಶ್ಯಕತೆಗೋಸ್ಕರ ಮಾಡಬೇಕೇ ಹೊರತು ನಮ್ಮ ಸ್ವ ಹಿತಾಸಕ್ತಿಗಾಗಿ ಮಾಡುವುದಲ್ಲ. ಹೀಗೆ ಮಾಡಿದ್ದರಿಂದ ವಿಶ್ವವಿದ್ಯಾಲಯದ assets ಬೆಳೆಯುವ ರೀತಿಯಲ್ಲಿ ಮಾಡಿದ್ದೀರಾ? ಹೀಗೆ ಮಾಡಿದವರ ಆಸ್ತಿ ಬೆಳೆಯಿತೇ ಎಂದು ನಾನು ಪ್ರಶ್ನಿಸುತ್ತೇನೆ. ಹೀಗೆ ಮಾಡಿದ್ದರಿಂದ ವಿಶ್ವವಿದ್ಯಾಲಯದ assets ಬೆಳೆಯಿತೇ? ಅಲ್ಲಿ ಕೊಡುವ ಎಲ್ಲಾ ಸವಲತ್ತುಗಳನ್ನು ಕಡಿತಗೊಳಿಸಿದರು. ಇವರುಗಳು ಸ್ವಂತವಾಗಿ ಬೆಳೆಯಬೇಕಾಗಿತ್ತು. ಹೀಗಾಗಿ ಅದನ್ನು ಬೆಳೆಸಿಕೊಂಡರು. ಇದು ಯಾವ ನ್ಯಾಯವೆಂದು ನಾನು ಕೇಳುತ್ತೇನೆ. ಏನೂ ಅನುಕೂಲತೆಗಳನ್ನು ನೀಡದೇ, ಕೇವಲ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಿದರೆ ಹೇಗೆ ಆಗುತ್ತದೆ? **[XXX]** ಎಂಬುದರ ಬಗ್ಗೆ ಚರ್ಚೆ ಮಾಡಬೇಕು. ಇವತ್ತಿನ ದಿವಸ ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯವನ್ನು ವಿಭಾಗ ಮಾಡಿದಿರಿ. ಅಲ್ಲಿ ನಿವೃತ್ತಿ ಹೊಂದಿದವರಿಗೆ ಪಿಂಚಣಿ ನೀಡಲು ಹಣವಿಲ್ಲ. ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರಿಗೆ ವೇತನ ನೀಡಲು ಹಣವಿಲ್ಲ. ನೂತನ ಏಳು ವಿಶ್ವವಿದ್ಯಾಲಯಗಳ ಸಂಬಂಧಪಟ್ಟ ಜಮೀನು ಕಟ್ಟಡ ಸಂಬಂಧ ಆಯಾ ಮಾತೃ ವಿಶ್ವವಿದ್ಯಾಲಯ ... ಇದರಲ್ಲಿ ನೂತನ ಏಳು ವಿಶ್ವವಿದ್ಯಾಲಯಗಳು ಆಯವ್ಯಯದಲ್ಲಿ ಮಂಜೂರಾಗಿರುವ ಎರಡು ಕೋಟಿ ರೂಪಾಯಿಗಳ ಮೊತ್ತವನ್ನು ಕ್ರಮ ಸಂಖ್ಯೆ (10) ರಂತೆ ಕ್ರಮ ವಹಿಸಿ, ಸರ್ಕಾರ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯಲ್ಲಿ ವಿಲೀನಾತಿ ಆದೇಶವನ್ನು ನಂತರ ಬಿಡುಗಡೆಗೊಳಿಸುವುದು. ಒಟ್ಟು ಏಳು ವಿಶ್ವವಿದ್ಯಾಲಯಗಳಿಗೆ ಕೇವಲ ಎರಡು ಕೋಟಿ ರೂಪಾಯಿಗಳನ್ನು ಮಾತ್ರವೇ ನೀಡಿದ್ದಾರೆ. ಚಡ್ಡಿ ಕೊಟ್ಟರೆ ಶರ್ಟ್ ಇಲ್ಲ; ಶರ್ಟ್ ಕೊಟ್ಟರೆ ಪ್ಯಾಂಟ್ ಇಲ್ಲ ಎನ್ನುವಂತಾಗಿದೆ. ನಾನೊಂದು ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ರಾಮನಗರ ಜಿಲ್ಲೆಯು ಹೊಸದಾಗಿ ಸೃಜನೆಯಾದಾಗ, ನಾವುಗಳೆಲ್ಲರೂ ಬೆಂಗಳೂರು ಜಿಲ್ಲೆಯವರಾದ್ದರಿಂದ ನನ್ನ ವಿದ್ಯಾರ್ಥಿ ಜೀವನದಲ್ಲಿ ನಾನು ಬೆಂಗಳೂರು ಜಿಲ್ಲೆಯವನು ಎಂದು ಬರೆಯುತ್ತಿದ್ದೆನು. ನಂತರದಲ್ಲಿ ಅದು ಬೆಂಗಳೂರು ಗ್ರಾಮಾಂತರವಾಯಿತು. ನಂತರದಲ್ಲಿ ಅದನ್ನು ಹೊಸದಾಗಿ ರಾಮನಗರ ಜಿಲ್ಲೆ ಎಂಬುದಾಗಿ ಮಾಡಿದರು. ಇದರಿಂದಾಗಿ ನಮಗೆ ಬಹಳಷ್ಟು ನಷ್ಟವಾಯಿತು. ಒಂದು ವೇಳೆ ರಾಮನಗರವು ಬೆಂಗಳೂರು ನಗರವನ್ನು ಸೇರಿಕೊಂಡಿದ್ದರೆ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳು ಬೆಳೆದುಕೊಳ್ಳುತ್ತಿದ್ದವು. ಇದು ಆರ್ಥಿಕವಾಗಿ ಅಥವಾ ಶೈಕ್ಷಣಿಕವಾಗಿ ಇರಬಹುದು. ಆದರೆ, ನಮ್ಮನ್ನು ಪ್ರತ್ಯೇಕಗೊಳಿಸಿದ್ದರಿಂದ ಚೆನ್ನಾಗಿ ನಡೆಯುತ್ತಿರುವವರನ್ನು ಕುಂಟುವ ರೀತಿಯಲ್ಲಿ ಮಾಡಿದರು.

(ಮುಂದು)

[XXX] ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(229) 11-03-2025(7-50) bkp-ks (ಸಭಾಪತಿಯವರ ಉಪಸ್ಥಿತಿ)

ಶ್ರೀ ಪುಟ್ಟಣ್ಣ (ಮುಂದು)

ಇವತ್ತು ಕೋಲಾರದಲ್ಲಿ ಯುನಿವರ್ಸಿಟಿ ಮಾಡುತ್ತೇವೆಂದು ಹೊರಟರು. ಬೆಂಗಳೂರು ಯುನಿವರ್ಸಿಟಿಯ ಅಧೀನದಲ್ಲಿ ಒಟ್ಟಾಗಿ ಇತ್ತು. ಬೆಂಗಳೂರು ಯೂನಿವರ್ಸಿಟಿಗೆ ಬೆಂಗಳೂರು ಗ್ರಾಮಾಂತರ, ರಾಮನಗರ, ಸಂಪೂರ್ಣವಾಗಿ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಇವುಗಳೆಲ್ಲಾ ಸೇರಿದ್ದವು. ಕೋಲಾರದಲ್ಲಿ ಯೂನಿವರ್ಸಿಟಿ ಮಾಡಲಿಕ್ಕೆ ಹೋಗಿದ್ದರು. ಅಲ್ಲಿನ ಜನರು ಏನು ಹೇಳಿದರು ಎಂದರೆ ಕೋಲಾರವನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ಸೇರಿಸಿ ಎಂದು ಹೇಳಿದರು. ಏಕೆಂದರೆ, ನಾವು ಬೆಂಗಳೂರಿಗೆ ಸೇರಬೇಕೆಂದು ಹೇಳಿದರು. ಬೆಂಗಳೂರು ಈ ಪ್ರಪಂಚದ ಮೂಲೆ-ಮೂಲೆಗೂ ಗೊತ್ತಿದೆ. ಬೆಂಗಳೂರಿನ ಜೊತೆ ಇದ್ದರೆ ನಮ್ಮ ಮಕ್ಕಳಿಗೆ ಏನಾದರೂ ಸ್ವಲ್ಪ ಅನುಕೂಲವಾಗುತ್ತದೆ, ಯಾವ ದೇಶಕ್ಕೆ ಹೋದರೂ ಸಹ ಬದುಕಬಹುದು. ಅವರು ನಮ್ಮನ್ನು ಗುರುತಿಸುತ್ತಾರೆ, ಕೋಲಾರವೆಂದರೆ ಗೊತ್ತಿರುವುದಿಲ್ಲ ಎಂದು ಹೇಳಿದರು. Already established ಆಗಿರುವುದು ಬೆಂಗಳೂರು ಯೂನಿವರ್ಸಿಟಿ ಇರಬಹುದು, ಮೈಸೂರು ಯೂನಿವರ್ಸಿಟಿ ಇರಬಹುದು, ಕರ್ನಾಟಕ ಯೂನಿವರ್ಸಿಟಿ ಇರಬಹುದು, ಗುಲ್ಬರ್ಗ ಯೂನಿವರ್ಸಿಟಿ ಇರಬಹುದು, ಇವುಗಳಲ್ಲಿ ಮಕ್ಕಳ ಸಂಖ್ಯೆ ಇದೆ, ಮಾಡಿ. ಅಲ್ಲಿ ಸೆಂಟರ್‌ಗಳನ್ನು ಕೊಡುವುದರ ಬದಲಿಗೆ ಯೂನಿವರ್ಸಿಟಿಗಳನ್ನು ಕೊಟ್ಟು ಅವುಗಳನ್ನು ನೀವು ನಡೆಸಿಕೊಂಡು ಹೋಗಿ ಎನ್ನುವುದರ ಬದಲಿಗೆ ಆ ಸೆಂಟರ್‌ಗಳನ್ನೇ ಒಂದು ಸೆಂಟರ್ ಮಾಡಿ. ಆ ಹೆಸರು already established ಆಗಿದೆ. ಈ ಹೆಸರು ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಹೋಗಿದೆ. ಗುಲ್ಬರ್ಗ ಯೂನಿವರ್ಸಿಟಿ ಎಂದರೆ ಗೊತ್ತು, ಕರ್ನಾಟಕ ಯೂನಿವರ್ಸಿಟಿ ಎಂದರೆ ಗೊತ್ತು, ಬೆಂಗಳೂರು ಯೂನಿವರ್ಸಿಟಿ ಎಂದರೆ ಗೊತ್ತು. ಮೈಸೂರು ಯೂನಿವರ್ಸಿಟಿ ಗೊತ್ತು, ಮಂಗಳೂರು ಯೂನಿವರ್ಸಿಟಿ ಗೊತ್ತು, ನೀವು ಏನೂ ಕೊಡದೇ ಚೇರ್ ಮತ್ತು ಟೇಬಲ್ ಅನ್ನು ಅವರೇ ತೆಗೆದುಕೊಂಡು ಕುಳಿತುಕೊಳ್ಳುವ ರೀತಿಯಲ್ಲಿ ಮಾಡಿಬಿಟ್ಟಿದ್ದಾರೆ.

ಮಾನ್ಯ ಸಭಾಪತಿಯವರೆ, ನಾನು ಯಾರ ಬಗ್ಗೆಯೂ ಹೇಳಲಿಕ್ಕೆ ಹೋಗುವುದಿಲ್ಲ. ಈಗ ಕೇಂದ್ರ ಸರ್ಕಾರ ಯು.ಜಿ.ಸಿ.ಯಲ್ಲಿ ನಿಯಮಾವಳಿಯನ್ನು ತಂದು ನಮ್ಮ ಘನತೆವೆತ್ತ ರಾಜ್ಯಪಾಲರಿಗೆ ಅಧಿಕಾರ ಕೊಡಬೇಕೆಂದು ತೀರ್ಮಾನ ಮಾಡಿದೆ. ಯೂನಿವರ್ಸಿಟಿಗಳಲ್ಲಿ ವೈಸ್ ಚಾನ್ಸಲರ್ ರವರ ನೇಮಕಾತಿಯಲ್ಲಿಯೂ ಅವರಿಗೆ ಅಧಿಕಾರ ಕೊಟ್ಟಿದ್ದಾರೆ. ಹೀಗೆ ಮಾಡಿದರೆ ಏನಾಗಬೇಕು? ಇದರ ಬಗ್ಗೆ ನೀವು ಯೋಚನೆ ಮಾಡಬೇಕು. ನಾನು ರಾಜಕೀಯ ಮಾತನಾಡುತ್ತಿದ್ದೇನೆಂದು ಯಾರು ಬಯಸಬೇಡಿ. ಮುಂದೆ ಏನಾಗಬಹುದು ಎಂದು ನೋಡಬೇಕಾಗಿದೆ. **[XXX]**

[XXX] ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ನಮ್ಮ ನಿಮ್ಮ ನಡುವೆ ನಡೆಯುವಂತಹ ಜಗಳ ಆಗಬಾರದು. ನೀವು ಮಾಡಿದ್ದೀರಿ, ನಾವು ತೆಗೆಯುತ್ತೇವೆ ಎನ್ನುವಂತಾಗಬಾರದು. ಬಿಜೆಪಿಯವರು ಮಾಡಿದ್ದು, ಕಾಂಗ್ರೆಸ್‌ನವರು ತೆಗೆಯುವಂತಾಗಬಾರದು. ಈ ನಾಡಿನ ಪ್ರತಿಯೊಬ್ಬ ವಿದ್ಯಾರ್ಥಿಗಳು ಸಹ ನಮ್ಮ ಮಕ್ಕಳೇ ಎಂದು ನೋಡಬೇಕು. ಅದು ಯಾರ ಜಿಲ್ಲೆಯಲ್ಲಿ ಆಗಿರಲಿ, ಯಾವುದೇ ತಾಲ್ಲೂಕು ಆಗಿರಲಿ. ಅವರ ಭವಿಷ್ಯವೇ ಮುಖ್ಯವಾಗಿರಬೇಕೇ ಹೊರತು, ನಮ್ಮ ಸ್ವಹಿತಾಸಕ್ತಿ ಮುಖ್ಯವಾಗಿರಬಾರದು. ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮಾಡಲಾಯಿತು. ಏತಕ್ಕೆ ಮಾಡಿದರು ಎಂದರೆ ಬೆಂಗಳೂರಿನವರ ಜೊತೆ ನಾವು ಸೇರಿಕೊಂಡರೆ ನಾವು ಚೆನ್ನಾಗಿ ಆಗಿ ಆರ್ಥಿಕವಾಗಿ ಮುಂದೆ ಬೆಳೆಯುತ್ತೇವೆಂದು ಮಾಡಲಾಯಿತು. ಇವತ್ತು ಶೈಕ್ಷಣಿಕವಾಗಿ ಒಳ್ಳೆಯ ಹೆಸರು ಮಾಡಿರುವಂತಹ ವಿಶ್ವವಿದ್ಯಾನಿಲಯಗಳು ಏನಿವೆ, ಅಲ್ಲಿ ಕೆಲವು ಕೇಂದ್ರಗಳನ್ನು ಮಾಡಿಸಿ. ಈ ಹೊಸ ವಿಶ್ವವಿದ್ಯಾನಿಲಯಗಳಿಗೆ ಏನು 2 ಕೋಟಿ ರೂಪಾಯಿಗಳಂತೆ ಹಾಕುತ್ತಿದ್ದೀರಿ, ಇದನ್ನು ಆ ಕೇಂದ್ರಗಳಿಗೆ ಹಾಕಿಸಿ. ತಲಾ 25 ಕೋಟಿ ರೂಪಾಯಿಗಳಂತೆ ಮಾಡಿ. ನೀವು ಏನು ಈ ಬಾರಿ ಹೆಣ್ಣು ಮಕ್ಕಳು, ಹಿಂದುಳಿದ ಮಕ್ಕಳು ಓದುತ್ತಿದ್ದಾರೆಂದು ಏನು ಹೇಳುತ್ತಿದ್ದೀರಿ, ಈ ಮಕ್ಕಳಿಗೆಲ್ಲಾ ಅಲ್ಲಿಯೇ ಕೊಡಿ. ಏನು ಯೂನಿವರ್ಸಿಟಿ ಮಾಡಿಕೊಡಬೇಕೆಂದೇನೂ ಇಲ್ಲ. ನೀವು ಈ ಪೇಮೆಂಟ್ ಕೋಟಾವನ್ನು ತೆಗೆಯಿರಿ. ವಿ.ಸಿ. ನೇಮಕಾತಿಯಲ್ಲಿ ನಡೆಯುತ್ತಿದೆಯಲ್ಲಾ, ಅದನ್ನು ಸಂಪೂರ್ಣವಾಗಿ ತೆಗೆಯಿರಿ. ವಿ.ಸಿ. ನೇಮಕಾತಿ ಅಧಿಕಾರವನ್ನು ರಾಜ್ಯ ಸರ್ಕಾರ ಇಟ್ಟುಕೊಳ್ಳಬೇಕು. ಆಗ ಪಾರದರ್ಶಕ ಮತ್ತು ಪ್ರಮಾಣಿಕತೆ ಬರುತ್ತದೆ. ನೀವು ಅಧಿಕಾರವನ್ನು ಯಾರಿಗೋ ಕೊಟ್ಟುಬಿಟ್ಟು, ಆನೆಯ ಹತ್ತಿರ ಹೋಗಿ ಜಗಳ ಆಡುವುದಕ್ಕೆ ಆಗುತ್ತದೆಯೇ? ದಯಮಾಡಿ ಮಾನ್ಯ ಸಚಿವರಿಗೆ ನಾನು ಒತ್ತಾಯ ಮಾಡುವುದೇನೆಂದರೆ, ಇದರಲ್ಲಿ ಯಾರದ್ದೇ ಸ್ವಾಭಿಮಾನ ಮತ್ತೊಂದು ಇಲ್ಲ. ಇಲ್ಲಿ ಮಕ್ಕಳ ಭವಿಷ್ಯವೇ ಮುಖ್ಯವಾಗಿರುತ್ತದೆ. ಎಲ್ಲಾ ಮಕ್ಕಳ ಭವಿಷ್ಯವನ್ನು ರೂಪಿಸುವಂತಹ ಜವಾಬ್ದಾರಿ ನಿಮ್ಮ ಮೇಲೆ ಇರುತ್ತದೆ.

ಸಭಾಪತಿಯವರು:– ಸಾಕು ಮುಗಿಸಿ.

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೆ, ನಾನು ಜಾಸ್ತಿ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ಇದು 2022 ರಲ್ಲಿ 7+2 ಯೂನಿವರ್ಸಿಟಿಗಳಿಗೆ ಮಾಡಿರುವಂತಹ ಆದೇಶ ಆಗಿರುತ್ತದೆ. ಇದನ್ನು ನಾವು ಮಾಡಿರುವುದಲ್ಲ, ಈ ಸರ್ಕಾರ ಮಾಡಿರುವುದಲ್ಲ. ನಾನು ನೀವು ಮಾಡಿದ್ದೀರಿ ಎಂದು blame ಮಾಡುತ್ತಿಲ್ಲ. ಆದರೆ, ಏನಾಗಿದೆ ಎಂದು ಅಷ್ಟನ್ನೇ ನಾನು ಹೇಳುತ್ತಿದ್ದೇನೆ. ಹುಟ್ಟುವ ಮಗುವಿಗೆ ಕೈಕಾಲು ಕಟ್ಟಿ, ಬಾಯಿಗೆ ಟೇಪ್ ಹಾಕಿದರೆ ಅದು ಹೇಗೆ ಬೆಳೆಯಲಿಕ್ಕೆ ಸಾಧ್ಯ? ಯಾರು ಯಾರು ಅಲ್ಲೀಯೇ ಉಳಿದುಕೊಳ್ಳುತ್ತಾರೆಂದು ಹಾಗೂ bifurcation ಆಗುತ್ತಾರೆ, ಅದನ್ನು ಮಾಡಲಾಗಿದೆಯೇ? ಆದಾದಮೇಲೆ ಒಂದು ವರ್ಷ, ಒಂದು ತಿಂಗಳು ಸರ್ಕಾರ ಇತ್ತು. ಒಂದೇ ಒಂದನ್ನು ಮಾಡಲಿಲ್ಲ. ಆ ಷರತ್ತನ್ನು ಏನು ಹಾಕಿದರು? 15 ದಿವಸಗಳ ಆಗಬೇಕು, ಒಂದು ತಿಂಗಳಿನಲ್ಲಿ ತೀರ್ಮಾನ ಆಗಬೇಕೆಂದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ಷರತ್ತು ಹಾಕಿದರು. ಆದರೆ ಅದ್ಯಾವುದೂ ಆಗಲಿಲ್ಲ. ಹೀಗಾದರೆ ಯುನಿವರ್ಸಿಟಿ ಬೆಳೆಯಲಿಕ್ಕೆ ಹೇಗೆ ಸಾಧ್ಯ? ಅದಕ್ಕೆ ದಯಮಾಡಿ ನೀವು ಏನು ಮಾಡುತ್ತಿರೋ ಈ ರಾಜ್ಯದ ಪ್ರತಿಯೊಬ್ಬ ವಿದ್ಯಾರ್ಥಿ ಕೂಡ ಉನ್ನತ ವ್ಯಾಸಂಗದ ಅವಕಾಶದಿಂದ ವಂಚಿತನಾಗಬಾರದು. ಆ ಮಕ್ಕಳಿಗೆ ಈಗ ನೀವು ಏನು ಕೇಂದ್ರಗಳನ್ನು ಮಾಡಿ ಯೂನಿವರ್ಸಿಟಿಗಳನ್ನು ನಡೆಸಿಕೊಂಡು ಹೋಗಿ ಎಂದು ಹೇಳುತ್ತಿದ್ದೀರಿ, ಅದೇ ಕೇಂದ್ರವನ್ನು ಉನ್ನತೀಕರಿಸಿ, ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳೊಂದಿಗೆ ಆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಿಸಿ. ಅವರಿಗೆ placement ಸಿಗುವ ರೀತಿಯಲ್ಲಿ ಮಾಡಿ. ಡಿಗ್ರಿಯಾದ ಕೂಡಲೇ, ಅವರಿಗೆ placement ಸಿಗಬೇಕು. ಪಿ.ಜಿ.ಯಾದ ಕೂಡಲೇ placement ಸಿಗಬೇಕು, ಆ ರೀತಿಯಲ್ಲಿ ಮಾಡಿ. ಶ್ರೀಮಾನ್ ಮಧು ಬಂಗಾರಪ್ಪನವರು ಇದ್ದಾಗ ಈಗಾಗಲೇ ನಾನು ಏನು ಹೇಳಿದೆ ಎಂದರೆ ಈಗ ಎಲ್ಲರೂ ನಮ್ಮ ನಮ್ಮ ಊರಿನಲ್ಲಿಯೇ ಶಾಲೆ ಇರಬೇಕೆಂದು ಹೇಳುತ್ತಾರೆ. ನಮ್ಮ ಊರಿನಲ್ಲಿ 6 ಜನ ಮಕ್ಕಳು, ಮತ್ತೊಂದು ಊರಿನಲ್ಲಿ 6 ಜನ ಮಕ್ಕಳು, ಇನ್ನೊಂದು ಊರಿನಲ್ಲಿ 10 ಜನ ಮಕ್ಕಳು ಇರುತ್ತಾರೆ. ಆದರೆ ಆ ಮಕ್ಕಳಿಗೆ ಟೀಚರ್‌ಗಳು ಇಲ್ಲದೇ ಇರುವ ಪರಿಸ್ಥಿತಿ ಇದೆ. ಎಲ್ಲವನ್ನು merge ಮಾಡಿ, ಬಸ್‌ಗಳನ್ನು ಉಚಿತವಾಗಿ ಬಿಡಿ. ಎಲ್ಲಾ ಟೀಚರ್‌ಗಳು ಎಲ್ಲಾ ವಿಷಯಗಳ ಪಾಠವನ್ನು ಮಾಡುವಂತೆ ಮಾಡಿ. 1ನೇ ತರಗತಿಯಲ್ಲಿ ಆ ಮಗು ಏನು ಕಲಿಯಬೇಕೋ ಅದನ್ನು ಕಲಿಯುವಂತೆ ಮಾಡಿ. ಇಲ್ಲಿಯೂ ಅದನ್ನೇ ಹೇಳುತ್ತಿದ್ದೇನೆ. ಒಂದೊಂದು ಇಲಾಖೆಯಲ್ಲಿ ಒಬ್ಬರೂ ಸಹಿತ ಟೀಚರ್ ಇರುವುದಿಲ್ಲ. ಆ ರೀತಿಯ ಪರಿಸ್ಥಿತಿ ಇದೆ. ದಯಮಾಡಿ, ಈ ಒಂದು ವಿಷಯದಲ್ಲಿ ಸರ್ಕಾರ ವಿದ್ಯಾರ್ಥಿಗಳ ಪರವಾಗಿ, ವಿದ್ಯಾರ್ಥಿಗಳ ಹಿತರಕ್ಷಣೆ ಮಾಡುವ ಮುಖಾಂತರ ಅವರ ಭವಿಷ್ಯವನ್ನು ರೂಪಿಸುವ ದೃಷ್ಟಿಯಿಂದ ಕೆಲಸ ಮಾಡಬೇಕು. ಡಾ॥ ಮನಮೋಹನ್ ಸಿಂಗ್ ಮತ್ತು ಡಾ॥ ಎ.ಪಿ.ಜೆ ಅಬ್ದುಲ್ ಕಲಾಂ ರವರ ಹೆಸರನ್ನು ನಾವುಗಳೆಲ್ಲರೂ ಹೇಳುತ್ತೇವೆ. ಆದರೆ, ಆ ರೀತಿಯಲ್ಲಿ ಬದುಕುತ್ತೇವೆಂದು ನಾವು ಯಾರು ಹೇಳುವುದಿಲ್ಲ. ಡಾ॥ ಮನಮೋಹನ್ ಸಿಂಗ್‌ರವರ ಜೊತೆ ಬದುಕುತ್ತೇನೆಂದು ಯಾರಾದರೂ ಹೇಳಲಿ ನೋಡೋಣ. ಆ ರೀತಿ ಹೇಳಲಿಕ್ಕೆ ಸಾಧ್ಯವಿಲ್ಲ. ಆ ರೀತಿಯ ವ್ಯವಸ್ಥೆಯ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಇಂತಹ ಪರಿಸ್ಥಿತಿಯಲ್ಲಿಯೂ ಕೂಡ ನಮ್ಮ ಮಕ್ಕಳ ಭವಿಷ್ಯವನ್ನು ರೂಪಿಸಿ, ನಮ್ಮ ಭವ್ಯ ಭಾರತವನ್ನು ಕಟ್ಟಿಕೊಳ್ಳುವಂತಹ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ.

ಆದ್ದರಿಂದ, ದಯಮಾಡಿ ಮಾನ್ಯ ಸಚಿವರು ಹಾಗೂ ಸರ್ಕಾರ ಈ ವಿಚಾರದಲ್ಲಿ ಒಳ್ಳೆಯ ತೀರ್ಮಾನ ತೆಗೆದುಕೊಳ್ಳಬೇಕು, ಮಕ್ಕಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ಸಿಗಬೇಕು. ಮೂಲಭೂತ ಸೌಕರ್ಯಗಳು ಎಲ್ಲರಿಗೂ ಸಿಗುವ ರೀತಿಯಲ್ಲಿ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಸಭಾಪತಿಯವರು:- ಶ್ರೀಯುತ ನಿರಾಣಿ ಹಣಮಂತ್ ರುದ್ರಪ್ಪನವರು ಮಾತನಾಡಲಿ.

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೆ,

ಶ್ರೀ ಎಸ್.ವಿ. ಸಂಕನೂರ(ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೆ,.....

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ದಯವಿಟ್ಟು ನೀವು ಕುಳಿತುಕೊಳ್ಳಿ.

ಶ್ರೀ ಎಸ್.ವಿ. ಸಂಕನೂರ(ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ಮಾನ್ಯ ಪುಟ್ಟಣ್ಣನವರು ವೈಸ್ ಚಾನ್ಸಲರ್ ರವರ ನೇಮಕಾತಿ ಕುರಿತು ಹೇಳಿದರು, ಅದಕ್ಕೆ ಹಣವನ್ನು ತೆಗೆದುಕೊಂಡು ಮಾಡಲಾಗಿದೆ ಎಂದು ಹೇಳಿದ್ದಾರೆ. ನಾವು ಅದನ್ನು transparent ಆಗಿ ಮಾಡಿದ್ದೇವೆ. ನನಗೆ ಮಾತನಾಡಲಿಕ್ಕೆ ದಯವಿಟ್ಟು ಅವಕಾಶವನ್ನು ಕೊಡಿ.

ಸಭಾಪತಿಯವರು:– ಶ್ರೀಯುತ ಸಂಕನೂರ ರವರೆ, ಆಗುವುದಿಲ್ಲ, ಕುಳಿತುಕೊಳ್ಳಿ.

ಶ್ರೀ ಎಸ್.ವಿ. ಸಂಕನೂರ(ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ನಮ್ಮ ಸರ್ಕಾರದ ಮೇಲೆ ಅಪಾದನೆ ಮಾಡಿದರೆ ಹೇಗೆ ಸುಮ್ಮನೆ ಕುಳಿತುಕೊಳ್ಳಲಿಕ್ಕೆ ಸಾಧ್ಯ?

ಸಭಾಪತಿಯವರು:– ಶ್ರೀಯುತ ಸಂಕನೂರ ರವರೆ, ಈ ವಿಚಾರ ಅವರ ವೈಯಕ್ತಿಕ ಅಭಿಪ್ರಾಯವಾಗಿದೆ.

ಶ್ರೀ ಎಸ್.ವಿ. ಸಂಕನೂರ(ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ನಮ್ಮ ಸರ್ಕಾರದ ಮೇಲೆ ಅಪಾದನೆ ಮಾಡಿದರೆ ಹೇಗೆ ಸುಮ್ಮನೆ ಕುಳಿತುಕೊಳ್ಳಲಿಕ್ಕೆ ಸಾಧ್ಯ? ನಮಗೆ ಉತ್ತರ ಕೊಡಲಿಕ್ಕೆ ದಯವಿಟ್ಟು ಸಮಯ ಕೊಡಿ. ನಮ್ಮ ಸರ್ಕಾರದ ಮೇಲೆ ಅಪಾದನೆ ಮಾಡಿದರೆ ನಾವು ಸುಮ್ಮನೆ ಕುಳಿತುಕೊಳ್ಳಬೇಕೆ? ನಾನು ಇದನ್ನು ಒಪ್ಪುವುದಿಲ್ಲ.

(ಗೊಂದಲ)

ಸಭಾಪತಿಯವರು:– ಶ್ರೀಯುತ ಸಂಕನೂರ ರವರೆ, ನೀವು ಉತ್ತರವನ್ನು ಕೊಡುತ್ತೀರಾ? ಒಂದು ನಿಮಿಷ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್.ವಿ. ಸಂಕನೂರ:– ಮಾನ್ಯ ಪುಟ್ಟಣ್ಣನವರು, ಪೇಮೆಂಟ್ ಆಗಿದೆ ಎಂದು ಹೇಳಿದ್ದಾರೆ. **ಅವರು ಅದನ್ನು prove ಮಾಡಬೇಕು. ನಮ್ಮ ಸರ್ಕಾರವು ಬಹಳ transparent ಆಗಿ ಮಾಡಿದ್ದಾರೆ.**

ಶ್ರೀ ಪಿ.ಹೆಚ್.ಪೂಜಾರ್:– ಮಾನ್ಯ ಸಭಾಪತಿಯವರೆ,.....

ಸಭಾಪತಿಯವರು:– ಶ್ರೀಯತ ಪೂಜಾರ್‌ರವರೆ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೆ, ನಾನು ಹೇಳಿರುವುದು ನನ್ನ ಅಭಿಪ್ರಾಯ. [XXX]

(ಗೊಂದಲ)

[XXX] ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ವಿ. ಸಂಕನೂರ:– ಮಾನ್ಯ ಸಭಾಪತಿಯವರೆ, ಅವರ ಸರ್ಕಾರದವರು ಹೇಳಿರಬೇಕು. ನಾನು ಇದನ್ನು ಒಪ್ಪುವುದಿಲ್ಲ. ನಮ್ಮ ಸರ್ಕಾರವು ಎಷ್ಟೊಂದು transparent ಆಗಿ ಕೆಲಸ ಮಾಡಿದ್ದಾರೆ.

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೆ, ಅವರ ಸರ್ಕಾರದವರು ಹೇಳಿರುವುದು. ನೋಡಿ, ಇದರ ಬಗ್ಗೆಯೂ ಚರ್ಚೆಯಾಗುತ್ತದೆ. ನಾನು ಸುಳ್ಳು ಹೇಳುವುದಿಲ್ಲ. ನಾನು ಮಾತನಾಡುತ್ತೇನೆ, ಸುಮ್ಮನೆ ಇರುವುದಿಲ್ಲ.

ಶ್ರೀ ಎಸ್.ವಿ. ಸಂಕನೂರ:– ಮಾನ್ಯ ಸಭಾಪತಿಯವರೆ, ಇಲ್ಲಿ ಜಾಗ ಕೇಳತ್ತಿದ್ದಾರೆ, ಹಣ ಕೇಳುತ್ತಿಲ್ಲ. ಅವರು ಏನು ಕೇಳುತ್ತಿದ್ದಾರೆಂದರೆ, parental university ಯಿಂದ shift ಮಾಡಲಿಕ್ಕೆ ಹೇಳಿದ್ದಾರೆ. ಆ ಹುದ್ದೆ ನೇಮಕಾತಿ ಮಾಡಬೇಕೆಂದು ಅವರು ಹೇಳುತ್ತಿದ್ದಾರೆ.

ಸಭಾಪತಿಯವರು:– ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು.

(ಮುಂದು)

(230) 11.03.2025 08.00 ಎಸ್‌ವಿ-ಎಂಡಿ (ವಿಕೆ) **(ಸಭಾಪತಿಯವರ ಉಪಸ್ಥಿತಿ)**

(ಗೊಂದಲ)

ಸಭಾಪತಿಯವರು:– ಅವರ ಅಭಿಪ್ರಾಯವನ್ನು ಅವರು ಹೇಳಿದ್ದಾರೆ.

(ಗೊಂದಲ)

ಶ್ರೀ ಎಸ್.ವಿ.ಸಂಕನೂರ:– ಮಾನ್ಯ ಸಬಾಪತಿಯವರೆ, ತಪ್ಪು ಸಂದೇಶ ಹೋಗಬಾರದಲ್ಲವೆ?

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಬಾಪತಿಯವರೆ, ನಾನು...

ಸಭಾಪತಿಯವರು:– ಮಾನ್ಯ ಭೋಜೇಗೌಡರೆ, ಒಂದು ನಿಮಿಷ... ಮಾನ್ಯ ಸಂಕನೂರ ಅವರೆ, ಮಾತನಾಡಲಿಕ್ಕೆ ಅವರು ಸ್ವತಂತ್ರರಿದ್ದಾರೆ. ಅವರು ಮಾತನಾಡಲಿ. ತಪ್ಪು, ಸರಿ; ಅಸಂಸದೀಯ ಪದಗಳನ್ನು ನಾನು ಕಡತದಿಂದ ತೆಗೆದುಹಾಕುತ್ತೇನೆ. ಅವರು ಮಾತನಾಡಲಿಕ್ಕೆ ಸ್ವತಂತ್ರರಿದ್ದಾರೆ. ಅದಕ್ಕೆ ನೀವು ಏಕೆ ಉತ್ತರ ಹೇಳುತ್ತೀರಿ? ಸದನ ಮುಗಿದ ನಂತರ ನೀವು ನನ್ನ ಬಳಿ ಬನ್ನಿ, ಅದಕ್ಕೆ ಉತ್ತರವನ್ನು ನಾನು ಹೇಳುತ್ತೇನೆ.

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೆ, ಈ ಗಮನ ಸೆಳೆಯುವ ಸೂಚನೆಗೆ ಮೊದಲು ಸಹಿ ಹಾಕಿದವನೇ ನಾನು.

ಶ್ರೀ ಪುಟ್ಟಣ್ಣ:– ಮಾನ್ಯ ಭೋಜೇಗೌಡರೆ, ಸಹಿ ಹಾಕಿ ನೀವು ಹೋಗಿ ಪೀಠದಲ್ಲಿ ಕುಳಿತುಕೊಂಡು ಬಿಟ್ಟಿದ್ರಲ್ಲಾ?

ಸಭಾಪತಿಯವರು:– ಮಾನ್ಯ ಭೋಜೇಗೌಡರೆ, ಕೊನೆಯಲ್ಲಿ ನಿಮಗೆ ಅವಕಾಶವನ್ನು ಕೊಡುತ್ತೇನೆ. ಈಗ ಮಾನ್ಯ ನಿರಾಣಿಯವರು ಮಾತನಾಡಲಿ.

ಶ್ರೀ ಹಣಮಂತ ರುದ್ರಪ್ಪ ನಿರಾಣಿ:– ಮಾನ್ಯ ಸಭಾಪತಿಯವರೆ, ಅವರು ಸೀನಿಯರ್ ಇದ್ದಾರೆ. ಅವರಿಗೆ ಕೊನೆಯಲ್ಲಿ ಅವಕಾಶವನ್ನು ಕೊಡಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಆಯಿತು, ನೀವು ಮಾತನಾಡಿ. ಏನೂ ತಲೆಬೇನೆ ಮಾಡಿಕೊಳ್ಳಬೇಡಿ.

ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಪದವೀಧರರ ಕ್ಷೇತ್ರ):– ಮಾನ್ಯ ಸಬಾಪತಿಯವರೆ, 9 ವಿಶ್ವವಿದ್ಯಾಲಯಗಳ ಕುರಿತು ಎಲ್ಲರೂ ಸುದೀರ್ಘವಾಗಿ ಮಾತನಾಡಿದ್ದಾರೆ. 9 ವಿಶ್ವವಿದ್ಯಾಲಯಗಳನ್ನು ರದ್ದು ಮಾಡುವಂಥ ನಿರ್ಣಯ ಬಹಳಷ್ಟು ನೋವಿನ ಸಂಗತಿ.

ಸಭಾಪತಿಯವರು:– ಹೇಳಿದ್ದನ್ನೇ ಹೇಳಬೇಡಿ. ಹೊಸದೇನಾದರೂ ಇದ್ದರೆ ಹೇಳಿ. ಬಾಗಲಕೋಟೆಯ ವಿಶ್ವವಿದ್ಯಾಲಯವು ಜಮಖಂಡಿಯ ಕಟ್ಟಡದಲ್ಲಿ ನಡೆಯುತ್ತಿದೆ. ತನ್ನದೇ ಆದಂತಹ ಸುಸಜ್ಜಿತ ಸರ್ಕಾರಿ ಕಟ್ಟಡದಲ್ಲಿ ಕಾಲೇಜು ನಡೆಯುತ್ತಿದೆ.

ಸಭಾಪತಿಯವರು:– ಮಾನ್ಯ ನಿರಾಣಿಯವರೆ, ನಮಗೆ, ನಿಮಗೆ ಅನುಕೂಲವಾಗಿದೆಯಲ್ಲವೆ?

ಶ್ರೀ ಹಣಮಂತ ರುದ್ರಪ್ಪ ನಿರಾಣಿ:– ಬಹಳಷ್ಟು ಅನುಕೂಲವಾಗಿದೆ. ಸುಮಾರು 45,000 ವಿದ್ಯಾರ್ಥಿಗಳು ಇಲ್ಲಿ admission ಆಗಿದ್ದಾರೆ. 73 ಕಾಲೇಜುಗಳು ಇಲ್ಲಿವೆ. ಅತಿ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇವತ್ತಿನವರೆಗೂ ಸರ್ಕಾರದ grant ಏನನ್ನೂ ಕೇಳಿಲ್ಲ. ಇಲ್ಲಿ ರೂ. 15 ಕೋಟಿ ವಿದ್ಯಾರ್ಥಿಗಳ ಹಣ deposit ಇದೆ. ಅದನ್ನು ಬಳಸಲಿಕ್ಕೆ ಸರ್ಕಾರ ಅವಕಾಶ ಕೊಟ್ಟಿಲ್ಲ. ಅಲ್ಲಿನ ವಿದ್ಯಾರ್ಥಿಗಳಿಂದ ಸಂಗ್ರಹವಾಗಿರುವ ಹಣವನ್ನು ಖರ್ಚು ಮಾಡುವುದಕ್ಕೂ ಸರ್ಕಾರ ಅವಕಾಶ ಕೊಟ್ಟಿಲ್ಲ. ಅದರೂ ಕೂಡ ವ್ಯವಸ್ಥಿತವಾಗಿ ಶಿಕ್ಷಣ ಸಂಸ್ಥೆ ನಡೆಯುತ್ತಿದೆ. UGC recognition 2F ಅನ್ನು ಕಾಲೇಜು ಪಡೆದುಕೊಂಡಿದೆ. 22 Under Graduate Programmes ನಡೆಯುತ್ತಿವೆ. 30 Post Graduate Programmes ಗಳು ಆ ಶಿಕ್ಷಣ ಸಂಸ್ಥೆಯಲ್ಲಿ ನಡೆಯುತ್ತಿವೆ. ಅಷ್ಟೇ ಅಲ್ಲದೆ PHD Programme ಕೂಡ ಕೇವಲ 4 ವರ್ಷಗಳಲ್ಲಿ ಇವತ್ತು ಜಮಖಂಡಿ ಕಾಲೇಜಿನಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿದೆ. ಜೊತೆಗೆ ಜಮಖಂಡಿಯ ಹಿರಿಯರು ಸೇರಿ 31 ಎಕರೆ ಸರ್ಕಾರಿ ಜಮೀನನ್ನು ಗುರುತಿಸಿದ್ದಾರೆ. ಭವಿಷ್ಯದಲ್ಲಿ ಉಚಿತವಾಗಿ ಕಾಲೇಜಿಗೆ ಜಮೀನನ್ನು ಕೊಡಲಿಕ್ಕೆ. ಇದರ ಜೊತೆಯಲ್ಲಿ ವಿಜಯಪುರ ಜಿಲ್ಲೆಯಲ್ಲಿ ಕೂಡ ಪ್ರತ್ಯೇಕ ಕಾಲೇಜು ಆಗಬೇಕೆನ್ನುವ ಬೇಡಿಕೆ ಇತ್ತು. ಇಲ್ಲಿ ನಮ್ಮ ಇಬ್ಬರು ಹಿರಿಯ ಸಚಿವರು ಇದ್ದಾರೆ. ವಿಜಯಪುರವನ್ನು ಬಾಗಲಕೋಟೆಯೊಂದಿಗೆ ಸೇರಿಸುವುದಕ್ಕೆ ಅವಕಾಶ ಮಾಡಿಕೊಟ್ಟರೆ 200 ಕಾಲೇಜು, ಸುಮಾರು ಒಂದೂವರೆ ಲಕ್ಷ ವಿದ್ಯಾರ್ಥಿಗಳು ಇರುವಂತಹ ವಿಶ್ವವಿದ್ಯಾಲಯವಾಗುತ್ತದೆ. ವಿಜಯಪುರದವರೆಲ್ಲರೂ ನಮಗೆ ಮನವಿ ಕೊಟ್ಟಿದ್ದಾರೆ. ನಾವು ಬಾಗಲಕೋಟೆ ಜಿಲ್ಲೆಯನ್ನು ದಾಟಿ ಬೆಳಗಾವಿ ಜಿಲ್ಲೆಗೆ ಹೋಗಿ admission ತೆಗೆದುಕೊಳ್ಳಬೇಕು. ನಮಗೆ ಬಾಗಲಕೋಟೆಯ ಜೊತೆಗೆ join ಮಾಡಿ ಇಲ್ಲವೇ ವಿಜಯಪುರಕ್ಕೆ ಪ್ರತ್ಯೇಕವಾದಂತಹ ವಿಶ್ವವಿದ್ಯಾಲಯವನ್ನು ಕೊಡಿ ಎನ್ನುವ ಕೂಗಿದೆ. ಅದಕ್ಕಾಗಿ ತಾವಿಬ್ಬರೂ ಹಿರಿಯ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ಮಾರ್ಗದರ್ಶನ ಮಾಡಬೇಕು. ಬಾಗಲಕೋಟೆಯೊಂದಿಗೆ ಇದನ್ನು join ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೆ, ಬಹಳಷ್ಟು ವಿದ್ಯಾರ್ಥಿಗಳು ಇವತ್ತು ಹೋರಾಟವನ್ನು ನಡೆಸಿದ್ದಾರೆ. 9 ವಿಶ್ವವಿದ್ಯಾಲಯಗಳಲ್ಲಿ ಎಲ್ಲಿ ಹೋರಾಟ ನಡೆದಿದೆಯೋ ಇಲ್ಲವೋ ಗೊತ್ತಿಲ್ಲ. ಕಳೆದ 10 ದಿನಗಳಿಂದ ಎಲ್ಲಾ ವಿದ್ಯಾರ್ಥಿ ಸಂಘಟನೆಗಳು, ಮಠಾಧೀಶರು, ಅಲ್ಲಿರುವಂತಹ ಸಂಘ-ಸಂಸ್ಥೆಗಳು, ವಕೀಲರ ಸಂಘಗಳು ಅಹೋರಾತ್ರಿ ಧರಣಿಯನ್ನು ಪ್ರಾರಂಭ ಮಾಡಿದ್ದಾರೆ. ನಾನು ರವಿವಾರದ ದಿವಸ ಆ ಸ್ಥಳಕ್ಕೆ ಹೋಗಿ ಬಂದಿದ್ದೇನೆ. ಮಾನ್ಯ ತಿಮ್ಮಾಪುರ ಅವರು ಕೂಡ ಅಂದು ಬಂದಿದ್ದರು. ವಿದ್ಯಾರ್ಥಿಗಳು 10 ದಿನದಿಂದ ಹೋರಾಟದಲ್ಲಿ ಭಾಗವಹಿಸಿದ್ದಾರೆ. ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಆಶ್ವಾಸನೆಯನ್ನು ಕೊಟ್ಟು ಅವರನ್ನು ಎಬ್ಬಿಸುವಂಥ ಕೆಲಸವನ್ನು ಮಾಡಬೇಕು. ಅವರ ಅಹೋರಾತ್ರಿ ಧರಣಿ 10ನೇ ದಿನಕ್ಕೆ ಕಾಲಿಟ್ಟಿದೆ.

ಮಾನ್ಯ ಸಭಾಪತಿಯವರೆ, ತಾವು ಹೊಸತೇನಾದರೂ ಹೇಳಬೇಕೆಂದಿರಿ. ಇದು ಹೊಸ ವಿಷಯ. ವಿದ್ಯಾರ್ಥಿಗಳು ಉಪವಾಸ ಕುಳಿತಿದ್ದಾರೆ, ಇದಕ್ಕೆ ಮಠಾಧೀಶರು, ಸಂಘ-ಸಂಸ್ಥೆಗಳು ಸಹಕಾರ ನೀಡಿದ್ದಾರೆ. ಉದ್ದೇಶವಿಷ್ಟೆ, ನಮ್ಮ ಜಮಖಂಡಿಯಲ್ಲಿರುವ ಬಾಗಲಕೋಟೆ ವಿಶ್ವವಿದ್ಯಾಲಯವನ್ನು ಮುಚ್ಚಬಾರದು. ಅದು ನಡೆಯಬೇಕು. ಅದು ಎಲ್ಲಿಯವರೆಗೆ ಬಂದಿದೆಯೆಂದರೆ ಅಲ್ಲಿರುವಂತಹ ಎಲ್ಲಾ ಉದ್ದಿಮೆದಾರರು, ಅಲ್ಲಿರುವಂಥ ಎಲ್ಲಾ ಮಠಾಧೀಶರೂ ಸೇರಿ ನಾವು ಭಿಕ್ಷೆ ಬೇಡಿಯಾದರೂ ವಿಶ್ವವಿದ್ಯಾಲಯಕ್ಕೆ ದುಡ್ಡು ತಂದು ಕೊಡುತ್ತೇವೆ. ಸರ್ಕಾರ ದುಡ್ಡು ಕೊಡುವುದು ಬೇಕಾಗಿಲ್ಲ. ನಮ್ಮ ವಿಶ್ವವಿದ್ಯಾಲಯ ಮುಚ್ಚಬಾರದು ಎನ್ನುವ ಕೂಗು ಬಂದಿದೆ. ಅದೆಲ್ಲವೂ ಕೂಡ ಪತ್ರಿಕೆಯಲ್ಲಿ ಬಂದಿದೆ. ನಾನು ಹೆಚ್ಚೇನೂ ಹೇಳಬಯಸುವುದಿಲ್ಲ. ದುಡ್ಡಿಲ್ಲದೆ ಸರ್ಕಾರದವರು ಪರದಾಡುತ್ತಿದ್ದಾರೆ. ಅದಕ್ಕಾಗಿ ನಾವು ದುಡ್ಡು ಕೂಡಿಸಿಕೊಡುತ್ತೇವೆಂದು ಸ್ವಾಮಿಗಳು ಜೋಳಿಗೆ ಹಾಕಿಕೊಂಡು ಸಾಂಕೇತಿಕವಾಗಿ ಹಣವನ್ನು ಸಂಗ್ರಹ ಮಾಡುವಂಥದ್ದು ಕೂಡ ಬಹಳಷ್ಟು ನೋವಿನ ಸಂಗತಿ ಎನ್ನುವಂಥ ಮಾತನ್ನು ಹೇಳುತ್ತೇನೆ.

ತಾವು ಕೂಡ ಅದೇ ಭಾಗದಿಂದ ಬಂದವರಾಗಿದ್ದು, ತಮಗೂ ಕೂಡ ಒಂದು ಮನವಿಯನ್ನು ಕೊಟ್ಟಿದ್ದಾರೆ. ದಯವಿಟ್ಟು ಈ 9 ವಿಶ್ವವಿದ್ಯಾಲಯಗಳನ್ನು ಸರ್ಕಾರ ಮುಂದುವರೆಸಬೇಕು. ಆರ್ಥಿಕ ಸಹಕಾರವನ್ನು ನೀಡಬೇಕು. ಶಿಕ್ಷಣಕ್ಕಾಗಿ ಒಂದು ವಿಶ್ವವಿದ್ಯಾಲಯಕ್ಕೆ ರೂ.5 ಕೋಟಿ ಖರ್ಚು ಮಾಡುವುದಕ್ಕಾಗಲಿಲ್ಲ ಎಂದರೆ ಹೇಗೆ? ಎರಡು ಕೋಟಿ ಕೇಳಿದ್ದಾರೆ. ಅದು ಕೂಡ ಕೊಡದಿದ್ದರೆ ಇವತ್ತು ಸಂಘ-ಸಂಸ್ಥೆಗಳು ಕೂಡ ಹಣವನ್ನು ಕೂಡಿಸಿ ಕೊಡುತ್ತೇವೆಂದು ಹೇಳಿ ಜೋಳಿಗೆ ಹಾಕಿಕೊಂಡು ಭಿಕ್ಷಾಟನೆಗೆ ಸ್ವಾಮಿಗಳು ಸಿದ್ಧರಾಗಿದ್ದಾರೆ. ಇದು ಬಹಳ ನೋವಿನ ಸಂಗತಿ. ಯಾವುದೇ ಸರ್ಕಾರ ಇದ್ದರೂ ಕೂಡ ನಾಗರಿಕ ಸಮಾಜದಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದಕ್ಕೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಯವಿಟ್ಟು ಅವಕಾಶ ಕೊಡಬಾರದು. ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ೨ ವಿಶ್ವವಿದ್ಯಾಲಯಗಳನ್ನು ಉಳಿಸಬೇಕು. ಅವಕಾಶ ಸಿಕ್ಕರೆ ಬಾಗಲಕೋಟೆ ವಿಶ್ವವಿದ್ಯಾಲಯದ ಜೊತೆಗೆ ವಿಜಯಪುರ ಜಿಲ್ಲೆಯನ್ನು ಸೇರಿಸಬೇಕೆಂದು ಕಳಕಳಿಯ ವಿನಂತಿ ಮಾಡಿಕೊಂಡು, ತಕ್ಷಣವೇ ತಾವು ನಮ್ಮ ವಿದ್ಯಾರ್ಥಿ ಸಂಘಟನೆಗಳಿಗೆ, ಮಠಾಧೀಶರಿಗೆ ಅಲ್ಲಿ ಏನು ಅಹೋರಾತ್ರಿ ಧರಣಿ ಕುಳಿತಿದ್ದಾರೆ, ಅವರನ್ನು ಎಬ್ಬಿಸುವ ವಿಚಾರ ಮಾಡಬೇಕು ಎಂದು ಕಳಕಳಿಯ ವಿನಂತಿ ಮಾಡಿಕೊಳ್ಳುತ್ತೇನೆ. ಹೋರಾಟ ಉಗ್ರರೂಪಕ್ಕೆ ಹೋಗುವ ಮುಂಚೆ ಅವರನ್ನು ಎಬ್ಬಿಸುವಂತಹ ಆಶ್ವಾಸನೆಯನ್ನು ಕೊಡಬೇಕು. ಪರಿಶೀಲಿಸಲಾಗುವುದು ಎಂದು ತಮ್ಮ ಉತ್ತರದಲ್ಲಿ ತಾವು ಕೊಟ್ಟಿದ್ದೀರಿ. ಎಲ್ಲಿಯವರೆಗೆ ಪರಿಶೀಲಿಸುತ್ತೀರೋ ಅಲ್ಲಿಯವರೆಗೆ ಹೋರಾಟ ನಿಲ್ಲುವುದಿಲ್ಲ. ನೀವು ಕೈಬಿಟ್ಟಿದ್ದೇವೆ ಎನ್ನುವ ಸಂದೇಶವನ್ನು ದಯವಿಟ್ಟು ಕೊಡಬೇಕೆಂದು ವಿನಂತಿಸುತ್ತೇನೆ. ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಜೊತೆಗೆ ಚೆಲ್ಲಾಟ ಬೇಡ. ದಯವಿಟ್ಟು ವಿಶ್ವವಿದ್ಯಾಲಯಗಳಿಗೆ ಶಕ್ತಿಯನ್ನು ತುಂಬಿ, ಆರ್ಥಿಕ ಶಕ್ತಿಯನ್ನು ಕೊಡಿ. ಉತ್ತಮವಾಗಿರುವ, ಗುಣಾತ್ಮಕವಾಗಿರುವ ಶಿಕ್ಷಣವನ್ನು ಕೊಟ್ಟು ಈ ನಾಡನ್ನು ಸಮೃದ್ಧ ಮಾಡುವ ನಿಟ್ಟಿನಲ್ಲಿ ತಾವು ಮುಂದೆ ಬರಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಲ್.ಭೋಜೇಗೌಡ:- ಅಂತೂ ಇಂತೂ ದಡವನ್ನು ಮುಟ್ಟಿದೆ. ಅವಕಾಶಕ್ಕಾಗಿ ಧನ್ಯವಾದಗಳು ಮಾನ್ಯ ಸಭಾಪತಿಯವರೆ.

ನಮ್ಮ ಎಲ್ಲಾ ಸ್ನೇಹಿತರು ಸುದೀರ್ಘವಾಗಿ ೨ ವಿಶ್ವವಿದ್ಯಾಲಯಗಳ ವಿಚಾರದಲ್ಲಿ ಎಲ್ಲಾ ವಿಚಾರಗಳನ್ನು ಚರ್ಚೆ ಮಾಡಿದ್ದಾರೆ. ಪ್ರಾರಂಭದಲ್ಲಿ ನಮ್ಮ ಸಂವಿಧಾನಬದ್ಧವಾಗಿರತಕ್ಕಂಥ ಹಕ್ಕು ಇದು. ನಾನು ಹಲವಾರು ಬಾರಿ ಹೇಳಿದ್ದೇನೆ. It is a constitutional right. ಶಿಕ್ಷಣ ಮತ್ತು ಆರೋಗ್ಯವನ್ನು ಈ ನಾಡಿನ ಕಟ್ಟಕಡೆಯ ಮನುಷ್ಯನಿಗೆ ಉಚಿತವಾಗಿ ನೀಡಬೇಕೆನ್ನುವುದು ಡಾ:ಬಿ.ಆರ್.ಅಂಬೇಡ್ಕರ್ ಅವರು ಕೊಟ್ಟಿರುವ ಸಂವಿಧಾನದ ಆಶಯ. ಸರ್ವಜನಾಂಗದ ಶಾಂತಿಯ ತೋಟ ಎಂದು ನಮ್ಮ ನಾಡಿನ ಬಗ್ಗೆ ರಾಷ್ಟ್ರಕವಿ ಕುವೆಂಪು ಹೇಳಿದ್ದಾರೆ. ಇವತ್ತು ರಾಜ್ಯಪಾಲರ ಭಾಷಣದಲ್ಲಿ ಕೂಡ ಹೇಳಿದ್ದಾರೆ. "ಇರುವುದೆಲ್ಲವನು ಎಲ್ಲ ಜನಕೆ ತೆರವಾಗಿಸುವ ಸಮಬಗೆಯ ಸಮಸುಖದ ಸಮದುಃಖದ ಸಾಮರಸ್ಯದ ಗಾನಲಹರಿಯ ಮೇಲೆ ತೇಲಿ ಬರುತಲಿದೆ ನೋಡು ನಮ್ಮ ನಾಡು" ಎಂದು ಕವಿ ಗೋಪಾಲಕೃಷ್ಣ ಅಡಿಗರು ಹೇಳಿದ್ದಾರೆ. ಅಂತಹ ನಾಡನ್ನು ಕಟ್ಟಬೇಕಾದರೆ ಇಂತಹ ಶಿಕ್ಷಣ ಸಂಸ್ಥೆಗಳು ಬಲಗೊಳ್ಳಬೇಕಲ್ಲವೆ? ಮಾನ್ಯ ಪುಟ್ಟಣ್ಣನವರು ಮಾತನಾಡುತ್ತಾ ಬಲ ಕೊಡಿ ಎಂದು ಹೇಳಿದರು. ಅವರು ಮುಚ್ಚಿ ಎಂದು ಹೇಳಲಿಲ್ಲ. ನಾನು ಮತ್ತೊಮ್ಮೆ ಪುನರುಚ್ಚರಿಸಬೇಕಾಗುತ್ತದೆ.

"ಹೊಸ ನೆತ್ತರುಕ್ಕುಕ್ಕಿ ಆರಿ ಹೋಗುವ ಮುನ್ನ
ಹರೆಯದೀ ಮಾಂತ್ರಿಕನ ಮಾಟ ಮುಸುಳುವ ಮುನ್ನ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ಸಾಹಸಾಹಸದ ಉತ್ತುಂಗವೀಚಿಗಳ
ಈ ಕ್ಷುಬ್ಧ ಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸನಾಡೊಂದನು ರಸದ ಬೀಡೊಂದನು¨

ಇಂತಹ ಶಿಕ್ಷಣ ಸಂಸ್ಥೆಗಳನ್ನು ಮುಚ್ಚುವ ಮುಖಾಂತರ ನಮ್ಮ ನಾಡನ್ನು ಉತ್ತುಂಗ ಶಿಖರಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವೇ? ಆಗುತ್ತದೆಯೇ? ಕವಿ ಗೋಪಾಲಕೃಷ್ಣ ಅಡಿಗರು ಈ ಮಾತನ್ನು ಯಾವತ್ತು ಹೇಳಿದ್ದಾರೆ?

(ಮುಂದು)

(231) 11-03-2025/8.10/ಎಂವಿ-ಎಂಡಿ (ವಿಕೆ) **(ಸಭಾಪತಿಯವರ ಉಪಸ್ಥಿತಿ)**

ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):-

ನಾನು ಕವಿ ಮುದ್ದಣ್ಣ ಹೆಸರನ್ನು ಬಹಳ ಚರ್ಚೆ ಮಾಡಿದ್ದೇನೆ. ಈ ನಾಡಿನಲ್ಲಿ ಇರತಕ್ಕಂತಹ ಗಂಡ-ಹೆಂಡಿರ ಸಂಬಂಧ ಹೇಗೆ ಇರಬೇಕೆಂದು ನಾವು ಮತ್ತು ನೀವೆಲ್ಲರೂ 50, 60 ಮತ್ತು 70 ವರ್ಷದ ಹಿಂದೆ ಪಠ್ಯಪುಸ್ತಕದಲ್ಲಿ ಗಂಡ-ಹೆಂಡತಿ ಹೇಗೆ ಇರಬೇಕು ಎಂದು ಓದಿದ್ದೇವೆ. ಅವರಿಬ್ಬರು ಒಂದು ಸಂಭಾಷಣೆ ಮಾಡುತ್ತಾರೆ. ಅದು ಏನೆಂದರೆ, 'ನೀರಿಳಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು' ಎಂಬುದು ಈಗಿನ ಯಾವ ಪಠ್ಯಪುಸ್ತಕದಲ್ಲಿ ಇದೆ? ಇವತ್ತು ಹಳಗನ್ನಡ ಉಳಿದಿಲ್ಲ. ದುರ್ಯೋಧನ ವೈಶಂಪಾಯನ ಸರೋವರದಲ್ಲಿ ಮುಳುಗಿದಾಗ, ಅಲ್ಲಿಗೆ ಭೀಮ ಬಂದಾಗ, "ಬೆವರುತ್ತಾ ನೀರೊಳಗಿರ್ದುಂ ಬೆಮರ್ದುಂ ಉರಗಪತಾಕಂ" ಎಂದು. What a beautiful ಹಳಗನ್ನಡ! ಇದೆಲ್ಲಾ ಇಂತಹ ವಿಶ್ವವಿದ್ಯಾಲಯಗಳಿಂದ ಬಂದಿದ್ದು. ಕವಿ ಮುದ್ದಣ್ಣ ಕೊಟ್ಟಿರತಕ್ಕಂತಹ ಇಂತಹ ನಾಡು ನುಡಿಯ ಬಗ್ಗೆ ದಾರ್ಶನಿಕರು, ಸರ್ವಜ್ಞರು, ವಚನಕಾರರು, ಜಾನಪದ ಸಾಹಿತ್ಯದಲ್ಲಿ, ವಚನ ಸಾಹಿತ್ಯದಲ್ಲಿ, ತತ್ವಪದಗಳ ಆಧಾರದ ಮೇಲೆ ಇವೆಲ್ಲವೂ ಬಂದಿರುವುದು. ಅಂದು 12 ಮತ್ತು 14ನೇ ಶತಮಾನದ ಒಕ್ಕಾಲು ಮತ್ತು ಮುಕ್ಕಾಲು ಬುದ್ಧಿಯಲ್ಲಿ ಆ ವಚನಕಾರರು, ಸಾಹಿತ್ಯಾಸಕ್ತರು, ಅವರು ಒಬ್ಬೊಬ್ಬರು ಸಹ ವಿಶ್ವವಿದ್ಯಾಲಯವಿದ್ದಂತೆ. ಅಂತಹ ವಿಶ್ವವಿದ್ಯಾಲಯಗಳು ಇವತ್ತು ಆಗಬೇಕಲ್ಲವೇ? ದಾರ್ಶನಿಕರು ಹೇಳಿರುವಂತಹ ಮಾತುಗಳು, ಇವತ್ತು ವಿಶ್ವವಿದ್ಯಾಲಯಗಳಲ್ಲಿ ಹೇಳಿರುವಂತಹ ಮಾತುಗಳು. I am not going to blame any Government here. ದಯಮಾಡಿ ಮಾನ್ಯ ಸಚಿವರಾದ ಡಾ:ಎಂ.ಸಿ.ಸುಧಾಕರ್ ಸಾಹೇಬರೆ, ಇವತ್ತು ಅವಶ್ಯವಾಗಿರುವಂತಹ ಶಿಕ್ಷಣವನ್ನು ನಮ್ಮ ನಾಡಿನ ಮಕ್ಕಳಿಗೆ ಕೊಡಬೇಕಾದಂತಹ ಧರ್ಮ ಮತ್ತು ಕರ್ತವ್ಯವಿದೆ.

ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ,...

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ದಯವಿಟ್ಟು ದಮ್ಮಯ್ಯ, ಬೇಡ ಅಣ್ಣ, ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರೇ, please don't interrupt me.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೇ, ಆರ್ಥಿಕ ಬಲ ತುಂಬಬೇಕು ಎಂದಿರುವುದಕ್ಕೆ ಹೇಳುತ್ತಿದ್ದೇನೆ. ಅದಕ್ಕೆ ಆರ್ಥಿಕ ಬಲ ತುಂಬಬೇಕು.

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, ತಾವು ನಾನು ಮಾತನಾಡುವುದಕ್ಕೆ ಸ್ವಲ್ಪ ಸಮಯ ನೀಡಿದ್ದೀರಿ.

(ಗೊಂದಲ)

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೇ, ಖಾಸಗಿ ವಿಶ್ವವಿದ್ಯಾಲಯಗಳನ್ನು ಮಾಡಬೇಕಾದರೆ, ಇಂತಿಷ್ಟು ಕೋಟಿ ರೂಪಾಯಿಗಳ ಡಿಪಾಸಿಟ್ ಇಡಬೇಕೆಂದು ಇದೆ. ಆದರೆ, ಈ ಏಳು ವಿಶ್ವವಿದ್ಯಾಲಯಗಳನ್ನು ಮಾಡಿದಾಗ, ಸುಮಾರು ರೂ.28,57,000/- ಗಳನ್ನು ಒಂದೊಂದು ವಿಶ್ವವಿದ್ಯಾಲಯಗಳಿಗೆ ಕೊಟ್ಟಿದ್ದಾರೆ. ಅದನ್ನು ಸಹ ಅಲ್ಲಿರುವಂತಹ ಕೆಲಸದವರ ವಿಲೀನಾತಿ ಆದಮೇಲೆ ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ. ಈ ರೀತಿಯಾದರೆ ವಿಶ್ವವಿದ್ಯಾಲಯಗಳು ಹೇಗೆ ಉಳಿಯುತ್ತವೆ?

(ಗೊಂದಲ)

ಸಭಾಪತಿಯವರು:– ಮಾನ್ಯ ಪುಟ್ಟಣ್ಣನವರೆ, ತಾವು ನಡುವೆ ನಡುವೆ ಏಕೆ ಎದ್ದೇಳುತ್ತೀರಿ?

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು ನನ್ನ ಸುದ್ದಿಗೆ ಏಕೆ ಬರುತ್ತಾರೆ? ಈಗ ನಮ್ಮಲ್ಲಿ ಭಾಷಣ ಮಾಡುತ್ತಿರುತ್ತಾರೆ. ಭಾಷಣ ಮಾಡುತ್ತಾ ಇದ್ದಾಗ ಅಲ್ಲಿ ಇದ್ದಂತಹ ಎಲ್ಲಾ ಜನರು ಎದ್ದುಹೋಗಿಬಿಟ್ಟರು. ಒಂದಿಬ್ಬರು ಮಾತ್ರ ಭಾಷಣ ಕೇಳುವುದಕ್ಕೆ ಕುಳಿತಿದ್ದರು. ಎಲ್ಲರೂ ಎದ್ದು ಹೋಗಿದ್ದಾರೆ, ನೀವು ಇಬ್ಬರು ಮಾತ್ರ ಕುಳಿತುಕೊಂಡಿದ್ದಿರಲ್ಲ ಎಂದು ಕೇಳಿದಾಗ, ಅದಕ್ಕೆ ಅದರಲ್ಲಿ ಒಬ್ಬ ಏನು ಹೇಳುತ್ತಾನೆಂದರೆ, ಭಾಷಣ ಮಾಡುವುದಕ್ಕೆ ಕರೆದುಕೊಂಡು ಬಂದಂತಹವನು ಯಾರು ಎಂದು ಹುಡುಕುತ್ತಿದ್ದೇನೆ. ಅದಕ್ಕೆ ಮತ್ತೊಬ್ಬನನ್ನು ಕೇಳಿದಾಗ ಅವನು ಈ ಶಾಮಿಯಾನ ಮತ್ತು ಚೇರ್ ನನ್ನದು, ಅದಕ್ಕಾಗಿ ಕುಳಿತಿದ್ದೇನೆ ಎಂದನಂತೆ. ನನಗೆ ಆ ರೀತಿಯ ಪರಿಸ್ಥಿತಿಯನ್ನು ಮಾಡುವುದು ಬೇಡ.

ಶ್ರೀ ಕೇಶವ ಪ್ರಸಾದ್.ಎಸ್:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರು ನೇರವಾಗಿ ಕಾಂಗ್ರೆಸ್ ಪಕ್ಷದವರಿಗೆ ಚುಚ್ಚುತ್ತಿದ್ದಾರೆ.

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, ನಾನು ಎಲ್ಲಾ ವಿಷಯಗಳ ಬಗ್ಗೆ ಹೇಳಿದ್ದೇನೆ. ಕೊಡಗು ಜಿಲ್ಲೆಗೆ ಅದರದೇ ಆದಂತಹ ಇತಿಹಾಸವಿದೆ. ಅವರು ನೋವಿನಿಂದ ಕೊಡಗು ಜಿಲ್ಲೆಯನ್ನು ಪ್ರತ್ಯೇಕ ರಾಜ್ಯ ಮಾಡಿ ಎಂದು ಕೇಳಿದ್ದಾರೆ. ಅವರು ಕರ್ನಾಟಕದಿಂದ ಬೇರೆ ಹೋಗಬೇಕು ಎಂದು ಕೇಳಿದ್ದು ಅಲ್ಲ. ಕೊಡಗು ಜಿಲ್ಲೆಗೆ ಆಗುತ್ತಿರುವಂತಹ ಅನ್ಯಾಯವನ್ನು ತಡೆಯುವುದಕ್ಕೋಸ್ಕರ ನಾವು ಪ್ರತ್ಯೇಕ ರಾಜ್ಯದಲ್ಲಿ ಇರಬೇಕು ಎಂದು. ಕೊಡಗು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಯು Air Marshal K.C.Cariappa ನವರನ್ನು ಕೊಟ್ಟಿರತಕ್ಕಂಥದ್ದು. Field Marshal K.M. Cariappa was the first Indian Commander-in-Chief of the Indian Army. ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್‌ಗೆ ನಾಲ್ಕನೆ ಭಾರತೀಯ High Commissioner ಆಗಿ ಕೆಲಸ ಮಾಡಿದಂತಹವರು. 1965ರ ಇಂಡೋ-ಪಾಕ್ ಯುದ್ಧದಲ್ಲಿ ಯುದ್ಧ ವಿಮಾನದ ಪೈಲೆಟ್‌ಗಳು ಯುದ್ಧ ವಿಮಾನಗಳನ್ನು ಹೊಡೆದರೂ ಸಹ, Squadron Leader Ajjamada Boppayya Devayya belongs to Kodagu. ಮಹಾವೀರ ಚಕ್ರವನ್ನು ಪಡೆದ ಏಕೈಕ ಭಾರತೀಯ ವಾಯುಪಡೆಯ ಸಿಬ್ಬಂದಿ. ಮೇಜರ್ ಮಂಗೇರಿರ ಚಿನ್ನಪ್ಪ ಮುತ್ತಣ್ಣ ಸೇನಾ ಹುತಾತ್ಮರು. Lieutenant General Biddanda Chengappa Nanda served as the Army Commander. ರಾಜ್ಯೋತ್ಸವ ಪ್ರಶಸ್ತಿ ವಿಜೇತರು. Lieutenant General Channira Bansi Ponnappa served as the Adjutant General of the Indian Army. General Kodandera Subayya Thimayya served as the Chief of Indian Army. ಕೊರಿಯನ್ ವಾಪಸಾತಿ ಆಯೋಗದ ಅಧ್ಯಕ್ಷರು ಮತ್ತು ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯ ಮುಖ್ಯಸ್ಥರು. They are all born in great Kodagu district. ನಾವುಗಳು ಹೆಮ್ಮೆ ಪಡಬೇಕು. ಅಂತಹ ಕೊಡುಗೆಯನ್ನು ಕೊಟ್ಟಿರತಕ್ಕಂತಹ Lieutenant General Thimmaiah ಭಾರತೀಯ ಸೇನೆಯ ಮಾಜಿ ಜನರಲ್ ಅಧಿಕಾರಿ. He also hails from Kodagu district. ಕ್ರೀಡೆಯಲ್ಲಿ ಶ್ರೀ ಲೆನ್ ಅಯ್ಯಪ್ಪ ಭಾರತೀಯ ಹಾಕಿ ಆಟಗಾರ. ನಮ್ಮ ರಾಷ್ಟ್ರೀಯ ಕ್ರೀಡೆ ಹಾಕಿ. ವಿಶ್ವದಲ್ಲಿ ರಾಷ್ಟ್ರೀಯ ಕ್ರೀಡೆ ಹುಟ್ಟಿದ್ದು ನಮ್ಮ ಭಾರತ ದೇಶದಲ್ಲಿ. ಒಂದು ಕಾಲದಲ್ಲಿ ಏಳು ಜನ ಹಾಕಿಪಟುಗಳು belongs to Kodagu district. ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಅವತ್ತು ಕೊಡಗು ಜಿಲ್ಲೆಯಲ್ಲಿ ಯಾವುದೇ ವಿಶ್ವವಿದ್ಯಾಲಯಗಳು ಇರಲಿಲ್ಲ. ಈಗ 80 ವರ್ಷ ಆಗುತ್ತಾ ಬಂದಿದೆ, ಆ ಕಾಲದಲ್ಲಿ ಜನರಲ್ ಕಾರ್ಯಪ್ಪನವರು ಓದಿದ್ದು ಕೊಡಗು ಜಿಲ್ಲೆಯಲ್ಲಿ. ಆಗ ಯಾವುದೇ ವಿಶ್ವವಿದ್ಯಾಲಯಗಳು ಇರಲಿಲ್ಲ. Sri Kotarangada Prabhu Appanna was an Indian Cricketer, ಶ್ರೀ ನರ್ವಂದ ಚೆಟ್ಟಿಚ ಅಯ್ಯಪ್ಪ, ಕ್ರಿಕೆಟರ್. ಶ್ರೀ ಕೆ.ಸಿ.ಕಾರ್ಯಪ್ಪ ವೃತ್ತಿಪರ ಕ್ರಿಕೆಟಿಗ. Smt Joshna Chinnappa is an Indian professional squash player.

ಸಭಾಪತಿಯವರು:- ಮಾನ್ಯ ಎಸ್.ಎಲ್.ಭೋಜೇಗೌಡರೆ, ಈಗ ತಾವು ಏನಾಗಬೇಕೆಂದು ಹೇಳಿ ಸಾಕು.

ಶ್ರೀ ಎಸ್.ಎಲ್.ಭೋಜೇಗೌಡ:- ಮಾನ್ಯ ಸಭಾಪತಿಯವರೇ, ಈ ರೀತಿಯ ಕೊಡುಗೆಗಳನ್ನು ಕೊಟ್ಟಂತಹ ಅಂತಹ ನಾಡಿನಲ್ಲಿ, ಇವತ್ತು ಆ ವಿಶ್ವವಿದ್ಯಾಲಯವನ್ನು ಮುಚ್ಚುತ್ತಾರೆಂದು ಹೇಳುವುದಿಲ್ಲ. ಆದರೆ, ಮುಚ್ಚುವುದಕ್ಕೆ ಹೊರಟ್ಟಿದ್ದಾರಲ್ಲ. ಇಂತಹ ನಾಡಿಗೆ ಕೊಡುಗೆ ಕೊಟ್ಟಂತಹ ಅವರಿಗೆ ಮಾಡಿದಂತಹ ಅವಮಾನವೆಂದು ಹೇಳುವುದಕ್ಕೆ ಹೊರಟಿದ್ದೇನೆ. ಇಂತಹ ಕ್ರೀಡಾಪಟುಗಳಿಗೆ ಮಾಡಿದಂತಹ ಅವಮಾನ. ಶ್ರೀ ಅರ್ಜುನ್ ಹಾಲಪ್ಪ, ಭಾರತ ಹಾಕಿ ತಂಡದ ನಾಯಕ. ಶ್ರೀಮತಿ ಅಶ್ವಿನಿ ನಾಚಪ್ಪ, ಭಾರತೀಯ ಕ್ರೀಡಾಪಟು, ಶ್ರೀಮತಿ ಅನಿತಾ ನಂಜಪ್ಪ, ಮೋಟಾರ್ ರೇಸ್ ಆಟಗಾರ್ತಿ, ಶ್ರೀಮತಿ ಅಶ್ವಿನಿ ಪೊನ್ನಪ್ಪ, ಬ್ಯಾಡ್ಮಿಂಟನ್ ಆಟಗಾರ್ತಿ. ಈ ರೀತಿ ಇನ್ನೂ ಬಹಳ ಜನರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದಾರೆ. ಶ್ರೀ ರಾಬಿನ್ ಉತ್ತಪ್ಪ, ಕ್ರಿಕೆಟ್ ಆಟಗಾರ. ರಾಜಕೀಯದಲ್ಲಿ ಬೇಕಾದಷ್ಟು ಜನರು ಆ ಜಿಲ್ಲೆಯಿಂದ ಬಂದಿದ್ದಾರೆ. ನಾನು ಅದರ ಬಗ್ಗೆ ಮಾತನಾಡುವುದಿಲ್ಲ. ಸಿನಿಮಾದಲ್ಲಿ ಶ್ರೀಮತಿ ಡೈಸಿ ಬೋಪಣ್ಣ, ಶ್ರೀಮತಿ ಶ್ವೇತ ಚೆಂಗಪ್ಪ, ಕುಮಾರಿ ರಶ್ಮಿಕಾ ಮಂದಣ್ಣ, ಇವರು ಅಂತರಾಷ್ಟ್ರೀಯವಾಗಿ ಹೆಸರು ಇರತಕ್ಕಂತಹವರು. ಶ್ರೀಮತಿ ಹರ್ಷಿಕಾ ಪೂಣಚ್ಚ, ಶ್ರೀಮತಿ ಪ್ರೇಮಾ, ಶ್ರೀಮತಿ ನಿಧಿಸುಬ್ಬಯ್ಯ, ಶ್ರೀಮತಿ ಅದಿತಿ ಚೆಂಗಪ್ಪ.

ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾರು international ಎಂದು ಹೇಳಲಿ.

ಶ್ರೀ ಎಸ್.ಎಲ್.ಭೋಜೇಗೌಡ:- ಮಾನ್ಯ ಸಭಾಪತಿಯವರೇ, ಕುಮಾರಿ ರಶ್ಮಿಕಾ ಮಂದಣ್ಣ ರವರು No.1 Film Star ಆಗಿದ್ದಾರೆ. ಅವರು ಹಿಂದಿ ಫಿಲ್ಮ್‌ನಲ್ಲಿ ಇದ್ದಾರೆ. ಅಲ್ಲಿ ಕುಳಿತಿರುವವರನ್ನು ಕೇಳಲಿ.

ಸಭಾಪತಿಯವರು:- ಮಾನ್ಯ ಸಚಿವರೆ, ಅವರು ಎಲ್ಲಿದ್ದಾರೆಂದು ಕೇಳಿ.

ಶ್ರೀ ಎಸ್.ಎಲ್.ಭೋಜೇಗೌಡ:- ಮಾನ್ಯ ಸಭಾಪತಿಯವರೇ, don't put everyone in the same boat. ಕೆಟ್ಟದು ಮಾಡಿದವರು ಇದ್ದಾರೆ, ಈ ರಾಜಕಾರಣಿಗಳಲ್ಲಿ ಒಳ್ಳೆಯವರು ಇಲ್ಲವೇ? ಅವರು ಒಳ್ಳೆಯದು ಮಾಡಿಲ್ಲವೇ? ಇನ್ನು ನಾಗರಿಕ ಸೇವೆಯ ಐ.ಎ.ಎಸ್.ನವರು ಬಂದಿದ್ದಾರೆ, ಅವರು ಇಲ್ಲಿ ಇದ್ದಾರೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಕೊಡಗು ಜಿಲ್ಲೆ ಈ ನಾಡಿಗೆ ಬಹಳಷ್ಟು ಕೊಡುಗೆಯನ್ನು ಕೊಟ್ಟಿದೆ. International Coffee Market; Coorg coffee of Kodagu is No. 1 coffee. ನಮ್ಮ ಕಡೆಗಳಲ್ಲಿ ಚಿಕ್ಕಮಗಳೂರು ಕಾಫಿ ಇದೆ.

ಸಭಾಪತಿಯವರು:- ಮಾನ್ಯ ಎಸ್.ಎಲ್.ಭೋಜೇಗೌಡರೆ, ತಾವು ಕುಳಿತುಕೊಳ್ಳಿ.

ಶ್ರೀ ಎಸ್.ಎಲ್.ಭೋಜೇಗೌಡ:- ಮಾನ್ಯ ಸಭಾಪತಿಯವರೇ, ನಾನು ಕುಳಿತುಕೊಳ್ಳಬೇಕೆ? ತಾವು ನನಗೆ ಈ ರೀತಿ ಅನ್ಯಾಯ ಮಾಡಿದರೆ ಹೇಗೆ? ನಾನು ಇನ್ನು ಆ ವಿಷಯಕ್ಕೆ ಬಂದಿಲ್ಲ. ತಾವು ನನಗೆ ಏಕೆ ಈ ರೀತಿಯ ತೊಂದರೆ ಕೊಡುತ್ತೀರಿ?

ಸಭಾಪತಿಯವರು:- ಮಾನ್ಯ ಎಸ್.ಎಲ್.ಭೋಜೇಗೌಡರೆ, ಇದು ಗಮನ ಸೆಳೆಯುವ ಸೂಚನೆ ತಾವು ಎಲ್ಲೆಲ್ಲ ಗಮನ ಸೆಳೆಯುತ್ತಿದ್ದೀರಿ?

ಶ್ರೀ ಎಸ್.ಎಲ್.ಭೋಜೇಗೌಡ:- ಮಾನ್ಯ ಸಭಾಪತಿಯವರೇ, ತಾವು ಆ ಪೀಠದಿಂದ ಇಳಿದ ಮೇಲೆ ನನ್ನನ್ನು ಅಲ್ಲಿಗೆ ಕೂರಿಸಿಬಿಡಿ. ಆಗ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ. ಇದರಲ್ಲಿ ಒಂದು ವಿಷಯ ಬಹಳ ಗಂಭೀರವಾಗಿದೆ. ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಡಾ: ಎಂ.ಸಿ.ಸುಧಾಕರ್‌ರವರು, he is not an ordinary man. Sri M.C.Sudhakar is well versed with all the subjects and well experienced. ಇಂತಹ ಶಿಕ್ಷಣ ಸಚಿವರನ್ನು ಪಡೆದಿರುವುದು ನಮ್ಮೆಲ್ಲರ ಪುಣ್ಯ ಮತ್ತು ಸೌಭಾಗ್ಯ. ನಾನು ಅವರನ್ನು ಸುಮ್ಮನೆ ಹೊಗಳುತ್ತಿಲ್ಲ. It's a fact. ನಾನು ಅವರ ಬಗ್ಗೆ ಕೇಳಿದ್ದೇನೆ.

ಸಭಾಪತಿಯವರು:- ಮಾನ್ಯ ಎಸ್.ಎಲ್.ಭೋಜೇಗೌಡರೆ, ತಾವು ಈಗ ವಿಶ್ವವಿದ್ಯಾಲಯದ ಬಗ್ಗೆ ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಎಲ್.ಭೋಜೇಗೌಡ:- ಮಾನ್ಯ ಸಭಾಪತಿಯವರೇ, ಅಂತಹವರಿಂದ ಈ ರೀತಿಯ ಕಗ್ಗೊಲೆಯಾಗಬಾರದು.

ಡಾ: ಎಂ.ಸಿ.ಸುಧಾಕರ್:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಸ್.ಎಲ್.ಭೋಜೇಗೌಡರು ಟವೆಲ್ ಸುತ್ತಿಕೊಂಡು ಹೊಡೆದ ಹಾಗೆ ಆಯಿತು.

ಶ್ರೀ ಎಸ್.ಎಲ್.ಭೋಜೇಗೌಡ:- ಮಾನ್ಯ ಸಭಾಪತಿಯವರೇ, Now our Gross Enrolment Ratio is most important. Tamil Nadu's Gross Enrolment Ratio is 47 percent. Karnataka is still in 34.6 percent. How Tamil Nadu is 47 percent? ಈಗ ಕೇರಳ ರಾಜ್ಯವನ್ನು ಬಿಟ್ಟುಬಿಡಿ. ಕೇರಳ ರಾಜ್ಯದ ಬಗ್ಗೆ all over India ದಲ್ಲಿ ಅದರ ಬಗ್ಗೆ ಮಾತನಾಡುವಂತಿಲ್ಲ. Kerala has the highest literacy rate of all the states in India. ಇಷ್ಟೆಲ್ಲಾ ಏಕೆ ಆಯಿತು. ಅವತ್ತಿನ ಕಾಲದಲ್ಲಿ ಶ್ರೀ ನಾರಾಯಣ ಗುರುಗಳು ಬಹುದೊಡ್ಡ ದಾರ್ಶನಿಕರು. ಅವರು ಶಿಕ್ಷಣಕ್ಕಾಗಿ ಬಹಳ ಹೋರಾಟ ಮಾಡಿದರು.

(ಮುಂದು)

(232) 11.03.2025 08.20 LL-AK **(ಸಭಾಪತಿಯವರ ಉಪಸ್ಥಿತಿ)**

ಶ್ರೀ ಎಸ್.ಎಲ್. ಭೋಜೇಗೌಡ(ಮುಂದು):-

ಅವರು ಶಿಕ್ಷಣಕ್ಕೆ ಬಹಳ ಹೋರಾಟ ಮಾಡಿದರು. ಧರ್ಮಕ್ರಾಂತಿಯನ್ನೇ ಮಾಡಿದರು. ನೂರಾರು ದೇವಸ್ಥಾನಗಳನ್ನು ಕಟ್ಟಿದರು. ಆ ದೇವಸ್ಥಾನಗಳನ್ನು ಕಟ್ಟುವ ಮುಖಾಂತರ ಮುಂದೊಂದು ದಿನ ಅವರು ಏನು ಹೇಳುತ್ತಾರೆಂದರೆ, "ದೇವಸ್ಥಾನಗಳು ಸಾಕು ಇನ್ನು, ಆ ದೇವಸ್ಥಾನಗಳು ಶಿಕ್ಷಣ ಸಂಸ್ಥೆಗಳಾಗಲಿ ಎಂದು ಹೇಳಿದರು. ಅವೊತ್ತಿನ ದಿನ ಸ್ವಾಮಿ ವಿವೇಕಾನಂದರು ಮತ್ತು ಶ್ರೀ ರವೀಂದ್ರನಾಥ ಠಾಗೋರ್‌ರವರು ಅಲ್ಲಿಂದ ಶ್ರೀ ನಾರಾಯಣ ಗುರುರವರ ದರ್ಶನಕ್ಕಾಗಿ ಬಂದಿದ್ದರು. ಅಂತಹ ಬಹು ದೊಡ್ಡ ದಾರ್ಶನಿಕರಾದ ಶ್ರೀ ನಾರಾಯಣ ಗುರುರವರು ಒಬ್ಬ ಸಾಮಾನ್ಯ ಮನುಷ್ಯರಾಗಿದ್ದರು. ಇವೊತ್ತಿನ ದಿವಸ ನಾವು ತ್ರಿಭಾಷಾ ಸೂತ್ರದ ಬಗ್ಗೆ ಮಾತನಾಡುತ್ತೇವೆ. ಅಂದಿನ ಕಾಲದಲ್ಲಿಯೇ ತ್ರಿಭಾಷಾ ಸೂತ್ರದ ಬಗ್ಗೆ ಅವರು ಮಾತನಾಡಿರುತ್ತಾರೆ. ಇವೊತ್ತಿನ ದಿವಸ ನಾವು ಅದನ್ನು ಎನ್‌ಇಪಿ ಯಲ್ಲಿ ಹೇಳುತ್ತಿದ್ದೇವೆ. We are stepping into the NEP. What is SEP? What is NEP? Just because of naming SEP/NEP, you can't get quality education. What exactly is in the textbooks is more important. By naming it, you cannot achieve anything. ಇವೊತ್ತಿನ ದಿವಸ ದಿವಂಗತ ಮನಮೋಹನ್ ಸಿಂಗ್‌ರವರ ಹೆಸರನ್ನು ಒಂದು ವಿಶ್ವವಿದ್ಯಾಲಯಕ್ಕೆ ಇಡುತ್ತಿದ್ದಾರೆ. ದಿವಂಗತ ಮನಮೋಹನ್ ಸಿಂಗ್‌ರವರು 1917ರಲ್ಲಿ ನಮ್ಮ ರಾಜ್ಯಕ್ಕೆ ಬಂದು ಡಾ॥ ಬಿ.ಆರ್. ಅಂಬೇಡ್ಕರ್ ಇನ್ಸ್ಟಿಟ್ಯೂಟ್ ಆಫ್ ಎಕನಾಮಿಕ್ಸ್ ಕಾಲೇಜು ಕಟ್ಟಡದ ಶಂಕುಸ್ಥಾಪನೆಗೆ ಗುದ್ದಲಿ ಪೂಜೆ ಮಾಡಿದ್ದು, ನಂತರ ಅದು ಪ್ರಾರಂಭವಾಗಿರುತ್ತದೆ. ದಿವಂಗತ ಮನಮೋಹನ್ ಸಿಂಗ್‌ರಂತಹ ಎಕನಾಮಿಸ್ಟ್‌ಗಳು ಈ ದೇಶದಲ್ಲಿ ಸಾವಿರಾರು ಜನ, ಲಕ್ಷಾಂತರ ಜನ ಬೆಳೆಯಬೇಕೆಂದು ಆ ಕಾಲೇಜನ್ನು ಪ್ರಾರಂಭ ಮಾಡಿರುತ್ತಾರೆ. But, what is its

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

position today? ಸುಮಾರು 385 ಕೋಟಿ ರೂಪಾಯಿ ಅನುದಾನವನ್ನು ಆ ಕಾಲೇಜಿಗೆ ಕೊಟ್ಟಿರುತ್ತಾರೆ. ಆದರೆ, ಇವೊತ್ತಿನ ದಿವಸ ಆ ಕಾಲೇಜಿನ ಪರಿಸ್ಥಿತಿ ಹೇಗಿದೆ? ಒಂದು ಕಾಲೇಜಿಗೆ ದೊಡ್ಡವರ ಹೆಸರು ಇಟ್ಟಾಗ ಅದಕ್ಕೆ ತಕ್ಕಂತೆ ಸರಿಯಾದ ರೀತಿಯಲ್ಲಿ ಇನ್‌ಫ್ರಾಸ್ಟ್ರಕ್ಚರ್ ಕೊಡಬೇಕೆಂಬುದು ಎಲ್ಲರ ಅಭಿಪ್ರಾಯವಾಗಿದ್ದು, ನನ್ನ ಅಭಿಪ್ರಾಯ ಕೂಡ ಅದೇ ಆಗಿದೆ. ಘಟಕ ವಿಶ್ವವಿದ್ಯಾಲಯದಲ್ಲಿ ಘಟಕ ವಿಶ್ವವಿದ್ಯಾಲಯ 1 ಇದೆ; ಸ್ನಾತಕೋತ್ತರ ಸ್ಥಾಪಿತ ಕೇಂದ್ರ 1 ಇದೆ. ಸರ್ಕಾರಿ ಮಹಾವಿದ್ಯಾಲಯಗಳು 6 ಇವೆ; ಅನುದಾನಿತ ಮಹಾವಿದ್ಯಾಲಯಗಳು 3 ಇವೆ; ಖಾಸಗಿ ಮಹಾವಿದ್ಯಾಲಯಗಳು 14 ಇವೆ; ಒಟ್ಟು ಮಹಾವಿದ್ಯಾಲಯಗಳು 25 ಇವೆ. ನಾನು ಕೂಡ ಅಲ್ಲಿಗೆ ಭೇಟಿ ನೀಡಿರುತ್ತೇನೆ. ಅಲ್ಲಿ ಸುಮಾರು 100 ಎಕರೆ ಜಮೀನು ಇದೆ. ಅಲ್ಲಿ ಲೇಡಿಸ್ ಹಾಸ್ಟೆಲ್‌ಗಳು ಇದೆ. ಆ ಲೇಡಿಸ್ ಹಾಸ್ಟೆಲ್‌ಗೆ ಕಾಂಪೌಂಡ್ ಇಲ್ಲವೆಂದು ಹೇಳಿದರು. ಅದಕ್ಕೆ ಶಾಸಕರ ಅನುದಾನದಲ್ಲಿ ನನಗೆ ಬರುವಂತಹ ಸಣ್ಣ ಫಂಡ್‌ನಲ್ಲಿ 10 ಲಕ್ಷ ರೂಪಾಯಿ ಹಣ ನೀಡಿರುತ್ತೇನೆ. ಲೇಡಿಸ್ ಹಾಸ್ಟೆಲ್‌ಗೆ ಭದ್ರತೆ ಇರಲಿ ಎಂದು ಹಣ ನೀಡಿರುತ್ತೇನೆ. With all infrastructure, ಮೊದಲನೆ ವರ್ಷದ ಯುಜಿಯಲ್ಲಿ ಪರಿಶಿಷ್ಟ ಜಾತಿಯ 727 ವಿದ್ಯಾರ್ಥಿಗಳು; ಪರಿಶಿಷ್ಟ ಪಂಗಡದ 160 ವಿದ್ಯಾರ್ಥಿಗಳು; ಓಬಿಸಿ ಯ 1,163 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದುಕೊಂಡಿರುತ್ತಾರೆ. ಎರಡನೆ ವರ್ಷದ ಯುಜಿಯಲ್ಲಿ ಪರಿಶಿಷ್ಟ ಜಾತಿಯ 665 ವಿದ್ಯಾರ್ಥಿಗಳು; ಪರಿಶಿಷ್ಟ ಪಂಗಡದ 113 ವಿದ್ಯಾರ್ಥಿಗಳು; ಓಬಿಸಿ ಯ 1,140 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದುಕೊಂಡಿರುತ್ತಾರೆ. ಮೊದಲನೆ ವರ್ಷದ ಪಿಜಿಯಲ್ಲಿ ಪರಿಶಿಷ್ಟ ಜಾತಿಯ 44 ವಿದ್ಯಾರ್ಥಿಗಳು; ಪರಿಶಿಷ್ಟ ಪಂಗಡದ 17 ವಿದ್ಯಾರ್ಥಿಗಳು ಹಾಗೂ ಇತರೆ ವಿದ್ಯಾರ್ಥಿಗಳು ಸೇರಿ ಒಟ್ಟು 85 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದುಕೊಂಡಿರುತ್ತಾರೆ. ಆದರೆ, ಈ ಯೂನಿವರ್ಸಿಟಿ ಒಂದು ರೂಪಾಯಿ ಅನುದಾನ ಕೊಟ್ಟಿರುವುದಿಲ್ಲ. ಆದರೂ ಸಹ, ಎರಡನೆ ವರ್ಷದ ಪಿಜಿಯಲ್ಲಿ ಪ್ರವೇಶಾತಿ ಡಬಲ್ ಆಗಿರುತ್ತದೆ. ಅದರಂತೆ, ಪರಿಶಿಷ್ಟ ಜಾತಿಯ 82 ವಿದ್ಯಾರ್ಥಿಗಳು; ಪರಿಶಿಷ್ಟ ಪಂಗಡದ 21 ವಿದ್ಯಾರ್ಥಿಗಳು ಸೇರಿದಂತೆ, ಒಟ್ಟು 1,518 ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಹಾಗೂ 311 ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಹಾಗೂ 2,534 ಓಬಿಸಿ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದುಕೊಂಡಿರುತ್ತಾರೆ. ಇನ್ನು ಯಾವ ರೀತಿ ದಾಖಲಾತಿಗಳು ಆಗಬೇಕು ಎಂಬುದನ್ನು ಸರ್ಕಾರ ತಿಳಿಸಬೇಕು. ಒಂದು ಯೂನವರ್ಸಿಟಿ ಎಂದರೆ ಇನ್ನು ಯಾವರೀತಿ ಇರಬೇಕೆಂಬುದನ್ನು ಕೂಡ ಸರ್ಕಾರ ತಿಳಿಸಬೇಕು. It is the smallest district in the State. It is a hilly area. ಇಲ್ಲಿ ಅತ್ಯಂತ ಶ್ರೀಮಂತರು ಇದ್ದಾರೆ, ಬಡವರು ಇದ್ದಾರೆ ಹಾಗೂ ಕಡು ಬಡವರು ಸಹ ಇದ್ದಾರೆ. ಅಂದರೆ ಇವೊತ್ತಿನ ದಿವಸ B.Sc., B.A., B.Com., M. Com., ಮತ್ತು M.A. degree ಗಳನ್ನು ಓದುವವರು ಯಾರು ಸ್ವಾಮಿ? ನಮ್ಮ ಮಕ್ಕಳು ಯಾರೂ ಕೂಡ B.A. degree ಓದಲಿಲ್ಲ. ನಾನು ಬಿ.ಎಸ್‌ಸಿ ಬಂದು ಆ ನಂತರ ಲಾ ಓದಿರುತ್ತೇನೆ. Actually, I was interested in studying Biochemistry. Just because we don't have a university which offers that course, I joined law. ನಾನು ಹೇಳುತ್ತಿರುವುದೇನೆಂದರೆ, ಇಂತಹ ಒಂದು ಪರಿಸ್ಥಿತಿಯಲ್ಲಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೈಮುಗಿದು ಪ್ರಾರ್ಥಿಸುವುದೇನೆಂದರೆ, ಕೂರ್ಗ್ ನಮಗೆ ಸ್ವಿಟ್ಜರ್‌ಲ್ಯಾಂಡ್‌ಗಿಂತಲೂ ಬಹಳ ಸುಂದರವಾಗಿದೆ. ಮಾನ್ಯ ಉಸ್ತುವಾರಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ಸಹ ಈ ಸದನದಲ್ಲಿ ಹಾಜರಿದ್ದಾರೆ. ಅವರು ಈ ವಿಷಯದ ಬಗ್ಗೆ ದಯಮಾಡಿ ಮಾತನಾಡಬೇಕು. ಏಕೆಂದರೆ, ಯಾವಾಗಲೂ ಅವರು ನಮ್ಮ ಕೂರ್ಗ್‌ಗೆ ಹೋಗಿ ಬರುತ್ತಾರೆ. ನಮ್ಮ ಕೂರ್ಗ್‌ನ ಬ್ಯೂಟಿಯನ್ನು ಎಂಜಾಯ್ ಮಾಡುತ್ತಾರೆ. ಅಲ್ಲದೇ, ನಮ್ಮ ಕೂರ್ಗ್‌ನಲ್ಲಿ ಅತೀ ಹೆಚ್ಚು ಭೇಟಿ ನೀಡಿ, ಅಲ್ಲಿ ಅನೇಕ ಮೀಟಿಂಗ್‌ಗಳನ್ನು ಮಾಡಿರುತ್ತಾರೆ. ಅಲ್ಲದೇ, ಬಹಳ ಸಮರ್ಥವಾಗಿ ಕೂರ್ಗ್‌ನ ಆಡಳಿತವನ್ನು ನಡೆಸಿರುತ್ತಾರೆ. ಆದರೆ, ಇವೊತ್ತಿನ ದಿವಸ ವಿಶ್ವವಿದ್ಯಾಲಯದ ಬಗ್ಗೆ ಅವರು ಧ್ವನಿ ಎತ್ತುತ್ತಿಲ್ಲ. If you want, I will name out all private, aided and government colleges. ಅಲ್ಲಿ ಪ್ರೈವೇಟ್ ಕಾಲೇಜು ಏನಿದೆ, ಅನುದಾನಿತ ಕಾಲೇಜು ಏನಿದೆ ಮತ್ತು ಸರ್ಕಾರಿ ಕಾಲೇಜು ಏನಿದೆ ಎಂದು ಹೇಳುತ್ತೇನೆ. ಇಷ್ಟೆಲ್ಲಾ ಕಾಲೇಜುಗಳು ಇದ್ದು, ಎರಡನೆ ವರ್ಷದಲ್ಲಿ 2534 ವಿದ್ಯಾರ್ಥಿಗಳು ಪ್ರವೇಶಾತಿ ಆಗಿದ್ದು, ಒಟ್ಟಾರೆಯಾಗಿ 4,363 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದುಕೊಂಡಿರುತ್ತಾರೆ. ಇದು ಹುಡುಗಾಟವೇ? ಇನ್ನು ನಾವು ಅಲ್ಲಿಗೆ ಏನೂ ಅನುದಾನ ಕೊಟ್ಟಿರುವುದಿಲ್ಲ. ಆದರೆ, 4500 ವಿದ್ಯಾರ್ಥಿಗಳು ಅಲ್ಲಿ ಪ್ರವೇಶಾತಿ ಪಡೆದುಕೊಂಡಿರುತ್ತಾರೆಂದರೆ, ಆ ವಿಶ್ವವಿದ್ಯಾಲಯವನ್ನು ಕ್ಲೋಸ್ ಮಾಡುತ್ತೇವೆಂದು ಹೇಳಿದರೆ... ಸರ್ಕಾರ ಅದನ್ನು ಕ್ಲೋಸ್ ಮಾಡುವುದಿಲ್ಲ ಬಿಡಿ. ಅದು ನಮಗೆ ಗೊತ್ತಿದೆ. ಅಂತಹ ಮನಸ್ಥಿತಿಯವರು ಅಲ್ಲವೆಂದು ನನ್ನ conscious ಹೇಳುತ್ತಿದೆ. ನಾನು ಇನ್ನೂ ಮಾತನಾಡುವುದಕ್ಕೆ ಬಹಳ ಇದೆ. ಇವೊತ್ತಿನ ದಿವಸ ವಿದ್ಯಾರ್ಥಿಗಳು ಬಹಳ ಹಿಂದುಳಿದ ವರ್ಗದಿಂದ ಬಂದಂತಹವರು ಅಲ್ಲಿ ಇದ್ದಾರೆ. ಎಸ್.ಸಿ./ಎಸ್.ಟಿ. ಮತ್ತು ಓಬಿಸಿ ವರ್ಗಗಳಿಂದ ಬಂದಂತಹ ಸುಮಾರು 4500 ವಿದ್ಯಾರ್ಥಿಗಳು ಆ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿದ್ದಾರೆ. 150 ಕೋಟಿ ಕೊಟ್ಟು ಇಂಜಿನಿಯರಿಂಗ್ ಕಾಲೇಜು ಮಾಡಿದ್ದಾರೆಂದು I don't want to blame you. ಸುಮಾರು 16,000 ಇಂಜಿನಿಯರಿಂಗ್ ಸೀಟುಗಳು ಖಾಲಿ ಇವೆ. ಆದರೆ, ಒಟ್ಟಾರೆಯಾಗಿ ಈ ಬಾರಿ ಭರ್ತಿಯಾಗಿರುವಂಥದ್ದರಲ್ಲಿ ಸುಮಾರು 39,000 ಸೀಟುಗಳು ಖಾಲಿ ಉಳಿದಿರುತ್ತವೆ. ಆ ರೀತಿ ಖಾಲಿ ಉಳಿದಿರತಕ್ಕಂತಹದ್ದರಲ್ಲಿ ಇಂಜನಿಯರಿಂಗ್ ಕಾಲೇಜು ತೆಗೆದುಕೊಂಡಿದ್ದಾರೆಂದು ನಾನು ಅವರನ್ನು ದೂಷಿಸುವುದಿಲ್ಲ. ಸರ್ಕಾರ ಎಲ್ಲರಿಗೂ ಶಿಕ್ಷಣ ನೀಡಲಿ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಓದಲಿ. ಬಾಲಗಂಗಾಧರ ಸ್ವಾಮೀಜಿಯವರು ಅಂದು ನಮ್ಮ ಚಿಕ್ಕಮಗಳೂರಿನಲ್ಲಿ ಬಿಜಿಎಸ್ ಕಾಲೇಜನ್ನು ಸ್ಥಾಪನೆ ಮಾಡಿಲ್ಲವೆಂದರೆ, ಇವೊತ್ತಿನ ದಿವಸ ನಮ್ಮ ಜಿಲ್ಲೆಯ ಪ್ರತಿ ಮನೆ ಮನೆಗಳಿಂದ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಹೊರಗಡೆ ಬರುತ್ತಿರಲಿಲ್ಲ. ಅದೇ ರೀತಿ, ದಾವಣಗೆರೆಯಲ್ಲಿ ಎರಡು-ಮೂರು ಮೆಡಿಕಲ್ ಕಾಲೇಜು ಸ್ಥಾಪನೆ ಮಾಡಿರುವುದರಿಂದ ಅಲ್ಲಿ ಬಹಳಷ್ಟು ಜನರು ವೈದ್ಯರುಗಳು ಹೊರಗಡೆ ಬಂದಿರುತ್ತಾರೆ. ಅದೇ ರೀತಿ, ಮಂಗಳೂರಿನಲ್ಲಿ within a radius of 3 kms 5 ಮೆಡಿಕಲ್ ಕಾಲೇಜುಗಳಿವೆ. Yenepoya (Deemed to be University), Srinivas University ಅಥವಾ Dr. M.V. Shetty Institute of Health Sciences ಇರಬಹುದು. **(ಗೊಂದಲ)** ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೌತ್‌ಕೆನರಾದಲ್ಲಿ ಒಳ್ಳೆಯ ವಿದ್ಯಾಭ್ಯಾಸ ಸಿಗುತ್ತದೆಯೆಂದು ನಾವೆಲ್ಲರೂ ಸಹ ಅಲ್ಲಿಗೆ ಹೋಗಿ ಉನ್ನತ ವಿದ್ಯಾಭ್ಯಾಸ ಮಾಡಬೇಕು. ನಮ್ಮ ಮನೆ ಬಾಗಿಲಿನಲ್ಲಿ ನಮ್ಮ ಹೆಣ್ಣುಮಕ್ಕಳು ವಿದ್ಯಾಭ್ಯಾಸ ಮಾಡಲಿ ಎಂದು ಅಂದಿನ ಕಾಲದಲ್ಲಿ ನಮ್ಮ ಭಾಗದಲ್ಲಿ ಎಂತೆಂತಹ ಅನುದಾನಿತ ಕಾಲೇಜುಗಳ ಸ್ಥಾಪನೆಗೆ ಭೂಮಿಯನ್ನು ದಾನ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿರುತ್ತಾರೆ. ಆ ರೀತಿ ನಮ್ಮ ಭಾಗದಲ್ಲಿ ಸುಮಾರು ೩ ಎಕರೆ, ೫ ಎಕರೆ ಜಮೀನನ್ನು ದಾನ ಕೊಟ್ಟು ನಾನಂತೂ ಉನ್ನತ ವಿದ್ಯಾಭ್ಯಾಸ ಮಾಡಲಿಲ್ಲ. ನನ್ನ ಮಕ್ಕಳಾದರೂ ವಿದ್ಯಾಭ್ಯಾಸ ಮಾಡಲಿ, ಅದರಲ್ಲಿಯೂ ವಿಶೇಷವಾಗಿ ನಮ್ಮ ಹೆಣ್ಣುಮಕ್ಕಳು ವಿದ್ಯಾಭ್ಯಾಸ ಮಾಡಲಿ ಎಂದು ಭೂಮಿ ದಾನ ನೀಡಿರುತ್ತಾರೆ. ಏಕೆಂದರೆ, ಅವರು ಬಹಳ ದೂರ ನಡೆದುಕೊಂಡು ಕಾಲೇಜಿಗೆ ಹೋಗುವುದಕ್ಕೆ ಆಗುವುದಿಲ್ಲವೆಂದು ಆ ಮಕ್ಕಳಿಗೆಲ್ಲಾ ಶಾಲೆ-ಕಾಲೇಜುಗಳನ್ನು ಸ್ಥಾಪನೆ ಮಾಡಿಕೊಟ್ಟಂತಹ ನಮ್ಮ ಪೂರ್ವಜರನ್ನು ನೆನಪು ಮಾಡಿಕೊಳ್ಳಬೇಕೆಂದು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಇವೊತ್ತಿನ ದಿವಸ ಯೂನಿವರ್ಸಿಟಿಯನ್ನು ಕೊಟ್ಟಿರುತ್ತಾರೆ.

ಶ್ರೀ ಶಿವಾನಂದ ಪಾಟೀಲ್ (ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು):- ಮಾನ್ಯ ಸಭಾಪತಿಯವರೇ, ಇದು ಗಮನ ಸೆಳೆಯುವ ಸೂಚನೆ.

ಸಭಾಪತಿಯವರು:- ಅವರಿಗೆ ಹೇಳುವವರು ಯಾರು? ಅದನ್ನು ಎಲ್ಲರೂ ತಿಳಿದುಕೊಳ್ಳಬೇಕು. ಇಲ್ಲವಾದರೆ, ನಾನು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಶಿವಾನಂದ್ ಪಾಟೀಲ್:- ಮಾನ್ಯ ಸಭಾಪತಿಯವರೇ, ಉಳಿದಿರುವಂತಹ ಪ್ರಶ್ನೆಗಳಿಗೆ ನಾವು ಉತ್ತರ ನೀಡಬೇಕಲ್ಲವೇ? ಎಲ್ಲದಕ್ಕೂ ಒಂದು ಲಿಮಿಟ್ ಇರುತ್ತದೆ.

ಸಭಾಪತಿಯವರು:- ನಾನು ಏನೂ ಹೇಳುವುದಕ್ಕೆ ಆಗುವುದಿಲ್ಲ. ಆಗಲೇ ಮಾನ್ಯ ಸಚಿವರು ಯಾರ್ಯಾರು ಮಾತನಾಡುತ್ತಾರೋ ಅವರೆಲ್ಲರೂ ಮಾತನಾಡಲಿ ಎಂದು ಹೇಳಿರುತ್ತಾರೆ. ಅದಕ್ಕಾಗಿ ಎಲ್ಲರೂ ಎದ್ದು ನಿಂತು ಮಾತನಾಡುತ್ತಿದ್ದಾರೆ.

ಶ್ರೀ ಎಸ್.ಎಲ್. ಭೋಜೇಗೌಡ:- ಮಾನ್ಯ ಸಭಾಪತಿಯವರೇ, ಬಿಜೆಪಿ ಸರ್ಕಾರದವರು ಈ ಯೂನಿವರ್ಸಿಟಿಗಳನ್ನು ಪ್ರಾರಂಭ ಮಾಡಿ, ಅವುಗಳಿಗೆ ಸರಿಯಾದ ಇನ್‌ಫ್ರಾಸ್ಟ್ರಕ್ಚರ್ ಅನ್ನು ಕೊಡುವುದಕ್ಕೆ ಆಗಲಿಲ್ಲ, ಅದಕ್ಕೆ ಸರಿಯಾದ ಹಣಕಾಸಿನ ವ್ಯವಸ್ಥೆ ಮಾಡುವುದಕ್ಕೆ ಆಗಲಿಲ್ಲ; ಅವರು ಇಂತಹ ಯೋಗ್ಯತೆ ಇಟ್ಟುಕೊಂಡು ಇಂತಹ ಕೆಲಸ ಮಾಡಿದ್ದಾರೆಂದು ಏನು ಬೇಕಾದರೂ ಹೇಳಲಿ. ಆದರೆ, ಆ ಯೂನಿವರ್ಸಿಟಿಗಳಲ್ಲಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಸರ್ಕಾರದವರೇ ಸಮವಸ್ತ್ರ ಹೊಲಿಸಲಿ. ಉತ್ತಮ ಶಿಕ್ಷಕರನ್ನು ನೀಡಲಿ, ಆ ಯೂನಿವರ್ಸಿಟಿಗೆ ನಾವು ಅನುದಾನ ಕೊಟ್ಟಿದ್ದೇವೆ ಹಾಗೂ ಮುಚ್ಚುವಂತಹ ಸ್ಥಿತಿಯಲ್ಲಿದ್ದಂತಹ ಯೂನಿವರ್ಸಿಟಿಯನ್ನು ನಾವು ನಡೆಸಿದ್ದೇವೆಂದು ಸರ್ಕಾರದವರು ಇಡೀ ಊರೆಲ್ಲಾ ಹೇಳಿಕೊಂಡು ಬರಲಿ. ನಾವು ಕೂಡ ಅದನ್ನು ಹೇಳುತ್ತೇವೆ. ಹಾಗಾಗಿ, ಆ ಯೂನಿವರ್ಸಿಟಿಗಳನ್ನು ಮುಚ್ಚುವಂತಹ ಪಾಪದ ಕೆಲಸವನ್ನು ಮಾಡಬಾರದು ಎಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ನಮ್ಮ ಮಕ್ಕಳ ಭವಿಷ್ಯದ ದೃಷ್ಟಿಯಿಂದ ನಮ್ಮ ರಾಜ್ಯದಲ್ಲಿ ಯೂನಿವರ್ಸಿಟಿಗಳು ಇರಬೇಕು. ಹಾಗಾಗಿ, ಸರ್ಕಾರ ದಯಮಾಡಿ ಯೂನಿವರ್ಸಿಟಿಗಳನ್ನು ಉಳಿಸುವಂತಹ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಸದನದಲ್ಲಿ ಒಂದು ಆರೋಪವನ್ನು ಮಾಡಬಯಸುವ ಒಬ್ಬ ಮಾನ್ಯ ಸದಸ್ಯರು ತಾವು ಮಾಡುತ್ತಿರುವ ಆರೋಪವನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮರ್ಥಿಸುವಂತಹ ತಮ್ಮಲ್ಲಿರುವ ಸಾಕ್ಷ್ಯವನ್ನು ಮಾನ್ಯ ಸಭಾಪತಿಯವರ ಮುಂದೆ ಇಡತಕ್ಕದ್ದು. ಒಂದು ವೇಳೆ ಸಾಕ್ಷ್ಯ ಇಲ್ಲವೆಂದರೆ, ಅವರ ಆರೋಪವನ್ನು ಕಡತದಿಂದ ತೆಗೆಯಬೇಕು. ಹಾಗಾಗಿ, ಸದರಿ ಆರೋಪವನ್ನು ತಾವು ಕಡತದಿಂದ ತೆಗೆಯಬೇಕು. ಈ ರೀತಿಯ ಆರೋಪ ಮಾಡಬಾರದು. ನೇರವಾಗಿ 'ಕುಲಪತಿಗಳು' ಎಂದು ಹೇಳುವುದು ಅಥವಾ 'ಸೂಟ್‌ಕೇಸ್' ಎಂಬ ಆರೋಪವನ್ನು ಮಾನ್ಯ ಸದಸ್ಯರು ಮಾಡಲಿ. ಆದರೆ, ಆ ಆರೋಪವನ್ನು ಸಾಬೀತು ಮಾಡಬೇಕು. ಇಲ್ಲವಾದರೆ, ಈ ರೀತಿ ನೇರವಾಗಿ ಯಾರ ವಿರುದ್ಧವೂ ಆರೋಪ ಮಾಡಬಾರದು.

ಸಭಾಪತಿಯವರು:- ಆಯಿತು, ನಾನು ಅದನ್ನು ನೋಡುತ್ತೇನೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, 'ಸಂಧ್ಯಾಕಾಲದಲ್ಲಿ ಇರತಕ್ಕಂತಹ ಯಾವುದೋ ಊರಿನಲ್ಲಿರುವವರನ್ನು ಇಲ್ಲಿಗೆ ಕೂರಿಸಿರುತ್ತಾರೆ' ಎಂದು ಹೇಳಿರುತ್ತಾರೆ. ಅವರು ಯಾರು? ಇದು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಸಂವಿಧಾನ ಇದು. ಅದನ್ನು ಸರ್ಕಾರ ವಿರೋಧ ಮಾಡುತ್ತಿದೆಯೇ? ರಾಜ್ಯದ ರಾಜ್ಯಪಾಲರನ್ನು ವಿರೋಧ ಮಾಡುವುದು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರನ್ನು ವಿರೋಧ ಮಾಡಿದಂತೆಯೇ ಆಗುತ್ತದೆ. ಸಂವಿಧಾನವನ್ನು ವಿರೋಧ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಅದು ಸರಿಯಾದ ಪದವಾಗದ ಪ್ರಯುಕ್ತ ಕಡತದಿಂದ ತೆಗೆಯಬೇಕು.

(ಮುಂದು)

(233) 11.03.2025 8.30 ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಹೌದು. ಅದನ್ನು ಕಡತದಿಂದ ತೆಗೆಯಬೇಕು.

ಸಭಾಪತಿಯವರು:- ನಾನು ಕಡತವನ್ನು ನೋಡಿ ಹೇಳುತ್ತೇನೆ.

ಶ್ರೀ ಶಶೀಲ್ ಜಿ.ನಮೋಶಿ:- ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾಲಯದ ಕುಲಪತಿಗಳ ನೇಮಕ ಸಂದರ್ಭದಲ್ಲಿ transparent ಆಗಿದೆ. ಬಹುಶಃ ಆ ರೀತಿ ಎಂದು ಆಗಿಲ್ಲ.

ಸಭಾಪತಿಯವರು:- ಮಾನ್ಯ ಶಶೀಲ್ ಜಿ.ನಮೋಶಿರವರೇ, ನಾನು ಕಡತವನ್ನು ತರಿಸಿ ನೋಡಿ ಆಮೇಲೆ ಏನು ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ರವಿಕುಮಾರ್‌ರವರೇ, ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ, ಈಗಾಗಲೇ ಎಲ್ಲರೂ ಮಾತನಾಡಿರುವುದರಿಂದ ಅದೇ ವಿಚಾರವಾಗಿ ನಾನು ಮಾತನಾಡಲು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

ಶ್ರೀ ಶಶೀಲ್ ಜಿ.ನಮೋಶಿ:- ಮಾನ್ಯ ಸಭಾಪತಿಯವರೇ,...

ಸಭಾಪತಿಯವರು:- ಮಾನ್ಯ ಶಶೀಲ್ ಜಿ.ನಮೋಶಿರವರೇ, ತಾವು ನನಗೆ ಕಡತವನ್ನು ತರಿಸಿ ನೋಡಿ ಹೇಳುವುದಕ್ಕೆ ಬಿಡುತ್ತೀರಾ ಅಥವಾ ಇಲ್ಲವೇ?

ಶ್ರೀ ಶಶೀಲ್ ಜಿ.ನಮೋಶಿ:- ಮಾನ್ಯ ಸಭಾಪತಿಯವರೇ, ತಾವು ಸಹ ಪೀಠದಲ್ಲಿಯೇ ಕುಳಿತುಕೊಂಡಿದ್ದು, ತಮ್ಮ ಅಭಿಪ್ರಾಯ ಏನೆಂಬುದನ್ನು ದಯವಿಟ್ಟು ತಿಳಿಸಿ.

ಸಭಾಪತಿಯವರು:- ನಮ್ಮ ಅಭಿಪ್ರಾಯವನ್ನು ಕೇಳುವವರು ಇಲ್ಲಿ ಎಷ್ಟು ಜನರಿದ್ದೀರಿ? ಯಾರೂ ಸಹ ನನ್ನ ಅಭಿಪ್ರಾಯವನ್ನು ಕೇಳುವುದಿಲ್ಲ.

ಶ್ರೀ ಎನ್.ಎಸ್.ಬೋಸರಾಜು:- ಮಾನ್ಯ ಶಶೀಲ್ ಜಿ.ನಮೋಶಿರವರೇ, ಸಭಾಪತಿಯವರು ಏತಕ್ಕೆ ಉತ್ತರ ಕೊಡಬೇಕು? ತಾವೆಲ್ಲರೂ ಮಾತನಾಡಿದ್ದು, ಅದಕ್ಕೆ ಸರ್ಕಾರ ಏನು ಉತ್ತರ ಕೊಡಬೇಕು ಆ ಉತ್ತರವನ್ನು ಕೊಡುತ್ತದೆ.

(ಗೊಂದಲ)

ಶ್ರೀ ಶಶೀಲ್ ಜಿ.ನಮೋಶಿ:- ಮಾನ್ಯ ಸಭಾಪತಿಯವರೇ, ಆ ರೀತಿ ನಾನು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು:- ಮಾನ್ಯ ಸಭಾಪತಿಯವರ ಅಭಿಪ್ರಾಯವನ್ನು ಕೇಳುವ ಅವಶ್ಯಕತೆ ಇಲ್ಲ.

ಶ್ರೀ ಶಶೀಲ್ ಜಿ.ನಮೋಶಿ:- ಮಾನ್ಯ ಸಭಾಪತಿಯವರೇ, ತಾವು ಕೂಡ ಸುಮಾರು 45 ವರ್ಷಗಳಿಂದ ಈ ಸದನದಲ್ಲಿಯೇ ಸೇವೆ ಸಲ್ಲಿಸಿರುವವರಾಗಿರುವುದರಿಂದ ದಯಮಾಡಿ ಈ ವಿಚಾರವಾಗಿ ಒಂದೆರಡೂ ಮಾತನ್ನು ಹೇಳಬೇಕೆಂದು ನಮ್ಮ ಅಭಿಪ್ರಾಯವಾಗಿದೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಶಿವಾನಂದ್ ಎಸ್.ಪಾಟೀಲ್(ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ, ಕೃಷಿ ಮಾರುಕಟ್ಟೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಸಲಹೆಯನ್ನು ತೆಗೆದುಕೊಂಡು ತಮ್ಮ ಅಭಿಪ್ರಾಯವನ್ನು ಹೇಳಬೇಕಾಗಿಲ್ಲ.

(ಗೊಂದಲ)

Sri SHASHIL G. NAMOSHI: Not as a Chairman…

(ಗೊಂದಲ)

Sri N.S. BOSERAJU: That gives a wrong message. ಮಾನ್ಯ ಶಶೀಲ್ ಜಿ.ನಮೋಶಿರವರೇ, ಸಭಾಪತಿಯವರು ಯಾವ ಸಂದರ್ಭದಲ್ಲಿ ಏನು ಹೇಳಬೇಕು ಅದನ್ನು ಹೇಳುತ್ತಾರೆ. **(ಗೊಂದಲ)** ಹಾಗಾಗಿ, ಈ ವಿಷಯದಲ್ಲಿ ಅವರು ಅಭಿಪ್ರಾಯವನ್ನು ಹೇಳಬೇಕು ಎಂಬುದು ಏನಿಲ್ಲ.

ಸಭಾಪತಿಯವರು:- ಮಾನ್ಯ ಶಶೀಲ್ ಜಿ.ನಮೋಶಿರವರೇ, ತಾವು ಹೇಳುವ ಮಾತನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಈ ಸದನದಲ್ಲಿರುವವರು ಇದು ಹಿರಿಯರ ಮನೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ತಾವು ಹೇಳಿದಂತೆ ನನಗೂ ಮಾತಡುವ ಹಕ್ಕಿದೆ. ಆದರೆ, ಗೌರವ ಇಲ್ಲ ಎಂದ ಮೇಲೆ ನಾನು ಏತಕ್ಕೆ ಹೇಳಲಿ? ಆದರೆ, ತಾವು ಹೇಳುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿನ ವಿಶ್ವವಿದ್ಯಾಲಯಗಳ ಕುರಿತು ಇವತ್ತು ಸಾಕಷ್ಟು ಚರ್ಚೆಗಳು ನಡೆದಿದೆ. ಹಾಗೆಂದು, ನಾನು ಬಹಳಷ್ಟು ವಿಷಯಗಳನ್ನು ತೆಗೆದುಕೊಂಡು ಹೋಗಿ ಮಾತನಾಡುವುದಿಲ್ಲ. ವಿಶ್ವವಿದ್ಯಾಲಯಗಳ ಕುರಿತು ಪರ-ವಿರೋಧವಾಗಿ ಸಾಕಷ್ಟು ಚರ್ಚೆಗಳಾಗಿವೆ. 9 ವಿಶ್ವವಿದ್ಯಾಲಯಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಹಾಗೆಯೇ ಸರ್ಕಾರದ 32 ವಿಶ್ವವಿದ್ಯಾಲಯಗಳ ಬಗ್ಗೆ ಸಹ ಚರ್ಚೆ ನಡೆಯುತ್ತಿದೆ. ನಾನು ಸರ್ಕಾರಕ್ಕೆ ಕೆಲವು ಪ್ರಶ್ನೆಗಳನ್ನು ಕೇಳಬಯಸುವುದೇನೆಂದರೆ, ಯಾವುದೇ university ಯಲ್ಲಿ 'university' ಎಂದು ಕರೆಸಿಕೊಳ್ಳುವುದಕ್ಕೆ criteria ಇಲ್ಲ. ಕೆಲವು ವಿಶ್ವವಿದ್ಯಾಲಯಗಳು ವಿಶ್ವವಿದ್ಯಾಲಯವಾಗುವುದಕ್ಕೆ ಅರ್ಹತೆ ಇಲ್ಲದಂತಾಗಿದ್ದು, ಎಷ್ಟು ವಿಶ್ವವಿದ್ಯಾಲಯಗಳನ್ನು ಈ ರಾಜ್ಯದಲ್ಲಿ ಮುಚ್ಚಲಾಗುತ್ತದೆ. ಈಗಿನ ಪರಿಸ್ಥಿತಿಯ ಪ್ರಕಾರ 32 ವಿಶ್ವವಿದ್ಯಾಲಯಗಳನ್ನು ಮುಚ್ಚಬೇಕಾಗುತ್ತದೆ. ಶೇಕಡ 58 ರಷ್ಟು ಖಾಯಂ ಉಪನ್ಯಾಸಕರಿಲ್ಲ ಮತ್ತು ಶೇಕಡ 69 ರಷ್ಟು ಬೋಧಕ-

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೋಧಕೇತರ ಸಿಬ್ಬಂದಿಗಳಿಲ್ಲದ ಕಾರಣ ಎಷ್ಟು ವಿಶ್ವವಿದ್ಯಾಲಯಗಳನ್ನು ಮುಚ್ಚಲಾಗುತ್ತದೆ? ಎರಡನೆಯದಾಗಿ, ಶಾಲೆಗಳಿಗೆ ಶಿಕ್ಷಕರು ಬರುತ್ತಿಲ್ಲ. ಹಾಗಾಗಿ, ಎಷ್ಟು ಶಾಲೆಗಳನ್ನು ಮುಚ್ಚಲಾಗುತ್ತದೆ? Criteria ಪ್ರಕಾರವೇ ಶಾಲೆಗಳನ್ನು ನಡೆಸುತ್ತೇವೆ ಎಂದು ಹೇಳುವುದಾದರೆ, ಎಷ್ಟು ಸಾವಿರ ಶಾಲೆಗಳನ್ನು ಮುಚ್ಚಲಾಗುತ್ತದೆ? ಎಷ್ಟು ಸಾವಿರ ಪ್ರೌಢ ಶಾಲೆಗಳನ್ನು ಮುಚ್ಚಲಾಗುತ್ತದೆ? ಎಷ್ಟು ನರ್ಸಿಂಗ್ ಕಾಲೇಜು, ಬಿ.ಎಡ್. ಕಾಲೇಜು, ಇಂಜಿನಿಯರಿಂಗ್ ಕಾಲೇಜುಗಳನ್ನು AICTE, UGC ಮತ್ತು university norms ಪ್ರಕಾರ ತೆಗೆದುಕೊಂಡರೆ ಮುಚ್ಚಲಾಗುತ್ತದೆ? ಎನ್ನುವಂಥ ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳಬಯಸುತ್ತೇನೆ. ಮೂರನೆಯದಾಗಿ, ವಿಶ್ವವಿದ್ಯಾಲಗಳಲ್ಲಿ ಕಾರ್ಯನಿರ್ವಹಿಸುವವರಿಗೆ ವೇತನ ನೀಡುವ ಪ್ರಶ್ನೆ, ಹಣಕಾಸಿನ ಪ್ರಶ್ನೆ, ದುಡ್ಡಿನ ಪ್ರಶ್ನೆ ಬಂದಿದೆ?

ಬಹುಶಃ ಇವತ್ತು ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ದೇಶದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿಯೂ ಪರಿಸ್ಥಿತಿಯೂ ಇದೇ ರೀತಿ ಇರಬಹುದೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಇವತ್ತಿನ ದಿವಸ ವಿಶ್ವವಿದ್ಯಾಲಯಗಳೇನುವುದು ಬಿಳಿ ಆನೆಗಳಾಗಿವೆ. ಪ್ರೈಮರಿ ಸ್ಕೂಲ್ ನಡೆಸಿದಂತೆ ಯೂನಿವರ್ಸಿಟಿಗಳನ್ನು ನಡೆಸುವುದಕ್ಕಾಗುವುದಿಲ್ಲ. ಒಬ್ಬ ಯೂನಿವರ್ಸಿಟಿ ಪ್ರೊಫೆಸರ್‌ಗೆ ಎಷ್ಟು ಲಕ್ಷ ಸಂಬಳ ಇದೆ? ಆ ವಿಷಯದ ಮೇಲೆ ಮಾತನಾಡಲು ಹೋಗುವುದಿಲ್ಲ. ಒಬ್ಬ ನಿವೃತ್ತ ಪ್ರೊಫೆಸರ್‌ಗೆ ಪಿಂಚಣಿ ಕೊಡಬೇಕೆಂದರೆ, ಎಷ್ಟು ಪಿಂಚಣಿ ಕೊಡಬೇಕಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಮೈಸೂರು ವಿಶ್ವವಿದ್ಯಾಲಯ ಒಳಗೊಂಡಂತೆ ಎರಡು ವಿಶ್ವವಿದ್ಯಾಲಯಗಳಿದ್ದು, ತುಂಬಾ ಹಳೆಯದಾದ ವಿಶ್ವವಿದ್ಯಾಲಯಗಳಾಗಿವೆ. ಮಾನ್ಯ ಪುಟ್ಟಣ್ಣನವರು ಕೂಡ ಈ ಸದನದಲ್ಲಿಯೇ ಇದ್ದಾರೆ. 'ನನಗೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಂಡು ಬೆಂಗಳೂರು ವಿಶ್ವವಿದ್ಯಾಲಯದವನು' ಎಂದು ಕರೆಸಿಕೊಳ್ಳುವುದರಲ್ಲಿ ಬಹಳ ಹೆಮ್ಮೆ ಇದೆ. ಹಾಗೆಯೇ 'ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಂಡು, ನಾನು ಮೈಸೂರು ವಿಶ್ವವಿದ್ಯಾಲಯದವನು' ಎಂದು ಕರೆಸಿಕೊಳ್ಳುವುದರಲ್ಲಿಯೂ ಬಹಳ ಹೆಮ್ಮೆ ಇದೆ.

ಭಾರತ ಸಂವಿಧಾನದ ಶಿಲ್ಪಿಯಾದ ಡಾ॥ ಬಿ.ಆರ್.ಅಂಬೇಡ್ಕರ್‌ರವರು ಕೊಲಂಬಿಯಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿದ್ದು, ಅರ್ಥಶಾಸ್ತ್ರದಲ್ಲಿ ೪ನೇ ಸ್ಥಾನದ ಶ್ರೇಷ್ಠ ವಿದ್ಯಾರ್ಥಿಯಾಗಿದ್ದರು. ಹಾಗೆಯೇ ಶ್ರೀ ಸರ್. ಎಂ.ವಿಶ್ವೇಶ್ವರಯ್ಯನವರು ಯಾವ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಹೊಂದಿದರು? ಡಾ॥ ಬಿ.ಆರ್. ಅಂಬೇಡ್ಕರ್‌ರವರು ಯಾವ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಹೊಂದಿದರು? ಇನ್ನಿತರೆ ವ್ಯಕ್ತಿ ಇರಲಿ, ಅವರು ಯಾವ ವಿಶ್ವವಿದ್ಯಾಲಯದವರು? ಯಾವ ವಿಶ್ವವಿದ್ಯಾಲಯದಿಂದ ಓದಿ ಬಂದಿದ್ದಾರೆ ಎಂಬುದು ಬರುವುದಿಲ್ಲ. ಯಾವ ವ್ಯಕ್ತಿ ಎಂಬುದರ ಮೇಲೆ ಅವಲಂಬಿತ ಆಗುತ್ತದೆ. ವಿಶ್ವವಿದ್ಯಾಲಯಗಳ ಮೇಲೆ ನಮಗೂ ಗೌರವ ಇದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕಾಗಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಎಲ್ಲಾ ವಿಶ್ವವಿದ್ಯಾಲಯಗಳನ್ನು ಉಳಿಸಬೇಕೆಂದು ಶೇಕಡ 100 ಕ್ಕೆ 100 ರಷ್ಟು ಹೇಳುವುದಿಲ್ಲ. ಅದಕ್ಕೆ ನನ್ನ conscious ಸಹ ಒಪ್ಪುವುದಿಲ್ಲ. ಆದರೆ, ಇದರೊಳಗೆ ಯಾವ ವಿಶ್ವವಿದ್ಯಾಲಯಗಳನ್ನು ಮುಚ್ಚಲೇಬಾರದು ಹಾಗೂ ಯಾವ ವಿಶ್ವವಿದ್ಯಾಲಯಗಳನ್ನು ಮುಚ್ಚಬಹುದು, ಆ ವಿಶ್ವವಿದ್ಯಾಲಯಗಳಲ್ಲಿ ಬಡ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆಯೇ ಅಥವಾ ಶ್ರೀಮಂತ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆಯೇ? ರಾಯಚೂರು ಜಿಲ್ಲೆಯ GER (Gross Enrollment Ratio) ಹಾಗೂ ಉಡುಪಿ ಜಿಲ್ಲೆಯ GER ಎಂಬುದು ಏನು? ಹಾಗೆಯೇ ಮಂಗಳೂರು ಜಿಲ್ಲೆಯ GER ಹಾಗೂ ಚಾಮರಾಜನಗರ ಜಿಲ್ಲೆಯ GER ಎಂಬುದು ಏನು? ಚಾಮರಾಜನಗರ ಜಿಲ್ಲೆಯಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದಾರೆ? ಏತಕ್ಕಾಗಿ, ಚಾಮರಾಜನಗರ, ಕೊಪ್ಪಳ, ರಾಯಚೂರು, ಬಳ್ಳಾರಿ, ಗುಲ್ಬರ್ಗಾ, ಯಾದಗಿರಿ ಇವೆಲ್ಲಾ ಜಿಲ್ಲೆಗಳು ಹಿಂದೆ ಉಳಿದಿವೆ? ಎಂಬುದನ್ನು ನೋಡಿದರೆ ನನ್ನ ಪ್ರಕಾರ ಅಲ್ಲಿ ಎಜುಕೇಷನ್ ಕಡಿಮೆ ಇದೆ.

ಆದ್ದರಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗಾಗಲೇ ವಿಶ್ವವಿದ್ಯಾಲಯವನ್ನು ತೆರೆದಿದ್ದು, ಎಲ್ಲಾ ವಿಶ್ವವಿದ್ಯಾಲಯವನ್ನು ತೆರೆಯಿರಿ ಎಂದು ಹೇಳುವುದಿಲ್ಲ. ನಾನು ಹೇಳುವುದೇನೆಂದರೆ, debate ಮಾಡಿ. Academic debate ನಡೆಯಲಿ. ಶ್ವೇತಪತ್ರವನ್ನು ಹೊರಡಿಸಿ. ಉದಾಹರಣೆಗೆ ಹೇಳುವುದಾದರೆ, ಅನೇಕ ವಿಶ್ವವಿದ್ಯಾಲಯಗಳಲ್ಲಿ ಹೆಚ್.ಒ.ಡಿ. ಗಳು ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಯಾರು ಸಂಶೋಧನೆ ಮಾರ್ಗದರ್ಶನ ನೀಡಬೇಕಾಗಿತ್ತು, ಅನೇಕ ಜನ ಪ್ರೊಫೆಸರ್ಸ್, ನಿವೃತ್ತಿ ಕುಲಸಚಿವರು, ಐ.ಎ.ಎಸ್. ಅಧಿಕಾರಿಗಳು, ಈ ರೀತಿ ಶಿಕ್ಷಣದ ಬಗ್ಗೆ ಬಹಳಷ್ಟು ಜನರು ತಿಳಿದಿರುವಂಥವರಾಗಿದ್ದು, ಇದರ ಬಗ್ಗೆ authentic ಆಗಿ ಮಾತನಾಡುವವರು ಈ ಸದನದಲ್ಲಿದ್ದೇವೆ. ಯಾರು ಸಂಶೋಧನೆಗೆ ಮಾರ್ಗದರ್ಶನ ನೀಡುತ್ತಿದ್ದಾರೆ, ಅವರು ಖಾಯಂ ನೌಕರರಾಗಿಲ್ಲ. ಹಾಗಾದರೆ, ಇವತ್ತು ಪಿಹೆಚ್.ಡಿ ಪದವಿ ಪಡೆದವರ ಪರಿಸ್ಥಿತಿ ಏನಾಗಿರಬಹುದು?

ಶ್ರೀ ಶಿವಾನಂದ ಎಸ್.ಪಾಟೀಲ್:– ಮಾನ್ಯ ಸಭಾಪತಿಯವರೇ, ಇದಕ್ಕೆ Adjournment Motion ಕೊಡಿ ಒಳ್ಳೆಯದು. ಗಮನ ಸೆಳೆಯುವ ಸೂಚನೆ ಮೇಲೆ ಇಷ್ಟೆಲ್ಲಾ ಮಾತನಾಡುತ್ತಾ ಕುಳಿತರೆ ಅರ್ಥವಿಲ್ಲ. ಏಕೆಂದರೆ, ಸಭಾಪತಿಗಳು ಸಹ ಅದನ್ನೇ ಹೇಳುತ್ತಿದ್ದಾರೆ.

ಶ್ರೀ ಎನ್.ರವಿಕುಮಾರ್:– ಗಮನ ಸೆಳೆಯುವ ಸೂಚನೆಯೂ ಇಷ್ಟೆಲ್ಲಾ ದೀರ್ಘಕಾಲ ನಡೆಯುತ್ತಿರುವುದಕ್ಕೆ ನಾನು ಸಹ ಕ್ಷಮಾಪಣೆ ಕೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಶಿವಾನಂದ ಎಸ್.ಪಾಟೀಲ್:- ಮಾನ್ಯ ಸಭಾಪತಿಯವರೇ, ಈಗಾಗಲೇ ವಿಶ್ವವಿದ್ಯಾಲಯದ ಕುರಿತು ಚರ್ಚೆಗೆ ತೆಗೆದುಕೊಂಡು 2 ಗಂಟೆಯಾಗಿದೆ.

ಶ್ರೀ ಎನ್.ರವಿಕುಮಾರ್:- ಮಾನ್ಯ ಸಭಾಪತಿಯವರೇ, ನಾನು ಸಹ ಅದಕ್ಕೆ ಕ್ಷಮೆಯನ್ನು ಕೇಳುತ್ತೇನೆ. ಗಮನ ಸೆಳೆಯುವ ಸೂಚನೆಯೂ ಇಷ್ಟು ದೀರ್ಘಕಾಲ ನಡೆಯಬಾರದು. ಆದರೆ, ಗಮನ ಸೆಳೆಯುವ ಸೂಚನೆ ಮೇಲೆ ಚರ್ಚೆ ನಡೆಯುತ್ತಿರುವುದಕ್ಕಾಗಿ ನಾನು ಸಹ ಕೆಲವೊಂದು ವಿಷಯಗಳನ್ನು ಮಾತನಾಡಲು ನಿಂತುಕೊಂಡಿದೆನು. ಮಾನ್ಯ ಎಂ.ಬಿ.ಪಾಟೀಲ್‌ರವರು ಈ ಸದನದಲ್ಲಿದ್ದು, ಕೆ.ಎಲ್.ಇ. ವಿಶ್ವವಿದ್ಯಾಲಯವು ಅಸ್ತಿತ್ವದಲ್ಲಿದೆ. ಇಡೀ ಉತ್ತರ ಕರ್ನಾಟಕ ಮುಂದೆ ಬರುವ ಸಲುವಾಗಿ PDA, KLE, Basaveshwara, HKE ದಂತಹ ಮಹಾ institution ಗಳು ಕೊಡುಗೆಯನ್ನು ನೀಡಿದೆ. ಆದ್ದರಿಂದ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ವಿಶ್ವವಿದ್ಯಾಲಯಗಳನ್ನು ಮುಚ್ಚಬೇಕು ಎಂಬುದರ ಬಗ್ಗೆ ಹತ್ತು ಸಲ ಯೋಚನೆ ಮಾಡಬೇಕು. ನಾನೇನು ರೆಡ್ ಪೆನ್ಸಿಲ್‌ನಲ್ಲಿ with inverted comma 'ಮುಚ್ಚಲೇಬೇಡಿ' ಎಂದು ಹೇಳುವುದಿಲ್ಲ. 10 ಸಲ ಯೋಚನೆ ಮಾಡಿ ನಿರ್ಣಯವನ್ನು ತೆಗೆದುಕೊಳ್ಳಲಿ.

ಕೊನೆಯ ಅಂಶವನ್ನು ಹೇಳಬಯಸುವುದೇನೆಂದರೆ, ಈ ಹಿಂದೆ holistic universities ಗಳಿದ್ದು, unitary universities ಅಸ್ತಿತ್ವಕ್ಕೆ ಬಂದವು. ಇವೆಲ್ಲವೂ ಮೆಡಿಕಲ್ ಕಾಲೇಜು, ಮೆಡಿಕಲ್ ಯೂನಿವರ್ಸಿಟಿ ಕೆಳಗೆ ಬರುತ್ತಿದೆ. ಹಾಗೆಯೇ ಎಲ್ಲಾ ಇಂಜಿನಿಯರಿಂಗ್ ಕಾಲೇಜು ವಿ.ಟಿ.ಯು ಕೆಳಗೆ ಬರುತ್ತಿದೆ. ಎಲ್ಲಾ polytechnic ಗಳು ತಾಂತ್ರಿಕ ಶಿಕ್ಷಣ ಇಲಾಖೆ ಅಡಿಯಲ್ಲಿ ಬರುತ್ತಿದೆ. ಅಂದರೆ, ಜಾಸ್ತಿ ಶುಲ್ಕ ಭರಿಸುವಂಥ professional course ಗಳತ್ತು, ಅವೆಲ್ಲವೂ professional universities ಕೆಳಗೆ ಬರುತ್ತಿವೆ. ಹಾಗೆಯೇ ಕೆಲವು ಯೂನಿವರ್ಸಿಟಿಗಳು ಹಣ ಇಲ್ಲದೇ ಸೊರಗುತ್ತಿದೆ. ಶುಲ್ಕ ತೆಗೆದುಕೊಳ್ಳದೇ ವಿಶ್ವವಿದ್ಯಾಲಯಗಳನ್ನು ನಡೆಸಲು ಆಗುತ್ತಿಲ್ಲ. ವಿದ್ಯಾರ್ಥಿಗಳ ಶುಲ್ಕದ ಆಧಾರದ ಮೇಲೆಯೇ ಯೂನಿವರ್ಸಿಟಿಗಳನ್ನು ನಡೆಸುವುದೆಂದರೆ ತುಂಬಾ ಕಷ್ಟ. ಇಂತಹ ಸಂದರ್ಭದಲ್ಲಿ ಸರ್ಕಾರವು ಯಾವ ರೀತಿಯ ನಿಲ್ಲುವನ್ನು ತೆಗೆದುಕೊಳ್ಳಬೇಕು? ಆದರೆ, ಸರ್ಕಾರವು ಸಂಬಳ ಮಾತ್ರ ಕೊಡುತ್ತೇನೆ ಎಂದು ಹೇಳುತ್ತದೆ. ಸರ್ಕಾರವು ಸಂಬಳ ಸಹ ಕೊಡುತ್ತಿಲ್ಲ, ವಿದ್ಯಾರ್ಥಿಗಳ ಶುಲ್ಕದ ಆಧಾರದ ಮೇಲೆ 'ಅಲ್ಲಿನ ಶಿಕ್ಷಕರಿಗೆ, ಪ್ರೊಫೆಸರ್‌ಗೆ, ಯೂನಿವರ್ಸಿಟಿಗೆ, ಬೋಧಕೇತರ ಸಿಬ್ಬಂದಿಗಳಿಗೆ ನೀವೇ ಸಂಬಳ ಕೊಡಿ' ಎನ್ನುವಂಥದ್ದಾಗಿದ್ದು, ವಿದ್ಯಾರ್ಥಿಗಳ ಕಥೆ ಏನಾಗಬೇಕು? ಇದರಿಂದ ವಿದ್ಯಾರ್ಥಿಗಳ ಶುಲ್ಕವನ್ನು ಎಷ್ಟು ಹೆಚ್ಚಿಗೆ ಮಾಡಬೇಕು. ಹಾಗಾಗಿ, ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಬಹಳಷ್ಟು non-

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

professional courses ಇರುವಂಥ ಯೂನಿವರ್ಸಿಟಿಗಳೇನಿವೆ, ಅಲ್ಲಿ ಸಂಗ್ರಹವಾಗುವಂಥ ಶುಲ್ಕ ಎಷ್ಟು; ಆ ಯೂನಿವರ್ಸಿಟಿಯ ವಾರ್ಷಿಕ ವೆಚ್ಚ ಎಷ್ಟು ಎಂಬುದರ ಬಗ್ಗೆ ಚರ್ಚೆಯಾಗಬೇಕಾಗಿದೆ.

(ಮುಂದು)

(234) 11.03.2025/8.40/ಎಸ್‌ಕೆ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಎನ್. ರವಿಕುಮಾರ್ (ಮುಂದು):-

ಉನ್ನತ ಶಿಕ್ಷಣ ಮತ್ತು ವಿಶ್ವವಿದ್ಯಾಲಯಗಳ ಪರಿಸ್ಥಿತಿಗಳ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೂ ಕೂಡ ಗೊತ್ತಿದೆ. ಈ ವಿಷಯದ ಕುರಿತಾಗಿ ಸಾಕಷ್ಟು ಚರ್ಚೆಯೂ ಕೂಡ ನಡೆಯುತ್ತಿದೆ. ವಿಶ್ವವಿದ್ಯಾಲಯಗಳ ಪರಿಸ್ಥಿತಿಯ ಬಗ್ಗೆ ದಿನಪತ್ರಿಕೆಯಲ್ಲಿಯೂ ಕೂಡ ಪುಟಗಳಷ್ಟು ಬರುತ್ತಿದೆ. ಉದಾಹರಣೆಗೆ ಹೇಳುವುದೇನೆಂದರೆ, SEP (State Education Policy) ಮತ್ತು NEP (National Education Policy) ಎಲ್ಲಿಗೆ ಬಂತು ಎಂಬುದರ ಬಗ್ಗೆ ಕೊನೆಯ ಅಂಶವನ್ನು ಹೇಳ ಮುಗಿಸುತ್ತೇನೆ. SEP ಮತ್ತು NEP ಏನಾದರೂ ಬದಲಾವಣೆ ಮಾಡಿದ್ದಾರೆಯೇ? ನನ್ನ ಪ್ರಕಾರ NEP ಜಾಗದಲ್ಲಿ SEP ಎನ್ನುವುದನ್ನು ಬಿಟ್ಟರೆ, ಇನ್ನು ಏನು ಬದಲಾವಣೆಯಾಗಿಲ್ಲ ಎಂದು ನನಗೆ ಅನಿಸುತ್ತಿದೆ. ಕೇವಲ ೨ ವಿಶ್ವವಿದ್ಯಾಲಯಗಳ ಬಗ್ಗೆ ಚರ್ಚೆಯಲ್ಲ, ಇನ್ನೂ 32 ವಿಶ್ವವಿದ್ಯಾಲಯಗಳ ಬಗ್ಗೆಯೂ ಚರ್ಚೆಯಾಗಬೇಕಾಗಿದೆ. Universities are facing a very pathetic condition. ಇದನ್ನು ನೋಡಿದರೆ ಬಹಳ ನೋವಾಗುತ್ತಿದೆ. ಇವತ್ತು ಪ್ರೊಫೆಸರ್ ಹಾ.ಮಾ. ನಾಯಕ್ ರವರು ಇದ್ದಿದ್ದರೆ, ...

ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):- ಮಾನ್ಯ ರವಿಕುಮಾರ್‌ರವರೇ, ತಾವು ಹೇಳಿದ್ದಕ್ಕೆ ಹೇಳುತ್ತಿದ್ದೇನೆ. ಏಕಾಏಕಿ fee ಅನ್ನು hike ಮಾಡಿದರು. ಅದರಿಂದ ಕೆಲವು ಕಾಲೇಜುಗಳ strength ಬಿದ್ದು ಹೋಗಿದೆ.

ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ, ಈಗ ಮಹಿಳೆಯರು ಉನ್ನತ ಶಿಕ್ಷಣವನ್ನು ಪಡೆಯಲು ಶಿಕ್ಷಣ ಸಂಸ್ಥೆಗಳಿಗೆ ಬರುತ್ತಿದ್ದಾರೆ. ರಾಯಚೂರು, ಗುಲ್ಬರ್ಗಾ ಜಿಲ್ಲೆಗಳಲ್ಲಿ ಇಪ್ಪತ್ತು ವರ್ಷಗಳಿಂದ ಹಿಂದೆ ವಿದ್ಯಾರ್ಥಿನಿಯರು ಉನ್ನತ ಶಿಕ್ಷಣವನ್ನು ಪಡೆಯಲು ಬರುತ್ತಿರಲಿಲ್ಲ. ಈಗ ಅವರು ಕೂಡ ಬರುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಉಳಿಸಬೇಕು ಮತ್ತು ಗುಣಮಟ್ಟವನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಪಾಡಿಕೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ, ಇಂಜಿನಿಯರಿಂಗ್ ವಿದ್ಯಾರ್ಥಿಗಳು ಪದವಿಯನ್ನು ಪಡೆದುಕೊಂಡು ಯಾರು ಹೊರಗಡೆ ಬರುತ್ತಿದ್ದಾರೆ, ಇವತ್ತು Campus Interview ನೋಡಿದರೆ, ಎಷ್ಟು percent ವಿದ್ಯಾರ್ಥಿಗಳು ಅರ್ಹತೆಯನ್ನು ಇವತ್ತಿನ global scenario ದಲ್ಲಿ ಪಡೆದುಕೊಳ್ಳುತ್ತಾರೆ? ಇವತ್ತಿನ global scenario ದಲ್ಲಿ ಎಷ್ಟು ಜನ ಇಂಜಿನಿಯರಿಂಗ್ ಪದವೀಧರರು fit-in ಆಗುತ್ತಾರೆ. ಇವತ್ತು ಶಿಕ್ಷಣದ ಗುಣಮಟ್ಟವನ್ನು ಪಡೆದುಕೊಂಡು ಎಷ್ಟು ಜನ ವಿದ್ಯಾರ್ಥಿಗಳು ಹೊರಗಡೆ ಬರುತ್ತಿದ್ದಾರೆ?

ಮಾನ್ಯ ಸಭಾಪತಿಯವರೇ, ಒಮ್ಮೆಲೆ ವಿಶ್ವವಿದ್ಯಾಲಯಗಳನ್ನು ಸ್ಥಗಿತ ಮಾಡುತ್ತೇವೆ ಎನ್ನುವ ನಿರ್ಣಯಕ್ಕೂ ಬರಬಾರದು. "ಹೆತ್ತವರಿಗೆ ಹೆಗ್ಗಣ ಮುದ್ದು" ಎಂಬ ಗಾದೆಯಂತೆ, ಎಲ್ಲಾ ವಿಶ್ವವಿದ್ಯಾಲಯಗಳು ಇರಬೇಕು. ಕೊನೆಯದಾಗಿ, ಒಂದು ಉದಾಹರಣೆ ಕೊಟ್ಟು, ನನ್ನ ಮಾತನ್ನು ಮುಗಿಸುತ್ತೇನೆ. ರವಿಕುಮಾರ್‌ರವರಿಗೆ ಅನ್ಯಥಾ ಟೀಕೆ ಮಾಡಬಾರದು.

ಸಭಾಪತಿಯವರು:- ಮಾನ್ಯ ರವಿಕುಮಾರ್‌ರವರೇ, ಕೊನೆ ಮಾತು ಎಂದು ಹೇಳಿ, ತಾವು ಹೆಚ್ಚು ಸಮಯ ತೆಗೆದುಕೊಂಡು ಮಾತನಾಡುತ್ತಿದ್ದೀರಾ. ಈಗ ತಾವು ಮಾತನಾಡಿ.

ಶ್ರೀ ಎನ್. ರವಿಕುಮಾರ್:- ಮಾನ್ಯ ಸಭಾಪತಿಯವರೇ, ಆರು ಸಾವಿರ ಸ್ಕೂಲ್‌ಗಳನ್ನು ಸ್ಥಗಿತ ಮಾಡಬೇಕೆಂಬುದು ಇದೆ. ಒಬ್ಬನೇ ಒಬ್ಬ ವಿದ್ಯಾರ್ಥಿ ಮತ್ತು ಐದು ಜನ ವಿದ್ಯಾರ್ಥಿಗಳಿರುವಂತಹ ಸ್ಕೂಲ್‌ಗಳಿವೆ. ಇವುಗಳನ್ನು merge ಮಾಡಬಹುದಾ? ಈ ವಿಷಯದ ಬಗ್ಗೆ ಇನ್ನಷ್ಟು ಚರ್ಚೆಯಾದ ನಂತರ ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ. ಆದರೆ ನಮ್ಮ ನಿಲುವು ಏನೆಂದರೆ, ವಿಶ್ವವಿದ್ಯಾಲಯಗಳನ್ನು ಮತ್ತು ಕಾಲೇಜುಗಳನ್ನು ಒಮ್ಮೆಲೆ ಸ್ಥಗಿತ ಮಾಡಿದರೆ, ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಆ ಬಗ್ಗೆ ಸರ್ಕಾರ ನಿರ್ಣಯವನ್ನು ಕೈಗೊಳ್ಳಬಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ೨ ವಿಶ್ವವಿದ್ಯಾಲಯಗಳ ಬಗ್ಗೆಯಲ್ಲ, ೩೭ ವಿಶ್ವವಿದ್ಯಾಲಯಗಳನ್ನು ಪರಾಮರ್ಶೆ ಮಾಡಬೇಕೆಂದು ಹೇಳಿದ್ದಾರೆ. ಎಲ್ಲಾ ವಿಶ್ವವಿದ್ಯಾಲಯಗಳನ್ನು ಅವಲೋಕನ ಮಾಡಿದಾಗ, ೨ ವಿಶ್ವವಿದ್ಯಾಲಯಗಳಿಗೆ ಈ ಎಲ್ಲಾ ಷರತ್ತುಗಳನ್ನು ಹಾಕಿ ಏತಕ್ಕೆ ಪ್ರಾರಂಭ ಮಾಡಿದರು?

ಸಭಾಪತಿಯವರು:- ಮಾನ್ಯ ಸಚಿವರೇ, ತಾವು ಉತ್ತರ ಹೇಳಿ.

ಡಾ॥ ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಸಭಾಪತಿಯವರೇ,

ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಎರಡು ನಿಮಿಷಕ್ಕಿಂತ ಹೆಚ್ಚಿಗೆ ಮಾತನಾಡುವುದಿಲ್ಲ. ನಾನು ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಹಿಂದಿನ ಸರ್ಕಾರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2022-23ನೇ ಸಾಲಿನಲ್ಲಿ ತೆರದಿದ್ದ ವಿಶ್ವವಿದ್ಯಾಲಯಗಳ ಬಗ್ಗೆ ಚರ್ಚೆ ಮಾಡುತ್ತಿರುವ ಸಂದರ್ಭದಲ್ಲಿ; ಮಾನ್ಯ ಸಭಾಪತಿಯವರು ವಿಷಯ ತೆಗೆದುಕೊಂಡಿರುವ ಬಗ್ಗೆ ಮಾತನಾಡುತ್ತೇನೆ. ಹಾಗಾಗಿ ಈ ವಿಶ್ವವಿದ್ಯಾಲಯಗಳ ಬಗ್ಗೆ ಮಾತನಾಡುತ್ತಿದ್ದೇವೆ. ಮಾನ್ಯ ಪುಟ್ಟಣ್ಣನವರು ಹೇಳಿರುವಂತೆ, ಮುಖ್ಯವಾಗಿ ಗುಣಮಟ್ಟದ ಶಿಕ್ಷಣದ ಬಗ್ಗೆ ಆದ್ಯತೆ ಕೊಡಬೇಕೇ ಹೊರತು, ರಾಜ್ಯದಲ್ಲಿ ತುಂಬಾ ವಿಶ್ವವಿದ್ಯಾಲಯಗಳಿವೆ ಎಂಬ ಬಗ್ಗೆ ವಿಚಾರವಲ್ಲ. ಗುಣಮಟ್ಟ ಶಿಕ್ಷಣವನ್ನು ಯಾವ ರೀತಿ ಕೊಡುತ್ತಿದ್ದೇವೆ? ಕಟ್ಟಕಡೆಯದಾಗಿರುವ ನಾಗರಿಕರಿಗೆ ಎಷ್ಟು ಗುಣಮಟ್ಟದ ಶಿಕ್ಷಣವನ್ನು ಕೊಡುತ್ತಿದ್ದೇವೆ ಎಂಬ ಬಗ್ಗೆ ಆಲೋಚನೆ ಮಾಡುತ್ತಿರುವ ವಿಚಾರದಲ್ಲಿ ಈ ವಿಶ್ವವಿದ್ಯಾಲಯಗಳನ್ನು ತೆರೆಯುವ ಸಂದರ್ಭದಲ್ಲಿ ಯಾವುದೇ ವೈಜ್ಞಾನಿಕವಾದಂತಹ ಅಧ್ಯಯನ ನಡೆದಿಲ್ಲ. You are not gone in to the matter feasibility and sustainability of the university. ಈ sustainability ಆಗುವುದಕ್ಕೆ ಯಾವ ವಿಶ್ವವಿದ್ಯಾಲಯಗಳಿಗೆ ಯಾವ ಮಾನದಂಡಗಳು ಇರಬೇಕೋ, ಅದನ್ನು ಇಟ್ಟಕೊಂಡು ಮಾಡಲಿಲ್ಲ ಎನ್ನುವಂತಹದ್ದು; ವೈಜ್ಞಾನಿಕವಾಗಿ ಆಲೋಚನೆ ಮಾಡದೇ ವಿಶ್ವವಿದ್ಯಾಲಯವನ್ನು political reason ಗಾಗಿ ಮಾಡಿರುವಂತಹದ್ದು, ಕೇವಲ ಹೆಸರಿಗೋಸ್ಕರ ಮಾಡಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ. Sustainability ಇಲ್ಲದೇ ಇರುವುದು ಒಂದು ಕಡೆಯಾದರೆ, ವಿಶ್ವವಿದ್ಯಾಲಯಗಳ ಬಗ್ಗೆ ಅಧ್ಯಯನ ನಡೆಸಿರುವಂತಹ ಶ್ರೀ ಹೇಮಂತ್ ಕುಮಾರ್ ವರದಿ ಏನು ಬಂದಿದೆಯೋ, ಅದರಲ್ಲಿರುವ ಶಿಫಾರಸ್ಸುಗಳಲ್ಲಿರುವ ಒಂದೇ ಒಂದು ಅಂಶವನ್ನೂ ಅವಲೋಕನ ಮಾಡಲಿಲ್ಲ ಮತ್ತು ಅನುಷ್ಠಾನಕ್ಕೆ ತರಲಿಲ್ಲ. ಶ್ರೀ ಹೇಮಂತ್ ಕುಮಾರ್ ವರದಿಯ ವಿರುದ್ಧವಾಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಿರುವಂತಹದ್ದನ್ನು ನಾನು ಹೇಳುತ್ತಿದ್ದೇನೆ. ಅದರ ಜೊತೆಗೆ ಹೇಳುವುದಾದರೆ, ಇವತ್ತಿನ ವಿಶ್ವವಿದ್ಯಾಲಯಗಳ ವಿಚಾರ ಬಂದಾಗ, ಕರ್ನಾಟಕ ರಾಜ್ಯವನ್ನು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದಾಗ, Gross Enrolment Ratio is very high in Karnataka State ಎನ್ನುವ ಮಾತನ್ನು ಹೇಳುತ್ತಿದ್ದೇನೆ. 2023 ಮತ್ತು 2024ರಲ್ಲಿ ನಮ್ಮ ಸರ್ಕಾರ ಬಂದ ಎರಡೇ ವರ್ಷಗಳಲ್ಲಿ ಹೊಸದಾಗಿ ಪ್ರಾರಂಭ ಮಾಡಿದ ಕೋರ್ಸ್‌ಗಳನ್ನು ನೋಡಿದಾಗ, more than 21,000 students have taken admission in BCA, BBA and BSW ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಈಗ ಬೇಕಾಗಿರುವುದು ವಿಶ್ವವಿದ್ಯಾಲಯಗಳಲ್ಲ. ಉತ್ತಮವಾದ ಕಾಲೇಜುಗಳಿಗೆ ಗುಣಮಟ್ಟದ ಶಿಕ್ಷಕರು, ಗುಣಮಟ್ಟದ ಶಿಕ್ಷಣ ಬೇಕಾಗುತ್ತದೆ. ಕೇವಲ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡುವುದರಿಂದ ಎಲ್ಲರೂ ಕೂಡ ಉತ್ತಮ ಶಿಕ್ಷಣ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರಿ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಹೇಳಿ, ಉತ್ತಮವಾದ ಶಿಕ್ಷಕರನ್ನು ಕೊಡುವುದಕ್ಕೆ ಹೇಳಿ, research ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡುವುದಕ್ಕೆ ಹೇಳಿ, innovation ಮಾಡುವುದಕ್ಕೆ ಅವಕಾಶ ಮಾಡುವುದಕ್ಕೆ ಹೇಳಿ. ಅದನ್ನು ಬಿಟ್ಟುಬಿಟ್ಟು, ಕೇವಲ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಿ, rehabilitation centres ತರಹ university ಗಳನ್ನು ಸ್ಥಾಪನೆ ಮಾಡಿ, ವಿಶ್ವವಿದ್ಯಾಲಯಕ್ಕೆ ಬೇಕಾಗಿರುವಂತಹ ನನ್ನ ಸಮುದಾಯದಾಯದವರನ್ನು, ನಿಮ್ಮ ಸಮುದಾಯವಾಗಿರುವರನ್ನು Vice Chancellor ಗಳನ್ನು, Registrar ಗಳನ್ನು ಮಾಡಿಕೊಳ್ಳುವುದಕ್ಕೋಸ್ಕರ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಬೇಕೆ ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇನ್ನು ಹೆಚ್ಚು ಕಾಲೇಜುಗಳಲ್ಲಿ, ತಾಲ್ಲೂಕುಗಳಲ್ಲಿ ಇನ್ನೂ ಎರಡು ಕಾಲೇಜುಗಳು ಜಾಸ್ತಿಯಾಗಬೇಕು. ಆದರೆ ಶಿಕ್ಷಣವನ್ನು ಪುಕ್ಕಟೆಯಾಗಿ ಸರ್ಕಾರದಿಂದ ಕೊಡಲಿ. ಅದರ ಬಗ್ಗೆ ನಾನು ಸ್ವಾಗತ ಮಾಡುತ್ತೇನೆ. ಆದರೆ ಕೇವಲ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡುವುದರಿಂದ ಯಾವುದೇ ಕಾರಣಕ್ಕೂ ಗುಣಮಟ್ಟವನ್ನು ಉತ್ತೇಜನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ, ವಿದ್ಯಾರ್ಥಿಗಳೇನಿದ್ದರೂ ಕೂಡ University Graduation Day ಗೆ ವಿಶ್ವವಿದ್ಯಾಲಯಕ್ಕೆ ಬರುತ್ತಾರೆ. ಬೇರೆ ಸಮಯದಲ್ಲಿ ಕಾಲೇಜಿನಲ್ಲಿ ಕಲಿಯುತ್ತಾರೆ. ಕಾಲೇಜಿನಲ್ಲಿ ಅನ್‌ಲೈನ್‌ನಲ್ಲಿ ಶುಲ್ಕ ತುಂಬಿಕೊಳ್ಳಬೇಕು. ವಿಶ್ವವಿದ್ಯಾಲಯಗಳನ್ನು ದೂರದಲ್ಲಿ ಮಾಡುವಂತಹ ಅವಶ್ಯಕತೆ ಇಲ್ಲ. ಇವೆಲ್ಲಾ ವಿಚಾರಗಳನ್ನು ಹೇಳುತ್ತಿದ್ದೇನೆ. ಶಿಕ್ಷಣ ಸಂಸ್ಥೆಗಳಿಗೆ ಹೊಂದಿಕೊಂಡು ಕೆಲಸ ಮಾಡುತ್ತಿರುವುದರಿಂದ, let us concentrate on the quality education. Let us concentrate on the students getting quality education in affordable fee ಎಂದು ಹೇಳುತ್ತೇನೆ. ಹಾಗಾಗಿ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ. ಉಪ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಸಮಿತಿ ರಚನೆ ಮಾಡಿದರು. ಆ ಸಭೆ ಮಾಡಿ ಅಧ್ಯಯನಕ್ಕೋಸ್ಕರ ಶಿಫಾರಸ್ಸಿನ ಮೇಲೆ ಕ್ರಮಗಳನ್ನು ಕೈಗೊಳ್ಳಲಿ. ಆದರೆ ಯಾವುದೇ ಕಾರಣಕ್ಕೂ universities should not become a rehabilitation centre for leaders, who have retired in life. ಧನ್ಯವಾದಗಳು.

ಡಾ॥ ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):- ಈ ವಿಷಯದ ಕುರಿತಾಗಿ ಸುಮಾರು 13 ಜನ ಗೌರವಾನ್ವಿತ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸಭಾಪತಿಯವರು:- ಮಾನ್ಯ ಸಚಿವರೇ, ಎರಡು ಗಂಟೆ ಇಪ್ಪತ್ತೈದು ನಿಮಿಷ ಸಮಯವನ್ನು ತೆಗೆದುಕೊಂಡು ಮಾನ್ಯ ಸದಸ್ಯರು ಮಾತನಾಡಿದ್ದಾರೆ.

ಡಾ॥ ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಸಭಾಪತಿಯವರು:- ತಾವು ಎಷ್ಟು ಸಮಯವನ್ನಾದರೂ ತೆಗೆದುಕೊಂಡು ಮಾತನಾಡಿ. ಈ ವಿಷಯದ ಕುರಿತಾಗಿ ಒಂದು ಗಂಟೆಯಾದರೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಸಭಾಪತಿಯವರೇ, ಈ ವಿಷಯದ ಕುರಿತಾಗಿ, ಅನೇಕ ಮಾನ್ಯ ಸದಸ್ಯರು ನಾನಾ ರೀತಿಯ ವ್ಯಾಖ್ಯಾನ ಮಾಡಿದ್ದಾರೆ. ಮಾನ್ಯ ಸದಸ್ಯರಿಗೆ ಕೇಳುವುದೇನೆಂದರೆ, 32 ವಿಶ್ವವಿದ್ಯಾಲಯಗಳ ಸ್ಥಿತಿಗತಿಗಳ ಬಗ್ಗೆ ಸಮಗ್ರವಾದ ಅಧ್ಯಯನ ಆಗಬೇಕು ಎನ್ನುವ ದೃಷ್ಟಿಯಿಂದ ಉಪ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಮಿತಿ ರಚನೆ ಮಾಡಲಾಗಿದೆ. ನಮ್ಮ ಸರ್ಕಾರ ಆಸ್ತಿತ್ವಕ್ಕೆ ಬಂದಂತಹ ಸಂದರ್ಭದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳನ್ನು ಸೇರಿಸಿ ನಾನು ಕೂಡ ಸಭೆ ಮಾಡಿದ್ದೆ ಮತ್ತು ಮುಖ್ಯಮಂತ್ರಿಗಳ ಜೊತೆಯಲ್ಲಿಯೂ ಕೂಡ ಸಭೆ ಮಾಡಿಸಿದ್ದೆ. ಹೊಸದಾಗಿ ಬಂದಂತಹ 7 ವಿಶ್ವವಿದ್ಯಾಲಯಗಳ ಕುಲಪತಿಗಳು ಮಾನ್ಯ ಮುಖ್ಯಮಂತ್ರಿಯವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ, ಅವರದೇ ಆದ ಬೇಡಿಕೆಗಳನ್ನು ಇಟ್ಟಿರುವಂತಹದ್ದು. ಇದು ಕಳೆದ ಒಂದೂ ಮುಕ್ಕಾಲು ವರ್ಷ ನಡೆದಿರುವಂತಹದ್ದು. ಅಂದಿನಿಂದ ಎಲ್ಲಾ ವಿಶ್ವವಿದ್ಯಾಲಯಗಳ ಪರಿಸ್ಥಿತಿಗಳು ತಾವು ಕೂಡ ಹಲವಾರು ಬಾರಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ವಿಶ್ವವಿದ್ಯಾಲಯಗಳ ಬಗ್ಗೆಯೂ ಕೂಡ ಮಾತನಾಡಿದ್ದೀರಿ. ಮಂಗಳೂರು ವಿಶ್ವವಿದ್ಯಾಲಯದ ಬಗ್ಗೆ ಗೌರವಾನ್ವಿತ ಸಭಾಧ್ಯಕ್ಷರು ಕೂಡ ಮಾತನಾಡಿದ್ದರು. ಆಯಾಯ ಭಾಗಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಬಗ್ಗೆ ಇಲ್ಲಿರುವ ಗೌರವಾನ್ವಿತ ಸದಸ್ಯರು ಚರ್ಚೆ ಮಾಡಿರುವ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರ ಏನು ತೀರ್ಮಾನ ಮಾಡುತ್ತದೆಯೋ, ಅದರ ಬಗ್ಗೆ ಸಮಗ್ರವಾದ ಅಧ್ಯಯನವಾಗಬೇಕು. ವಿಶ್ವವಿದ್ಯಾಲಯದಲ್ಲಿ ಪ್ರತೀಕತೆ ಇದೆ. ಇವತ್ತು special universities ಇವೆ. ಈಗ ಕನ್ನಡ ವಿಶ್ವವಿದ್ಯಾಲಯ, ಮಹಿಳಾ ವಿಶ್ವವಿದ್ಯಾಲಯ, ಜನಪದ ವಿಶ್ವವಿದ್ಯಾಲಯ, ಸಂಗೀತ ವಿಶ್ವವಿದ್ಯಾಲಯ, ಸಂಸ್ಕೃತ ವಿಶ್ವವಿದ್ಯಾಲಯಗಳು ಇವೆ. ಈ ವಿಶ್ವವಿದ್ಯಾಲಯಗಳ ಸ್ಥಿತಿಗತಿಗಳೇನು? ಕನ್ನಡ ವಿಶ್ವವಿದ್ಯಾಲಯದಲ್ಲಿ ವಿದ್ಯುತ್ ಬಿಲ್ ಕಟ್ಟುವುದಕ್ಕೆ ದುಡ್ಡು ಇಲ್ಲ ಎಂದು ಮಾಧ್ಯಮಗಳಲ್ಲಿ ಬಂದಿರುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಈ ರೀತಿ ಒಂದೊಂದು ವಿಶ್ವವಿದ್ಯಾಲಯಗಳಲ್ಲಿಯೂ ಅವರದೇ ಆದಂತಹ ಸಮಸ್ಯೆಗಳಿವೆ. ಬೋಧಕರು ಇಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಎಲ್ಲಾ ವಿಷಯಗಳ ಬಗ್ಗೆಯೂ ಚರ್ಚೆಯಾಗಿದೆ.

ಮಾನ್ಯ ಸಭಾಪತಿಯವರೇ, ನಾನು ಇಲ್ಲಿರುವ ಮಾನ್ಯ ಸದಸ್ಯರಿಗೆ ಕೇಳುವುದೇನೆಂದರೆ, ಸರ್ಕಾರದ ಕಾಲೇಜುಗಳ ಜೊತೆಯಲ್ಲಿ ಖಾಸಗಿ ಕಾಲೇಜುಗಳು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳು ಸೇರಿ ಸುಮಾರು 3600 ಕ್ಕಿಂತ ಹೆಚ್ಚು ಕಾಲೇಜುಗಳು ನಮ್ಮ ರಾಜ್ಯದಲ್ಲಿ ಇವೆ. ಸುಮಾರು 733 ಕಾಲೇಜುಗಳಲ್ಲಿ 125 ಸರ್ಕಾರಿ ಕಾಲೇಜುಗಳು ಮತ್ತು 608 ಖಾಸಗೀ ಕಾಲೇಜುಗಳಲ್ಲಿ ಇವತ್ತು ಸ್ನಾತಕೋತ್ತರ ಕೋರ್ಸ್‌ಗಳು ನಡೆಯುತ್ತಿವೆ. ಇದು ನಿನ್ನೆ ಮೊನ್ನೆ ಪ್ರಾರಂಭವಾಗಿರುವಂತಹದ್ದಲ್ಲ. ಬಹಳ ವರ್ಷಗಳಿಂದ ಕಾಲೇಜುಗಳು ನಡೆದಿರುವಂತಹದ್ದು. ನಾನು ಗೌರವಾನ್ವಿತ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಪದೇ-ಪದೇ Gross Enrolment Ratio ಪದವನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಳಸುತ್ತಿದ್ದಾರೆ. ನಾನು ಇಲ್ಲಿರುವ ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಬೇರೆ ರಾಜ್ಯದಲ್ಲಿ ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು? ಅಲ್ಲಿ GER ಇರತಕ್ಕಂಥದ್ದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ.

(ಮುಂದು)

(235) 11.03.2025/8.50/ಬಿಸಿಹೆಚ್-ಆರ್ಎನ್ (ಸಭಾಪತಿಯವರ ಉಪಸ್ಥಿತಿ)

ಡಾ.ಎಂ.ಸಿ.ಸುಧಾಕರ್ (ಮುಂದು)

ನಂತರ ಅಲ್ಲಿ ಎಷ್ಟು ಜಿಲ್ಲೆಗಳಲ್ಲಿ ಎಷ್ಟು ವಿಶ್ವವಿದ್ಯಾಲಯಗಳಿವೆಯೆಂದು ಸಮಗ್ರವಾದ ಮಾಹಿತಿಯನ್ನು ಕೊಡುತ್ತೇನೆ. ಉದಾಹರಣೆಗೆ ಹೇಳುವುದಾದರೆ, ತಮಿಳುನಾಡಿನಲ್ಲಿ ಸುಮಾರು 14 ವಿಶ್ವವಿದ್ಯಾಲಯಗಳಿವೆ, ಅದರಲ್ಲಿ ಒಟ್ಟು 2,800 ಕಾಲೇಜ್‌ಗಳಿವೆ. ಅಲ್ಲಿ Gross Enrollment Ratio ಶೇ.47 ಇದೆ. ತೆಲಂಗಾಣ ರಾಜ್ಯದಲ್ಲಿ ಸುಮಾರು 11 ವಿಶ್ವವಿದ್ಯಾಲಯಗಳಿವೆ. ಅದರಲ್ಲಿ ಒಟ್ಟು 1,200 ಕಾಲೇಜ್‌ಗಳಿವೆ. Gross Enrollment Ratio ಶೇ.40 ರಷ್ಟಿದೆ. ಆಂಧ್ರಪ್ರದೇಶದಲ್ಲಿ ಸುಮಾರು 12 ವಿಶ್ವವಿದ್ಯಾಲಯಗಳಿವೆ. ಅದರಲ್ಲಿ ಒಟ್ಟು 1,200 ಕಾಲೇಜ್‌ಗಳಿವೆ. Gross Enrollment Ratio ಶೇ.36.5 ರಷ್ಟಿದೆ. ಕೇರಳ ರಾಜ್ಯದಲ್ಲಿ 5 ವಿಶ್ವವಿದ್ಯಾಲಯಗಳಿವೆ. ಅದರಲ್ಲಿ ಒಟ್ಟು 1,250 ಕಾಲೇಜ್‌ಗಳಿವೆ. Gross Enrollment Ratio ಶೇ.41.2 ರಷ್ಟಿದೆ. ಮಹಾರಾಷ್ಟ್ರದಲ್ಲಿ ಸುಮಾರು 12 ವಿಶ್ವವಿದ್ಯಾಲಯಗಳಿವೆ. ಅದರಲ್ಲಿ ಸುಮಾರು 3,460 ಕಾಲೇಜ್‌ಗಳಿವೆ. Gross Enrollment Ratio ಶೇ.35.3 ರಷ್ಟಿದೆ. ಕರ್ನಾಟಕದ Gross Enrollment Ratio ಶೇ.36ರಷ್ಟಿದೆ. ಇಲ್ಲಿ ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಇತ್ತೀಚೆಗೆ ನೀತಿ ಆಯೋಗದವರು ಒಂದು ಸರ್ವೇಯನ್ನು ಮಾಡಿ, ಏನು ratio ಇದೆ, density of colleges per lakh ಎಂದು ಏನು ಮಾಡಿದ್ದಾರೆ, ಇಡೀ ದೇಶದಲ್ಲಿ ಕರ್ನಾಟಕದಲ್ಲಿ ಒಂದು ಲಕ್ಷ ಜನರಿಗೆ 66 ಕಾಲೇಜ್ density ಇದೆ. National average 30 colleges ಇವೆ. ಅಂದರೆ ನಾವು ಎರಡು ಪಟ್ಟು ಇದ್ದೇವೆ. ಇವತ್ತು ನಮ್ಮ Gross Enrollment Ratio ಎಷ್ಟಿದೆಯೆಂದು ಮಾನ್ಯ ಸದಸ್ಯರ ಗಮನಕ್ಕೆ ತರಲು ಬಯಸುತ್ತೇನೆ. ಮಾನ್ಯ ಸದಸ್ಯರು ಮಾತನಾಡತಕ್ಕಂಥ ಸಂದರ್ಭದಲ್ಲಿ ನಾವು ಎಲ್ಲೆಲ್ಲಿ ಹಿಂದುಳಿದ ಭಾಗಗಳಿವೆಯೋ ಎಲ್ಲೆಲ್ಲಿ Gross Enrollment Ratio ಕಡಿಮೆ ಇದೆಯೋ ಅಲ್ಲಿ ಮಾತ್ರ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಿದ್ದೇವೆಂದು ಹೇಳಿದ್ದಾರೆ. Gross Enrollment Ratio ಅನ್ನು ಮಾಡತಕ್ಕಂಥ National Survey ಏನಿದೆ, AISHE (All India Survey on Higher Education)ರವರು 2021ರ Gross Enrollment Ratio ಪ್ರಕಾರ, ಹಾವೇರಿ ಜಿಲ್ಲೆಯಲ್ಲಿ ಜನಪದ ವಿಶ್ವವಿದ್ಯಾಲಯ ಇದೆ. ಅಲ್ಲಿ Gross Enrollment Ratio ಶೇ.45.5 ರಷ್ಟಿದೆ. ವಿಜಯಪುರ ಜಿಲ್ಲೆಯಲ್ಲಿ Gross Enrollment Ratio ಶೇ.29.04 ರಷ್ಟಿದೆ. ನಾನು ವಿಜಯಪುರವನ್ನು ಏಕೆ ಹೇಳುತ್ತಿದ್ದೇನೆಂದರೆ, ಅದರ ಪಕ್ಕದಲ್ಲೇ ಬಾಗಲಕೋಟೆ ಕೂಡ ಇದೆ. ಅಲ್ಲಿ Gross Enrollment Ratio ಶೇ.25 ರಷ್ಟಿದೆ. ಬೀದರ್ ಜಿಲ್ಲೆಯಲ್ಲಿ Gross Enrollment Ratio ಶೇ.23.74ರಷ್ಟಿದೆ. ಮಂಡ್ಯದಲ್ಲಿ Gross Enrollment Ratio ಶೇ.20.96 ರಷ್ಟಿದೆ. ಕೊಡಗಿನಲ್ಲಿ Gross Enrollment Ratio ಶೇ.16.58 ರಷ್ಟಿದೆ. ಕೊಪ್ಪಳದಲ್ಲಿ Gross Enrollment Ratio ಶೇ.16.01 ರಷ್ಟಿದೆ ಮತ್ತು ಹಾಸನದಲ್ಲಿ Gross

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Enrollment Ratio; ಶೇ.15.4ರಷ್ಟಿದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಸದಸ್ಯರುಗಳು aspirational disputes, aspirational politics, ಡಾ.ಡಿ.ಎಂ.ನಂಜುಂಡಪ್ಪನವರ ವರದಿ ಪ್ರಕಾರ ಎಲ್ಲೆಲ್ಲಿ Gross Enrollment Ratio ಕಡಿಮೆ ಇದೆಯೋ ಅಲ್ಲಿ ಮಾಡಿದ್ದೇವೆಂದು ಹೇಳಿದರು. ನಾನು ತಮಗೆ ಒಂದು ವಿಚಾರವನ್ನು ಕೇಳುವುದಕ್ಕೆ ಬಯಸುತ್ತೇನೆ. ಹಾಸನ ಜಿಲ್ಲೆಯಲ್ಲಿ ಒಂದೊಂದು ಹೋಬಳಿಗೆ ಒಂದೊಂದು ಡಿಗ್ರಿ ಕಾಲೇಜ್ ಇರುವುದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಹಾಸನದಲ್ಲಿ ಒಂದೊಂದು ಡಿಗ್ರಿ ಕಾಲೇಜ್ ಇವೆ. ಎರಡೆರಡು ಡಿಗ್ರಿ ಕಾಲೇಜ್‌ಗಳಿವೆ. ಹಾಸನದಲ್ಲಿ ಒಂದು ವಿಧಾನಸಭಾ ಕ್ಷೇತ್ರದಲ್ಲಿ ನಾನು ಅದರ ಹೆಸರು ಹೇಳುವುದಿಲ್ಲ. ಮಾನ್ಯ ಸದಸ್ಯರು ತಮ್ಮ ಕ್ಷೇತ್ರದ ಇಂಜಿನಿಯರಿಂಗ್ ಕಾಲೇಜ್ ಬಗ್ಗೆ ಹೇಳಿದರು. ಅಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಒಂದೇ ತಾಲ್ಲೂಕ್‌ನಲ್ಲಿ 3 ಪಾಲಿಟೆಕ್ನಿಕ್ ಕಾಲೇಜ್‌ಗಳಿವೆ, ಒಂದು ಇಂಜಿನಿಯರಿಂಗ್ ಕಾಲೇಜ್ ಇದೆ. ಹಾಸನ ಜಿಲ್ಲೆಯಲ್ಲಿ ಸುಮಾರು 7 ಇಂಜಿನಿಯರಿಂಗ್ ಕಾಲೇಜ್‌ಗಳಿವೆ. ನಾನು ಏಕೆ ಈ ಮಾಹಿತಿಯನ್ನು ಹೇಳುತ್ತಿದ್ದೇನೆಂದರೆ, Gross Enrollment Ratio ಎನ್ನತಕ್ಕಂಥದ್ದು ನಾವು ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡುವುದಕ್ಕೂ, Gross Enrollment Ratio ಗೂ ಸಂಬಂಧವಿಲ್ಲ. ದಯವಿಟ್ಟು ಮಾನ್ಯ ಸದಸ್ಯರು ಇದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ, ನಾವು ಶಿಕ್ಷಣದಲ್ಲಿ ಗುಣಮಟ್ಟದ ಶಿಕ್ಷಣವನ್ನು ಕೊಟ್ಟರೆ Gross Enrollment Ratio ತನ್ನಿಂದತಾನೆ ಹೆಚ್ಚಾಗುತ್ತದೆ. ಗುಣಮಟ್ಟದ ಶಿಕ್ಷಣವನ್ನು ಕೊಡದೇ, Gross Enrollment Ratio ಬೆಳೆಯುತ್ತದೆ, ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿದ ಕೂಡಲೇ ಎಲ್ಲರೂ ಅಲ್ಲಿಗೆ ಹೋಗಿ ಪ್ರವೇಶಾತಿ ಪಡೆದುಕೊಂಡಿದ್ದಾರೆಂದು ಹೇಳಿದರು. ಮಾನ್ಯ ಸದಸ್ಯರಾದ ಶ್ರೀ ಹಣಮಂತ್ ರುದ್ರಪ್ಪ ನಿರಾಣಿ ಮತ್ತು ಇತ್ಯಿತರ ಸದಸ್ಯರುಗಳು ಕೂಡ ಕೇಳಿದರು, ನಾನು ಕೇಳುವುದು ಏನೆಂದರೆ, ಈಗ ಬಾಗಲಕೋಟೆಯಲ್ಲಿ ಏನು ಪಿ.ಜಿ. ಸೆಂಟರ್ ಇತ್ತು. ಆ ಪಿ.ಜಿ. ಸೆಂಟರ್‌ನಲ್ಲಿ ಈ ಹಿಂದೆ ಮಹಿಳೆಯರು ಮತ್ತು ಹೆಣ್ಣುಮಕ್ಕಳು ಪ್ರವೇಶಾತಿ ಪಡೆದಿಲ್ಲವೇ? ವಿಶ್ವವಿದ್ಯಾಲಯ ಪ್ರಾರಂಭಕ್ಕೆ ಮುಂಚಿತವಾಗಿ ಅಲ್ಲಿ ಹೆಣ್ಣುಮಕ್ಕಳು, ಎಸ್.ಸಿ/ಎಸ್.ಟಿ ಮಕ್ಕಳು ಕೊಡಗಿನಲ್ಲಿ ಮತ್ತು ಬೇರೆ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದಿರಲಿಲ್ಲವೆ? ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ಇದು ಬಹಳ ಮುಖ್ಯವಾದ ವಿಚಾರ. ನಾನು ಕೂಡ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ Under Graduation ಮಾಡಿದ್ದೇನೆ. Post Graduation ಮಂಗಳೂರು ವಿಶ್ವವಿದ್ಯಾಲಯದಲ್ಲಿ ಮಾಡಿದ್ದೇನೆ. ನಾವು ಬೇರೆ ರಾಜ್ಯ ಅಥವಾ ಬೇರೆ ದೇಶಗಳಿಗೆ ಹೋದಂತಹ ಸಂದರ್ಭದಲ್ಲಿ ನಾವು ಒಂದು ಪ್ರತಿಷ್ಠಿತ ವಿಶ್ವವಿದ್ಯಾಲಯದಲ್ಲಿ ಓದಿ ನಮ್ಮ ಡಿಗ್ರಿಯನ್ನು ಪಡೆದಿದ್ದೇವೆಂದು ಹೋದಂತಹ ಸಂದರ್ಭದಲ್ಲಿ ತಂತಾನಾಗಿಯೇ ಅಲ್ಲಿ ನಮಗೆ ಪ್ರವೇಶಾತಿಗೆ ಅವಕಾಶಗಳು ಸಿಗುತ್ತದೆ. ಇನ್ನೊಬ್ಬ ಸದಸ್ಯರು KEF ಸಿಕ್ಕಿದೆ ಎಂದು ಹೇಳಿದರು. ನಾನು ತಮಗೆ ಹೇಳುವುದೇನೆಂದರೆ, ಒಂದು ರಾಜ್ಯದ ಕಾಯ್ದೆ ಆದಂತಹ ಸಂದರ್ಭದಲ್ಲಿ ಒಂದು ವಿಶ್ವವಿದ್ಯಾಲಯಕ್ಕೆ ಡಿಗ್ರಿ ಪ್ರಧಾನ ಮಾಡತಕ್ಕಂಥ ಅಧಿಕಾರ ಯು.ಜಿ.ಸಿ.ಯವರು ತಂತಾನಾಗಿಯೇ ಒಂದು ವಿಶ್ವವಿದ್ಯಾಲಯ ಸ್ಥಾಪನೆಯಾದ ತಕ್ಷಣವೇ ಕೊಡುತ್ತಾರೆ. ಡಾ.ತಳವಾರ್ ಸಾಬಣ್ಣನವರು ಅದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ನಂತರ ಇವತ್ತು ಆ ವಿಶ್ವವಿದ್ಯಾಲಯ ಒಂದು ಗುಣಮಟ್ಟದ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾಲಯ ಆಗಬೇಕಾದರೆ 5 ವರ್ಷದಲ್ಲಿ ಅವರು NAAC (National Assessment and Accreditation Council) Accreditation ಆಗಬೇಕಾಗುತ್ತದೆ. ನಂತರ ಅವರು ಯು.ಜಿ.ಸಿ. ಕಾಯ್ದೆಯ ಕಲಂ 12(B) ಮಾನ್ಯತೆಯನ್ನು ಪಡೆಯಬೇಕಾಗುತ್ತದೆ. ಕಲಂ 12(B) ಮಾನ್ಯತೆ ಪಡೆದ ನಂತರ ಆ ವಿಶ್ವವಿದ್ಯಾಲಯ PM-USHA (Pradhan Mantri Uchchattar Shiksha Abhiyan) ಅಗಬಹುದು, RUSA (Rashtriya Uchchattar Shiksha Abhiyan) ಆಗಬಹುದು ಬೇರೆ ಅನುದಾನವನ್ನು ಮತ್ತು ಅರ್ಹತೆಯನ್ನು ಪಡೆದುಕೊಳ್ಳುತ್ತದೆ. ಕೊಡಗು ವಿಶ್ವವಿದ್ಯಾಲಯದಲ್ಲಿ MCA/BCA courses ಇವೆಲ್ಲಾ ಪ್ರಾರಂಭ ಆಗಿವೆಯೆಂದು ಹೇಳಿದರು. ಅಲ್ಲಿ ಏನು ಲೋಪಗಳಾಗಿವೆಯೆಂದು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ತಾವು ವಿಶ್ವವಿದ್ಯಾಲಯದ constituent ಕಾಲೇಜ್‌ಗಳು ಒಂದನ್ನು ಗಮನದಲ್ಲಿಇಟ್ಟುಕೊಂಡು ಹೇಳುತ್ತಿದ್ದೀರಿ. ಆದರೆ ಬೇರೆ affiliated colleges ಬಗ್ಗೆ ಹೇಳಬೇಕಾಗುತ್ತದೆ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಕೂಡಲೇ ಇದಕ್ಕೆ ಯಾವರೀತಿ ಬದಲಾವಣೆಯನ್ನು ತರಬೇಕು ಎನ್ನತಕ್ಕಂಥ ನಿಟ್ಟಿನಲ್ಲಿ ನಾವು ಸಾಕಷ್ಟು ಕೋರ್ಸ್‌ಗಳಿಗೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯದೇ, Courses obsolete ಆಗುತ್ತಿದ್ದವು. ಅಂತಹ ಸುಮಾರು 17,000 ಸೀಟ್‌ಗಳನ್ನು withdraw ಮಾಡಿ 21,000 ಸೀಟ್‌ಗಳನ್ನು ನಾನು ಬಂದ ಆರಂಭದಲ್ಲೇ ಹೊಸ ಹೊಸ ಬಗೆಬಗೆಯ ಕೋರ್ಸ್‌ಗಳನ್ನು ತಂದೆವು. ಅದರ ವಿವರವನ್ನು ನಾನು ಹೇಳುತ್ತೇನೆ. ನಾವು ಹೆಚ್ಚುವರಿಯಾಗಿ B.A Courses ಅನ್ನು ಪ್ರಾರಂಭ ಮಾಡಿದೆವು. Additional ಆಗಿ B.Com., ಮಾಡಿದೆವು, B.Sc courses introduce ಮಾಡಿದೆವು. ನಾವು Bachelor of Fashion Technology introduce ಮಾಡಿದೆವು. Bachelor of Financial Administration ಪ್ರಾರಂಭ ಮಾಡಿದೆವು. Bachelor of Sports Management ಪ್ರಾರಂಭ ಮಾಡಿದೆವು. Bachelor of Visual Arts ಪ್ರಾರಂಭ ಮಾಡಿದೆವು. Bachelor of Social Work ಪ್ರಾರಂಭ ಮಾಡಿದ್ದೇವೆ. ಇದೆಲ್ಲಾ ನಾವು ಪ್ರಾರಂಭ ಮಾಡಿದ್ದೆವು. ಅವರು ಕೂಡ ಸುಮಾರು 4 ವರ್ಷಗಳ ಕಾಲ ಅಧಿಕಾರದಲ್ಲಿ ಇದ್ದರು. ಆದರೆ ಅವರು ಏಕೆ ಈ ಕೋರ್ಸ್‌ಗಳನ್ನು introduce ಮಾಡಲಿಲ್ಲ? ಇವತ್ತಿನ ದಿವಸ ವಿದ್ಯಾರ್ಥಿಗಳು ಖಾಸಗಿ ವಿಶ್ವವಿದ್ಯಾಲಯದ ಕಡೆಗೆ ಹೋಗಿ ಅಲ್ಲಿ ದುಬಾರಿ ಶುಲ್ಕ ಕೊಡುವಂತಹ ಪರಿಸ್ಥಿತಿಯನ್ನು ಯಾರು ನಿರ್ಮಾಣ ಮಾಡಿದ್ದು? ಆ ಪರಿಕಲ್ಪನೆ ನಿಮಗೆ ಏಕೆ ಬರಲಿಲ್ಲ? ಕೊಡಗಿನಲ್ಲಿ ವಿಶ್ವವಿದ್ಯಾಲಯ ಪ್ರಾರಂಭವಾಯಿತು ಎಂದು ಹೇಳಿದರು. ನಾನು ಕೊಡಗಿನ ಸಾಧಕರ ಬಗ್ಗೆ ಮತ್ತೊಬ್ಬರ ಬಗ್ಗೆ ಮಾತನಾಡುವುದಿಲ್ಲ. ಅವರೆಲ್ಲರ ಬಗ್ಗೆ ನಮಗೆ ಗೌರವ ಇದೆ. ಏಕೆಂದರೆ ಮಾನ್ಯ ಸದಸ್ಯರಾದ ಭೋಜೇಗೌಡರವರು ಅದರ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಅವರೆಲ್ಲರ ಬಗ್ಗೆ ನಮಗೆಲ್ಲರಿಗೂ ಗೊತ್ತಿದೆ. ಅವರ ಬಗ್ಗೆ ನಾವು ಹೆಮ್ಮೆಪಡುತ್ತೇವೆ. ನಾವು ಅವರಿಗೆ ಹೇಳುವುದೇನೆಂದರೆ, ಬಾಗಲಕೋಟೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಹೊಸ ಕೋರ್ಸ್‌ಗಳನ್ನು ಕೊಟ್ಟಿರುವುದು ನಮ್ಮ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರತಕ್ಕಂಥ Collegiate Education ನಲ್ಲಿ 2,028 ಸೀಟ್‌ಗಳನ್ನು ಕೊಟ್ಟಿದ್ದೇವೆ. ಹೊಸ ಹೊಸ ಕೋರ್ಸ್‌ಗಳು ವಿಶ್ವವಿದ್ಯಾಲಯದಿಂದ ಬಂದಿರತಕ್ಕಂಥದ್ದು ಅಲ್ಲ. ಅವು ನಾವು ಕೊಟ್ಟಿರುವ ಕೋರ್ಸ್‌ಗಳು. ಅದು ಸರ್ಕಾರದ ತೀರ್ಮಾನ. ಆ ಸಂದರ್ಭದಲ್ಲಿ ಅದಕ್ಕೆ ಬೇಕಾದಂತಹ ಅಥಿತಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪನ್ಯಾಸಕರನ್ನು ನೇಮಕ ಮಾಡಿದ್ದೇವೆ. ಬೀದರ್‌ನಲ್ಲಿ 2,410 ಸೀಟ್‌ಗಳನ್ನು ಕೊಟ್ಟಿದ್ದೇವೆ. ಚಾಮರಾಜನಗರದಲ್ಲಿ 620 ಸೀಟ್‌ಗಳನ್ನು ಕೊಟ್ಟಿದ್ದೇವೆ. ಹಾಸನದಲ್ಲಿ ಸುಮಾರು 6,634 ಸೀಟ್‌ಗಳನ್ನು ಕೊಟ್ಟಿದ್ದೇವೆ. ಹಾವೇರಿಯಲ್ಲಿ ಸುಮಾರು 370 ಸೀಟ್‌ಗಳನ್ನು ಕೊಟ್ಟಿದ್ದೇವೆ. ಕೊಡಗಿನಲ್ಲಿ 650 ಸೀಟ್‌ಗಳನ್ನು ಕೊಟ್ಟಿದ್ದೇವೆ. ಕೊಪ್ಪಳದಲ್ಲಿ ಇನ್ನೂ 2,560 ಸೀಟ್‌ಗಳನ್ನು ಕೊಟ್ಟಿದ್ದೇವೆ. ಮಂಡ್ಯದಲ್ಲಿ 1,200 ಸೀಟ್‌ಗಳನ್ನು ಕೊಟ್ಟಿದ್ದೇವೆ. ಇದು ಯಾರು ಕೊಟ್ಟಿದ್ದು? ಇದೆಲ್ಲಾ ವಿಶ್ವವಿದ್ಯಾಲಯದಿಂದ ಆಯಿತೇ? ಮಾನ್ಯ ಸಂಕನೂರರವರೇ, ದಯವಿಟ್ಟು ನಾನು ಹೇಳುತ್ತಿರುವ ವಿಚಾರ ಕೇಳಬೇಕು.

ಮಾನ್ಯ ಸಭಾಪತಿಯವರೇ, ಯಾವುದೇ ಒಂದು ತೀರ್ಮಾನಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ನಾವು ಗುಣಮಟ್ಟದ ಶಿಕ್ಷಣದ ಕಡೆ ಹೆಚ್ಚು ಗಮನ ಕೊಡುವುದು ಬಹಳ ಮುಖ್ಯ. ಮಾನ್ಯ ಸದಸ್ಯರೊಬ್ಬರು Sam Pitroda ನೇತೃತ್ವದ National Knowledge Commission ಬಗ್ಗೆ ಹೇಳಿದರು. ಮತ್ತೆ Yashpal Committee ಬಗ್ಗೆ ಕೂಡ ಹೇಳಿದರು. ಇವತ್ತಿನ ದಿವಸ ವ್ಯವಸ್ಥೆಗಳಲ್ಲಿ ಬಹಳಷ್ಟು ಚಿಂತನೆಗಳಾಗುತ್ತಿವೆ. ಕೆಲವರು ವಿದೇಶಗಳ ಮಾದರಿಯಲ್ಲಿ ತರಬೇಕೆಂಬ ಆಲೋಚನೆಗಳಿವೆ. Sam Pitroda ರವರು ವಿದೇಶಗಳ ಮಾದರಿಯಲ್ಲಿ ಅವರು ಅಲ್ಲಿನ ಅನುಭವಗಳ ಬಗ್ಗೆ ಹೇಳಿದ್ದಾರೆ. ಆದರೆ ವಾಸ್ತವವಾಗಿ ಇಲ್ಲಿ ಏನು ಆಗಬೇಕು? ಹಲವಾರು ಸಂದರ್ಭಗಳಲ್ಲಿ ನಾವು ಕೆಲವು ತೀರ್ಮಾನಗಳನ್ನು ಮಾಡುತ್ತೇವೆ. ಅದರೆ ಆ ತೀರ್ಮಾನಗಳ ಬಗ್ಗೆ ಮತ್ತೆ ಪುನರ್ ವಿಮರ್ಶೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತೇವೆ. ಮಹಾರಾಣಿ ಕ್ಲಸ್ಟರ್ ಯೂನಿವರ್ಸಿಟಿ, RUSA ಸುಮಾರು ರೂ. 55 ಕೋಟಿ ಕೊಡುತ್ತೇವೆ Solitary University ಎಂಬುದನ್ನು ಮಾಡಿದರು. ಈ ಹಿಂದೆ ನಮ್ಮ ಸರ್ಕಾರ ಇದ್ದಾಗಲೇ ಅದಕ್ಕೆ Special Officer ಅನ್ನು ನೇಮಕ ಮಾಡಿದರು. ಅದರ ಬಗ್ಗೆ ಪ್ರಕ್ರಿಯೆಗಳಾಯಿತು, ಸಾಕಷ್ಟು ಚರ್ಚೆಗಳಾಯಿತು. ಆದರೆ ಅಂತಿಮಗಾಗಿ ಏನೇನು ಸಮಸ್ಯೆಗಳಾಯಿತು ಎಂದು ತಮಗೂ ಕೂಡ ಗೊತ್ತಿದೆ. ವಿಶ್ವವಿದ್ಯಾಲಯ ಸ್ಥಾಪನೆಯಾಗುವುದಕ್ಕೆ ಮುಂಚಿತವಾಗಿ Maharani Cluster Universityಯಲ್ಲಿ ಸುಮಾರು 6,400 ಹೆಣ್ಣುಮಕ್ಕಳು ಇದ್ದರು. ಆದರೆ ಆ ವಿಶ್ವವಿದ್ಯಾಲಯ ಆದಮೇಲೆ ಇವತ್ತು ಎಷ್ಟಿದೆ? ಈಗ ಅದರಲ್ಲಿ ಕೇವಲ 4,130 ಹೆಣ್ಣುಮಕ್ಕಳಿದ್ದಾರೆ. ಏಕೆ ಏನಾಯಿತು, ಯಾರು ಇದಕ್ಕೆ ಉತ್ತರ ಕೊಡುವುದಕ್ಕೆ ಸಾಧ್ಯವಿದೆ?

(ಮುಂದು)

(236)11.3.2025/9.00/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

ಡಾ: ಎಂ.ಸಿ. ಸುಧಾಕರ್ (ಮುಂದು):-

ನಮ್ಮ ಶೌಚಾಲಯ ಸರಿಯಿಲ್ಲ ಎಂದು ಪ್ರತಿಭಟನೆ ಮಾಡುತ್ತಿದ್ದಾರೆ. ನೀವು ಏನು ಹೇಳಿದಿರಿ, 55 ಕೋಟಿ ರೂಪಾಯಿಗಳು RUSA (Rashtriya Uchchatar Shiksha Abhiyan) ಅದರಲ್ಲಿ ಶೇ.40ರಷ್ಟು ರಾಜ್ಯ ಸರ್ಕಾರದ ಪಾಲು, ಶೇ.60ರಷ್ಟು ಕೇಂದ್ರ ಸರ್ಕಾರದ RUSA ಪಾಲು. ಅಲ್ಲಿ ಒಬ್ಬ ಮಹಿಳೆ ಕುಲಪತಿಯಾಗಿದ್ದರು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏತಕ್ಕೆ ಹೆಣ್ಣುಮಕ್ಕಳ ಶೌಚಾಲಯ ಸಮಸ್ಯೆಯನ್ನು ಬಗೆಹರಿಸಲಿಲ್ಲ? 55 ಕೋಟಿ ರೂಪಾಯಿಗಳನ್ನು ಕೊಟ್ಟ ಮಾತ್ರಕ್ಕೆ ನಮ್ಮ ಸಮಸ್ಯೆಗಳು ಬಗೆಹರಿಯುತ್ತದೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕು. ನಾನು ಹೇಳುವುದೇನೆಂದರೆ, ವಿಶ್ವವಿದ್ಯಾನಿಲಯ ಎಂಬ ಪರಿಕಲ್ಪನೆ ಏನಿದೆ ಎಂಬುದನ್ನು ನಾನಿವತ್ತು ಹೇಳಬಯಸುತ್ತೇನೆ. UUCMS (Unified University College Management system) portal ನಲ್ಲಿ ಇರುವಂತಹ ಕಾಲೇಜುಗಳ ಸಂಖ್ಯೆಯನ್ನು ಹೇಳುತ್ತೇನೆ. ತಾವು 3-4 ಕಾಲೇಜುಗಳ ಸಂಖ್ಯೆಯನ್ನು ಜಾಸ್ತಿ ಹೇಳಿದ್ದೀರಿ. ಹಾಸನದಲ್ಲಿ 50 ಸಂಯೋಜಿತ ಕಾಲೇಜುಗಳಿವೆ. ಹಾವೇರಿಯಲ್ಲಿ 39, ಕೊಪ್ಪಳದಲ್ಲಿ 23, ಬೀದರ್‌ನಲ್ಲಿ 124 ಇದೆ, ಚಾಮರಾಜನಗರದಲ್ಲಿ 19 ಇದೆ, ಕೊಡಗಿನಲ್ಲಿ 23 ಇದೆ, ಬಾಗಲಕೋಟೆಯಲ್ಲಿ 67 ಇದೆ. ಅವರು 73 ಎಂದು ಹೇಳುತ್ತಿದ್ದರು. ಇದು UUCMS portal ನಲ್ಲಿ ಇರುವಂತಹ ಮಾಹಿತಿ. ಇವತ್ತು ನಾವು ಸುಮ್ಮನೆ ಏನೋ ಮಾಡಬೇಕೆಂಬುದಲ್ಲ. ಏನು ಹಾಸನದಲ್ಲಿ industry ಮತ್ತೊಂದು ಮಾಡಿಬಿಟ್ಟಿದ್ದಾರೆ ಸಿ.ಎಸ್.ಆರ್. ಫಂಡ್ ಏನೇನೋ ಅನುದಾನ ಕೇಳಿದ್ದಾರೆಂದು ಹೇಳುತ್ತೀರಿ. ನಾನು ತಮಗೆ ಹೇಳುವುದೇನೆಂದರೆ, ಕಳೆದ ವರ್ಷ ಹೊಸ ಕೋರ್ಸ್ AEDP (Apprenticeship Embedded Degree Programme) ಪ್ರಾರಂಭ ಮಾಡಿದ್ದೇವೆ. ಇದರಲ್ಲಿ ಹೊಸ B.Com in E-Commerce, B.com in Logistics, B.com in Retail Sectors, B.com in BFSI (Banking, Financial Services, and Insurance). ಈ ಹೊಸ ಕೋರ್ಸ್‌ಗಳನ್ನು ಸುಮಾರು ಆಯ್ದ ಕೆಲವು ವಿಶ್ವವಿದ್ಯಾನಿಲಯಗಳಿಗೆ ಕೊಟ್ಟು board of studies ನಲ್ಲಿ curriculum ಮಾಡಿ Industry Sector Skill Council ಜೊತೆ ಒಡಂಬಡಿಕೆ ಮಾಡಿಕೊಂಡು ನೇರವಾಗಿ ಆ ಕಾಲೇಜುಗಳ ಜೊತೆ ಒಡಂಬಡಿಕೆ ಮಾಡಿಸಿದ್ದು 5 ಮತ್ತು 6ನೇ ಸೆಮಿಸ್ಟರ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳು retail outlet ಗಳಿಗೆ ಹೋಗಿ ಕೆಲಸ ಮಾಡುತ್ತಾರೆ. ಅವರಿಗೆ stipend ಸಿಗುವಂತಹ ಕೆಲಸ ಮಾಡುತ್ತಿದ್ದೇವೆ. ಅವರಿಗೆ 8,000/- ದಿಂದ 18,000/- stipend ಸಿಗುತ್ತದೆ. ಅವರು ಪಾಸ್ ಆದ ತಕ್ಷಣ ಅಲ್ಲಿಯೇ ಅವರಿಗೆ ಉದ್ಯೋಗ ಸಿಗುತ್ತದೆ. Croma and Reliance outlets ಗಳಲ್ಲಿ ಹೋಗಿ ಕೆಲಸ ಮಾಡುತ್ತಾರೆ. ಇದು ನಾವು ಮಾಡಬೇಕಾದಂತಹ ಬದಲಾವಣೆಯಾಗಿದೆ. ಈ ರಾಜ್ಯದಲ್ಲಿ ಇವತ್ತು ಗುಣಮಟ್ಟದ ಶಿಕ್ಷಣ ಕೊಡುವ ಬಗ್ಗೆ ಮಾನ್ಯ ರವಿಕುಮಾರ್‌ರವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಇವತ್ತು ವಿಶ್ವವಿದ್ಯಾನಿಲಯಗಳಲ್ಲಿ 2800 ಬೋಧಕರ ಹುದ್ದೆಗಳು ಖಾಲಿ ಇವೆ. ಇದಕ್ಕೆ ಕಾರಣ ಯಾರು, ನಾವೆಲ್ಲರೂ ಕಾರಣ. ನಿರಂತರವಾಗಿ ನಾವೆಲ್ಲರೂ ಸೇರಿ ಉನ್ನತ ಶಿಕ್ಷಣವನ್ನು ಅವನತಿಗೆ ತೆಗೆದುಕೊಂಡು ಹೋಗುವಂತಹ ಕೆಲಸ ಮಾಡಿದ್ದೇವೆ. ಏತಕ್ಕೆ ಅದರ ಬಗ್ಗೆ ಚಿಂತೆ ಮಾಡಲಿಲ್ಲ? ಏತಕ್ಕೆ ನೇಮಕಾತಿ ಬಗ್ಗೆ ನೀವು ಆಲೋಚನೆ ಮಾಡಲಿಲ್ಲ? ಇವತ್ತು ನನ್ನ ಕ್ಷೇತ್ರದಲ್ಲಿ ಪ್ರತಿ ವರ್ಷ ನಾನು 500-600 ಪತ್ರ ಕೊಡುತ್ತೇನೆ. ಬೆಂಗಳೂರಿನಲ್ಲಿ ಉನ್ನತ ವ್ಯಾಸಂಗಕ್ಕೆ ಬರುತ್ತಾರೆ. Undergraduate Program and Postgraduate Program ಗೆ ಬರುತ್ತಾರೆ. ಹಾಸ್ಟೆಲ್‌ಗೆ ಸೀಟ್ ಬೇಕೆಂದು ನಮ್ಮ ಮೇಲೆ ಒತ್ತಡ ಹಾಕುತ್ತಾರೆ. ಏತಕ್ಕೆ ಮಕ್ಕಳು ನಮ್ಮೂರಿನಲ್ಲಿ ಓದುತ್ತಿಲ್ಲ? ನಮ್ಮಲ್ಲಿ ಡಿಗ್ರಿ ಕಾಲೇಜಿದೆ, 2,000 ಹೆಣ್ಣುಮಕ್ಕಳ ಹಾಜರಾತಿ ಇದೆ. ಹುಡುಗರ ಕಾಲೇಜಿನಲ್ಲಿ 700-800 ಹಾಜರಾತಿ ಇದೆ. ಆದರೆ ಅಲ್ಲಿ ಓದುವುದಕ್ಕೆ ತಯಾರಿಲ್ಲ. ಖಾಸಗಿ ಕಾಲೇಜುಗಳಿಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುತ್ತಿದಾರೆ. ಇಲ್ಲೇತಕ್ಕೆ ಬರುವುದಿಲ್ಲ ಎಂದರೆ ನಾನಾ ಕಾರಣಗಳನ್ನು ಹೇಳುತ್ತಾರೆ. ಇವತ್ತು ನಾವೇ ಬುದ್ಧಿವಂತರು, ತಿಳುವಳಿಕೆ ಇರುವವರು ಎಂದು ನಾವು ಭಾವಿಸಿದ್ದೇವೆ. ನಮಗಿಂತ ಬುದ್ಧಿವಂತರು ವಿದ್ಯಾರ್ಥಿಗಳು ಮತ್ತು ಅವರ ಪೋಷಕರಾಗಿದ್ದಾರೆ. ನಮ್ಮ ವಿದ್ಯಾರ್ಥಿಗಳಿಗೆ, ನಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಬೇಕು. ಅದಕ್ಕೆ ನಾವು ಸಾಲ ಮಾಡುತ್ತೇವೋ ಅಥವಾ ಶಿಕ್ಷಣ ಸಾಲ ಪಡೆಯುತ್ತೇವೋ ಖಾಸಗಿಯಾಗಬಹುದು, ಮತ್ತೊಂದಾಗಬಹುದು, ನಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಬೇಕೆಂದು ಚಾಮರಾಜನಗರದಲ್ಲಿರುವವರ ಸಮೀಪದಲ್ಲಿಯೇ ಮೈಸೂರಿದೆ ಅಲ್ಲಿಗೆ ಬರುತ್ತಾರೆ. ನಾನು ಏನೇನು GER (Gross Enrolment Ration) ಪ್ರದೇಶಗಳನ್ನು ಹೇಳಿದೆ ಅಲ್ಲಿಂದ ಇವತ್ತು; ಮೈಸೂರಿನ GER ಎಷ್ಟಿದೆ ಎಂದು ತಮಗೆ ಗೊತ್ತಿದೆ ಶೇ.47ಕ್ಕಿಂತ ಜಾಸ್ತಿ ಇದೆ. ಏತಕ್ಕೆ ಬರುತ್ತಾರೆ? ನಾವ್ಯಾರೂ ಅವರನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ನಮ್ಮ ಉದ್ದೇಶ, ನಮ್ಮ ಪರಿಕಲ್ಪನೆ ಏನಿರಬೇಕು ಎಂದರೆ ಇರುವಂತಹ ವ್ಯವಸ್ಥೆಯನ್ನು ಸದೃಢ ಮಾಡುವಂತಹ ಕೆಲಸ ಆಗಬೇಕು. ಮಾನ್ಯ ಸದಸ್ಯರಾದ ಸಂಕನೂರ್‌ರವರು ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡಕ್ಕೆ 140 ಕೋಟಿ ಪಿಂಚಣಿ ಕೊಡಬೇಕೆಂದು ಪ್ರಶ್ನೆ ಹಾಕಿದ್ದಾರೆ. ನಮ್ಮ ಸರ್ಕಾರ ಕಳೆದ ಬಾರಿ ಕೂಡ ಸಹಾಯ ಮಾಡಿದ್ದೇವೆ. ಮಾತನಾಡಿದರೆ ಗ್ಯಾರಂಟಿ ಎನ್ನುತ್ತಾರೆ. ದಯವಿಟ್ಟು ನಾನು ಹೇಳುತ್ತಿದ್ದೇನೆ, ಗ್ಯಾರಂಟಿ ಮತ್ತೊಂದು ತರಬೇಡಿ. 4,09,000/- ಕೋಟಿ ರೂಪಾಯಿಗಳ ಬಜೆಟ್ ಮಂಡನೆ ಮಾಡುವುದು ಅಷ್ಟು ಸುಲಭವಲ್ಲ. ಅದೆಲ್ಲಾ ನಮ್ಮ ಮುಖ್ಯಮಂತ್ರಿಗಳು ಬಹಳ ಜವಾಬ್ದಾರಿಯುತವಾಗಿ, ವ್ಯವಸ್ಥಿತವಾಗಿ ಗ್ಯಾರಂಟಿಗಳಿಗೆ ಏನು ಅನುದಾನ ಕೊಡಬೇಕು ಅದನ್ನು ಕೊಡುವ ವ್ಯವಸ್ಥೆ ಮಾಡಿದ್ದಾರೆ. ಯಾವ ಯಾವ ಇಲಾಖೆಗೆ ಏನೇನು ಆದ್ಯತೆ ಕೊಡಬೇಕೆಂಬುದನ್ನು ಮಾಡಿದ್ದಾರೆ. ಆದರೆ ನಾನು ಹೇಳುವಂತಹದ್ದು ಈಗ ಇದಕ್ಕೆ ಕಾರಣವೇನು? ಸುಮಾರು 1,700ಕ್ಕಿಂತ ಹೆಚ್ಚು ಜನ ಪಿಂಚಣಿದಾರರಿದ್ದಾರೆ. 1949ನೇ ಇಸವಿಯಲ್ಲಿ ಪ್ರಾರಂಭವಾದಂತಹ ಕರ್ನಾಟಕ ವಿಶ್ವವಿದ್ಯಾನಿಲಯ ಇವತ್ತು ಈ ಪರಿಸ್ಥಿತಿಗೆ ಬರುವುದಕ್ಕೆ ಯಾರು ಕಾರಣಕರ್ತರು? ಒಂದು ವಿಶ್ವವಿದ್ಯಾನಿಲಯವನ್ನು ಬೇರ್ಪಡಿಸುವಂತಹ ಸಂದರ್ಭದಲ್ಲಿ assets and liabilities ಬಗ್ಗೆ ಮಾತನಾಡಿದರು. ನಮ್ಮ ನಮೋಶಿಯವರು assets ಬಗ್ಗೆ ಹೇಳುತ್ತೇನೆ liabilities ಬಗ್ಗೆ ಗೊತ್ತಿಲ್ಲ ಎಂದರು. ಏತಕ್ಕೆ ಅವತ್ತು liabilities ಭಾಗ ಆಗಲಿಲ್ಲ? ಏತಕ್ಕೆ ನಿವೃತ್ತಿ ಹೊಂದಿರುವಂತಹ ಬೋಧಕರು, ಬೋಧಕೇತರ ಸಿಬ್ಬಂದಿಗಳು ಇದೇ Postgraduate Centers ನಲ್ಲಿ ಬೋಧನೆ ಮಾಡಿರಲಿಲ್ಲವೇ? ಆ ಹೊಣೆಗಾರಿಕೆಯನ್ನು, ಜವಾಬ್ದಾರಿಯನ್ನು ಏತಕ್ಕೆ ಆ ಹೊಸ ವಿಶ್ವವಿದ್ಯಾನಿಲಯಗಳಿಗೆ ಹಾಕಲಿಲ್ಲ? ಏತಕ್ಕೆ ಅವರೇ ಹೊತ್ತುಕೊಳ್ಳಬೇಕು? ನಿನ್ನೆ ದಿವಸ ಈ ಮನೆಯಲ್ಲಿ ಮೈಸೂರಿನ ರಾಜ ಮನೆತನದ ಬಗ್ಗೆ ಬಹಳ ಚರ್ಚೆಯಾಯಿತು. ಕೃಷ್ಣರಾಜ ಒಡೆಯರ್‌ರವರ ಬಗ್ಗೆ ಚರ್ಚೆಯಾಯಿತು. ಇಡೀ ಕರ್ನಾಟಕದಲ್ಲಿ ಪ್ರಪ್ರಥಮವಾಗಿ 1916ನೇ ಇಸವಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭವಾಯಿತು. ಇವತ್ತು ಮೈಸೂರು ವಿಶ್ವವಿದ್ಯಾನಿಲಯದ ಪರಿಸ್ಥಿತಿ ಏನು? ನಿನ್ನೆ ದಿವಸ ಎಲ್ಲರೂ ರಾಜ ಮನೆತನದ ಗೌರವ, ಅವರ ಕೊಡುಗೆ ಮತ್ತೊಂದರ ಬಗ್ಗೆ ಬಹಳ ಮಾತನಾಡಿದರು. ಇವತ್ತು ಆ ವಿಶ್ವವಿದ್ಯಾನಿಲಯ ಏತಕ್ಕೆ ಈ ರೀತಿಯ ಪರಿಸ್ಥಿತಿಗೆ ಬಂತು? ಇದಕ್ಕೆ ಯಾರು ಕಾರಣಕರ್ತರಾದರು? ಇವತ್ತು ಕೇವಲ 115-120 ಕಾಲೇಜುಗಳಿಗೆ ಬಂದಿದೆ. ಮಾನಸ ಗಂಗೋತ್ರಿ ಎಂದು ಹೆಸರಿರುವಂತಹ ಆ ವಿಶ್ವವಿದ್ಯಾನಿಲಯದಲ್ಲಿ ಶ್ರೀ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಾಟೀಲ ಪುಟ್ಟಪ್ಪನವರು, ಶ್ರೀ ಕುವೆಂಪುರವರು ನಾವೆಲ್ಲರೂ ಹುಟ್ಟುವುದಕ್ಕಿಂತ ಮುಂಚೆ ಕುಲಪತಿಗಳಾಗಿ ಕೆಲಸ ಮಾಡಿರುವ ವಿಶ್ವವಿದ್ಯಾನಿಲಯವದು. ಆ ವಿಶ್ವವಿದ್ಯಾನಿಲಯದ ಪರಿಸ್ಥಿತಿ ಏನಾಗಿದೆ ಎಂದು ದಯವಿಟ್ಟು ಯೋಚನೆ ಮಾಡಿ. ಇವತ್ತು ನಾವು ಎಲ್ಲಿಗೆ ತಂದು ನಿಲ್ಲಿಸಿದ್ದೇವೆ? 800 ಎಕರೆ ಇದೆ. ಅಲ್ಲಿರುವಂತಹ ರಸ್ತೆಗಳು, ಪುರಾತತ್ವ ಇಲಾಖೆಯಲ್ಲಿ ಗುರುತಿಸಿರುವಂತಹ ಕಟ್ಟಡಗಳನ್ನು ರಾಜ ಮನೆತನದವರು ದಾನ ಮಾಡಿದ್ದಾರೆ. ನಾನು ಮೊನ್ನೆ ಹೋಗಿದ್ದೆ. ಅಲ್ಲಿ ಮ್ಯೂಸಿಯಂ ಇದೆ. Sports facilities ಇದೆ, ನಿಮಗೆ ಏನು ಬೇಕೋ ಅದೆಲ್ಲಾ ಇದೆ. ಆದರೆ ಇವತ್ತು ಅದನ್ನು ನಿರ್ವಹಣೆ ಮಾಡುವುದಕ್ಕೆ ಎಷ್ಟು ಕಷ್ಟವಿದೆ ಎಂಬುದನ್ನು ನೀವು ಯೋಚನೆ ಮಾಡಬೇಕು. 1980ನೇ ಇಸವಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಬೇರ್ಪಟ್ಟಿರುವುದು ಗೊತ್ತಿದೆ. ನಾನು ಸಹ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದೇನೆ. ಮಾನ್ಯ ಐವನ್ ಡಿ'ಸೋಜಾರವರು ಹೊರಗಡೆ ಹೋಗಿದ್ದಾರೆ. ಮಂಗಳೂರು ವಿಶ್ವವಿದ್ಯಾನಿಲಯದ ಪರಿಸ್ಥಿತಿ ಏನಾಗಿದೆ? ನಾಲ್ಕು Constituent ಕಾಲೇಜುಗಳು ನಿಮ್ಮ ಸರ್ಕಾರದಲ್ಲಿದ್ದಂತಹ ಮಂತ್ರಿಗಳು ಹಣಕಾಸು ಇಲಾಖೆಯ ಅನುಮತಿ ಪಡೆಯದೇ Constituent College ಪ್ರಾರಂಭ ಮಾಡಿಸಿದರು. ಇವತ್ತು ಅವರು ಪತ್ರ ಬರೆದು guest faculty ಗೆ ಹಾಗೂ ಸಿಬ್ಬಂದಿಗಳಿಗೆ ನಮ್ಮಿಂದ ಸಂಬಳ ಕೊಡುವುದಕ್ಕಾಗುವುದಿಲ್ಲ ಇದನ್ನು ಸರ್ಕಾರ ತೆಗೆದುಕೊಳ್ಳಲಿ ಎಂದು ಹೇಳುತ್ತಾರೆ. ಹಣಕಾಸು ಇಲಾಖೆಯವರು ಯಾರ ಅನುಮತಿ ತೆಗೆದುಕೊಂಡು ನೀವು ಪ್ರಾರಂಭ ಮಾಡಿದಿರಿ ಎಂದು ಹೇಳುತ್ತಾರೆ. ಇವತ್ತು ಅವರು ಪಿಂಚಣಿ ಬೇಕೆಂದು 70-80 ಕೋಟಿ ರೂಪಾಯಿಗಳಿಗೆ ಬೇಡಿಕೆ ಇಟ್ಟಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸುಮಾರು 900 ಕ್ಕಿಂತ ಹೆಚ್ಚು ಕಾಲೇಜುಗಳಿದ್ದವು. ಅದು ತುಮಕೂರು ವಿಶ್ವವಿದ್ಯಾನಿಲಯ ಆಯಿತು. ನಂತರ ಬೆಂಗಳೂರು ಉತ್ತರ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಆಯಿತು. ನಾನು ಇವನ್ನೆಲ್ಲಾ ಹೇಳುತ್ತಿರುವುದಕ್ಕೆ ಇನ್ನೊಂದು ಉದಾಹರಣೆ ಕೊಡುತ್ತೇನೆ. ನಮ್ಮದೇ ಭಾಗದಲ್ಲಿರುವಂತಹ ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯಕ್ಕೆ 88 ಕೋಟಿ ರೂಪಾಯಿಗಳ ಅವರ ಸ್ವಂತ ಅನುದಾನದಲ್ಲಿ ಅವರು ಕಟ್ಟಡ ಕಟ್ಟುತ್ತಿದ್ದಾರೆ. ಈಗ ಮತ್ತೆ 110 ಕೋಟಿ ರೂಪಾಯಿಗಳಿಗೆ administrative block ಮತ್ತು ಹಾಸ್ಟೆಲ್ ಕಟ್ಟುವುದಕ್ಕೆ ಯೋಜನೆ ತಯಾರು ಮಾಡಿದ್ದಾರೆ. ಇದು ಏತಕ್ಕೆ ಆಯಿತು? ಅಲ್ಲಿ ಸುಮಾರು 280 ಸಂಯೋಜಿತ ಕಾಲೇಜುಗಳಿವೆ. ಆ ಕಾರಣದಿಂದ ಆ ವಿಶ್ವವಿದ್ಯಾನಿಲಯ ಇವತ್ತು ಸ್ವಂತ ಸಂಪನ್ಮೂಲದಲ್ಲಿ ತಲೆ ಎತ್ತುತ್ತಿದೆ. ರಾಜ್ಯ ಸರ್ಕಾರ ಸಂಬಳಕ್ಕಾಗಿ ಇವತ್ತು 950 ಕೋಟಿ ರೂಪಾಯಿಗಳನ್ನು ಕೊಡುತ್ತಿದೆ. ಶೇ.50ರಷ್ಟು ಪಿಂಚಣಿಯನ್ನು ಸರ್ಕಾರ ಕೊಡುತ್ತಿದೆ. ಸರ್ಕಾರ ಇಷ್ಟೆಲ್ಲಾ ಮಾಡುತ್ತಿದೆ. ಒಂದು ಕಡೆ ಕನ್ನಡ ವಿಶ್ವವಿದ್ಯಾನಿಲಯ, ಮತ್ತೊಂದು ಕಡೆ ಜಾನಪದ ವಿಶ್ವವಿದ್ಯಾನಿಲಯ, ಸಂಸ್ಕೃತ, ಸಂಗೀತ ವಿಶ್ವವಿದ್ಯಾನಿಲಯ ಇದರ ಪರಿಸ್ಥಿತಿಗಳೇನು? ಅವುಗಳಿಗೆ ಸಂಯೋಜಿತ ಕಾಲೇಜುಗಳಿಲ್ಲ, ಆದಾಯ ಇಲ್ಲ. ಆದರೆ ಇಲ್ಲಿ ಆದಾಯ ಬರುವಂತಹ ಕಾಲೇಜುಗಳಿಗೆ ಕೂಡ ಎಷ್ಟು ಬರುತ್ತದೆ? ತಮಗೇನಾದರೂ fee structure ಬಗ್ಗೆ ಬಿ.ಎ. ಕೋರ್ಸ್‌ಗೆ ವಾರ್ಷಿಕ ಶುಲ್ಕ ಎಷ್ಟಿರಬಹುದು ಎಂದು ಊಹೆ ಇದೆಯೇ? ಇವತ್ತು ಹೊಸ emerging subjects ಎಂದು ತೆಗೆದುಕೊಂಡು ಕೆಲವು ಕೋರ್ಸುಗಳಿಗೆ ರೂ. 20,000, 30,000/- charge ಮಾಡುತ್ತಿದ್ದಾರೆ. ಆದರೆ ವಾರ್ಷಿಕ ಶುಲ್ಕ ಇರುವುದು ರೂ. 1500, ರೂ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3,000/-, ರೂ. 4,000/- ಮಾತ್ರ. ಈ ಅನುದಾನದಲ್ಲಿ ಯಾವ ರೀತಿ ನಿರ್ವಹಣೆ ಮಾಡುವುದಕ್ಕೆ ಸಾಧ್ಯವಿದೆ ಎಂದು ಯೋಚನೆ ಮಾಡಬೇಕು. ಇವತ್ತು ಹೊಸ ಹೊಸ ಕೋರ್ಸ್ ಮಾಡಿದರು ಮತ್ತೊಂದು ಮಾಡಿದರು ಎಂದು ಇರುವಂತಹ ವಿ.ಸಿ.ಗಳು ಪಟ್ಟಿ ಮಾಡಿಕೊಟ್ಟಿದ್ದಾರೆ, ಪಾಪ ತಾವೆಲ್ಲರೂ ಅದನ್ನು ಇಲ್ಲಿ ಬಂದು ಓದುತ್ತಿದ್ದೀರಿ. ಅಷ್ಟು ಕೋಟಿ ಆದಾಯವಿದೆ, ಅಷ್ಟು ಕೋಟಿ ಖಾತೆಯಲ್ಲಿದೆ ಆದರೆ ಏನು ಬರುವುದಕ್ಕೆ ಸಾಧ್ಯವಿದೆ? ನಾನು ತಮಗೆ ಹೇಳುವುದೇನೆಂದರೆ, ದಯವಿಟ್ಟು ಇವೆಲ್ಲಾ ವಿಚಾರಗಳನ್ನೂ ನಾವು ಸಮಗ್ರವಾಗಿ ಉಪ ಸಮಿತಿ ಮುಂದೆ ಇಟ್ಟಿದ್ದೇವೆ. ಇವತ್ತು ನಮ್ಮ ಮುಂದಿರುವಂತಹ ಆಯ್ಕೆಗಳಲ್ಲಿ ನೇಮಕಾತಿ ಮಾಡುವಂತಹದ್ದು ಬಹಳ ಮುಖ್ಯವಾದ ವಿಚಾರ. ವಿಶ್ವವಿದ್ಯಾನಿಲಯಗಳಿಗೆ ಆರ್ಥಿಕವಾಗಿ ಯಾವ ರೀತಿ ಸಹಾಯ ಮಾಡಬಹುದು.

(ಮುಂದು)

(237) 11.03.2025 (9.10) ಹೆಚ್‌ವಿ.ವಿಕೆ (ಸಭಾಪತಿಯವರ ಉಪಸ್ಥಿತಿ)

ಡಾ॥ಎಂ.ಸಿ.ಸುಧಾಕರ(ಮುಂದು):-

ಸನ್ಮಾನ್ಯ ಸಭಾಪತಿಯವರೇ, ಆರ್ಥಿಕವಾಗಿ ವಿಶ್ವವಿದ್ಯಾಲಯಗಳಿಗೆ ಯಾವ ರೀತಿಯಲ್ಲಿ ಸಹಾಯ ಮಾಡಬಹುದು; ವಿಶ್ವವಿದ್ಯಾಲಯಗಳಲ್ಲಿ ಸುಧಾರಣೆಗಳನ್ನು ತರುವುದಕ್ಕೆ ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು ಎನ್ನುವ ವಿಚಾರಗಳ ಬಗ್ಗೆ ಚರ್ಚೆಯಾಗಿದೆ. ಹಿಂದೆ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಿದಂತಹ ಸಂದರ್ಭದಲ್ಲಿ ಅವುಗಳಿಗೆ ಸ್ವಾಯತ್ತತೆಯನ್ನು ಕೊಡಬೇಕೆಂದು ಹೇಳಿದ್ದರು, ಯಾವ ರೀತಿಯಲ್ಲಿ ಸ್ವಾಯತ್ತತೆಯನ್ನು ನೀಡಲಾಗಿದೆ? ಆಡಳಿತಾತ್ಮಕ ಸ್ವಾಯತ್ತತೆ ಮತ್ತು ಆರ್ಥಿಕ ಸ್ವಾಯುತ್ತತೆಯನ್ನು ಕೊಟ್ಟ ನಂತರ ಹಿಂದಿನಿಂದ ಆಡಳಿತ ನಡೆಸಿರುವಂತಹ ಕುಲಪತಿಗಳ ವೈಫಲ್ಯದಿಂದಾಗಿ ವಿಶ್ವವಿದ್ಯಾಲಯಗಳಿಗೆ ಇಂತಹ ಪರಿಸ್ಥಿತಿ ಬಂದಿದೆ. ನಾನು ಯಾರೆಂದು ಹೇಳುವುದಕ್ಕೆ ಹೋಗುವುದಿಲ್ಲ. ಜವಾಬ್ದಾರಿಯುತ ಸರ್ಕಾರ ಇದನ್ನು ಅಧ್ಯಯನ ಮಾಡಬೇಕಾಗುತ್ತದೆ. ನಮ್ಮ ಪ್ರತಿಷ್ಠೆಯನ್ನು ಪಕ್ಕಕ್ಕಿಟ್ಟು ಈ ನಾಡಿನಲ್ಲಿ ಉನ್ನತ ಶಿಕ್ಷಣವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು; ಈ ಬಗ್ಗೆ ಕಠಿಣವಾಗಿರುವ ಕ್ರಮಗಳನ್ನು ತೆಗೆದುಕೊಂಡಿದ್ದರೂ ಸಹ ಅವರ ಭವಿಷ್ಯತ್ತಿಗೆ ತೊಂದರೆಯಾಗದ ರೀತಿಯಲ್ಲಿ ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು ಎನ್ನುವುದು ಈಗಿರುವಂತಹ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕೆಲವರು, ವಿಶ್ವವಿದ್ಯಾಲಯಗಳನ್ನು ಮುಚ್ಚುತ್ತಾರೆ ಎನ್ನುವ ವಿಷಯವನ್ನು ಹೋರಾಟಗಾರರಿಗೆ ತಲೆ ತುಂಬಿದ್ದಾರೆ. ಯಾವ ವಿಶ್ವವಿದ್ಯಾಲಯವನ್ನು ಮುಚ್ಚುತ್ತಿರುವುದು? ಅವರ ಸರ್ಕಾರ ಅಧಿಕಾರದಲ್ಲಿದ್ದಾಗ, ಹೇಗೆ ವಿಶ್ವವಿದ್ಯಾಲಯಗಳನ್ನು ತೆರೆಯಲಾಗಿದೆಯೆಂದರೆ, ಕೇವಲ ಒಂದು ನಾಮಫಲಕವನ್ನು ಹಾಕಿ ಒಬ್ಬ ಕುಲಪತಿ ಮತ್ತು ಒಬ್ಬ ರಿಜಿಸ್ಟ್ರಾರ್ ಅವರನ್ನು ನೇಮಕ ಮಾಡಿರುವುದನ್ನು ಬಿಟ್ಟರೇ, ಬೇರೆ ಏನನ್ನು ಮಾಡಿಲ್ಲ. ಮಾನ್ಯ ಪುಟ್ಟಣ್ಣನವರು ಬಹಳ ಅರ್ಥಪೂರ್ಣವಾಗಿ ಹೇಳಿದರು. ಕೈ ಕಟ್ಟಿ ಹಾಕಿ multidisciplinary, digital learning. Multidisciplinary ಪದಗಳ ಅರ್ಥ ಗೊತ್ತಿದೆಯೇ? Digital learningಗೆ ಬಂಡವಾಳ ಹಾಕುವುದು ಬೇಡವೇ? 'Earn While You Learn' ಏನಿದು ಪದ? ಸುಮ್ಮನೆ ಇದೆಲ್ಲವನ್ನೂ ಬರೆದುಕೊಂಡು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರು ಖರೀದಿ ಮಾಡುವಂತಿಲ್ಲ; ಸರ್ಕಾರದಿಂದ ಯಾವುದೇ ರೀತಿಯ ಅನುದಾನವನ್ನು ಪಡೆಯುವಂತಿಲ್ಲ ಎನ್ನುವಂತಹ ಷರತ್ತುಗಳನ್ನು ವಿಧಿಸಿ ಹೊಸ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿದ್ದಾರೆ. ಮಾನ್ಯ ಎಸ್.ವ್ಹಿ.ಸಂಕನೂರ್‌ರವರು ಹೇಮಂತ್ ಕುಮಾರ್ ವರದಿಯ ಬಗ್ಗೆ ಉಲ್ಲೇಖ ಮಾಡಿದರು. ಆ ವರದಿಯನ್ನು ನಾನು ಸದನದಲ್ಲಿ ಓದಿ ಹೇಳಲೇ?

ಶ್ರೀ ಶಿವಾನಂದ ಪಾಟೀಲ್ (ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು):- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಂಕನೂರ್‌ರವರು ಜಾನಪದ ವಿಶ್ವವಿದ್ಯಾಲಯಕ್ಕೆ ಹೋಗಿದ್ದಾರೆಯೇ? ಅಲ್ಲಿ ನಾಮಫಲಕ ಇರುವುದನ್ನು ಅವರು ನೋಡಿದ್ದಾರೆಯೇ?

ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿರುವ ಉತ್ತರವನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾವು ಹಿಂದಿನ ಸರ್ಕಾರದಲ್ಲಿ ಇದ್ದೆವು; ಇದೆಲ್ಲದಕ್ಕೂ ಹಿಂದಿನ ಸರ್ಕಾರವೇ ಕಾರಣ ಎನ್ನುವ ರೀತಿಯಲ್ಲಿ ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ. ನಾವು ಎಷ್ಟು ವರ್ಷಗಳ ಕಾಲ ಅಧಿಕಾರದಲ್ಲಿ ಇದ್ದೆವು?

ಶ್ರೀ ಶಿವಾನಂದ ಪಾಟೀಲ್:- ಸನ್ಮಾನ್ಯ ಸಭಾಪತಿಯವರೇ, ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಎನ್.ರವಿಕುಮಾರ್:- ಸನ್ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾಲಯಗಳ ಈ ಸ್ಥಿತಿಗೆ ಶೇಕಡಾ ೨೦ರಷ್ಟು ಅವರ ಸರ್ಕಾರವೇ ಕಾರಣವಾಗಿದೆ. ಶೇಕಡಾ 10ರಷ್ಟಕ್ಕೆ ನಾವು ಕೂಡ ಕಾರಣರಾಗಿದ್ದೇವೆ. ನಾನು ನುಣುಚಿಕೊಳ್ಳುವುದಕ್ಕೆ ಹೋಗುವುದಿಲ್ಲ. ಈ ಸರ್ಕಾರ ೨ ಗ್ಯಾರಂಟಿಗಳಿಗೆ ಆದ್ಯತೆಯನ್ನು ನೀಡಿದೆ. ಶಿಕ್ಷಣಕ್ಕೆ ಏತಕ್ಕೋಸ್ಕರ ಆದ್ಯತೆಯನ್ನು ನೀಡಲಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ.

(ಗೊಂದಲ)

ಡಾ॥ಎಂ.ಸಿ.ಸುಧಾಕರ:- ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ನಡೆದಂತಹ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಇವರು ನಮ್ಮ ಗ್ಯಾರಂಟಿಗಳನ್ನೇ ಕಾಪಿ ಮಾಡಿದ್ದಾರೆ? **(ಗೊಂದಲ)** ಚುನಾವಣೆಗೂ ಮುಂಚೆ ೪ನೇ ವೇತನ ಆಯೋಗದ ಬಗ್ಗೆ ಅವರು ಏತಕ್ಕೋಸ್ಕರ ಘೋಷಣೆ ಮಾಡಬೇಕಾಗಿತ್ತು? ನಾವು ಅವರನ್ನು ಯಾವ ರೀತಿಯಲ್ಲಿಯೂ ಕಾಪಿ ಮಾಡಿಲ್ಲ..... **(ಗೊಂದಲ)** ದೆಹಲಿಯಲ್ಲಿ ಅವರು ಘೋಷಣೆ ಮಾಡಿರುವ ಗ್ಯಾರಂಟಿಗಳನ್ನು ವಿತ್‌ಡ್ರಾ ಮಾಡಲಿ.

(ಗೊಂದಲ)

ಶ್ರೀ ಎನ್.ರವಿಕುಮಾರ್:- ಸನ್ಮಾನ್ಯ ಸಭಾಪತಿಯವರೇ, ಅದೆಲ್ಲವನ್ನು ಅವರು ಹೇಳುವಂತಹ ಅವಶ್ಯಕತೆ ಇಲ್ಲ..... **(ಗೊಂದಲ)** ವಿಶ್ವವಿದ್ಯಾಲಯಗಳನ್ನು ಸರ್ಕಾರ ಮುಚ್ಚುತ್ತಿದೆಯೇ ಇಲ್ಲವೇ ಎನ್ನುವುದರ ಬಗ್ಗೆ ಅವರು ಉತ್ತರವನ್ನು ಕೊಡಬೇಕಾಗುತ್ತದೆ. ಆಮೇಲೆ ನಾನು ಮಾತನಾಡುತ್ತೇನೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ವ್ಹಿ.ಸಂಕನೂರ:– ಸನ್ಮಾನ್ಯ ಸಭಾಪತಿಯವರೇ, ಎರಡು ವರ್ಷಗಳ ಹಿಂದೆ ತೆರೆದಿರುವಂತಹ ವಿಶ್ವವಿದ್ಯಾಲಯವನ್ನು ಈ ಸರ್ಕಾರ ಬಂದ್ ಮಾಡುವುದಕ್ಕೆ ಹೊರಟಿದೆ**....(ಗೊಂದಲ)** ಅದನ್ನು ವಾಪಸ್ಸು ತೆಗೆದುಕೊಳ್ಳಬೇಕಾಗಿದೆ. ಇದೊಂದು ಬಹಳ ಸೂಕ್ಷ್ಮವಾಗಿರುವ ವಿಚಾರವಾಗಿದೆ. ಇದರ ವಿರುದ್ಧವಾಗಿ public involvement ಇದೆ. ಇವರು ಗ್ಯಾರಂಟಿಗಳನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಯೇ?

ಸಭಾಪತಿಯವರು:– ಯಾವುದೂ ಕಡತಕ್ಕೆ ಹೋಗಬಾರದು.

(ಗೊಂದಲ)

ಡಾ॥ಎಂ.ಸಿ.ಸುಧಾಕರ:– ಸನ್ಮಾನ್ಯ ಸಭಾಪತಿಯವರೇ, ಸಾರ್ವಜನಿಕರು ಭಾಗಿಗಳಾಗಿಲ್ಲ. ನಿಮ್ಮ ಸಂಘಟನೆ ಭಾಗಿಯಾಗಿದೆ. ಅವರು ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಅವರು ಮಾಹಿತಿಯನ್ನು ಮುಚ್ಚಿ ಹಾಕುತ್ತಿದ್ದಾರೆ. **.....(ಗೊಂದಲ).....** ಅವರ ಹಳೆಯ ವಿಚಾರಗಳನ್ನು ನಮ್ಮ ಪಾಲಿಸಿಯಲ್ಲಿ ತರುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ.

(ಗೊಂದಲ)

ಸಭಾಪತಿಯವರು:– ಮಾನ್ಯ ಸಚಿವರೇ, ಉತ್ತರ ಹೇಳಿ.

(ಗೊಂದಲ)

ಡಾ॥ಎಂ.ಸಿ.ಸುಧಾಕರ:– ಸನ್ಮಾನ್ಯ ಸಭಾಪತಿಯವರೇ, ಅವರುಗಳು ಈ ರೀತಿ ಅಡಚಣೆ ಮಾಡುತ್ತಿದ್ದರೇ ನಾನು ಏನು ಹೇಳುವುದಕ್ಕೂ ಆಗುವುದಿಲ್ಲ. ಹೇಮಂತ್‌ಕುಮಾರ್ ವರದಿಯಲ್ಲಿ: *"Every University must be given Seed Money' of the amount not less than Rs. 20 crores in addition to development grants and salary to faculty."* ಯಾಕೆ ಇವರ ಸರ್ಕಾರ ಇದನ್ನು ಕಸದ ಬುಟ್ಟಿಗೆ ಹಾಕಿತು?

ಶ್ರೀ ಎಸ್.ವ್ಹಿ.ಸಂಕನೂರ:– ಸನ್ಮಾನ್ಯ ಸಭಾಪತಿಯವರೇ, ಕೊಡಬೇಕು ಎನ್ನುವಂತಹ ಕಂಡೀಶನ್ ಇದೆ. ಅದು negative report ಅಲ್ಲ. ಇದರಲ್ಲಿ ತಪ್ಪೇನಿದೆ? ತಾವು ಕೊಡಿ.

(ಗೊಂದಲ)

ಡಾ॥ಎಂ.ಸಿ.ಸುಧಾಕರ:– ಸನ್ಮಾನ್ಯ ಸಭಾಪತಿಯವರೇ, ಇವರು ಏತಕ್ಕೋಸ್ಕರ ಕೊಡಲಿಲ್ಲ?

(ಗೊಂದಲ)

ಶ್ರೀ ಶಶಿಲ್ ಜಿ.ನಮೋಶಿ:– ಸನ್ಮಾನ್ಯ ಸಭಾಪತಿಯವರೇ, ಬಹಳ ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು, ಆ ಭಾಗದ ಜನರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ವಿಶ್ವವಿದ್ಯಾಲಯವನ್ನು ತೆರೆಯಲಾಗಿತ್ತು. ಈಗ ಅದನ್ನು ಮುಚ್ಚುವುದೆಂದರೇ, ...

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಶಿವಾನಂದ ಪಾಟೀಲ್:– ಸನ್ಮಾನ್ಯ ಸಭಾಪತಿಯವರೇ, ಕೊಡುವುದನ್ನು ಕೊಡೋಣ; ಆದರೆ, ಮಾನ್ಯ ಸಚಿವರು ನೀಡುವ ಉತ್ತರವನ್ನು ಅವರು ಕೇಳಬೇಕಾಗುತ್ತದೆ.

(ಗೊಂದಲ)

ಡಾ॥ಎಂ.ಸಿ.ಸುಧಾಕರ:– ಸನ್ಮಾನ್ಯ ಸಭಾಪತಿಯವರೇ, 2020ನೇ ಇಸವಿಯಲ್ಲಿ ಎನ್.ಇ.ಪಿ.ಯನ್ನು ತರಲಾಯಿತು. ಆ ಸಂದರ್ಭದಲ್ಲಿ "ಇಡೀ ದೇಶದಲ್ಲಿ ನಾವೇ ಪ್ರಥಮ" ಎಂದು 2021ನೇ ಇಸವಿಯಲ್ಲಿ ಅವರ ಸರ್ಕಾರ ಅದನ್ನು ಜಾರಿಗೊಳಿಸಿತು. ಎನ್.ಇ.ಪಿ.,ಯಲ್ಲಿ establish more universities ಎಂದು ಹೇಳುತ್ತಾರೆ. ನಾನು ವಾಸ್ತವಾಂಶವನ್ನು ಹೇಳುತ್ತಿದ್ದೇನೆ. ಗುಜರಾತ್‌ನಲ್ಲಿ ಸುಮಾರು 33 ಜಿಲ್ಲೆಗಳಿವೆ, ...

(ಗೊಂದಲ)

ಡಾ॥ಎಂ.ಸಿ.ಸುಧಾಕರ:– ಸನ್ಮಾನ್ಯ ಸಭಾಪತಿಯವರೇ, ನಾನು ಮಾಹಿತಿಯನ್ನು ನೀಡಬೇಕಾಗಿದೆ. ಏಕೆಂದರೆ, ಅಲ್ಲಿ ಅವರದೇ ಪಕ್ಷದ ಸರ್ಕಾರ ಅಸ್ತಿತ್ವದಲ್ಲಿದೆ; ಅವರ ಪಾಲಿಸಿಯೇ ಇದೆ. ಎನ್.ಇ.ಪಿ., ಬಗ್ಗೆ ಅವರಿಗೆ ಅಭಿಮಾನವಿದೆ. ಆ ಹಿನ್ನೆಲೆಯಲ್ಲಿ ಸದನಕ್ಕೆ ನಾನು ಮಾಹಿತಿಯನ್ನು ಕೊಡಬೇಕಾಗುತ್ತದೆ. ಈ ರಾಜ್ಯದ ಜನರಿಗೆ ಗೊತ್ತಾಗಬೇಕಾಗುತ್ತದೆ..... (ಗೊಂದಲ)..... ಗುಜರಾತ್ ರಾಜ್ಯದಲ್ಲಿ 23 ಜಿಲ್ಲೆಗಳಲ್ಲಿ ಒಂದೇ ಒಂದು ವಿಶ್ವವಿದ್ಯಾಲಯವಿಲ್ಲ. ಎನ್.ಇ.ಪಿ., ಜಾರಿಗೆ ಬಂದ ಮೇಲೆ ಅಲ್ಲಿ ಎರಡೇ ಎರಡು ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಲಾಗಿದೆ. ಮಧ್ಯಪ್ರದೇಶದಲ್ಲಿ 55 ಜಿಲ್ಲೆಗಳಿವೆ; ಇಡೀ ರಾಜ್ಯದಲ್ಲಿ ಒಟ್ಟು 24 ವಿಶ್ವವಿದ್ಯಾಲಯಗಳಿವೆ. ಅದರಲ್ಲಿ 15 ಉನ್ನತ ಶಿಕ್ಷಣ ಇಲಾಖೆಗೆ ಸೇರಿದೆ. ಸುಮಾರು 40 ಜಿಲ್ಲೆಗಳಲ್ಲಿ ವಿಶ್ವವಿದ್ಯಾಲಯ ಇಲ್ಲ. ಇಲ್ಲಿ ಎನ್.ಇ.ಪಿ., ಜಾರಿಗೆ ಬಂದ ಮೇಲೆ ಯಾವುದೇ ಒಂದು ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿಲ್ಲ. ಮಹಾರಾಷ್ಟ್ರದಲ್ಲಿ 36 ಜಿಲ್ಲೆಗಳಿವೆ, ಒಟ್ಟು 29 ವಿಶ್ವವಿದ್ಯಾಲಯಗಳಿವೆ. ಅವುಗಳಲ್ಲಿ 11 ಮಾತ್ರ ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಿವೆ. ಉಳಿದಂತೆ 25 ಜಿಲ್ಲೆಗಳಲ್ಲಿ ವಿಶ್ವವಿದ್ಯಾಲಯಗಳು ಇಲ್ಲ. ಜಿಲ್ಲೆಗೊಂದು ಮತ್ತೊಂದು ಹೇಳುತ್ತಾರೆ,.....

(ಗೊಂದಲ)

ಸಭಾಪತಿಯವರು:– ಒಂದು ನಿಮಿಷ ಕೇಳಿ....

(ಗೊಂದಲ)

ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):– ಸನ್ಮಾನ್ಯ ಸಭಾಪತಿಯವರೇ, ದೇಶದ ಯಾವ ರಾಜ್ಯದಲ್ಲಿ ಏನೇನು ಆಗುತ್ತಿದೆ ಎನ್ನುವುದರ ಬಗ್ಗೆ ಭಾಷಣ ಮಾಡುತ್ತಿದ್ದಾರೆ.

(ಗೊಂದಲ)

ಸಭಾಪತಿಯವರು:– ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ಕೇಳಿ, ನಿಮ್ಮ ಸದಸ್ಯರುಗಳಿಗೆ ಹೇಳಿ, ಏನು ಬೇಕಾದರೂ ನಿಂತು ಮಾತನಾಡುವುದು ಪದ್ಧತಿಯಲ್ಲ. ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ಅದನ್ನು ಕೇಳಿ ನಂತರ ಸ್ಪಷ್ಟೀಕರಣವನ್ನು ಕೇಳಿ. ಮಧ್ಯೆಮಧ್ಯೆ ಎದ್ದು ನಿಂತು ಮಾತನಾಡಿದರೆ, ಮಾನ್ಯ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡುವುದು ಬಿಟ್ಟು ಯಾವುದೂ ಕಡತಕ್ಕೆ ಹೋಗುವುದಿಲ್ಲ. ನಂತರ ಮಾತನಾಡುವುದಕ್ಕೆ ನಾನು ಅನುಮತಿಯನ್ನು ಕೊಡುತ್ತೇನೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಸನ್ಮಾನ್ಯ ಸಭಾಪತಿಯವರೇ, ಯಾವ ರಾಜ್ಯದಲ್ಲಿ ಏನಿದೆ ಎನ್ನುವುದನ್ನು ನೋಡಿ, ನಾವು ಕಾಪಿ ಮಾಡಬೇಕೆಂದು ಇಲ್ಲ.

ಸಭಾಪತಿಯವರು:– ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ಬೇಕಾದಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅವರು ಮಾಹಿತಿ ಕೊಡುವುದರಲ್ಲಿ ತಪ್ಪೇನಿದೆ?

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಸನ್ಮಾನ್ಯ ಸಭಾಪತಿಯವರೇ, ಅವರು ಹೇಳಲಿ, ನಾವು ಬೇಡವೆಂದು ಹೇಳುವುದಿಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಏನಿದೆ ಎನ್ನುವುದನ್ನು ಇಲ್ಲಿ ಉಲ್ಲೇಖ ಮಾಡುವ ಅವಶ್ಯಕತೆ ಇಲ್ಲ. ನಮ್ಮ ರಾಜ್ಯದಲ್ಲಿ ಈಗಾಗಲೇ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡಿವೆ.

ಶ್ರೀ ಎನ್.ರವಿಕುಮಾರ್:– ಉನ್ನತ ಶಿಕ್ಷಣ ಎನ್ನುವುದು ಅವರಿಗೆ ಆದ್ಯತೆಯ ವಿಚಾರವಾಗಿದೆಯೇ; ಇಲ್ಲವೇ; ಎನ್ನುವುದನ್ನು ಅವರು ಹೇಳಬೇಕಾಗುತ್ತದೆ. ಗ್ಯಾರಂಟಿಗಳೇ ಅವರ ಆದ್ಯತೆಯ ವಿಚಾರವಾಗಿದೆ.

(ಗೊಂದಲ)

ಶ್ರೀ ಪುಟ್ಟಣ್ಣ:– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿಕೆಯನ್ನು ಮಾಡುತ್ತಿದ್ದಾರೆ. ಅವರುಗಳನ್ನು ಕುಳಿತುಕೊಳ್ಳುವುದಕ್ಕೆ ಹೇಳಿ.

(ಗೊಂದಲ)

ಡಾ॥ಎಂ.ಸಿ.ಸುಧಾಕರ:– ಸನ್ಮಾನ್ಯ ಸಭಾಪತಿಯವರೇ, ಆದ್ಯತೆ ಆ ರಾಜ್ಯಗಳಲ್ಲಿ ಇಲ್ಲವೇ?

ಸಭಾಪತಿಯವರು:– ಗ್ಯಾರಂಟಿಗೂ ನಿಮಗೂ ಏನು ಸಂಬಂಧವಿದೆ?

(ಮುಂದು)

(238) 11.03.2025/ 9.20/ ಪಿಕೆ–ಬಿಎನ್ಎಸ್

ಡಾ: ಎಂ.ಸಿ.ಸುಧಾಕರ್:– ಮಾನ್ಯ ಸಭಾಪತಿಗಳೆ, ಉತ್ತರ ಪ್ರದೇಶದಲ್ಲಿ 75 ಜಿಲ್ಲೆಗಳಿದ್ದು, ಒಟ್ಟು 35 ವಿಶ್ವವಿದ್ಯಾಲಯಗಳಿವೆ, ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟಂತೆ 20 ವಿಶ್ವವಿದ್ಯಾಲಯಗಳಿವೆ. 55 ಜಿಲ್ಲೆಗಳಲ್ಲಿ ವಿಶ್ವವಿದ್ಯಾಲಯಗಳಿಲ್ಲ. ಎನ್.ಇ.ಪಿ. ಬಂದನಂತರ ಒಂದು ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿದರು. ರಾಜಸ್ತಾನದಲ್ಲಿ 50 ಜಿಲ್ಲೆಗಳಿವೆ. ಅಲ್ಲಿ 29 ವಿಶ್ವವಿದ್ಯಾಲಯಗಳಿದ್ದು 13 ವಿಶ್ವವಿದ್ಯಾಲಯಗಳು ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿವೆ. 37 ಜಿಲ್ಲೆಗಳಲ್ಲಿ ವಿಶ್ವವಿದ್ಯಾಲಯಗಳು ಇಲ್ಲ. ಉತ್ತರಾಖಂಡ ಇತ್ಯಾದಿ ರಾಜ್ಯಗಳ ವಿಷಯವನ್ನು ಹೇಳುವುದಕ್ಕೆ ಹೋಗುವುದಿಲ್ಲ.

ಮಾನ್ಯ ಸಭಾಪತಿಗಳೆ, ಈಗಿರುವ ವಿಚಾರ ಇಷ್ಟೆ. ಇವತ್ತು ನಮ್ಮ ಸ್ನೇಹಿತರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಯಾವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಿದ್ದಾರೆ ಎನ್ನುವುದು ಮುಖ್ಯವಲ್ಲ, ಇವರ ಉದ್ದೇಶಗಳು ಬೇರೆಯೇ ಇತ್ತು. ಹಿಂದೆ ನಾವು ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಿದ್ದೇವೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವುದೊಂದನ್ನೇ ವಾದ ಮಾಡುವುದು ಬಿಟ್ಟರೆ, ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಅವರಿಗೆ ಚಿಂತನೆ ಇಲ್ಲ. ವಿದ್ಯಾರ್ಥಿಗಳ ಭವಿಷ್ಯಕ್ಕೆ ಉತ್ತಮ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ನಾವು ಇಂಜಿನಿಯರಿಂಗ್‌ಗೆ ಸಂಬಂಧಿಸಿದಂತೆ ಇದಕ್ಕೆ ಬೇರೆಯದೇ ಆದ ವ್ಯವಸ್ಥೆ ಮಾಡುತ್ತಿದ್ದೇವೆ. ಕೌಶಲ್ಯಕ್ಕೆ ಆದ್ಯತೆ ಕೊಡುವಂತಹ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಡಿಮೆ ಶುಲ್ಕದಲ್ಲಿ ಮಕ್ಕಳು ಸೇರುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ಖಾಸಗಿ ಕಾಲೇಜುಗಳಲ್ಲಿ ಏನೇನು ವ್ಯವಸ್ಥೆ ಇರುತ್ತದೆಯೋ ಆ ವ್ಯವಸ್ಥೆಗಿಂತಲೂ ಮಿಗಿಲಾಗಿ ಬೇರೆ ರೀತಿಯಲ್ಲಿ ತರುವಂಥದ್ದನ್ನು ಮಾಡುತ್ತಿದ್ದೇವೆ. ಕಲಿಕೆ ಜೊತೆ ಕೌಶಲ್ಯದ ಜೊತೆ mapping ಮಾಡಿಕೊಂಡು, ಅಂತಹ ಸುಮಾರು 28,000 ಮಕ್ಕಳಿಗೆ 2023-24ನೇ ಸಾಲಿನಲ್ಲಿ ಪ್ರಮಾಣ ಪತ್ರಗಳನ್ನು ಕೊಟ್ಟಿದ್ದೇವೆ. ಈ ವರ್ಷ ಕೌಶಲ್ಯ ಅಭಿವೃದ್ಧಿ ಇಲಾಖೆಯ ಜೊತೆ ಸೇರಿಕೊಂಡು ಸುಮಾರು 58,000 ಮಕ್ಕಳಿಗೆ ನಾವು ಕಲಿಕೆ ಜೊತೆ ಕೌಶಲ್ಯವನ್ನು ಕೊಟ್ಟು exposure ಕೊಟ್ಟಿದ್ದೇವೆ. ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟಿದ್ದೇವೆ. P.E.S., B.M.S., ನಂತಹ ಇನ್ನಿತರ ಖಾಸಗಿ ಕಾಲೇಜುಗಳೇನಿವೆ, ಅಲ್ಲೇ ಎಲ್ಲಾ ಮಕ್ಕಳು ಸೇರಿ ಓದಬೇಕು; ದುಬಾರಿ ಶುಲ್ಕ ಕೊಟ್ಟು ಸೇರಿದರೂ ಪರವಾಗಿಲ್ಲ, ನಾಲ್ಕು ವರ್ಷ ಪೂರೈಸಿದ ತಕ್ಷಣ ಗ್ಯಾರಂಟಿ ಉದ್ಯೋಗ ಸಿಗುತ್ತದೆ ಎನ್ನುವ ಮನಸ್ಥಿತಿ ಇದೆ. ಆದರೆ, ಸರ್ಕಾರಿ ಕಾಲೇಜುಗಳಿಗೆ ಸೇರಿದರೂ ಆ ರೀತಿ ಉದ್ಯೋಗ ಸಿಗುತ್ತದೆ ಎನ್ನುವ ಮನಸ್ಥಿತಿಗೆ ಬರುವಂತಹ ನಿಟ್ಟಿನಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ, ಅದಕ್ಕೆ ಎಲ್ಲವನ್ನು ತಯಾರು ಮಾಡುತ್ತಿದ್ದೇವೆ. ಎಲ್ಲಿ ವೇಕೆನ್ಸಿ ಇರುವ ಸೀಟುಗಳಿವೆಯೋ ಅವು ಭರ್ತಿಯಾಗುವಂತಹ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎನ್.ರವಿಕುಮಾರ್:- ಆದರೆ, 10% ಫೀ ಏಕೆ ಜಾಸ್ತಿ ಮಾಡಿದಿರಿ? ಪ್ರತಿ ವರ್ಷ 10% ಫೀಯನ್ನು ಏಕೆ ಜಾಸ್ತಿ ಮಾಡುತ್ತಿದ್ದೀರಿ?

(ಗೊಂದಲ)

ಡಾ: ಎಂ.ಸಿ.ಸುಧಾಕರ್:- ನಾನು ಮಾನ್ಯ ಸದಸ್ಯರಿಗೆ ಆ ಕುರಿತು ಒಂದು ವಿಷಯ ಹೇಳಬಯಸುತ್ತೇನೆ. ಹಿಂದೆ ನಿಮ್ಮ ಸರ್ಕಾರ ಇದ್ದಾಗ ಜಾಸ್ತಿ ಮಾಡಿದ್ದಿರಿ.

(ಗೊಂದಲ)

ಶ್ರೀ ಎನ್.ರವಿಕುಮಾರ್:- ನಾನು ಏನು ಹೇಳುತ್ತಿದ್ದೇನೆಯೋ ಅದನ್ನು ಆಧಾರಸಹಿತ ಹೇಳಬಯಸುತ್ತೇನೆ.

(ಗೊಂದಲ)

ಡಾ: ಎಂ.ಸಿ.ಸುಧಾಕರ್:- ಮಾನ್ಯ ಸಭಾಪತಿಗಳೆ, ಚುನಾವಣಾ ಪೂರ್ವದಲ್ಲಿ ಪ್ರತಿ ವರ್ಷ 10% ಹೆಚ್ಚು ಮಾಡಬೇಕೆಂದು ಅವರ ಉನ್ನತ ಶಿಕ್ಷಣ ಸಚಿವರು consensual agreement ಮಾಡಿದ್ದಂಥ ಪ್ರತಿಯನ್ನು ಬೇಕಾದರೆ ಕೊಡುತ್ತೇನೆ. ನಮ್ಮ ಸರ್ಕಾರ ಬಂದಮೇಲೆ ಅದನ್ನು 7.50%ಗೆ ಇಳಿಸಿದೆ. ಮತ್ತೆ ನಾವು re-consensual agreement ಮಾಡಿದೆವು. ಹೌದು, ಹೋದ ವರ್ಷ ಆ ದರ 10% ಇತ್ತು. ಏಕೆಂದರೆ, ಖಾಸಗಿ ವಿಶ್ವವಿದ್ಯಾಲಯದವರು ನಮ್ಮ ಹತ್ತಿರ ಬಂದು, 7ನೇ ವೇತನ ಆಯೋಗದನ್ವಯ ಸಂಬಳ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಬೇಕಾಗಿರುವುದರಿಂದ ನಮಗೆ ತೊಂದರೆಯಾಗುತ್ತಿದೆ ಎಂದು ಕೇಳಿಕೊಂಡರು. ಅದಕ್ಕೆ ಮುಂಚಿತವಾಗಿ, ಅವರಿಗೆ 10% ಪ್ರತಿವರ್ಷ ಕೊಡಬೇಕು ಎಂದು ಅವರ ಸರ್ಕಾರ ಇದ್ದಾಗ ಉನ್ನತ ಶಿಕ್ಷಣ ಸಚಿವರು ತೀರ್ಮಾನ ಮಾಡಿದರು. ದಯವಿಟ್ಟು ಮಾಹಿತಿ ಇಲ್ಲದೇ ಮಾತನಾಡಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

ಶ್ರೀ ಪುಟ್ಟಣ್ಣ:– ಉನ್ನತ ಶಿಕ್ಷಣ ವ್ಯವಸ್ಥೆಯನ್ನೆ ಇವರು ಹಾಳು ಮಾಡಿದರು. 10% ಕೊಡಬೇಕೆಂದು ಏಕೆ ಒಡಂಬಡಿಕೆ ಮಾಡಿಕೊಳ್ಳುವುದಕ್ಕೆ ಹೋಗಿದ್ದಿರಿ?

(ಗೊಂದಲ)

ಶ್ರೀಮತಿ ಭಾರತಿ ಶೆಟ್ಟಿ:– ಈಗ ನೀವು ಆ ದರವನ್ನು ಕಡಿಮೆ ಮಾಡಿ.

(ಗೊಂದಲ)

ಶ್ರೀ ಎನ್.ರವಿಕುಮಾರ್:– ವಿದ್ಯಾರ್ಥಿಗಳ ಫೀ ಮೇಲೆಯೇ ವಿಶ್ವವಿದ್ಯಾಲಯವನ್ನು ಏಕೆ ನಡೆಸುವುದಕ್ಕೆ ಹೋಗುತ್ತೀರಿ?

(ಗೊಂದಲ)

ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಗಳೆ, ಇಲ್ಲಿ ಚರ್ಚೆ ಆಗುತ್ತಿಲ್ಲ; ಯುದ್ಧವಾಗುತ್ತಿದೆ.

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):– ಮಾನ್ಯ ಸಭಾಪತಿಗಳೆ, ಇವರು 10% ಜಾಸ್ತಿ ಮಾಡಿದರು.

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಸದರಿ ವಿಷಯದ ಬಗ್ಗೆ ಅಧ್ಯಯನ ಮಾಡಿ ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಮೈಸೂರು ಮಹಾರಾಜರ ಕಾಲದಲ್ಲಿ ಮೈಸೂರಿನಲ್ಲಿ ಸ್ಥಾಪನೆಯಾದ ಮಾನಸ ಗಂಗೋತ್ರಿಯ ವಿಚಾರದಲ್ಲಿ ಮಾಡಿರುವುದು ಸರಿಯೇ? ಅವರಿಗೆ ಕಳಂಕ ಬರದ ಹಾಗೆ ನೋಡಿಕೊಳ್ಳಬೇಕು. ಕುವೆಂಪು ವಿಶ್ವವಿದ್ಯಾಲಯದ ಸ್ಥಿತಿ ಬಹಳ ಚಿಂತಾಜನಕವಾಗಿದೆ.

(ಗೊಂದಲ)

ಸಭಾಪತಿಯವರು:– ಇಷ್ಟು ಹೊತ್ತು ನಾನು ನಿಮ್ಮೆಲ್ಲರಿಗೂ ಮಾತನಾಡಲು ಅವಕಾಶ ಕೊಟ್ಟೆ. ಸರ್ಕಾರದ ಪರವಾಗಿ ಏನು ಉತ್ತರ ಕೊಡಬೇಕೋ ಅದನ್ನು ಮಾನ್ಯ ಸಚಿವರು ಕೊಡುತ್ತಾರೆ, ಉತ್ತರ ಕೊಡಲು ಅವರು ಸ್ವತಂತ್ರರಾಗಿದ್ದಾರೆ. ನಿಮಗೆ ಬೇರೆ ಏನಾದರೂ ಅನುಮಾನ ಬಂದರೆ ಕ್ಲ್ಯಾರಿಫಿಕೇಷನ್ ಕೇಳಲು ಅವಕಾಶ ಮಾಡಿಕೊಡುತ್ತೇನೆ. ಆದರೆ ಈ ರೀತಿ ಮಧ್ಯದಲ್ಲಿ ಎದ್ದು ನಿಂತು ಮಾತನಾಡಿದರೆ ಏನು ಮಾಡಬೇಕು? ನಿಮಗೂ ಒಂದು ಚೂರು ವಿವೇಕ ಇರಬೇಕು ಅಲ್ಲವೇ? ಈ ಪೀಠಕ್ಕೆ ಗೌರವ ಕೊಡಬೇಕು ಅಲ್ಲವೇ? ಇದೇನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಧರ್ಮಶಾಲೆಯೇ? ನೀವು ಹೀಗೆ ನಡೆದುಕೊಂಡರೆ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ. ನಿಮ್ಮಿಷ್ಟದಂತೆ ನೀವು ಮಾತನಾಡುತ್ತಾ ಹೋದರೆ ನಾನೇನು ಮಾಡುವುದಕ್ಕಾಗುತ್ತದೆ? ಮಾನ್ಯ ಸಚಿವರು ಮಾತನಾಡಿದ ಮೇಲೆ ಕ್ಲ್ಯಾರಿಫಿಕೇಷನ್ ಕೇಳಿ. ಅವರು ಮಾತನಾಡುವಾಗ ನಡುವೆ ಎದ್ದು ನಿಂತು ಏಕೆ ಮಾತನಾಡುತ್ತೀರಿ? ಒಂದು ಪದ್ಧತಿ ಬೇಡವೇ? ನಾನು ಇಲ್ಲಿ ಕುಳಿತುಕೊಂಡು ದನ ಕಾಯುತ್ತಿದ್ದೇನೆಯೇ? ಮಾನ್ಯ ಸಚಿವರೇ ಬೇರೆ ವಿವರ ಹೇಳಬೇಡಿ. ವಿಶ್ವವಿದ್ಯಾಲಯಗಳನ್ನು ಮುಚ್ಚುತ್ತೀರೋ ಇಲ್ಲವೋ ಅಷ್ಟಕ್ಕೆ ಸೀಮಿತವಾಗಿ ಹೇಳಿ.

ಡಾ: ಎಂ.ಸಿ.ಸುಧಾಕರ್:- ಮಾನ್ಯ ಸಭಾಪತಿಗಳೆ, ಅವರು ಕೇಳಿದ್ದಕ್ಕೆಲ್ಲಾ ಉತ್ತರ ಕೊಡಬೇಕಾಗುತ್ತದೆ. ಬಾಗಲಕೋಟೆ ವಿಶ್ವವಿದ್ಯಾಲಯಕ್ಕೆ ರೂ. 4 ಕೋಟಿ ಬೇಕೆಂದು ಕೇಳುತ್ತಿದ್ದಾರೆ. ಕೊಡಗು ವಿಶ್ವವಿದ್ಯಾಲಯ, construction of Reserach Block at University campus ಗಾಗಿ ಇದಕ್ಕೆ ರೂ. 8.50 ಕೋಟಿ ಕೇಳಿದ್ದಾರೆ. ಹಾಸನ ವಿಶ್ವವಿದ್ಯಾಲಯಕ್ಕೆ ರೂ. 15 ಕೋಟಿ ಕೇಳಿದ್ದಾರೆ. ಚಾಮರಾಜನಗರ ವಿಶ್ವವಿದ್ಯಾಲಯಕ್ಕೆ ರೂ.3.50 ಕೋಟಿ ಕೇಳಿದ್ದಾರೆ. ಕೊಪ್ಪಳ ವಿಶ್ವವಿದ್ಯಾಲಯಕ್ಕೆ ರೂ. 10 ಕೋಟಿ ಕೇಳಿದ್ದಾರೆ. ಬೀದರ್ ವಿಶ್ವವಿದ್ಯಾಲಯಕ್ಕೆ ರೂ. 11 ಕೋಟಿ ಕೇಳಿದ್ದಾರೆ. ಇವು ಇರುವಂತಹ ಬೇಡಿಕೆಗಳಾಗಿವೆ. ನಮ್ಮ ರಾಜ್ಯದಲ್ಲಿ ಕೇವಲ 15 ವಿಶ್ವವಿದ್ಯಾಲಯಗಳು Section 12(B) ಮಾನ್ಯತೆ ಪಡೆದುಕೊಂಡಿವೆ. ಕೇಂದ್ರ ಸರ್ಕಾರ 2014ರ ನಂತರ ಸಂಶೋಧನೆಗೆ ಯಾವುದೇ ಹಣ ಕೊಟ್ಟಿಲ್ಲ. ಸಂಶೋಧನೆಗೆ ಯುಜಿಸಿ ಮುಖಾಂತರ Research Scholar ಗೆ ರಿಸರ್ಚ್ ಮಾಡಲು ಅನುದಾನ ಕೊಟ್ಟಿಲ್ಲ. ಸ್ವಂತ ಸಂಪನ್ಮೂಲಗಳ ಮೇಲೆ ಸಂಶೋಧನೆ ಮಾಡಬೇಕು ಎಂದು ಹೇಳುತ್ತಾರೆ. ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ. ಕೇವಲ RUSA (Rashtriya Uchchatar Shiksha Abhiyan) 1, 2 ಈಗ PM-USHA (Pradhan Mantri Uchchatar Shiksha Abhiyan) ಏನಿದೆ ಅದರಲ್ಲಿ 40% ಭಾಗ ರಾಜ್ಯ ಸರ್ಕಾರದ್ದಾಗಿರುತ್ತದೆ. ಇವತ್ತು ಯಾವುದೇ ರೀತಿ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ಸಹಕಾರ ಕೊಡುತ್ತಿಲ್ಲ. ಇದನ್ನೂ ಸಹ ತಮ್ಮ ಗಮನಕ್ಕೆ ತರಬಯಸುತ್ತೇನೆ. ಕೇವಲ 12 (ಬಿ) ಮಾನ್ಯತೆ ಪಡೆದಿರುವ ಕೆಲವು ವಿಶ್ವವಿದ್ಯಾಲಯಗಳಿಗೆ MERU (Multidisciplinary Education and Research University) ಎನ್ನುವಂಥದ್ದಕ್ಕೆ ಮಾತ್ರ, ಅವರು ಇಟ್ಟಿರುವ criteria ಗಳನ್ನು fulfill ಮಾಡಿದರೆ ಮಾತ್ರ ಕೊಡಲಾಗುತ್ತದೆ. ಇವತ್ತು ಜನರಲ್ಲಿ ಒಂದು ರೀತಿಯಾದ ಭಯದ ವಾತಾವರಣ ಸೃಷ್ಟಿ ಮಾಡಿದ್ದಾರೆ. ನಾವು ಯಾವುದೇ ಪಿ.ಜಿ. ಕೋರ್ಸ್ ರದ್ದು ಮಾಡುವುದಿಲ್ಲ, ಯಾವುದೇ Under Graduate course ರದ್ದು ಮಾಡುವುದಿಲ್ಲ. ಎಲ್ಲಾ ಕಾಲೇಜುಗಳು ಹಾಗೆಯೇ ಇರುತ್ತವೆ. ನಾನು Under Graduation ಮಾಡಿದಾಗ ಯಾವುದೇ ವಿಶ್ವವಿದ್ಯಾಲಯಕ್ಕೆ ಹೋಗಲಿಲ್ಲ. ಕಾಲೇಜಿನಲ್ಲಿಯೇ ನಾನು ಫೀ ಕಟ್ಟಿದೆ, ಕಾಲೇಜಿನಲ್ಲಿಯೇ ನನಗೆ ಅಂಕಪಟ್ಟಿಯನ್ನು ಕೊಟ್ಟರು. ಪರೀಕ್ಷೆಯನ್ನೂ ಬರೆದೆ. ವಿಶ್ವವಿದ್ಯಾಲಯಕ್ಕೆ ಹೋಗುವ ಅವಶ್ಯತೆ ನನಗೆ ಬರಲಿಲ್ಲ. ವಿಶ್ವವಿದ್ಯಾಲಯ ಎಲ್ಲಾದರೂ ಇರಲಿ, ನಾನು ಓದುವಂತಹ ಕಾಲೇಜಿನಲ್ಲಿ ನನಗೆ ಎಲ್ಲಾ ಸೌಲಭ್ಯಗಳು ಇದೆ, UUCMS (Unified University & College Management System) portal ಇದೆ, ಅವರದೇ ಸರ್ಕಾರ ಮಾಡಿರುವಂತಹ UUCMS portal ನಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

online ಮುಖಾಂತರ payment ಮಾಡಬಹುದು. ಆ ನಿಟ್ಟಿನಲ್ಲಿ ಸಣ್ಣಪುಟ್ಟ ಸಮಸ್ಯೆ ಇದೆ, ಅವುಗಳನ್ನು ನಿವಾರಣೆ ಮಾಡುತ್ತಿದ್ದೇವೆ. ಯಾರೇ ಒಬ್ಬ ಮಹಿಳಾ ವಿದ್ಯಾರ್ಥಿ ಯಾವುದೇ ಕಾಲೇಜು ಸೇರುವುದಕ್ಕೆ ವಿಶ್ವವಿದ್ಯಾಲಯದ Board ಇದ್ದರೆ ಮಾತ್ರ ಸೇರಬೇಕಾಗುತ್ತದೆ ಎಂದು ಹೇಳುವಂತಹ ಪರಿಸ್ಥಿತಿ ಇವತ್ತಿಲ್ಲ.

(ಮುಂದು)

(239) 11-3-2025 9.30 ಡಿಎಸ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

ಡಾ॥ ಎಂ.ಸಿ.ಸುಧಾಕರ(ಮುಂದು):-

ಇವತ್ತು ಗುಣಮಟ್ಟದ ಶಿಕ್ಷಣ ಕೊಡಬೇಕು ಎಂದು ಇರುವಂಥದ್ದು. ಗುಣಮಟ್ಟದ ಶಿಕ್ಷಣಕ್ಕೆ ನಾವು ಪ್ರಾಮುಖ್ಯತೆಯನ್ನು ಕೊಡಬೇಕಾಗುತ್ತದೆ. ನಾನು AIDP programme ಬಗ್ಗೆ ಹೇಳಿದ್ದೇನೆ. ಎಷ್ಟು ಬೇಗ ನಮಗೆ ಸೀಟ್ ಭರ್ತಿ ಆಯಿತು ಎಂದರೆ ಮಕ್ಕಳು ಅಷ್ಟೊಂದು ಹುಷಾರ್ ಇದ್ದಾರೆ. ಅಷ್ಟು ಬೇಗ ಅವರಿಗೆ ತಿಳುವಳಿಕೆ ಇದೆ. ಇದರ ಬಗ್ಗೆ ಏನಿದೆ ಎಂದು ತಿಳಿದುಕೊಂಡು ಇವತ್ತು 1,400 ಸೀಟ್‌ಗಳು ಭರ್ತಿಯಾಗಿವೆ. ಕಳೆದ ವರ್ಷ 45 ಕಾಲೇಜುಗಳಲ್ಲಿ ಪ್ರಾರಂಭ ಮಾಡಿದ್ದೇವೆ. ಈ ವರ್ಷ ಮತ್ತೆ ಹೆಚ್ಚು ಮಾಡುತ್ತಿದ್ದೇವೆ. ಈ ರೀತಿಯಾಗಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚು ಮಾಡುವುದರ ಕಡೆ ಗಮನ ಕೊಡಬೇಕು. ಆದ್ದರಿಂದ ಈ ಎಲ್ಲಾ ವಿಚಾರಗಳನ್ನು ಸಮಗ್ರವಾಗಿ ನಾವು ಉಪ ಸಮಿತಿ ಮುಂದೆ ಚರ್ಚೆ ಮಾಡಿದ್ದೇವೆ. ಆ ಸಮಿತಿಯಲ್ಲಿ ಹಲವಾರು ರೀತಿಯ ಸಲಹೆಗಳು ಬಂತು. ಹಣಕಾಸು ಇಲಾಖೆಯವರ ಸಲಹೆ ಬಂತು. ನಾವು ಹಣಕಾಸಿನ ಇಲಾಖೆಯವರಿಗೆ ನಿರ್ದಿಷ್ಟವಾಗಿ ಈ ರೀತಿ ತಮ್ಮ ಸಹಕಾರ ಬೇಕಾಗುತ್ತದೆಂದು ಹೇಳಿದ್ದೇವೆ. ನೇಮಕಾತಿ ಬಗ್ಗೆ ಹೇಳುವುದಾದರೆ, ಈಗಾಗಲೇ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ 2000 ಬೋಧಕರನ್ನು ಭರ್ತಿ ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮ ವಿಶ್ವವಿದ್ಯಾಲಯಕ್ಕೂ ಭರ್ತಿ ಮಾಡಿ ಎಂದು ಕೇಳಿದ್ದೇವೆ. 2800 ಹುದ್ದೆಗಳು ಖಾಲಿ ಇವೆ. ಅದನ್ನು ಭರ್ತಿ ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮ ಉಪ ಸಮಿತಿಯ ವರದಿಯನ್ವಯ ಸಂಪುಟ ಸಭೆಯಲ್ಲಿ ಎಲ್ಲಾ ಗೌರವಾನ್ವಿತ ಸದಸ್ಯರ ಅಭಿಪ್ರಾಯಗಳನ್ನು ಪಡೆದುಕೊಂಡು ನಂತರ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಅವತ್ತು ಈ 32 ವಿಶ್ವವಿದ್ಯಾಲಯಗಳನ್ನು ಬಲಪಡಿಸುವುದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕೆಂದು ಸಮಗ್ರವಾಗಿ ಅದರ ಬಗ್ಗೆ ಚಿಂತನೆ ಮಾಡಿ, ಚರ್ಚೆ ಮಾಡಿ ಅವರಿಗೆ ಯಾವ ರೀತಿ ಪ್ಯಾಕೇಜ್ ಕೊಡಬೇಕು, ಏನೇನು ಸುಧಾರಣೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ನಮ್ಮ ಸರ್ಕಾರ ಬಹಳ ಜವಾಬ್ದಾರಿಯುತವಾಗಿ ತೀರ್ಮಾನ ತೆಗೆದುಕೊಳ್ಳುತ್ತದೆ. ಆದರೆ, ಅದಕ್ಕಿಂತ ಮುಂಚಿತವಾಗಿ ಮಾಧ್ಯಮದಲ್ಲಿ 9 ವಿಶ್ವವಿದ್ಯಾಲಯಗಳನ್ನು ಮುಚ್ಚುತ್ತಾರೆ ಎಂದು ಕೊಶ್ಚನ್ ಮಾರ್ಕ್ ಹಾಕಿರುವುದಕ್ಕೆ 9 ವಿಶ್ವವಿದ್ಯಾಲಯಗಳನ್ನು ಮುಚ್ಚುತ್ತಾರೆಂದು ಬೊಬ್ಬೆ ಹೊಡೆದುಕೊಂಡು ಬೀದಿಯೆಲ್ಲಾ ಓಡಾಡುತ್ತಿದ್ದಾರೆ. ನಾನು ಹೇಳುವುದೇನೆಂದರೆ, ಜನರಿಗೆ ವಿಶ್ವವಿದ್ಯಾಲಯಗಳನ್ನು ಮುಚ್ಚುತ್ತಿದ್ದಾರೆಂದು ಹೇಳುತ್ತಿದ್ದಾರೆ. ಅಲ್ಲಿರುವಂತಹ ಪಿ.ಜಿ. ಸೆಂಟರ್ ಅನ್ನು ಮುಚ್ಚುವುದಕ್ಕಾಗುತ್ತದೆಯೇ? ಈಗ ಇರತಕ್ಕಂಥ affiliated ಕಾಲೇಜುಗಳನ್ನು ಮುಚ್ಚುವುದಕ್ಕಾಗುತ್ತದೆಯೇ? ಈ ರೀತಿ ಏಕೆ ತಪ್ಪು ಸಂದೇಶವನ್ನು ಕೊಡುತ್ತಿದ್ದಾರೆ? ಈ ರೀತಿ ತಪ್ಪು ಸಂದೇಶವನ್ನು ಕೊಡಬಾರದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಶ್ರೀ ಎನ್.ರವಿಕುಮಾರ್:– ಮಾನ್ಯ ಸಚಿವರು academic ಆಗಿ ಮಾತನಾಡಲಿ.

(ಗೊಂದಲ)

ಡಾ॥ ಎಂ.ಸಿ.ಸುಧಾಕರ:– ಇದು ಕೇವಲ ರಾಜಕೀಯ ದುರುದ್ದೇಶವಾಗಿದೆ. ಒಂದು ಮುಕ್ಕಾಲು ವರ್ಷ ನಾನು ಉನ್ನತ ಶಿಕ್ಷಣ ಸಚಿವನಾಗಿ ಕೆಲಸ ಮಾಡಿದ್ದೇನೆ.

ಶ್ರೀ ಎನ್.ರವಿಕುಮಾರ್:– ಮಾನ್ಯ ಸಭಾಪತಿಯವರೇ, ಪೀಠ ನನ್ನ ನೆರವಿಗೆ ಬರಬೇಕು.

ಸಭಾಪತಿಯವರು:– ಮಾನ್ಯ ರವಿಕುಮಾರ್‌ರವರೇ, ಒಂದು ನಿಮಿಷ ಕೇಳಿ. ಮಾನ್ಯ ಸಚಿವರು ಉತ್ತರ ಹೇಳಿದ ನಂತರ ನಿಮಗೆ ಕ್ಲಾರಿಫಿಕೇಶನ್ ಕೇಳುವುದಕ್ಕೆ ಖಂಡಿತವಾಗಿಯೂ ಅವಕಾಶ ಕೊಡುತ್ತೇನೆ.ನೀವು ವಿರೋಧ ಪಕ್ಷದ ಮುಖ್ಯ ಸಚೇತಕರಾಗಿದ್ದೀರಿ. ನೀವು ತಿಳಿದುಕೊಳ್ಳಿ. ನೀವು ಕ್ಲಾರಿಫಿಕೇಶನ್ ಕೇಳುವುದಕ್ಕೆ ಎಷ್ಟು ಹೊತ್ತಾದರೂ ಕೇಳಿ ನಾನು ಅವಕಾಶ ಕೊಡುತ್ತೇನೆ.

ಶ್ರೀ ಎನ್.ರವಿಕುಮಾರ್:– ಮಾನ್ಯ ಸಭಾಪತಿಯವರೇ, ನಾನು ಒಂದು ಮನವಿ ಮಾಡುತ್ತೇನೆ.

ಸಭಾಪತಿಯವರು:– ಮಾನ್ಯ ರವಿಕುಮಾರ್‌ರವರೇ, ನಾನು ಬೇಡ ಎಂದು ಹೇಳುತ್ತಿದ್ದೇನೆ.

ಶ್ರೀ ಎನ್.ರವಿಕುಮಾರ್:– ಮಾನ್ಯ ಸಭಾಪತಿಯವರೇ,.....

ಡಾ॥ ಎಂ.ಸಿ.ಸುಧಾಕರ:– ನಾನು ಮಾತನಾಡಿದ ಮೇಲೆ ನೀವು ಮಾತನಾಡಿ.

ಶ್ರೀ ಎನ್.ರವಿಕುಮಾರ್:– ಮಾನ್ಯ ಸುಧಾಕರ್‌ರವರೇ,.....

ಸಭಾಪತಿಯವರು:– ಮಾನ್ಯ ರವಿಕುಮಾರ್‌ರವರೇ, ಮಾನ್ಯ ಸಚಿವರು ಯೀಲ್ಡ್ ಆಗಿಲ್ಲ.

(ಗೊಂದಲ)

ಶ್ರೀ ಎನ್.ರವಿಕುಮಾರ್:– ಮಾನ್ಯ ಸಭಾಪತಿಯವರೇ, ಬೀದಿಯಲ್ಲಿ ಬೊಬ್ಬೆ ಹೊಡೆಯುತ್ತಿದ್ದಾರೆ ಎಂದು ಮಾನ್ಯ ಸಚಿವರು ಹೇಳಿರುವುದು ಗೌರವ ತರುವಂತಹ ಶಬ್ದಗಳಲ್ಲ. Academic debate ಮಾಡಿ.

ಡಾ॥ ಎಂ.ಸಿ.ಸುಧಾಕರ:– ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಹೇಳಿದ್ದಾರೆ ಎಂದು ಹೇಳುತ್ತಿಲ್ಲ. ಹೊರಗಡೆ ಮಾತನಾಡಿರುವಂಥದ್ದನ್ನು ನಾನು ಹೇಳುತ್ತಿದ್ದೇನೆ. ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಎಲ್ಲಾ ವಿಶ್ವವಿದ್ಯಾಲಯಗಳನ್ನು ಮುಚ್ಚುತ್ತಿದ್ದಾರೆ, ನೀವೆಲ್ಲಾ ದೂರದ ಕಾಲೇಜುಗಳಿಗೆ ಹೋಗಬೇಕು ಎಂದು ತಪ್ಪು ಸಂದೇಶ ಕೊಡುತ್ತಿದ್ದಾರೆ. **(ಗೊಂದಲ)** ಅವರ ಲೋಪಗಳನ್ನು, ಅವರು ಮಾಡಿರುವ ಎಡವಟ್ಟುಗಳನ್ನು ಮುಚ್ಚಿಕೊಳ್ಳುವುದಕ್ಕೆ ದಯವಿಟ್ಟು ಈ ರೀತಿ ಮಾಡಬಾರದು. ನನ್ನ ಮುಂದೆ ಇರುವಂಥದ್ದು, ಇವತ್ತು ಉನ್ನತ ಶಿಕ್ಷಣವನ್ನು ಮತ್ತೊಂದು ಹಂತಕ್ಕೆ ತೆಗೆದುಕೊಂಡು ಹೋಗಬೇಕು ಎನ್ನುವ ಕಳಕಳಿಯಿಂದ ಉನ್ನತ ಶಿಕ್ಷಣಕ್ಕೆ ಹೊಸ ರೂಪ ಕೊಡಬೇಕು, ಹೊಸ ಚೈತನ್ಯವನ್ನು ಕೊಡಬೇಕು ಎನ್ನುವ ಆಲೋಚನೆಯನ್ನಿಟ್ಟುಕೊಂಡು ನಾವು ಈ ಕೆಲಸವನ್ನು ಮಾಡುತ್ತಿದ್ದೇವೆ. ಆ ಕಾರಣಕ್ಕಾಗಿ ನಾನು ಹೇಳುತ್ತಿದ್ದೇನೆ, ದಯವಿಟ್ಟು ತಪ್ಪು ಮಾಹಿತಿಯನ್ನು ಕೊಡಬೇಡಿ. ನಾವು ಎಲ್ಲವನ್ನು ಸಮಗ್ರವಾಗಿ ಅಧ್ಯಯನ ಮಾಡುತ್ತೇವೆ. ಅವರಲ್ಲಿ ಯಾವ ರೀತಿ ವಿರೋಧ ವ್ಯಕ್ತಪಡಿಸುತ್ತಿದ್ದಾರೆಯೋ ಅದೇ ರೀತಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮಲ್ಲಿಯೂ ಕೆಲವು ಸದಸ್ಯರು ಅವರದ್ದೇ ಆದಂತಹ ಸ್ಥಳೀಯವಾದ ಭಾವನೆಗಳನ್ನು ಹೇಳುತ್ತಿದ್ದಾರೆ. ಇವೆಲ್ಲವನ್ನು ಮಾನ್ಯ ಮುಖ್ಯಮಂತ್ರಿಗಳು, ಹಿರಿಯ ಗೌರವಾನ್ವಿತ ಎಲ್ಲಾ ಸಚಿವರ ಸಮ್ಮುಖದಲ್ಲಿ ಚರ್ಚೆ ಮಾಡಿ ಅಂತಿಮವಾಗಿ ಸರ್ಕಾರ ಈ ಉನ್ನತ ಶಿಕ್ಷಣವನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತದೆ. ಈ ನಿಟ್ಟಿನಲ್ಲಿ ಉತ್ತಮವಾದಂತಹ ತೀರ್ಮಾನವನ್ನು ನಮ್ಮ ಸರ್ಕಾರ ಮಾಡುತ್ತದೆ ಎಂದು ಹೇಳಿ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ಸಭಾಪತಿಯವರು:– ಡಾ॥ ಧನಂಜಯ ಸರ್ಜಿಯವರೇ, ತಾವು ಕ್ಲಾರಿಫಿಕೇಶನ್ ಮಾತ್ರ ಕೇಳಬೇಕು, ಭಾಷಣ ಮಾಡಬೇಡಿ.

ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ಉತ್ತಮ ಉತ್ತರವನ್ನು ಕೊಟ್ಟಿದ್ದಾರೆ. ಪದೇಪದೇ ಅವರು ತಮ್ಮ ಚಿಂತಾಮಣಿ ಇಂಜಿನಿಯರಿಂಗ್ ಕಾಲೇಜು ಬಗ್ಗೆ ಉಲ್ಲೇಖ ಮಾಡಿದ್ದಾರೆ. ಅಲ್ಲೇ ಪಕ್ಕದಲ್ಲಿರುವಂತಹ ಚಿಕ್ಕಮಗಳೂರು ಇಂಜಿನಿಯರಿಂಗ್ ಕಾಲೇಜು ಮಂಜೂರಾಗಿದೆ. ಹುದ್ದೆಗಳು create ಆಗಿವೆ. ಆದರೂ ಕಾಲೇಜು ಏಕೆ ಪ್ರಾರಂಭವಾಗಿಲ್ಲ?

ಸಭಾಪತಿಯವರು:– ಡಾ॥ ಧನಂಜಯ ಸರ್ಜಿಯವರೇ, ತಾವು ಕ್ಲಾರಿಫಿಕೇಶನ್ ಏನಾದರೂ ಇದ್ದರೆ ಕೇಳಿ. ಅವರ ಕಾಲೇಜು ಬಗ್ಗೆ ನೀವೇಕೆ ತಲೆ ಕೆಡಿಸಿಕೊಳ್ಳುತ್ತಿದ್ದೀರಿ.

ಡಾ॥ ಎಂ.ಸಿ.ಸುಧಾಕರ:– ಮಾನ್ಯ ಸಭಾಪತಿಯವರೇ, ನಾನು ಅದಕ್ಕೆ ಉತ್ತರವನ್ನು ಕೊಡುತ್ತೇನೆ.

ಡಾ॥ ಧನಂಜಯ ಸರ್ಜಿ:– ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರಿನಲ್ಲಿ ಇಂಜಿನಿಯರಿಂಗ್ ಕಾಲೇಜು ಮಂಜೂರಾಗಿದೆ, ಹುದ್ದೆಗಳು ಮಂಜೂರಾಗಿವೆ. ಆದರೂ ಇವತ್ತು ಇಂಜಿನಿಯರಿಂಗ್ ಕಾಲೇಜು ಏಕೆ ಪ್ರಾರಂಭವಾಗಿಲ್ಲ?

ಡಾ॥ ಎಂ.ಸಿ.ಸುಧಾಕರ:– ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರಿಗೆ ತಪ್ಪು ಮಾಹಿತಿ ಇದೆ. 10 ವರ್ಷಗಳ ಹಿಂದೆ ಆ ಕಾಲೇಜು ಮಂಜೂರಾಗಿರುವಂಥದ್ದು. ಅಲ್ಲಿ ಜಾಗದ ಸಮಸ್ಯೆ ಇತ್ತು. ಬೆಟ್ಟದಲ್ಲೋ ಎಲ್ಲೋ ಮಾಡಿದ್ದಾರೆಂದು ಗೊಂದಲವಾಗಿ ಅದರ ಪೂರ್ತಿ ಅಮೌಂಟ್ ಕೂಡ ಲ್ಯಾಪ್ಸ್ ಆಗಿದೆ. ಈಗ ಸಂಬಂಧಪಟ್ಟ ಸದಸ್ಯರು ಇಲ್ಲ. ಅಲ್ಲಿ ಅವರದ್ದೇ ಆದಂತಹ ಸದಸ್ಯರು ಇದ್ದರು. ಹಳೆ ಜಿಲ್ಲಾಧಿಕಾರಿಗಳ ಕಚೇರಿ ಸ್ಥಳಾಂತರವಾಗಿದೆ. ಈಗ ಮತ್ತೆ ಬಂದಿರುವ ಶಾಸಕರು ಆ ಜಾಗವನ್ನು ನಮ್ಮ ಇಲಾಖೆಗೆ ಕೊಡುವಂತಹ ಕೆಲಸ ಮಾಡಿದ್ದಾರೆ. ನಾವು ಅದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಮುಂದೆ ಸರ್ಕಾರದಿಂದ ಇಂಜಿನಿಯರಿಂಗ್ ಕಾಲೇಜು ಪ್ರಾರಂಭ ಮಾಡುವಂತಹ ಸಂದರ್ಭದಲ್ಲಿ ಖಂಡಿತವಾಗಿಯೂ ಅದನ್ನು ಪರಿಗಣಿಸುತ್ತೇವೆ. ಆದರೆ ಬೋಧಕರು, ಮತ್ತೊಂದು ಯಾವುದು ಮಂಜೂರಾಗಿಲ್ಲ. ತಪ್ಪು ಮಾಹಿತಿ ಇದೆ, ದಯವಿಟ್ಟು ಪರಿಶೀಲಿಸಿಕೊಳ್ಳಿ.

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತುಂಬಾ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಸದನದ ಸದಸ್ಯರ ಪರವಾಗಿ ಮಾನ್ಯ ಸಚಿವರನ್ನು ನಾನು ಅಭಿನಂದಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ವಿಷಯ:- ಆನೇಕಲ್ ತಾಲ್ಲೂಕಿನಲ್ಲಿ ಹಾಗೂ ಸರ್ಜಾಪುರ ಹೋಬಳಿಯಲ್ಲಿ ಹೊಸ ಕೈಗಾರಿಕೆಗಾಗಿ ಭೂಸ್ವಾಧೀನಪಡಿಸಿಕೊಂಡಿರುವ ಪ್ರದೇಶವನ್ನು ಹಿಂಪಡೆಯುವ ಕುರಿತು

ಶ್ರೀ ಹೆಚ್. ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಆನೇಕಲ್ ತಾಲ್ಲೂಕಿನಲ್ಲಿ ಈಗಾಗಲೇ ಆರು ಕೈಗಾರಿಕೆ ಪ್ರದೇಶಗಳಿದ್ದು ಮತ್ತು ಇದರ ಜೊತೆಗೆ ಸರ್ಜಾಪುರ ಹೋಬಳಿಯಲ್ಲಿ ಹೊಸ ಕೈಗಾರಿಕೆ ಸ್ಥಾಪಿಸಲು ಸರ್ಕಾರದಿಂದ ಭೂಸ್ವಾಧೀನಕ್ಕೆ ಕ್ರಮ ಕೈಗೊಂಡಿದೆ. ಈಗಾಗಲೇ ಅಗತ್ಯಕ್ಕಿಂತ ಹೆಚ್ಚು ಕೈಗಾರಿಕೆ ಪ್ರದೇಶಗಳು ಈ ತಾಲ್ಲೂಕಿನಲ್ಲಿ ಇದ್ದು, ಅದರಿಂದಾಗಿ ಈಗಾಗಲೇ ಪರಿಸರ ಮಾಲಿನ್ಯ, ಕೆರೆಗಳ ಮಲಿನ ಹಾಗೂ ಟ್ರಾಫಿಕ್ ಸಮಸ್ಯೆಗಳಿಂದ ತೊಂದರೆಯಾಗುತ್ತಿದೆ. ಆದ್ದರಿಂದ ಸರ್ಕಾರವು ಭೂ ಸ್ವಾಧೀನ ಮಾಡಿರುವ ಪ್ರದೇಶವನ್ನು ಹಿಂಪಡೆಯಬೇಕೆಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಂ.ಬಿ.ಪಾಟೀಲ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):-

ಮಾನ್ಯ ಸಭಾಪತಿಯವರೇ,

1. ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳುವ ಪ್ರದೇಶದಲ್ಲಿನ ಕೈಗಾರಿಕಾ ನಿವೇಶನಗಳಿಗೆ ಇರುವ ಬೇಡಿಕೆಗಳಿಗೆ ಅನುಗುಣವಾಗಿ ಮಂಡಳಿಯ ಕಾರ್ಯಪಾಲಕ ಅಭಿಯಂತರರು, ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಸಹಯೋಗದೊಂದಿಗೆ ನಿರ್ದಿಷ್ಟ ಸ್ಥಳಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಜಮೀನುಗಳನ್ನು ಗುರುತಿಸಿದ ನಂತರ ಮಂಡಳಿ ಸಭೆಯ ಅನುಮೋದನೆ ಪಡೆದು ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸರ್ಕಾರವು ದಿನಾಂಕ: 18-03-2013 ರಂದು ಹೊರಡಿಸಿರುವ ಸುತ್ತೋಲೆಯಲ್ಲಿನ ನಿರ್ದೇಶನ ಅನುಸಾರ ಆಯಕಟ್ಟಿಗೆ ಧಕ್ಕೆಯುಂಟಾಗದಂತೆ ತೋಟಗಳು, ಫಲವತ್ತಾದ ಜಮೀನುಗಳು ಹಾಗೂ ವಾರ್ಷಿಕ ಎರಡು ಬೆಳೆ ಬೆಳೆಯುವ ಜಮೀನುಗಳು ತರಿ ಜಮೀನುಗಳನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಿ ಕೆಐಎಡಿ ಕಾಯ್ದೆ 1966 ರಡಿ ಜಮೀನನ್ನು ಸ್ವಾಧೀನಪಡಿಸಲು ಕ್ರಮ ವಹಿಸಲಾಗುತ್ತಿದೆ.

2. ಬೆಂಗಳೂರು ಸುತ್ತಮುತ್ತಲೂ ಕೈಗಾರಿಕೆಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ ವ್ಯಾಪ್ತಿಯಲ್ಲಿ SWIFT CITY ಅಭಿವೃದ್ಧಿಪಡಿಸುವುದರ ಜೊತೆಗೆ, ಬೆಂಗಳೂರಿನ ಜನಸಂಖ್ಯೆಯ ಬೆಳವಣಿಗೆಗೆ ಅನುಗುಣವಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ.

3. ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಬಿ.ಹೊಸಹಳ್ಳಿ, ಅಡಿಗಾರಕಲ್ಲಹಳ್ಳಿ, ಎಸ್.ಮೇಡಹಳ್ಳಿ, ಮುತ್ತಾನಲ್ಲೂರು ಅಮಾನಿಕರೆ, ಸೊಳ್ಳೇಪುರ ಮತ್ತು ಹಂದೇನಹಳ್ಳಿ ಗ್ರಾಮಗಳ ಭೂಸ್ವಾಧೀನ ವಿವರಗಳು ಕೆಳಕಂಡಂತಿರುತ್ತದೆ.

ಕ್ರ. ಸಂ.	ಗ್ರಾಮ	ಪ್ರಾಥಮಿಕ ಅಧಿಸೂಚನೆ		ಅಂತಿಮ ಅಧಿಸೂಚನೆ	
		ದಿನಾಂಕ	ವಿಸ್ತೀರ್ಣ(ಎಕರೆ)	ದಿನಾಂಕ	ವಿಸ್ತೀರ್ಣ(ಎಕರೆ)
1	ಎಸ್.ಮೇಡಹಳ್ಳಿ ಮತ್ತು ಅಡಿಗಾರಕಲ್ಲಹಳ್ಳಿ	15.03.2024	305-27	02.12.2024	305-27
2	ಸೊಳ್ಳೇಪುರ, ಮುತ್ತನಲ್ಲೂರು ಅಮಾನೀಕೆರೆ ಮತ್ತು ಹಂದೇನಹಳ್ಳಿ	15.03.2024	291-32	03.10.2024	291-32
3	ಬಿಕ್ಕನಹಳ್ಳಿ	15.03.2024	57-00	03.10.2024	45-20
4	ಎಸ್.ಮೇಡಹಳ್ಳಿ ಮತ್ತು ಅಡಿಗಾರಕಲ್ಲಹಳ್ಳಿ	02.12.2024	23-24	-	-
5	ಬಿ.ಹೊಸಹಳ್ಳಿ	01.10.2024	401-19	-	-

4. ರೈತರ ಜಮೀನುಗಳಿಗೆ ಕೆ.ಐ.ಎ.ಡಿ.ಬಿ. ವತಿಯಿಂದ ನಿಯಮಾನುಸಾರ ಭೂ ದರ ನಿಗದಿಪಡಿಸಿ, ಭೂಮಾಲೀಕರಿಗೆ ಪರಿಹಾರ ವಿತರಿಸಲಾಗುತ್ತದೆ.

5. ಅಧಿಸೂಚನೆಗಳನ್ನು ಹಿಂಪಡೆಯುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀ ಹೆಚ್. ಎಸ್.ಗೋಪಿನಾಥ್:- ಮಾನ್ಯ ಸಭಾಪತಿಯವರೇ, ಆನೇಕಲ್‌ನಲ್ಲಿ 6 ಕೈಗಾರಿಕೆ ಪ್ರದೇಶಗಳು 1980 ರಲ್ಲಿ ಪ್ರಾರಂಭವಾಗಿ 25 ವರ್ಷಗಳಲ್ಲಿ establish ಆಗಿದೆ. 25 ವರ್ಷಗಳಲ್ಲಿ ಅಂದರೆ 2005 ರ ನಂತರ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ಕೈಗಾರಿಕಾ ಪ್ರದೇಶವನ್ನು ಮಾಡಬಾರದು ಎಂದು 'Beyond Bengaluru' ಎನ್ನುವಂಥದ್ದನ್ನು ಇವತ್ತು ಏನು ಪ್ರತಿಪಾದನೆ ಮಾಡಿದ್ದಾರೆ ಅದನ್ನು ಅವತ್ತೇ ಮಾಡಿದ್ದರು. ಕಾರಣ ಇಷ್ಟೇ, ಇವತ್ತು 2500 ಎಕರೆಯಷ್ಟು ಕೈಗಾರಿಕಾ ಪ್ರದೇಶ ಆನೇಕಲ್ ತಾಲ್ಲೂಕಿನಲ್ಲಿ ಇದೆ. 10 ವರ್ಷಗಳ ಹಿಂದೆ ಅಲ್ಲಿರುವಂತಹ ಕೆ.ಹೆಚ್.ಬಿ. ಯಿಂದ residential layout ಗಳನ್ನು ಮಾಡಿದ್ದಾರೆ. ಆದರೆ ಸರ್ಜಾಪುರ ಹೋಬಳಿಯಲ್ಲಿ ಇದುವರೆಗೂ ಯಾವುದೇ ಭೂಸ್ವಾಧೀನ ಆಗಿರಲಿಲ್ಲ. ಆದರೆ ಅವರ ಸರ್ಕಾರ ಬಂದ ಮೇಲೆ ದಿನಾಂಕ 15.03.2024 ರಲ್ಲಿ ಸೊಳ್ಳೇಪುರ, ಮುತ್ತನಲ್ಲೂರು, ಅಮಾನೀಕೆರೆ ಮತ್ತು ಹಂದೇನಹಳ್ಳಿ ಗ್ರಾಮಗಳಲ್ಲಿ ಹಾಗೂ ಸಂಬಂಧಪಟ್ಟ ಗ್ರಾಮಗಳಲ್ಲಿ 596 ಎಕರೆಗೆ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಡಿಸೆಂಬರ್ 2024 ರಲ್ಲಿ Section 28 (6) ರ ಪ್ರಕಾರ ಕೆ.ಐ.ಎ.ಡಿ.ಬಿ. ಯಲ್ಲಿ ಅಂತಿಮ ಅಧಿಸೂಚನೆಯನ್ನು ಮಾಡಿದ್ದಾರೆ. ಆದರೆ, ಇದರಲ್ಲಿ ನಾನು ಕೇಳುತ್ತಿರುವಂಥದ್ದು, ಇದು ಆನೇಕಲ್ ಪ್ಲಾನಿಂಗ್ ಅಥಾರಿಟಿಗೆ ಬರುತ್ತದೆ. ಆನೇಕಲ್ ಪ್ಲಾನಿಂಗ್ ಅಥಾರಿಟಿ ಸಿ.ಡಿ.ಪಿ. ಯಲ್ಲಿ ಅದು ಕೃಷಿ ವಲಯ ಎಂದು ಘೋಷಣೆಯಾಗಿದೆ. ಕೃಷಿ ವಲಯ ಎಂದು ಘೋಷಣೆಯಾದರೂ ಕೂಡ, environmental impact ಆಗಲಿ, social impact ಆಗಲಿ ಯಾವುದೇ ರೀತಿಯಾದಂತಹ ಅಧ್ಯಯನ ಮಾಡದೆ ಮತ್ತು ರೈತರು ಏನು ಆಕ್ಷೇಪಣೆಯನ್ನು ಮಾಡಿದ್ದಾರೆ ಅದನ್ನು ಸರಿಯಾದ ರೀತಿಯಲ್ಲಿ ಕನ್ಸಿಡರ್ ಮಾಡಿಲ್ಲ. ಏಕಪಕ್ಷೀಯವಾಗಿ ಕೇವಲ 6-7 ತಿಂಗಳುಗಳಲ್ಲಿ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ್ದಾರೆ. ನಾವು ಸ್ಥಳೀಯ ಶಾಸಕರ ಜೊತೆಯಲ್ಲಿ ಮಾನ್ಯ ಸಚಿವರ ಹತ್ತಿರ ಬಂದಿದ್ದೇವೆ. ಮಾನ್ಯ ಸಚಿವರು ಕೂಡ ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ. ನಾನು ಕೇಳುತ್ತಿರುವುದೇನೆಂದರೆ, ಯಾವ ಏರಿಯಾದಲ್ಲಿ ಎಷ್ಟು ಕೃಷಿ ವಲಯ ಇರಬೇಕು, ಎಷ್ಟು ಕೈಗಾರಿಕಾ ಪ್ರದೇಶ ಇರಬೇಕು, ಎಷ್ಟು ವಸತಿ ನಿಲಯ ಇರಬೇಕು ಎಂದು overall ಸಿ.ಡಿ.ಪಿ. ಯಲ್ಲಿದ್ದಾಗ ಆನೇಕಲ್ ತಾಲ್ಲೂಕಿನಲ್ಲಿ ಅತಿಯಾದ ಕೈಗಾರಿಕೆಗಳು ಈಗಾಗಲೇ ಇವೆ. ಸಣ್ಣ ಉದಾಹರಣೆ ಹೇಳಬೇಕೆಂದರೆ, ಇವತ್ತು NGT (National Green Tribunal) ಕೂಡ ಎರಡು ವರ್ಷಗಳ ಹಿಂದೆ ಆನೇಕಲ್ ತಾಲ್ಲೂಕಿನ ಕೆರೆಗಳ ನೀರಿನ ಅಧ್ಯಯನ ಮಾಡಿದ್ದಾರೆ. ಆನೇಕಲ್ ತಾಲ್ಲೂಕಿನಲ್ಲಿರುವ ಅತಿ ಹೆಚ್ಚು ಕೆರೆಗಳು ಇವತ್ತು ಕಲುಷಿತಗೊಂಡಿವೆ.

(ಮುಂದು)

(240) 11/03/2025 9:40 ಎಸ್‌ಪಿಆರ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಹೆಚ್.ಎಸ್.ಗೋಪಿನಾಥ್(ಮುಂದು):-

ಆ ಕೆರೆಗಳು ಉಪಯೋಗಕ್ಕೆ ಬರದ ರೀತಿಯಲ್ಲಿ ಆಗಿವೆ. ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿರುವ ಕೈಗಾರಿಕೆಗಳು ಕೆರೆಗಳನ್ನು ಮಾಲಿನ್ಯ ಮಾಡಿದ್ದಕ್ಕೋಸ್ಕರ 350 ಕೋಟಿ ರೂಪಾಯಿಗಳಷ್ಟು ದಂಡವನ್ನು ವಿಧಿಸಿದ್ದಾರೆ. ಇಷ್ಟೆಲ್ಲಾ ಸಂಗತಿಗಳಿರುವಾಗ ಯಾವುದು ಕೇವಲ ವ್ಯವಸಾಯಕ್ಕಾಗಿ ಉಪಯೋಗವಾಗುತ್ತಿದೆ; ಇವತ್ತಿನ ದಿವಸ ಅಲ್ಲಿ ಗ್ರೀನ್ ಹೌಸ್‌ಗಳಿವೆ; ತೋಟಗಾರಿಕೆ ಇದೆ. ಈ ಭಾಗದಲ್ಲಿ ಅತಿಯಾದ ಕೈಗಾರಿಕೆಗಳು ಈಗಾಗಲೇ ಆಗಿರುವುದರಿಂದ, ಈ ಕೈಗಾರಿಕೆಗಳ ಅವಶ್ಯಕತೆ ಇಲ್ಲ ಎನ್ನುವುದು ಅಲ್ಲಿಯ ಸ್ಥಳೀಯರ ರೈತರ, ಜನಪ್ರತಿನಿಧಿಗಳ ಅನಿಸಿಕೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆನೇಕಲ್ ವಿಧಾನ ಸಭಾ ಕ್ಷೇತ್ರದ ಶಾಸಕರ ನೇತೃತ್ವದಲ್ಲಿ ಸಚಿವರನ್ನು ಭೇಟಿ ಮಾಡಿ, ಅಲ್ಲಿನ ಮಾಹಿತಿಯನ್ನು ಅಪ್‌ಡೇಟ್ ಮಾಡಲಾಗಿತ್ತು. ಸಚಿವರು ಅಲ್ಲಿಗೆ ಭೇಟಿ ನೀಡಿ ಪರಿಶೀಲನೆ ಮಾಡುತ್ತೇನೆ; ನಂತರದಲ್ಲಿ ನಿರ್ಣಯವನ್ನು ತೆಗೆದುಕೊಳ್ಳೋಣ ಎಂಬುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ದಿನಾಂಕ 01/10/2024 ರಲ್ಲಿ ಹೊಸಹಳ್ಳಿ ಗ್ರಾಮದಲ್ಲಿ 401 ಎಕರೆಗೆ ಪ್ರಾಥಮಿಕ ಅಧಿಸೂಚನೆಯನ್ನು ಸರ್ಕಾರವು ಹೊರಡಿಸಿದೆ. ಇದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುತ್ತದೆ. ಪ್ರಾಧಿಕಾರದ ಸಿ.ಡಿ.ಪಿ. (Comprehensive Development Plan) ಯಲ್ಲಿ ಇವತ್ತಿಗೂ ಸಹ ಅದು ಕೃಷಿ ವಲಯ ಎಂಬುದಾಗಿ ಇದೆ. ಪ್ರಾಥಮಿಕ ಅಧಿಸೂಚನೆಯಾಗಿದ್ದು, ಅಂತಿಮ ಅಧಿಸೂಚನೆಯಾಗಿರುವುದಿಲ್ಲ. ಕೃಷಿ ವಲಯ ಎಂಬುದಾಗಿ ಯಾವುದನ್ನು ಗುರ್ತಿಸಲಾಗಿದೆಯೋ ಅದರಲ್ಲಿ ಕೈಗಾರಿಕೆಗಳನ್ನು ಮಾಡುವ ಅವಶ್ಯಕತೆ ಇದೆಯೇ? ಸಚಿವರು ತಿಳಿಸಿದಂತೆ, 'ಬಿಯಾಂಡ್ ಬೆಂಗಳೂರು' ಅನ್ನು ಮಾಡಬೇಕು ಎನ್ನುವುದನ್ನು ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್‌ನಲ್ಲಿ ಹೇಳಲಾಗಿದೆ. ಅದರಲ್ಲಿ ಶೇಕಡಾ 45 ರಷ್ಟು ಉತ್ತರ ಕರ್ನಾಟಕ ಬಂದಿದೆ ಎಂಬುದನ್ನೂ ಸಹ ತಿಳಿಸಿದ್ದಾರೆ. ಮಾಲಿನ್ಯ, ಸಂಚಾರ ದಟ್ಟಣೆ, ಜನ ಸಾಂದ್ರತೆಯ ಸಮಸ್ಯೆಗಳಿರಬಹುದು ಇಷ್ಟೆಲ್ಲಾ ಸಮಸ್ಯೆಗಳು ಅಲ್ಲಿವೆ. ಈ ಎಲ್ಲದರ ಹಿನ್ನೆಲೆಯಲ್ಲಿ ನೋಡಿದಾಗ, ಇಲ್ಲಿ ಕೈಗಾರಿಕೆಗಳ ಅವಶ್ಯಕತೆ ಇಲ್ಲ. ಇಲ್ಲಿ ಕೇವಲ ವ್ಯವಸಾಯದ ಭೂಮಿ ಇದ್ದು, ಅದನ್ನು ಕೇವಲ ವ್ಯವಸಾಯಕ್ಕಾಗಿ ಮಾತ್ರವೇ ಉಪಯೋಗಿಸಬೇಕು ಎನ್ನುವುದನ್ನು ಪಕ್ಷಾತೀತವಾಗಿ ನಾವೆಲ್ಲರೂ ಸಚಿವರಿಗೆ ಮನವಿಯನ್ನು ಸಲ್ಲಿಸಿದ್ದೇವೆ. ಮಾನ್ಯ ಸಚಿವರು ದಯಮಾಡಿ ಇದರ ಬಗ್ಗೆ ಗಮನಹರಿಸಿ, ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳಿ. ಏಕೆಂದರೆ ಅಲ್ಲಿನ ರೈತರು ಆತಂಕಕ್ಕೀಡಾಗಿದ್ದಾರೆ. ಸಂಬಂಧಿತ ನ್ಯಾಯಾಲಯದಲ್ಲಿ ಇದಕ್ಕೆ ತಡೆಯಾಜ್ಞೆಯೂ ಸಹ ಇದೆ. ಸುಮಾರು 250 ಎಕರೆ ಜಮೀನಿಗೆ ಸರಿಯಾದ ಕಾರ್ಯವಿಧಾನ ಅನುಸರಿಸಿಲ್ಲ ಎನ್ನುವ ಕಾರಣಕ್ಕಾಗಿ ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಿದೆ. ಸಚಿವರು ಈ ಅಂಶವನ್ನು ಗಮನಿಸಬೇಕು. ತಮ್ಮ ಮೂಲಕ ನಾನು ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಆದಷ್ಟು ಬೇಗ ರೈತರಿಗಾಗಿರುವ ಆತಂಕವನ್ನು ದೂರ ಮಾಡಬೇಕು. ಅಲ್ಲಿನ ಕೃಷಿ ಭೂಮಿಯನ್ನು ಕೃಷಿ ಭೂಮಿಯಾಗಿಯೇ ಉಳಿಸಬೇಕು ಎಂಬ ವಿನಂತಿಯನ್ನು ನಾನು ಮಾಡಬೇಕು.

ಶ್ರೀ ಎಂ.ಬಿ.ಪಾಟೀಲ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):- ಮಾನ್ಯ ಸಭಾಪತಿಯವರೆ, ನಾವು ಈಗಾಗಲೇ ಕಾಯ್ದೆಯ ನಿಯಮ 28(3) ರನ್ವಯ ರೈತರ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಂತಿಮ ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಎಲೆಕ್ಟ್ರಾನಿಕ್ ಸಿಟಿ ಪ್ರದೇಶದ ನಂತರ ಮುಂದೆ ಅಲ್ಲಿ ನಾವು SWIFT (Startups, Workspaces, Innovation, Finance and Technology) city ಅನ್ನು ಘೋಷಿಸಿದ್ದೇವೆ. ಸ್ವಿಫ್ಟ್ ಸಿಟಿಯಲ್ಲಿ semiconductors ಹಾಗೂ ಎಲ್ಲಾ ರೀತಿಯ electronics industries ಗಳನ್ನು ಮಾಡುವುದಕ್ಕೆ ಆ ಪ್ರದೇಶವು ಬಹಳ ಸೂಕ್ತವಾಗಿದೆ ಎಂಬ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅಲ್ಲಿನ ಜನ ಪ್ರತಿನಿಧಿಗಳೆಲ್ಲರೂ ನನ್ನನ್ನು ಭೇಟಿ ಮಾಡಿದ್ದಾರೆ. ಅವರುಗಳು ನನ್ನನ್ನು ಭೇಟಿ ಮಾಡಿದಾಗಲೂ ಸಹ ನಾನು ಹೇಳಿದ್ದೇನೆ. ಈ ಹಿಂದೆ ಅಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಎರಡ್ಮೂರು ಭೂ ಸ್ವಾಧೀನ ಪ್ರಕ್ರಿಯೆಗಳಾಗಿವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು 50 : 50 ರ ಅನುಪಾತದಲ್ಲಿ ನೀಡಿದ್ದಾರೆ. ನಮ್ಮ ಕೈಗಾರಿಕೆ ಇಲಾಖೆಯಿಂದಲೂ ಸಹ ಅವರಿಗೆ ಅಭಿವೃದ್ಧಿ ಹೊಂದಿದ ಜಮೀನನ್ನೇ ನೀಡುತ್ತೇವೆ. ಒಂದು ಎಕರೆಯಲ್ಲಿ 43,000 ಚದರ ಅಡಿ ಇದ್ದು; ಇದರಲ್ಲಿ ಅರ್ಧದಷ್ಟು ಅಭಿವೃದ್ಧಿಗೆ ಹೋಗುತ್ತದೆ. ಇನ್ನುಳಿದ 22,000 ಚದರ ಅಡಿಯಲ್ಲಿ 11,000 ಚದರ ಅಡಿಯಷ್ಟು ಅಭಿವೃದ್ಧಿ ಹೊಂದಿದ ಜಮೀನನ್ನೇ ನಾವು ನೀಡುತ್ತೇವೆ. ನಿಯಮಾನುಸಾರ ಅಲ್ಲಿ ಭೂ ದರವನ್ನು ನಿಗದಿಪಡಿಸಿ, ಭೂ ಮಾಲೀಕರಿಗೆ ಪರಿಹಾರವನ್ನು ಕೊಡುತ್ತೇವೆ; ಇದರಲ್ಲಿ ಎರಡು ಮಾತಿಲ್ಲ. ಇವರಿಗೆ ಸೂಕ್ತವಾದ ಬೆಲೆಯನ್ನೂ ಸಹ ನಾವು ನೀಡುತ್ತೇವೆ. ಅಲ್ಲಿನ ರೈತರು ಮುಂದೆ ಬರಬೇಕು ಎಂಬ ಆಶಯವೂ ಸಹ ನಮ್ಮ ಇದೆ. ಇವರಿಗೆ ಅಭಿವೃದ್ಧಿ ಪಡಿಸಿದ ಜಮೀನನ್ನೇ ನೀಡುತ್ತೇವೆ. ಈಗಾಗಲೇ ಹೊರಡಿಸಿರುವ ಅಧಿಸೂಚನೆಯನ್ನು ಹಿಂಪಡೆಯುವ ಪ್ರಶ್ನೆಯೇ ಉದ್ಭವಿಸಿವುದಿಲ್ಲ.

ಶ್ರೀ ಹೆಚ್.ಎಸ್.ಗೋಪಿನಾಥ್:- ಮಾನ್ಯ ಸಭಾಪತಿಯವರೆ, ಆನೇಕಲ್ ತಾಲ್ಲೂಕಿನಲ್ಲಿ ಹೆಚ್ಚು ಕೈಗಾರಿಕೆಗಳು ಈಗಾಗಲೇ ಇರುವುದರಿಂದ ಈ ವಲಯವನ್ನು ಕೃಷಿ ವಲಯವನ್ನಾಗಿಯೇ ಉಳಸಿಕೊಳ್ಳಬೇಕು ಎನ್ನುವುದು ನಮ್ಮ ಆಗ್ರಹವಾಗಿದೆ. ಸಚಿವರು ಈಗಾಗಲೇ ತಿಳಿಸಿದಂತೆ, ಅಲ್ಲಿ ತೋಟಗಾರಿಕೆ ಭೂಮಿ ಹಾಗೂ ಗ್ರೀನ್ ಹೌಸ್‌ಗಳಿವೆ. ಇವುಗಳನ್ನು ಸಚಿವರೂ ಸಹ ನೋಡಿದ್ದಾರೆ. ಹೀಗಾಗಿ ಸಚಿವರು ಅಲ್ಲಿಗೆ ಭೇಟಿ ನೀಡಿ, ಪರಿಶೀಲಿಸಲಿ. ಒಂದು ವೇಳೆ ಅಲ್ಲಿ ನಿಜವಾಗಿಯೂ ಸಹ ಕೃಷಿ ಭೂಮಿ ಇದ್ದರೆ, ಅದನ್ನು ಹಾಗೆಯೇ ಮುಂದುವರೆಸಿ. ನಾವು ಶೇಕಡಾ 50 ರಷ್ಟನ್ನು ಕೇಳುತ್ತಿಲ್ಲ. ಸರ್ಕಾರವು ಅದನ್ನು ಕೃಷಿ ವಲಯವನ್ನಾಗಿಯೇ ಉಳಸಿಕೊಳ್ಳಬೇಕು. ಈಗಾಗಲೇ ಆ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೈಗಾರಿಕೆಗಳು ಇರುವುದರಿಂದ ಮತ್ತಷ್ಟು ಕೈಗಾರಿಕೆಗಳು ಬರುವುದು ಅವಶ್ಯಕತೆ ಇರುವುದಿಲ್ಲ. ಅಲ್ಲಿನ ಕೈಗಾರಿಕೆಗಳಿಂದ ಈಗಾಗಲೇ ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಿದ್ದೇವೆ. ಈ ಕಾರಣಕ್ಕಾಗಿ ನಾವು ಕೇಳಿಕೊಳ್ಳುತ್ತಿದ್ದೇವೆ. ಈ ಜಾಗದಲ್ಲಿಯೇ ಮಾಡಬೇಕು ಎನ್ನುವ ಅವಶ್ಯಕತೆ ಏನೂ ಇಲ್ಲ. ಏಕೆಂದರೆ, ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಸ್ಯಾಟಲೈಟ್ ರಿಂಗ್ ರಸ್ತೆಯು 270 ಕಿಲೋಮೀಟರ್‌ನಷ್ಟಾಗುತ್ತಿದೆ. ಇಲ್ಲಿಂದ ಸರ್ಜಾಪುರಕ್ಕೆ ಹೋಗಬೇಕಾದರೆ, ಅದು ಕೇವಲ 40 ಕಿಲೋಮೀಟರ್‌ಗಳ ಅಂತರದಲ್ಲಿದೆ. ಆದರೆ ಪ್ರಯಾಣ ಅವಧಿಯು ಕನಿಷ್ಠ ಅಂದರೂ 3 ಗಂಟೆಗಳು ಬೇಕಾಗುತ್ತದೆ. ಸರ್ಕಾರವು ಅಲ್ಲಿ ಮತ್ತಷ್ಟು ಕೈಗಾರಿಕೆಗಳನ್ನು ಮಾಡುವುದರಿಂದ ಹಾಗೂ ಇತರೆ KWIN (Knowledge, Wellbeing and Innovation) city ಅನ್ನು ಮಾಡುವುದರಿಂದ ಮತ್ತಷ್ಟು ಜನ ಸಾಂದ್ರತೆ ಹೆಚ್ಚಾಗುತ್ತದೆ; ತನ್ಮೂಲಕ ಇನ್ನೂ ಹೆಚ್ಚಿನ ತೊಂದರೆಗಳಾಗುತ್ತವೆ. ಆರ್ಥಿಕ ದೃಷ್ಟಿಯಿಂದ ಅಲ್ಲದೇ ಹೋದರೂ ಸಹ ಪರಿಸರದ ದೃಷ್ಟಿಯಿಂದಲಾದರೂ ನೋಡಬೇಕು. ಅಲ್ಲಿನ ಕೈಗಾರಿಕೆಗಳು, ವಸತಿ ನಿಲಯಗಳು ಹಾಗೂ ಕೃಷಿ ಸಹ ಉಳಯಬೇಕು ಎನ್ನುವುದೇ ನಮ್ಮ ಆಗ್ರಹವಾಗಿದೆ. ಹೀಗಾಗಿ ದಯಮಾಡಿ ಸಚಿವರು ಅಲ್ಲಿಗ ಭೇಟಿ ನೀಡಿ ವಾಸ್ತವಾಂಶಗಳನ್ನು ಅರ್ಥ ಮಾಡಿಕೊಂಡು, ಅಲ್ಲಿ ಕೃಷಿ ವಲಯವನ್ನು ಉಳಸಬೇಕು ನಮ್ಮ ಆಗ್ರಹವಾಗಿದೆ.

ಶ್ರೀ ಎಂ.ಬಿ.ಪಾಟೀಲ್:- ಮಾನ್ಯ ಸಭಾಪತಿಯವರೆ, ನಾನು ಅಲ್ಲಿಗೆ ಭೇಟಿ ನೀಡಿ ನಂತರದಲ್ಲಿ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ. ಅಲ್ಲಿ ಕೃಷಿ ವಲಯ ಇರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಲ್ಲಿ ಎಷ್ಟು ಪ್ರಮಾಣದಲ್ಲಿ ಕೃಷಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೂಮಿ, ಬೇರೆಯವರ ಜಮೀನು ಎಷ್ಟು ಇದೆ ಎನ್ನುವ ಸಂಪೂರ್ಣ ಮಾಹಿತಿಯು ನನಗೆ ಇದೆ. ಇದರ ಅನುಪಾತವೂ ಸಹ ನನಗೆ ತಿಳಿದಿದೆ. ಈ ಮಾಹಿತಿ ಇಲ್ಲದೇ ನಾನು ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಾನು, ಅವರು ಅಭಿವೃದ್ಧಪಡಿಸಿದ ಜಮೀನನ್ನು ತೆಗೆದುಕೊಳ್ಳಲು ತಯಾರಿದ್ದರೆ, ಅದನ್ನು ನೀಡಲು ನಾವು ಸಿದ್ಧರಿದ್ದೇವೆ. ಇವತ್ತಿನ ದಿವಸ ಅಲ್ಲಿನ ಭೂಮಿಯ ದರವು ಬಹಳಷ್ಟು ಇದೆ. ನಾವು ಭೂ ಪರಿಹಾರ ಹಣವನ್ನು ನೀಡಬೇಕಾದರೆ ಬಹಳ ದೊಡ್ಡ ಮೊತ್ತವನ್ನು ನೀಡಬೇಕು. ಈ ಎಲ್ಲಾ ಅಂಶಗಳ ಅರಿವು ನಮಗೆ ಇದೆ. ಆದರೂ ಸಹ ನಾನು ಅಲ್ಲಿಗೆ ಭೇಟಿ ನೀಡಿ, ಪರಿಶೀಲಿಸುತ್ತೇನೆ. ಅಲ್ಲಿ ಇರುವ ಜಮೀನುಗಳ ಪೈಕಿ ಎಷ್ಟು ರೈತರ ಜಮೀನು ಇದೆ ಎಂಬುದು ನನಗೆ ಗೊತ್ತಿದೆ. ಇನ್ನುಳಿದ ಅನುಪಾತವನ್ನು ನಾನು ಇಲ್ಲಿ ಹೇಳುವುದಕ್ಕೆ ಬಯಸುವುದಿಲ್ಲ. ಈ ಬಗೆಗಿನ ಎಲ್ಲಾ ಮಾಹಿತಿಯು ನನಗೆ ತಿಳಿದಿದೆ. ಎಲೆಕ್ಟ್ರಾನಿಕ್ ಸಿಟಿ ಆದ ಮೇಲೆ ಇವತ್ತಿನ ದಿವಸ ಆ ಭಾಗದ ಹೊಸೂರು ಪ್ರದೇಶವು ಯಾವ ರೀತಿಯಾಗಿ ಅಭಿವೃದ್ಧಿಗೊಳ್ಳುತ್ತಿದೆ ಎನ್ನುವುದನ್ನು ತಾವು ನೋಡಿ ಗಮನಿಸಿದ್ದೀರಿ. ಹೀಗಾಗಿ ಎಲೆಕ್ಟ್ರಾನಿಕ್ ಸಿಟಿಗಿಂತಲೂ ಒಳ್ಳೆಯ ಸಿಟಿಯನ್ನು ಅಲ್ಲಿ ನಾವು ಮಾಡಬಹುದು. ಅಧಿವೇಶನ ಪೂರ್ಣಗೊಂಡ ನಂತರ ನಾನು ಸ್ಥಳಕ್ಕೆ ಭೇಟಿ ನೀಡಿ ಶಾಸಕರ ಸಮಕ್ಷಮ ಪರಿಶೀಲಿಸುತ್ತೇನೆ ನಂತರದಲ್ಲಿ ಸೂಕ್ತವಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ನಾನು ಈಗಾಗಲೇ ನೀಡಿದ್ದೇನೆ. ವಿಶೇಷವಾಗಿ ರೈತರ ವಿಚಾರದಲ್ಲಿ ಎರಡು ಮಾತಿಲ್ಲ. ನಾವು ಬಹಳ ಸಕಾರಾತ್ಮಕವಾಗಿ ಕೆಲಸಗಳನ್ನು ಮಾಡುತ್ತೇವೆ.

ಛಲವಾದಿ ಟಿ.ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೆ, ಸದಸ್ಯರಾದ ಶ್ರೀ ಹೆಚ್.ಎಸ್.ಗೋಪಿನಾಥ್ ರವರು ಈಗಾಗಲೇ ಪ್ರಸ್ತಾಪಿಸಿದಂತೆ, ಆ ಭಾಗದಲ್ಲಿ ಪೂರ್ತಿಯಾದ ಕೈಗಾರಿಕಾ ಪ್ರದೇಶವು ಇದೆ. ಒಂದು ಕಡೆಯಲ್ಲಿ ವೈಟ್‌ಫೀಲ್ಡ್ ಪ್ರದೇಶವಿದೆ. ಮತ್ತೊಂದು ಕಡೆ ಸಚಿವರೇ ಹೆಸರಿಸಿದ ಪ್ರದೇಶವಿದೆ. ನಮ್ಮ ಗಡಿಯ ಭಾಗದವರೆಗೂ ಹಾಗೂ ಹೊಸೂರು ಕಡೆಯಿಂದಲೂ ಕೈಗಾರಿಕಾ ಪ್ರದೇಶವಿದೆ. ಮತ್ತೊಂದು ಮಾಲೂರು ಕೈಗಾರಿಕಾ ಪ್ರದೇಶವಿದೆ. ಇದರ ಮಧ್ಯದಲ್ಲಿ ಅಲ್ಲಿ ಒಂದು ರೀತಿಯ ಉಸಿರುಗಟ್ಟುವಿಕೆಯ ವಾತಾವರಣವಿದೆ. ಸಾಮಾನ್ಯವಾಗಿ ಬಡಾವಣೆಗಳನ್ನು ಮಾಡುವಾಗ ಉದ್ಯಾನವನಗಳನ್ನು ಮಾಡುತ್ತಾರೆ. ಅದೇ ರೀತಿಯಾಗಿ ಕಡೆಯ ಪಕ್ಷ ಅದನ್ನು ಕೈ ಬಿಟ್ಟರೆ, ಒಂದಿಷ್ಟು ಜನರು ಉಸಿರಾಡಬಹುದು. ಇಂತಹ ಪರಿಸ್ಥಿತಿ ಈಗ ಅಲ್ಲಿದೆ. ಸಚಿವರು ತಿಳಿಸಿದಂತೆ ಅಲ್ಲಿ ಬಹಳ ದುಬಾರಿಯಾದ ಭೂಮಿ ಇದೆ; ಇಲ್ಲವೆಂದು ನಾನು ಹೇಳುವುದಿಲ್ಲ. ಬಾಗೇಪಲ್ಲಿ ಪ್ರದೇಶವು ಅಲ್ಲಿಂದ ತುಂಬಾ ದೂರವಿಲ್ಲ. ಬೆಂಗಳೂರಿನ ಗಡಿಯ 100 ಕಿಲೋಮೀಟರ್‌ನಷ್ಟಿದೆ. ಆದರೆ ಇದು ಕೇವಲ 40 ಕಿಲೋಮೀಟರ್‌ನಷ್ಟಿದೆ. ಚಿಕ್ಕಬಳ್ಳಾಪುರ ಆದ ಮೇಲೆ ಬೇಕಾದಷ್ಟು ಜಮೀನು ಇದೆ. ಅವುಗಳನ್ನು ತೆಗೆದುಕೊಂಡು ಸರ್ಕಾರವು ಕೈಗಾರಿಕೆಗಳನ್ನು ಮಾಡಲಿ. ಅಲ್ಲಿ ಬಹಳ ಅಗ್ಗವಾಗಿಯೂ ಸಹ ಜಮೀನು ದೊರೆಯುತ್ತದೆ. ಅಲ್ಲಿ ಇನ್ನೂ ಎಕರೆಗೆ ಲಕ್ಷಗಟ್ಟಲೆ ಇದೆ; ಕೋಟಿಗಟ್ಟಲೆಗೆ ಹೋಗಿಲ್ಲ. ಆದರೆ ಇಲ್ಲಿನ ದರ ಈಗಾಗಲೇ 5-10 ಕೋಟಿ ರೂಪಾಯಿಗಳಷ್ಟು ಇದೆ. ಇಲ್ಲಿ "ಲಂಗ್ಸ್ ಸ್ಪೇಸ್" ಇಲ್ಲ. ಎಲ್ಲಾ ಕಡೆಗಳಿಂದಲೂ ಕೈಗಾರಿಕೆಗಳು ಸಾಕಷ್ಟು ಇವೆ. ಹೆಚ್ಚುವರಿಯಾಗಿ ಬೆಳೆಯುವುದಕ್ಕೆ ಬಿಡಬೇಡಿ. ಅದನ್ನು ಕೃಷಿ ವಲಯವನ್ನಾಗಿಯೇ ಉಳಿಸಿ. ಅಲ್ಲಿನ ರೈತರು ತೋಟ ತೊಡಿಕೆಗಳನ್ನು ಮಾಡಲಿ. ಸರ್ಕಾರವು ಇಂತಹವುಗಳನ್ನು ಮಾಡಲಿ. ಅದನ್ನು ಬಿಟ್ಟು ಹೆಚ್ಚುವರಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೈಗಾರಿಕೆಗಳನ್ನು ಪ್ರಾರಂಭಿಸುವುದು ಬೇಡ. "ಇನ್ವೆಸ್ಟ್ ಕರ್ನಾಟಕ" ಎನ್ನುವಂತಹ ಉತ್ತಮವಾದ ಕೆಲಸವನ್ನು ಸಚಿವರು ಮಾಡುತ್ತಿದ್ದಾರೆ. ಹೀಗೆ ಬೇಕಾದಷ್ಟು ಕೆಲಸವನ್ನು ಮಾಡುತ್ತಿದ್ದಾರೆ. ಹೀಗಾಗಿ ಗ್ರಾಮಾಂತರ ಪ್ರದೇಶಗಳ್ಲಿಯೂ ಸಹ ಕೆಲಸಗಳನ್ನು ಮಾಡಲಿ. ಪುನಃ ಪುನಃ ಇದೇ ಭಾಗದಲ್ಲಿ ಕೈಗಾರಿಕೆಗಳನ್ನು ಮಾಡುವುದರಿಂದ ಅಲ್ಲಿ ಸಂಚಾರ ದಟ್ಟಣೆ ಜಾಸ್ತಿಯಾಗುತ್ತದೆ. ಸರ್ಜಾಪುರ ಕಡೆಗಳಲ್ಲಿ ಛತ್ರಗಳನ್ನು ಮಾಡಿದ್ದಾರೆ. ಅಲ್ಲಿ ಭೂಮಿಯ ಮೌಲ್ಯ ಅಗ್ಗ ಅಥವಾ ಏನೋ ನನಗೆ ಗೊತ್ತಿಲ್ಲ. ನಮ್ಮನ್ನು ಕಾರ್ಯಕ್ರಮಗಳಿಗೆ ಆಮಂತ್ರಿಸುತ್ತಾರೆ. ನಾವು ಬೆಂಗಳೂರು ನಗರವನ್ನು ದಾಟಿ ಅಲ್ಲಿಗೆ ಹೋಗಿ, ಕಾರ್ಯಕ್ರಮ ಮುಗಿಸಿಕೊಂಡು ಮನೆಗೆ ಬರುವಷ್ಟರಲ್ಲಿ ಮುಕ್ಕಾಲು ದಿನದ ಸಮಯವು ಕಳೆದು ಹೋಗಿರುತ್ತದೆ. ಸ್ಥಳಕ್ಕೆ ಹೋಗಲು ಮೂರು ಗಂಟೆಗಳು, ಹಿಂದಿರುಗಿ ಬರಲು ಮೂರು ಗಂಟೆಗಳು ಹಾಗೂ ಅಲ್ಲಿ ಒಂದು ಗಂಟೆ ಸಮಯ. ಹೀಗಾಗಿ ಒಂದು ಮದುವೆ ಕಾರ್ಯಕ್ರಮಕ್ಕೆ ಹೋಗಿ ಬರಲು ಏಳು ಗಂಟೆಗಳ ಸಮಯ ಬೇಕಾಗುತ್ತದೆ. ಇಂತಹ ಪರಿಸ್ಥಿತಿಯು ನಗರ ಪ್ರದೇಶಗಳಲ್ಲಿದೆ. ಹೀಗಾಗಿ ಸರ್ಕಾರವು ಇದನ್ನು ವಿಸ್ತರಿಸಿದರೆ ಬಹಳ ಸಂತೋಷ. ನಾವು ಲಂಬವಾಗಿ ಬೆಳೆಯದೇ, ಅಡ್ಡವಾಗಿ ಬೆಳೆಯಬೇಕು ಎನ್ನುವ ಉದ್ದೇಶದಿಂದ ಸದಸ್ಯರು ಹೇಳಿರುವ ಅಂಶಗಳೆಲ್ಲವೂ ಸರಿಯಾಗಿವೆ.

ಶ್ರೀ ಎಂ.ಬಿ.ಪಾಟೀಲ್:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ಮಾಹಿತಿಯನ್ನು ನೀಡಲು ಬಯಸುತ್ತೇನೆ. ಕೇವಲ ನಮ್ಮ ಪಕ್ಷದ ಸರ್ಕಾರ ಮಾತ್ರವಲ್ಲ, ಈ ಹಿಂದೆ ಅಧಿಕಾರದಲ್ಲಿದ್ದ ಎಲ್ಲಾ ಸರ್ಕಾರಗಳು ಭೂ ಸ್ವಾಧೀನ ಪಡಿಸಿಕೊಂಡಿವೆ. ಸುಮಾರು 79,000 ಚದರ ಅಡಿ ದಷ್ಟು ಭೂ ಬ್ಯಾಂಕ್‌ಗಳ ಮುಖಾಂತರ ಇವತ್ತಿನ ದಿವಸ ಭೂ ಸ್ವಾಧೀನತೆಯು ಎಲ್ಲಾ ಕಡೆಗಳಲ್ಲಿ ನಡೆಯುತ್ತಿದೆ. ವಿರೋಧ ಪಕ್ಷದ ನಾಯಕರು ಹೇಳಿದಂತೆ, ಇವತ್ತಿನ ದಿವಸ ನಾವು ಬಾಗೇಪಲ್ಲಿ, ಕೋಲಾರ ಎಲ್ಲಾ ಕಡೆಗಳಲ್ಲೂ ಸಹ ಭೂ ಸ್ವಾಧೀನ ಪ್ರಕ್ರಿಯೆಯನ್ನು ಮಾಡುತ್ತಿದ್ದೇವೆ.

(ಮುಂದು)

(241) 11-03-2025(9-50) bkp-ks (ಸಭಾಪತಿಯವರ ಉಪಸ್ಥಿತಿ)

ಶ್ರೀ ಎಂ.ಬಿ.ಪಾಟೀಲ್ (ಮುಂದು)

ಇದೊಂದೆ ಕಡೆ ಮಾಡುತ್ತಿದ್ದೇವೆ ಎಂದಲ್ಲ. ನಿಮಗೆ ಅದರ ಪಟ್ಟಿ ಬೇಕಾದರೆ, ಆ ಪಟ್ಟಿಯನ್ನು ನಾನು ಕೊಡುತ್ತೇನೆ. ಇಲ್ಲಿಯೇ ಮಾಡಬೇಕು ಎಂದಲ್ಲ, ಇಲ್ಲಿ ಮಾಡಿದರೆ, ನಮಗೆ ಏನು advantage ಇದೆ ಎಂದರೆ, ನಾವು ಏನು ಒಂದು SWIFT (Startups, Workspaces, Innovation, Finance and Technology) city ಯನ್ನು ಮಾಡುತ್ತಿದ್ದೇವೆ, ಇಲ್ಲಿ semiconductor ಹಾಗೂ ತರಹದ ಎಲ್ಲಾ electronic industries ಗಳನ್ನು ಮಾಡಲು ಅನುಕೂಲವಾಗುತ್ತದೆ. ಇಲ್ಲಿ ಬಹಳ ಒಳ್ಳೆಯ ಒಂದು ಜಾಗವಿದೆ. ನಾನು ಈ ವಿಷಯದ ಬಗ್ಗೆ ಈಗಾಗಲೇ ಸಾಕಷ್ಟು ಹೇಳಿದ್ದೇನೆ. ನಾನು ಮತ್ತೆ ಇದನ್ನು repeat ಮಾಡುವುದಕ್ಕೆ ಬಯಸುವುದಿಲ್ಲ. ಅಲ್ಲಿ ರೈತರ ಒಟ್ಟು ಶೇಕಾಡವಾರು ಎಷ್ಟಿದೆ ಎಂಬುದು ನನಗೂ ಗೊತ್ತಿದೆ. ಇನ್ನೂ ಉಳಿದವರ ಒಟ್ಟು ಶೇಕಾಡವಾರು ಎಷ್ಟಿದೆ ಎಂಬುದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ನನಗೆ ಗೊತ್ತಿದೆ. ಅಲ್ಲಿ ಭೇಟಿಯಾಗಿ ಬರುತ್ತೇನೆಂದು ನಾನು ಈಗಾಗಲೇ ಮಾತನ್ನು ಕೊಟ್ಟಿದ್ದೇನೆ. ನಾವು spot ಗೆ ಬಂದಂತಹ ದಿವಸವೇ ಅಲ್ಲಿ ಸೂಕ್ತವಾದಂತಹ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ.

೨. ಪ್ರಕಟಣೆ

ಸಭಾಪತಿಯವರು:- ಮಾನ್ಯ ಮುಖ್ಯಮಂತ್ರಿಗಳೊಡನೆ ದೂರವಾಣಿ ಮುಖಾಂತರ ಮಾತನಾಡಿ, ನಾಳೆ ದಿನಾಂಕ:12-03-2025 ರಂದು ಮಧ್ಯಾಹ್ನ 3:00 ಗಂಟೆಗೆ ಕೆ.ಪಿ.ಎಸ್.ಸಿ. ಬಗ್ಗೆ ಉತ್ತರವನ್ನು ಹೇಳುತ್ತಾರೆ. ದಿನಾಂಕ:13-03-2025 ರಂದು ರಾಜ್ಯಪಾಲರ ಭಾಷಣದ ಮೇಲೆ ಮಧ್ಯಾಹ್ನ 3:00 ಗಂಟೆಯ ಮೇಲೆ ಉತ್ತರವನ್ನು ಕೊಡುತ್ತಾರೆ. ಆಮೇಲೆ, ಬಜೆಟ್ ಮೇಲೆ ದಿನಾಂಕ: 21-03-2025 ರಂದು ಉತ್ತರವನ್ನು ಕೊಡುತ್ತಾರೆ.

ಈಗ ಸದನವನ್ನು ಬುಧವಾರ ಬೆಳಗ್ಗೆ 10.30 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ರಾತ್ರಿ 9 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 12ನೇ ಮಾರ್ಚ್ ಮಾಹೆ 2025ರ ಬುಧವಾರದಂದು ಬೆಳಗ್ಗೆ 10.30 ಗಂಟೆಗೆ ಸಮಾವೇಶಗೊಳ್ಳಲು ತೀಮಾನಿಸಿತು)